ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

# ಸಿ. ಬೈರೇಗೌಡ

ಕೆ. ಪ್ರಹ್ಲಾದರಾವ್

ಪ್ರಕಟಣೆ

ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ

ವಿಧಾನಸೌಧ, ಬೆಂಗಳೂರು

**C. BYREGOWDA**
Eminent Parlimentarian Series
Written by
**K. Prahaladarao**
Editor, Kolara Patrike,
Kolara.
**Published** by
Karnataka Legislature Library Committee
Vidhana Soudha, Bangalore-560001.
Page: 275 + xiv Price: 20-00 Rs.
**© Chairman**
Karnataka Legislative Council
**& Speaker**
Karnataka Legislative Assembly
First Edition: 2005 Copies: 2000
**Printed & Designed by**
Government Press, Bangalore.

**ಸಿ. ಬೈರೇಗೌಡ**
ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ
ಲೇಖಕರು:
**ಕೆ. ಪ್ರಹ್ಲಾದರಾವ್**
ಸಂಪಾದಕರು, ಕೋಲಾರ ಪತ್ರಿಕೆ,
ಕೋಲಾರ.
ಪ್ರಕಾಶನ
ಗ್ರಂಥಾಲಯ ಸಮಿತಿ
ಕರ್ನಾಟಕ ವಿಧಾನ ಮಂಡಲ
ವಿಧಾನಸೌಧ, ಬೆಂಗಳೂರು-560 001.
ಪುಟ: 275 + xiv ಬೆಲೆ: 20/- ರೂ.
© ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ
ಮೊದಲ ಮುದ್ರಣ: 2005 ಪ್ರತಿಗಳು: 2,000
ಮುದ್ರಣ ಮತ್ತು ವಿನ್ಯಾಸ
ಸರ್ಕಾರಿ ಮುದ್ರಣಾಲಯ, ಬೆಂಗಳೂರು-560 001.

# ವಿಧಾನ ಮಂಡಲ ಗ್ರಂಥಾಲಯ ಸಮಿತಿ
## 2005-2006

*ಅಧ್ಯಕ್ಷರು*

ವಿ.ಆರ್. ಸುದರ್ಶನ್

ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು

*ಸದಸ್ಯರು*

ಕೃಷ್ಣ

ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ

ವಿಶ್ವನಾಥ್ ಪಾಟೀಲ್ ಹೆಬ್ಬಾಳ್

ವಿಧಾನಸಭಾ ಸದಸ್ಯರು ಹಾಗೂ

ಉಪ ಸಮಿತಿಯ ಅಧ್ಯಕ್ಷರು

ಜಿ.ಎಸ್. ಗಡ್ಡದೇವರ ಮಠ

ವಿಧಾನಸಭಾ ಸದಸ್ಯರು

ಆರ್. ಧ್ರುವನಾರಾಯಣ್

ವಿಧಾನಸಭಾ ಸದಸ್ಯರು

ಕಳಕಪ್ಪ ಜಿ. ಬಂಡಿ

ವಿಧಾನಸಭಾ ಸದಸ್ಯರು

ಡಾ॥ ವೀರಬಸವಂತರೆಡ್ಡಿ ಮುದ್ನಾಳ್

ವಿಧಾನಸಭಾ ಸದಸ್ಯರು

ಡಾ॥ ಚಂದ್ರಶೇಖರ ಬಿ. ಕಂಬಾರ

ವಿಧಾನ ಪರಿಷತ್ ಸದಸ್ಯರು

ಮುಖ್ಯಮಂತ್ರಿ ಚಂದ್ರು

ವಿಧಾನ ಪರಿಷತ್ ಸದಸ್ಯರು

ಉಮಾಶ್ರೀ

ವಿಧಾನ ಪರಿಷತ್ ಸದಸ್ಯರು

# ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

## ಅಧಿಕಾರಿ – ಸಂಪಾದಕ ವರ್ಗ

### ಕರ್ನಾಟಕ ವಿಧಾನಸಭೆ ಸಚಿವಾಲಯ

| | |
|---|---|
| ಟಿ. ರಾಜಣ್ಣ | ಕಾರ್ಯದರ್ಶಿ |
| ಎಸ್.ಬಿ. ಪಾಟೀಲ್ | ಅಪರ ಕಾರ್ಯದರ್ಶಿ |
| ಕೆ.ಎನ್. ಪ್ರಭಾಕರರಾವ್ | ಜಂಟಿ ಕಾರ್ಯದರ್ಶಿ |
| ಪಿ. ಓಂಪ್ರಕಾಶ್ | ಸಭಾಧ್ಯಕ್ಷರ ಕಾರ್ಯದರ್ಶಿ |
| ಎಸ್. ಬಸವರಾಜ | ಉಪ ಕಾರ್ಯದರ್ಶಿ (ಪ್ರ) |
| ಮಿರ್ಜಾ ಮೆಹ್ದಿ | ಅಧೀನ ಕಾರ್ಯದರ್ಶಿ |
| ಎನ್. ನರಸಿಂಹಮೂರ್ತಿ | ಶಾಖಾಧಿಕಾರಿ |

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

| | |
|---|---|
| ಜಯಶಂಕರಮೂರ್ತಿ | ಕಾರ್ಯದರ್ಶಿ (ಪ್ರ) |
| ಕೃಷ್ಣೇಗೌಡ | ಸಭಾಪತಿಯವರ ಕಾರ್ಯದರ್ಶಿ |

### ಸಂಪಾದಕರು

**ಎಲ್.ಎನ್. ಮುಕುಂದರಾಜ್**

ಕನ್ನಡ ಉಪನ್ಯಾಸಕರು, ಯಲಹಂಕ

(ಅನ್ಯಕರ್ತವ್ಯದ ಮೇರೆಗೆ)

# ಮುನ್ನುಡಿ

17 ನವೆಂಬರ್ 2005

ರಾಷ್ಟ್ರದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದ, ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿದ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರತಂದಿರುತ್ತಾರೆ. ಅವುಗಳಲ್ಲಿ ಡಾ|| ರಾಮಮನೋಹರ ಲೋಹಿಯಾ, ಡಾ|| ಬಿ.ಆರ್. ಅಂಬೇಡ್ಕರ್, ಡಾ|| ಶಾಂಪ್ರಸಾದ್ ಮುಖರ್ಜಿ, ಡಾ|| ರಾಜೇಂದ್ರ ಪ್ರಸಾದ್ ಮೊದಲಾದ ಗಣ್ಯರ ಪುಸ್ತಕಗಳನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸಬಯಸುತ್ತೇವೆ.

ಹಾಗೆಯೇ, ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರನ್ನು ಕುರಿತು ಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು, ವಿಧಾನ ಮಂಡಲದ ಗ್ರಂಥಾಲಯ ಸಮಿತಿಗೆ ವಹಿಸಲಾಗಿತ್ತು. ಈ ಉಪ ಸಮಿತಿಯು ಕಾರ್ಯಪ್ರವೃತ್ತರಾಗಿ ರಾಜ್ಯದ ಲೇಖಕರ, ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಿತು.

ಈ ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಸಿ. ರೆಡ್ಡಿ, ಶ್ರೀ ದೇವರಾಜ ಅರಸು, ಶ್ರೀ ಜೆ.ಹೆಚ್. ಪಟೇಲ್, ಶ್ರೀ ಟಿ.ಆರ್. ಶಾಮಣ್ಣ, ಶ್ರೀ ಎಸ್.ಡಿ. ಗಾಂವಕರ್, ಶ್ರೀಮತಿ ಬಿ.ಎಲ್. ಸುಬ್ಬಮ್ಮ, ಡಾ|| ಲಂಕಾ ಸುಂದರಂ ಮತ್ತಿತರ ಹಲವು ಗಣ್ಯರ ಬಗೆಗಿನ ಪುಸ್ತಕಗಳನ್ನು ಹೊರತರಲಾಗಿದೆ.

ಶ್ರೀ ಕೆ. ಪ್ರಹ್ಲಾದರಾವ್ ಅವರು ರಚಿಸಿರುವ ರಾಜ್ಯದ ಹಿರಿಯ ಸಂಸದೀಯ ಪಟುವಾಗಿದ್ದ ಶ್ರೀ ಸಿ. ಬೈರೇಗೌಡ ಅವರ ಬಗೆಗಿನ ಪುಸ್ತಕವನ್ನು ತಮ್ಮ ಮುಂದಿಡಲು ಹೆಮ್ಮೆಯೆನಿಸುತ್ತದೆ. ಈ ಪುಸ್ತಕವನ್ನು ರಚಿಸಿದ ಲೇಖಕರಿಗೆ ಹಾಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಉಪ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಪುಸ್ತಕವು ಮಾನ್ಯ ಸದಸ್ಯರುಗಳಿಗೆ, ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಹೆಚ್ಚಿನ ಅನುಭವ ನೀಡುತ್ತದೆ ಮತ್ತು ಉಪಯುಕ್ತವಾಗುತ್ತದೆಂದು ಭಾವಿಸುತ್ತೇವೆ.

**ವಿ.ಆರ್. ಸುದರ್ಶನ್**
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

**ಕೃಷ್ಣ**
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

# ಲೇಖಕನ ನಿವೇದನೆ

ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಮಾಲಿಕೆಯಲ್ಲಿ ಕೃಷಿಕರ ಬಂಧು, ಕೋಲಾರ ಜಿಲ್ಲೆಯ ಧೀಮಂತ ರಾಜಕಾರಣಿ ಶ್ರೀ ಸಿ. ಬೈರೇಗೌಡರ ಬಗ್ಗೆ ಪುಸ್ತಕ ಹೊರ ತರಲು ನಿರ್ಧರಿಸಲಾಗಿದೆ. ಅದನ್ನು ನೀವು ರಚಿಸಿ ಕೊಡಬೇಕು ಎಂದು ವಿಧಾನ ಸೌಧದಿಂದ ದೂರವಾಣಿ ಬಂದಾಗ, ನಾನು ಮೊದಲು ನಿರಾಕರಿಸಿದೆ. ಶ್ರೀ ಬೈರೇಗೌಡರು ನನಗೆ ಆತ್ಮೀಯರಾಗಿದ್ದರೂ, ಅವರ ಸುದೀರ್ಘ ಸಂಸದೀಯ ಚಟುವಟಿಕೆಗಳನ್ನು ಹೆಕ್ಕಿ ತೆಗೆದು, ಒಪ್ಪ ಓರಣ ಮಾಡಲು ಸಾಕಷ್ಟು ಕಾಲಾವಕಾಶ ಬೇಕಾದ್ದರಿಂದ ಹಾಗೂ ಈ ಕೆಲಸ ಬೆಂಗಳೂರಿನಲ್ಲಿ ನಡೆಯಬೇಕಿರುವುದರಿಂದ ಬೆಂಗಳೂರಿನ ಸಾಹಿತಿಗಳಿಗೆ ಒಪ್ಪಿಸಲು ತಿಳಿಸಿದೆ. ಎರಡು, ಮೂರು ದಿನಗಳ ನಂತರ ಮತ್ತೆ ಪತ್ರ, ದೂರವಾಣಿ ಬಂತು. ವಿಧಾನ ಪರಿಷತ್ ಸಭಾಪತಿಗಳಾದ ಮಾನ್ಯ ಶ್ರೀ ವಿ.ಆರ್. ಸುದರ್ಶನ್ ಅವರು ನಿಮಗೇ ಈ ಕೆಲಸ ಒಪ್ಪಿಸಲು ತಿಳಿಸಿದ್ದಾರೆ ನೀವು ಒಪ್ಪಿಗೆ ಪತ್ರ ಕಳುಹಿಸಿಕೊಡಿ ಎಂದು. ಇದಾದ ಎರಡು ದಿನಕ್ಕೆ ಶ್ರೀ ಸುದರ್ಶನ್ ಅವರು, ಸಮಾರಂಭವೊಂದರಲ್ಲಿ ಸಿಕ್ಕಾಗ ಪುಸ್ತಕ ರಚನೆ ನೀವೇ ಮಾಡಬೇಕು ಎಂದು ಆಗ್ರಹಿಸಿದ್ದರಿಂದ ಸಮ್ಮತಿಸಿ ಕಾರ್ಯತತ್ಪರನಾದೆ.

ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಸದಾ ಪಾಲ್ಗೊಳ್ಳುತ್ತಿದ್ದ ಶ್ರೀ ಬೈರೇಗೌಡರ 25 ವರ್ಷಗಳ ಶಾಸಕತ್ವದ ಅವಧಿಯಲ್ಲಿನ ಚಟುವಟಿಕೆ ಭಾಷಣಗಳನ್ನು ದಾಖಲಿಸುವುದೆಂದರೆ, ಆಕಾಶಕ್ಕೆ ಏಣಿ ಹಾಕಿದಂತೆ. ಅವರು ಹೇಳಿದ್ದನ್ನು, ಮಾತನಾಡಿರುವುದನ್ನು ಪೂರ್ಣವಾಗಿ ಗಮನಕ್ಕೆ ತೆಗೆದುಕೊಳ್ಳುವುದಾದರೆ, ಸುಮಾರು ಸಾವಿರಕ್ಕೂ ಹೆಚ್ಚು ಪುಟಗಳು ಬೇಕಾಗಬಹುದು. ಸಂಸದೀಯ ವ್ಯವಹಾರಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ಗೌಡರು, ಸ್ಪಂದಿಸದ ವಿಷಯವೇ ಇರಲಿಲ್ಲ. ಅವರಿಗೆ ಅವಕಾಶಗಳೂ ಹಾಗೆಯೇ ದೊರೆತವು. ವಿರೋಧಪಕ್ಷದ ಶಾಸಕರಾಗಿ, ನಾಯಕರಾಗಿ, ರಾಜಕೀಯ ಪಕ್ಷವೊಂದರ ಅಧ್ಯಕ್ಷರಾಗಿ ದುಡಿದಿದ್ದ ಸಿ.ಬಿ. ಆಡಳಿತ ಪಕ್ಷದ ಸದಸ್ಯರಾಗಿಯೂ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಹಲವು ಹನ್ನೊಂದು ಸಮಿತಿಗಳ ಸದಸ್ಯರಾಗಿ, ಅಧ್ಯಕ್ಷರಾಗಿ ರಾಜ್ಯದ ಆಡಳಿತಕ್ಕೆ ಕೊಡುಗೆ ನೀಡಿದ್ದಾರೆ. ಅಂತಹವರ ಬಗ್ಗೆ ಪುಸ್ತಕ ರಚನೆ ಕಷ್ಟ ಸಾಧ್ಯ. ನನ್ನ ಮಿತಿಯಲ್ಲಿ ಈ ಪುಸ್ತಕ ಸಿದ್ಧಪಡಿಸಿದ್ದೇನೆ. ಆದರೆ ಅದು ನನಗೆ ಪೂರ್ಣ ತೃಪ್ತಿ ನೀಡಿಲ್ಲ ಎಂದು ತಿಳಿಸಬಯಸುತ್ತೇನೆ.

ರಾಜ್ಯದ ಕೃಷಿ ವಲಯಕ್ಕೆ ಅವರ ಕೊಡುಗೆ ಅನುಪಮವಾದುದು. ರೇಷ್ಮೆ, ಪಶುಪಾಲನೆ, ತೋಟಗಾರಿಕೆ, ಮೀನುಗಾರಿಕೆ, ಕೈಗಾರಿಕೆಗಳಿಗೂ ಅವರ ಕಾಣಿಕೆ ಸಂದಿದೆ. ಸಚಿವರಾಗಿ ರೂಪಿಸಿದ ಕೃಷಿ ನೀತಿ ಅನುಕರಣೀಯ. ಭ್ರಷ್ಟಾಚಾರ ವಿರೋಧಿ, ಪ್ರಜಾಪ್ರಭುತ್ವ ಪ್ರೇಮಿ, ಪ್ರಾಮಾಣಿಕ, ಆದರ್ಶ, ಸರಳ ನಾಯಕನ ಬಗ್ಗೆ ಪುಸ್ತಕ ರಚನೆ ಸಂತಸ ಕೊಟ್ಟಿದೆ. ಬೈರೇಗೌಡರ ಹಲವು ಮುಖಗಳ ದರ್ಶನ ನನಗೆ ಆಗಿದೆ.

ಈ ಪುಸ್ತಕ ಸಿದ್ಧಪಡಿಸಲು ಕಾರಣರಾದ ವಿಧಾನ ಮಂಡಲದ ಗ್ರಂಥಾಲಯ ಸಮಿತಿಯವರಿಗೆ ವಿಶೇಷವಾಗಿ ಪರಿಷತ್ ಸಭಾಪತಿ ಶ್ರೀ ವಿ.ಆರ್. ಸುದರ್ಶನ್, ಕೃಷಿ ಸಚಿವ ಶ್ರೀ ಕೆ. ಶ್ರೀನಿವಾಸಗೌಡ, ಶಾಸಕರಾದ ಶ್ರೀ ಕೆ.ಆರ್.ರಮೇಶ್ ಕುಮಾರ್, ಶ್ರೀ ಸಿ. ಕೃಷ್ಣಬೈರೇಗೌಡರಿಗೆ-

ಪುಸ್ತಕ ರಚನೆಯಲ್ಲಿ ಮಾರ್ಗದರ್ಶನ ನೀಡಿದ ಶ್ರೀ ಎಲ್.ಎನ್.ಮುಕುಂದರಾಜ್ ಅವರಿಗೆ, ನೆರವಾದ ವಿಧಾನ ಮಂಡಲದ ಜಂಟಿ ಕಾರ್ಯದರ್ಶಿ ಶ್ರೀ ಕೆ.ಎನ್.ಪ್ರಭಾಕರ ರಾವ್ ಅವರಿಗೆ, ಸಹಕರಿಸಿದ ಗ್ರಂಥಾಲಯುದ ಸಿಬ್ಬಂದಿಗೆ, ಪ್ರತ್ಯೇಕವಾಗಿ ಶ್ರೀ ನರಸಿಂಹಮೂರ್ತಿ, ಶ್ರೀ ವಿ.ಮಂಜುನಾಥ್ ಹಾಗೂ ಜೆರಾಕ್ಸ್ ಮಾಡಿಕೊಟ್ಟ ಶ್ರೀ ಗೋಪಾಲಕೃಷ್ಣ ಅವರಿಗೆ ಮತ್ತು ವಾರ್ತಾ ಇಲಾಖೆಯ ಶ್ರೀ ಎನ್. ಜಗನ್ನಾಥ್ ಪ್ರಕಾಶ್ ಅವರಿಗೆ -

ಬೈರೇಗೌಡರ ಭಾಷಣಗಳನ್ನು ನನ್ನ ಜೊತೆ ಗುರುತು ಮಾಡಿಕೊಟ್ಟ ಆತ್ಮೀಯ ಗೆಳೆಯ, ಛಾಯಾಗ್ರಾಹಕ ಶ್ರೀ ಕೆ.ಎಸ್. ನಾಗರಾಜ್‌ಅವರಿಗೆ ಡಿ.ಟಿ.ಪಿ. ಮಾಡಿಕೊಟ್ಟ ಕೋಲಾರದ ಮಂಗಳಾ ಈಶ್ವರ್ ಪಬ್ಲಿಸಿಟಿ ಸರ್ವೀಸಸ್‌ನ ವಿಶ್ವೇಶ್ವರ ವಿಶ್ವಕರ್ಮ, ಜಾನ್ ಮತ್ತು ಜೀವನ್ ಸರ್ವೀಸಸ್‌ನ ಕೆ.ಸಿ. ರಾಧಾ ಹಾಗೂ ವಿಧಾನ ಸೌಧ ಡಿ.ಟಿ.ಪಿ. ಶಾಖೆಯ ಬಿ.ಎಂ. ರವಿಕುಮಾರ್ ಅವರಿಗೆ- ಕರಡು ತಿದ್ದಿದ ಎಚ್.ಕೆ. ರಾಘವೇಂದ್ರ ಅವರಿಗೆ-

ಪ್ರೋತ್ಸಾಹ ನೀಡಿದ ನನ್ನ ಶ್ರೀಮತಿ ಕೆ.ಎನ್. ಶ್ರೀವಾಣಿ ಪ್ರಹ್ಲಾದರಾವ್, ಗೆಳೆಯರಾದ ಸರ್ವಶ್ರೀ ಬಿ.ಎನ್. ಶ್ರೀನಿವಾಸನ್, ಪಿ. ಚಂದ್ರಪ್ರಕಾಶ್, ಕೆ.ಆರ್. ನರಸಿಂಹನ್, ಲೇಖನ ನೀಡಿದ ಡಾ॥ ಶೇಷಶಾಸ್ತ್ರಿ ಮತ್ತು ಡಾ॥ ವೈ. ಲಿಂಗರಾಜು ಮತ್ತು ಪ್ರತ್ಯಕ್ಷ, ಪರೋಕ್ಷವಾಗಿ ನೆರವಾದವರಿಗೆಲ್ಲ ಧನ್ಯವಾದಗಳು.

ದಿನಾಂಕ : 17-11-2005

**ಕೆ. ಪ್ರಹ್ಲಾದರಾವ್**
ಸಂಪಾದಕ, ಕೋಲಾರ ಪತ್ರಿಕೆ

# ಪರಿವಿಡಿ

## ಭಾಗ - 1

01. ಸಿ. ಬೈರೇಗೌಡರ ಬದುಕು 1-14

## ಭಾಗ - 2

## ವಿಧಾನ ಸಭೆಯ ಚಟುವಟಿಕೆಗಳು


ಅವಧಿ -1 1972-1978

| | | |
|---|---|---|
| 01. | ಅಧಿಕಾರಿಗಳಿಗೆ ಸಂಭಾವನೆ ಕೊಟ್ಟರೆ ಭೂಮಿ | - 18 |
| 02. | ರೇಷ್ಮೆ ಆಮದಿಗೆ ವಿರೋಧ | - 22 |
| 03. | ಬಜೆಟ್ ಭಾಷಣ<br>ಸರ್ಕಾರಿ ಉದ್ದಿಮೆಗಳಲ್ಲಿ ಹಣ ಪೋಲು | - 25 |
| 04. | ಕರ್ನಾಟಕ ನಾಮಕರಣ | - 28 |
| 05. | ಕ್ಷಾಮ ಪರಿಸ್ಥಿತಿಯತ್ತ ಸಿ.ಬಿ. ನೋಟ | - 30 |
| 06. | ವಿಧಾನಸಭೆಯಲ್ಲಿ ಕತ್ತಾಳೆಗಡ್ಡೆ ಪ್ರದರ್ಶನ | - 32 |
| 07. | ಕುಡಿಯುವ ನೀರಿಲ್ಲ! | - 34 |
| 08. | ಜಿಲ್ಲೆಯಲ್ಲೂ ಸಮಿತಿ ಪ್ರವಾಸಕ್ಕೆ ಆಗ್ರಹ | - 34 |
| 09. | ಕಮ್ಯೂನಿಸ್ಟ್ ಪಕ್ಷ ಕುರಿತು | - 37 |
| 10. | ಗಡಿಪಾರು ನೋಟೀಸು ಖಂಡನೀಯ | - 38 |
| 11. | ಕೋಲಾರ ಒಳಚರಂಡಿ ಬಗ್ಗೆ ಪ್ರಶ್ನೋತ್ತರ | - 45 |
| 12. | ಆಯ-ವ್ಯಯಕ್ಕೆ ವಿರೋಧ | - 46 |
| 13. | ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿ | - 49 |
| 14. | ಭೂ ಸುಧಾರಣೆ ತಿದ್ದುಪಡಿಗೆ ವಿರೋಧ | - 50 |
| 15. | ಟಿಪ್ಪು ಬರೆಸಿದ ಮಹಾಭಾರತ | - 52 |
| 16. | ಸಮಾಜವಾದದ ಸಮಾಧಿ | - 53 |
| 17. | ಗಡಿ ಸಮಸ್ಯೆ | - 54 |
| 18. | ವಂದನಾ ನಿರ್ಣಯದ ಮೇಲೆ ಭಾಷಣ | - 56 |
| 18. | ಕರ್ಮಕಾಂಡಗಳು | - 57 |
| 19. | ತುಂಬಿ ತುಳುಕುತ್ತಿರುವ ಭ್ರಷ್ಟಾಚಾರ | - 58 |
| 20. | ಲೆವಿ ಯಾವ ಧರ್ಮಶಾಸ್ತ್ರದಲ್ಲಿದೆ? | - 60 |
| 21. | ಜನರನ್ನು ಭೂಮಿಗೆ ತುಳಿಯುವ ಮಸೂದೆ | - 62 |
| 22. | ಬಯಲು ಸೀಮೆ ಅಭಿವೃದ್ಧಿಮಂಡಳಿ ರಚನೆಗೆ ಸಲಹೆ | - 63 |

23. ಪೂರಕ ಗ್ರಾಂಟ್ಸ್ ಕುರಿತು ಭಾಷಣ - 65
ಗಾಂಧಿ ತತ್ವ ಒಪ್ಪಿಲ್ಲ
24. ಗ್ರಾಮೀಣ ಶಿಕ್ಷಕರು ಪಾಠ ಹೇಳುವುದಿಲ್ಲ - 67
25. ಕೇರ್ ನಾಯಿಗಳು - 69
26. ಕಡ್ಡಾಯ ಶಿಕ್ಷಣ ಮಸೂದೆ - 70
27. ಎಸ್.ಎನ್.ಆರ್. ಆಸ್ಪತ್ರೆ-ಗಮನ ಸೆಳೆಯುವ ಸೂಚನೆ - 72
28. NRWS Schemes in Kolar Dist - 74
29. ಗ್ರಾಮ ಪಂಚಾಯ್ತಿ ಚುನಾವಣೆ ಮುಂದೂಡಿಕೆ - 75
30. ಸಿ.ಎಂ.ಗೈರು ಹಾಜರಿ - 78
31. ಮಂತ್ರಿಗಳ ಭತ್ಯೆ - 79
32. ತುರ್ತು ಪರಿಸ್ಥಿತಿಯಲ್ಲಿನ ಸಭೆ - 79
33. ಎಲ್ಲರ ಬಾಯಿಗೆ ಬೀಗ - 82
33. ಅಧಿಕಾರಸ್ಥರ ಸ್ವೇಚ್ಛಾಪ್ರವೃತ್ತಿಯಿಂದ ತುರ್ತುಸ್ಥಿತಿ. - 86
ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ
34. ತುರ್ತು ಪರಿಸ್ಥಿತಿ ಚರ್ಚೆ - ಅರಸ್ ಸಮರ್ಥನೆ - 91
35. ಪಾರ್ಲಿಮೆಂಟರಿ ಮಸೂದೆಗೆ ವಿರೋಧ - 97
36. ಮತ್ತೆ ತುರ್ತು ಪರಿಸ್ಥಿತಿ ಪ್ರಸ್ತಾಪ - 101
37. ಋಣ ಪರಿಹಾರ - 102
38. ಪೊಲೀಸರ ಕಣ್ಣಿನೊಳಗೆ ಲಾರಿ - 106
39. ರೈತರೇ ಅವರ ಬೆಳೆಗೆ ಬೆಲೆ ನಿಗದಿ ಮಾಡಲಿ - 112
40. ತಂತಿ ಕಂಬ ಇಲ್ಲದೇ ಪವರ್ ಬಿಡುವುದು - 114
41. ಹೋಟೆಲ್ ತಿಂಡಿ ದರದ ಬಗ್ಗೆ - 115

ಅವಧಿ - 2 1983-1984

01. ಕೈವಾರ ಸಾಹಿತ್ಯ ಸಮ್ಮೇಳನದ ಬಗ್ಗೆ ನಾರಾಯಣ ಕುಮಾರ್ - 119
02. ಬೈರೇಗೌಡರಿಂದ ವೈಯಕ್ತಿಕ ಹೇಳಿಕೆ
03. ಕೆರೆ ಹೂಳು
04. ಕೊಂಬು ಇಲ್ಲ
05. ರಕ್ತದ ಒತ್ತಡ
06. C.B. I am Sorry

ಅವಧಿ 3 - 1985 - 1989

01. 1985-86 ಸಾಲಿನ ಬೇಡಿಕೆಗಳನ್ನು ಮೇಲಿನ ಚರ್ಚೆ - 125
02. ಅಧಿಕಾರಿ ವರ್ಗಾವಣೆ ವಿಚಾರ - 127
03. ಪಿ.ಎಸ್.ಸಿ. ಕುರಿತು ಚರ್ಚೆ - 129

04. ಮೀನುಗಾರಿಕೆಗೆ ಡೀಸೆಲ್ ಸಬ್ಸಿಡಿ - 131
05. ದುರ್ದೆಸೆ ಬರುವುದು ಬೇಡ - 135
06. Misappropriate ವ್ಯಾಖ್ಯಾನ - 136

ಅವಧಿ 4 - 1989-1994

01. ರೈಲು ಹೋದ ಮೇಲೆ ಟಿಕೇಟ್ - 139
02. ಸಾಲುಮರ - 141
03. ಜಿಲ್ಲೆಯಲ್ಲಿ ಪೊಲೀಸ್ ಬಲ - 141
04. ವಿಧಾನಸಭೆ ವಿಸರ್ಜನೆ ಬಗ್ಗೆ - 145
05. ಗ್ರಾಮಿಣಾಭಿವೃದ್ಧಿ ಸಚಿವರ ಗೈರುಹಾಜರಿಗೆ ಆಕ್ಷೇಪ - 147
06. ಕುಡಿಯುವ ನೀರು - 149
07. ಕೋಲಾರ ಜಿಲ್ಲೆಗೆ ನೀರು ಅಭಾವ - 153
08. ಕಾವೇರಿ ನೀರು ಹಂಚಿಕೆ - 155
09. ಕಾವೇರಿ ನೀರು ಒಂದು ಪ್ರಶ್ನೋತ್ತರ - 156
10. ಕೋಲಾರ ಜಿಲ್ಲೆಗೆ ಕಾವೇರಿ ನೀರು -
11. ಕೋಲಾರದಲ್ಲಿ ವಿದ್ಯುತ್ ಉತ್ಪಾದನೆ - 157
12. ಜಿಲ್ಲೆಯ ವಿದ್ಯುತ್ ಸ್ಥಿತಿ - 158
13. ಬೈರೇಗೌಡ - ಮೊಯ್ಲಿ ಚಕಮಕಿ - 164
14. ಕೋಲಾರದಲ್ಲಿ ವಿದ್ಯುತ್ ಕೇಂದ್ರದ ಸ್ಥಾಪನೆ - 167
15. ಸರ್ಕಾರಕ್ಕೆ ಕಿವಿ ಇದೆಯೋ - ಇಲ್ಲವೋ - 169
16. ಕೋಲಾರ ಜಿಲ್ಲೆಯಲ್ಲಿ ವಿದ್ಯಾರ್ಥಿ: ಶಿಕ್ಷಕರ ಅನುಪಾತ - 181
17. ಹೋಟಲ್ ತಿಂಡಿದರ - ಸಿ.ಬಿ. ಸಭಾತ್ಯಾಗ - 183
15. ಶಿಕ್ಷಣ ಮಸೂದೆ ಬಗ್ಗೆ ಆತ್ಮವಂಚನೆ ಬೇಡ - 186
16. ಸಾರಿಗೆ ಸಮಸ್ಯೆ - 193
17. ಕೆರೆಗಳ ವಿನಾಶ - 197
18. ಕೇಂದ್ರದಲ್ಲಿ ಶ್ಯಾನುಭೋಗರ ಆಡಳಿತ - 200
19. ಪ್ರವಾಹ ಪರಿಸ್ಥಿತಿ - 206
20. ಪೊಲೀಸರಿದ್ದರೆ ನಿರ್ಭೀತಿಯ ಕೆಲಸ ಅಸಾಧ್ಯ - 210
21. ವಂದನಾ ನಿರ್ಣಯ : ಎನ್‌ಜಿಇಎಫ್ ಹಗರಣ - 211

ಅವಧಿ - 5 - 1994-1999

01. ಕೃಷಿ ಸಚಿವರ ಹೇಳಿಕೆ - 229
02. ವಿಧಾನ ಪರಿಷತ್‌ನಲ್ಲಿ ಕೃಷಿ ಸಚಿವರು - 232

ಭಾಗ - 3

## ಆತ್ಮೀಯರ ದೃಷ್ಟಿಯಲ್ಲಿ ಸಿ.ಬಿ.

01. ಬೈರೇಗೌಡ: ಕೋಲಾರದ ಮಹತ್ವದ ಕೊಡುಗೆ - ವಿ.ಆರ್. ಸುದರ್ಶನ್ - 235
02. ನನ್ನ ರಾಜಕೀಯ ಗುರು - ಕೆ. ಶ್ರೀನಿವಾಸಗೌಡ - 237
03. ಸ್ನೇಹಕ್ಕೂ ವಿರೋಧಕ್ಕೂ ಲಾಯಕ್ ಸಿ.ಬಿ. - ರಮೇಶ್‌ಕುಮಾರ್ - 239
04. ಕಠಿಣ ಶಿಲೆಯ ಮಧ್ಯದ ಪರಿಶುದ್ಧ ನೀರು - ಡಾ. ವೈ. ಲಿಂಗರಾಜು - 244
04. ಪರಿಶುದ್ಧ ರಾಜಕೀಯ ಧುರೀಣ - ಡಾ. ಆರ್. ಶೇಷಶಾಸ್ತ್ರಿ - 248

ಭಾಗ - 4

## ಭಾಷ್ಪಾಂಜಲಿ

01. ಸಾರ್ವಜನಿಕ ಜೀವನದಲ್ಲಿ ಪರಿಶುದ್ಧತೆ, ಪಾರದರ್ಶತೆಗೆ ಶ್ರಮಿಸದ ನೇತಾರ - ಎಸ್.ಎಂ.ಕೃಷ್ಣ - 257
02. ಸೃಜನಶೀಲ ಬೈರೇಗೌಡರು - ಜಗದೀಶ್‌ಶೆಟ್ಟರ್ - 259
03. ಸಿ.ಬಿ. ಆದರ್ಶದ ಪಾಠ ಕಲಿಯಬೇಕು- ಸೋಮಶೇಖರ್ - 261
04. ಕ್ರೀಡಾಭಿಮಾನಿ - ಪಿಜಿಆರ್ ಸಿಂಧ್ಯ - 263
05. ರೇಷ್ಮೆಕೃಷಿಯಲ್ಲಿ ತಜ್ಞರನ್ನು ಮೀರಿಸುವ ಅನುಭವ - ವಿ. ಮುನಿಯಪ್ಪ - 263
06. ಸಿ. ಚನ್ನಿಗಪ್ಪ, ಕೊರಟಗೆರೆ - 265
07. ಮೌಲ್ಯಯುತ ಸಾಧಕ - ಡಿ.ಕೆ. ಶಿವಕುಮಾರ್ - 266
08. ರೈತ ನಾಯಕನಿಗೆ ಮೇಲ್ಮನೆಯ ಗೌರವ - 268

(ಎಚ್.ಕೆ. ಪಾಟೀಲ್, ಡಿ.ಎಚ್. ಶಂಕರಮೂರ್ತಿ, ಬಿ.ಜೆ. ಪಾಟೀಲ್, ಬಸವರಾಜಹೊರಟ್ಟಿ)

# ಭಾಗ - ೧

## ಸಿ. ಬೈರೇಗೌಡರ ಬದುಕು

ಜನನ : 12-5-1934 ಮರಣ : 29-7-2003

ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ನೇರ ನುಡಿ, ನಿಷ್ಠೂರ ಮಾತಿನ ವ್ಯಕ್ತಿತ್ವಕ್ಕೆ ಮತ್ತೊಂದು ಹೆಸರು - ಸಿ. ಬೈರೇಗೌಡರು. ಆರು ಬಾರಿ ಶಾಸಕರಾಗಿ, ಕೃಷಿ ಮತ್ತು ಮೀನುಗಾರಿಕೆ ಖಾತೆ ಸಚಿವರಾಗಿ, ನೀರು ಸರಬರಾಜು-ಒಳ ಚರಂಡಿ ಮಂಡಳಿ ಅಧ್ಯಕ್ಷರಾಗಿ, ರಾಷ್ಟ್ರೀಯ ರಾಜಕೀಯ ಪಕ್ಷದ ರಾಜ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರೂ ಸರಳತೆಯಿಂದ, ಪ್ರಾಮಾಣಿಕತೆಯಿಂದ ಯಾವುದೇ ಒಣ ಪ್ರತಿಷ್ಠೆಯಿಲ್ಲದೆ ಜನಮಾನಸದಲ್ಲಿ ನಿಂತಿದ್ದಾರೆ.

# ಪರಿಚಯಂ

| | | |
|---|---|---|
| ಜನನ | : | 11-5-1934 |
| ಹುಟ್ಟೂರು | : | ಚೌಡದೇನಹಳ್ಳಿ, ಕೋಲಾರ ತಾಲ್ಲೂಕು. |
| ತಂದೆ, ತಾಯಿ | : | ಚೌಡೇಗೌಡ, ಲಕ್ಷ್ಮೀದೇವಮ್ಮ |
| ವಿದ್ಯಾಭ್ಯಾಸ | : | ಬಿಎಸ್ಸಿ, ಪದವೀಧರರು |
| ವೃತ್ತಿ | : | ಕೃಷಿಕರು, ರಾಜಕಾರಣಿ |
| ಪತ್ನಿ | : | ಸಾವಿತ್ರಮ್ಮ |
| ಪುತ್ರರು | : | ಗೋಪಾಲಗೌಡ, ಕೃಷ್ಣಬೈರೇಗೌಡ, ಚೌಡೇಗೌಡ |
| ಪುತ್ರಿಯರು | : | ಮಂಗಳಾ, ಮಂಜುಳಾ |
| ಸೋದರರು | : | ಚನ್ನರಾಯಗೌಡ, ಸೊಣ್ಣೇಗೌಡ |
| ಸೋದರಿ | : | ಶಾಂತಮ್ಮ ಕೋಂ ಚೌಡರೆಡ್ಡಿ |
| 1967 | : | ಮೊದಲ ಬಾರಿಗೆ ವಿಧಾನ ಸಭೆಗೆ ಸ್ಪರ್ಧೆ, ಪರಾಭವ |
| 1968 | : | ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷತೆ |
| 1969 | : | ಕೋಲಾರ ತಾಲ್ಲೂಕು ಮಂಡಲಿ ಅಧ್ಯಕ್ಷತೆ |
| 1972 | : | ವಿಧಾನಸಭೆಗೆ ವೇಮಗಲ್ ಕ್ಷೇತ್ರದಿಂದ ಆಯ್ಕೆ |
| 1978 | : | ಮತ್ತೆ ಚುನಾವಣೆಯಲ್ಲಿ ಸೋಲು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷತೆ. |
| 1978 | : | ಜೆಪಿ ಆಂದೋಲನದಲ್ಲಿ ಆಸಕ್ತಿ, ಜನತಾಪಕ್ಷದ ಕಾರ್ಯಕರ್ತ, ನಂತರ ಜಿಲ್ಲಾ ಕಾರ್ಯದರ್ಶಿ, ಅಧ್ಯಕ್ಷ.<br>1983, 1985, 1989, 1994, 1999 ರಲ್ಲಿ ವಿಧಾನಸಭೆಗೆ ಆಯ್ಕೆ. |
| 1999 | : | ಸಂಯುಕ್ತ ಜನತಾದಳ ರಾಜ್ಯ ಅಧ್ಯಕ್ಷ |
| ನಿಧನ | : | 29-7-2003 |

# ಭಾಗ - ಒಂದು

## ಚಿನ್ಹೆ ವಿಶೇಷ

ವೇಮಗಲ್ ಕ್ಷೇತ್ರದ ಅನಭಿಷಿಕ್ತ ದೊರೆಯಾಗಿದ್ದ ಬೈರೇಗೌಡರು ಆರು ಸಾರ್ವತ್ರಿಕ ಚುನಾವಣೆಯಲ್ಲೂ ಆರು ವಿಭಿನ್ನ ಚಿನ್ಹೆಗಳ ಮೇಲೆ ಗೆದ್ದು ಬಂದಿರುವುದು ಕ್ಷೇತ್ರದ ಜನತೆಯಲ್ಲಿ ಅವರು ಬೆಳೆಸಿಕೊಂಡಿದ್ದ ಪ್ರೀತಿ, ವಿಶ್ವಾಸಕ್ಕೆ ಸಾಕ್ಷಿ. ಕ್ಷೇತ್ರದ ಜನತೆಯ ಸಂಪರ್ಕವನ್ನು ನಿರಂತರ ಹೊಂದಿದ್ದು ಜನತೆಯ ಸಮಸ್ಯೆಗಳ ಪರಿಹಾರಕ್ಕೆ ನಡೆಸುತ್ತಿದ್ದ ಪ್ರಾಮಾಣಿಕ ಪ್ರಯತ್ನದಿಂದ ಮುಂದಿನ ದಿನಗಳಲ್ಲಿ ಭಾರೀ ಬಹುಮತದಿಂದ ಗೆದ್ದುಬಂದರು.

1972ರಲ್ಲಿ ಸೈಕಲ್, 1983ರಲ್ಲಿ ತಕ್ಕಡಿ, 1985ರಲ್ಲಿ ಚಕ್ರದೊಳಗೆ ನೇಗಿಲು ಹೊತ್ತ ರೈತ, 1989ರಲ್ಲಿ ಜನತಾ (ಜೆಪಿ)ಯಿಂದ ಸನಿಕೆಯಿಂದ ನೆಲ ಅಗೆಯುವ ರೈತ, 1994ರಲ್ಲಿ ಚಕ್ರ ಹಾಗೂ ಸಂಯುಕ್ತ ಜನತಾ ದಳದಿಂದ 99ರಲ್ಲಿ ಬಾಣ ಗುರುತಿನ ಮೇಲೆ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

## ಸಿ.ಬಿ. ಬೆಳವಣಿಗೆ

ಕೋಲಾರ ತಾಲೂಕು ನರಸಾಪುರ ಹೋಬಳಿ ಚೌಡದೇನಹಳ್ಳಿಯಲ್ಲಿ ಕೃಷಿಕರಾದ ಚೌಡೇಗೌಡ - ಲಕ್ಷ್ಮೀದೇವಮ್ಮ ಅವರ ಹಿರಿಯ ಪುತ್ರರಾಗಿ 12-5-1934ರಂದು ಬೈರೇಗೌಡರು ಜನಿಸಿದರು.

ವೃತ್ತಿಯಲ್ಲಿ ಕೃಷಿಕರಾದ ಬೈರೇಗೌಡರು ಬಿಎಸ್ಸಿ ಪದವೀಧರರು. ವಿದ್ಯಾರ್ಥಿ ದೆಸೆಯಿಂದಲೂ ನಾಯಕತ್ವದ ಗುಣಗಳನ್ನು ಹೊಂದಿದ್ದ ಬೈರೇಗೌಡರಿಗೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ, ನಾಯಕರ ಮಾತು ಕೇಳುವುದು, ಸುತ್ತಲಿನ ಘಟನಾವಳಿಗಳ ಸೂಕ್ಷ್ಮ ಅವಲೋಕನ ಸಿದ್ದಿಸಿತ್ತು. ಯುವಕರಾಗಿದ್ದಾಗಲೇ ಜಿಲ್ಲೆಯಲ್ಲಿನ ಕಮ್ಯುನಿಸ್ಟ್ ಚಳವಳಿ, ಭೂ ಸುಧಾರಣಾ ಆಂದೋಲನ, ಇನಾಂ, ಜೋಡಿ ಇನಾಂ ರದ್ದತಿ ಹೋರಾಟ ಮೊದಲಾದವುಗಳಿಂದ ಆಕರ್ಷಿತರಾಗಿದ್ದರು. ಆರಂಭದಲ್ಲಿ ಕಮ್ಯುನಿಸ್ಟ್ ಸಿದ್ಧಾಂತ ಒಪ್ಪಿ, ಅದರ ಸದಸ್ಯರಾಗಿಯೂ ಗುರುತಿಸಿಕೊಂಡಿದ್ದರು.

## ರಾಜಕೀಯ ಜೀವನ ಆರಂಭ

ಸಹಕಾರ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬೈರೇಗೌಡರು ಭೂ ಬ್ಯಾಂಕ್ ನಿರ್ದೇಶಕರಾಗುವ ಮೂಲಕ ರಾಜಕೀಯ ಜೀವನ ಆರಂಭಿಸಿದರು. 33 ವರ್ಷದವರಾಗಿದ್ದಾಗಲೇ ಬೈರೇಗೌಡರು 1967ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ರೈತ ಸಂಘದಿಂದ ಸ್ಪರ್ಧಿಸಿ ಜಿ. ನಾರಾಯಣಗೌಡರ ಕೈಯಲ್ಲಿ ಸೋಲು ಅನುಭವಿಸಿದರು. ವೇಮಗಲ್ ಕ್ಷೇತ್ರ ಆಗ ತಾನೇ ರಚಿತವಾಗಿತ್ತು. ಚಿಂತಾಮಣಿ ತಾಲೂಕಿನ ಕೈವಾರ, ಕಸಬಾ ಹೋಬಳಿಗಳು ಸೇರಿದ್ದರಿಂದ ಅಲ್ಲಿನ ಕಾಂಗ್ರೆಸ್ ನಾಯಕರಾದ ಆಂಜನೇಯರೆಡ್ಡಿ, ಚೌಡರೆಡ್ಡಿಯವರ ಪ್ರಭಾವ ಜಾಸ್ತಿಯಿತ್ತು. ಆದರೂ ಬೈರೇಗೌಡರು ಹಿಂಜರಿಯದೆ ಭಾವ ನೆಂಟರ ವಿರುದ್ಧ ಹೋರಾಡಿದರು. ಅವರ ಮನೆಗೆ ಹೋಗಿದ್ದ ಪಿ.ವಿ. ನೇತೃತ್ವದ ನಿಯೋಗಕ್ಕೆ ಗೌಡರ ತಂದೆ ಚೌಡೇಗೌಡರು ಹಾಲು ಮುಟ್ಟಿ ಪ್ರಮಾಣ ಮಾಡಿದ್ದರು ತಮ್ಮ ಮಗ ಹೋರಾಡುತ್ತಾನೆ, ರಾಜಕೀಯದಲ್ಲಿ ಸಂಬಂಧಗಳಿಲ್ಲ ಎಂದು.

1968ರಲ್ಲಿ ತಾಲೂಕು ಮಂಡಲಿಗೆ ಆಯ್ಕೆಯಾಗಿ, 1969ರಲ್ಲಿ ಅಧ್ಯಕ್ಷರಾಗಿದ್ದರು. ಆದ ನಂತರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ತೆರೆದ ಬಾವಿಗಳಿಗೆ ಸಾಲ ಕೊಡಿಸಿ, ರೈತರ ನೆರವಿಗೆ ಬಂದರು. ಆಗಿನಿಂದಲೂ ಭ್ರಷ್ಟಾಚಾರ, ಲಂಚದ ವಿರುದ್ಧ ಯುದ್ಧ ನಡೆಸುತ್ತಾ ಬಂದರು.

ಮತ್ತೆ 1972ರ ಸಾರ್ವತ್ರಿಕ ಚುನಾವಣೆಯಲ್ಲಿ ವೇಮಗಲ್ ವಿಧಾನ ಸಭಾ ಕ್ಷೇತ್ರದಿಂದ ರೈತ ಸಂಘದ ಅಭ್ಯರ್ಥಿಯಾಗಿ ಪಕ್ಷೇತರ ಸದಸ್ಯರಾಗಿ ಸ್ಪರ್ಧಿಸಿ, 21258 ಮತಗಳಿಸಿ (ಶೇಕಡ

51.49) ಜಯಶಾಲಿಗಳಾದರು. ಮೊದಲಬಾರಿಗೆ 24-3-72ರಂದು ಶಾಸಕರಾಗಿ ಪ್ರಮಾಣ ಸ್ವೀಕರಿಸಿದರು. ಗುಂಡ್ಲುಪೇಟೆಯ ಕೆ.ಎಸ್. ನಾಗರತ್ನಮ್ಮ ಆಗ ಸಭಾಧ್ಯಕ್ಷರು.

1978ರಲ್ಲಿ ಜನತಾ ಪಕ್ಷದ ಚಿನ್ಹೆಯ ಮೇಲೆ ಸ್ಪರ್ಧಿಸಿ, ಗೋವಿಂದಗೌಡರಿಂದ ಪರಾಭವಗೊಂಡರು. ನಂತರ ನಡೆದ ತಾಲೂಕು ಮಂಡಳಿ ಚುನಾವಣೆಯಲ್ಲಿ ಗೆದ್ದು ಎರಡನೇ ಬಾರಿ ಅಧ್ಯಕ್ಷರಾದರು.

1983ರಲ್ಲಿ ಪಕ್ಷೇತರರಾಗಿ 33 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಜಯ ಸಾಧಿಸಿದ ಬೈರೇಗೌಡರು ಹೆಗಡೆಯವರ ಮಂತ್ರಿಮಂಡಲ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದು, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಅಧ್ಯಕ್ಷರಾಗಿ 19-7-83ರಿಂದ ಸೇವೆ ಸಲ್ಲಿಸಿದರು.

ಸಿ.ಬಿ. ತಮ್ಮ ಶಾಸಕತನದ ಅವಧಿಯಲ್ಲಿ ವಿಧಾನಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಪ್ರಥಮ ಅಧಿವೇಶನದಲ್ಲಿ ಹಲವು ಜ್ವಲಂತ ಸಮಸ್ಯೆಗಳ ಕುರಿತ ಹಲವು ಪ್ರಶ್ನೆಗಳನ್ನು ಎತ್ತಿ ಜೊತೆಗೆ ರಾಜ್ಯದ ಪ್ರಚಲಿತ ಆಗುಹೋಗುಗಳ ಬಗ್ಗೆಯೂ ಧ್ವನಿ ಸೇರಿಸುತ್ತಿದ್ದರು. ಸ್ವತಃ ಕೃಷಿಕರಾದ ಅವರು ರೈತರ ನಾಡಿಮಿಡಿತ ಬಲ್ಲವರು. ಸದಾ ಕ್ಷಾಮಕ್ಕೆ ತುತ್ತಾಗುವ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸುತ್ತಲೇ ಇರುತ್ತಿದ್ದರು.

ಎಲ್ಲರಿಗೂ ಸಮಾನ ಅವಕಾಶಕ್ಕಾಗಿ ವಿದ್ಯಾ ಕ್ಷೇತ್ರದಲ್ಲಿ ಗ್ರಾಮೀಣರಿಗೆ ಮೀಸಲಾತಿಗೆ ಒತ್ತಾಯಿಸಿ, ಗ್ರಾಮೀಣ ಕೃಪಾಂಕಕ್ಕೆ ನಾಂದಿ ಹಾಡಿದರು. ಕೋಲಾರ ನಗರ ನೀರು ಪೂರೈಕೆ ವ್ಯವಸ್ಥೆಯನ್ನು ಮಂಡಲಿಗೆ ವಹಿಸಲು ಸೂಚಿಸಿದ್ದರು.

1985ರಲ್ಲಿ ಜನತಾಪಕ್ಷದಿಂದ ಶೇಕಡಾ 61.84 ಮತಗಳಿಸಿ ಮೂರನೇ ಬಾರಿ ಚುನಾಯಿತರಾದ ಬೈರೇಗೌಡರ ವ್ಯಕ್ತಿತ್ವ, ಸಾರ್ವಜನಿಕ ಬದುಕಿನಲ್ಲಿ ಅವರಿಗಿದ್ದ ಬದ್ಧತೆಯನ್ನು ಕಂಡ ರಾಮಕೃಷ್ಣ ಹೆಗಡೆಯವರು ತಮ್ಮ ಮಂತ್ರಿ ಮಂಡಲದಲ್ಲಿ ಸ್ಥಾನ ಕೊಟ್ಟು ಮೀನುಗಾರಿಕೆ ಮತ್ತು ಬಂದರು ಸಚಿವರಾಗಿ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಟ್ಟರು. ಬೈರೇಗೌಡರಿಗೆ ಆ ಖಾತೆ ತೃಪ್ತಿ ತಂದುಕೊಡದಿದ್ದರೂ ಯಶಸ್ವಿಯಾಗಿ ನಿರ್ವಹಿಸಿದರು. ಹೆಗಡೆಯವರೊಡನೆ ವಿರಸ ಬಂದಾಗ, ಅವರು ಮಂತ್ರಿಮಂಡಲ ಪುನರ್ರಚನೆಯಲ್ಲಿ ಗೌಡರನ್ನು ಕೈಬಿಟ್ಟರು. ಜನತಾ ಪಕ್ಷ ಮತ್ತೆ ಹೋಳಾಗುವ ಹಂತ ಮುಟ್ಟಿದಾಗ, ಬೈರೇಗೌಡರು ದೇವೇಗೌಡರ ಜೊತೆ ತಮ್ಮನ್ನು ಗುರುತಿಸಿಕೊಂಡರು.

1989ರಲ್ಲಿ ಹೆಗಡೆ ಬಣದ ವಿರುದ್ಧ ದೇವೇಗೌಡರ ಜನತಾಪಕ್ಷದಿಂದ ಬೈರೇಗೌಡರು ಸ್ಪರ್ಧಿಸಿದರು. ವಿಭಜಿತ ದಳ ಚುನಾವಣೆಯಲ್ಲಿ ಮಣ್ಣು ಮುಕ್ಕಿತು. ದೇವೇಗೌಡರು ಸೇರಿದಂತೆ ಜನತಾಪಕ್ಷದ ಅತಿರಥ, ಮಹಾರಥರು ಸೋಲು ಅನುಭವಿಸಿದರೂ ವೇಮಗಲ್‌ನಲ್ಲಿ ಶೇಕಡಾ 48.86 ಮತಗಳಿಸಿ ಬೈರೇಗೌಡರು ಅಪ್ರತಿಮ ಗೆಲುವು ಸಾಧಿಸಿದ್ದರು. ಅವರ ಪಕ್ಷದಿಂದ ಗೌಡರನ್ನು ಬಿಟ್ಟರೆ ಎಚ್.ಡಿ. ಕೋಟೆಯಲ್ಲಿ ವೆಂಕಟೇಶ್ ಒಬ್ಬರು ಮಾತ್ರ ಜಯಶಾಲಿಗಳಾಗಿದ್ದರು.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸಕ್ರಿಯ ಸದಸ್ಯರಾಗಿ ದುಡಿದ ಬೈರೇಗೌಡರು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷತೆ ಸೇರಿದಂತೆ ಹಲವು ಸಮಿತಿಗಳಲ್ಲಿ ಪಾಲ್ಗೊಂಡು, ತಮ್ಮ ಅನುಭವವನ್ನು ರಾಜ್ಯದ ಪ್ರಗತಿಗೆ ರಾಜ್ಯದ ಪ್ರಗತಿಗೆ ಧಾರೆಯೆರೆದರು.

1989ರಲ್ಲಿನ ಚುನಾವಣೆಯಿಂದ ಪಾಠ ಕಲಿತ ಜನತಾದಳದ ಬಣಗಳು ಮತ್ತೆ ಒಂದಾದರೆ ಮಾತ್ರ ರಾಜ್ಯದಲ್ಲಿ ಗೆಲುವು ಸಾಧ್ಯ ಎಂಬುದನ್ನು ಮನಗಂಡು, 1994ರ ಚುನಾವಣೆಗೆ ಸಿದ್ಧವಾದವು. ಜನತಾ ದಳದ ಅಡಿಯಲ್ಲಿ ನಡೆದ ಚುನಾವಣೆಯಲ್ಲಿ ಬೈರೇಗೌಡರು 66049 ಮತಗಳನ್ನು ಗಳಿಸಿ ವೇಮಗಲ್ ಕ್ಷೇತ್ರದಿಂದ ಚುನಾಯಿತರಾದರು.

ಜನತಾದಳದ ದೇವೇಗೌಡರು ರಚಿಸಿದ ಸಂಪುಟದಲ್ಲಿ 16-12-94ರಂದು ಕೃಷಿ ಸಚಿವರಾಗಿ ಅಧಿಕಾರ ವಹಿಸಿಕೊಂಡರು. ಕೃಷಿ ಇಲಾಖೆ ಮಹತ್ವದ್ದು ಎಂಬುದನ್ನು ತೋರಿಸಿಕೊಟ್ಟ ಗೌಡರು, ಮಹತ್ತರ ಬದಲಾವಣೆಗಳನ್ನು ಇಲಾಖೆಯಲ್ಲಿ ಮಾಡಿದರು. ಬೇಸಾಯ ರಂಗವೆಂಬುದು ಸಿಬಿಗೆ ಅಚ್ಚುಮೆಚ್ಚು. ಮೂಲತಃ ಕೃಷಿಕರಾಗಿ ಕ್ಷೇತ್ರದ ಸಮಸ್ಯೆಗಳನ್ನು ಆಳವಾಗಿ ಅರಿತಿದ್ದರಿಂದ, ಪರಿಣಾಮಕಾರಿ ಪರಿಹಾರ ಸೂಚಿಸಲು ಶಕ್ತರಾದರು.

ಇಲಾಖೆಯಲ್ಲಿನ ಭ್ರಷ್ಟಾಚಾರ ನಿರ್ಮೂಲನಕ್ಕಾಗಿ ಹಲವು ಕಠಿಣ ನಿರ್ಧಾರಗಳನ್ನು ಕೈಗೊಂಡರು. ನೇಮಕಾತಿ ಸಂದರ್ಭದಲ್ಲಿ ನಡೆಸುತ್ತಿದ್ದ ಸಂದರ್ಶನ ರದ್ದುಪಡಿಸಿ ಕೇವಲ ಅರ್ಹತೆ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಮೂಲಕ ಆಯ್ಕೆ ಪದ್ಧತಿ ಜಾರಿಗೆ ತಂದರು. ಅದೇ ರೀತಿ ಕೃಷಿ ವಿ.ವಿಗೂ ಮೆರಿಟ್, ರೋಸ್ಟರ್ ಆಧಾರದ ಮೇಲೆ ಆಯ್ಕೆ ಮಾಡಲು ಕಾನೂನು ಮಾಡಿದರು. ಲಂಚಗುಳಿತನದ ದೂರು ಬಂದ ಅನೇಕ ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ಮಾಡಿ ಅಧಿಕಾರಿಗಳನ್ನು ದಂಡಿಸಿದರು. ಕಚೇರಿ ಕೆಲಸ ಮಾಡದೆ, ವರ್ಗಾವಣೆಗಾಗಿ ಅಲೆದಾಡುವ ಅಧಿಕಾರಿಗಳನ್ನು ಅಮಾನತ್ತುಗೊಳಿಸಿದರು. ಇದಕ್ಕಾಗಿ ನೌಕರ ವರ್ಗದ ಆಗ್ರಹಕ್ಕೂ ಒಳಗಾದರು.

ಕೃಷಿಯನ್ನು ಯಾಂತ್ರೀಕರಣಗೊಳಿಸಲು ಅನೇಕ ಕ್ರಮ ಕೈಗೊಂಡರು. ಬಿತ್ತನೆ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗೆ ಚಾಲನೆಯಿತ್ತರು. ಟ್ರಾಕ್ಟರ್, ಟಿಲ್ಲರ್, ಡ್ರಮ್ ಸೀಡರ್ ಮೊದಲಾದ ಉಪಕರಣಗಳಿಗೆ ಸಬ್ಸಿಡಿ ಘೋಷಿಸಿದರು. ರಾಜ್ಯ, ಜಿಲ್ಲೆಗಳಲ್ಲಿ ಕೃಷಿ ಮೇಳ ಏರ್ಪಡಿಸಿ, ನೆರೆ ಜಿಲ್ಲೆಗಳ ರೈತರಿಗೆ ಪ್ರವಾಸ ವ್ಯವಸ್ಥೆ ಮಾಡಿದರು. ಮುಖ್ಯವಾಗಿ ವಿಧಾನಸೌಧದ ಮುಂಭಾಗದಲ್ಲಿ ಕೃಷಿ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಜಾರಿಗೆ ತಂದು, ಕೃಷಿಕನ ಗೌರವವನ್ನು ಉತ್ತುಂಗಕ್ಕೆ ಕೊಂಡೊಯ್ದರು.

ರಾಷ್ಟ್ರದಲ್ಲಿಯೇ ಕೃಷಿಗೆ ಒಂದು ನೀತಿಯನ್ನು ಮೊದಲು ಜಾರಿಗೆ ತಂದ ಕೀರ್ತಿ ಬೈರೇಗೌಡರಿಗೆ ಸಲ್ಲುತ್ತದೆ. ಕೇಂದ್ರದ ಗ್ಯಾಟ್, ಡಂಕಲ್ ಪ್ರಸ್ತಾವನೆಯನ್ನು ಅವರು ತೀವ್ರವಾಗಿ ವಿರೋಧಿಸಿದ್ದರು.

ವ್ಯವಸಾಯದ ಅತಿ ಸಣ್ಣ ವಿಷಯವನ್ನೂ ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಸಿ.ಬಿ.ಯವರು, ಸಕಾಲದಲ್ಲಿ ಗುಣಮಟ್ಟದ ಬೀಜ ವಿತರಣೆಗೆ ಒತ್ತು ನೀಡಿದರು. ನಕಲಿ ಗೊಬ್ಬರ, ಬಿತ್ತನೆ ಬೀಜ,

ಕೀಟನಾಶಕಗಳನ್ನು ಕಂಡು ಹಿಡಿಯಲು ಸಚಿವರಾಗಿದ್ದೂ ಸ್ವತಹ ಅಂಗಡಿಗಳಿಗೆ ಹೋಗುತ್ತಿದ್ದರು. ಪ್ರವಾಸದ ಕಾಲದಲ್ಲಿ ರೈತರನ್ನು ಕಂಡು, ಅವರ ಕುಂದು ಕೊರತೆ ಕೇಳುತ್ತಿದ್ದರು. ಎಲ್ಲಿಯಾದರೂ ಕೃಷಿಕರಿಗೆ ಅನ್ಯಾಯವಾಗಿದೆ ಎಂಬ ಭಾವ ಬಂದರೆ, ತಕ್ಷಣ ಅಲ್ಲಿಗೆ ಭೇಟಿ ನೀಡುತ್ತಿದ್ದರು. ಅದನ್ನು ಸರಿಪಡಿಸುತ್ತಿದ್ದರು.

ರೈತರ ಬೆಳೆಗೆ ಸರಿಯಾದ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕೆಂದು ಬಯಸಿದ್ದರು. ಹಳ್ಳಿಯವರಿಗೂ ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯದ ಪೇಟೆಧಾರಣೆ ಮಾಹಿತಿ ಲಭಿಸಬೇಕೆಂದು ಆಲೋಚಿಸಿ, ಅದರತ್ತ ಕ್ರಮಗಳನ್ನು ಕೈಗೊಂಡಿದ್ದರು. ಬೇಡಿಕೆಗೆ ತಕ್ಕಂತೆ ಬೆಳೆ ಬೆಳೆಯಬೇಕೆಂಬುದನ್ನು ಪ್ರತಿಪಾದಿಸಿದ್ದರು.

ಟೊಮಾಟೋ ಬೆಲೆ ಕುಸಿದಾಗ, ಬೈರೇಗೌಡರು ಟ್ರಾಕ್ಟರ್‌ಗಳಲ್ಲಿ ಹಣ್ಣನ್ನು ತುಂಬಿಕೊಂಡು, ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಚೆಲ್ಲಿ ಪ್ರತಿಭಟನೆಯನ್ನು ಮಾಡಿದರು.

ಬೈರೇಗೌಡರು ಸಚಿವರಾಗಿದ್ದ ಕಾಲದಲ್ಲಿ ಯಾವುದೇ ಹಗರಣದ ಆರೋಪಕ್ಕೂ ಒಳಗಾಗಲಿಲ್ಲ ಎಂಬುದು ಅವರ ದಕ್ಷತೆ, ಪ್ರಾಮಾಣಿಕತೆಗೆ ಸಾಕ್ಷಿ. ಭ್ರಷ್ಟಾಚಾರಿಗಳಿಗೆ, ಲಂಚಗುಳಿ, ಸೋಮಾರಿ ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿದ್ದ ಶ್ರೀಯುತರು ದಕ್ಷ ಅಧಿಕಾರಿಗಳಿಗೆ ಅಗತ್ಯವಾದ ಸೌಲಭ್ಯ ಕಲ್ಪಿಸಿಕೊಡುತ್ತಿದ್ದರು. ಇಲಾಖೆಯನ್ನು ಆಮೂಲಾಗ್ರವಾಗಿ ಬಲ್ಲವರಾದ್ದರಿಂದ ಸುಳ್ಳು ಮಾಹಿತಿ ನೀಡಿದವರಿಗೆ ಅಲ್ಲೇ ಶಿಕ್ಷೆ ಕಾದಿರುತ್ತಿತ್ತು. ಯಾವ ಕಾನೂನು ಮಾಡಿದರೆ ರೈತರಿಗೆ ಅನುಕೂಲವಾಗುತ್ತೆ ಎಂಬ ಬಗ್ಗೆ ಸದಾ ಆಲೋಚಿಸುತ್ತಿದ್ದರು. ಇಲಾಖೆಯ ಮೇಲೆ ಚುನಾಯಿತ ಪ್ರತಿನಿಧಿ ಅವ್ಯವಹಾರಗಳಿಗೆ ಆಸ್ಪದವಿಲ್ಲದೆ ಹಿಡಿತ ಸಾಧಿಸಬಹುದೆಂಬುದನ್ನೂ ತೋರಿಸಿಕೊಟ್ಟರು.

ರಾಜ್ಯದ ಮಂತ್ರಿಯಾದರೂ ಕ್ಷೇತ್ರವನ್ನು, ಮತದಾರರನ್ನು ಎಂದೂ ಮರೆತವರಲ್ಲ. 318 ಹಳ್ಳಿಗಳನ್ನು ಹೊಂದಿರುವ ಕ್ಷೇತ್ರದ ಅಭಿವೃದ್ಧಿಗೆ ಎಲ್ಲ ರೀತಿಯ ಕ್ರಮಗಳನ್ನೂ ಕೈಗೊಳ್ಳುತ್ತಿದ್ದರು. ಮೂಲಭೂತ ಸೌಲಭ್ಯ ಕಲ್ಪನೆಗೆ ಹಿಂದೆ ಬಿದ್ದವರಲ್ಲ.

1998ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಸೋಲನ್ನು ಅನುಭವಿಸಿದ್ದರು.

1999ರಲ್ಲಿ ಜನತಾದಳ ಮತ್ತೆ ಎರಡು ಹೋಳಾಯಿತು. ಜನತಾದಳ, ಲೋಕಶಕ್ತಿ, ಸಮತಾ ಪಕ್ಷಗಳ ವಿಲೀನದಿಂದ ರೂಪುಗೊಂಡ ಸಂಯುಕ್ತ ಜನತಾದಳದ ಅಧ್ಯಕ್ಷರಾಗಿ 22-7-99ರಂದು ಸಿ. ಬೈರೇಗೌಡರು ನೇಮಕಗೊಂಡರು. ಅಧ್ಯಕ್ಷರಾದ ನಂತರ ಪಕ್ಷದ ಸಂಘಟನೆಗೆ ರಾಜ್ಯದಾದ್ಯಂತ ಪ್ರವಾಸ ಕೈಗೊಂಡರು. ಸಚಿವರಾಗಿ ರಾಜ್ಯ ಸುತ್ತಿದ್ದರೂ, ಪಕ್ಷದ ಹೊಣೆಗಾರಿಕೆಯಲ್ಲಿನ ಓಡಾಟ ಜಾಸ್ತಿಯಾಗಿತ್ತು. ಪಕ್ಷದ ಸಂಘಟನೆ ಅಂದರೆ ಕೇವಲ ಮಾಧ್ಯಮಗಳಿಗೆ ಹೇಳಿಕೆ ನೀಡುವುದಲ್ಲ ಎಂಬುದನ್ನು ಅರಿತಿದ್ದ ಸಿಬಿ, ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಪಕ್ಷ ಬೆಳೆಸಲು ಯತ್ನಿಸಿದರು.

ಆದರೆ ಆ ವರ್ಷ ನಡೆದ ಚುನಾವಣೆಯಲ್ಲಿ ಜನತಾ ಪರಿವಾರ ನೆಲಕಚ್ಚಿತು. ಎಸ್.ಎಂ. ಕೃಷ್ಣ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದಾಗ, ವಿರೋಧ ಪಕ್ಷದ ನಾಯಕನ ಸ್ಥಾನ ಬಿಜೆಪಿಗೆ ಹೋಯಿತು. ಆದರೂ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತ ಸಿ.ಬಿ. ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. ಕಾವೇರಿ ಜಲವಿವಾದ, ನಾಗಪ್ಪ ಅಪಹರಣ, ಹತ್ಯೆ ಮೊದಲಾದವುಗಳಲ್ಲಿ ಸರ್ಕಾರದ ವಿಫಲತೆಯನ್ನು ಸಭೆಯಲ್ಲಿ ಸಮರ್ಥವಾಗಿ ಪ್ರತಿಪಾದಿಸಿದರು. ಜನತೆಯ ಹಿತಕ್ಕೆ ಮಾರಕ ಅನ್ನಿಸಿದ್ದನ್ನು ತಿಳಿಸುವುದರಲ್ಲಿ ಯಾವುದೇ ರಾಜಿಗೂ ಅವರು ಒಪ್ಪುತ್ತಿರಲಿಲ್ಲ.

ಜನತಾದಳ ವಿಭಜನೆಗೊಂಡಾಗ, ಕಚೇರಿಯ ಹಕ್ಕಿಗಾಗಿ ಕೆ.ಎನ್. ನಾಗೇಗೌಡ, ಬಿ.ಎನ್. ಬಚ್ಚೇಗೌಡ ಇತ್ಯಾದಿ ಕೆಲವೇ ಸ್ನೇಹಿತರೊಂದಿಗೆ 25-7-99ರಂದು ಕಚೇರಿಯ ಮುಂದೆ ಧರಣಿ ನಡೆಸಿ, ಹಲ್ಲೆಗೂ ಒಳಗಾದರು. ಧೈರ್ಯದಿಂದ ಹಿಡಿದ ಕೆಲಸ ಸಾಧಿಸಲು ಪ್ರಯತ್ನಿಸಿದರು. ಆ ಬಗ್ಗೆ ಕೋಲಾರದಲ್ಲೂ 27-7-99ರಂದು ಪ್ರತಿಭಟನೆ ನಡೆಯಿತು.

ಬೈರೇಗೌಡರು ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಯಕರಾದರೂ ತಮ್ಮ ಪಕ್ಷದ ಮುಖಂಡರುಗಳ ಬಗ್ಗೆ ಗೌರವದಿಂದ ನಡೆದುಕೊಂಡರು. ರಾಜಕೀಯದಲ್ಲಿ ಯಾರೂ ಖಾಯಂ ಶತ್ರುಗಳಿಲ್ಲ, ಮಿತ್ರರೂ ಇಲ್ಲ ಎಂಬುದನ್ನು ಅರಿತಿದ್ದ ಅವರು ದೇವೇಗೌಡರ ಜೊತೆ ಇದ್ದವರು, ಅವರನ್ನು ತಾತ್ವಿಕವಾಗಿ ವಿರೋಧಿಸಲು ಹಿಂಜರಿಯಲಿಲ್ಲ, ಹೆಗಡೆ ಜೊತೆ ಸಹ.

ಭ್ರಷ್ಟರಿಗೆ ಸಿಂಹಸ್ವಪ್ನರಾಗಿದ್ದ ಬೈರೇಗೌಡರು, ಒಮ್ಮಿಂದೊಮ್ಮೆಲೆ ಅದನ್ನು ತೊಡೆದು ಹಾಕುವುದು ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದು, ಭ್ರಷ್ಟಾಚಾರವನ್ನು ನಿಯಂತ್ರಿಸುವ ದಿಕ್ಕಿನಲ್ಲಿ ಗಮನಾರ್ಹ ಹೆಜ್ಜೆ ಇಟ್ಟಿದ್ದರು. ಅದಕ್ಕಾಗಿಯೇ ಈ ಮೊದಲೇ ತಿಳಿಸಿರುವಂತೆ ನೇಮಕಾತಿ ಹಾಗೂ ವರ್ಗಾವಣೆಗಳಲ್ಲಿ ಹೊಸ ನೀತಿಯನ್ನು ಜಾರಿಗೆ ತಂದರು.

1975-77ರಲ್ಲಿ ವಂಶಪಾರಂಪರ್ಯ ರಾಜಕಾರಣದ ವಿರುದ್ಧ ಹೋರಾಡಲು ಜನ್ಮತಾಳಿದ ಜನತಾ ಪಕ್ಷ ಮೂಲ ಆಶಯವನ್ನು ಮರೆತು ಕೆಲವು ನಾಯಕರು ರಾಜಿಯಾಗುತ್ತಿರುವುದಕ್ಕೆ ಸದಾ ಖೇದ ವ್ಯಕ್ತಪಡಿಸುತ್ತಿದ್ದರು. ಜಿಲ್ಲೆಯಲ್ಲಿ ರೈತ ಸಂಘವನ್ನು ಜನತಾ ಪಕ್ಷದಲ್ಲಿ ವಿಲೀನಗೊಳಿಸಿ, ಜನತಾಪಕ್ಷವನ್ನು ಕಟ್ಟಲು ಬಿಸಪ್ಪಗೌಡ, ಕೆ.ವಿ. ಶಂಕರಪ್ಪ, ಪನ್ನಾಲಾಲ್, ಲಕ್ಷ್ಮೀರಾವ್ ಹಾಗೂ ಜಿಲ್ಲೆಯ ಹಲವು ನಾಯಕರ ಜೊತೆಗೂಡಿ ಶ್ರಮಿಸಿದ್ದರು. ಜಿಲ್ಲೆಯಲ್ಲಿ ರೈತ ಸಂಘವನ್ನು ಜನತಾ ಪಕ್ಷದಲ್ಲಿ ವಿಲೀನಗೊಳಿಸಿ, ಜನತಾ ಪಕ್ಷವನ್ನು ಕಟ್ಟಲು ಬಿ. ಸಪ್ಪಾಗೌಡ, ಕೆ.ವಿ. ಶಂಕರಪ್ಪ ಹಾಗೂ ಜಿಲ್ಲೆಯ ಹಲವು ನಾಯಕರ ಜೊತೆಗೂಡಿ ಶ್ರಮಿಸಿದ್ದರು. ಕಪ್ಪು ಹಣದವರ ಮತ್ತು ಅಬ್ಕಾರಿಯವರ ಎದುರು ಕೈಚಾಚುವುದಿಲ್ಲ ಎನ್ನುತ್ತಿದ್ದ ಗೌಡರು, ಸೆಕೆಂಡ್ಸ್ ಲಾಬಿ ಬಗ್ಗೆ ಸದಾ ಎಚ್ಚರದಿಂದಿರಲು ತಿಳಿಸುತ್ತಿದ್ದರು. ವಿಧಾನಸೌಧದ ಒಳಗೂ, ಹೊರಗೂ ರೈತರ ಸಮಸ್ಯೆಗಳ ಪರವಾಗಿ ಅತ್ಯಂತ ಗಟ್ಟಿಯಾದ ಧ್ವನಿಯಲ್ಲಿ ಪ್ರಾಮಾಣಿಕವಾಗಿ ಮಾತನಾಡುತ್ತಿದ್ದು, "ರೈತರ ಧ್ವನಿ ಬೈರೇಗೌಡ" ಎಂಬ ಖ್ಯಾತಿಗೆ ಪಾತ್ರರಾಗಿದ್ದರು.

ರಾಜಕೀಯ ಪಕ್ಷದ ಸಾಮಾನ್ಯ ಕಾರ್ಯಕರ್ತರಾಗಿ, ಶಾಸಕರಾಗಿ, ಮಂತ್ರಿಯಾಗಿ, ಪಕ್ಷದ ಅಧ್ಯಕ್ಷರಾಗಿ ಹಂತಹಂತವಾಗಿ ತಮ್ಮ ಶ್ರಮ, ಬದುಕಿನ ರೀತಿಯಿಂದ ಮೇಲೇರಿ ಬಂದವರಾದರೂ ಗ್ರಾಮೀಣ ಬದುಕಿನ ಸಾರ ಬಲ್ಲ ಬೈರೇಗೌಡರು ಸರಳ ಜೀವಿಗಳು, ಸ್ನೇಹಪರರಾಗಿದ್ದರು.

ಪತ್ನಿ ಸಾವಿತ್ರಮ್ಮನವರು ಬೈರೇಗೌಡರಿಗೆ ಪೂರ್ಣ ಸಹಕಾರ ನೀಡಿ, ಗೃಹಕೃತ್ಯದ ಪೂರ್ಣ ಜವಾಬ್ದಾರಿ ಹೊತ್ತಿದ್ದರು. ಮೂವರು ಗಂಡು ಮಕ್ಕಳು, ಇಬ್ಬರು ಪುತ್ರಿಯರು ಇವರಾರೂ ಬೈರೇಗೌಡರ ಸಾರ್ವಜನಿಕ ಬದುಕಿನಲ್ಲಿ ಎಂದೂ ಮೂಗು ತೂರಿಸಿದವರಲ್ಲ.

ಆಡಂಬರದ ವಿವಾಹಗಳಿಗೆ ವಿರುದ್ಧವಾಗಿದ್ದ ಗೌಡರು ತಮ್ಮ ಮಗಳ, ಮಗನ ಮದುವೆಯನ್ನು ಯಾವುದೇ ಜನಜಾತ್ರೆಯಿಲ್ಲದೆ ಸರಳವಾಗಿ ಕುಟುಂಬದ ಸಮಾರಂಭ ಎನ್ನುವುದಕ್ಕೆ ಪೂರಕವಾಗಿ ನೆರವೇರಿಸಿದರು.

ಜನತಾ ಪರಿವಾರದಲ್ಲಿನ ಬೆಳವಣಿಗೆಗಳಿಂದ ತೀರಾ ನೊಂದಿದ್ದ ಬೈರೇಗೌಡರು 2003ರಲ್ಲಿ ಪಕ್ಷದ ಚಿಂತನೆಯಲ್ಲಿಯೇ ಕೊನೆಯುಸಿರು ಎಳೆದಿದ್ದು ಕನ್ನಡ ನಾಡಿನ ಹಾಗೂ ಕೋಲಾರ ಜಿಲ್ಲೆಯ ದುರ್ದೈವ.

## ನಾಸ್ತಿಕರಲ್ಲ

ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ಒಲವಿದ್ದರೂ, ಬೈರೇಗೌಡರು ನಾಸ್ತಿಕರಾಗಿರಲಿಲ್ಲ. ಅವರ ಮನೆ ದೇವರಾದ ಸೀತಿ ಬೈರವೇಶ್ವರ ದೇವಾಲಯದ ಅಭಿವೃದ್ಧಿಗೆ ಶ್ರಮಿಸಿದರಲ್ಲದೆ, ಗ್ರಾಮೀಣ ಜನರಿಗೆ ಸ್ವ ಉದ್ಯೋಗಕ್ಕೆ ಪೂರಕವಾಗುವ ರೀತಿಯಲ್ಲಿ ತರಬೇತಿ ನೀಡಲು ಸೀತಿಯಲ್ಲಿ ಸಮುದಾಯ ಕೇಂದ್ರ ಸ್ಥಾಪಿಸಲು ಬಯಸಿದ್ದರು. ಕಾರಣಾಂತರಗಳಿಂದ ಅದು ಕೈಗೂಡಲಿಲ್ಲ.

ವಕ್ಕಲೇರಿಯ ಮಾರ್ಕಂಡೇಶ್ವರ ಬೆಟ್ಟದಲ್ಲಿ ದುಷ್ಕರ್ಮಿಗಳು ವಿಗ್ರಹ ಭಂಜನೆ ಮಾಡಿದಾಗ, ಅದರಿಂದ ನೊಂದ ಅವರು ಹೊಸ ವಿಗ್ರಹಗಳ ಪ್ರತಿಷ್ಠಾಪನೆ ಹಾಗೂ ರಾಜಗೋಪುರ ಮಾಡಿಸುವವರೆಗೂ ವಿಶ್ರಮಿಸಲಿಲ್ಲ.

ಅದೇ ರೀತಿ ಕೋಲಾರ ನಗರದ ಬಸ್ ಸ್ಟಾಂಡ್ ಬಳಿ ಆಂಜನೇಯ ದೇವಾಲಯದ ಬೆಳವಣಿಗೆಗಾಗಿ ಟ್ರಸ್ಟ್ ಕೂಡಾ ಸ್ಥಾಪಿಸಿದ್ದರು.

ತಮ್ಮ ಕ್ಷೇತ್ರದ ವ್ಯಾಪ್ತಿಗೆ ಬರುವ ಕೈವಾರದಲ್ಲಿ ಅಲ್ಲಿನ ಧರ್ಮಾಧಿಕಾರಿ ಎಂ.ಎಸ್. ರಾಮಯ್ಯನವರ ಜೊತೆಗೂಡಿ ಅಮರ ನಾರಾಯಣ ಹಾಗೂ ಯೋಗಿ ನಾರೇಯಣ ಆಶ್ರಮದ ಅಭಿವೃದ್ಧಿಗೆ ಶ್ರಮಿಸಿದ್ದರು.

ಅದೇ ರೀತಿ ಕೋಲಾರ ಸಮೀಪ ಚೊಕ್ಕಹಳ್ಳಿಯಲ್ಲಿ ಸಾಂದೀಪನಿ ಆಶ್ರಮವನ್ನು ಚಿನ್ಮಯ ಮಿಷನ್ನಿನವರು ಸ್ಥಾಪಿಸಿದಾಗ, ಅದರಿಂದ ಪ್ರದೇಶದ ಜನರಿಗೆ ಏನು ಪ್ರಯೋಜನ ಎಂದು ಕೇಳಿದರು. ಅನಂತರ ಹಳ್ಳಿಗಾಡಿನ ಮಕ್ಕಳ ಶಿಕ್ಷಣಕ್ಕೆ ಅವಕಾಶವಿದೆ ಎಂದಾಗ ಪೂರ್ಣವಾಗಿ ನೆರವಾದರು.

ಕೋಲಾರದ ಗಲ್‌ಪೇಟೆ ಚಾಮುಂಡೇಶ್ವರಿ ದೇವಾಲಯಕ್ಕೆ ಪ್ರತಿವರ್ಷ ಸಂಕ್ರಾಂತಿಯಂದು ಮಧುಸೂಧನ ಮೋಟಾರ್ಸ್‌ನ ಕೆ. ಅನಂತರಾಜು ಜೊತೆ ಪಾಲ್ಗೊಳ್ಳುತ್ತಿದ್ದರು. ಗಟ್ಟಹಳ್ಳಿ ಶ್ರೀ ಆಂಜನೇಯ ಆಶ್ರಮ ಸೇರಿದಂತೆ ಹಲವು ದೇವಾಲಯಗಳ ಪ್ರಗತಿಗಾಗಿ ಸಕ್ರಿಯವಾಗಿ ಸಹಕರಿಸಿದ್ದರು.

## ಕ್ರೀಡಾ ಪ್ರೇಮಿ

ಕ್ರೀಡಾರಂಗದ ಬೆಳವಣಿಗೆಯಲ್ಲಿ ತುಂಬು ಆಸಕ್ತಿ ಹೊಂದಿದ್ದ ಸಿ.ಬಿಯವರು ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಿಯೋಲ್ ಒಲಂಪಿಕ್ಸ್, ಬೀಜಿಂಗ್ ಏಷ್ಯನ್ ಗೇಮ್ಸ್‌ನಲ್ಲಿ ರಾಷ್ಟ್ರದ ನಿಯೋಗದಲ್ಲಿದ್ದರು. ಇಂಡೋನೇಷಿಯಾ, ಯೂರೋಪ್, ಅಮೆರಿಕಾಗಳಲ್ಲಿ ಪ್ರವಾಸ ಮಾಡಿ ಬಂದಿದ್ದರು.

ರಾಜ್ಯ ಅಮೆಚೂರ್ ಅಥ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷರಾಗಿದ್ದ ಅವರು 1992 ಜನವರಿ 21ರಿಂದ 24ರವರೆಗೆ ಏಳನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಕೂಟವನ್ನು ಕೋಲಾರದಲ್ಲಿ ಸಂಘಟಿಸಿದ್ದರು. ದೇಶದ ಎಲ್ಲ ಭಾಗಗಳಿಂದ ಬಂದಿದ್ದ ಕ್ರೀಡಾಪಟುಗಳಿಗೆ ಸ್ವಲ್ಪವೂ ತೊಂದರೆಯಾಗದಂತೆ ಹಲವು ಸಮಿತಿಗಳ ಮೂಲಕ ಎಲ್ಲ ವ್ಯವಸ್ಥೆಯನ್ನು ಮಾಡಿದ್ದರು.

ಕೋಲಾರ ಮತ್ತು ಜಿಲ್ಲೆಯ ವಿವಿಧ ಕಡೆ ನಡೆದ ಹಲವು ಟೂರ್ನಿಗಳಲ್ಲಿ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕ್ರೀಡಾಪಟುಗಳಿಗೆ ಸರ್ಕಾರದಿಂದ ಕೊಡಿಸಬಹುದಾದ ಎಲ್ಲ ಸವಲತ್ತುಗಳನ್ನು ಕೊಡಿಸಲು ಪ್ರಯತ್ನಿಸುತ್ತಿದ್ದರು.

## ಗೋಶಾಲೆ ಸ್ಥಾಪನೆ

ಬೈರೇಗೌಡರು ಸಚಿವರಾಗಿದ್ದಾಗ ಜಿಲ್ಲೆಯಲ್ಲಿ ತೀವ್ರ ಬರಗಾಲ ಉಂಟಾಗಿ, ದನಕರುಗಳಿಗೆ ಹುಲ್ಲು, ನೀರಿನ ಸಮಸ್ಯೆಯಾಗಿದ್ದಾಗ, ರಾಜ್ಯದಲ್ಲಿಯೇ ಮೊದಲ ಬಾರಿಗೆ ನಾಲ್ಕೈದು ಕಡೆ ಗೋಶಾಲೆಗಳನ್ನು ಸ್ಥಾಪಿಸಿ ಹೊರರಾಜ್ಯಗಳಿಂದ ಮೇವು ತರಿಸಿ, ಅವುಗಳ ಪಾಲನೆಗೆ ನೆರವಾಗಿದ್ದರು.

ಗುಡಿಬಂಡೆ, ಬಾಗೇಪಲ್ಲಿ, ಚಿಂತಾಮಣಿ ಮತ್ತಿತರ ಕಡೆಯ ಗೋಶಾಲೆಗಳಿಗೆ ನೂರಾರು ರಾಸುಗಳನ್ನು ಪಾಲಕರು ತಂದು ಬಿಟ್ಟಿದ್ದು, ಪರಿಸ್ಥಿತಿ ಸುಧಾರಿಸಿದ ನಂತರ ಕರೆದುಕೊಂಡು ಹೋದರು. ಒಮ್ಮೆ ತಮ್ಮೂರಿನಲ್ಲಿ ಗೋಶಾಲೆ ಆರಂಭಿಸಿ ತಮ್ಮ ಹೊಲದ ಹುಲ್ಲನ್ನು ನೀಡುವ ವ್ಯವಸ್ಥೆ ಮಾಡಿದ್ದರು.

## ಶಿಕ್ಷಣ

ಕೃಷಿಯಷ್ಟೇ ಆದ್ಯತೆಯನ್ನು ಶಿಕ್ಷಣ ರಂಗಕ್ಕೂ ನೀಡಿದ್ದ ಬೈರೇಗೌಡರು ವಿಧಾನಸಭೆಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಕೇಳುತ್ತಿದ್ದರು. ನಗರ - ಹಳ್ಳಿ ಶಾಲೆಗಳಲ್ಲಿನ ಅಂತರ ಕಡಮೆಯಾಗಬೇಕು ಎಲ್ಲರಿಗೂ ಸಮಾನ ಶಿಕ್ಷಣ ಬೇಕು ಎಂದು ಪ್ರತಿಪಾದಿಸುತ್ತಿದ್ದರು. ಶಿಕ್ಷಕರ ಕರ್ತವ್ಯವನ್ನು ಮನದಟ್ಟು ಮಾಡಿಕೊಡುತ್ತಾ, ಶಾಲಾ ಕಟ್ಟಡಗಳಿಗೆ ಜಿಲ್ಲಾ ಪಂಚಾಯತ್‌ನಲ್ಲಿ ಹೆಚ್ಚು ಹಣ ನಿಗದಿ ಮಾಡಲು ಆಗ್ರಹಿಸುತ್ತಿದ್ದರು. ಭಾರತವು ನಗರ- ಗ್ರಾಮೀಣ ಎಂದು ವಿಭಜಿತವಾಗಿದ್ದು ಗ್ರಾಮೀಣ ಭಾರತದಲ್ಲಿ ಮೂಲಭೂತ ಸೌಕರ್ಯಗಳಿರದ ಕಾರಣ ಹಳ್ಳಿಯ ಶಾಲೆಯಲ್ಲಿ ಓದಿದ ಮಕ್ಕಳಿಗೆ ಗ್ರಾಮೀಣ ಕೃಪಾಂಕ ನೀಡಬೇಕೆಂದು ಪ್ರತಿಪಾದಿಸಿದ್ದರು. ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

## ಸಾಹಿತ್ಯ

ಕೈವಾರದಲ್ಲಿ 1984ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವಾಧ್ಯಕ್ಷರಾಗಿ ದುಡಿದಿದ್ದಾರೆ. ಸಾಹಿತ್ಯ ಮೇಳಕ್ಕೆ ಕೇವಲ ರಾಜಕೀಯಸ್ಥರಿಂದ ತುಂಬಿದ ಸಮಿತಿ ನೆರವಾಗದು ಎಂದು ಸಿ.ಬಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. (21-9-83)

ಸಾಹಿತಿಗಳನ್ನು, ಲೇಖಕರನ್ನು ಗೌರವಿಸುತ್ತಿದ್ದರು. ಸಾಹಿತ್ಯ, ಕಲೆಗಳಲ್ಲಿ ಅತೀವ ಆಸಕ್ತಿ ಹೊಂದಿದ್ದ ಅವರು ವಿಜ್ಞಾನದ ಜೊತೆ ಗ್ರಾಮೀಣ ಸೊಗಡು ಕಾಪಾಡಬೇಕೆಂದು ತಾಕೀತು ಮಾಡುತ್ತಿದ್ದರು.

## ಸ್ವಯಂ ಕೃಷಿಕ - ಪರಿಸರ ಪ್ರೇಮಿ

ರೈತ ಕುಟುಂಬದ ಬೈರೇಗೌಡರು ಪದವೀಧರರಾಗಿದ್ದರೂ, ಬೇಸಾಯದ ಕೆಲಸಗಳನ್ನು ಮಾಡುತ್ತಿದ್ದರು. ನೇಗಿಲು ಹಿಡಿದು ಉಳುವುದು, ಮರ ಹೊಡೆಯುವುದು, ಬಿತ್ತನೆ ಇತ್ಯಾದಿಗಳನ್ನು ಸ್ವತಃ ಕೈಗೊಳ್ಳುತ್ತಿದ್ದರು.

ಹಳ್ಳಿಯಲ್ಲಿದ್ದ ಗೌಡರನ್ನು ನೋಡಲು ಯುವಕರ ತಂಡ ವಡಗೂರು ನಾಗರಾಜ್ ನೇತೃತ್ವದಲ್ಲಿ ಹೋದಾಗ, ಮನೆಯಲ್ಲಿ ಮೊದಲು ವಿಚಾರಿಸಿದಾಗ, ಹೊಲಕ್ಕೆ ಹೋಗಿದ್ದಾರೆ ಎಂದು ಅವರ ಪತ್ನಿ ತಿಳಿಸಿದರು. ಹೊಲಕ್ಕೆ ಹೋಗಿ ಅಲ್ಲಿ ಎಲ್ಲ ಹುಡುಕಿದರೂ ಸಿಗಲಿಲ್ಲ. ಅಲ್ಲಿದ್ದ ಅವರ ತಮ್ಮನನ್ನು ಕೇಳಿದಾಗ ಚನ್ನರಾಯಗೌಡರು, ಅಲ್ಲಿ ಮರ ಹೊಡೆಯುತ್ತಿದ್ದ ತಲೆಗೆ ಮುಂಡಾಸು ಸುತ್ತಿ, ನಿಕ್ಕರ್, ಬನಿಯನ್‌ಧಾರಿಯನ್ನು ತೋರಿಸಿದರು. ಹತ್ತಿರಕ್ಕೆ ಹೋದರೆ ಬೈರೇಗೌಡರು ಸ್ವತಃ ಈ ಕೆಲಸ ಮಾಡುತ್ತಿದ್ದರು. ನಂತರ ಅವರು ಯುವ ಮಿತ್ರರನ್ನು ಕರೆದುಕೊಂಡು ಮನೆಗೆ ಬಂದು, ಅವರಿಗೆ ಪ್ರಿಯವಾಗಿದ್ದ ನಾಟಿಕೋಳಿ ಸಾರು, ಮುದ್ದೆ ಊಟ ಮಾಡಿಸಿ ಕಳುಹಿಸಿದರು.

ಕೃಷಿ ಸಚಿವರಾಗಿದ್ದ ಬೈರೇಗೌಡರು ಬೇಸಾಯರಂಗದ ಉನ್ನತಿಗಾಗಿ ಹತ್ತು - ಹನ್ನೊಂದು ಕಾರ್ಯಕ್ರಮಗಳನ್ನು ಕೈಗೊಂಡರು. ಹೊಸ ಯೋಜನೆಗಳನ್ನು ರೂಪಿಸಿದರು. ಅದರೊಂದಿಗೆ ಹಳೆಯ ಯೋಜನೆಗಳಲ್ಲಿದ್ದ ಲೋಪದೋಷವನ್ನು ಪತ್ತೆ ಮಾಡಿ, ಅವುಗಳನ್ನು ಸರಿಯಾಗಿ ಅನುಷ್ಠಾನಗೊಳಿಸಿದರು.

ತುಂತುರು, ಹನಿ ನೀರಾವರಿ ಪದ್ಧತಿಯನ್ನು ಇಸ್ರೇಲಿ ತಂತ್ರಜ್ಞಾನ ಬಳಸಿ ರಾಜ್ಯದಲ್ಲಿ ಜಾರಿಗೆ ತರಬೇಕೆಂದು ಬಯಸಿದ್ದರು. ಬಯಲು ಸೀಮೆಗೂ ಮಲೆನಾಡು, ಹೈದರಾಬಾದ್ ಕರ್ನಾಟಕದಂತೆ ಒಂದು ಮಂಡಲಿ ಅಗತ್ಯವೆಂದು ಪ್ರತಿಪಾದಿಸಿದ್ದರು. ಸುಧಾರಿತ ಜಲ ನಿರ್ವಹಣೆ ಯೋಜನೆಗೆ ರೈತರಿಂದಲೂ ಬಂಡವಾಳ ಎತ್ತಲು ನಿರ್ಧರಿಸಿದ್ದರು. ಕೃಷಿಕರಿಗಾಗಿಯೇ ದೂರದರ್ಶನ ಚಾನೆಲ್ ಒಂದನ್ನು ಆರಂಭಿಸಲು ಕೇಂದ್ರ ಸರ್ಕಾರವನ್ನು ಕೋರಿದ್ದರು.

ಕೃಷಿ ಸಚಿವರಾಗಿದ್ದಾಗ ಕಡಮೆ ನೀರು ಬಳಸುವ ಇಸ್ರೇಲ್ ತಂತ್ರಜ್ಞಾನವನ್ನು ರಾಜ್ಯದಲ್ಲೂ ಅಳವಡಿಸಲು ಪ್ರಯತ್ನಿಸಿದ್ದರು. ಆ ಕಾರಣಕ್ಕಾಗಿಯೇ ಒಂದೆರಡು ಬಾರಿ ರೈತ ನಿಯೋಗಗಳನ್ನು ಅಲ್ಲಿಗೂ ಕರೆದೊಯ್ದು, ಪ್ರತ್ಯಕ್ಷ ದರ್ಶನ ಮಾಡಿಸಿದ್ದರು.

ಬೇಸಾಯಗಾರ ಬೈರೇಗೌಡರು ಪರಿಸರ ಪ್ರೇಮಿಯೂ ಆಗಿದ್ದರು. ಸಸ್ಯ ಸಂರಕ್ಷಣೆಗೆ ಒತ್ತು ಕೊಟ್ಟಿದ್ದ ಅವರು, ಸಚಿವರಾಗಿ ಕಾರಿನಲ್ಲಿ ಬರುತ್ತಿದ್ದಾಗ, ರಸ್ತೆ ಬದಿ ವ್ಯಕ್ತಿಯೊಬ್ಬ ಮರ ಕಡಿಯುತ್ತಿದ್ದುದನ್ನು ಕಂಡು, ಅವನನ್ನು ಹಿಡಿದು, ಠಾಣೆಗೆ ಒಪ್ಪಿಸಿ, ದೂರು ನೀಡಿದ್ದರು.

## ಮೇಸ್ಟ್ರಾದ ಸಿಬಿ

ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಅವರು, ತಾಲೂಕುವಾರು, ಇಲಾಖಾವಾರು ಪ್ರಗತಿ ಪರಿಶೀಲನೆ ಮಾಡುತ್ತಿದ್ದರು. ಚಿಕ್ಕಬಳ್ಳಾಪುರದಲ್ಲಿ ಒಂದು ಬಾರಿ (10-11-97) 9 ಘಂಟೆಗಳ ಕಾಲ ನಿರಂತರವಾಗಿ ವಿವರವಾಗಿ ಸಮೀಕ್ಷೆ ನಡೆಸಿದರು. ಅಧಿಕಾರಿಗಳಿಗೆ ಮಧ್ಯಾಹ್ನ, ರಾತ್ರಿ ಊಟ ತರಿಸಿ, ಪರಿಶೀಲನೆ ಮುಗಿಸಿಯೇ ಕುರ್ಚಿಯಿಂದ ಎದ್ದರು.

ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗೆ ತಡವಾಗಿ ಬಂದ ಅಧಿಕಾರಿಗೆ ಹಲವು ತಾಸು ಕಾಲ ನಿಲ್ಲುವ ಶಿಕ್ಷೆ ವಿಧಿಸಿ, ಮೇಸ್ಟ್ರು ಕೆಲಸ ಮಾಡಿದರು ಸಿ.ಬಿ.

ಜಿಲ್ಲಾ ಉಸ್ತುವಾರಿ ವಹಿಸಿಕೊಂಡ ಬಂದರು ಸಚಿವ ಬೈರೇಗೌಡರು ಜಿಲ್ಲಾಧಿಕಾರಿಗಳ ಕಚೇರಿಗೆ ಹಠಾತ್ ಭೇಟಿ ನೀಡಿ, ಹಲವು ಅಧಿಕಾರಿಗಳ ಅನಧಿಕೃತ ಗೈರು ಹಾಜರಿ ಪತ್ತೆ ಮಾಡಿದರು. (20-5-85) ಲೆಕ್ಕದಲ್ಲಿ ಮಾತ್ರ ರೈತರಿಗೆ ನೇಗಿಲು, ಬಿತ್ತನೆ ವಿತರಣೆ ಮಾಡಿರುವುದನ್ನು ಸಚಿವರು ಬೆಳಕಿಗೆ ತಂದಾಗ ಅಧಿಕಾರಿಗಳು ಬೆವೆತರು. (1-6-85)

## ಜನತಾದಳದಿಂದ ಸಿಬಿ ಅಮಾನತು

ರಾಜ್ಯ ವಿಧಾನ ಪರಿಷತ್‌ಗೆ ವಿಧಾನ ಸಭೆಯಿಂದ ನಡೆದ ಚುನಾವಣೆಯಲ್ಲಿ ವಿ.ಆರ್. ಸುದರ್ಶನ್ ಪರ ಪಕ್ಷದ ಶಿಸ್ತನ್ನು ಉಲ್ಲಂಘಿಸಿ ಮತದಾನ ಮಾಡಿದ ಆರೋಪದ ಮೇಲೆ ಬೈರೇಗೌಡರನ್ನು ಪ್ರತಿಪಕ್ಷ ನಾಯಕ ದೇಶಪಾಂಡೆ ಅಮಾನತ್ ಮಾಡಿದ್ದರು. ಆರ್.ಎಲ್. ಜಾಲಪ್ಪ, ಏಕಾಂತಯ್ಯ ಸಹ ಸಸ್ಪೆಂಡ್ ಆಗಿದ್ದರು. ತಾವು ಪರಿಷತ್ ಚುನಾವಣೆಯಲ್ಲಿ ತಮಗೆ ನೀಡಲಾಗಿದ್ದ ಕಟ್ಟಾಣತಿಯಂತೆಯೇ ಮತ ಚಲಾಯಿಸಿದ್ದುದಾಗಿಯೂ, ತಮ್ಮನ್ನು ಸಸ್ಪೆಂಡ್ ಮಾಡಿರುವುದು ಸೂಕ್ತವಾದುದಲ್ಲವೆಂದೂ, ಮಾಜಿ ಸಚಿವರು ತಿಳಿಸಿ, ಪಕ್ಷ ವಿರೋಧಿ ಕ್ರಮ ಯಾವುದನ್ನೂ ಮಾಡಿಲ್ಲ. ಪಕ್ಷದ ಹಿತದೃಷ್ಟಿಯಿಂದ ಅಮಾನತ್ ಕ್ರಮ ಸರಿಯಲ್ಲ ಎಂದು ಸಿ.ಬಿ. ಹೇಳಿಕೆ ನೀಡಿದ್ದರು. ಡಿ.ಬಿ. ಚಂದ್ರೇಗೌಡರು ಬೈರೇಗೌಡರ ಸಸ್ಪೆಂಡ್ ತೀರಾ ಅಪಕ್ವ ಕ್ರಮ ಎಂದು ಟೀಕಿಸಿದ್ದರು.

ರಾಜ್ಯ ಜನತಾದಳದ ನಾಯಕರು ಜಿಲ್ಲಾ ಸಮಿತಿಗಳಿಗೆ ಗೊತ್ತಿಲ್ಲದೆ ಸಭೆ ನಡೆಸುವುದನ್ನು ವಿರೋಧಿಸಿ, ಜಿಲ್ಲಾ ಸಮಿತಿಗಳಲ್ಲಿ ಹಸ್ತಕ್ಷೇಪ ಮಾಡಬಾರದೆಂದು ತಿಳಿಸಿದ್ದೇ, ಅಮಾನತ್‌ಗೆ ಮುಖ್ಯ ಕಾರಣ ಎಂದು ಪ್ರತಿಕ್ರಿಯಿಸಿ, ಶಾಸಕಾಂಗ ಪಕ್ಷದಿಂದ ಅಮಾನತ್ ಬಗ್ಗೆ ತಮಗೆ ಅಸಮಾಧಾನವಿಲ್ಲ. ಪಕ್ಷದ ಏಳಿಗೆಗೆ ಪ್ರಯತ್ನ ಮುಂದುವರೆಸುವುದಾಗಿ ಹೇಳಿದ್ದಾರೆ. ರಾಜ್ಯದಲ್ಲಿ ಜನತಾದಳ ಮತ್ತು ಸಮಾಜವಾದಿ ಪಕ್ಷಗಳು ಒಗ್ಗೂಡಲು ಮೊದಲ ಸೇತುವೆ ನಿರ್ಮಾಣಗೊಂಡಿದ್ದು ಕೋಲಾರದಲ್ಲಿ ಎಂಬುದನ್ನು ರಾಜ್ಯ ನಾಯಕರು ಮರೆಯಬಾರದೆಂದೂ ಹೇಳಿದರು.

ಜನತಾದಳದಲ್ಲಿ ಸಕ್ರೀಯವಾಗಿದ್ದ ಬೈರೇಡೌಡರು 94ರ ಜಿಲ್ಲಾ ಪಂಚಾಯತ್ ಚುನಾವಣೆಗೆ ಕೊಡಗು ಜಿಲ್ಲಾ ವೀಕ್ಷಕರಾಗಿ ನೇಮಕಗೊಂಡಿದ್ದರು.

## ಪತ್ರಕರ್ತರೊಡನೆ ಸಂಬಂಧ
## ಸಮಾಜಕ್ಕೆ ಮಾರ್ಗದರ್ಶನ ನೀಡಲು ಕರೆ

ಬೈರೇಗೌಡರು ಪತ್ರಕರ್ತರೊಡನೆ ಆತ್ಮೀಯ ಸಂಬಂಧ ಹೊಂದಿದ್ದರು. ಅದು ಬೆಂಗಳೂರಿಗೆ ಸೀಮಿತವಾಗಿರಲಿಲ್ಲ. ಜಿಲ್ಲೆಯ ಪತ್ರಕರ್ತರನ್ನು ಅವರೆಂದೂ ಕಡೆಗಣಿಸಿರಲಿಲ್ಲ. ದೆಹಲಿ ಪತ್ರಕರ್ತ ಜೊತೆಗೂ ಸಂಪರ್ಕ ಸಾಧಿಸಿದ್ದರು.

ಪತ್ರಕರ್ತರಿಗೆ ಗೌರವ ಕೊಡುತ್ತಿದ್ದ ಗೌಡರು, ಹೆಗಡೆ ಸರ್ಕಾರ ಜಿಲ್ಲಾ ಪತ್ರಿಕೆಗಳಿಗೆ ನೆರವಾಗದ್ದನ್ನು ಪ್ರತಿಭಟಿಸಿ, ಕೋಲಾರದ ಪತ್ರಿಕಾ ಸಂಪಾದಕರು ಸಚಿವರ ಭಾಷಣಗಳನ್ನು ಬಹಿಷ್ಕರಿಸುವ ನಿರ್ಧಾರ ಕೈಗೊಂಡಾಗ, ಬೈರೇಗೌಡರು ಸಂಪಾದಕರೊಂದಿಗೆ ಸಂಜೆಯಿಂದ ಬೆಳಗಿನ ಜಾವ 3 ಗಂಟೆಯವರೆಗೆ ಸಮಸ್ಯೆಗಳನ್ನು ಕೂಲಂಕುಶವಾಗಿ ಕೇಳಿ ತಿಳಿದುಕೊಂಡು, ಅದನ್ನು ಪರಿಹರಿಸುವ ಭರವಸೆ ನೀಡಿದ್ದರು.

ವಿಧಾನ ಸಭೆಯಲ್ಲಿ ಒಮ್ಮೆ ಕಾರಣಾಂತರಗಳಿಂದ ಪತ್ರಕರ್ತರು ಗೈರು ಹಾಜರಾದಾಗ, ಬೈರೇಗೌಡರು ಸಭಾಧ್ಯಕ್ಷರ ಗಮನಕ್ಕೆ ತಂದು, ಪತ್ರಕರ್ತರಿಗೆ ಅಗತ್ಯ ಸೌಲಭ್ಯಗಳನ್ನು ವಿಧಾನ ಮಂಡಲದ ಸಚಿವಾಲಯ ಕಲ್ಪಿಸುವಂತೆ ಮಾಡಿದರು.

ಕೋಲಾರದಲ್ಲಿ ಬೈರೇಗೌಡರ ಪತ್ರಿಕಾಗೋಷ್ಠಿ ಅಂದರೆ, ಮೈಸೂರು ಪಾಕ್, ಖಾರ ಇರಲೇ ಬೇಕು ಎನ್ನುವಂತಾಗಿತ್ತು. ಶಾಸಕರಾಗಿದ್ದಾಗ, ಸಚಿವರಾಗಿದ್ದಾಗ ಸ್ಥಳೀಯ ಖ್ಯಾತ ಅಂಗಡಿಯೊಂದರಿಂದ ಮೈಸೂರು ಪಾಕ್ ತರಿಸುತ್ತಿದ್ದರು. ಕೆಲವೊಮ್ಮೆ ಕಾರಿನಲ್ಲಿ ಬಂದಾಗ ಅವರೇ ಕಟ್ಟಿಸಿಕೊಂಡು ಬಂದು, ಗೋಷ್ಠಿಯಲ್ಲಿ ವರದಿಗಾರರಿಗೆ ನೀಡುತ್ತಿದ್ದರು.

ಜಿಲ್ಲಾ ಪತ್ರಕರ್ತರ ಸಂಘ ಹಮ್ಮಿಕೊಳ್ಳುತ್ತಿದ್ದ ಎಲ್ಲ ಕಾರ್ಯಕ್ರಮಗಳಲ್ಲೂ ಅವರು ಪಾಲ್ಗೊಳ್ಳುತ್ತಿದ್ದರು. ಪತ್ರಿಕೆಗಳು ನಿಷ್ಪಕ್ಷಪಾತ, ಪ್ರಾಮಾಣಿಕವಾಗಿ ಹೊರಬರಬೇಕೆಂದು ಸದಾ ಬಯಸುತ್ತಿದ್ದ ಅವರು, ಪೀತ ಪತ್ರಿಕೆಗಳು ಅವರ ಬಗ್ಗೆ ಬರೆದಾಗ ತಲೆಕೆಡಿಸಿಕೊಳ್ಳುತ್ತಿರಲಿಲ್ಲ.

ಸಿ.ಬಿ. ಸಚಿವರಾಗಿದ್ದಾಗ, ಗಣರಾಜ್ಯೋತ್ಸವದ ದಿನ ತಪ್ಪದೇ ಪತ್ರಿಕಾಗೋಷ್ಠಿ ನಡೆಸುತ್ತಿದ್ದರು. ವಿರೋಧಿ ಶಾಸಕರಾಗಿದ್ದಾಗ, ಬೇರೆ ಬೇರೆ ಕಡೆ ಅಕ್ರಮಗಳನ್ನು ತೋರಿಸಲು ಪತ್ರಕರ್ತರನ್ನು ಕರೆದೊಯ್ಯುತ್ತಿದ್ದರು. ಕೃಷಿಮೇಳಕ್ಕೂ ಪತ್ರಕರ್ತರ ಭೇಟಿ ವ್ಯವಸ್ಥೆ ಮಾಡಿದ್ದರು.

ಈ ರೀತಿ ಪತ್ರಿಕಾ ಬಂಧುಗಳೊಡನೆ ಆತ್ಮೀಯ ಸಂಬಂಧ ಹೊಂದಿದ್ದು, ನಗರದಲ್ಲಿ ಗಲಭೆಗಳಾದಾಗ, ಪತ್ರಿಕೆಗಳಿಂದ ಮೊದಲ ವರ್ತಮಾನ ಪಡೆಯುತ್ತಿದ್ದರು. ಪತ್ರಕರ್ತರಿಂದ ಲೋಪದೋಷಗಳ ಬಗ್ಗೆಯೂ ಕೇಳಿ ತಿಳಿಯುತ್ತಿದ್ದ ಅವರು ಪತ್ರಿಕೆಗಳು ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕೆಂದು ಹೇಳುತ್ತಿದ್ದರು.

## ಟೇಪ್ ಹಗರಣ

ಹೆಗಡೆಯವರ ಜನತಾ ಸರ್ಕಾರಕ್ಕೆ ಬೆಂಬಲ ನೀಡಿದ್ದ ಪಕ್ಷೇತರ ಶಾಸಕರನ್ನು ಕಾಂಗ್ರೆಸ್‌ಗೆ ಸೆಳೆಯುವ ಹುನ್ನಾರ ನಡೆಯುತ್ತಿದ್ದಾಗ, ಶಾಸಕ ಬೈರೇಗೌಡರು ಪಕ್ಷಾಂತರಕ್ಕೆ ಹಣ ನೀಡುವ ಪ್ರವೃತ್ತಿಯಿದೆ ಎಂಬುದನ್ನು ಸಾಬೀತುಪಡಿಸಲು ತಮಗೆ ಹಣ ನೀಡಲು ಮೊಯ್ಲಿ ಬಂದಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ಸಂಭಾಷಣೆಯನ್ನು ಟೇಪ್ ರೆಕಾರ್ಡ್ ಮಾಡಿಕೊಂಡು ಹಗರಣವನ್ನು 14-11-83ರಂದು ಬಯಲಿಗೆಳೆದರು. ಅದು ಟೇಪ್ ಹಗರಣವೆಂದು ಹೆಸರುವಾಸಿಯಾಯಿತು. ಈಗಿನ ಕೃಷಿ ಸಚಿವ ಅಂದಿನ ಟಿಎಪಿಸಿಎಂಎಸ್ ಅಧ್ಯಕ್ಷ ಶ್ರೀನಿವಾಸಗೌಡರು ಬೈರೇಗೌಡರ ಜೊತೆಗಿದ್ದರು. ರಾಜ್ಯ ಹಾಗೂ ರಾಷ್ಟ್ರದಲ್ಲಿ ಮಿಂಚಿನ ಸಂಚಾರ ಉಂಟು ಮಾಡಿದ ಈ ಪ್ರಕರಣದ ಬಗ್ಗೆ ಸರ್ಕಾರ 84ರ ಫೆಬ್ರವರಿ ಮೂರರಂದು ನ್ಯಾಯಾಂಗ ತನಿಖೆಗೆ ಆದೇಶಿಸಿತು. ನ್ಯಾಯಾಂಗ ತನಿಖೆಗೆ ಸೂಚಿಸಿದ್ದರಿಂದ ಜಲಮಂಡಳಿ ಅಧ್ಯಕ್ಷತೆಗೆ ಸಿ.ಬಿ ರಾಜಿನಾಮೆ ನೀಡಿದರು. 15-11-83ರಂದು ಈ ಪ್ರಕರಣ ಸಂಸತ್‌ನಲ್ಲೂ ಪ್ರತಿಧ್ವನಿಸಿತ್ತು.

# ಭಾಗ - ಎರಡು

## ಸಭೆ ಸಮಾರಂಭಗಳಲ್ಲಿ
## ಬೈರೇಗೌಡ ಉವಾಚ

ರಿಪೇರಿ ಮಾಡಲಾಗದ ಅಧೋಗತಿಗೆ ಸರ್ಕಾರದ ವ್ಯವಸ್ಥೆ ಹೋಗಿದೆ. ಒಬ್ಬ ಮಂತ್ರಿಯಿಂದ ಇದನ್ನು ಸರಿಪಡಿಸಲು ಸಾದ್ಯವಿಲ್ಲ. ಸಾರ್ವಜನಿಕರು ತಿರುಗಿ ಬೀಳಬೇಕು.

ಹಳ್ಳಿ-ನಗರಗಳ ನಡುವೆ ಇರುವ ಅಸಮಾನತೆಯನ್ನು ಅದರಲ್ಲೂ ವಿದ್ಯಾ ಕ್ಷೇತ್ರದಲ್ಲಿನ ಅಜಗಜಾಂತರ ವ್ಯತ್ಯಾಸ ತಡೆಗಟ್ಟಲು ಯಾವುದೇ ಹೋರಾಟಕ್ಕೂ ಹಿಂದೆ ಬೀಳುವುದಿಲ್ಲ.

ಯಾವುದೇ ಕಚೇರಿಯಲ್ಲಿ ಅಧಿಕಾರಿ ಅಥವಾ ನೌಕರರು ಲಂಚ ಕೇಳಿದರೆ, ಬೇಕೆಂದೇ ಕೆಲಸ ನಿಧಾನ ಮಾಡಿದರೆ, ತಕ್ಷಣ ಗುಟ್ಟಾಗಿ ತಮಗೆ ತಿಳಿಸಿದರೆ, ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

27-2-96

ರಾಜ್ಯದಲ್ಲಿ ಅರಣ್ಯ ವಿನಾಶಕ್ಕೆ ಜನಕ್ಕಿಂತ ಹೆಚ್ಚಿಗೆ ಅರಣ್ಯಾ ಅಧಿಕಾರಿಗಳೇ ಕಾರಣ. ಅರಣ್ಯಕ್ಕೆ ರಕ್ಷಣಕ್ಕೆ ನೀಡಬೇಕಿದ್ದ ಸಿಬ್ಬಂದಿ ಭಕ್ಷಣೆ ಪ್ರಾರಂಭಿಸಿ ಅವರ ಮನೆಗಳನ್ನು ಸ್ವರ್ಗ ಮಾಡಿಕೊಂಡಿದ್ದಾರೆ.

ಉತ್ತರ ಕರ್ನಾಟಕದಂತೆ ನಮ್ಮಲ್ಲೂ ಮರಗಳನ್ನು ರಕ್ಷಿಸುವ ಚಳವಳಿ ಆರಂಭಿಸಬೇಕು.

6-6-84

# ಅವಧಿ -1 : 1972-78
# ಪಕ್ಷೇತರ ಶಾಸಕ -
# ರೈತ ಸಂಘದ ಅಭ್ಯರ್ಥಿ

1972ರಲ್ಲಿ ಮೊಟ್ಟಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ ಚೌಡದೇನಹಳ್ಳಿ ಚೌಡೇಗೌಡ ಬೈರೇಗೌಡರು, ವಿಧಾನಸಭಾ ನಡವಳಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಅತ್ಯುತ್ತಮ ಸಂಪ್ರದಾಯಗಳನ್ನು ಮೆರೆದವರು. ರೈತ ಸಂಘದ ಅಭ್ಯರ್ಥಿಯಾಗಿ, ಪಕ್ಷೇತರರಾಗಿದ್ದ ಬೈರೇಗೌಡರು ಮೊದಲ ಅಧಿವೇಶನದಲ್ಲಿಯೇ ಇತರರ ಗಮನ ಸೆಳೆದರು. ಸಂಸದೀಯ ವ್ಯವಹಾರಗಳಲ್ಲಿ ಚೆನ್ನಾಗಿ ನುರಿತವರಂತೆ ಬೇಡಿಕೆಗಳ ಮೇಲಿನ ಚರ್ಚೆ, ಪ್ರಶ್ನೋತ್ತರ, ರೂಲ್ 312ರಂತೆ ವಿಷಯ ಮಂಡನೆ, ಗಮನ ಸೆಳೆಯುವ ಸೂಚನೆಗಳು ಎಲ್ಲದರಲ್ಲೂ ಸಮರ್ಥವಾಗಿ ಕೈ ಆಡಿಸಿದ್ದಾರೆ.

ಸಿ.ಬಿ. ಶಾಸಕರಾಗಿದ್ದ ಈ ಅವಧಿಯಲ್ಲಿಯೇ ಮುಖ್ಯಮಂತ್ರಿ ದೇವರಾಜ ಅರಸರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ್ದು, ಆ ಸಂಬಂಧ ನಡೆದ ಚರ್ಚೆಯಲ್ಲಿ ಅರಸರ ನಿರ್ಧಾರ ಕ್ರಾಂತಿಕಾರಿಯಾದುದಲ್ಲ, ಎಂದೋ ಆಗಬೇಕಾದ್ದು ಇದು ಆಗಿದೆ ಎಂದು ಹೇಳಿದರಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿಗೂ ವಿಧಾನಸೌಧದಂಥ ದೊಡ್ಡ ಕಟ್ಟಡ, ಹೆಚ್ಚಿನ ಪ್ರಾಧಾನ್ಯತೆ, ಹಣಕಾಸಿನ ಸೌಲಭ್ಯಕ್ಕೆ ಆಗ್ರಹಿಸಿ, ಕನ್ನಡ ಸಾಹಿತ್ಯ ಸರ್ವಾಂಗ ಸುಂದರವಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದ್ದರು.

ಈ ಭಾಗದಲ್ಲಿ ಅವರ ಭಾಷಣವನ್ನು ನೀವು ಓದಲಿದ್ದೀರಿ. ಈ ಅವಧಿಯಲ್ಲಿಯೇ ಮತ್ತೊಂದು ಪ್ರಮುಖ ಘಟನೆ ಜರುಗಿದ್ದು ಅದು ರಾಷ್ಟ್ರದಲ್ಲಿ ಹೇರಲಾದ ತುರ್ತು ಪರಿಸ್ಥಿತಿ. ಸರ್ಕಾರದ ನಿಯಂತ್ರಣದಲ್ಲಿ ವಿಷಯಗಳು ಇಲ್ಲದ್ದರಿಂದ ತುರ್ತು ಪರಿಸ್ಥಿತಿ ಜಾರಿಗೆ ತರಲಾಯಿತು ಎಂಬುದನ್ನು ಅಲ್ಲಗಳೆದು, ಸರ್ಕಾರ ತನ್ನ ಚರ್ಮದ ರಕ್ಷಣೆಗೆ ಇದನ್ನು ಅನುಷ್ಠಾನಗೊಳಿಸಿದೆ ಎಂದು ಯಾವುದೇ ಹೆದರಿಕೆ ಇಲ್ಲದೆ ಹೇಳಿದ್ದರು. ಅವರ ಹಲವು ಭಾಷಣಗಳಲ್ಲಿ ತುರ್ತು ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ವಿರೋಧಿಸಿದ್ದರು. ಅದರ ಒಂದು ತುಣುಕು ಇಲ್ಲಿದೆ. ಹಾಗೆಯೇ ಬರಗಾಲಕ್ಕೆ ಸಂಬಂಧಿಸಿದಂತೆ ರಾಜ್ಯದ, ವಿಶೇಷವಾಗಿ ಜಿಲ್ಲೆಯ ಪರಿಸ್ಥಿತಿಯ ವಿವರಣೆ (ಜಿಲ್ಲೆಯ ಜನ ಕತ್ತಾಳೆ ಗಡ್ಡೆ ತಿನ್ನುತ್ತಿದ್ದಾರೆಂದು ಸಭೆಯಲ್ಲಿ ಪ್ರದರ್ಶಿಸಿದ್ದು) ಭೂಸುಧಾರಣೆ ಕಾನೂನಿನ ತಿದ್ದುಪಡಿ ಹಾಗೂ ಅದರ ಅಗತ್ಯಗಳ ಬಗ್ಗೆ, ಅರಣ್ಯ ಸಂರಕ್ಷಣೆ ಕಾಯಿದೆ, ಸಾರಿಗೆ ಇತ್ಯಾದಿಗಳ ಬಗ್ಗೆ ಗೌಡರು ಮಾತನಾಡಿದ್ದಾರೆ.



ಕೃಷಿ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಕುಲಪತಿಯಾಗಿ ಬೈರೇಗೌಡರು
**ಅಧಿಕಾರಿಗಳಿಗೆ ಸಂಭಾವನೆ ಕೊಟ್ಟರೆ ಭೂಮಿ**

ಶ್ರೀ ಬೈರೇಗೌಡರು ತಮ್ಮ 38ನೇ ವಯಸ್ಸಿನಲ್ಲಿಯೇ ವಿಧಾನಸಭೆಗೆ ಮೊದಲ ಬಾರಿ ಪ್ರವೇಶ ಪಡೆದರು. ಗುಂಡ್ಲುಪೇಟೆಯ ದಿಟ್ಟ ಮಹಿಳೆ ಕೆ.ಎಸ್. ನಾಗರತ್ನಮ್ಮ ಆಗ ಸಭಾಧ್ಯಕ್ಷರು. ಬೈರೇಗೌಡರು ಚಿಕ್ಕವರಾಗಿದ್ದರೂ, ಪಾರ್ಲಿಮೆಂಟರಿ ಪದ್ಧತಿಯ ಅಧ್ಯಯನ ಚೆನ್ನಾಗಿ ಮಾಡಿದ್ದರು ಎಂಬುದಕ್ಕೆ ಅವರು ವಿಧಾನಸಭೆಯಲ್ಲಿ ಮೊದಲು ಮಾಡಿದ ಸಪ್ಲಿಮೆಂಟರಿ ಬಜೆಟ್ ಭಾಷಣ ಸಾಕ್ಷಿಯಾಗಿದೆ. ಅವರು ತಮ್ಮ ಭಾಷಣದಲ್ಲಿ ಎಲ್ಲ ಇಲಾಖೆಗಳನ್ನು ವಿಶ್ಲೇಷಿಸಿ ಯಾವುದರಲ್ಲಿ ತಪ್ಪಿದೆ, ಯಾವುದು ಸರಿ, ಬೆಳವಣಿಗೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡಿದ್ದಾರೆ.

ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ, ಈ ಹೊತ್ತಿನ ದಿವಸ ಈ ಸಭೆಯ ಮುಂದೆ ಇಟ್ಟಿರತಕ್ಕ ಸಪ್ಲಿಮೆಂಟರಿ ಬಡ್ಜೆಟನ್ನು ಕುರಿತು ಮಾತನಾಡುವುದಕ್ಕೆ ಮೊದಲು ಕಳೆದ ಒಂದು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಸ್ಥೂಲವಾಗಿ ಹಾಗೂ ಸೂಕ್ಷ್ಮವಾಗಿ ಏನೇನು ಕೆಲಸ ಕಾರ್ಯಗಳು ಆಗಿರುತ್ತವೆ ಎಂಬುದನ್ನು ಪರಿಶೀಲಿಸುವುದು ಅವಶ್ಯಕ.

ಇಲ್ಲಿಗೆ ಸುಮಾರು ಒಂದು ವರ್ಷದ ಹಿಂದೆ ಆ ಲೋಕಸಭೆಗೆ ಚುನಾವಣೆಗಳು ನಡೆದವು. ಅದೇ ರೀತಿಯಲ್ಲಿ ಇದೇ ತಿಂಗಳು ಮೈಸೂರು ರಾಜ್ಯದ ವಿಧಾನಸಭೆಗೂ ಚುನಾವಣೆ ನಡೆಯಿತು.

ಈ ಚುನಾವಣೆಯಲ್ಲಿ ಇಡೀ ದೇಶದ ಜನತೆ ಒಂದು ಕೂಗಿಗೆ ಮಾನ್ಯತೆ ಕೊಟ್ಟರು. ಆ ಕೂಗು ಯಾವುದು ಎಂದರೆ ಬಡತನವೇ ತೊಲಗು ಅಥವಾ ಗರೀಬೀ ಹಟಾವೋ ಎಂಬುದು. ಆ ಸ್ಲೋಗನ್‌ಗೆ ಜನತೆ ಮಾರು ಹೋಗಿ ಈವೊತ್ತಿನ ದಿವಸ ಆ ಪಕ್ಷಕ್ಕೆ ಬಹುಮತ ಬಂದಿದೆ. ಈ ಸಂದರ್ಭದಲ್ಲಿ ಹೇಳುವುದಾದರೆ ಒಂದು ವರ್ಷದಿಂದ ನಮ್ಮ ರಾಜ್ಯದಲ್ಲಿ ಕೇಂದ್ರ ಆಡಳಿತ ಅಂದರೆ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿ ಇತ್ತು. ಅದರ ಪ್ರತಿಫಲವಾಗಿ ಈವೊತ್ತಿನ ದಿವಸ ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ನಾವು ಕಾಣುತ್ತಾ ಇದ್ದೇವೆ. ಕೆಲವು ಸದಸ್ಯರು ಈ ಸಪ್ಲಿಮೆಂಟರಿ ಡಿಮ್ಯಾಂಡ್‌ಗೆ ಈ ಮಂತ್ರಿಮಂಡಲ ಕಾರಣವಲ್ಲ ಎಂದು ಹೇಳಿದರು. ಈ ಸಪ್ಲಿಮೆಂಟರಿ ಡಿಮ್ಯಾಂಡ್‌ಗೆ ಈ ಮಂತ್ರಿಮಂಡಲ ಕಾರಣವಲ್ಲದಿದ್ದರೂ ಇಲ್ಲಿಯ ಆಡಳಿತ ಕೇಂದ್ರದ ಒಂದು ಮೇಲ್ವಿಚಾರಣೆಯಲ್ಲಿ ನಡೆಯುತ್ತಾ ಇದ್ದುದರಿಂದ ಅದರ ಪ್ರತಿಫಲಕ್ಕಾಗಿ ಈ ಡಿಮ್ಯಾಂಡ್ ನಮ್ಮ ಮುಂದೆ ಬಂದಿದೆ. ಇದರಲ್ಲಿ ಮೊದಲನೆಯದಾಗಿ ಲ್ಯಾಂಡ್ ರೆವಿನ್ಯೂ-ಅಡ್ಮಿನಿಸ್ಟ್ರೇಷನ್ ವಿವರ ನೋಡುವುದಾದರೆ ಬಂಜರು ಭೂಮಿಯನ್ನು ಹಂಚುವುದಕ್ಕೆ ಸರ್ಕಾರದವರು ಒಂದು ಸಮಿತಿಯನ್ನು ಮಾಡಿದ್ದರು. ರಾಷ್ಟ್ರಪತಿಗಳ ಆಡಳಿತ ಬಂದಮೇಲೆ ಆ ಸಮಿತಿಗಳನ್ನೆಲ್ಲಾ ನಿರ್ಮೂಲನಾ ಮಾಡಿ ಅದಕ್ಕೆ ಬದಲಾಗಿ ಅಧಿಕಾರಿಗಳನ್ನು ನೇಮಿಸಿದರು. ಭೂಮಿ ಯಾವರೀತಿಯಾಗಿ ಹಂಚಿಕೆಯಾಗಬೇಕಾಗಿತ್ತು ಎಂದರೆ ಪ್ರಜಾಪ್ರಭುತ್ವದ ಆಧಾರದ ಮೇಲೆ ಸ್ಥಾಪಿತವಾದ ಸಮಿತಿಯವರು ಪ್ರತಿ ಗ್ರಾಮಕ್ಕೂ ಹೋಗಿ ಭೂಹೀನರ ಪಟ್ಟಿಯನ್ನು ಏನು ತಯಾರುಮಾಡಿದ್ದರೋ ಪಟ್ಟಿಯ ಆಧಾರದ ಮೇಲೆ ಜನರಿಗೆ ಭೂಮಿಯನ್ನು ಹಂಚಬೇಕು ಎಂದು ಮಾಡಿದ್ದರು. ಆದರೆ ಅಧಿಕಾರಿಗಳಿಗೆ ಯಾರು ಸಂಭಾವನೆ ಕೊಡುತ್ತಾರೋ ಅಂತಹವರಿಗೆ ಭೂಮಿ ಸಿಕ್ಕುತ್ತದೆ. ಹರಿಜನರಿಗೆ, ಹಿಂದುಳಿದವರಿಗೆ ಸಿಕ್ಕುತ್ತಾ ಇಲ್ಲ. ಇದಕ್ಕೆ 9 ಸಾವಿರ ರೂಪಾಯಿಗಳನ್ನು ಕೇಳುತ್ತಾ ಇದ್ದಾರೆ. ಇಲ್ಲಿಯವರೆವಿಗೂ ಅದು ನ್ಯಾಯವಾದ ರೀತಿಯಲ್ಲಿ ಖರ್ಚಾಗುತ್ತಾ ಇಲ್ಲ. ಇದರಿಂದ ಸ್ವಲ್ಪವೂ ಅನುಕೂಲವಾಗಿಲ್ಲ. ನಮ್ಮ ರಾಜ್ಯದ ಜನತೆಗೆ ಅನುಕೂಲವಾಗುವ ಹಾಗೆ ಇದ್ದಿದ್ದರೆ ಈ ಖರ್ಚನ್ನು ಖಂಡಿತ ಒಪ್ಪಿಕೊಳ್ಳಬಹುದಾಗಿತ್ತು.

ಇನ್ನು ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಅವರು ಸಮತಾವಾದ ಸಮಾಜದ ತತ್ವವನ್ನು ಒಪ್ಪಿಕೊಂಡಿದ್ದಾರೆ. ಈ ಸಮತಾವಾದವನ್ನು ಜಾರಿಗೆ ತರುವ ದಿಶೆಯಲ್ಲಿ ಕೆಲವು ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿದರು. ಅದೇ ರೀತಿಯಲ್ಲಿ ಮೈಸೂರು ರಾಜ್ಯದಲ್ಲಿ ಮೈಸೂರು ರೋಡ್ ಟ್ರಾನ್ಸ್‌ಪೋರ್ಟ್‌ನ್ನು ರಾಷ್ಟ್ರೀಕರಣ ಮಾಡಿದರು. ಮೈಸೂರು ರಾಜ್ಯದಲ್ಲಿ ನೇರವಾಗಿ ಒಂದು ವರ್ಷದಿಂದ ಕೇಂದ್ರದ ಆಡಳಿತ ಇದ್ದರೂ ಇದರ ಬಗ್ಗೆ ಏನೂ ಪ್ರಯೋಜನವಾಗಲಿಲ್ಲ. ಈವೊತ್ತು ಸರ್ಕಾರಿ ಬಸ್ಸು ಓಡುತ್ತಾ ಇರುವ ರೂಟಿನಲ್ಲೇ ಅನೇಕ ಬಸ್ಸುಗಳು ಆನ್ ಕಾಂಟ್ರಾಕ್ಟ್ ಎಂದು ಬೋರ್ಡು ಹಾಕಿಕೊಂಡು ಖಾಸಗಿಯವರು ಬಸ್ಸು ಓಡಿಸುತ್ತಾ ಇದ್ದಾರೆ. ಸರ್ಕಾರಿ ಬಸ್ಸು ನಡೆಸುವವರು ಸರ್ಕಾರದವರೇ ಮತ್ತು ಆನ್ ಕಂಟ್ರಾಕ್ಟ್ ಬಸ್‌ಗೆ ಲೈಸನ್ಸ್‌ಗೆ ಪರ್ಮಿಟ್ ಕೊಡುವವರು ಸರ್ಕಾರದವರೇ. ಇದು

ಎಂತಹ ವಿಪರ್ಯಾಸವಾಗಿದೆ ಎಂದರೆ ಸರ್ಕಾರಿ ಬಸ್ಸು ಓಡಿಸುವ ವೇಳೆಗೆ ಸ್ವಲ್ಪ ಮುಂಚಿತವಾಗಿ ಹಿಂದೆ ಒಂದು ಆನ್ ಕಾಂಟ್ರಾಕ್ಟ್ ಬಸ್ ಮತ್ತು ಮುಂದೆ ಒಂದು ಆನ್ ಕಾಂಟ್ರಾಕ್ಟ್ ಬಸ್ ಓಡಾಡುತ್ತಾ ಇರುತ್ತೆ. ಆದರೆ ಸರ್ಕಾರಿ ಬಸ್ಸಿನಲ್ಲಿ ಸೀಟುಗಳೆಲ್ಲಾ ಖಾಲಿ ಇರುತ್ತದೆ. ಆನ್ ಕಾಂಟ್ರಾಕ್ಟ್ ಬಸ್ಸು ದಿನಕ್ಕೆ 5-6 ಟ್ರಿಪ್ ಓಡಾಡಿದರೂ ಲಾಭಗಳಿಸುತ್ತದೆ. ಆದರೆ ಸರ್ಕಾರ ಓಡಾಡಿಸುವ ಬಸ್ಸಿನಲ್ಲಿ ನಷ್ಟ ಉಂಟಾಗುತ್ತದೆ. ಮತ್ತು ರಾಷ್ಟ್ರೀಕರಣ ಎನ್ನುವ ತತ್ವಕ್ಕೆ ತದ್ವಿರುದ್ಧವಾಗಿ ನಮ್ಮ ಸರ್ಕಾರ ನಡೆಯುತ್ತಾ ಇದೆ. ಇದು ಬಹಳ ದುರಾದೃಷ್ಟಕರ. ಇದನ್ನು ಆಲೋಚನೆ ಮಾಡುವುದಾದರೆ ಸರ್ಕಾರಕ್ಕೆ ಸಮತಾವಾದ ಸಮಾಜದಲ್ಲಿ ನಂಬಿಕೆ ಇದೆಯೆ? ಸಮತಾವಾದ ಸಮಾಜವನ್ನು ನಮ್ಮ ದೇಶದಲ್ಲಿ ತರಬೇಕು ಎನ್ನುವ ಮನಸ್ಸು ಮಾಡಿದ್ದೀರಾ? ಇದನ್ನು ಯೋಚನೆ ಮಾಡಿದರೆ ಪ್ರತಿಯೊಬ್ಬನಿಗೂ ಅನುಮಾನಾಸ್ಪದವಾಗಿ ಕಂಡು ಬರುತ್ತದೆ.

ಇನ್ನು ಪೊಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಈ ಬಾಬಿಗೆ 9500 ರೂಪಾಯಿಗಳನ್ನು ಇಟ್ಟಿದ್ದಾರೆ. ಚುನಾವಣಾ ಕಾಲದಲ್ಲಿ ಆಳುವ ಪಕ್ಷ ಪಶ್ಚಿಮ ಬಂಗಾಳದಲ್ಲಿ ಏನು ಮಾಡಿದರು ಎಂದರೆ ಅಲ್ಲಿ 5 ತರಹ ಪೊಲೀಸಿನವರನ್ನು ಇಟ್ಟು ಜೊತೆಗೆ ಮಿಲಿಟರಿ ಇಟ್ಟು ಒಂದೊಂದು ಕ್ಷೇತ್ರದಲ್ಲಿ 20-30 ಜನರನ್ನು ಓಡಿಸಿ ತಮ್ಮ ಪಕ್ಷದ ಹುರಿಯಾಳುಗಳನ್ನು ಗೆದ್ದು ಬರುವಂತೆ ಮಾಡಿದರು. ನಮ್ಮ ರಾಜ್ಯದಲ್ಲೂ ಕೂಡ ಆ ರೀತಿ ಮಾಡುವ ಉದ್ದೇಶ ಆಡಳಿತ ಪಕ್ಷಕ್ಕೆ ಇತ್ತೆ? ನಮ್ಮ ರಾಷ್ಟ್ರದಲ್ಲಿ ಆ ರೀತಿ ನಡೆಸುವುದಕ್ಕೆ ಆಲೋಚನೆ ಮಾಡಿದಿರಾ? ಖಂಡಿತವಾಗಿಯೂ ಕೂಡ ನನಗೆ ಸಂಶಯ ಉಂಟಾಗಿದೆ.

ಇನ್ನು ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಅಂಡ್ ಫಿಷರೀಸ್ ಈ ಬಾಬುಗಳಿಗೆ 86,59,800 ರೂಪಾಯಿಗಳ ಖರ್ಚು ಕೇಳುತ್ತಾ ಇದ್ದಾರೆ. ಅನೇಕ ಸದಸ್ಯರಿಗೂ ಗೊತ್ತಿದೆ. ಹಿಂದೆ ವ್ಯವಸಾಯದ ಇಲಾಖೆಯಿಂದ ಔಷಧಿಗಳು, ಸ್ಪೇರ್ ಪಾರ್ಟ್ಸ್‌ಗಳು ಮತ್ತು ಸಬ್ಸಿಡಿ ಇವುಗಳನ್ನು ರೈತರಿಗೆ ಕೊಡುತ್ತಾ ಇದ್ದರು. ಈ ನೀತಿಯನ್ನು ಈವೊತ್ತು ನಿಲ್ಲಿಸಿಬಿಟ್ಟಿದ್ದಾರೆ. ಸಬ್ಸಿಡಿ ಇಲ್ಲದೆ ಪೂರ್ತಾ ಬೆಲೆ ಕೊಟ್ಟು ಔಷಧಿಗಳು, ಸ್ಪೇರ್ ಪಾರ್ಟ್ಸ್‌ಗಳು ಇವುಗಳನ್ನು ಕೊಂಡುಕೊಳ್ಳಬೇಕು ಎಂದು ನಿಗದಿ ಮಾಡಿದ್ದಾರೆ. ಆದರೆ ವ್ಯವಸಾಯ ಏನಾದರೂ ನಮ್ಮ ರಾಜ್ಯದಲ್ಲಿ ಮುಂದುವರೆದಿದ್ದರೆ ಸಬ್ಸಿಡಿಯಿಂದಲೇ ಮುಂದುವರೆದಿದೆ. ಆದುದರಿಂದ ಈ ಸಬ್ಸಿಡಿಯನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಸಿರಿಕಲ್ಚರ್ ಬಗ್ಗೆ ಹೇಳುವುದಾದರೆ ಸ್ವಲ್ಪಮಟ್ಟಿಗೆ ಕೋಲಾರ ಜಿಲ್ಲೆಯಲ್ಲೂ ಮತ್ತು ಮೈಸೂರು ಮತ್ತು ಬೆಂಗಳೂರು ಜಿಲ್ಲೆಯಲ್ಲೂ ಹೆಚ್ಚು ರೀತಿಯಲ್ಲಿ ನಡೆಯುತ್ತಾ ಇದೆ. ಕಳೆದ ಒಂದು ವರ್ಷದಿಂದ ಸಿರಿಕಲ್ಚರ್‌ನವರ ಸ್ಥಿತಿ ಬಹಳ ಶೋಚನೀಯವಾಗಿದೆ. ರೇಷ್ಮೆ ಮೊಟ್ಟೆಯನ್ನು ಒದಗಿಸುವ ಜವಾಬ್ದಾರಿ ಮತ್ತು ಉತ್ತಮವಾದ ರೋಗರಹಿತವಾದ ಬೀಜವನ್ನು ಒದಗಿಸುವಂಥ ಜವಾಬ್ದಾರಿ ಸರ್ಕಾರಕ್ಕೆ ಇದೆ. ಹಾಗಿದ್ದರೂ ಕೂಡ ಇಲ್ಲಿಯವರೆಗೂ ರೋಗದಿಂದ ಕೂಡಿದ ಬೀಜ ಸರಬರಾಜು ಆಗಿದ್ದುದರಿಂದ ಕೋಲಾರ ಜಿಲ್ಲೆಯಲ್ಲಿ 100ಕ್ಕೆ 90ರಷ್ಟು ಬೆಳೆಗಳು ನಷ್ಟವಾಗಿ

ಈವೊತ್ತಿನ ದಿವಸ ಒಬ್ಬೊಬ್ಬ ರೈತನೂ ಹತ್ತಾರು ಸಾವಿರ ರೂಪಾಯಿ ಸಾಲಕ್ಕೆ ಸಿಕ್ಕಿಕೊಂಡಿದ್ದಾನೆ. ರೋಗದಿಂದ ಕೂಡಿದ ಬೀಜವನ್ನು ಸರಬರಾಜು ಮಾಡಿದ್ದುದರಿಂದ ಬೆಳೆಗಾರರಿಗೆ ನಷ್ಟ ಉಂಟಾಗಿದೆ. ಆದುದರಿಂದ ಈ ಖರ್ಚನ್ನು ಖಂಡಿತವಾಗಿಯೂ ಒಪ್ಪತಕ್ಕಂಥದ್ದಲ್ಲ.

ಇನ್ನು ಪಬ್ಲಿಕ್ ವರ್ಕ್ಸ್‌ನ ಡಿಪಾರ್ಟ್‌ಮೆಂಟ್‌ಗೆ ಕೆಲವು ಹಣವನ್ನು ಕೇಳಿದ್ದಾರೆ. ಇದರ ವಿಷಯದಲ್ಲಿ ಹೇಳುವುದಾದರೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಅನೇಕ ರಸ್ತೆಗಳಲ್ಲಿ ರಸ್ತೆಗಳನ್ನು ಮೆಟಲ್ ಮಾಡುವುದಕ್ಕೆ ಅಪಾರವಾಗಿ ಜಲ್ಲಿ ಕಲೆಕ್ಟ್ ಮಾಡಿದ್ದಾರೆ. ಇದಕ್ಕೆ ಯಾವ ಯೋಜನೆ ಇಟ್ಟುಕೊಂಡು ಮಾಡಿದ್ದಾರೋ ಗೊತ್ತಿಲ್ಲ. ಮೊದಲು ಯಾವ ಪ್ರಮಾಣದಲ್ಲಿ ಮಾಡುತ್ತಿದ್ದರೋ ಗೊತ್ತಿಲ್ಲ. ಈಗ ಒಂದು ಮೀಟರ್ ರಸ್ತೆ ಇದ್ದರೂ ಅದನ್ನು ಹೈರೋಡ್ ಮಾಡುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ಇದನ್ನು ತಡೆಗಟ್ಟಿದ್ದರೆ ಈವೊತ್ತಿನ ದಿವಸ ಈ ಸಪ್ಲಿಮೆಂಟರಿ ಹಣ ಬೇಕಾಗಿರಲಿಲ್ಲ. ಇದನ್ನೆಲ್ಲಾ ನೋಡುವುದಾದರೆ ಪ್ರಾಮುಖ್ಯವಾಗಿ ಆಳುವ ಪಕ್ಷಕ್ಕೆ ಯಾರೋ ಒಬ್ಬರು ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೋ ಅಥವಾ ಮಾನ್ಯ ಪಾಟೀಲರು ಹೇಳಿದ ಹಾಗೆ ನಮ್ಮ ದೇಶದಲ್ಲಿ ಇರತಕ್ಕಂಥ ಗುತ್ತೇದಾರರು ಆಗಲಿ ಬಂಡವಾಳಶಾಹಿಗಳಾಗಲಿ ಕೆಲಸ ಮಾಡುತ್ತಿದ್ದಾರೋ ಗೊತ್ತಿಲ್ಲ. ನಮ್ಮ ಮುಂದೆ ಇಟ್ಟಿರುವ ಈ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ನೋಡಿದರೆ ಆ ಬಡ್ಜೆಟ್ಟಿನಲ್ಲೂ ಕೂಡ ಶ್ರಮಜೀವಿ ವರ್ಗದ, ದುರ್ಬಲ ವರ್ಗದವರ ಬಗ್ಗೆ ಏನೊಂದು ಕಾರ್ಯಕ್ರಮವನ್ನೂ ಹಾಕಿಕೊಂಡಿರುವ ಒಂದು ಅಂಶವೂ ಕೂಡ ಕಾಣುತ್ತಾ ಇಲ್ಲ. ಗರೀಬಿ ಹಟಾವೋ, ಬಡತನ ನಿರ್ಮೂಲನವಾಗಲಿ ಎನ್ನುವುದು ಕೇವಲ ಸ್ಲೋಗನ್ ಆಗಿ ಉಳಿದಿದೆಯೇ ಹೊರತು ನಿಜವಾಗಿಯೂ ಒಂದು ರಚನಾತ್ಮಕವಾಗಿ, ಯೋಜನಾ ಬದ್ಧವಾಗಿ ಶ್ರಮಜೀವಿ ವರ್ಗದ, ದುರ್ಬಲ ವರ್ಗದ ಜನರಿಗೆ ಅನುಕೂಲವಾಗತಕ್ಕಂಥ ಯೋಜನೆಗಳು ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಇಲ್ಲ ಎಂದು ಹೇಳಿ ಇದನ್ನು ವಿರೋಧಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

## ರೇಷ್ಮೆ ಆಮದಿಗೆ ವಿರೋಧ : 8-4-72

ಶ್ರೀ ಕೆ.ಎಂ. ನಾಗಣ್ಣನವರು ವಿಧಾನಸಭೆಯಲ್ಲಿ 8-4-72ರಂದು ಹೊರ ದೇಶಗಳಿಂದ ರೇಷ್ಮೆ ತರಿಸಬೇಕು. ನಾವು ಬೆಳೆಯುತ್ತಿರುವುದು ನಮಗೆ ಸಾಲುತ್ತಿಲ್ಲ ಎಂದಾಗ, ನಮ್ಮ ರೈತರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಇಲ್ಲಿಯೇ ಜಾಸ್ತಿ ರೇಷ್ಮೆಯನ್ನು ಉತ್ಪತ್ತಿ ಮಾಡಿದರೆ, ಹೊರದೇಶದಿಂದ ತರಿಸುವ ಪ್ರಮೇಯವೇ ಬರುವುದಿಲ್ಲ ಎಂದು ಸ್ಪಷ್ಟವಾಗಿ ಅಂದೇ ವಿದೇಶಿ ರೇಷ್ಮೆ ಆಮದಿಗೆ ವಿರೋಧ ವ್ಯಕ್ತಪಡಿಸಿದ್ದರು. (ಅಂದಿನಿಂದ ಇಂದಿಗೂ ಈ ವಿವಾದ ಮುಂದುವರೆದಿದೆ. ಶ್ರೀಯುತರು ತಮ್ಮ ನಿಲುವನ್ನು ಸಮರ್ಥಿಸಿದ್ದು ಈ ರೀತಿ - ಸಂ.)

ಶ್ರೀ ಕೆ.ಎಂ. ನಾಗಣ್ಣ - ನಾವು ಬೆಳೆಯುತ್ತಿರುವುದು ನಮಗೆ ಸಾಲುತ್ತಿಲ್ಲ. ಇದೇ ಕಾರಣದಿಂದ ರೇಷ್ಮೆ ಬೆಲೆ ಕೆ.ಜಿ.ಗೆ 180 ರೂಪಾಯಿಗಳಿಂದ 200 ರೂಪಾಯಿಗಳವರೆಗೆ ಜಾಸ್ತಿಯಾಗಿದೆ. ಈ ಕಾರಣದಿಂದ ನಾವು ಹೊರದೇಶಗಳಿಂದ ರೇಷ್ಮೆಯನ್ನು ತರಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ (ವೇಮಗಲ್) - ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಾಗಣ್ಣನವರು ಇದುವರೆಗೆ ನಮ್ಮ ದೇಶದಲ್ಲಿ ಆಗುತ್ತಿರುವ ರೇಷ್ಮೆಯ ಉತ್ಪತ್ತಿಯನ್ನು ಮತ್ತು ಅದರಿಂದ ಬರುತ್ತಿರುವ ವಿದೇಶಿ ವಿನಿಮಯದ ವಿಷಯವನ್ನು ಹೇಳಿದರು. ಅವರು ರೇಷ್ಮೆ ಮಾರ್ಕೆಟ್ ವಿಚಾರದಲ್ಲಿ ಹೆಚ್ಚಿಗೆ ಹೇಳಿದರು. ರೇಷ್ಮೆ ಬಟ್ಟೆ ತಯಾರಾಗಬೇಕಾದರೆ ಮೊಟ್ಟೆಯಿಂದ ಹಿಡಿದು ರೇಷ್ಮೆ ಹುರಿ ಆಗುವವರೆಗೆ ಅನೇಕ ಕೆಲಸಗಳು ಆಗಬೇಕಾಗುತ್ತದೆ. ರೇಷ್ಮೆ ಬೆಳೆ ಚೆನ್ನಾಗಿ ಆದರೆ ಅದರ ಬೆಲೆ ಹೆಚ್ಚುವುದಕ್ಕೆ ಅವಕಾಶವಾಗುವುದಿಲ್ಲ. ಒಂದು ವರ್ಷದ ಹಿಂದೆ ಕೋಲಾರ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ರೇಷ್ಮೆ ಬೆಳೆ ಸರಿಯಾಗಿ ಆಗದೆ ಲಕ್ಷಾಂತರ ಜನರಿಗೆ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಯಿತು. ಇದಕ್ಕೆ ಮುಖ್ಯವಾದ ಕಾರಣವೆಂದರೆ ರೈತರಿಗೆ ಉತ್ತಮವಾದ ಬಿತ್ತನೆ ಬೀಜವನ್ನು ಸರಬರಾಜು ಮಾಡದೇ ಇದ್ದುದು. ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಅದಕ್ಷತೆಯಿಂದ ಈ ರೀತಿಯಾಯಿತು. ನಮ್ಮ ಏರಿಯಾದಲ್ಲಿ ಉತ್ತಮವಾದಂಥ ತಳಿಗಳನ್ನು ಸರಬರಾಜು ಮಾಡದಿದ್ದುದರಿಂದ ಅನೇಕ ರೈತರಿಗೆ ನಷ್ಟವಾಗುವುದಕ್ಕೆ ಕಾರಣವಾಯಿತು. ಇತ್ತೀಚೆಗೆ ಹೊಸದಾಗಿ ಅನೇಕ ಉತ್ತಮ ತಳಿಗಳು ಬರುತ್ತಿವೆ, ನೂರು ಮೊಟ್ಟೆಗೆ ಸುಮಾರು 30-40 ಕೆ.ಜಿ.ಯಷ್ಟು ಬೆಳೆಯುವ ತಳಿಗಳು ಬರುತ್ತಿವೆ. ರೇಷ್ಮೆ ಬೆಳೆ ಎಂಬುದು ಸೆನ್‌ಸಿಟೀವ್ ಕ್ರಾಪ್. ಇದನ್ನು ಸಾಕುವಾಗ ಸ್ವಲ್ಪ ಉಷ್ಣಾಂಶ ಜಾಸ್ತಿಯಾದರೂ ರೋಗ ಬರುತ್ತದೆ. ಆಗ ಅವು ಚಂದ್ರಂಕಿ ಮೇಲೆ ನಿಲ್ಲುವುದಿಲ್ಲ, ಉತ್ಪತ್ತಿಯಲ್ಲಿ ಕಡಮೆಯಾಗುತ್ತದೆ. ಮೊಟ್ಟೆ ತಯಾರು ಮಾಡುವಾಗ ಸ್ವಲ್ಪ ವ್ಯತ್ಯಾಸವಾದರೂ ಕೂಡ ಕೆಟ್ಟು ಹೋಗುತ್ತದೆ. ಇದರ ಪರಿಣಾಮ ರೇಷ್ಮೆಯ ಬೆಲೆ ಜಾಸ್ತಿಯಾಗುತ್ತದೆ. ಅಲ್ಲದೆ ಬೆಳೆಯುವವರಿಗೂ ಕೂಡ ದೊಡ್ಡ ನಷ್ಟವಾಗುತ್ತದೆ. ಇದೆಲ್ಲಾ ಕಾರಣಗಳಿಂದ ಸರ್ಕಾರದವರಲ್ಲಿ ನನ್ನ ಒಂದು ಪ್ರಾರ್ಥನೆ ಏನೆಂದರೆ, ರೋಗ ಇಲ್ಲದೇ ಇರತಕ್ಕಂಥ ಬಿತ್ತನೆ ಬೀಜವನ್ನು ರೈತರಿಗೆ ಸರಬರಾಜು ಮಾಡಬೇಕು. ಎರಡನೆಯದಾಗಿ ಉತ್ತಮವಾದಂತಹ

ತಳಿಗಳು ಏನು ಈಗ ಬರುತ್ತಿವೆ, ಅವುಗಳನ್ನು ಪ್ರಯೋಗಕ್ಕೆ ಒಳಪಡಿಸಿ, ಅದರಿಂದ ಅನುಕೂಲ ಕಂಡುಬಂದರೆ, ಅವುಗಳನ್ನು ರೈತರಿಗೆ ಒದಗಿಸಬೇಕು. ಹೊಸ ತಳಿಗಳನ್ನು ಬೆಳೆಸುವಂತೆ ರೈತರಿಗೆ ಪ್ರೋತ್ಸಾಹ ಕೊಡಬೇಕು. ಗೂಡು ಬೆಳೆದ ಮೇಲೆ ಅದನ್ನು ಮಾರಾಟ ಮಾಡಲು ಮಾರ್ಕೆಟ್‌ಗೆ ರೈತರು ತರುತ್ತಾರೆ. ಈಗಾಗಲೇ ಕಕೂನ್ ಮಾರ್ಕೆಟಿಂಗ್ ಆಕ್ಟ್ ಜಾರಿಗೆ ಬಂದಿದೆ. ಸರ್ಕಾರದವರು ಎಲ್ಲ ಕಡೆಯೂ ಮಾರ್ಕೆಟ್‌ಗಳನ್ನು ತೆರೆದಿದ್ದಾರೆ. ಆದರೆ ತಂದಂಥ ಗೂಡುಗಳನ್ನು ಇಡಲು ಅಲ್ಲಿ ಜಾಗವೇ ಇರುವುದಿಲ್ಲ. ನಮ್ಮ ಜಿಲ್ಲೆಯಲ್ಲಿಯೂ ಕೂಡ 5-6 ಕಡೆ ಇಂತಹ ಮಾರ್ಕೆಟ್‌ಗಳಿವೆ. ಅಲ್ಲಿಯ ಅವ್ಯವಸ್ಥೆಯನ್ನು ಹೇಳುವುದಕ್ಕಾಗುವುದಿಲ್ಲ. ದೊಡ್ಡ ಸಂತೆ ಇದ್ದ ಹಾಗೆ ಇರುತ್ತದೆ. ಗೂಡುಗಳನ್ನು ಕಾಲಲ್ಲಿ ತುಳಿಯುತ್ತಿರುತ್ತಾರೆ. ಒಬ್ಬ ರೈತ 20-30 ಕೆಜಿಗಳಷ್ಟು ಗೂಡನ್ನು ತಂದು ಅಲ್ಲಿ ಇಟ್ಟರೆ, ಅದರಲ್ಲಿ ಸುಮಾರು 4-5 ಕೆಜಿಗಳಷ್ಟು ಗೂಡು ಜನರ ತುಳಿತದಿಂದಲೇ ಹಾಳಾಗಿ ಹೋಗುತ್ತದೆ. ಒಂದು ಕೆಜಿ ಗೂಡಿಗೆ 10-12 ರೂಪಾಯಿ ಬೆಲೆ ಆದರೆ, ನಾಲ್ಕೈದು ಕೆಜಿಗಳಷ್ಟು ತುಳಿತದಿಂದ ಹಾಳಾದರೆ ಆತನಿಗೆ ಸುಮಾರು 49-50 ರೂಪಾಯಿಗಳಷ್ಟು ನಷ್ಟವಾಗುತ್ತದೆ. ಇದು ವಾಸ್ತವವಾದಂಥ ಪರಿಸ್ಥಿತಿ. ಇದನ್ನು ತಪ್ಪಿಸಲು ಸರ್ಕಾರದವರು ಗೂಡುಗಳನ್ನು ಇಡಲು ಕಟ್ಟಡಗಳನ್ನು ಜಾಗ್ರತೆ ಕಟ್ಟಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ರೈತರು ಬೆಳೆದಂಥ ಬೆಳೆಗೆ ಉತ್ತಮ ಬೆಲೆ ಸಿಗಬೇಕಾದರೆ ಈಗ ಇರತಕ್ಕಂಥ ಮಧ್ಯವರ್ತಿ ಜನರನ್ನು ತೆಗೆದು, ಸರ್ಕಾರದವರೇ ನೇರವಾಗಿ ರೈತರೊಡನೆ ವ್ಯವಹಾರ ಮಾಡಬೇಕು. ಇದರಿಂದ ರೈತರಿಗೂ ಉತ್ತಮವಾದ ಬೆಲೆ ಸಿಗುತ್ತದೆ. ರೇಷ್ಮೆ ಬಟ್ಟೆಯ ಬೆಲೆಯೂ ಕೂಡ ಕಡಮೆಯಾಗುತ್ತದೆ. ಗೂಡು ತಯಾರಿಕೆಯಿಂದ ಹಿಡಿದು ಬಟ್ಟೆ ತಯಾರು ಆಗುವವರೆಗೆ ಅನೇಕ ಮಧ್ಯವರ್ತಿ ಜನರು ವ್ಯವಹಾರ ನಡೆಸುವುದರಿಂದ ಈ ಬಟ್ಟೆಯ ಬೆಲೆ ಜಾಸ್ತಿಯಾಗುತ್ತಿದೆ. ಒಂದೊಂದು ಕೈ ದಾಟುವಾಗಲೂ ಕೂಡ ಬೆಲೆ ಏರುತ್ತಾ ಹೋಗುತ್ತದೆ. ಇದರಿಂದ ಬೆಳೆಗಾರರಿಗೂ ಅನುಕೂಲವಿಲ್ಲ, ಬಳಕೆದಾರರಿಗೂ ಅನುಕೂಲವಿಲ್ಲ. ಆದ್ದರಿಂದ ಈ ಮಧ್ಯವರ್ತಿ ಜನರನ್ನು ಮೊದಲು ಕಿತ್ತು ಹಾಕಬೇಕು. ಆ ರೀತಿ ಮಾಡಿದ್ದೇ ಆದರೆ ರೇಷ್ಮೆ ಉತ್ಪಾದನೆ ಜಾಸ್ತಿಯಾಗುತ್ತದೆ, ಕೊಂಡುಕೊಳ್ಳುವವರಿಗೆ ಕಡಮೆ ಬೆಲೆಯಲ್ಲಿ ಬಟ್ಟೆ ಸಿಗುತ್ತದೆ, ರೇಷ್ಮೆ ಉದ್ಯಮವೂ ಕೂಡ ಮುಂದುವರೆಯುತ್ತದೆ. ಆದಕಾರಣ ಸರ್ಕಾರದವರೇ ನೇರವಾಗಿ ಈ ಉದ್ಯಮಕ್ಕೆ ಇಳಿಯಬೇಕು.

ಶ್ರೀಮಾನ್ ನಾಗಣ್ಣನವರು ಇನ್ನೊಂದು ವಿಷಯ ಹೇಳಿದರು. ಅದೇನೆಂದರೆ ಸರ್ಕಾರಿ ಸಿಲ್ಕ್ ಫಿಲೇಚರ್ ಕೈಗಾರಿಕೆಯಿಂದ ವರ್ಷೇ ವರ್ಷೇ 30 ಲಕ್ಷ ರೂಪಾಯಿಗಳು ನಷ್ಟವಾಗುತ್ತದೆ ಎಂದು. ಖಂಡಿತವಾಗಿಯೂ ಇದು ಬಹಳ ಶೋಚನಿಯವಾದ ವಿಚಾರ. ಸಿಲ್ಕ್ ಫಿಲೇಚರ್ ಕಾರ್ಖಾನೆಯಲ್ಲಿ 27 ಸಾವಿರ ಜನ ಕಾರ್ಮಿಕರು ಇರಬಹುದು ಎಂದು ಕಾಣುತ್ತದೆ, ಆ ಕಾರ್ಖಾನೆಯನ್ನು ಮುಚ್ಚಿದರೆ ಅಲ್ಲಿರತಕ್ಕ ಕಾರ್ಮಿಕರೆಲ್ಲರೂ ನಿರುದ್ಯೋಗಿಗಳಾಗುತ್ತಾರೆನ್ನುವ ವಿಷಯವನ್ನು ಶ್ರೀಮಾನ್ ನಾಗಣ್ಣನವರು ತಿಳಿಸಿದರು. ಆ ಕಾರ್ಖಾನೆಯನ್ನು ದಕ್ಷತೆಯಿಂದ ನಡೆಸಿದರೆ ನಷ್ಟವಾಗುವುದಕ್ಕೆ ಕಾರಣವಿಲ್ಲ. ಇವೊತ್ತಿನ ದಿವಸ ಖಾಸಗಿಯವರು ಸಣ್ಣ ಸಣ್ಣ

ಉದ್ದಿಮೆಗಳನ್ನು ನಡೆಸಿ ದೊಡ್ಡ ದೊಡ್ಡ ಬಂಡವಾಳಗಾರರಾಗುತ್ತಿದ್ದಾರೆ. ಹೀಗಿರುವಾಗ ಸರ್ಕಾರದವರು ಏಕೆ ಆ ರೀತಿ ಲಾಭದಾಯಕವಾಗಿ ಆ ಉದ್ದಿಮೆಯನ್ನು ನಡೆಸುವುದಕ್ಕಾಗುವುದಿಲ್ಲ? ಈಗ ಆ ಸಿಲ್ಕ್ ಫಿಲೇಚರ್ ಕಾರ್ಖಾನೆಯಲ್ಲಿ 30 ಲಕ್ಷ ರೂಪಾಯಿಗಳು ಏನು ನಷ್ಟವಾಗುತ್ತಿದೆ ಅದನ್ನು ಆದಷ್ಟು ಬೇಗ ಕಡಮೆ ಮಾಡಿ ಅದು ಲಾಭದಾಯಕವಾಗಿ ನಡೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ಪ್ರಮುಖವಾಗಿ ರೈತರಿಗೆ ಏನಾದರೂ ಹಣ ಸಿಕ್ಕುತ್ತದೆ ಎನ್ನುವ ಒಂದು ಅಂಶ ಇದ್ದರೆ ಅದು ರೇಷ್ಮೆ ವ್ಯವಸಾಯದಿಂದ ಮಾತ್ರ. ಹೀಗಿರುವಾಗ ಕೋಲಾರ ಜಿಲ್ಲೆಯಲ್ಲಿ ಸರ್ಕಾರದವರು ಸಿಲ್ಕ್ ಫಿಲೇಚರ್ ಸ್ಥಾಪನೆ ಮಾಡಿಲ್ಲ. ಆ ಜಿಲ್ಲೆಯಲ್ಲಿ ಏನು ರೇಷ್ಮೆ ಉತ್ಪಾದನೆಯಾಗುತ್ತದೆ ಅದನ್ನು ಮಾರಾಟ ಮಾಡುವುದಕ್ಕೆ ಬೆಂಗಳೂರಿಗೆ ತರಬೇಕು. ಆದ್ದರಿಂದ ರೇಷ್ಮೆ ವ್ಯಾಪಾರಕ್ಕೆ ಬೆಂಗಳೂರಿಗೆ ಬರುವುದನ್ನು ತಪ್ಪಿಸಿ ಕೋಲಾರದಲ್ಲಿ ರೇಷ್ಮೆ ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ಉದ್ಯೋಗಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ರಾಷ್ಟ್ರದ ಹಿತದೃಷ್ಟಿಯಿಂದ, ಇದಕ್ಕೆ ಫಾರಿನ್ ಎಕ್ಸ್‌ಛೇಂಜ್ ಸಿಕ್ಕುವುದರಿಂದ ಕೋಲಾರದಲ್ಲಿ ರೇಷ್ಮೆ ಸಂಸ್ಕರಣ ಕಾರ್ಖಾನೆ ಮತ್ತು ರೇಷ್ಮೆ ಬಟ್ಟೆಯನ್ನು ತಯಾರು ಮಾಡುವುದಕ್ಕೆ ಸರ್ಕಾರದವರು ಕಾರ್ಖಾನೆ ಸ್ಥಾಪಿಸಲು ವ್ಯವಸ್ಥೆ ಮಾಡಬೇಕು. ರಾಷ್ಟ್ರದಲ್ಲಿ ಉತ್ಪತ್ತಿಯಾಗುವ ಸಿಲ್ಕ್‌ನಲ್ಲಿ ಶೇಕಡಾ 75ರಷ್ಟು ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸೆಂಟ್ರಲ್ ಸಿಲ್ಕ್ ಬೋರ್ಡ್ ಛೇರ್ಮನ್ ಆಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಮನಸ್ಸು ಮಾಡಿದರೆ ಕೋಲಾರ, ಬೆಂಗಳೂರು ಮತ್ತು ಮೈಸೂರು ಈ ಜಿಲ್ಲೆಗಳನ್ನು ಹಿಂದೆ ಕನ್ನಡ ನಾಡು ಚಿನ್ನದ ನಾಡು ಎಂದೇನು ಹೇಳುತ್ತಿದ್ದರು ಆ ಚಿನ್ನದ ನಾಡನ್ನು ಈಗ ಮಾಡಬಹುದು. ಆ ರೀತಿ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ರೇಷ್ಮೆಯನ್ನು ಮಾರಾಟ ಮಾಡುವುದಕ್ಕೆ ರೈತರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಮಾರ್ಕೆಟ್ಟಿಗೆ ಹೋಗಿ ಬರಬೇಕಾಗಿದೆ. ಅಲ್ಲಿ ರೈತರಿಗೆ ತುಂಬಾ ಕಷ್ಟ ಇದೆ. ರೈತರು ತಾವು ಮಾರಾಟಕ್ಕಾಗಿ ತಂದಂತಹ ರೇಷ್ಮೆಯನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳ ಇರುವುದಿಲ್ಲ. ಆದ್ದರಿಂದ ಮಾರಾಟಕ್ಕಾಗಿ ತಂದಂತಹ ರೇಷ್ಮೆಯನ್ನು ಜನಗಳು ಕಾಲಿನಲ್ಲಿ ತುಳಿದು 4-5 ಕೆ.ಜಿ. ರೇಷ್ಮೆ ನಷ್ಟವಾಗುತ್ತದೆ. ಅದನ್ನು ಸರ್ಕಾರದವರು ತಪ್ಪಿಸಬೇಕು. ರೈತರಿಗೆ ಮಾರುಕಟ್ಟೆಯ ಸೌಕರ್ಯ ಒದಗಿಸಬೇಕು. ಕೋಲಾರದಲ್ಲಿ ಸಿಲ್ಕ್ ಫಿಲೇಚರ್ ಸ್ಥಾಪನೆ ಮಾಡಬೇಕು. ರೇಷ್ಮೆ ಬಟ್ಟೆ ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು. ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸರ್ಕಾರದವರನ್ನು ಪ್ರಾರ್ಥಿಸಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಈ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ನೀಡುತ್ತಿದ್ದಾಗ, ಕಾಫಿಬೋರ್ಡ್ ರೀತಿ ರೇಷ್ಮೆ ಬೆಳೆಗೂ ವ್ಯವಸ್ಥೆ ಮಾಡಬೇಕು ಎಂದು ಸಿ.ಬಿ. ಸೂಚಿಸಿದ್ದರು. ಅದಕ್ಕೆ ಮುಖ್ಯಮಂತ್ರಿ ಅರಸರು ಕಾಫಿಬೋರ್ಡ್, ಟೀ ಬೋರ್ಡ್‌ಗಳಿಗೆ ಸ್ವತಂತ್ರ ಅಧಿಕಾರವಿದೆ. ಆದರೆ ರೇಷ್ಮೆ ಬೋರ್ಡಿಗೆ ಬರಿಯ ಸ್ಟ್ಯಾಚುಟರಿ ಪವರ್ಸ್ ಇದೆ ಎಂದಿದ್ದರು.

ಸರ್ಕಾರದ ಧೋರಣೆ, ನೀತಿಗಳು ಬಂಡವಾಳ ರೀತಿಯಲ್ಲಿದೆ ಎಂದು ಬಜೆಟ್ ಅನ್ನು ವಿರೋಧಿಸಿ, ಸರ್ಕಾರಿ ಉದ್ದಿಮೆಗಳಲ್ಲಿ ಹಣ ಪೋಲಾಗುತ್ತಿರುರುದನ್ನು ಬೈರೇಗೌಡರು ಟೀಕಿಸಿದರು.

ಕಳೆದ ಸಭೆಯಲ್ಲಿ ಇಂಟರೀಮ್ ಬಜೆಟನ್ನು ಮಂಡಿಸುತ್ತಾ ಕೆಲವು ಆಶ್ವಾಸನೆಗಳನ್ನು ಮಾನ್ಯ ಆರ್ಥಿಕ ಸಚಿವರು ಕೊಟ್ಟಿದ್ದರು. ನಾನು ಆ ಭಾಷಣವನ್ನು ಅನೇಕ ಸಾರಿ ಓದಿದ್ದೇನೆ. ಅದರಲ್ಲಿ ಕೆಲವು ಸಂತೋಷಕರವಾದ ವಿಚಾರಗಳಾದರೂ ಇತ್ತು. ಆದರೆ ಇವೊತ್ತಿನ ದಿವಸ ಇಲ್ಲಿ ಮಂಡಿಸಿರತಕ್ಕಂತಹ ಭಾಷಣವನ್ನು ಕೇಳಿದ ಮೇಲೆ ನನಗೆ ಬಹಳ ವ್ಯಥೆಯಾಗಿದೆ. ಸಮಾಜವಾದವನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರುತ್ತೇವೆಂದು ಪ್ರತಿ ಮತದಾರರಿಗೂ ಹೇಳಿದಂತಹ ಪಕ್ಷದವರು ಅದನ್ನು ಈ ಭಾಷಣದಲ್ಲಿ ನಮೂದು ಮಾಡಿಲ್ಲವಲ್ಲವೆಂದು ದುಃಖವಾಗುತ್ತಿದೆ. ಮಾನ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಬಹಳ ಸುಂದರವಾದ ಪದಗಳನ್ನು ಬಳಸಿಕೊಂಡು ತಮ್ಮ ಭಾಷಣವನ್ನು ಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ.

"The men, women and youth of our country have to be activised in a socially purposeful manner and their energies organised in such a way that the world becomes a better place to live in not only for a few, but for all."

ನಮ್ಮ ದೇಶದಲ್ಲಿ ಪ್ರತಿಯೊಬ್ಬರೂ ವಾಸ ಮಾಡುವುದಕ್ಕೆ ಅವಕಾಶ ಇರಬೇಕೆಂದು ಆಶೆ ಪಡುತ್ತಾರೆ. ಅದೇ ರೀತಿಯಲ್ಲಿ ಇಲ್ಲಿ ಅವಕಾಶ ಮಾಡಿದ್ದಾರೆಯೇ ಅಂದರೆ ಅದೂ ಮಾಡಿಲ್ಲ. ಮಾನ್ಯ ಮಂತ್ರಿಯವರು ಬಹಳ ವಿದ್ಯಾವಂತರಾಗಿರುವುದರಿಂದ ನಮ್ಮನ್ನು ಮಾತುಗಳ ಜಾಲದಿಂದ ಸಿಕ್ಕಿಸಿದ್ದಾರೆ. ಮೊದಲನೆಯ ಪ್ಯಾರಾದಲ್ಲಿ ಮಾನ್ಯ ಮಂತ್ರಿಯವರು ಮುಂದುವರೆಯುತ್ತಾ ಹೀಗೆ ಹೇಳುತ್ತಾರೆ:

" I have promised a more purposeful budget after a deeper assessment of the financial situation and the vital needs of the State........ The Government had inherited some very difficult financial problems."

ಇವರು ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಯಾವ ರೀತಿಯಲ್ಲಿ ಅಸೆಸ್ ಮಾಡಿದ್ದಾರೆಂದರೆ ಹಿಂದೆ 25 ವರ್ಷಗಳ ಹಿಂದೆ ಯಾವ ರೀತಿ ಬಂಡವಾಳಶಾಹಿ ಆಡಳಿತ ಇತ್ತು, ಆ ಒಂದು ಪದ್ಧತಿಯಲ್ಲಿ ಇದನ್ನು ಮಾಡಿದ್ದಾರೆ. ಅವರ ದೃಷ್ಟಿ ನಮ್ಮ ರಾಜ್ಯದಲ್ಲಿರುವ ಬಡಬಗ್ಗರ ಕಡೆಗೆ

ಹರಿದು, ಅವರ ಯೋಗಕ್ಷೇಮಕ್ಕಾಗಿ ಯಾವ ಒಂದು ಅವಕಾಶವನ್ನೂ ಇವರು ಮಾಡಿಲ್ಲ. ಮಂತ್ರಿಯುವರು ಇನ್ನೊಂದು ವಿಷಯ ಹೇಳಿದ್ದೇನೆಂದರೆ ಹಣಕಾಸಿನ ಪರಿಸ್ಥಿತಿ ಕ್ಲಿಷ್ಟಕರವಾಗಿರುವುದರಿಂದ ಇದರಲ್ಲಿ ಸರ್ಕಾರವು ಅಷ್ಟು ತೃಪ್ತಿಪಟ್ಟಿಲ್ಲವೆಂದು ಹೇಳಿದ್ದಾರೆ. ಇವರ ಧೋರಣೆಗಳು, ನೀತಿಗಳು ಬಂಡವಾಳಶಾಹಿ ರೀತಿಯಲ್ಲಿರುವುದರಿಂದ ಇವರಿಗೆ ಆ ರೀತಿಯ ತೊಂದರೆಗಳು ಬಂದಿವೆಯೆಂದು ನಾನು ಹೇಳುತ್ತೇನೆ.

ಇನ್ನು ವಾಟರ್‌ರೇಟ್‌ನ್ನು ಜಾಸ್ತಿ ಮಾಡಿದ್ದಾರೆ. ಇದು ಹೆಚ್ಚಾಗಿ ಬಡ ರೈತರಿಗೆ ಅನ್ವಯಿಸುತ್ತದೆ. ಆದರೆ ಅದೇ ರೀತಿ ಬಂಡವಾಳಶಾಹಿಗಳ ಮೇಲೆ ಯಾವ ತೆರಿಗೆಯನ್ನು ಹಾಕಲು ಇವರು ಪ್ರಯತ್ನ ಮಾಡಿಲ್ಲ. ಇದರಿಂದ ರೈತರನ್ನು ಇನ್ನೂ ಶೋಷಣೆ ಮಾಡಿದಂತಾಗುತ್ತದೆ. ಅದೇ ರೀತಿ ಶ್ರಮ ಜೀವಿಗಳ ವರ್ಗವನ್ನು ತೆಗೆದುಕೊಂಡರೆ ಅವರು ದಿವಸಕ್ಕೆ 8 ಘಂಟೆಗಳ ಕಾಲ ದುಡಿಯಬೇಕಾಗಿದೆ. ಆದರೆ ಅದನ್ನು ಕೂಡ ಕಡಮೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿಲ್ಲ. ಇವತ್ತು ನಮ್ಮ ದೇಶದಲ್ಲಿ ಕಪ್ಪು ಹಣ ಎಂದು ಏನು ಹೇಳುತ್ತೇವೆ ಆ ಹಣ ಕೋಟಿಗಟ್ಟಲೆ ರೂಪಾಯಿಗಳಾಗಿವೆ. ಎಷ್ಟೋ ಜನರು ಅಕ್ರಮವಾಗಿ ಇಂತಹ ಹಣವನ್ನು ಸಂಪಾದಿಸಿಕೊಂಡಿದ್ದಾರೆ. ಅದನ್ನು ಹಿಡಿಯುವುದಕ್ಕೆ ಏನಾದರೂ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದ ಜೊತೆಗೆ ಸಹಕರಿಸಿ ಪ್ರಯತ್ನ ಮಾಡಿದ್ದಾರೆಯೇ ಅಂದರೆ ಇಲ್ಲ. ಅದರ ಅಂಕಿ-ಅಂಶಗಳನ್ನು ಸಹ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಹಾಗೆಯೇ ಇಂದು ನಿರುದ್ಯೋಗ ಸಮಸ್ಯೆ ನಮ್ಮ ಯುವಕರನ್ನು ಕಾಡುತ್ತಾ ಇದೆ. ಇವರು ಕೇವಲ 1,700 ಜನರಿಗೆ ಸಂಬಂಧಪಟ್ಟ ಒಂದು ಯೋಜನೆ ಮತ್ತು 1,800 ಜನರಿಗೆ ಒಂದು ಟ್ರೈನಿಂಗ್ ಕೊಡುವ ಯೋಜನೆ ಮಾಡಿದ್ದೇವೆಂದು ಹೇಳಿದರೆ ಆ ಸಮಸ್ಯೆ ಎಲ್ಲಿ ಪರಿಹಾರವಾಗುತ್ತದೆ ? ಅದರ ಬಗ್ಗೆ ಕಿಂಚಿತ್ತಾದರೂ ಇದರಲ್ಲಿ ಕಾಣುತ್ತಾ ಇಲ್ಲ. ನಮ್ಮ ದೇಶದಲ್ಲಿ ಸಮಾನತೆ ಬರಬೇಕಾದರೆ ಮತ್ತು ದೇಶ ಮುಂದುವರಿಯಬೇಕಾದರೆ ಸರ್ಕಾರದ ಹಣ ಪೋಲಾಗದಂತೆ ನೋಡಿಕೊಂಡು, ಸಾಮಾನ್ಯ ಜನರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯಗಳನ್ನು ಸರ್ಕಾರದವರು ಕೈಗೊಳ್ಳಬೇಕು. ಈಗ ಸರ್ಕಾರದವರು ಕೆಲವು ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ. ಉದಾಹರಣೆಗೆ ಭದ್ರಾವತಿ ಮತ್ತು ಎಂ.ಎಸ್.ಆರ್.ಟಿ.ಸಿ. ಇತ್ಯಾದಿ. ಇದರಲ್ಲಿ ಎಷ್ಟು ಹಣ ಪೋಲಾಗುತ್ತದೆ ಅಂದರೆ ಜರಡಿಯಲ್ಲಿ ನೀರು ಹಾಕಿದ ಹಾಗೆ ಆಗಿದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಮೊನ್ನೆ ಸಾರಿಗೆ ಸಚಿವರು ಒಂದು ದಿವಸ ಕೋಲಾರಕ್ಕೆ ಭೇಟಿ ಕೊಟ್ಟರು. ಅವತ್ತಿನ ದಿವಸ ಬೆಂಗಳೂರಿನಿಂದ ಕೋಲಾರಕ್ಕೆ ಬರುವಂತಹ ಸರ್ಕಾರಿ ಬಸ್ಸುಗಳ ಆದಾಯ ಒಂದೇ ದಿವಸ 5 ಸಾವಿರ ರೂಪಾಯಿಗೆ ಏರಿದೆ. ಬಾಕಿ ದಿನಗಳಲ್ಲಿ ಆಗದೇ ಇರುವುದಕ್ಕೆ ಕಾರಣವೇನೆಂದರೆ ಅಲ್ಲಿ ಖಾಸಗಿ ಬಸ್ ಮಾಲೀಕರು ಓಡಿಸುತ್ತಿರುವ ಬಸ್ಸುಗಳಿಂದ ಸರ್ಕಾರಿ ಬಸ್ಸುಗಳಿಗೆ ಸರಿಯಾದ ಆದಾಯ ಬರುತ್ತಾ ಇಲ್ಲ. "ಆನ್ ಕಂಟ್ರಾಕ್ಟ್" ಎಂದು ಬೋರ್ಡು ಹಾಕಿಕೊಂಡು ಓಡಿಸುತ್ತಾ ಇದ್ದಾರೆ. ಆದ್ದರಿಂದ ಇದರಿಂದ ಒಂದು ದಿವಸಕ್ಕೆ 5 ಸಾವಿರ ರೂಪಾಯಿಯಷ್ಟು ನಷ್ಟ ಸರ್ಕಾರಿ ಬಸ್ಸುಗಳಿಗೆ ಆಗುತ್ತದೆ. ಅಂದರೆ ಒಂದು ರೂಟಿನಲ್ಲಿ

ಒಂದು ದಿವಸಕ್ಕೆ 5 ಸಾವಿರ ನಷ್ಟವಾದರೆ ಒಂದು ತಿಂಗಳಿಗೆ ಒಂದೂವರೆ ಲಕ್ಷ ರೂಪಾಯಿ ನಷ್ಟವಾಯಿತು. ಒಂದು ವರ್ಷಕ್ಕೆ ಸುಮಾರು 18 ಲಕ್ಷ ರೂಪಾಯಿ ನಷ್ಟವಾಯಿತು. ಇದಕ್ಕೆ ನಮ್ಮ ಮಂತ್ರಿಯವರು ಏಕೆ ಗಮನ ಕೊಡುತ್ತಾ ಇಲ್ಲವೆಂದು ಅರ್ಥವಾಗುವುದಿಲ್ಲ. ಈ ರೀತಿ ಸರ್ಕಾರಿ ಉದ್ಯಮಗಳಲ್ಲಿ ಹಣ ಪೋಲಾಗುತ್ತಾ ಇದ್ದರೆ, ಇವತ್ತು ವಾಟರ್‌ರೇಟ್ ಹಾಕಬೇಕಾಗುತ್ತದೆ, ನಾಳೆ ಇನ್ನೊಂದು ತೆರಿಗೆಯನ್ನೂ ಹಾಕಬೇಕಾಗುತ್ತದೆ. ಈ ರೀತಿ ಸರ್ಕಾರಿ ಕ್ಷೇತ್ರದ ಉದ್ದಿಮೆಗಳನ್ನು ಸರಿಯಾದ ರೀತಿಯಲ್ಲಿ ನಡೆಸದೆ ಇರುವುದರಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಶೋಚನೀಯವಾಗಿ ಇಲ್ಲದ ತೆರಿಗೆಗಳನ್ನು ಬಡ ಜನರ ಮೇಲೆ ಹೊರಿಸಬೇಕಾದ ಪ್ರಸಂಗ ಇಂದು ಸರ್ಕಾರದವರಿಗೆ ಬಂದೊದಗಿದೆ. ಇನ್ನೂ ಹೆಚ್ಚಿನ ಸುಂಕಗಳನ್ನು ಮತ್ತು ತೆರಿಗೆಗಳನ್ನು ಹಾಕಬೇಕಾಗಿ ಬರುತ್ತದೆ. ಬಂಡವಾಳಶಾಹಿಗಳ ಅಭಿಪ್ರಾಯದಲ್ಲಿ ತೆರಿಗೆ ಇಲ್ಲದೆ ಯಾವ ಸರ್ಕಾರವೂ ನಡೆಯುವುದಿಲ್ಲ ಎಂಬುದಾಗಿದೆ. ಅದು ನಮಗೂ ಗೊತ್ತಿದೆ. ತೆರಿಗೆ ಹಾಕುವುದರಲ್ಲಿ ನಾನು ವಿರೋಧಿಯಲ್ಲ. ಆದರೆ ಹಾಗೆ ಹಾಕುವಾಗ ಈಗ ಯಾವುದರ ಮೇಲೆ ತೆರಿಗೆ ಹಾಕಬೇಕು, ನಮ್ಮಲ್ಲಿರತಕ್ಕ ಉತ್ಪನ್ನ ಸಾಧನಗಳು ಸರಿಯಾಗಿವೆಯೇ, ನಾವು ನಡೆಸತಕ್ಕ ಆಡಳಿತ ಸರಿಯಾಗಿದೆಯೇ ಎಂಬುದನ್ನು ನೋಡಬೇಕು. ಆ ಉತ್ಪನ್ನ ಸಾಧನಗಳಿಂದ ಬರತಕ್ಕ ಉತ್ಪಾದನೆಗಳನ್ನು ಬಿಟ್ಟು ಬೇರೆ ತೆರಿಗೆಗಳನ್ನು ಜನಗಳಿಂದ ವಸೂಲು ಮಾಡಿಕೊಡಿ ಎಂಬುದಾಗಿ ಹೇಳಿದರೆ ಅದು ಸೂಕ್ತವಾದುದಲ್ಲ. <u>ಜರಡಿಯಲ್ಲಿ ನೀರನ್ನು ತುಂಬಿ ಹಾಕಿದರೆ ಯಾವ ರೀತಿಯಲ್ಲಿ ಅದು ಒಂದೊಂದು ಹನಿಯಾಗಿ ಬಿದ್ದು ಹೋಗುತ್ತದೆಯೋ ಆ ರೀತಿಯಲ್ಲಿ ಸರಕಾರಿ ಉದ್ಯಮಗಳಲ್ಲಿ ಹಣ ಪೋಲಾಗುವುದಕ್ಕೆ ಅವಕಾಶಕೊಟ್ಟು ನೀವು ಜನಗಳ ಮೇಲೆ ಹೊರಲಾರದಷ್ಟು ತೆರಿಗೆಗಳನ್ನು ಹಾಕಿದರೆ, ಅವರು ಅದನ್ನು ಹೊರುವುದಕ್ಕಾಗದೆ ತುಂಬ ಕಷ್ಟಪಡುತ್ತಾರೆ.</u> ಆದ್ದರಿಂದ ಈ ರೀತಿಯಾಗಿ ಹೆಚ್ಚು ತೆರಿಗೆಯನ್ನು ಹಾಕುವುದನ್ನು ಕೂಡಲೇ ತಡೆಗಟ್ಟಿ ಎಲ್ಲ ವಿಷಯಗಳನ್ನು ಗಮನಿಸಿ ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ನಮ್ಮ ಜನತೆಯ ಮೇಲೆ ಕಡಮೆ ಸುಂಕದ ಭಾರವನ್ನು ಹೊರಿಸಬೇಕು. ನಾನು ಅರ್ಥಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಬಡ್ಜೆಟ್ ಭಾಷಣ ಮಾಡುವಾಗ ಹೆಚ್ಚು ವಿವರಗಳನ್ನು ಈ ಸಭೆಯಲ್ಲಿ ಹೇಳಬೇಕೆಂದಿದ್ದೆ. ಆದರೆ ಈ ದಿವಸ ನನಗೆ ಭಾಷಣ ಮಾಡಲು ಅವಕಾಶ ದೊರಕುತ್ತದೆಂದು ತಿಳಿದಿರಲಿಲ್ಲ. ಆದಕ್ಕಾಗಿ ನಾನು ಈ ದಿವಸ ಬಡ್ಜೆಟ್ ಭಾಷಣ ಮಾಡಲು ತಯಾರಾಗಿಯೂ ಬಂದಿರಲಿಲ್ಲ. ಅಧ್ಯಕ್ಷರ ಒಂದು ಆದೇಶದ ಮೇಲೆ ನಾನು ಇವತ್ತು ಮಾತನಾಡಬೇಕಾಯಿತು.

# ಕರ್ನಾಟಕ ನಾಮಕರಣ : 26-7-1972

> ವಿಶಾಲ ಮೈಸೂರು ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣ ಮಾಡುವ ನಿರ್ಣಯವನ್ನು ಸ್ವಾಗತಿಸಿ ಮಾತನಾಡಿದ ಗೌಡರು ಇದು ಕ್ರಾಂತಿಕಾರಿ ನಿರ್ಣಯವಲ್ಲ. ಎಂದೋ ಆಗಬೇಕಾದ್ದು, ಈಗ ಆಗುತ್ತಿದೆ ಎಂದರಲ್ಲದೆ ಏಕೀಕರಣಕ್ಕೆ ದುಡಿದ ಸಮಾಜವಾದಿ ಶಾಂತಿವೇರಿ ಗೋಪಾಲಗೌಡರ ಭಾವಚಿತ್ರವನ್ನು ವಿಧಾನ ಸಭೆಯಲ್ಲಿ ಅನಾವರಣಗೊಳಿಸಲು ಕೋರಿದರು.

ಶ್ರೀ ಸಿ. ಬೈರೇಗೌಡ; (ವೇಮಗಲ್) - ಸನ್ಮಾನ್ಯ ಅಧ್ಯಕ್ಷರೆ, ಈವೊತ್ತು ಈ ಸಭೆಯ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ನಿರ್ಣಯವನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಹಿಂದೆ ಮಾತನಾಡಿರತಕ್ಕ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ನನ್ನ ಅಭಿಪ್ರಾಯ ಹೇಳಬೇಕಾದರೆ ಈವೊತ್ತು ಹೆಸರು ಬದಲಾಯಿಸುವುದು ಅಂಥ ದೊಡ್ಡ ವಿಷಯವಲ್ಲ. ಇದು ಕ್ರಾಂತಿಕಾರಕವಾದ ಹೆಜ್ಜೆ ಎಂದು ನಾನು ಹೇಳುವುದಿಲ್ಲ. ಇದು ಯಾವತ್ತೊ ಆಗಬೇಕಾಗಿತ್ತು. 1956ನೇ ಇಸವಿಯಲ್ಲಿ ಮೈಸೂರು ರಾಜ್ಯ ಯಾವಾಗ ದೊಡ್ಡದಾಯಿತೋ ಆವೊತ್ತೇ ಆಗಬೇಕಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ತಮ್ಮ ಸ್ವಾರ್ಥವನ್ನು ಮತ್ತು ಸ್ವಾರ್ಥ ರಾಜಕೀಯುವನ್ನು ಬೆಳೆಸುವುದಕ್ಕೆ ಇದನ್ನು ನೆಪವಾಗಿ ಉಪಯೋಗಿಸಿಕೊಂಡು ಬಂದಿರುವುದು ಕರ್ನಾಟಕ ದೌರ್ಭಾಗ್ಯ. ಫ್ಯೂಡಲ್ ಪಾಳೆಗಾರ ಪದ್ಧತಿ ಈಗ ಮಾಯವಾಗಿದೆ. ಅದಕ್ಕೆ ಅಂಟಿಕೊಂಡಿರತಕ್ಕ ವೆಸ್ಟೆಡ್ ಇಂಟರೆಸ್ಟ್ ನಾಶವಾಗಬೇಕು ಎನ್ನುವುದು ಸಹಜವಾಗಿ ಇದೆ. ವೆಸ್ಟೆಡ್ ಇಂಟರೆಸ್ಟ್ ಏನು ಇತ್ತು ಅದು ಈವೊತ್ತಿನ ದಿವಸ ಹೋಗುತ್ತಿದೆ. ಇದು ಸಂತೋಷಕರವಾದ ವಿಷಯ. ಈ ಸಂದರ್ಭದಲ್ಲಿ ಕನ್ನಡ ನಾಡು, ಕರ್ನಾಟಕ ಯಾವ ರೀತಿ ಇರಬೇಕು ಎನ್ನುವುದನ್ನು ವಿಸ್ತಾರವಾಗಿ ಬಹಳ ಜನ ಹೇಳಿದ್ದಾರೆ. ಕನ್ನಡನಾಡಿನಲ್ಲಿ ನಿರುದ್ಯೋಗ ಸಮಸ್ಯೆ, ಬಡತನ ಸಮಸ್ಯೆ ಸಮಾಜದಲ್ಲಿರತಕ್ಕ ಏರು-ಪೇರುಗಳು ಏನು ಇವೆ ಆ ಸಮಸ್ಯೆಗಳನ್ನು ಕೂಡ ಬಗೆಹರಿಸುವ ಒಂದು ಜವಾಬ್ದಾರಿ ನಮ್ಮ ಮೇಲೆ ಇದೆ. ಆ ಜವಾಬ್ದಾರಿಯನ್ನು ವಹಿಸತಕ್ಕ ಕಾಲದಲ್ಲಿ 25 ವರ್ಷಗಳಿಂದ ರಾಜ್ಯದಲ್ಲಿ ಇರುವಂತಹ ಜಾತಿವಾದ ಮತ್ತು ಫ್ಯೂಡಲ್ ಟೈಪ್ ಆಫ್ ಎಕ್ಸ್‌ಪ್ಲಾಯಿಟೇಷನ್ ಏನು ಇದೆ ಇವಕ್ಕೆ ಮುಟ್ಟುಗೋಲು ಹಾಕಿ ವೈಜ್ಞಾನಿಕ ರೀತಿಯಲ್ಲಿ ಸಮಾಜವಾದದ ಆಧಾರದ ಮೇಲೆ ಸಮಾಜ ರಚನೆ ಮಾಡಲು ತಮ್ಮ ಅಧಿಕಾರವನ್ನು ಉಪಯೋಗಿಸಬೇಕು ಎಂದು ಈ ಸಂದರ್ಭದಲ್ಲಿ ಮಂತ್ರಿಮಂಡಲಕ್ಕೆ ಸೂಚನೆ ಕೊಡಬಯಸುತ್ತೇನೆ. ಕನ್ನಡ ರಾಜ್ಯದ ಮಂತ್ರಿಮಂಡಲ ಚೆನ್ನಾಗಿ ಕೆಲಸ ಮಾಡಬೇಕು. ಕೆಲವು ದಿವಸಗಳ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಮಾನ್ಯಮಂತ್ರಿಗಳು ಗುಲ್ಬರ್ಗಾಕ್ಕೆ ಹೋದಾಗ ರಾತ್ರಿ ಸಂಚಾರ ನಡೆಸಿದ ವಿಚಾರ ಛೂಬಾಣದಲ್ಲಿ ಬಂದಿತ್ತು. ಆ ರೀತಿಯ ಸುದ್ದಿಗಳಿಗೆ ಮಂತ್ರಿಮಂಡಲದಲ್ಲಿ ಇರತಕ್ಕ ಸದಸ್ಯರುಗಳು ಅವಕಾಶ ಕೊಡದೆ ಹಾಗೆ ಎಚ್ಚರಿಕೆ ವಹಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಈ ರಾಜ್ಯದ 3 ಕೋಟಿ ಜನರು ಮಾತನಾಡತಕ್ಕ ಭಾಷೆಯ ಸಾಹಿತ್ಯಕ್ಕೆ ಪ್ರಧಾನ ಸ್ಥಾನ ಇದೆ. ಆ ಪ್ರಧಾನ ಸ್ಥಾನವನ್ನು ಪಡೆದಿದ್ದ ಕನ್ನಡ ಸಾಹಿತ್ಯ ಪರಿಷತ್ತು 3 ಕೋಟಿ ಜನರ ಉಸಿರು ಆಗಿದೆ. ಆ ಕನ್ನಡ ಸಾಹಿತ್ಯ ಪರಿಷತ್ತು ಒಂದು ಸಣ್ಣ ಕಟ್ಟಡದಲ್ಲಿ ಇದೆ. ಅದಕ್ಕೆ ವಿಧಾನಸೌಧದಂಥ ದೊಡ್ಡ ಕಟ್ಟಡ ಕಟ್ಟಿ ಕನ್ನಡ ಸಾಹಿತ್ಯವನ್ನು ಎಲ್ಲಾ ವಿಧದಲ್ಲಿಯೂ ಕೂಡ ಸರ್ವಾಂಗ ಸುಂದರವಾಗಿ ಬೆಳೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಕನ್ನಡ ಸಾಹಿತ್ಯ ಪರಿಷತ್ತಿಗೆ

ಹೆಚ್ಚಿನ ಪ್ರಾಧಾನ್ಯತೆ ಮತ್ತು ಹಣದ ಸೌಲಭ್ಯವನ್ನು ಒದಗಿಸಿಕೊಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಷ್ಟೆ ಅಲ್ಲದೆ ಈವೊತ್ತಿನ ದಿವಸ ನಮ್ಮ ರಾಜ್ಯ ಅಲ್ಲದೆ ಇತರೇ ರಾಜ್ಯಗಳಲ್ಲೂ ಕೂಡ ಕನ್ನಡಿಗರು ನೆಲೆಸಿದ್ದಾರೆ. ಮದ್ರಾಸಿನಲ್ಲಿ ಇದ್ದಾರೆ, ಡೆಲ್ಲಿಯಲ್ಲಿ ಇದ್ದಾರೆ, ಬೊಂಬಾಯಿಯಲ್ಲಿ ಇದ್ದಾರೆ ಎಲ್ಲಾ ಕಡೆಯೂ ಕನ್ನಡಿಗರು ನೆಲೆಸಿದ್ದಾರೆ. ಅವರ ಮಾತೃ ಭಾಷೆಯಲ್ಲಿಯೇ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕು ಎಂದರೆ ಅದು ಸಾಧ್ಯವಾಗುತ್ತಾ ಇಲ್ಲ. ಆದರೆ ಈ ಹೊತ್ತು ರಾಜ್ಯದಲ್ಲಿ ನಾವು ಪ್ರಾಥಮಿಕ ಪಾಠಶಾಲೆಗಳನ್ನು ಯಾವ ರೀತಿ ತೆರೆಯುತ್ತಿದ್ದೇವೆ, ಇನ್ನೂ ಉತ್ತಮವಾದ ಸವಲತ್ತನ್ನು ಕಲ್ಪಿಸುತ್ತಿದ್ದೇವೆ, ಅದೇ ರೀತಿಯಲ್ಲಿ ಹೊರನಾಡಿನಲ್ಲಿರುವ ಕನ್ನಡಿಗರಿಗೂ ವಿದ್ಯಾಭ್ಯಾಸದ ಸೌಲಭ್ಯವನ್ನು ಒದಗಿಸುವಂಥ ಜವಾಬ್ದಾರಿ ಆಯಾ ರಾಜ್ಯ ಸರ್ಕಾರಗಳಲ್ಲಿ ಕೂಡ ಇರಬೇಕು. ಅವರು ಅಂಥ ಒಂದು ಸೌಲಭ್ಯವನ್ನು ಒದಗಿಸದೆ ಇದ್ದರೆ ಖಂಡಿತವಾಗಿಯೂ ಕೂಡ ನಮ್ಮ ಕರ್ನಾಟಕ ಮಂತ್ರಿಮಂಡಲ ಅಥವಾ ಕರ್ನಾಟಕ ಸರ್ಕಾರ ಅಂಥ ಜವಾಬ್ದಾರಿಯನ್ನು ಹೊರಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಹಳೇ ಮೈಸೂರಾಗಿ ಇದ್ದದ್ದು, ಈ ಹೊತ್ತು ವಿಶಾಲ ಮೈಸೂರಾಗಿ ವಿಶಾಲ ಕರ್ನಾಟಕವಾಗಿರುವುದನ್ನು ನೋಡುತ್ತಿದ್ದೇವೆ. 1956ನೇ ಇಸವಿಯಲ್ಲಿ ಬಹಳ ತೀವ್ರವಾಗಿ ಹಳೇ ಮೈಸೂರು ಹಾಗೆಯೇ ಉಳಿಯಬೇಕು. ಕರ್ನಾಟಕ ಎಂದು ದೊಡ್ಡದಾಗಿ ಆಗಬಾರದು ಎಂದು ದೊಡ್ಡ ಗುಂಪುಗಳು, ಘರ್ಷಣೆಗಳಿಗಾಗಿ ಬೆಂಗಳೂರಿನಲ್ಲಿ ಲಾಠಿಚಾರ್ಜು ಆಗಿ, ಟಿಯರ್ ಗ್ಯಾಸ್ ಷೆಲ್ಸ್ ಕೂಡ ಉಪಯೋಗಿಸಿದರು. ಬಹಳ ದೊಡ್ಡದಾಗಿ ಗಲಭೆ ನಡೆಯಿತು. ಆಗ ನಾನು ವಿದ್ಯಾರ್ಥಿಯಾಗಿದ್ದೆ. ಆಗ ನಮ್ಮ ನಾಯಕರು ಕೆಲವರು ಮಾಡುತ್ತಿದ್ದುದ್ದನ್ನು ನೋಡಿ ನನಗೆ ನಗು ಕೂಡ ಬರುತ್ತಿತ್ತು. ಎಂಥ ವಿಷಯಕ್ಕೆ ಏನು ಕೆಲಸ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಆಶ್ಚರ್ಯವಾಗುತ್ತಿತ್ತು. ವೈಜ್ಞಾನಿಕವಾಗಿ ನಡೆಯಬೇಕಾದುದಕ್ಕೆ ಯಾರೇ ಆಗಲಿ ಅಡ್ಡಿ ಇರಬಾರದು. ಆಗಿನ ಸಂದರ್ಭದಲ್ಲಿ ಶ್ರೀ ಕೆ. ಹನುಮಂತಯ್ಯನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅವರು ದಿಟ್ಟ ನಿಲುಮೆಯನ್ನು ತೆಗೆದುಕೊಂಡು, ದಿಟ್ಟ ಹೆಜ್ಜೆಯನ್ನು ಇಟ್ಟು ಕರ್ನಾಟಕವಾಗುವುದನ್ನು ನೋಡಬೇಕೆಂದಿದ್ದ ಕಾಲದಲ್ಲಿ ಅವರು ಮುಖ್ಯಮಂತ್ರಿ ಪದವಿಯನ್ನು ಬಿಡಬೇಕಾಯಿತು. ಮೈಸೂರು ದೊಡ್ಡದಾಗಿ ಕರ್ನಾಟಕವಾಯಿತು. ಈಗ ಮೈಸೂರು ಎನ್ನುವ ಹೆಸರನ್ನು ಬದಲಾಯಿಸಿ ಕರ್ನಾಟಕ ಎನ್ನುವ ಹೆಸರನ್ನು ಇಡಲಾಗುತ್ತಿರುವ ಈ ಸಮಯದಲ್ಲಿ ಅವರು ರೈಲ್ವೆ ಮಂತ್ರಿ ಪದವಿಯನ್ನು ಬಿಟ್ಟು ಬಂದರು. ಈ ರೀತಿ ಆಗಬಾರದಾಗಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. 25 ವರ್ಷಗಳಲ್ಲಿ ಯಾವ ರೀತಿ ಜಾತಿಯವಾದ ಯಾವ ರೀತಿ ಒಂದು ಕೋಮು ಇನ್ನೊಂದು ಕೋಮನ್ನು ತುಳಿಯುವಂಥ ಮನೋಭಾವ ಬೆಳೆದು ಬಂದಿದೆ ಅದು ಇನ್ನು ಮೇಲಾದರು ಆಗದೆ ಇರಲಿ. ಒಂದು ಕೋಮು ಇನ್ನೊಂದು ಕೋಮಿನವರನ್ನು ಅಥವಾ ಒಂದು ಭಾಗದ ಜನರು ಇನ್ನೊಂದು ಭಾಗದ ಜನರನ್ನು ತುಳಿಯದೆ ಇರತಕ್ಕ ವ್ಯವಸ್ಥೆ ಇಲ್ಲಿ ಆಗಲಿ ಎಂದು ಹೇಳುತ್ತೇನೆ.

ಸಣ್ಣದಾಗಿದ್ದ ಮೈಸೂರು ದೊಡ್ಡದಾಗಿ ಕರ್ನಾಟಕವಾಗಬೇಕಾಗಿದ್ದರೆ, ದಿವಂಗತ ಎಸ್. ಗೋಪಾಲಗೌಡರು ಬಹಳ ಮಟ್ಟಿಗೆ ಶ್ರಮಿಸಿದ್ದಾರೆ. 1956ನೇ ಇಸವಿಯಲ್ಲಿ ಚಳವಳಿ ನಡೆದಾಗ ಅವರ ಜೀವಕ್ಕೆ ಹಾನಿ ಇದ್ದ ಪರಿಸ್ಥಿತಿ ಇತ್ತು. ಅಂಥ ಘಟನೆಯನ್ನು ನಾನು ಕೂಡ ನೋಡಿದ್ದೇನೆ. ಕೈಕಾಲು ಮುರಿಯುವಂಥ ಉದ್ರೇಕ ಪರಿಸ್ಥಿತಿ ಇತ್ತು; ದೊಡ್ಡ ಚಳವಳಿ ಕೂಡ

ಇತ್ತು. ಶ್ರೀಗೋಪಾಲಗೌಡರು ದಿಟ್ಟ ನಿಲುಮೆಯನ್ನು ತಾಳಿ, ದಿಟ್ಟ ಹೆಜ್ಜೆಯನ್ನು ಇಟ್ಟು ಕರ್ನಾಟಕವಾಗುವುದಕ್ಕೆ ಬಹಳವಾಗಿ ಶ್ರಮಿಸಿದವರು. ಮೈಸೂರು ವಿಶಾಲ ಮೈಸೂರಾದ ಮೇಲೆಯೂ ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಡಬೇಕು ಎಂದು ಎಲ್ಲ ಸಂದರ್ಭಗಳಲ್ಲಿಯೂ ಕೂಡ, ರಾಜ್ಯದ ಹೆಸರನ್ನು ಬದಲಾವಣೆ ಮಾಡುವುದಕ್ಕೆ ತಮ್ಮ ಶಕ್ತಿ ಮೀರಿ ದುಡಿದಿದ್ದಾರೆ. ಈ ಸಭಾಂಗಣದಲ್ಲಿ ಮಹಾತ್ಮಾಗಾಂಧಿ, ಜವಹರಲಾಲ ನೆಹರೂ, ರಾಜೇಂದ್ರ ಪ್ರಸಾದ್, ಡಾಕ್ಟರ್ ರಾಧಾಕೃಷ್ಣನ್ ಮತ್ತು ವಲ್ಲಭಾಯಿ ಪಟೇಲ್ ಅವರ ಭಾವಚಿತ್ರಗಳಿವೆ. ಮೈಸೂರಿನವರದು ಯಾವ ಭಾವಚಿತ್ರಗಳೂ ಇಲ್ಲ. ಮೈಸೂರಿಗಾಗಿ ದುಡಿದವರು ಯಾರೂ ಕೂಡ ಇಲ್ಲವೇ ಎನ್ನುವ ಅನುಮಾನ ಉಂಟಾಗುತ್ತಿದೆ. ಶ್ರೀಗೋಪಾಲಗೌಡರು ನಮ್ಮ ರಾಜ್ಯಕ್ಕಾಗಿ ಹೆಚ್ಚಾಗಿ ದುಡಿದವರು ಮತ್ತು ಕರ್ನಾಟಕವಾಗಬೇಕು ಎನ್ನುವ ವಿಚಾರದಲ್ಲಿ ಹೋರಾಟ ಮಾಡಿದವರು. ಅವರು ಸಮಾಜವಾದಿ ಧುರೀಣರಾಗಿದ್ದವರು. ಅಂಥವರ ಭಾವಚಿತ್ರವನ್ನು ಈ ಸಭಾಂಗಣದಲ್ಲಿ ಇಡುವುದಕ್ಕೆ ಸರ್ಕಾರ ತಕ್ಷಣ ಕ್ರಮತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡಿ ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

## ಕ್ಷಾಮ ಪರಿಸ್ಥಿತಿಯತ್ತ ಸಿ.ಬಿ. ನೋಟ 18-7-1972

ವಿಧಾನಸಭೆಯಲ್ಲಿ ಬರ ಪರಿಸ್ಥಿತಿ ಬಂದಾಗಲೆಲ್ಲ ಬೈರೇಗೌಡರು ಕೋಲಾರ ಜಿಲ್ಲೆಯ ಪ್ರಸ್ತಾಪ ಮಾಡುತ್ತಿದ್ದರು. ಕ್ಷಾಮ ಸ್ಥಿತಿ ಬಗ್ಗೆ ಮೊದಲು ಮಾಡಿದ ಭಾಷಣದಲ್ಲಿ ಪರಿಸ್ಥಿತಿಯ ವಾಸ್ತವ ಚಿತ್ರಣ ನೀಡಿ ಕುಡಿಯುವ ನೀರು ವಿದ್ಯುತ್ ಪರಿಸ್ಥಿತಿ ರೈತರ ಸಂಕಷ್ಟಗಳನ್ನು ವಿವರಿಸಿದ್ದಾರೆ.

ಶ್ರೀ ಸಿ. ಬೈರೇಗೌಡ (ವೇಮಗಲ್) - ಸನ್ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ಮೊಟ್ಟಮೊದಲನೆಯದಾಗಿ ವಂದಿಸುತ್ತಾ ಕೋಲಾರ ಜಿಲ್ಲೆಯ ಕ್ಷಾಮ ಪರಿಸ್ಥಿತಿಯನ್ನು ಸರಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಮೈಸೂರು ರಾಜ್ಯದಲ್ಲಿ ಕ್ಷಾಮ ಯಾವಾಗಲೂ ಕೆಲವು ಭಾಗಗಳಲ್ಲಿ ಬರುವುದು. ಕೋಲಾರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಪ್ರತಿವರ್ಷವೂ ಬರುವುದು. ಇದೇನೂ ನಮಗೆ ಹೊಸದಲ್ಲ. ಅಲ್ಲಿ ಜನರಿಗೆ ಆಹಾರ ಮತ್ತು ನೀರಿಗೆ ಕ್ಷಾಮ ಬರುವುದಲ್ಲದೆ ದನಕರುಗಳಿಗೆ ಸಹ ಮೇವು ಮತ್ತು ನೀರು ದೊರೆಯದೆ ತೊಂದರೆಯಾಗುವುದು. ಇದಕ್ಕೆ ಸರಿಯಾದ ಪರಿಹಾರ ಇನ್ನೂ ದೊರಕಿಲ್ಲ. ಹೀಗಿದ್ದರೂ ಕಳೆದ 25 ವರ್ಷಗಳಿಂದಲೂ ಕೂಡ ಸರಕಾರ ಕೋಲಾರ ಜಿಲ್ಲೆಗೆ ಶಾಶ್ವತವಾದ ಪರಿಹಾರ ಒದಗಿಸಿಲ್ಲ. ಇಂದು ಆ ಜಿಲ್ಲೆಯಲ್ಲಿ ಕಡಲೆಕಾಯಿ, ರಾಗಿ ಅಥವಾ ಭತ್ತ ಯಾವುದೂ ಕೂಡ ಬಿತ್ತನೆ ಮಾಡಿಲ್ಲ. ವ್ಯವಸಾಯ ಇಲಾಖೆಯು ತಿಳಿಸುವಂತೆ ಈಗ ಯಾವ ಬೆಳೆ ಇಡುವುದಕ್ಕೂ ಕಾಲ ಮಿಂಚಿ ಹೋಗಿದೆ. ಇದುವರೆಗೆ ಭೂಮಿಯಲ್ಲಿ ಒಂದು ಕಾಳನ್ನೂ ಕೂಡ ಬಿತ್ತದಿರುವುದರಿಂದ ಬೆಳೆ ಬರುವಂತಿಲ್ಲ. ಸರಕಾರದ ಮನೋಭಾವ ನೋಡಿದರೆ ಮನೆಗೆ ಬೆಂಕಿ ಬಿದ್ದಾಗ ಬಾವಿ ತೆಗೆಯುವಂತಿದೆ. ಈ ಮನೋಭಾವವನ್ನು ಈಗ ಬಂದಿರುವ ಹೊಸ ಸರಕಾರವಾದರೂ ಬಿಟ್ಟು

ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುತ್ತಿರುವ ಜಿಲ್ಲೆಗಳಿಗೆ ಅಂಕಿ-ಅಂಶ ತೆಗೆದುಕೊಂಡು ಯಾವ ವರ್ಷ ಮಳೆಬೆಳೆ ಆಗಿಲ್ಲ, ಆಗಾಗ್ಯೆ ಕ್ಷಾಮ ಎಲ್ಲಿ ಬರುವುದು ಎಂದು ನೋಡಿ ಕ್ಷಾಮ ನಿವಾರಣೆಗೆ ಸೂಕ್ತ ಪರಿಹಾರ ಒದಗಿಸಲು ವ್ಯವಸ್ಥೆ ಮಾಡಬೇಕು. ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕು. ಅದಕ್ಕೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ.

ಆಂಧ್ರಪ್ರದೇಶದಲ್ಲಿ ರಾಯಲ್‌ಸೀಮೆ ಡೆವಲಪ್‌ಮೆಂಟ್ ಬೋರ್ಡ್ ಎಂದು ಒಂದು ಸ್ಟ್ಯಾಚ್ಯುಟರಿ ಬಾಡಿ ಮಾಡಿ ಅದು ಕೆಲಸ ಮಾಡುತ್ತಿದೆ. ಹಿಂದಿನ ಕೋಲಾರ ಜಿಲ್ಲೆಯ ಸದಸ್ಯರು ಮಂಡಲಿ ಮಾಡಬೇಕೆಂದು ರಾಯಲ್‌ಸೀಮೆ ಅಭಿವೃದ್ಧಿ ಮಂಡಲಿ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಅಭಿವೃದ್ಧಿ ಸಮಿತಿ ಅಥವಾ ಮಂಡಳಿ ಮಾಡಬೇಕೆಂದು ಈ ಸಭೆಯಲ್ಲಿ ಒತ್ತಾಯ ಮಾಡಿದ್ದರು. ಆದರೆ ಇದುವರೆಗೆ ಆ ಬಗ್ಗೆ ಏನೂ ಕಾರ್ಯಕ್ರಮ ಕೈಕೊಂಡಿಲ್ಲ. ಯಾವ ಜಿಲ್ಲೆ ಕ್ಷಾಮಕ್ಕೊಳಗಾಗುವುದೋ ಅದಕ್ಕೆ ರಾಯಲ್ ಸೀಮೆ ಅಭಿವೃದ್ಧಿ ಮಂಡಲಿ ರೀತಿಯಲ್ಲಿ ಒಂದು ಸಮಿತಿ ಮಾಡಿ ಅದರ ಮೂಲಕ ಕ್ಷಾಮ ನಿವಾರಣೆ ಮಾಡಲು ಏನು ಕೆಲಸವಾಗಬೇಕೋ ಅದನ್ನು ತೀವ್ರವಾಗಿ ಸರಕಾರ ಅತ್ಯವಶ್ಯಕವಾಗಿ ಮಾಡಿಸಬೇಕು ಎಂದು ಸೂಚನೆ ಮಾಡುತ್ತೇನೆ. ಇಂದು ಕುಡಿಯುವ ನೀರಿಗೆ ಕೋಲಾರ ತಾಲ್ಲೂಕು ಮತ್ತಿತರ ಕಡೆಗಳಲ್ಲಿ ತೊಂದರೆಯಾಗಿದೆ. ದನಕರುಗಳಿಗೆ ಸಹ ಕುಡಿಯಲು ನೀಡಿಲ್ಲ. ತಕ್ಷಣ ನೀರನ್ನೊದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡಿ ಇರುವ ಕಷ್ಟ ಪರಿಹಾರ ಮಾಡಬೇಕು. ಈಗ ಈ ಸಂಬಂಧದಲ್ಲಿ ಒಂದು ನಯಾಪೈಸೆ ಕೂಡ ಖರ್ಚು ಮಾಡಬಾರದು ಎಂದು ತಿಳಿಸಿರುವುದರಿಂದ ಹಣವಿದ್ದರೂ ಕೂಡ ಖರ್ಚು ಮಾಡಲು ಅಧಿಕಾರವಿಲ್ಲ. ಆದುದರಿಂದ ಈಗ ಮಾಡಿರುವ ಆರ್ಡರನ್ನು ವಾಪಸ್ಸು ಪಡೆದು ಅತ್ಯವಶ್ಯಕವಾಗಿ ಆಗಬೇಕಾಗಿರುವ ಕೆಲಸಗಳನ್ನು ಮಾಡಿ ಅನುಕೂಲ ಮಾಡಿಕೊಡಬೇಕು. ಕೋಲಾರ ತಾಲ್ಲೂಕಿನಲ್ಲಿ ಪಾಲಾರ್ ನದಿ ಹರಿಯುವುದು. ಭೂಮಿಯಲ್ಲಿ ಸಾಕಷ್ಟು ಅಂಡರ್‌ಗ್ರೌಂಡ್ ವಾಟರ್ ಇದೆ. ನದಿ ತೀರದಲ್ಲಿ ಬಾವಿಗಳಿವೆ. ಅಲ್ಲಿ ಸಾಕಷ್ಟು ನೀರಿದೆಯೆಂದು ವೈಜ್ಞಾನಿಕವಾಗಿ ಗೊತ್ತಾಗಿದೆ. ಆದುದರಿಂದ ಬೋರ್‌ವೆಲ್ಸ್ ಅಥವಾ ಓಪನ್‌ವೆಲ್ಸ್ ನದಿ ಬೆಡ್‌ನಲ್ಲಿ ತೆಗೆದು ಸಾವಿರಾರು ಎಕರೆಗೆ ನೀರು ಸರಬರಾಜು ಮಾಡಬಹುದು. ಇದಕ್ಕೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಮುಖ್ಯವಾಗಿ ನಮ್ಮ ಜಿಲ್ಲೆ ರೇಷ್ಮೆಗೆ ಪ್ರಸಿದ್ಧವಾಗಿದೆ. ಎಷ್ಟು ಒತ್ತಾಯ ಮಾಡಿದರೂ ಕೂಡ ಇದುವರೆಗೆ ಉತ್ತಮವಾದ ತಳಿ ಒದಗಿಸಿಲ್ಲ. ಅಭಾವ ಪರಿಸ್ಥಿತಿ ಇರುವಾಗ ರೇಷ್ಮೆ ಅಭಿವೃದ್ಧಿಗೆ ಅವಕಾಶ ಮಾಡಿದರೆ ಅನುಕೂಲವಾಗುವುದು. ಆದುದರಿಂದ ರೇಷ್ಮೆ ಬೆಳೆಗೆ ತಕ್ಕ ಅನುಕೂಲ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿ ಅವಕಾಶವಿತ್ತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಶ್ರೀಮಾನ್ ಪುಟ್ಟಸ್ವಾಮಿಯವರು ಏನೂ ಆತಂಕಪಡಬೇಕಾಗಿಲ್ಲ ನಾನು ತಂದಿರುವ ಪ್ಯಾಕೆಟ್‌ನಲ್ಲಿ ಏನು ಇದೆ ಎಂದರೆ ಕರ್ನಾಟಕ ಎಂದು ಹೆಸರಿಡಲು ಮುಖ್ಯ ಕಾರಣರಾದ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಅಧ್ಯಕ್ಷರಿಗೂ ಅರ್ಪಿಸಲು ತಂದಿರುವ ಶ್ರೀಗಂಧದ ಹಾರಗಳು ಇವೆ. ಈ ಹಾರವನ್ನು ಕರ್ನಾಟಕ $3^1/_2$ ಕೋಟಿ ಕನ್ನಡಿಗರ ಪರವಾಗಿ ಅವರಿಗೆ ಹಾಕುತ್ತೇನೆ.

(ಶ್ರೀಗಂಧದ ಹಾರವನ್ನು ಮುಖ್ಯಮಂತ್ರಿಗಳಿಗೂ ಮತ್ತು ಅಧ್ಯಕ್ಷರಿಗೂ ಅರ್ಪಿಸಿದರು)

**Sri K. PUTTASWAMY :** Even now, I record a protest against this sort of thing taking place in this House.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್ : ಪ್ರಾಣ ಹೋಗತಕ್ಕಂಥ ಸನ್ನಿವೇಶವನ್ನು ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. ಈ ನಾಟಕ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರಿಗೆ ಈ ರೀತಿ ಮಾಡಬೇಡಿ ಎಂದು ಹೇಳಿದರೂ ಪುನಃ ಹಾಗೆ ಮಾಡುತ್ತಿದ್ದಾರೆ. ಅವರಿಗೆ ಹೇಳಿದರೆ ಕೋಪ ಬರುತ್ತದೆ. ಈ ರೀತಿ ಈ ಸಭೆಯ ಕಾಲವನ್ನು ಕಳೆದು ಹೀಗೆ ಮಾಡುವುದು ಸರಿಯಲ್ಲ.

## ವಿಧಾನಸಭೆಯಲ್ಲಿ ಕತ್ತಾಳೆಗಡ್ಡೆ ಪ್ರದರ್ಶನ 26-7-1972

ಶ್ರೀ ಸಿ. ಬೈರೇಗೌಡ : ನಮ್ಮ ಪ್ರದೇಶದಲ್ಲಿ ಮಳೆ ಬೆಳೆ ಇಲ್ಲದೆ ತಿನ್ನುವುದಕ್ಕೂ ಕೂಡ ಆಹಾರ ಇಲ್ಲದೆ ಕತ್ತಾಳೆ ಗೆಡ್ಡೆಯನ್ನು ತಿನ್ನುತ್ತಿದ್ದಾರೆ. ಈ ದಿವಸ ಕರ್ನಾಟಕ ಅಂತ ಹೆಸರಿಟ್ಟಿರುವುದು ಸಂತೋಷ. ಆದರೆ ಈ ರೀತಿ ಗೆಡ್ಡೆಯನ್ನು ತಿನ್ನುತ್ತಿದ್ದಾರೆ. (ಗೆಡ್ಡೆಯನ್ನು ಸಭೆಯ ಮುಂದೆ ತೋರಿಸಿದರು)

ಅಧ್ಯಕ್ಷರು : ಈ ರೀತಿಯಾದ ಪ್ಯಾಕೆಟ್ ಮತ್ತು ಇತರ ಪದಾರ್ಥಗಳನ್ನು ಈ ಸಭೆಗೆ ತರಬೇಡಿ. ಹೊರಗಡೆಗೆ ತೆಗೆದುಕೊಂಡು ಹೋಗಿ. ಇನ್ನು ಮೇಲೆ ಯಾರೂ ಇಂತಹ ಸಾಮಾನುಗಳನ್ನು ಹೌಸ್ ಒಳಗೆ ತರಕೂಡದು ಎಂದು ನಾನು ಆರ್ಡರ್ ಮಾಡುತ್ತೇನೆ. ತಂದರೆ ಅವರನ್ನು ಹೊರಗಡೆಯೇ ತಡೆಯಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ನಾನು ನಿನ್ನೆ ಬಹಳ ಮುಖ್ಯವಾದ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ. ಆದರೆ ನಿನ್ನೆಯ ದಿವಸ ಈ ಸಭೆಯಲ್ಲಿ ಸಿಹಿಯನ್ನು ಹಂಚುವುದು, ಹೂವಿನ ಹಾರವನ್ನು ಹಾಕುವುದು, ಇವುಗಳಲ್ಲಿ ಎಲ್ಲರೂ ಮಗ್ನರಾಗಿದ್ದರು. ಆದ್ದರಿಂದ ನಾನು ನನ್ನ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅಧ್ಯಕ್ಷರು ನನಗೆ ಅವಕಾಶವನ್ನು ಕೊಡಲಿಲ್ಲ. ನಮ್ಮ ಊರಿನಲ್ಲಿ ಒಂದು ತರಹ ಗೆಡ್ಡೆ ಸಿಕ್ಕುತ್ತದೆ. ಅದನ್ನು ತೋರಿಸಬೇಕಾಗಿತ್ತು. ಆದರೆ ತಾವು ನನಗೆ ಅವಕಾಶವನ್ನು ಕೊಡಲಿಲ್ಲ, ಅದರಿಂದ ನನ್ನ ಮನಸ್ಸಿಗೆ ನೋವಾಗಿದೆ.

ಅಧ್ಯಕ್ಷರು: ಅದಕ್ಕೆ ತಾವು ನೋಟೀಸ್ ಕೊಟ್ಟಿದ್ದೀರಾ ?

ಶ್ರೀ ಸಿ. ಬೈರೇಗೌಡ : ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿ ಇರತಕ್ಕಂಥಾ ಪರಿಸ್ಥಿತಿಯನ್ನು ಈ ಸಭೆಯ ಹಾಗೂ ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೆ. ಆ ವಿಷಯ ಫೋಟೋ ಸಮೇತ ಪತ್ರಿಕೆಯಲ್ಲಿ ಬರಲಿ ಎನ್ನುವ ಉದ್ದೇಶದಿಂದ ನಾನು ಅದನ್ನು ಹೇಳಲಿಲ್ಲ. ಆದರೆ ತಾವು ನನ್ನ ಸ್ವಲ್ಪ ಲಘುವಾಗಿ ಕಂಡಿರಿ.

ಅಧ್ಯಕ್ಷರು: ತಾವು ನಿನ್ನೆ ದಿವಸ ಯಾರ ಅಪ್ಪಣೆಯನ್ನು ಕೇಳಿ ಅದನ್ನು ಈ ಸಭೆಗೆ ತೆಗೆದುಕೊಂಡು ಬಂದಿರಿ? ಇನ್ನು ಯಾವುದೇ ಸಾಮಾನು ಈ ಸಭೆಗೆ ತರುವುದಕ್ಕೆ ಅವಕಾಶ ಇಲ್ಲ. ಅಂಥಾದ್ದೇನಾದರೂ ಯಾರಾದರೂ ಮಾನ್ಯ ಸದಸ್ಯರು ತಂದರೆ ಅವರು ಈ ಸಭೆಯ ಹೊರಗಡೆಯೇ ಇರಬೇಕಾಗುತ್ತದೆ. ನಿನ್ನೆ ದಿವಸ ತಾವು ಈ ಸಭೆಯಲ್ಲಿ ನಾಟಕ ಆಗುತ್ತಿದೆ ಎಂದು ಹೇಳಿದಿರಿ, ತಾವು ಬಹಳ ದೂರ ಹೋಗಿ ಮಾತನಾಡಿದ್ದೀರಿ.

ತಾವು ಈ ಸಭೆಗೆ ಇನ್ನೂ ಹೊಸ ಸದಸ್ಯರು. ತಾವು ಕಲಿತುಕೊಳ್ಳಬೇಕಾದದ್ದು ಬಹಳ ಇದೆ.

ಶ್ರೀ ಸಿ. ಬೈರೇಗೌಡ : ನಾವು ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ತಿಳಿಸಿದರೆ ಬಹಳ ಸಂತೋಷ. ನಿನ್ನೆಯ ದಿವಸ ನನಗೆ ತಾವು ಅವಕಾಶ ಕೊಡದಿದ್ದುದು ನನ್ನ ಮನಸ್ಸಿಗೆ ಬಹಳ ನೋವನ್ನುಂಟು ಮಾಡಿದೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಮಳೆ ಆಗಿಲ್ಲ. ಬೀಜವನ್ನು ಬಿತ್ತಿಲ್ಲ. ಅಲ್ಲಿನ ಜನಗಳಿಗೆ ತುಂಬಾ ತೊಂದರೆಯಾಗಿದೆ.

ಅಧ್ಯಕ್ಷರು : ಈಗ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳು ಹಾಗೂ ಆಹಾರ ಶಾಖೆಯ ಮಂತ್ರಿಗಳೂ ಇಲ್ಲ.

ಶ್ರೀ ಎಚ್.ಎಂ. ಚನ್ನಬಸಪ್ಪ - ನಿಮಗೆಷ್ಟು ತೀವ್ರತೆಯಿದೆಯೋ ಅಷ್ಟೇ ತೀವ್ರತೆ ಸರಕಾರಕ್ಕೂ ಇದೆ. ಜನರು ಕೆಲವು ಕಡೆ ಬಹಳ ಕಷ್ಟಪಡುತ್ತಿದ್ದಾರೆಂದು ತಿಳಿದು ಮಾನವೀಯತೆ ದೃಷ್ಟಿಯಿಂದ ಜನರಿಗೆ ಕೆಲಸ ದೊರೆಯುವಂಥ ಕೆಲಸಗಳನ್ನು ಪ್ರಾರಂಭಿಸುವಂತೆ ಅಧಿಕಾರಿಗಳಿಗೆ ಹುಕುಂ ಮಾಡಿದ್ದೇವೆ. ಸಾಯಂಕಾಲ ಬೇಕಾದರೆ ಮಾನ್ಯ ಸದಸ್ಯರಿಗೆ ಅದರ ಕಾಪಿ ಕೊಡುತ್ತೇನೆ. ಅವರು ಜೊತೆಯಲ್ಲೇ ತೆಗೆದುಕೊಂಡು ಹೋಗಬಹುದು. ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಎಷ್ಟು ಜನಕ್ಕೆ ಕೆಲಸ ಬೇಕೋ ಅಷ್ಟು ಜನರಿಗೂ ಕೆಲಸ ಕೊಡಲು ವ್ಯವಸ್ಥೆ ಮಾಡಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯಮಂತ್ರಿಗಳು ಹೇಳಿದ್ದನ್ನು ಕೇಳಿ ಬಹಳ ಸಂತೋಷವಾಯಿತು. ಬೆಂಕಿ ಬಿದ್ದಾಗ ಬಾವಿ ತೋಡುವ ಕೆಲಸ ನಡೆಯುತ್ತಿದೆ, ಇದು ಸರಿಯಲ್ಲ. ಜನತೆಗೆ ಶಾಶ್ವತವಾದ ಪರಿಹಾರ ದೊರೆಯುವಂಥ ಕಾರ್ಯಕ್ರಮ ಕೈಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

## ಕುಡಿಯಲು ನೀರಿಲ್ಲ! 31-7-72

ಶ್ರೀ ಸಿ.ಬೈರೇಗೌಡ (ವೇಮಗಲ್) : ಈಗ ಕೆಲವು ಮಾನ್ಯ ಸದಸ್ಯರು ಬರಗಾಲದ ಬಗ್ಗೆ ಹೇಳಿದ್ದಾರೆ. ಅದೇ ರೀತಿ ಕೋಲಾರದಲ್ಲಿ ನಿನ್ನೆ ಒಂದು ಗ್ರಾಮದಲ್ಲಿ ಹೋದಾಗ ಜನರು ತಿನ್ನುವುದಕ್ಕೆ ಆಹಾರವಿಲ್ಲದೆ ಕುಡಿಯುವುದಕ್ಕೆ ನೀರಿಲ್ಲದೆ ತೊಂದರೆ ಪಡುತ್ತಿದ್ದುದನ್ನು ನೋಡಿದ್ದೇನೆ. ಅದಲ್ಲದೆ ಅವರು ನೀರಿಗಾಗಿ ಒಂದೆರಡು ಮೈಲು ನಡೆದುಕೊಂಡು ಹೋಗಿ ತರಬೇಕಾಗಿದೆ. ಅದೇ ರೀತಿ ಅಲ್ಲಿ ರಾಗಿ, ಭತ್ತವನ್ನು ಬೆಳೆಯುವುದಕ್ಕೆ ಮಳೆಯಿಲ್ಲದೆ ಸಾಧ್ಯವಾಗಿಲ್ಲ. ಕೋಲಾರ ಜಿಲ್ಲೆಯಲ್ಲಿ ಅಗಿಂದಾಗ್ಗೆ ಈ ಪರಿಸ್ಥಿತಿ ಉಂಟಾಗುತ್ತದೆ. ರಾಯಲ್ ಸೀಮೆಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಏನೊಂದು ಯೋಜನೆಯನ್ನು ಆಂಧ್ರ ಸರ್ಕಾರದವರು ಹಾಕಿಕೊಂಡು ಅದೇ ರೀತಿಯಲ್ಲಿ ಕೋಲಾರ ಮತ್ತು ಚಿತ್ರದುರ್ಗ ಕಡೆಗಳಲ್ಲಿ ಒಂದು ಶಾಶ್ವತವಾದ ರೀತಿಯಲ್ಲಿ ಪರಿಹಾರ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಹೀಗೆ ಬಿಟ್ಟರೆ ಪರಿಸ್ಥಿತಿ ಉಲ್ಬಣಗೊಳ್ಳುತ್ತದೆ. ಅದೇ ರೀತಿಯಲ್ಲಿ ತಾಲ್ಲೂಕುಗಳಲ್ಲಿ ಈ ಪರಿಸ್ಥಿತಿ ಬರುವಾಗ ಖರ್ಚು ಮಾಡುವುದಕ್ಕೆ ಸಹ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಸರ್ಕಾರದವರು ಇದನ್ನು ಬಹಳ ತೀವ್ರವಾಗಿ ಆಲೋಚನೆ ಮಾಡಿ ಒಂದು ಪರಿಹಾರವನ್ನು ಕಂಡು ಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಇದರ ಬಗ್ಗೆ ನಾನು ರೂಲ್ 50ರ ಪ್ರಕಾರ ಒಂದು ಮೋಷನ್ ಕಳಿಸಿದ್ದೇನೆ. ಅದನ್ನು ಸಹ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

## ಜಿಲ್ಲೆಯಲ್ಲೂ ಸಮಿತಿ ಪ್ರವಾಸಕ್ಕೆ ಆಗ್ರಹ 18-11-72

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ತಂದಿರತಕ್ಕಂಥ ಒಂದು ಸೂಚನೆಗೆ ನಾನು ಒಂದು ಸಲಹೆ ಮಾಡುತ್ತೇನೆ.

**ಅಧ್ಯಕ್ಷರು** - ನಿಮ್ಮಲ್ಲಿ ಲೀಡರನ್ನು ಕನ್‌ಸಲ್ಟ್ ಮಾಡಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ಈ ವಿಷಯದಲ್ಲಿ ಕೆಲವು ಜಿಲ್ಲೆಗಳನ್ನು ಈ ಪಟ್ಟಿಯಲ್ಲಿ ಸೇರಿಸಿದ್ದೀರಿ. ಅದರಲ್ಲಿ ಕೋಲಾರದ ಹೆಸರು ಕೊಟ್ಟಿಲ್ಲ. ಕೋಲಾರ ಜಿಲ್ಲೆ ಕೆಲವು ದಿನಗಳ ಹಿಂದೆ ಮಳೆ ಇಲ್ಲದೆ ಬಹಳ ಕಷ್ಟ ಪರಿಸ್ಥಿತಿಯಲ್ಲಿತ್ತು. ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಕೆಲವು ದಿನಗಳ ಹಿಂದೆ ಆ ಜಿಲ್ಲೆಯಲ್ಲಿ ಬೇಕಾದಷ್ಟು ಅನಾಹುತವಾಗಿವೆ. ಅಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ. ಅನೇಕ ಗ್ರಾಮಗಳಲ್ಲಿ ಇವೊತ್ತಿಗೆ ತೊಂದರೆ ಇದೆ. ಮಳೆ ಬಿದ್ದಿರಬಹುದು, ಕಾಲುವೆಗಳಲ್ಲಿ ನೀರು ಇರಬಹುದು. ಕೆಲವು ದಿವಸಗಳು ಮಾತ್ರ ಇರುತ್ತದೆ. ಕೆಲವು ದಿವಸಗಳು ಮಳೆ ಇಲ್ಲದೆ ಹೋದರೆ ದನಕ್ಕೂ, ಜನಕ್ಕೂ ನೀರಿಗೆ ತೊಂದರೆಯಾಗುತ್ತದೆ, ಬೆಳೆ ನಷ್ಟವಾಗುತ್ತದೆ.

ವಿರೋಧಪಕ್ಷದ ನಾಯಕರು ಸೂಚನೆ ಮಾಡಿರುವಂತೆ ಕೋಲಾರ ಜಿಲ್ಲೆಯಲ್ಲಿಯೂ ಪ್ರವಾಸ ಮಾಡಿ ಸಮಿತಿ ವರದಿಯಲ್ಲಿ ಸೇರಿಸಬೇಕು ಎಂದು ಸಭೆಯ ಮುಂದೆ ಸೂಚನೆ ಇಡುತ್ತೇನೆ.

ಅಧ್ಯಕ್ಷರು: ಕೋಲಾರ ಜಿಲ್ಲೆ ಬಳ್ಳಾರಿ, ಮೈಸೂರು, ಗುಂಡ್ಲುಪೇಟೆ ಎಲ್ಲಾ ಕಡೆಗೂ ಹೋಗಬೇಕು ಎಂದರೆ ಕಷ್ಟವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ : ಶ್ರೀಮಾನ್ ದೇವೇಗೌಡರು ಏನು ಹೇಳಿದ್ದಾರೆ ಎಂಬುದನ್ನು ನೋಡಿ. ನಾವು ಇಡೀ ರಾಜ್ಯದಲ್ಲಿ ಸಂಚಾರ ಮಾಡಿ ಬಂದು ವರದಿ ಮಾಡಬೇಕು ಎಂದು ....... ಮಾಡಿಕೊಂಡರೆ We will be nowhere. ತಮಗೆಲ್ಲಾ ಗೊತ್ತಿದೆ. ನಮಗೆ ಬರಗಾಲ ಪರಿಸ್ಥಿತಿ ಎದುರಿಸುವುದಕ್ಕೆ ಕೇಂದ್ರದಿಂದ ಹಣ ಬರಬೇಕಾದುದು ಇದೆ. ಕೇಂದ್ರದವರು ಹಣ ಕೊಡಬೇಕಾದರೂ ನಾವು ಕೇಳಿದ ತಕ್ಷಣ ಕೊಡುವುದಿಲ್ಲ. ಅವರು ಬಂದು ನೋಡುತ್ತಾರೆ. ತಮಗೆ ಈಗಾಗಲೇ ಗೊತ್ತಿದೆ ಒಂದು ಟೀಮ್ ಬಂದು ನೋಡಿಕೊಂಡು ಹೋಗಿದ್ದಾರೆ. ಬಹುಶಃ ಇದನ್ನು ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿದ್ದೇವೆ. ಇನ್ನೊಂದು ಸಾರಿ ಬರುವವರು ಇದ್ದಾರೆ. ಆದುದರಿಂದ ನಿಮ್ಮ ಕೈಯ್ಯಲ್ಲೇ ಇದೆ, ನಾವು ಏನು ಬೇಕಾದರೂ ಹೇಳಬಹುದು ಎಂದು ಹೇಳುವುದಕ್ಕೆ ಹೊರ.....ಅದನ್ನು ಇತರರು ಒಪ್ಪಬೇಕು. ಇದನ್ನು ದಯಮಾಡಿ ಮಾನ್ಯ ಸದಸ್ಯರು ತಿಳಿದುಕೊಂಡರೆ ಒಳ್ಳೆಯದು. ಇನ್ನೊಂದು ಈಗ ಯಾರಿಗೆ ಬಹಳ ಕಷ್ಟ ಇದೆ ಅವರ ಕಷ್ಟ ಮೊದಲು ನೋಡಬೇಕು. .......... ಎಲ್ಲಾ ಕಡೆ ಮಾಡುತ್ತೇವೆ ಎಂದರೆ ನಮ್ಮ ಎಫೆಕ್ಟ್ಸ್ ಡೈಲ್ಯೂಟ್ ಆಗುತ್ತದೆ. ಅದನ್ನು ಕೂಡ ದಯವಿಟ್ಟು ಯೋಚನೆ ಮಾಡಬೇಕು. ನಿಜವಾಗಿ ಬಹಳ ಕಷ್ಟ ಎಲ್ಲಿ ಇರತಕ್ಕದ್ದು ಎಂಬುದು ನಿಮಗೆ ಗೊತ್ತಾಗುತ್ತದೆ. ನಾವು ಸರ್ಕಾರದವರು ಎಲ್ಲಾ ಮಾಹಿತಿ ತರಿಸಿಕೊಂಡು ಎಲ್ಲೆಲ್ಲಿ ಇದೆ ಎನ್ನುವುದನ್ನು ತಿಳಿದುಕೊಳ್ಳುವುದು ನಮ್ಮ ಜವಾಬ್ದಾರಿ ಇದ್ದೇ ಇದೆ. ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಅದನ್ನು ತಾವು ಒಪ್ಪಬೇಕು.

ಶ್ರೀ ಸಿ. ಬೈರೇಗೌಡ (ವೇಮಗಲ್) - ಸನ್ಮಾನ್ಯ ಅಧ್ಯಕ್ಷರೇ, ಈ ಸದನದ ಮಾನ್ಯ ಸದಸ್ಯರಾದ ಆರ್ಮುಗಂ ಅವರು ವಿವರವಾದ ಒಂದು ವರದಿಯಲ್ಲಿ ನಮ್ಮ ರಾಜ್ಯದಲ್ಲಿರುವ ಭೀಕರವಾದ ಪರಿಸ್ಥಿತಿಯ ಚಿತ್ರವನ್ನು ಕೊಟ್ಟಿದ್ದಾರೆ. ಅದಕ್ಕೆ ಮೊದಲನೆಯದಾಗಿ ನಾನು ಅವರಿಗೆ ಅಭಿನಂದಿಸಬೇಕಾದ್ದು ನನ್ನ ಕರ್ತವ್ಯ. ಸಭೆಯ ಕಾರ್ಯಕಲಾಪಗಳು ಎರಡು ಮೂರು ತಿಂಗಳ ಹಿಂದೆ ನಡೆಯುತ್ತಿರುವಾಗ ಮೊಟ್ಟ ಮೊದಲನೆಯದಾಗಿ ನಾನು ಮಾತನಾಡುತ್ತ ಇನ್ನು ಮುಂದೆ ಬರತಕ್ಕ ದಿನಗಳು ಎಷ್ಟು ಭೀಕರವಾಗಿರುತ್ತದೆ ಮತ್ತು ನಮ್ಮ ರಾಜ್ಯದಲ್ಲಿ ಪ್ರಾಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಆ ಹೊತ್ತಿನ ಪರಿಸ್ಥಿತಿ ಏನಿತ್ತು ಎನ್ನುವುದರ ಬಗ್ಗೆ ಗಮನವನ್ನು ಸೆಳೆಯುವ ದೃಷ್ಟಿಯಿಂದ ಕತ್ತಾಳೆ ಗಡ್ಡೆಯನ್ನು ಪ್ರದರ್ಶನ ಮಾಡಿದ್ದು, ತಮ್ಮೆಲ್ಲರಿಗೂ ಕೂಡ ಜ್ಞಾಪಕ ಮಾಡಿಕೊಡುತ್ತೇನೆ. ಪರಿಸ್ಥಿತಿ ಇನ್ನೂ ಭೀಕರವಾಗುತ್ತದೆ ಮತ್ತು ಬಹಳ ವಿಕೋಪಕ್ಕೆ ಹೋಗುತ್ತದೆ. ಸರ್ಕಾರ ಅದರ ಬಗ್ಗೆ ತೀವ್ರಗತಿಯಿಂದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಎಚ್ಚರಿಕೆ

ಕೊಟ್ಟಿದ್ದೆ. ಆದರೂ ಕೂಡ ಪ್ರಯೋಜನವಾಗಲಿಲ್ಲ. ಈ ಹೊತ್ತಿನ ದಿವಸ ನಮ್ಮ ರಾಜ್ಯದ 35 ಲಕ್ಷ ಜನ ಬಡತನದಿಂದ ಮತ್ತು ಹೊಟ್ಟೆಗ ಅನ್ನವಿಲ್ಲದೆ, ರೊಟ್ಟಿ ಇಲ್ಲದೆ ಬಳಲುತ್ತ ಇದ್ದಾರೆ. 12 ಲಕ್ಷ ಗೋವುಗಳು ಸಾಯುತ್ತಿರತಕ್ಕ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರತಕ್ಕ ಪಕ್ಷ, ಇಂದಿರಾ ಕಾಂಗ್ರೆಸ್ ಮತ್ತು ಸಿಂಡಿಕೇಟ್ ಕಾಂಗ್ರೆಸ್ ಎರಡೂ ಪಕ್ಷಗಳು ಅದು ತಮ್ಮ ಸ್ವಂತ ವಿಷಯವೆಂದು ಭಾವಿಸಿ ಒಬ್ಬರು ಹೇಳಿಕೆಯನ್ನು ಕೊಟ್ಟರೆ ಇನ್ನೊಬ್ಬರು ಇನ್ನೊಂದು ಹೇಳಿಕೆಯನ್ನು ಕೊಡುತ್ತ ಇದ್ದಾರೆ. ನಮ್ಮ ರಾಜ್ಯದಲ್ಲಿ ಈಗಿನ ದುಸ್ಥಿತಿ ಬರಲು ಕಾರಣವೇನೆಂದರೆ 25 ವರ್ಷದಿಂದ ನಮ್ಮ ರಾಜ್ಯ ದುರದೃಷ್ಟದಿಂದ ಯಾರ ಕೈಯಲ್ಲಿ ಅಧಿಕಾರ ಇರಬೇಕಾಗಿತ್ತೋ ಅವರ ಕೈಯಲ್ಲಿ ಅಧಿಕಾರವಿಲ್ಲದೆ ಕಾಂಗ್ರೆಸ್ಸಿನ ಪ್ರಭಾವದಿಂದ ಅವರ ಡಿಫೆಕ್ಟಿವ್ ಪ್ಲಾನಿಂಗ್‌ನಿಂದ 25 ವರ್ಷವಾದರೂ ಕೂಡ ಈ ಭಾಗದ ಜನರಿಗೆ ನೇರವಾದ ಸೌಕರ್ಯವನ್ನು ಒದಗಿಸುವುದಾಗಲೀ ಕ್ಷಾಮಕ್ಕೆ ತುತ್ತಾಗಿರತಕ್ಕ ಜಿಲ್ಲೆಗಳಲ್ಲಿ ಕ್ಷಾಮ ಬರದಂತೆ ಮಾಡುವುದಕ್ಕಾಗಲೀ ಆಗಿಲ್ಲ ಎಂದು ಹೇಳಬೇಕಾಗಿದೆ.

ಮಾನ್ಯ ಸದಸ್ಯರಾದ ಆರ್ಮುಗಂ ಅವರು ತಮ್ಮ ವರದಿಯ 90ನೇ ಪುಟದಲ್ಲಿ ಫೈನಾನ್ಸ್ ಬಗ್ಗೆ ಬಹಳ ವಿವರವಾಗಿ ಹೇಳಿದ್ದಾರೆ. ಇದರಲ್ಲಿ ನಮ್ಮ ಸ್ಟಡಿ ಟೀಂ ಬಂದಾಗ ......... ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಕೂಡ ತಿಳಿಸಿದ್ದಾರೆಂದು ಹೇಳಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರ ಕೇವಲ 75 ಕೋಟಿ ರೂಪಾಯಿಗಳನ್ನು ಈ ರಾಜ್ಯಕ್ಕೆ ಕೊಟ್ಟಿದ್ದು ರಾಜ್ಯ ಸರ್ಕಾರ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಸಹ ಸುಮಾರು 32 ಲಕ್ಷ ಜನ ಬವಣೆಗೆ ತುತ್ತಾಗಿದ್ದರೂ ಸಹ ಕೇವಲ 5 ಪರ್ಸೆಂಟ್ ಜನರಿಗೆ ಇದರಿಂದ ಸ್ವಲ್ಪ ಅನುಕೂಲವಾಗಿದೆ ಎನ್ನುವುದನ್ನು ಸಭೆ ಮರೆಯಬಾರದು. ಉಳಿದ 95 ಪರ್ಸೆಂಟ್ ಜನರ ಗತಿ ಏನಾಗಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಜವಾಬ್ದಾರಿ ಇರತಕ್ಕ ಸರ್ಕಾರ ಇರುವಾಗ ಉಳಿದ 95 ಪರ್ಸೆಂಟ್ ಜನರಿಗೂ ಬೇಕಾಗಿರತಕ್ಕ ಸೌಕರ್ಯಗಳನ್ನು ಮಾಡಿ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರೆ, ರಾಜ್ಯದಲ್ಲಿ ಬವಣೆಗೆ ತುತ್ತಾಗಿರತಕ್ಕ ಜನಗಳಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಹಣವನ್ನು ಒದಗಿಸುವುದಕ್ಕೆ ಸರ್ಕಾರದ ಕೈಯಲ್ಲಿ ಆಗುತ್ತಿಲ್ಲ. ಆದರೆ ನಮ್ಮ ದೇಶದಲ್ಲಿರುವ ಬಂಡವಾಳಸ್ಥರಿಗೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಕೊಡುತ್ತಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಜೀವ ವಿಮಾ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡಿದಾಗ ಮೂರು ಕೋಟಿ ರೂಪಾಯಿ ಪರಿಹಾರದ್ರವ್ಯ ಕೊಡಬೇಕು ಎಂದು ನಿಗದಿ ಮಾಡಿದ್ದುದನ್ನು 38 ಕೋಟಿ ರೂಪಾಯಿ ಮಾಡಿದರು. ನಮ್ಮ ದೇಶದಲ್ಲಿ ಬಹಳ ಬಡವರಾಗಿರುವವರಿದ್ದಾರೆ. ಹಿಂದೆ ರಾಜಮಹಾರಾಜರುಗಳಾಗಿದ್ದವರಿಗೆ ಹತ್ತೂವರೆ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಹೊಟ್ಟೆ ಇಲ್ಲದೆ ಇರತಕ್ಕ ಪರಿಸ್ಥಿತಿ ಇರುವಾಗ ಇದನ್ನೆಲ್ಲ ಗಮನಿಸದೆ ಹೋದರೆ ನಾವು ಈ ಸರ್ಕಾರವನ್ನು ಯಾವ ರೀತಿ ನಂಬಿ ಕುಳಿತುಕೊಳ್ಳಬೇಕೋ ಗೊತ್ತಾಗುತ್ತಿಲ್ಲ. ನಮ್ಮ ರಾಜ್ಯದಲ್ಲಿ 32 ಲಕ್ಷ ಜನ ಬವಣೆಗೆ ತುತ್ತಾಗಿರುವುದು ಕೇವಲ 5 ಪರ್ಸೆಂಟ್ ಜನರಿಗೆ ಸಹಾಯವನ್ನು ಒದಗಿಸುವುದು ಸರಿಯೇ ಎನ್ನುವ ಪ್ರಶ್ನೆ ಬರುತ್ತದೆ.

ಶ್ರೀ ಸಿ. ಬೈರೇಗೌಡ (ವೇಮಗಲ್) - ಮಾನ್ಯ ಅಧ್ಯಕ್ಷರೇ, ಭಾರತದ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದ ಶ್ರೀ ಕಕ್ಕಿಲ್ಲಾಯ ಅವರು ಮಾತನಾಡುತ್ತಾ ಕಮ್ಯೂನಿಸ್ಟ್ ಮಾರ್ಕ್ಸಿಸ್ಟ್ ಪತ್ರಿಕೆ ಶ್ರೀ ಶಾಮಣ್ಣ ಅವರಿಗೆ ಒಂದು ಟೈಟಲ್ ಕೊಟ್ಟಿದೆ ಎಂದು ಹೇಳಿದರು. ಆದರೆ ನನಗೆ ಗೊತ್ತಿರುವಷ್ಟು ಮಟ್ಟಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪತ್ರಿಕೆ ಶ್ರೀ ಶಾಮಣ್ಣ ಅವರು ಕ್ರಾಂತಿಕಾರಿಗಳಲ್ಲಿ ಕ್ರಾಂತಿಕಾರಿಗಳು ಎಂದು ಹೇಳಿಲ್ಲ. ಅದನ್ನು ಮಾನ್ಯ ಸದಸ್ಯರಾದ ಕಕ್ಕಿಲ್ಲಾಯ ಅವರು ಗಮನಿಸಬೇಕು ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಕ್ರಾಂತಿಕಾರಿಗಳಲ್ಲಿ ಕ್ರಾಂತಿಕಾರಿ ಖಂಡಿತವಾಗಿಯೂ ಹೌದು ಎನ್ನುವುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸುತ್ತೇನೆ.

ಈಗ ತಂದಿರುವಂಥ ತಿದ್ದುಪಡಿ ಮಸೂದೆ ಯಾವ ಕಾರಣದಿಂದ ಕಾನೂನು ಆಗಲಿಲ್ಲ ಎನ್ನುವುದನ್ನು ವಿವರವಾಗಿ ಎಲ್ಲ ಸದಸ್ಯರೂ ಕೂಡ ತಿಳಿಸಿದ್ದಾರೆ. ಇದರಲ್ಲಿರುವ ಒಂದು ವಿಷಯದ ಬಗ್ಗೆ ಮಾತ್ರ ನಾನು ನನ್ನ ಅಸಮ್ಮತಿಯನ್ನು ಸೂಚಿಸಬೇಕೆಂದು ಇಚ್ಛಿಸುತ್ತೇನೆ. ಈ ಬಿಲ್ಲಿನಲ್ಲಿರುವ 4ನೇ ನಿಬಂಧನೆಯ ಪ್ರಕಾರ

' If the tenant pays to the landlord an amount equal to the rent due for a period of two years.' ಇದರ ಬಗ್ಗೆ ಈಗಾಗಲೇ ಶಿವಮೊಗ್ಗಾ ಜಿಲ್ಲೆಯಿಂದ ಬಂದಿರುವ ಸದಸ್ಯರು ವಿವರವಾಗಿ ಇಲ್ಲಿ ಹೇಳಿದ್ದಾರೆ. ಇದರಲ್ಲಿರುವಂತೆ ಎರಡು ವರ್ಷಗಳು ಎಂದು ಕಾಲಾವಕಾಶ ಕೊಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಇದನ್ನು ತೆಗೆದು ಇದರಲ್ಲಿರುವಂತೆ :

4. "Notwithstanding anything contained in the Principal Act, or in any decree or order of any Court or Tribunal do order for restoration of possession of any land to the landlord on the ground of default in paying rent by the tenant shall be executed." ಎಂದು ಇಷ್ಟಕ್ಕೆ ಸೀಮಿತವಾಗಿರಬೇಕೆಂದು ಒತ್ತಾಯ ಮಾಡುತ್ತೇನೆ. ಇಷ್ಟನ್ನು ಮಾಡಿದರೆ ಸರಿಯಾಗುತ್ತದೆ ಎಂದು ಹೇಳಿ ಇಲ್ಲಿ ತಂದಿರುವ ತಿದ್ದುಪಡಿಗೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಡುತ್ತೇನೆ. ಇದರ ಬಗ್ಗೆ ಮೇಲ್ಮನೆಯವರು ಹಿಂದೆ ಮಾಡಿದಂತೆ ಇದು ಪಾಸಾಗದೆ ಇರಲು ಅವಕಾಶ ಬರಬಹುದು. ಇದರ ಬಗ್ಗೆ ಸರಕಾರ ಎಚ್ಚರಿಕೆ ವಹಿಸಿ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

# ಗಡೀಪಾರು ನೋಟೀಸ್ ಖಂಡನೀಯ 20-2-73

> ರಾಜ್ಯಪಾಲರಿಗೆ ವಂದಿಸಿ ಸಲ್ಲಿಸಿದ ಸಿ.ಬೈರೆಗೌಡರು ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಸದಸ್ಯರ ಸಿಟಿ ಸಾರಿಗೆಕೊಟ್ಟಿರುವ ನೋಟನ್ನು ಖಂಡಿಸಿ ಆರೂಸರ್ ಆದ ಸರ್ಕಾರಿ ಉದ್ಯೋಗಿಗಳು ವಿರಾಮವಾಗಿ ಜಿಲ್ಲೆಯಲ್ಲಿರಬಹುದು. ಉಳುವ ರೈತರಿಗೆ ಅವಕಾಶವಿಲ್ಲವಲ್ಲ ಎಂದು ಖೇದ ವ್ಯಕ್ತಪಡಿಸಿದರು.

ಶ್ರೀ ಸಿ. ಬೈರೇಗೌಡ (ವೇಮಗಲ್) - ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದ ರಾಜ್ಯಪಾಲರು ಮಾಡಿರತಕ್ಕ ಭಾಷಣಕ್ಕೆ ವಂದನಾ ನಿರ್ಣಯವನ್ನು ವಿರೋಧ ಮಾಡಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಬಂಧುಗಳೇ, ಈಗ ಅಧಿಕಾರದಲ್ಲಿರತಕ್ಕ ಸರ್ಕಾರ ಅಧಿಕಾರಕ್ಕೆ ಬಂದು 11 ತಿಂಗಳಾಯಿತು. ಅಧಿಕಾರಕ್ಕೆ ಬರುವುದಕ್ಕೆ ಮೊದಲು ನಮ್ಮ ದೇಶದಲ್ಲಿರತಕ್ಕ ಮತ್ತು ಪ್ರಮುಖವಾಗಿ ನಮ್ಮ ರಾಜ್ಯದಲ್ಲಿರತಕ್ಕ ಜನತೆಗೆ ಬಹಳಷ್ಟು ಆಶ್ವಾಸನೆಗಳನ್ನು ಕೊಟ್ಟಿತ್ತು. ಮುಖ್ಯವಾಗಿ ಬಡತನ ನಿರ್ಮೂಲನ ಮಾಡಿ, ಸಮಾಜದಲ್ಲಿರತಕ್ಕ ವರ್ಗಗಳನ್ನು ಕಡಮೆ ಮಾಡಿ, ಎಲ್ಲರಿಗೂ ಸರಿಸಮನಾದ ಹಕ್ಕುಗಳನ್ನು, ಸರಿಸಮವಾದ ಜೀವನವನ್ನುಂಟುಮಾಡುವ ರೀತಿಯಲ್ಲಿ ಮಾಡುತ್ತೇವೆ ಎಂದು ಹೇಳಿದರು ಮತ್ತು ರಾಜ್ಯದ, ದೇಶದ ಗುತ್ತೇದಾರಿ ಬಂಡವಾಳಗಾರರ ಮೇಲೆ ಹತೋಟಿಯನ್ನು ಇಡುತ್ತೇವೆ ಎಂದು ಹೇಳಿತ್ತು. ಇನ್ನೊಂದು ತಿಂಗಳಾದ ಮೇಲೆ ಸಿಂಹಾವಲೋಕನ ಮಾಡಿ ನೋಡಿದರೆ ಈ ಆಶ್ವಾಸನೆಗಳು ಎಷ್ಟರಮಟ್ಟಿಗೆ ಕಾರ್ಯಗತವಾಗದತಕ್ಕಂಥ ಪರಿಸ್ಥಿತಿಯ ಇದೆಯೆಂದು ಗೊತ್ತಾಗುತ್ತದೆ. ಮೊಟ್ಟಮೊದಲನೆಯದಾಗಿ, ಬಡತನ ನಿರ್ಮೂಲನ ಮಾಡುವುದಕ್ಕೆ ಬದಲು ಬಡತನದ ಬವಣೆ ಎಲ್ಲೆಲ್ಲೂ ಕಾಣುತ್ತಿದೆ. ಅದಕ್ಕೆ ಪ್ರಮುಖವಾಗಿ ಏರತಕ್ಕ ಬೆಲೆಗಳು ಹಿಂದೆ ಮಾತನಾಡಿದಂಥ ಕೆಲವು ಮಿತ್ರರು ಇದರ ಬಗ್ಗೆ ಕೆಲವು ಅಂಶಗಳನ್ನು ಕೊಟ್ಟಿದ್ದಾರೆ. ನಾನು ಅಂಕಿ-ಅಂಶಗಳನ್ನು ಹೆಚ್ಚಾಗಿ ಹೇಳುವುದಕ್ಕೆ ಹೋಗದೆ, ಬೆಲೆಯ ಏರಿಕೆಯ ಬಗ್ಗೆ ಕೆಲವೇ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಬೆಲೆಯ ಏರಿಕೆಯಿಂದ ಸಾಮಾನ್ಯ ಜನಕ್ಕೆ ತೊಂದರೆಯಾಗುತ್ತದೆ. ಉತ್ಪಾದನೆ ಮಾಡತಕ್ಕ ರೈತರಿಗೆ ತೊಂದರೆಯಾಗುತ್ತದೆ ಎಂದು ನಾನು ಹೇಳಬೇಕಾಗಿದೆ. ಈಗ ತಾನೆ ಮಾತನಾಡಿದ ಮಿತ್ರರು ಅಡಿಕೆ ಬೆಲೆಯ ವಿಷಯ ಹೇಳಿದರು. ಒಂದು ಕ್ವಿಂಟಾಲ್ ಅಡಿಕೆಗೆ 625 ರೂಪಾಯಿ ಬೆಲೆ ಬಂದರೆ ಅದು ರೈತನಿಗೆ ಯೋಗ್ಯ ಬೆಲೆ ಎಂದು. ಇದಕ್ಕಿಂತ ಕಡಮೆ ಮಾರಾಟವಾದರೆ ರೈತನಿಗೆ ನಷ್ಟ, ಎನ್ನುವುದನ್ನು ನಿದರ್ಶನದ ಮೂಲಕ ಕೊಟ್ಟರು. ಅಡಿಕೆ ಬೆಲೆ 250-300 ರೂಪಾಯಿ ಒಂದು ಕ್ವಿಂಟಾಲ್ ಆಗಿರುವುದರಿಂದ ಬೆಳೆಗಾರರಿಗೆ ತೊಂದರೆಯಾಗಿದೆ. ಈ ಕೃಷಿಯಲ್ಲಿ ತೊಡಗಿರತಕ್ಕ ಕಾರ್ಮಿಕರಿಗೆ ತೊಂದರೆಯಾಗಿದೆ. ಅದೇ ರೀತಿಯಲ್ಲಿ ರಾಗಿ, ಕಳೆದ 80-85 ರೂಪಾಯಿ ಇದ್ದದ್ದು 100 ರಿಂದ 105 ರೂಪಾಯಿಗೆ ಏರಿದೆ. ಈಗ ರೈತರಲ್ಲಿ ರಾಗಿ ಇಲ್ಲ. ಎಲ್ಲಾ ವ್ಯಾಪಾರಸ್ಥರ ಕೈಯಲ್ಲಿ ಸೇರಿದ ಮೇಲೆ ರಾಗಿ ಬೆಲೆ ಜಾಸ್ತಿಯಾಗಿದೆ. ಅದೇ ರೀತಿಯಲ್ಲಿ ಕಡಲೆಕಾಯಿ ಬೆಲೆ ಒಂದು ಕ್ವಿಂಟಾಲ್‌ಗೆ 250 ರೂಪಾಯಿ ಆಗಿದೆ. ಈಗ ರೈತರಲ್ಲಿ ಕಡಲೆಕಾಯಿ ಇಲ್ಲ, ವ್ಯಾಪಾರಸ್ಥರ ಕೈಯಲ್ಲಿ ಕಡಲೆಕಾಯಿ ಇದೆ. ಈ

ವಿಷಯವನ್ನು ಸರ್ಕಾರದವರು ಗಮನಿಸದೇ ಹೋದರೆ ಬೆಲೆ ಜಾಸ್ತಿಯಾಗುತ್ತಾ ಸಾಮಾನ್ಯ ಜನರ ಜೀವನ ಕಷ್ಟವಾಗಿ, ತೊಂದರೆಗೆ ಒಳಗಾಗುತ್ತಾರೆ. ಬಡತನ ನಿರ್ಮೂಲ ಮಾಡುತ್ತೇವೆ ಎಂದು ಹೇಳಿದ ಸರ್ಕಾರದ ನೀತಿಯೇ ಇದು ? ಅದಾದ ಮೇಲೆ ಉಳುವವನಿಗೆ ಯೋಗ್ಯ ಜಮೀನು ಕೊಡುತ್ತೇವೆ, ಭೂಸುಧಾರಣೆ ಜಾರಿಗೆ ತರುತ್ತೇವೆ ಎಂದು ಹೇಳಿದರು. ಭೂಸುಧಾರಣೆ ಜಾರಿಗೆ ತರುವುದು ಒಂದು ಕಡೆ ಇರಲಿ, ಸರ್ಕಾರದ ವಶದಲ್ಲಿ ಲಕ್ಷಾಂತರ ಏಕರೆ ಜಮೀನು ಇದೆ. ಅದನ್ನು ಕೊಡಿ ಎಂದು ಹೇಳಿದರೆ, ನಾವು ಅಲ್ಲಿ ಕಾಡು ಬೆಳೆಸುತ್ತೇವೆ, ಕಾಡು ಬೆಳೆಸುವುದರ ಮೂಲಕ ದೇಶದಲ್ಲಿ ಸಂಪತ್ತನ್ನು ಉತ್ಪತ್ತಿ ಮಾಡುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಕೋಲಾರ ಜಿಲ್ಲೆಯ ಒಂದು ಉದಾಹರಣೆ ಹೇಳುವುದಾದರೆ ಇವರ ಹೇಳಿದ ಭೂರಹಿತರಿಗೆ ಭೂಮಿ ಕೊಡುತ್ತೇವೆ ಎಂಬ ಮಾತನ್ನು ನಂಬಿ, ಭೂಮಿ ಇಲ್ಲದೆ ಇರತಕ್ಕ ರೈತರು ಅಲ್ಲಿರತಕ್ಕ ಸರ್ಕಾರಿ ಜಮೀನನ್ನು ಕೊಡಿ ಎಂದು ಹತ್ತಾರು ವರ್ಷಗಳಿಂದ ಒತ್ತಾಯ ಮಾಡಿದರೂ ಕೂಡ ಸರ್ಕಾರ ಆ ಜಮೀನನ್ನು ಅವರಿಗೆ ಕೊಡಲಿಲ್ಲ. ಜಮೀನು ಇದೆ ನಾವೇ ಉತ್ಪತ್ತಿ ಮಾಡಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುತ್ತೇವೆ ಮತ್ತು ರಾಷ್ಟ್ರದ ಜನತೆಗೆ ಆಹಾರದ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ನಾವೇ ಹೋಗಿ ಸ್ವತಃ ಜಮೀನನ್ನು ಉಳುಮೆ ಮಾಡುತ್ತೇವೆಂದು ಸಾವಿರಾರು ಜನ ರೈತರು ಉಳುವುದಕ್ಕೆ ಹೋದರು. ಜಮೀನು ಕೊಡುತ್ತೇನೆಂದು ಹೇಳಿದ ಸರ್ಕಾರ ಏನು ಮಾಡಿದೆ ಎಂದರೆ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮೂಲಕ ರೈತರು ಸಂಘಟನೆ ಮಾಡಿಕೊಂಡು ಜಮೀನನ್ನು ಉಳುವುದಕ್ಕೆ ಹೋದರೆ, ಅವರನ್ನು ಜಿಲ್ಲೆಯ ಹೊರಗಡೆ ಹಾಕುವ ಹೀನ ಕೆಲಸವನ್ನು ಸರ್ಕಾರ ಮಾಡುವುದಕ್ಕೆ ಹೊರಟಿದೆ. ನಾನು ಹೆಚ್ಚಾಗಿ ಏನೂ ಕೇಳುತ್ತಾ ಇಲ್ಲ, ಜಮೀನು ಇಲ್ಲದವರಿಗೆ, ಜೀವನದ ಅವಕಾಶ ಕಲ್ಪಿಸುವುದಕ್ಕೆ ಬೇರೆ ಮಾರ್ಗ ಇಲ್ಲದವರಿಗೆ ಜಮೀನು ಕೊಡಿ ಎಂದರೆ, ಅವರು ದೇಶದ್ರೋಹಿಗಳು ಆಗಿದ್ದಾರೆ. ಜಿಲ್ಲೆಯಿಂದ ಹೊರಗಡೆ ಹಾಕಬೇಕು ಎನ್ನುವ ಸರ್ಕಾರದ ನೀತಿ ಯಾವ ಮಟ್ಟಕ್ಕೆ ಯಾವ ವಿಕೋಪಕ್ಕೆ ಹೋಗಿದೆ ಎನ್ನುವುದನ್ನು ಈ ಸಭೆ ಆಲೋಚನೆ ಮಾಡಬೇಕು. ಜಮೀನನ್ನು ಆಕ್ರಮಣ ಮಾಡಿದ ಸಂದರ್ಭದಲ್ಲಿ ಜಮೀನು ಬೇಕು ಎಂದು ಕೇಳಿದ ಸಂದರ್ಭದಲ್ಲಿ ಕೋಲಾರ ಜಿಲ್ಲಾ ರೈತ ಸಂಘದ ಕಾರ್ಯಕರ್ತರ ಮೇಲೆ ಯಾರು ರಿಪೋರ್ಟು ಕಳುಹಿಸಿದ್ದಾರೋ ಅವರ ಕತೆ ಈ ರೀತಿ ಇದೆ. ಬಾಗೇಪಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಲಂಚದ ಆಪಾದನೆಯ ಮೇಲೆ ಸಸ್ಪೆಂಡ್ ಆಗಿದ್ದಾನೆ. ಅವನು ಆರಾಮವಾಗಿ ಕೋಲಾರದಲ್ಲಿ ಓಡಾಡುತ್ತಿದ್ದಾನೆ. ಫಾರೆಸ್ಟ್ ಇಲಾಖೆಯಲ್ಲಿ ರೀಜನಲ್ ಡಿವಿಜನಲ್ ಫಾರೆಸ್ಟ್ ಆಫೀಸರ್ ಸಸ್ಪೆಂಡ್ ಆಗಿದ್ದಾನೆ.

ಶ್ರೀ ಡಿ. ದೇವರಾಜ ಅರಸ್ - ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ - ಅವರನ್ನು ಜಿಲ್ಲೆಯಿಂದ ಹೊರಗಡೆ ಹೋಗಿ ಎಂದು ನೋಟೀಸ್ ಕೊಡಲಿಲ್ಲ. ನಮ್ಮನ್ನು ಗಡಿಪಾರು ಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಡಿ. ದೇವರಾಜ ಅರಸ್ - ಸಸ್ಪೆಂಡ್ ಮಾಡದೆ ಏನು ಮಾಡಬೇಕು ? ಎನ್‌ಕ್ವೈರಿ ನಡೆಸಬೇಕೋ, ಇಲ್ಲವೋ ? ಅವರನ್ನು ಅಲ್ಲಿ ಹೇಗೆ ಇರಕೂಡದು ಎಂದು ಹೇಳುತ್ತೀರಾ ?

ಶ್ರೀ ಸಿ. ಬೈರೇಗೌಡ - ಅವರನ್ನು ಅಲ್ಲಿ ಇಟ್ಟುಕೊಂಡಿದ್ದೀರಿ, ನಾವು ಮಾಡಿದ ಅಪರಾಧ ಏನು ? ಅಲ್ಲಿರತಕ್ಕ ಡಿವಿಷನಲ್ ಫಾರೆಸ್ಟ್ ಆಫೀಸರ್ ತಪ್ಪು ಲೆಕ್ಕ ಬರೆದು 5-6 ಲಕ್ಷ ರೂಪಾಯಿಗಳ ನಷ್ಟ ಉಂಟು ಮಾಡಿದ್ದಾನೆ. 10 ಜನ ರೇಂಜ್ ಆಫೀಸರ್‌ಗಳು ಸಸ್ಪೆಂಡ್ ಆಗಿದ್ದಾರೆ. ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಡಿವಿಷನಲ್ ಫಾರೆಸ್ಟ್ ಆಫೀಸರ್ ಅವರು ನಮ್ಮ ಮೇಲೆ ರಿಪೋರ್ಟ್ ಕಳುಹಿಸಿರತಕ್ಕವರು, ನಾವು ಅಯೋಗ್ಯರು, ಎಲ್ಲಿಯೇ ಆಗಲಿ, ರಾಜಕೀಯ ಜೀವನದಲ್ಲಿ ಮಾರ್ಕ್ಸ್‌ವಾದಿ ಪಕ್ಷದ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಪಾಪಣ್ಣನವರು, ಮಾರ್ಕ್ಸ್‌ವಾದಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಚ್.ಎಸ್. ರಾಮರಾಯರು ಆಗಲೇ ದೇಶದ್ರೋಹ ಕೆಲಸವನ್ನು ಮಾಡಿದ್ದಾರೆ ಎಂದರೆ, ಜಿಲ್ಲೆಯಿಂದಲ್ಲ ದೇಶದಿಂದ ಬೇಕಾದರೆ ಹೊರಗಡೆ ಹೋಗಿ ಎಂದು ಹೇಳಿ. ನಾವು ನ್ಯಾಯವಾಗಿ ಪ್ರಜಾಪ್ರಭುತ್ವದ ನೀತಿಗೆ ಅನುಗುಣವಾಗಿ ಪ್ರಜಾಪ್ರಭುತ್ವದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಾಗ, ರಾಜಕೀಯ ಚೈತನ್ಯವನ್ನು ಜನಗಳಿಗೆ ಉಂಟುಮಾಡಿದಾಗ ಜಿಲ್ಲೆಯಿಂದ ಹೊರಗೆ ಹೋಗಿ ಎಂದು ನೋಟೀಸ್ ಸಾದರು ಮಾಡಿದ್ದೀರಿ ಇದು ಖಂಡನೀಯ ಎಂದು ಈ ಸಭೆಯಲ್ಲಿ ತಿಳಿಸಬೇಕಾಗುತ್ತದೆ. ಭಾರತ ಮತ್ತು ಪಾಕಿಸ್ತಾನದ ಯುದ್ಧ ಕಾಲದಲ್ಲಿ ಭದ್ರತಾ ಕಾನೂನಿಗೆ ಒಳಗಾಗಿದ್ದವರು ಇಂದು ಮಂತ್ರಿಮಂಡಲದಲ್ಲಿದ್ದಾರೆ. ನೀವು ಇಂಥ ಅವಕಾಶ ಮಾಡಿದಿರಿ. ದೇಶಕ್ಕೆ ಇವತ್ತು ಯಾರು ಹಾನಿ ಮಾಡುತ್ತಾರೊ ಅವರಿಗೆ ಉನ್ನತ ಸ್ಥಾನ ಕೊಟ್ಟಿದ್ದೀರಿ. ಸಾಮಾನ್ಯ ಜನತೆಯ ಕಷ್ಟವನ್ನು ಪ್ರಜಾಪ್ರಭುತ್ವದ ತತ್ವಗಳ ಮೂಲಕ ಸಂಘಟನೆ ಮಾಡುವುದಕ್ಕೆ ಯಾರು ಹೊರಟ್ಟಿದ್ದಾರೋ ಅವರನ್ನು ಜಿಲ್ಲೆಯಿಂದ ಹೊರಗಡೆ ಹೋಗಿ ಎಂದು ತಾವು ಕೊಟ್ಟಿರತಕ್ಕ ಆದೇಶ ಖಂಡನೀಯವಾಗಿದೆ. ವೀರೇಂದ್ರ ಪಾಟೀಲರ ಸರ್ಕಾರ ಇದನ್ನು ಮಾಡಿದ್ದರೆ ನಾವು ಒಪ್ಪಿಕೊಳ್ಳಬಹುದಿತ್ತು. ಅವರು ಕೆಟ್ಟವರು ಎಂದು ನೀವೇ ಹೇಳಿದ್ದೀರಿ. ಕೆಟ್ಟ ಸರ್ಕಾರ ಅನ್ಯಾಯ ಮಾಡಿದ್ದರೆ ಒಪ್ಪಿಕೊಳ್ಳಬಹುದಿತ್ತು. ಬಡ ಜನರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿಕೊಂಡು ಬಂದ ಸರ್ಕಾರ, ಇವತ್ತು ಬಡವರ ಪರವಾಗಿರುವವರಿಗೆ ನೋಟೀಸನ್ನು ಕೊಟ್ಟಿ ಗಡಿಪಾರು ಮಾಡಿರುವುದು ಖಂಡಿತ ಖಂಡನೀಯ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು- ಗಡಿಪಾರು ಮಾಡಿದ್ದು ಯಾವ ಕಾರಣಕ್ಕಾಗಿ, ಪೊಲೀಸ್ ಆಕ್ಟ್ ಪ್ರಕಾರವೋ ಅಥವಾ ಡಿಫೆನ್ಸ್ ಆಫ್ ಇಂಡಿಯಾ ಸೆಕ್ಯುರಿಟಿ ಪ್ರಾವಿಷನ್ಸ್ ಪ್ರಕಾರವೋ ?

ಶ್ರೀ ಸಿ. ಬೈರೇಗೌಡ- ಪೊಲೀಸ್ ಆಕ್ಟ್ ಪ್ರಕಾರ ಗಡಿಪಾರು ಮಾಡಬೇಕೆಂದು ಇರುವುದು.

ಶ್ರೀ ಡಿ. ದೇವರಾಜ ಅರಸ್- ಸರ್ಕಾರಿ ಫಾರೆಸ್ಟ್ ಅನ್ನು ಕಡಿಯಲಿಕ್ಕೆ ಪ್ರಚೋದನೆ ಮಾಡಿದರೆ ಗಡಿಪಾರು ಮಾಡಿರಬಹುದು. ನೀವು ಏತಕ್ಕೆ ಕಾಡನ್ನು ಕಡಿಯುವುದಕ್ಕೆ ಹೋಗುತ್ತೀರಿ

ಶ್ರೀ ಸಿ. ಬೈರೇಗೌಡ - ಅಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸುತ್ತೀರಿ, ಬಡವನಾಗಿರತಕ್ಕವನು ನಿಮ್ಮ ಕಣ್ಣಿನಲ್ಲಿ ಬಿರ್ಲಾ ಇದ್ದಾನಲ್ಲ ಅವನಿಗೆ 25 ರೂಪಾಯಿಗೆ ಒಂದು ಟನ್ ಮರವನ್ನು ಮಾರುತ್ತಿದ್ದೀರಿ. ನಮ್ಮನ್ನು ಜಮೀನು ಕೊಡಿ ಎಂದು ಕೇಳಿದರೆ ಅಪರಾಧವಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್ - ಫಾರೆಸ್ಟ್ ಇರುವುದು ಹೋದರೆ ಸಂಕಟವಾಗುವುದಿಲ್ಲವೇ ನಿಮ್ಮ ಮನೆಗೆ ಸೌದೆ ಉರಿಸುವುದಕ್ಕೆ ಫಾರೆಸ್ಟ್ ಕೊಟ್ಟುಬಿಡೋಣ ಎಂದರೆ ನಿಮ್ಮ ಕೈಗೆ ಅಧಿಕಾರ ಬಂದರೆ ಅದೇ ಮಾಡುತ್ತಿರೋ ಏನೋ ಗೊತ್ತಿಲ್ಲ. ಫಾರೆಸ್ಟ್‌ನಲ್ಲಿರತಕ್ಕ ಗಿಡಗಳನ್ನು ಕಡಿಯುವುದು, ಸರ್ಕಾರಿ ಜಮೀನನ್ನು ಆಕ್ಯೂಪೈ ಮಾಡುವುದು ಇದರ ಕಡೆಗೆ ಜನಗಳನ್ನು ಪ್ರಚೋದನೆ ಮಾಡಿದರೆ ಹಿಡಿದು ಹಾಕದೆ ಏನು ಮಾಡಬೇಕಾ ಗುತ್ತದೆ ? ಇವೊತ್ತಿನ ದಿವಸದ ಮಾದರಿಯನ್ನು ಯೋಚನೆ ಮಾಡಿ ಅರ್ಥ ಮಾಡಿಕೊಳ್ಳಿ. ಯಾವುದೇ ದೇಶದ ಸಂಪತ್ತು ಎಂದರೆ ಅರಣ್ಯ. ನಮ್ಮ ಮೈಸೂರು ರಾಜ್ಯಕ್ಕೆ ಇರುವುದೇ ಫಾರೆಸ್ಟ್ ಕಡಿಮೆ ಇದೆ. ಅದನ್ನು ಹಾಳು ಮಾಡಿಕೊಳ್ಳುವುದಾದರೆ ದೇಶದ ಸಂಪತ್ತನ್ನು ಹಾಳುಮಾಡಿಕೊಂಡಂತಾಗುತ್ತದೆ. ಮರ ಇಲ್ಲ ಎಂದು ಹೇಳುತ್ತೀರಿ. ಮರ ಇರಲಿಲ್ಲ ; ಮಳೆ ಬರಲಿಲ್ಲ ; ಗಿಡ ಹಾಕುವುದನ್ನು ಬಿಟ್ಟಿದ್ದೀರಿ; ಮರಗಳನ್ನು ಕಡಿದು ಸೌದೆ ಮಾಡಿಕೊಂಡು ಹೋಗುತ್ತೀರಿ; ಹಿಂದಿನ ಜನಾಂಗದವರು ಮರ ಗಿಡ ಹಾಕುತ್ತಾ ಹೋಗುತ್ತಿದ್ದರು. ಆ ಸಂಪ್ರದಾಯವನ್ನು ಈಗ ಕಳೆದುಕೊಂಡಿದ್ದೇವೆ. ಕಡಿಯುವ ಸಂಪ್ರದಾಯಕ್ಕೆ ಹೊರಟು ಹೋಗಿದ್ದೇವೆ. ತಾವು ಅದನ್ನು ಎನ್‌ಕರೇಜ್ ಮಾಡಬೇಕು ಎಂದು ಹೊರಟಿದ್ದೀರಾ ?

ಶ್ರೀ ಸಿ. ಬೈರೇಗೌಡ - 1932 ರಿಂದ ಕೋಲಾರ ಜಿಲ್ಲೆಯಲ್ಲಿ ಕೆಲವು ಕಡೆ ಫಾರೆಸ್ಟ್ ಇಲಾಖೆಯ ವಶದಲ್ಲಿ ಭೂಮಿ ಇದ್ದು, 1932 ರಿಂದ ಮರಗಳನ್ನು ಬೆಳೆಸದೆ 1973ರಲ್ಲಿ ಬೆಳೆಸಬೇಕು ಎಂದು ತಮಗೆ ಈಗ ವಿವೇಚನೆ ಹೇಗೆ ಬಂತು ? 1932 ರಿಂದ ಯಾತಕ್ಕೆ ಬೆಳೆಸಲಿಲ್ಲ ? ಒಂದು ವಾರದ ಹಿಂದೆ ಶಿವಮೊಗ್ಗಾ ಮತ್ತು ಚಿಕ್ಕಮಗಳೂರು ಡಿಸ್ಟ್ರಿಕ್ಟುಗಳಲ್ಲಿ ಪ್ರವಾಸ ಹೋಗಿದ್ದಾಗ ನಮ್ಮ ದೇಶದಲ್ಲಿರುವ ಅರಣ್ಯಕ್ಕೆ ಏನು ಗತಿ ಬಂದಿದೆ ಎಂಬುದು ನೋಡಿದೆ. ಕಾಡಿಗೆ ಬೆಂಕಿ ಬಿದ್ದು ಕಾಳ್ಗಿಚ್ಚು ಬೆಲೆ ಬಾಳುವ ಸಂಪತ್ತನ್ನು ಹಾಳು ಮಾಡುತ್ತಿದೆ ಅದರ ರಕ್ಷಣೆ ಮಾಡುವುದಕ್ಕೆ ಆಗಲಿಲ್ಲ. ಉಳುವುದಕ್ಕೆ ಜಮೀನು ಇದೆ ಒಂದೆರಡು ಎಕರೆ ಕೊಡಿ ಆಹಾರ ಉತ್ಪತ್ತಿ ಮಾಡುತ್ತೇವೆ ಅದನ್ನು ಕೊಡಿ ಎಂದರೆ ಕೊಡುವುದಕ್ಕೆ ಮಲೆನಾಡು ಜಿಲ್ಲೆಯಿಂದ ಬಂದಿರತಕ್ಕ ಸದಸ್ಯರು ಇದ್ದಾರೆ ಆ ಕಾಡಿನಲ್ಲಿ ಕೋಟ್ಯಾಂತರ ರೂಪಾಯಿ ವರ್ಷಕ್ಕೆ ನಷ್ಟವಾಗುತ್ತಿದೆ. ಒಂದು ವಾರದಿಂದ ಖುದ್ದಾಗಿ ನೋಡಿಕೊಂಡು ಬಂದಿದ್ದೇನೆ. ಜಮೀನು ಬೇಡುವುದು ಒಂದು ಪ್ರಶ್ನೆ. ಗಿಡ ಕಡಿಯುವುದು ಮತ್ತೊಂದು ಪ್ರಶ್ನೆ.

ಶ್ರೀ ಡಿ. ದೇವರಾಜ್ ಅರಸ್ - ನಾವು ಕೂಡ ಮಲೆನಾಡಿನಿಂದ ಬಂದಿರುವವರು. ರಾತ್ರಿ ಹೊತ್ತು ಎಷ್ಟೋ ಕಡೆ ಬೆಂಕಿ ಬಿದ್ದು ಉರಿಯುತ್ತದೆ. ಬಯಲು ಸೀಮೆಯಿಂದ ಹೋದವರು ಕಾಡು ಉರಿದುಹೋಗುತ್ತದೆ ಎಂದು ಬಹಳ ಸಂಕಟದಿಂದ ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ – ಯೋಗ್ಯವಾದ ಜಮೀನು ಕೊಡಿ, ಕೊಡುವುದಕ್ಕೋಸ್ಕರ ಜಮೀನು ಇದೆ. ಏನು ಬೆಳೆಯದೆ ಇರತಕ್ಕ ಜಮೀನು ಏನು ಇದೆ ಅದನ್ನು ಕೊಡಿ ಅಷ್ಟೇ.

ಶ್ರೀ ಅರಸ್ – ಬಂತು ನೋಡಿ, ಕೊಡಿ ಎಂದರೆ ಕಾನೂನು ಮುರಿಯುವುದಕ್ಕೆ ಹೋದರೆ ನಾವು ಸಹಿಸುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಕೇಳಿ ಸರ್ಕಾರದ ವತಿಯಿಂದ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡೋಣ. ಎಲ್ಲಿ ಜನರು ಇರುತ್ತಾರೆ ಅವರ ಮನೆ ಮುಂದೆ, ಎಲ್ಲಾ ಜನರಿಗೂ ಅವರವರ ಮನೆ ಮುಂದೆ ಜಾಗ ಕೊಡಿ ಎಂದರೆ ಹೇಗೆ ಸಾಧ್ಯ ? ಆಂಧ್ರ ದೇಶದಿಂದ 200 ಮೈಲಿ ದೂರ ವಾಸ ಮಾಡುವುದಕ್ಕೆ ತಯಾರಿ ಇದ್ದಾರೆ. ಆದರೆ ಕೋಲಾರ ಬಿಟ್ಟು ಬೆಂಗಳೂರು, ತುಮಕೂರಿಗೆ ಹೋಗುವುದಕ್ಕೆ ಅಥವಾ ತುಮಕೂರು ಬಿಟ್ಟು ಚಿಕ್ಕಮಗಳೂರಿಗೆ ಸಹ ಹೋಗುವುದಕ್ಕೆ ತಯಾರಿಲ್ಲ ಎಂದರೆ ಹೇಗೆ ?

ಶ್ರೀ ಸಿ.ಬೈರೇಗೌಡ – ಜಮೀನು ಇಲ್ಲವಲ್ಲ.

ಶ್ರೀ ಡಿ. ದೇವರಾಜ್ ಅರಸ್ – ಬೇರೆ ಕಡೆ ಕೊಡುತ್ತೇವೆ. ನಮ್ಮ ಜನ ಕೂತ ಕಡೆ ಕಾಡು ಇದ್ದರೆ ಕಡಿದು ಹಾಕುವುದು. ಸರ್ಕಾರದ ಜಮೀನು ಇದ್ದರೆ ಉತ್ತುಕೊಂಡು ಬಿಡುವುದು. ಸರ್ಕಾರವೂ ಬೇಕಿಲ್ಲ ; ಕಾಡು ಬೇಕಿಲ್ಲ ; ಅವರಿಗೆ ಹೇಗೆ ಇಷ್ಟ ಇದ್ದರೆ ಹಾಗೆ ನಡೆದುಕೊಂಡು ಬಿಡುವುದು ನಮ್ಮ ಜನರ ಸ್ವಭಾವ ಆಗಿದೆ.

ಶ್ರೀ ಸಿ. ಬೈರೇಗೌಡ – ಕಾಡು ಕಡಿಯಿರಿ ಎಂದು ಹೇಳಲಿಲ್ಲ. ಕಾಡು ಕಡಿದು ಇಲ್ಲ, ದಯವಿಟ್ಟು ಅದನ್ನು ಹೇಳಬೇಡಿ. ಹೆಚ್ಚು ಭಾಗದಲ್ಲಿ ಜಮೀನು ಉತ್ತುಕೊಂಡಿದ್ದಾರೆ ಅಷ್ಟೆ, ಮರ ಕಡಿದಿಲ್ಲ. ಆ ರೀತಿ ತಮ್ಮ ಅಧಿಕಾರಿಗಳು ತಮಗೆ ವರದಿ ಮಾಡಿದ್ದರೆ ಅದು ತಪ್ಪು ಅದನ್ನು ತಿದ್ದಿಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ – ಜಮೀನು ಕೊಡಿ ಕಾಡು ಕಡಿದುಕೊಳ್ಳುತ್ತೇವೆ ಎಂದರೆ ನಮ್ಮ ದೇಶದಲ್ಲಿ ಜಮೀನು ಇಲ್ಲದೆ ಇರತಕ್ಕ ಜನ ಲಕ್ಷೋಪಲಕ್ಷ ಜನ ಇದ್ದಾರೆ. ಹೆಚ್ಚಿಗೆ ಇರುವುದು ಬಿಟ್ಟುಕೊಡುವ ಕಾನೂನು ಮಾಡುವುದಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಗುತ್ತಿಗೆ ಮಾಡುವವರಿಗೆ ಜಮೀನು ಬರುವ ಹಾಗೆ ನೋಡಿಕೊಳ್ಳೋಣ ಎಂಬ ಸಂಪ್ರದಾಯ ಸಹ ಇದೆ. ಕಾನೂನು ನಾವು ನೀವು ಸೇರಿ ಮಾಡಿದ್ದೇವೆ. ಯಾರಾದರೂ ಗುತ್ತಿಗೆ ಮಾಡುತ್ತಿದ್ದರೆ ಅವನು ಗುತ್ತಿಗೆ ಮಾಡಿದ ಜಮೀನು ಅವನಿಗೆ ಕೊಡಬೇಕಾದುದು ಎಂದು ನಾವು ನೀವು ಕಾನೂನು ಮಾಡಿದ್ದೇವೆ. ಅದನ್ನು ಎನ್‌ಫೋರ್ಸ್ ಮಾಡುವುದರಲ್ಲಿ ನಮ್ಮದು ತಪ್ಪು ಇದ್ದರೆ ಅದನ್ನು ಒಪ್ಪಿಕೊಳ್ಳಲು ತಯಾರಿದ್ದೇನೆ. ನಿಮ್ಮ ಸಹಾಯ ಕೇಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಎಷ್ಟೆಷ್ಟು ಜನ ಗುತ್ತಿಗೆದಾರರು ಇದ್ದಾರೆ ಅವರಿಗೆ ರಕ್ಷಣೆ ಕೊಡುವ ಜವಾಬ್ದಾರಿ ಇದೆ. ಕೆಲವರಿಂದ ರಿಹ್ಯಾಬಿಲಿಟೇಟ್ ಮಾಡೋಣ. ಕಮಿಟೀಸ್ ಇವೆ. ಎಲ್ಲೆಲ್ಲಿ ಜಮೀನು ಕೊಡುವುದಕ್ಕೆ ಸಾಧ್ಯ ಇದೆ ಎಂದು ಸರ್ಕಾರಕ್ಕೆ ಗೊತ್ತಿದೆ. ಜಮೀನನ್ನು

ಐಡೆಂಟಿಫೈ ಮಾಡಿದ್ದಾರೆ. ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ. ಇನ್ನು ಭೂ ಸುಧಾರಣೆ ಕಾನೂನು ಬಂದಿರುವುದರಿಂದ ಎಷ್ಟು ಜಮೀನು ಬರುತ್ತದೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ. ಇದು ಬಿಟ್ಟು ಬಯಲು ಸೀಮೆಯಲ್ಲಿ ಕಾಡಿಗೆ ಸೇರಿದ ಜಮೀನು ಇರುತ್ತದೆ. ಅದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು. ಆದರೆ ಒಂದು ವೇಳೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡಿರುವುದನ್ನು ಬಿಡಬೇಕೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿ, ಲೋಕಲ್ ಸಿಚ್ಯುಯೇಷನ್ ನೋಡಿ, ಕೊಡಬೇಕೇ ಬಿಡಬೇಕೇ ಎನ್ನುವುದರಲ್ಲಿ ಯಾವುದರಲ್ಲಿ ಅರ್ಥ ಇದೆ, ಅಲ್ಲಿ ಏನಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಕಾಡು ಕಡಿಯಿರಿ, ಉಳಿರಿ ಎಂದು ನೀವು ಹೇಳದೆ ಇರಬಹುದು, ನಿಮ್ಮ ಪಕ್ಷದವರು ಹೇಳಿರಬಹುದು ಆದುದರಿಂದ ಆ ರೀತಿ ಮಾಡಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ – ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ಒಂದು ವಿಷಯ ತರುವುದಕ್ಕೆ ಇಚ್ಛೆ ಪಡುತ್ತೇನೆ. ವಿರೋಧಪಕ್ಷದವರಿಗಿಂತ ತಮ್ಮ ಪಕ್ಷದವರು ಕಾಡು ಜಮೀನು ಎಲ್ಲಿದೆ ಉಳಿರಿ ಎಂದು ಪ್ರಚಾರ ಮಾಡಿರುವುದರಿಂದ ಬಹು ಜನ ಬಡ ಜನರು ಇತ್ತೀಚೆಗೆ ಉಳುತ್ತಿದ್ದಾರೆ. ಈ ವಿಷಯ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್ – ನಮ್ಮ ಪಕ್ಷ, ನಿಮ್ಮ ಪಕ್ಷ ಇಲ್ಲ. ನಮ್ಮ ಪಕ್ಷದವರು ಹೇಳಿದ್ದರೂ ಖಂಡಿಸುವುದಕ್ಕೆ ತಯಾರಿದ್ದೇನೆ. ನಿಮ್ಮ ಪಕ್ಷದವರು ಹೇಳಿದ್ದರೆ ಸರಿಹೋಗುವುದಿಲ್ಲ, ಅವರು ಹೇಳಿದರೂ ಶುದ್ಧ ತಪ್ಪು ದೇಶಕ್ಕೆ ಎರಡು ಬಗೆದ ಹಾಗಾಗುತ್ತದೆ. ಕಾನೂನು ವಿರುದ್ಧ ಹೋದ ಹಾಗಾಗುತ್ತದೆ. ಫಾರೆಸ್ಟ್ ಇಡುವುದು ಬೇಡ ಎಂದು ಕಾನೂನು ಮಾಡಿ, ಕಾಯಿದೆ ಮಾಡಿ ಅದರಂತೆ ಮಾಡೋಣ. ಗೋಮಾಳ ಬೇಡ, ಗೋಮಾಳ ಇರುವುದಕ್ಕೆ ಸಾಧ್ಯವಿಲ್ಲ ಅದು ಹೋಯಿತು. ಫಾರೆಸ್ಟ್ ಹಾಳು ಮಾಡಿ ಬಿಡಿ ಎಂದು ಹೇಳಿದ್ದರೆ ಅದು ಶುದ್ಧ ತಪ್ಪು.

**Mr. Deputy Speaker :** A top expert has said that if all the trees are cut down the entire forest will be scraped and there will be little rain.

ಶ್ರೀ ಸಿ.ಬೈರೇಗೌಡ – ಮುಖ್ಯಮಂತ್ರಿಗಳು ತಪ್ಪು ತಿಳಿದುಕೊಂಡಿದ್ದಾರೆ. ಮರ ಹೊಡೆದಿದ್ದಾರೆ ಎಂದು ಅವರ ಅಧಿಕಾರಿಗಳು ತಪ್ಪು ಲೆಕ್ಕ ಬರೆದಿರುವುದರಿಂದ ಸಸ್ಪೆಂಡ್ ಆಗಿರುವುದು. ಇದನ್ನು ಮುಖ್ಯಮಂತ್ರಿಗಳು ಗಮನಿಸಬೇಕು. 6 ಲಕ್ಷ ರೂಪಾಯಿನ ಕೆಲಸವಾಗಿದೆ ಎಂದು ಕೆಲಸ ಮರ ಹೋಗಿದ್ದು ಬೇರೆಕಡೆ. ಇವೊತ್ತು ಸರ್ಕಾರದ ವಶದಲ್ಲಿರುವ ಭೂಮಿ ವಿಷಯ ಹೀಗಾದರೆ ಪತ್ರಿಕೆಗಳಲ್ಲಿ ಇವೊತ್ತು ನೋಡುತ್ತಿದ್ದೇವೆ ಜಾಯಿಂಟ್ ಸೆಲಕ್ಟ್ ಕಮಿಟಿ ಮುಂದೆ ಇರುವ ಭೂ ಸುಧಾರಣೆ ಮಸೂದೆಗೆ ಆಡಳಿತ ಪಕ್ಷ ವಾಟರ್ ಡೌನ್ ಮಾಡಿ ಯಾವ ಯಾವ ಊರಿನಲ್ಲಿ ಯಾರ ಯಾರ ವಶದಲ್ಲಿ ಭೂಮಿ ಇದೆಯೋ ಅವರ ವಶದಲ್ಲಿ ಭೂಮಿ ಇರುವ ತರಹ ಪಕ್ಷದ ವತಿಯಿಂದ ಒತ್ತಾಯ ತರುತ್ತಿದ್ದಾರೆ. ನಾವು ಭೂ ಸುಧಾರಣೆ ವಿಷಯದಲ್ಲಿ ಆನೆಸ್ಟ್ ಆಗಿದ್ದರೂ

ಸಹ ಅವರ ಪಕ್ಷದಲ್ಲಿ ಕೆಲವರು ಭೂ ಸುಧಾರಣಾ ಕಾನೂನನ್ನು ವಾಟರ್ ಡೌನ್ ಮಾಡಿ ಭೂಮಿ ಇಲ್ಲದೆ ಇರುವವರೆಗೆ ಭೂಮಿ ಸಿಕ್ಕದ ರೀತಿಯಲ್ಲಿ ಮಾಡುತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಇದಕ್ಕೆ ಏನಾದರೂ ಕೂಡ ತಾವು ಮಣಿಯುವುದಾದರೆ ಖಂಡಿತವಾಗಿ ತಾವು ಮುಖ್ಯಮಂತ್ರಿ ಪದವಿಯಲ್ಲಿ ಇರುವುದಕ್ಕಿಂತ ಇಲ್ಲದೆ ಇರುವುದು ವಾಸಿ ಎಂದು ಹೇಳುತ್ತೇನೆ.

ಅಧ್ಯಕ್ಷರೇ ನಾವು ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸ ಹೋಗಿದ್ದಾಗ ಕೆಲವು ಪ್ಲಾಂಟೇಷನ್‌ಗಳಲ್ಲಿರುವ ಕಾರ್ಮಿಕರ ವಸತಿ ಗೃಹಗಳನ್ನು ನೋಡಿಬಂದೆ. ನಮ್ಮ ಕಡೆ ಹಂದಿಗೂಡು ಎಂದು ಕರೆಯುತ್ತಾರೆ. ಆ ರೀತಿ ಇವೆ. ಅವರ ಮನೆಗಳು, ಮಲೆನಾಡು ಪ್ರದೇಶದಲ್ಲಿ ಮಳೆಗಾಲದಲ್ಲಿ ಬಹಳ ಜೌಗು ಇರುತ್ತದೆ. ಕಾರ್ಮಿಕರಿಗೆ ಒದಗಿಸಿರತಕ್ಕ ಮನೆಗಳು ಫ್ಲೋರಿಂಗ್ ಇಲ್ಲ. ಕುಡಿಯುವ ನೀರಿಗೆ ಬೇಸಿಗೆ ಕಾಲದಲ್ಲಿ ಬಹಳ ದೂರ ಹೋಗಬೇಕಾಗಿದೆ. ದೀಪದ ವ್ಯವಸ್ಥೆ ಇಲ್ಲ ಮತ್ತು ಮನುಷ್ಯನಿಗೆ ಯಾವ ಅವಶ್ಯಕತೆಗಳು ಬೇಕೋ ಅದೊಂದನ್ನೂ ಒದಗಿಸಿಲ್ಲ.

ರೋಡ್ ಟ್ರಾನ್ಸ್‌ಪೋರ್ಟ್ ವಿಷಯ ಹೇಳಬೇಕೆಂದರೆ, ನಾನು ಇಂದು ಒಂದು ಬಸ್ಸಿನಲ್ಲಿ ಬಂದೆ. ಆ ಬಸ್ಸಿನಲ್ಲಿ ನಾನು ಕುಳಿತಾಗ 20 ಮಂದಿ ಇದ್ದರು. ಅದರ ಮುಂದುಗಡೆ ಒಂದು ಕಂಟ್ರಾಕ್ಟ್ ಬಸ್, ಹಿಂದುಗಡೆ ಒಂದು ಕಂಟ್ರಾಕ್ಟ್ ಬಸ್ ಓಡುತ್ತಿದ್ದವು. ನಾವು ಕುಳಿತಿದ್ದ ಬಸ್ಸಿನಲ್ಲಿ ಕೇವಲ 20 ಜನರಿದ್ದರೆ, ಆನ್ ಕಾಂಟ್ರಾಕ್ಟ್ ಎಂದು ಬೋರ್ಡು ಹಾಕಿಕೊಂಡು ಅದರ ಮುಂದೆ ಮತ್ತು ಹಿಂದೆ ಇದ್ದ ಬಸ್ಸುಗಳಲ್ಲಿ ಭರ್ತಿಯಾಗಿ ಜನರಿದ್ದು, ನಿಂತುಕೊಂಡು ಪ್ರಯಾಣ ಮಾಡುತ್ತಿದ್ದ ಪ್ರಯಾಣಿಕರೂ ಅನೇಕರಿದ್ದರು. ಎಂ.ಎಸ್.ಆರ್.ಟಿ.ಸಿ. ಮೇಲೆ ಹಾಕಿರುವುದು ಜನಗಳ ದುಡ್ಡು. ಇದರಲ್ಲಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ ಆನ್‌ಕಾಂಟ್ರಾಕ್ಟ್ ಎಂದು ಬೋರ್ಡ್ ಹಾಕಿಕೊಂಡು ಪ್ರಯಾಣಿಕರನ್ನು ಕರೆದುಕೊಂಡು ಹೋಗುವ ಬಸ್ಸುಗಳಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಬಹಳ ನಷ್ಟವಾಗುತ್ತಿದೆ. ಜನಗಳ ದುಡ್ಡು, ದೇಶದ ದುಡ್ಡು ಹಾಳಾಗುತ್ತಿದೆ. ಸರ್ಕಾರಿ ಉದ್ಯಮವಾಗಿರುವುದರಿಂದ ಸರ್ವತೋಮುಖವಾಗಿ ಪ್ರಗತಿಯನ್ನು ಸಾಧಿಸುವ ರೀತಿಯಲ್ಲಿ ಲಾಭದಾಯಕವಾದ ರೀತಿಯಲ್ಲಿ ನಡೆಸಬೇಕಾದ್ದು ಎಲ್ಲರ ಕರ್ತವ್ಯ. ಇದನ್ನು ಸರಿಯಾಗಿ ನಡೆಸದೆ ಇದ್ದ ಮೇಲೆ ಸರ್ಕಾರ ಏಕೆ ಇರಬೇಕು ಎನ್ನವುದು ಅರ್ಥವಾಗುವುದಿಲ್ಲ.

**Sri C.M. Arumugam** - Why not we create a full fledged Minister for the 'On Contract' buses? The Minister in charge of Transport would find it difficult to look after both ordinary trasport and 'on contract' buses.

**Mr. Deputy Speaker : -** The hon. member can bring it in the form of a non-official Resolution.

ಶ್ರೀ ಸಿ. ಬೈರೇಗೌಡ - ಮೋಟಾರು ವಾಹನಗಳ ಬಗ್ಗೆ ಕಾನೂನನ್ನು ಕೇಂದ್ರ ಸರ್ಕಾರ ತಿದ್ದುಪಡಿ ಮಾಡಬೇಕೆಂದು ಕಣ್ಣು ಮುಚ್ಚಿ ಕುಳಿತುಕೊಂಡರೆ, ಅದರಿಂದ ನಷ್ಟವಾಗುತ್ತಿರುವುದು

ನಮಗೆ. ರಾಜ್ಯದಲ್ಲಿರುವ ಪೊಲೀಸಿನವರು ಏನು ಮಾಡುತ್ತಿದ್ದಾರೆ. ಅಂದರೆ ಅವರೇ ಪರ್ಮಿಟ್ ಕೊಡುತ್ತಿದ್ದಾರೆ. ಇಲ್ಲಿಗೆ 8-10 ಮೈಲಿ ದೂರದಲ್ಲಿ ಒಂದು ಪೊಲೀಸ್ ಸ್ಟೇಷನ್ ಇದೆ. ಅಲ್ಲಿಗೆ ಬಸ್ಸು ಹೋದ ಕೂಡಲೇ, ಅಲ್ಲಿರುವವರು ನನಗೆ ಪರ್ಮಿಟ್ ಬೇಕಾಗಿಲ್ಲ. ನನಗೆ ಕೊಡುವುದನ್ನು ಕೊಡು ಎಂದು ಹೇಳುತ್ತಾರೆ. ಪೊಲೀಸ್ ಪರ್ಮಿಟ್‌ಗಳನ್ನು ನಿಲ್ಲಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಂಡರೆ ರಾಜ್ಯ ಸಾರಿಗೆ ಸಂಸ್ಥೆಗೆ ಸ್ವಲ್ಪ ಲಾಭವಾದರೂ ಬರುತ್ತದೆ. ಕಾಂಟ್ರಾಕ್ಟ್ ಬಸ್ಸುಗಳಿಗೆ ಪರ್ಮಿಟ್ ಕೊಡುತ್ತಿರುವ ವಿಚಾರದಲ್ಲಿ ಅನೇಕ ಸಣ್ಣ ಮಾತುಗಳನ್ನು ಜನ ಆಡುವುದನ್ನು ನಾವು ಕೇಳುತ್ತಿದ್ದೇವೆ. ಇಂಥದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಗೊಬ್ಬರದ ವಿಷಯ ಹೇಳುವುದಾದರೆ ಸಹಕಾರ ಸಂಘಗಳಲ್ಲಿ ಒಂದು ತಾಲ್ಲೂಕಿಗೆ ಒಂದು ಟನ್, ಅರ್ಧ ಟನ್ ಗೊಬ್ಬರ ಕೊಡುತ್ತಾರೆ. ಬೇರೆಯವರಲ್ಲಿ ಯಥೇಚ್ಛವಾಗಿ ಸಿಕ್ಕುತ್ತದೆ. ಸೊಸೈಟಿಗಳಲ್ಲಿ 50-52 ರೂಪಾಯಿಗಳಿಗೆ ಸಿಕ್ಕುವ ಗೊಬ್ಬರಕ್ಕೆ ಬೇರೆ ಕಡೆ 80-85 ರೂಪಾಯಿ ಕೊಟ್ಟರೆ ಸಿಕ್ಕುತ್ತದೆ. ಏಕೆ ಈ ಅನ್ಯಾಯ ಎಂದು ಕೇಳಬೇಕಾಗುತ್ತದೆ. ರೈತರಿಗೆ ಬೇಕಾಗಿರುವ ಪದಾರ್ಥಗಳ ಬೆಲೆ ಏರಿರುವುದರ ಜೊತೆಗೆ ಗೊಬ್ಬರದ ಬೆಲೆಯೂ ಏರಿ, ಗೊಬ್ಬರ ಸಿಕ್ಕದೆ ಬಹಳ ತೊಂದರೆಯಾಗುತ್ತಿದೆ. ಇದು ಅಕ್ಷಮ್ಯ ಅಪರಾಧ ಎಂದು ಹೇಳುತ್ತೇನೆ.

ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ತೀವ್ರ ಅಭಾವವಿದೆ. ನಮ್ಮೆಲ್ಲರ ಅನುಕಂಪ ಆ ಜಿಲ್ಲೆಗಳ ಜನರ ಬಗ್ಗೆ ಇದೆ. ಇದೇ ರೀತಿಯ ಅಭಾವ ಪರಿಸ್ಥಿತಿ ಅಷ್ಟೇ ದುರ್ಬಲವಾಗಿರತಕ್ಕ ಪರಿಸ್ಥಿತಿ ಕೋಲಾರ, ಬೆಂಗಳೂರು ಮತ್ತು ಇತರೇ ಜಿಲ್ಲೆಗಳಲ್ಲಿ ಇದೆ. ಕೋಲಾರ ಜಿಲ್ಲೆಯಲ್ಲಂತೂ ಕುಡಿಯುವ ನೀರಿಗೆ ತಾಪತ್ರಯವಿದೆ. ಬೇಸಿಗೆಯಲ್ಲಿ 80ಕ್ಕಿಂತ ಹೆಚ್ಚು ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಇದೆ. ಸರ್ಕಾರಕ್ಕೆ ಅನೇಕ ಸಂದರ್ಭಗಳಲ್ಲಿ ವಿನಂತಿ ಮಾಡಿದ್ದರೂ ಸಹ ಈ ಹೊತ್ತಿನವರೆಗೆ ಬಾವಿಗಳನ್ನು ಒದಗಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕೂಡ ಸರ್ಕಾರ ಪ್ರಯತ್ನ ಮಾಡುತ್ತಿಲ್ಲ. ಕಳೆದ ಮಾರ್ಚ್ ತಿಂಗಳಿನಿಂದ ಇದುವರೆಗೂ ಒಂದು ಪಿ.ಡಬ್ಲ್ಯೂ.ಡಿ. ಎಸ್ಟಿಮೇಟ್ ಕೂಡ ಸ್ಯಾಂಕ್ಷನ್ ಆಗಿಲ್ಲ. ಅಧ್ಯಕ್ಷರ ಅಪ್ಪಣೆ ಮೇರೆಗೆ ನಾನು ಬಲವಂತವಾಗಿ ಕುಳಿತುಕೊಳ್ಳುತ್ತೇನೆ.

## ಕೋಲಾರ ಒಳ ಚರಂಡಿ ಬಗ್ಗೆ ಪ್ರಶ್ನೋತ್ತರ 14-3-73

ಶ್ರೀ ಸಿ. ಬೈರೇಗೌಡ - 1955ನೇ ಇಸವಿಯಲ್ಲಿ ಆರಂಭವಾದ ಸ್ಕೀಂಗಳು 1973ನೇ ಮಾರ್ಚಿಯೊಳಗೆ ಮುಗಿಸುತ್ತೇವೆಂದು ಹೇಳಿದ್ದರೂ ಇಲ್ಲಿ ಇನ್ನೂ ಸ್ವಲ್ಪ ಕೆಲಸಗಳು ಆಗಿವೆ. ಇದರ ಬಗ್ಗೆ ಎನ್‌ಕ್ವೈರಿ ಯಾವಾಗ ಮಾಡಿ ಸರಿಪಡಿಸುತ್ತೀರಿ ? ತಮ್ಮ ಪಾಲಿಸಿ ಪ್ರಕಾರ ತಲೆ ಮೇಲೆ ಮಲ ಹೊರುವುದು ನಿಲ್ಲಿಸುವುದನ್ನು ಬರುವ ಆಗಸ್ಟು ತಿಂಗಳೊಳಗಾಗಿಯೇ ಜಾರಿಗೆ ತರುತ್ತೇವೆಂದು ಹೇಳಿದಿರಿ? ಅಷ್ಟರೊಳಗೆ ಇದು ಮಾಡಲು ಸಾಧ್ಯವೇ ? ಆ ನಂತರ ಇದರಲ್ಲಿ (ಡಿ)ಗೆ ಉತ್ತರವಾಗಿ

ಈ ಕೆಲಸವನ್ನು 1974ರ ಮಾರ್ಚ್ ತಿಂಗಳೊಳಗಾಗಿ ಮುಗಿಸುತ್ತೇವೆಂದು ಹೇಳಿದ್ದೀರಿ? ಹೀಗೆ ಹೇಳುವುದು ನಿಮ್ಮ ತತ್ವಕ್ಕೆ ವಿರೋಧವಾಗುವುದಿಲ್ಲವೇ?

ಶ್ರೀ ಬಿ. ಬಸವಲಿಂಗಪ್ಪ- ಇದಕ್ಕೆ ಕೆಲವಾರು ಕಾರಣಗಳಿವೆ. ಮೊದಲು ಇದು ಪಿ.ಡಬ್ಲ್ಯುಡಿ. ಇಲಾಖೆಗೆ ಸೇರಿತು. ಆನಂತರ ಇದು ಪಿ.ಎಚ್.ಇ. ಇಲಾಖೆಗೆ ವರ್ಗವಾಯಿತು. ಅನಂತರ ಇದರ ಅಂದಾಜುಗಳ ಬದಲಾವಣೆ ಮಾಡಬೇಕಾಗಿ ಬಂತು. ಇವೆಲ್ಲ ಕಾರಣಗಳಿಂದ ಇಲ್ಲಿ ಕಾರ್ಯಕ್ರಮದಂತೆ ಕೆಲಸಗಳಾಗುವುದು ಸ್ವಲ್ಪ ನಿಧಾನವಾಗುತ್ತಿದೆ ಮತ್ತು ಇದಕ್ಕೆ ಯಾರು ಕಾರಣರು ಎನ್ನುವುದನ್ನೆಲ್ಲಾ ವಿಚಾರಮಾಡಿ ಆದಷ್ಟು ಜಾಗ್ರತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಇನ್ನು ನೈಟ್ ಸಾಯಿಲ್ ಬಗ್ಗೆ ಹೇಳಿದರು. ಇದರ ಕೆಲಸಗಳು ಸುವೇಜ್ ಪೈಪುಗಳ ಜೋಡಣೆ ಇತ್ಯಾದಿ ಕೆಲಸಗಳು ಆಗಬೇಕಾಗಿರುವುದರಿಂದ ಇದು ಸ್ವಲ್ಪ ವಿಧಾನವಾಗುತ್ತದೆ. ಆಗಸ್ಟ್ 1973ರ ರೊಳಗಾಗಿ ನಿಲ್ಲಿಸುತ್ತೇವೆ ಎಂದು ಏನು ಹೇಳಿದ್ದೇವೆ. ಇದರಲ್ಲಿ ಯಾವ ತಾರತಮ್ಯವನ್ನು ಮಾಡಲಾಗುವುದಿಲ್ಲ. ಎಲ್ಲೆಲ್ಲಿ ಸೂಯೇಜು ಪೈಪುಗಳಿವೆಯೋ ಅಲ್ಲಿ ಬೇಗನೆ ಕೆಲಸಗಳಾಗುತ್ತವೆ. ಎಲ್ಲಿ ಪೈಪುಗಳು ಇಲ್ಲವೊ ಅಂತಹ ಕಡೆಗಳಲ್ಲಿ ಸೋಕ್ ಪಿಟ್ಸ್‌ಗಳನ್ನು ಮಾಡಿಸಿ ಇದರ ಮೂಲಕ ಮಾಡಬೇಕೆಂದೂ ಇದೆ. ಒಟ್ಟಿನಲ್ಲಿ ನಿರ್ಮೂಲ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ.

## ಆಯ-ವ್ಯಯಕ್ಕೆ ವಿರೋಧ 20-3-73

ಆಯ-ವ್ಯಯದ ಮೇಲೆ ಮಾತನಾಡುತ್ತಾ ಜಿಲ್ಲೆಯ ಬರ ಪರಿಸ್ಥಿತಿ ಬಗ್ಗೆ ಪದ್ಯವೊಂದನ್ನು ಓದಿ, ಬಜೆಟ್‌ನಲ್ಲಿ ಜನತೆಗೆ ಕಣ್ಣೀರು ಪಾಲು ಬಿಟ್ಟರೆ ಬೇರೆ ಏನೂನು ಇಲ್ಲ ಎಂದಿದ್ದರು. ಕಣ್ಣೀರಿನ ಪಾಲು ಬಿಟ್ಟರೆ ಬೇರೆ ಇಲ್ಲ.

ಶ್ರೀ ಸಿ. ಬೈರೇಗೌಡ (ವೇಮಗಲ್) - ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಮಾನ್ಯ ಅರ್ಥ ಮಂತ್ರಿಗಳು 73-74ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಅನುಮೋದನೆಗೆ ಇಟ್ಟಿದ್ದಾರೆ. ಇದನ್ನು ಕೆಲವು ಕಾರಣಗಳಿಂದ ನಾನು ವಿರೋಧಿಸಬೇಕಾಗಿದೆ. ಇವೊತ್ತು 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಜನರೇನು ಪ್ರತಿಕ್ರಿಯೆ ತೋರಿಸಿದರು ಎಂಬುದಕ್ಕೆ ನಿದರ್ಶನ ಕೊಡಬೇಕೆಂದಿದ್ದೇನೆ. ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಕೂಡ ಜನಸಾಮಾನ್ಯರ ಕಷ್ಟ ನಿವಾರಣೆಯಾಗದಿರುವುದರಿಂದ 69ರ ಮೇಲಾದರೂ ದೇಶದ ಕಲ್ಯಾಣವಾಗುವುದು ಎಂದು ಭಾವಿಸಿದ್ದರು. ಜೂನ್ 72ರಲ್ಲಿ ಆಯವ್ಯಯ ಮಂಡಿಸಿದಾಗ ಈ ಲೋಕ ಕೆಲವರಿಗೆ ಮಾತ್ರವಿಲ್ಲ. ಸಮಸ್ತರ ಜೀವನವೂ ಸುಖಮಯವಾಗುವಂತೆ ಮಾರ್ಗ ಕಲ್ಪಿಸಬೇಕಾಗಿದೆ, ವಸತಿ ಸೌಕರ್ಯ ಕಲ್ಪಿಸಬೇಕಾಗಿದೆ ಎಂದು ತಿಳಿಸಿದರು. ಈ ಎರಡನ್ನೂ ಎಷ್ಟು ಮಟ್ಟಿಗೆ ಈ ಆಯವ್ಯಯ ಪತ್ರ ಪ್ರತಿಬಿಂಬಿಸುವುದು ಎಂಬುದು ಮುಖ್ಯವಾದುದು. ಮಂತ್ರಿಗಳು ಹೇಳಿದಂತೆ ಇಂದು ಸಮಾನಾವಕಾಶ ಎಲ್ಲರಿಗೂ ಒದಗಿಸಲು ಸಾಧ್ಯವಿದೆ. ಆದರೆ ಅದರ ಬಗ್ಗೆ ಆಯವ್ಯಯ ಪಟ್ಟಿಯಲ್ಲಿ ಒಂದು ಚಕಾರ ಕೂಡ ಇಲ್ಲ. ಸಮಾಜವಾದವನ್ನು ಜಾರಿಗೆ ತರುವುದರ ವಿರುದ್ಧವಾಗಿ ನಮ್ಮ ರಾಜ್ಯದಲ್ಲಿ ಅನೇಕ

ಕೆಲಸಕಾರ್ಯಗಳು ನಡೆಸುತ್ತಿವೆ. ನಮ್ಮ ದೇಶದಲ್ಲಿ ಇಂದು ಇರುವ ಬಂಡವಾಳಗಾರರಲ್ಲಿರುವ ವಿಶೇಷ ಹಣವನ್ನು ಪಡೆಯುವುದರಲ್ಲಿ ಸರಕಾರ ವಿಫಲವಾಗಿದೆ. ಯಾರ ಪರವಾಗಿ ಈ ಸರಕಾರದವರು ಅಧಿಕಾರಕ್ಕೆ ಬಂದರೋ ಅವರು ಅಂಥ ಬಡವರ ಜೀವನ ಸುಖಮಯವಾಗಿ ಮಾಡದೆ ಟಾಟಾ, ಬಿರ್ಲಾ, ಸೋಮಾನಿ ಮುಂತಾದವರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಬೆಳಗಾಂನಲ್ಲಿರುವ ಒಂದು ಅಲ್ಯೂಮಿನಿಯಂ ಕಾರ್ಖಾನೆಗೆ 1.5 ಪೈಸೆಗೆ ಒಂದು ಯೂನಿಟ್ಟಿನಂತೆ ಕರೆಂಟನ್ನು ಕೊಡುತ್ತಿರುವುದರಿಂದ ವಿಶೇಷ ನಷ್ಟವಾಗುತ್ತಿದೆ. ಬಿರ್ಲಾರವರಿಗೆ ಒಂದು ಟನ್‌ಗೆ 25 ರೂಪಾಯಿಗಳಂತೆ ಯೂಕಲಿಪ್ಟಸ್ ಮರಗಳನ್ನು ಮಾರಿದ್ದಾರೆ. ಅಲ್ಲದೆ ವೆಸ್ಟ್‌ಕೋಟ್ಸ್ ಪೇಪರ್ ಮಿಲ್ಸ್‌ಗೆ ಒಂದೂವರೆ ರೂಪಾಯಿನಂತೆ ಬಿದಿರು ಬೊಂಬನ್ನು ಮಾರುವುದು ಅವಮಾನಕರ. ಬಂಡವಾಳಸ್ಥರ ಏಜೆಂಟ್‌ರ ಹಾಗೆ ಸರಕಾರದವರು ಕೆಲಸ ಮಾಡುತ್ತಿದ್ದಾರೆ. ಇದನ್ನು ಬಡವರು ಮತ್ತು ಶ್ರಮಜೀವಿಗಳು ವಿರೋಧಿಸಬೇಕಾಗಿದೆ. ನಮ್ಮ ದೇಶದ ಶೇಕಡ 40ರಷ್ಟು ಮಂದಿಗೆ ವಾಸಕ್ಕೆ ಮನೆಯಲ್ಲಿ ಮಲಗಲು ಚಾವಣಿಯಿಲ್ಲ. ಹೀಗಿರುವಾಗ ತಾಲ್ಲೂಕಿಗೆ 150 ಮನೆಯಂತೆ ಕಟ್ಟಿಸುವುದು ಅಪಹಾಸ್ಯ ಮಾಡುವಂತಿದೆ. ಸರಕಾರಿ ನೌಕರರು ಒಂದು ದಿನದ ಸಂಬಳ ಬಿಟ್ಟು ಕೊಟ್ಟಿರುವುದರಿಂದ ಬರುವ ಸುಮಾರು 25 ಲಕ್ಷ ರೂಪಾಯಿಗಳಿಂದ ಬಡವರಿಗೆ ಬಟ್ಟೆ ಬರೆ ಕೊಡಲು ವ್ಯವಸ್ಥೆಯಾಗಿದೆ. ಆಹಾರಧಾನ್ಯಗಳ ಉತ್ಪತ್ತಿ ನೋಡಿದರೆ 65 ಲಕ್ಷ ಟನ್ನುಗಳ ಗುರಿಯಿದ್ದು, 47 ಲಕ್ಷ ಟನ್ ಮಾತ್ರ ಉತ್ಪತ್ತಿಯಾಗಿ 15 ಲಕ್ಷ ಟನ್ನುಗಳ ಕೊರತೆಯಿದೆ.

ಇದನ್ನು ನಾವು ನೋಡುವುದಾದರೆ, ರಾಜ್ಯದಲ್ಲಿ ಎಲ್ಲರಿಗೂ ಕೂಡ ಸಮಾನವಾದ ಜೀವನವನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇಂತಹ ರಾಜ್ಯದಲ್ಲಿ ನಮಗೆ ಸಿಗತಕ್ಕದ್ದು ತಿರುಪೆ ಎತ್ತಿರತಕ್ಕ ಬಟ್ಟೆ, ಆಹಾರದ ಕೊರತೆ. ಅದಕ್ಕೆ ಬದಲಾಗಿ ನಮ್ಮ ದೇಶದಲ್ಲಿರತಕ್ಕ ಬಂಡವಾಳಶಾಹಿಗಳಿಗೆ, ಗುತ್ತೇದಾರರಿಗೆ, ಜನರ ಹಿತವನ್ನು ಅಲಕ್ಷಿಸಿ, ರಾಜ್ಯದ ಹಿತವನ್ನು ಅಲಕ್ಷಿಸಿ, ಅವರಿಗೆ ಕೊಡಬಾರದೇ ಇರತಕ್ಕ ಸೌಲಭ್ಯವನ್ನು ಕೊಡುವುದಕ್ಕೆ ಹೊರಟಿದ್ದಾರೆ. ಅದಕ್ಕೆ ಬೇಕಾದಷ್ಟು ಕಾರಣಗಳನ್ನು ಇವರು ಹೇಳಬಹುದು. ಇದು ನಾವು ಮಾಡಿದ್ದಲ್ಲ, ಹಿಂದಿನ ಸರ್ಕಾರ ಮಾಡಿದ್ದು ಎಂದು. ಇವತ್ತಿನ ದಿವಸ ಅವರನ್ನು ಕೆಟ್ಟವರು, ನಮ್ಮ ಹಿತವನ್ನು ಸಾಧಿಸುತ್ತಾ ಇಲ್ಲ ಎಂದು, ಇವರಾದರೂ ನಮ್ಮ ಹಿತವನ್ನು ಸಾಧಿಸುತ್ತಾರೆ ಎನ್ನುವ ದೃಷ್ಟಿಯಿಂದ ನಿಮ್ಮನ್ನು ಜನ ಇಲ್ಲಿಗೆ ಕಳುಹಿಸಿರುವುದು. ಯಾವ ಇಂಡಸ್ಟ್ರೀಸ್ ಆಗಲೀ, ಯಾವ ಸಮಸ್ಯೆಗೂ ಪರಿಹಾರವನ್ನು ಹುಡುಕುವುದರಲ್ಲಿ ಇವರು ವಿಫಲರಾಗಿ ರಾಜ್ಯಭಾರ ನಡೆಸುತ್ತಿದ್ದಾರೆ. ಇಂಥ ಒಂದು ಭೀಕರವಾದ ಕರಾಳದೃಶ್ಯವನ್ನು ನಾವು ನಮ್ಮ ರಾಜ್ಯದಾದ್ಯಂತ ನೋಡುತ್ತಿದ್ದೇವೆ. ಎಲ್ಲಾ ಸಮಸ್ಯೆಗೂ ಈ ಆಯವ್ಯಯದಲ್ಲಿ ಪರಿಹಾರ ಇದೆಯೆಂದರೆ ಖಂಡಿತವಾಗಿಯೂ ಇದರಲ್ಲಿ ಯಾವ ಸಮಸ್ಯೆಗೂ ಕೂಡ ಇದರಲ್ಲಿ ಪರಿಹಾರವಿಲ್ಲ. ಗವರ್ನರ್ ಭಾಷಣದ ಮೇಲೆ ನಾನು ಮಾತನಾಡುತ್ತಾ ಹೇಳಿದೆ, ಭೂಮಿ ಕೊಡಿ ಎಂದು ಹೇಳಿದೆ, ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ 8 ಜಿಲ್ಲೆಗಳಲ್ಲಿ ಮಾತ್ರ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅಷ್ಟೇ ದುರ್ಬಲವಾದ, ಕಠಿಣ ಪರಿಸ್ಥಿತಿ ಕೋಲಾರ ಮತ್ತು ಇತರೆ ಕಡೆಗಳಲ್ಲಿ ಇದೆ. ನಮ್ಮ ಜಿಲ್ಲೆಯ 70-80 ಗ್ರಾಮಗಳಿಗೆ

ಕುಡಿಯುವ ನೀರಿನ ಸೌಲಭ್ಯವಿಲ್ಲ. ಸರ್ಕಾರ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿದೆ. ಆದರೆ ಅದನ್ನು ನಮ್ಮ ಜಿಲ್ಲೆಯಲ್ಲಿ ಬಗೆಹರಿಸುವುದಕ್ಕೆ ಇವರಿಗೆ ಸಾಧ್ಯವಾಗುತ್ತಾ ಇಲ್ಲ. ಶಾಶ್ವತವಾದ ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಬೆಂಗಳೂರು, ಕೋಲಾರ ಮತ್ತು ಇತರೆ ಜಿಲ್ಲೆಗಳಲ್ಲಿ ತೆಗೆದುಕೊಳ್ಳಿರಿ ಎಂದು ಹೇಳಿದರೂ ಕೂಡ ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ತಯಾರಾಗಿಲ್ಲ. ಇದನ್ನು ನಾವು ಆಲೋಚನೆ ಮಾಡುತ್ತಾ ಹೋದರೆ, ನಾವಾದರೂ ಕೂಡ ಏತಕ್ಕೆ ಈ ಸಂದರ್ಭದಲ್ಲಿದ್ದೇವೆ, ಇಂಥ ಸರ್ಕಾರ ಏತಕ್ಕೆ ಇದೆ ಎಂದು ಸಾಮಾನ್ಯ ಜನ ಕೂಡ ಆಲೋಚನೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಗತ್ಯಂತರವಿಲ್ಲದೆ ನಾನು ಈ ಆಯವ್ಯಯ ಪತ್ರವನ್ನು ವಿರೋಧ ಮಾಡಬೇಕಾಗಿದೆ.

ಶ್ರೀ ಎಚ್.ಎಸ್. ಸಿದ್ದಪ್ಪ – ಅವರನ್ನು ಇಳಿಸಲಿಕ್ಕೆ ತಯಾರಾಗಿ.

ಶ್ರೀ ಸಿ. ಬೈರೇಗೌಡ ; ನಾವು ಅವರ ಜೊತೆಗೆ ಭಾಗ ಕೇಳಬೇಕು ಎಂದು ಜಗಳ ಆಡುತ್ತಾ ಇಲ್ಲ. ಕೋಲಾರದಲ್ಲಿ ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ ಎಂದು ನನಗೆ ಗೊತ್ತಿದೆ. ಅಲ್ಲಿ ಪರಿಸ್ಥಿತಿ ಏನು ಇದೆಯೆಂದೂ ಗೊತ್ತಿದೆ. ಆದರೂ ಸಹ ಯಾರೋ ಒಬ್ಬ ಅನಾಮಧೇಯ ನನಗೆ ಒಂದು ಪತ್ರ ಬರೆದಿದ್ದಾನೆ. ಅವನದು ಯಾವ ಊರೋ ಗೊತ್ತಿಲ್ಲ. ಆ ಪತ್ರದಲ್ಲಿ ಬರೆದಂಥ ಒಂದು ಪದ್ಯವನ್ನು ಇಲ್ಲಿ ಓದುವುದು ಅವಶ್ಯಕ ಎಂದು ನಾನು ಭಾವಿಸುತ್ತೇನೆ.

*"ನಮ್ಮದೇ ನಾಡೆಲ್ಲಾ,*
*ನಮ್ಮವರೇ ಜನರೆಲ್ಲಾ*
*ನಿಲ್ಲಲು ನೆಲೆಯಿಲ್ಲ*
*ಮಲಗಲು ಮನೆಯಿಲ್ಲ*
*ಮಹಡಿಯ ಮನೆಯ ಸಾಲುಗಳು*
*ಒಳಗೆ ಬೆಕ್ಕು ನಾಯಿಗೆ*
*ಒಳ್ಳೆಯ ಭೋಗಗಳು*
*ಬಡವರ ಬಾಳು ಕಣ್ಣೀರಿನ ಪಾಳು*
*ಬೀದಿ ನಾಯಿಗಿಂತ ಕೀಳು "*

ಇವತ್ತಿನ ದಿವಸ ಈ ಬಡ್ಜೆಟ್ಟಿನಲ್ಲಿರತಕ್ಕದ್ದು, ಮೈಸೂರು ರಾಜ್ಯದ ಜನತೆಗೆ ಕಣ್ಣೀರಿನ ಪಾಲು ಬಿಟ್ಟರೆ ಮತ್ತೆ ಏನು ಇಲ್ಲ ಎಂದು ನಾನೂ ಈ ಸಂದರ್ಭದಲ್ಲಿ ಒತ್ತಾಯದಿಂದ ಹೇಳಬೇಕಾಗಿದೆ. ಬೀದಿ ನಾಯಿಗಿಂತ ಕೂಡ ನಮ್ಮ ರಾಜ್ಯದ ಜನರ ಪರಿಸ್ಥಿತಿ ಕಡೆಯದಾಗಿದೆ. ಕೋಲಾರ ಜಿಲ್ಲೆಯಲ್ಲಿ ಬಹಳ ಭೀಕರ ಪರಿಸ್ಥಿತಿ ಇದ್ದರೂ ಕೂಡ ಸರ್ಕಾರ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವಿಫಲವಾಗಿದೆ ಎಂದು ಸೂಚಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರೇ, ಈ ಹೊತ್ತು ಹಾಗೂ ನೆನ್ನೆ ಪಿ.ಎ.ಸಿ. ವರದಿಯನ್ನು ಈ ಮನೆ ಪರಿಶೀಲಿಸುತ್ತಿದೆ. ಈ ಸಂದರ್ಭದಲ್ಲಿ ಈ ಸಮಿತಿಯ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನಾನು ಹೃತ್ಪೂರ್ವಕವಾಗಿ ವಂದಿಸಬೇಕಾದ್ದು ನನ್ನ ಕರ್ತವ್ಯ ಕಾರಣವೇನೆಂದರೆ ಹಿಂದೆ ಅನೇಕಾನೇಕ ಈ ತರಹ ಅಕೃತ್ಯಗಳು ನಡೆದಿರಬಹುದು. ಆದರೆ ಅಂದು ಇದ್ದಂಥ ಸಮಿತಿಗಳು ಧೈರ್ಯವಾಗಿ ಕೆಲಸ ಮಾಡತಕ್ಕವುಗಳಾಗಿರಲ್ಲಿಲ್ಲ. ಅಂತ ಅವಕಾಶವನ್ನು ಈಗಿನ ಸಮಿತಿ ಉಪಯೋಗಿಸಿಕೊಂಡು ಧೈರ್ಯವಾಗಿ ಸತ್ಯವನ್ನು ನೇರವಾಗಿ ಮೈಸೂರು ರಾಜ್ಯದ ಜನತೆಯ ಮುಂದೆ ಇಟ್ಟಿರುವುದಕ್ಕೆ ನಾನು ಮತ್ತೊಮ್ಮೆ ಅವರನ್ನು ವಂದಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಕೇವಲ 24 ಗಂಟೆಯಲ್ಲಿ 15 ಲಕ್ಷ ರೂಪಾಯಿಗಳನ್ನು ಹುಲಕೋಟಿ ಸೊಸೈಟಿಗೆ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಕೋಲಾರದಲ್ಲಿ ಸಂಕೀರ್ಣ ಬೀಜಗಳ ಉತ್ಪಾದನೆ ಜಾಸ್ತಿಯಾಗಿದೆ. ರೈತರು ಬೆಳೆಯುವುದಕ್ಕೆ ಮುಂದೆ ಬರುತ್ತಿದ್ದಾರೆ. ರೈತರಿಗೆ ಅನುಕೂಲವಾಗುವ ರೀತಿಯಲ್ಲಿ, ಕೋಲಾರದಲ್ಲಿ ಸೀಡ್ ಪ್ರೋಸೆಸಿಂಗ್ ಯೂನಿಟ್ ಇಲ್ಲ ಎಂದು ಪತ್ರ ಬರೆದಿದ್ದರೆ ಮಂತ್ರಿಗಳು ಉತ್ತರದಲ್ಲಿ ಬರೆದಿದ್ದಾರೆ. ಮಂತ್ರಿಗಳ ಉತ್ತರದಲ್ಲಿ " I have your letter of the 28th April 1973 regarding the seed processing unit at Kolar Taluk. I have asked the Director of Agriculture to send the proposal early." ಹೇಳಿದ್ದಾರೆ. ಇವತ್ತು ಕೂಡ ಸೀಡ್ ಪ್ರೋಸೆಸಿಂಗ್ ಯೂನಿಟ್‌ಗಾಗಲೀ ಸಂಬಂಧಪಟ್ಟವರು ಯಾವುದೂ ಕೂಡ ಇಲ್ಲ.

ಅಧ್ಯಕ್ಷರು - ಮಿನಿಸ್ಟರ್‌ರವರು ಮಾಡುವುದಿಲ್ಲ ಎಂದು ಹೇಳಿದ್ದಾರೆಯೇ?

ಶ್ರೀ ಸಿ. ಬೇರೈಗೌಡ - ಅಲ್ಲಿಗೆ 24 ಗಂಟೆಯೊಳಗೆ 15 ಲಕ್ಷ ರೂ. ಕೊಡುವುದಕ್ಕೆ ಆಗುತ್ತದೆ. ಇಲ್ಲಿ ಕೋಲಾರದಲ್ಲಿ ಸೀಡ್ ಪ್ರೋಸೆಸಿಂಗ್ ಯೂನಿಟ್‌ಗೆ ಮಾಡುವುದಕ್ಕಾಗುವುದಿಲ್ಲವೇ ? ಅಲ್ಲಿ ಎಷ್ಟು ಬೀಜ ಬೆಳೆಯುತ್ತಿದ್ದಾರೆಂಬ ಅಂಕಿ-ಅಂಶಗಳು ಸರ್ಕಾರದಲ್ಲಿ ಇದೆ, ಮಂತ್ರಿಗಳಿಗೂ ಗೊತ್ತಿದೆ. ಆದರೂ ಸೀಡ್ ಪ್ರೋಸೆಸಿಂಗ್ ಯೂನಿಟ್ ಮಾಡುವುದಕ್ಕೆ ಆಗುವುದಿಲ್ಲವೇ ? ಆದುದರಿಂದ ನಾನು ಹೇಳುವುದು ಹುಲಕೋಟೆಯಲ್ಲಿರತಕ್ಕ ಸೊಸೈಟಿಗೆ ಯಾವುದೇ ಸೊಸೈಟಿಯಾಗಲಿ ಕೊಡರಿ. ಪ್ರತಿಯೊಂದಕ್ಕೂ ಕೂಡ ಅಲಾಟ್‌ಮೆಂಟ್ ಮಾಡುವ ರೀತಿಯಲ್ಲಿ ಏರ್ಪಾಡು ಮಾಡಿರಿ. ಆದರೆ ಅದು ನಮ್ಮ ಕ್ಷೇತ್ರ ನಾನು ಆ ಭಾಗದವನು ನೀವು ಈ ಭಾಗದವರು ಆ ಭಾಗದಲ್ಲಿ ಕೆಲಸ ಆಗಬೇಕು. ಈ ಭಾಗದಲ್ಲಿ ಕೆಲಸ ಆಗಬಾರದು ಎನ್ನುವ ಭಾವನೆ ಬಿಟ್ಟು ಮೈಸೂರು ರಾಜ್ಯದಲ್ಲಿರತಕ್ಕ ಪ್ರತಿಯೊಂದು ಅಂಗುಲಕ್ಕೂ ನಾನು ಮಂತ್ರಿಯಾಗಿದ್ದೇನೆ. ಪ್ರತಿಯೊಂದು ವಿಭಾಗದ ಮೇಲ ಕೂಡ ಇರತಕ್ಕ ಪ್ರಜೆಯು ಸೌಕರ್ಯ ಪಡೆಯುವುದಕ್ಕೆ ಅರ್ಹರು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದು ತಮಗೆ ಸೂಚಿಸಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನಲ್ಲಿ ಮಾನ್ಯ ತೋರಿರುವುದರಿಂದ ನಾವು ರಾಜಿನಾಮೆ ಖಂಡಿತವಾಗಿ ಕೊಡಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

# ಭೂ ಸುಧಾರಣೆ ತಿದ್ದುಪಡಿಗೆ ವಿರೋಧ 29-5-73

ಶ್ರೀ ಸಿ. ಬೈರೇಗೌಡ - ಮಾನ್ಯ ಉಪಾಧ್ಯಕ್ಷರೇ, ಈವೊತ್ತಿನ ದಿವಸ ಸರ್ಕಾರ ಭೂ ಸುಧಾರಣೆ ಮಸೂದೆಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೆ. 1962ನೇ ಇಸವಿ ಚುನಾವಣೆಯಲ್ಲಿ ಮತ್ತು 1972ನೇ ಇಸವಿ ಚುನಾವಣೆಯಲ್ಲಿ ಆಗ ಅಧಿಕಾರದಲ್ಲಿದ್ದವರು ಉಳುವವನಿಗೆ ಎಲ್ಲ ಭೂಮಿಯನ್ನು ಹಂಚುತ್ತೇವೆ ಎಂದು ಹೇಳಿದ್ದರು. ಅದೇ ರೀತಿ ಅವರು ಚುನಾವಣೆ ಸಮಯದಲ್ಲಿ ಉಳುವವನಿಗೆ ಭೂಮಿ ಅನ್ನುವುದನ್ನೆಲ್ಲಾ ಹಸ್ತಪ್ರತಿಗಳಲ್ಲಿ, ವಾಲ್‌ಪೋಸ್ಟರ್‌ಗಳಲ್ಲಿ ಪ್ರಿಂಟ್ ಮಾಡಿ ಹಂಚುತ್ತಿದ್ದರು. ಹಾಗೆ ಮಾಡಿ 165 ಜನರು ಕೂಡ ಈ ಸಭೆಯಲ್ಲಿ ಒಂದು ಕೂಡಿದ್ದರೆ ಉಳುವವನಿಗೆ ಭೂಮಿಯನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದ ಜನ ಈವೊತ್ತು ತಂದಿರತಕ್ಕಂತಹ ಅಮೆಂಡ್‌ಮೆಂಟ್‌ನ್ನು ನೋಡಿದರೆ ಅದಕ್ಕೂ ಇದಕ್ಕೂ ಯಾವ ವಿಧವಾದ ಸಂಬಂಧವು ಇಲ್ಲವೆಂಬುದು ಕಾಣುತ್ತದೆ. ಉಳುವವನಿಗೆ ಭೂಮಿ ಎಂದು ಯಾರು ಭೂಮಿಯನ್ನು ಉತ್ತು ಬೆವರು ಸುರಿಸಿ, ರಕ್ತ ಸುರಿಸಿ ಮಾಡುತ್ತಾರೋ ಅಂತವರಿಗೆ ಭೂಮಿಯನ್ನು ಕೊಡುತ್ತೇವೆ ಎಂದು ಹೇಳಿ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಆದರೆ ಈವೊತ್ತಿನ ದಿವಸ ಅಂತವರಿಗೆ ಭೂಮಿಯನ್ನು ಕೊಡುವುದಕ್ಕೆ ಹಿಂದು ಮುಂದು ನೋಡುತ್ತಾ ಇರುವುದು ಬಹಳ ಶೋಚನೀಯ ಈವೊತ್ತಿನ ದಿವಸ ಕೆಲವು ನನ್ನ ಸ್ನೇಹಿತರು ಈ ಬಗ್ಗೆ ಹೇಳಿದ್ದಾರೆ. ಆದುದರಿಂದ ನಾನು ಕೂಡ ಹೇಳುವುದು ಏನೆಂದರೆ ಈವೊತ್ತಿನ ದಿವಸ ವಿದ್ಯಾ ಸಂಸ್ಥೆಗಳು ಏನು ಇವೆಯೋ ಈ ಬಡ ವಿದ್ಯಾಸಂಸ್ಥೆಗಳು ನಡೆಸುವುದಕ್ಕೆ ಅವರು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇರಬೇಕು ಎಂದು, ಸಮಾಜವಾದ ಮಾರ್ಗದಲ್ಲಿ ನಡೆಯುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ ಮಾತೆತ್ತಿದರೆ ಸಮಾಜವಾದ ಮಂತ್ರವನ್ನು ಜಪಿಸುತ್ತಾರೆ. ನಾನು ಅವರಲ್ಲಿ ಒಂದು ಪ್ರಶ್ನೆ ಕೇಳುವುದು ಏನೆಂದರೆ ಕಾಂಗ್ರೆಸ್ಸಿನವರಿಗೆ ನ್ಯಾಯವಾದ ಸಮಾಜವಾದ ಬೇಕಾಗಿದೆಯೋ? ಬೇರೆ ದೇಶಗಳಲ್ಲಿ ಯಾವ ರೀತಿ ಸಮಾಜವಾದ ಇದೆ ಎನ್ನುವುದನ್ನು ನೋಡಲಿ ಅದೇ ರೀತಿ ಇಲ್ಲಿ ತಂದಿರತಕ್ಕಂತ ಸಮಾಜವಾದ ಇದೆಯೇ ?

ಚೈನಾ ಮತ್ತು ರಷ್ಯಾ ದೇಶಗಳಲ್ಲಿ ಒಂದು ಮಗು ಹುಟ್ಟಿದರೆ ಅದು ದೇಶದ ಸ್ವತ್ತು ಅದರ ಏಳಿಗೆ, ಅದಕ್ಕೆ ಕೊಡತಕ್ಕ ವಿದ್ಯಾಭ್ಯಾಸ ಎಲ್ಲವೂ ಅಲ್ಲಿರತಕ್ಕ ಸಮಾಜವಾದ ಮತ್ತು ಸರ್ಕಾರದ ಜವಾಬ್ದಾರಿ ಇಂದು ಸಮಾಜವಾದ ಮಾರ್ಗದಲ್ಲಿ ನಡೆಯುತ್ತವೆಂದು ಹೇಳುವ ಸರ್ಕಾರ ಇತರರಿಗೆ ಸೌಲಭ್ಯವನ್ನು ಕೊಟ್ಟು ಅದರ ಮೂಲಕ ವಿದ್ಯಾಭ್ಯಾಸ ಕೊಡಿಸುತ್ತೇವೆಂದು ಹೇಳುವುದು ಯಾವ ಸಮಾಜವಾದ ? ಸಮಾಜವಾದದ ತಪ್ಪು ಕಲ್ಪನೆ ಏಕೆ ಬಂತು ಎಂದು ನನಗೆ ಅರ್ಥವಾಗುತ್ತಿಲ್ಲ. ಕೆಲವು ಧಾರ್ಮಿಕ ಸಂಸ್ಥೆಗಳಿಗೆ ಭೂಮಿಯನ್ನು ಇಟ್ಟುಕೊಳ್ಳತಕ್ಕ ಅವಕಾಶ

ಈ ತಿದ್ದುಪಡಿಯಿಂದ ಸಿಕ್ಕುತ್ತದೆ ; ಧಾರ್ಮಿಕ ಸಂಸ್ಥೆಗಳ ಬಗ್ಗೆ ಕೆಲವು ಸ್ನೇಹಿತರು ಹೇಳಿದರು. ಅವು ಬಹಳ ಒಳ್ಳೆಯ ಕೆಲಸ ಮಾಡುತ್ತಿವೆ ಎಂದು ರಿಲಿಜನ್ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ವಿಷಯ ಆತನು ಮನೆಯಲ್ಲಿ ಯಾವ ದೇವರಿಗಾದರೂ ಪೂಜೆ ಮಾಡಲಿ ಏನಾದರೂ ಮಾಡಿಕೊಳ್ಳಲಿ, ಹೊರಗಡೆ ಬಂದಾಗ ಸಾರ್ವಜನಿಕ ಹಿತದೃಷ್ಟಿಯನ್ನು ಕಾಪಾಡುವುದಕ್ಕೆ ಬದಲಾಗಿ ವಿರೋಧವಾಗಿರುವ ಅನೇಕ ಸಂದರ್ಭಗಳು ಇವೆ. ಇಂಥವರಿಗೆ ಈ ಹೊತ್ತು ಭೂಮಿ ಕೊಡಬೇಕು ಎಂದು ಹೇಳುತ್ತಾರೆ ನಮ್ಮ ದೇಶದ ಚರಿತ್ರೆಯನ್ನು ನೋಡಿದರೆ ಗುರುಗಳಿಂದಲೇ ಸಮಾಜದಲ್ಲಿರತಕ್ಕ ಅನ್ಯಾಯಗಳು ನಡೆಯಲು ಕಾರಣ. ಹಿಂದಿನಿಂದ ಗುರುಗಳು, ಮಠಗಳು ಇವುಗಳು ಆಶ್ರಯದಿಂದಲೇ ಈ ಪರಿಸ್ಥಿತಿಗೆ ನಾವು ಬಂದಿದ್ದೇವೆ ಸಿದ್ದಗಂಗೆ ಮಠ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಕೆಲವರು ಹೇಳಿದರು. ಆದರೆ ಅಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ಹೇಳುವುದಕ್ಕೆ ಅವರಿಗೆ ಧೈರ್ಯವಿಲ್ಲ. ಅಲ್ಲಿ ಅನೇಕ ಮುಂದೆ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಕೊಡುತ್ತಾ ಇರಬಹುದು. ಅಲ್ಲಿ ಉಂಟಾದ ವ್ಯವಸ್ಥೆಯನ್ನು ನೋಡಿದರೆ ಎರಡು ಅಡುಗೆ ಮನೆಗಳಿವೆ. ಒಂದು ಕೋಮಿನವರಿಗೆ ಒಂದು ಅಡುಗೆ ಮನೆ ಮತ್ತು ಉಳಿದೆಲ್ಲ ಕೋಮಿನವರಿಗೂ ಒಂದು ಅಡುಗೆ ಮನೆ. ಎಲ್ಲ ಸರಿಯಾಗಿ ನಡೆಯುತ್ತಿದೆ ಎಂದು ಹೇಳಿದ ಮಾನ್ಯ ಸದಸ್ಯರು ಇದನ್ನು ಏಕೆ ಹೇಳಲಿಲ್ಲ ? ಧಾರ್ಮಿಕ ಸಂಸ್ಥೆಗಳ ಮುಖ್ಯಗುರಿ ಸಮಾಜದಲ್ಲಿರತಕ್ಕ ವ್ಯತ್ಯಾಸಗಳನ್ನು ಹೋಗಲಾಡಿಸಿ ಎಲ್ಲರೂ ಸರಿಸಮಾನರಾಗಿ ಬದುಕುವುದಕ್ಕೆ ವ್ಯವಸ್ಥಿತವಾದ ರೀತಿಯ ಪದ್ಧತಿಯನ್ನು ಜಾರಿಗೆ ತರುವುದು. ಆ ರೀತಿಯ ಮನೋಭಾವನೆ ಸಮಾಜದಲ್ಲಿ ಬೆಳೆಸುವುದು ಆಗಿರಬೇಕು. ಆದರೆ ಈ ಹೊತ್ತು ನಡೆಯುತ್ತಿರುವುದು ಇದಕ್ಕೆ ತದ್ವಿರುದ್ಧವಾಗಿದೆ. ಇಂತವರಿಗೆ ಜಮೀನು ಕೊಡುವುದಕ್ಕೆ ನಮ್ಮ ಸರ್ಕಾರ ಹೊರಟಿದೆ.

ಪ್ರಪಂಚದಲ್ಲಿ ಒಂದು ಧಾರ್ಮಿಕ ಪದ್ಧತಿಯನ್ನು ಅನುಸರಿಸುತ್ತಿರುವ ಒಂದು ಜಾತಿ ಎಂದರೆ ಕ್ರಿಶ್ಚಿಯನ್ ಜಾತಿ. ಎರಡನೇ ಮಹಾ ಯುದ್ಧದ ಕಾಲದಲ್ಲಿ ಪ್ರಪಂಚವೇ ಯುದ್ಧದಲ್ಲಿ ತೊಡಗಿರತಕ್ಕ ಕಾಲ ಬಂದಾಗ ದೊಡ್ಡ ಪವರ್ ಸಮಿಟ್ ಕಾನ್‌ಫೆರೆನ್ಸ್ ನಡೆದ ಸಂದರ್ಭದಲ್ಲಿ ಪೋಪ್ ಅವರನ್ನೂ ಅಲ್ಲಿಗೆ ಕರೆಸಬೇಕೆಂಬ ವಿಷಯ ಬಂದಾಗ ಸ್ಟಾಲಿನ್ ಅವರು ಅವರಲ್ಲಿರುವ ಸೈನ್ಯದ ಬಲವೆಷ್ಟು ಎನ್ನುವ ಮಾತನ್ನು ಕೇಳಿದರು. ಈ ಹೊತ್ತಿನ ದಿವಸ ಧರ್ಮ, ಧರ್ಮ ಎಂದು ಕಟ್ಟಿಕೊಂಡು ಯಾರು ಉದ್ಧಾರವಾಗುತ್ತಿದ್ದಾರೆ. ಸ್ಟಾಲಿನ್ ಅವರು ವಾಸ್ತವಿಕವಾದ ರೀತಿಯಲ್ಲಿ ಹೇಳಿದ್ದಾರೆ. ಈ ಸರ್ಕಾರದವರು ಉಳುವವನಿಗೆ ಭೂಮಿ ಎಂದು ಹೇಳಿದರು. ಆದರೆ ಈ ಹೊತ್ತು ಅವರು ಹೋಗುತ್ತಿರತಕ್ಕ ರೀತಿಯನ್ನು ನೋಡಿದರೆ ಉಳುವವರಿಗೆ ಭೂಮಿ ಸಿಕ್ಕದೆ ಇರುವ ರೀತಿಯಲ್ಲಿ, ಅವನ ಸಮಾಧಿ ಮಾಡುವ ರೀತಿಯಲ್ಲಿ ಮುಂದುವರೆಯುತ್ತಿದ್ದಾರೆ ಎಂದು ಹೇಳಬಹುದು. ಇವರಿಗೆ ಒಂದು ನಾಲಿಗೆ ಇದೆಯೇ ? ಎಷ್ಟು ನಾಲಿಗೆ ಇದೆ. ನಮ್ಮ ಕಡೆ ಊಸರವಳ್ಳಿ ಎಂದು ಹೇಳುತ್ತಾರೆ. ಅದು ಆಗಾಗ್ಗೆ ಬಣ್ಣವನ್ನು ಬದಲಾಯಿಸುತ್ತಿರುತ್ತದೆ ಅದು ನೈಸರ್ಗಿಕವಾಗಿ ಅದಕ್ಕೆ ಬಂದಿರುವ....... ಇಂಥ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆಯಲ್ಲ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷ ಆಡಳಿತದಲ್ಲಿದ್ದಾಗ ಅಲ್ಲಿ

ಇದೇ ರೀತಿಯಾಗಿ ವಿನಾಯಿತಿ ಕೊಟ್ಟಿದ್ದರು ಎನ್ನುವ ನಿರ್ದೇಶನವನ್ನು ಮಾನ್ಯ ಮಂತ್ರಿಗಳು ಕೊಡಬಹುದು. ಭೂ ಸುಧಾರಣೆ ಅಲ್ಲಿ ತಂದಾಗ ಕೇಂದ್ರದಲ್ಲಿದ್ದ ಸರ್ಕಾರದ ಒತ್ತಾಯದಿಂದ ಅಂಥ ವಿಧಿಗಳನ್ನು ಅಳವಡಿಸಿ ಮಸೂದೆಯನ್ನು ತರಬೇಕಾಯಿತೆಲ್ಲ ವಿನಾ ಅದನ್ನು ನಮ್ಮ ಪಕ್ಷ ಸಾಮಾನ್ಯ ಜನರ ಹಿತದೃಷ್ಟಿಯಿಂದ ತಂದದ್ದಲ್ಲ. ಒಂದು ವೇಳೆ ನಮ್ಮ ಮಂತ್ರಿಗಳು ಇದನ್ನು ಉದಾಹರಿಸುವುದಾದರೆ ಅಲ್ಲಿ 15 ಎಕರೆ ಸೀಲಿಂಗ್ ಎಂದು ಮಾಡಿರುವಾಗ ಇಲ್ಲಿಯೂ ಅದೇ ರೀತಿ ಏಕೆ ಮಾಡಬಾರದಾಗಿತ್ತು ? ಯಾವುದಾದರೂ ಪ್ರದೇಶದಲ್ಲಿ ಗೇಣಿದಾರನು ಭೂಮಿ ಇಲ್ಲದೆ ಇರುವವನು ಮನೆಯನ್ನು ಕಟ್ಟಿಕೊಂಡರೆ ಅವನಿಗೆ ಹತ್ತು ಸೆಂಟ್‌ಭೂಮಿ ಕೊಡಬೇಕೆಂದು ಅದರಲ್ಲಿದೆ. ಆ ರೀತಿ ಪ್ರಗತಿಪರವಾದ ಕಾನೂನನ್ನು ಸರ್ಕಾರ ತರದೆ ಯಾರದೋ ಪ್ರಭಾವಕ್ಕೆ ಒಳಗಾಗಿ ಈ ತಪ್ಪು ದಾರಿಗೆ ಏಕೆ ಹೋಗುತ್ತಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲ. ಇದು ಖಂಡಿತವಾಗಿ ಖಂಡನೀಯವಾದುದು. ಈ ತಿದ್ದುಪಡಿಯನ್ನು ಸರ್ಕಾರ ವಾಪಸ್ಸು ಪಡೆಯಬೇಕು. ನಿಮ್ಮ ಕಡೆ ಬಹುಮತವಿದೆ ಎಂದು ಇದನ್ನು ಪಾಸ್ ಮಾಡಿದರೂ ಕೂಡ ನಾಳೆ ನಿಮ್ಮನ್ನು ನುಚ್ಚುನೂರು ಮಾಡುವ ಜನರಿದ್ದಾರೆ ಎನ್ನುವ ಎಚ್ಚರಿಕೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

## ಟಿಪ್ಪು ಬರೆಸಿದ ಮಹಾಭಾರತ 31-5-73

ಶ್ರೀ ಸಿ. ಬೈರೇಗೌಡ - ಅಧ್ಯಕ್ಷರೇ, ಈ ಕಾನೂನು ತಿದ್ದುಪಡಿ ಮಾಡುವುದರ ಕೊನೆ ಘಟ್ಟದಲ್ಲಿದ್ದೇವೆ. ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಟಿಪ್ಪುಸುಲ್ತಾನ ಮಹಾಭಾರತ ಕಥೆಯನ್ನು ಕೇಳಿ ಅದು ಬಹಳ ಚೆನ್ನಾಗಿದೆ. ತನ್ನ ಹೆಸರಿನಲ್ಲಿಯೂ ಒಂದು ಮಹಾಭಾರತವನ್ನು ಬರೆಸಬೇಕೆಂದು ಹೇಳಿದನಂತೆ. ಅದಕ್ಕಾಗಿ ದೇಶದಲ್ಲಿದ್ದ ಪಂಡಿತರನ್ನು, ಬುದ್ಧಿವಂತರನ್ನು ಕರೆಸಿ ಶ್ರೀರಂಗಪಟ್ಟಣದಲ್ಲಿ ದೊಡ್ಡ ಬಿಡಾರಕ್ಕೆ ವ್ಯವಸ್ಥೆಯನ್ನು ಮಾಡಿಸಿ ಮಹಾಭಾರತವನ್ನು ಬರೆಯಲು ವ್ಯವಸ್ಥೆ ಮಾಡಿದನಂತೆ, ಅದಕ್ಕಾಗಿ ಎರಡು ಮೂರು ವರ್ಷ ಅವಕಾಶಕೊಟ್ಟು, ಅವರ ಊಟೋಪಚಾರಗಳಿಗೆ ಬೇಕಾದ ಎಲ್ಲ ವ್ಯವಸ್ಥೆಯನ್ನು ಮಾಡಿದನಂತೆ. ಸ್ವಲ್ಪ ದಿವಸಗಳ ನಂತರ ಆ ಪಂಡಿತರನ್ನೆಲ್ಲ ಕರೆದು ಮಹಾಭಾರತವನ್ನು ಎಲ್ಲಿಯತನಕ ಬರೆದಿದ್ದೀರಿ, ಏನೇನು ಬರೆದಿದ್ದೀರಿ ಎಂದು ಕೇಳಿದನಂತೆ, ಆಗ್ಗೆ ಪಂಡಿತರು ಬಹಳ ಚೆನ್ನಾಗಿ ಬರೆದಿದ್ದೇವೆ. ಆದರೆ ನಮಗೆ ಒಂದು ಅನುಮಾನ ಬಂದಿದೆ. ಅದರ ಬಗ್ಗೆ ನಿಮ್ಮನ್ನು ಕೇಳಿ ಬಗೆಹರಿಸಬೇಕು ಎಂದಿದ್ದೇವೆ ಎಂದು ಹೇಳಿದ್ದಕ್ಕೆ ಬಿಟ್ಟು ಸುಲ್ತಾನನು ನಿಮ್ಮ ಅನುಮಾನವೇನು ಎಂದು ಕೇಳಿದನಂತೆ. ಆಗ ಪಂಡಿತರು ಹೇಳಿದರು. ಮಹಾಭಾರತದಲ್ಲಿ ದ್ರೌಪದಿಗೆ ಐದು ಜನ ಗಂಡಂದಿರು ಇದ್ದಾರೆ. ತಮ್ಮ ಧರ್ಮಪತ್ನಿಯವರಿಗೆ ಎಷ್ಟು ಜನ ಗಂಡಂದಿರು ಎನ್ನುವ ವಿಚಾರವನ್ನು ತಮ್ಮನ್ನು ಕೇಳಿ ಬರೆಯಬೇಕು, ಈ ಬಗ್ಗೆ ನಮಗೆ ಅನುಮಾನ ಬಂದಿದೆ ಎಂದು ಹೇಳಿದಾಗ ಟಿಪ್ಪು ಸುಲ್ತಾನನು ಅವರನ್ನೆಲ್ಲ ಹೊರಟು ಹೋಗಿ, ನೀವು ಬರೆದಿರುವುದನ್ನೆಲ್ಲ ಸುಟ್ಟು ಹಾಕಿ ಎಂದು ಹೇಳಿದನಂತೆ. ಅದೇ ರೀತಿ ನಮ್ಮ ಸರ್ಕಾರದವರು ಮಾಡುತ್ತಿರುವ ಕೆಲಸವಾಗಿದೆ. ಭೂಮಿ ಇಲ್ಲದವರಿಗೆಲ್ಲ ಭೂಮಿಯನ್ನು ಕೊಡುತ್ತೇವೆ ಎಂದು ಎಲ್ಲಿ ಹೋದರೂ ಪ್ರಚಾರ ಮಾಡಿ ಕೊನೆಗೆ ಏನು ಇಲ್ಲದಂತೆ ಮಾಡಿದ್ದಾರೆ.

ಕೊನೆಘಟ್ಟದಲ್ಲಾದರೂ ಏನಾದರೂ ಅನುಕೂಲವಾಗುವಂತೆ ಮಾಡುತ್ತಾರೆ ಎಂದು ಇದ್ದರೆ ಅದಕ್ಕೂ ಅವಕಾಶವಿಲ್ಲದಂತೆ ಒಂದು ಕಡೆ ಪ್ಲಾಂಟೇಷನ್ನುಗಳಿಗೆ ಹಾಕಿದ್ದ ಮಿತಿಯನ್ನು ತೆಗೆದುಹಾಕಿದರು. ಒಂದು ಕಡೆ ಮಿತಿಯನ್ನು ಹೆಚ್ಚು ಮಾಡುತ್ತಿದ್ದಾರೆ. ಈಗ ಶ್ರೀ ಅರಸ್ ಅವರು ಮಾಡಬೇಕಾದ್ದು ಏನೆಂದರೆ ಟಿಪ್ಪು ಸುಲ್ತಾನ ಮಹಾಭಾರತವನ್ನು ಬರೆಯಲು ಹೇಳಿ ನಂತರ ಅದನ್ನು ಸುಟ್ಟು ಹಾಕಿಸಿದ ಹಾಗೆ ಇದನ್ನೂ ಸುಟ್ಟು ಹಾಕಬೇಕು ಆ ರೀತಿಯಾಗಿದೆ. ಆದ್ದರಿಂದ ಈಗ ತಂದಿರುವಂಥ ತಿದ್ದುಪಡಿಗಳ ಬಗ್ಗೆ ಪುನರ್ಪರಿಶೀಲನೆ ಮಾಡಬೇಕೆಂದು ವಿನಂತಿ.

## ಸಮಾಜವಾದದ ಸಮಾಧಿ : 28-03-73

ಮಾರಾಟ ತೆರಿಗೆ ಮಸೂದೆಗೆ ಸಂಬಂಧಿಸಿದಂತೆ, 28-3-73ರಂದು ಸಿ.ಬಿ.ಯವರು ಮಾತನಾಡುತ್ತಾ, ಈ ಬಿಲ್ಲಿನ ಮೇಲೆ ಮಾತನಾಡುತ್ತಾ ಮಾನ್ಯ ಸದಸ್ಯರಾದ ಶ್ರೀ ನಾಗಣ್ಣನವರು ಸರಕಾರ ಮೇಲೆ ಕೆಲವು ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ಈ ಸರಕಾರ ಬಂದು ವರ್ಷದೊಳಗೆ ಇಂತಹ ಅನೇಕ ವಿಷಯಗಳನ್ನೂ ಕೇಳಿದ್ದೇವೆ. ಇವೊತ್ತಿನ ದಿವಸ ಇಲ್ಲಿ ತಂದಿರುವುದು ಅತಿ ಮಹತ್ವ ಉಳ್ಳ ಪರಿಸ್ಥಿತಿಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆಗೆ ಶ್ರೀಮಾನ್ ಶಾಮಣ್ಣನವರೂ ಸಹ ಇಂತಹ ಆಪಾದನೆಗಳು ಇನ್ನೂ ಅನೇಕ ಇವೆ ಎಂದೂ ಇಲ್ಲಿ ಹೇಳಿದರು. ಇಂತಹ ಸಮಯದಲ್ಲಿ ನನಗೆ ಉಂಟಾಗಿರತಕ್ಕ ಒಂದು ಸಂಶಯ ಎಂದರೆ ಕೇವಲ 70-80 ಜನರ ಮೇಲೆ ಅನುಕೂಲವಾಗುವಂತೆ ಈ ಒಂದು ವಿಧೇಯಕವನ್ನು ಸಭೆಯ ಮುಂದ ಏಕೆ ತಂದಿದ್ದಾರೆ ಎನ್ನುವುದು. ಇವರಿಂದ ಟ್ಯಾಕ್ಸ್ ವಸೂಲು ಮಾಡುವುದು ಕಷ್ಟವೇನಿಲ್ಲ ಮತ್ತು ಇವರಿಂದ 70-80 ಸಾವಿರ ರೂಪಾಯಿಗಳವರೆಗೆ ಬರುತ್ತದೆ. ಯಾವ ಆಧಾರದ ಮೇಲೆ ಇದನ್ನು ಕೈಬಿಡಬೇಕೆಂದು ಹೇಳುತ್ತಾರೆ ? ಇದು ಯಾವ ರೀತಿಯಾದ ಸಮಾಜವಾದ ಎಂದು ಇಲ್ಲಿ ಕೇಳಬೇಕಾಗಿದೆ. ಇದರಲ್ಲಿ ಸಮಾಜವಾದಕ್ಕೆ ಯಾವ ರೀತಿ ಅಡ್ಡಿ ಬರುತ್ತದೆ ? ಇಂತಹ ಮಸೂದೆ ತಂದು ಸಮಾಜವಾದ ಮಾಡುವುದಕ್ಕೆ ಬದಲಾಗಿ ಸಮಾಜವಾದವನ್ನು ಸಮಾಧಿ ಮಾಡಲು ತರುತ್ತಿದ್ದಾರೆಂದು ಇಲ್ಲಿ ಹೇಳಬೇಕಾಗಿದೆ. ನಮ್ಮ ಸರಕಾರ ಯಾರ ಹತ್ತಿರ ಹಣ ಇದೆ ಮತ್ತು ಯಾರು ಸುಂಕ ಕೊಡಲು ತಯಾರಾಗಿದ್ದಾರೆ ಅಂತಹವರ ಮೇಲೆ ಹೆಚ್ಚಿಗೆ ಟ್ಯಾಕ್ಸ್ ಹಾಕಿ ವಸೂಲು ಮಾಡಬಹುದು, ಇವೊತ್ತಿನ ದಿವಸ ಇದರಲ್ಲಿ ಯಾವ ರೀತಿ ಹಾರ್ಡು ಕೇಸು ಇದೆ ? ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿ ಬಡ ಜನರನ್ನು ಶೋಷಣೆ ಮಾಡುವ ಜನಕ್ಕೆ ಏಕೆ ಅನುಕೂಲಗಳನ್ನು ಮಾಡಬೇಕು? ಇದರಲ್ಲಿ ಕೇವಲ 70-80 ಜನರಿಗೆ ಮಾತ್ರ ಅನುಕೂಲವಾಗುತ್ತದೆ. ಇವರಿಗೆ ಶೇಕಡಾ ಎರಡರಷ್ಟು ಸುಂಕ ತೆಗೆಯುವುದರಿಂದ ಅಂತಹ ಅನುಕೂಲವೇನೂ ಆಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ನಾಗಣ್ಣನವರೇ ಹೇಳಿದಂತೆ ಅವರಿಗೆ ಇದರ ವಸೂಲಿ ಅಧಿಕಾರ ಕೊಟ್ಟರೆ ಇಂತಹ ವರ್ತಕರಿಂದಲೇ ಸುಮಾರು ನಲವತ್ತು ಲಕ್ಷದಷ್ಟು ವಸೂಲಿ ಮಾಡಬಹುದು ಎಂದು ಹೇಳಿ ಅವರು ಸರಕಾರಕ್ಕೆ ಸವಾಲು ಹಾಕಿದ್ದಾರೆ. ಈಗ ಸುಮಾರು 15 ಲಕ್ಷ ರೂಪಾಯಿಗಳನ್ನು ವಸೂಲು ಮಾಡಿರುವ ಬಗ್ಗೆ ಭ್ರಷ್ಟಾಚಾರದ ಆಪಾದನೆಗಳನ್ನು ಮಾನ್ಯ ಶ್ರೀ ನಾಗಣ್ಣನವರು ಇಲ್ಲಿ ಹೇಳಿದ್ದಾರೆ. It is a blatant coailition between the Government and the merchant. We have expose it not only inside this House but also outside this house. ಈ ಒಂದು ಬಿಲ್ಲನ್ನು ತಂದಿರುವ ಶ್ರೀಮಾನ್ ಘೋರ್ಪಡೆಯವರ ವಿಚಾರದಲ್ಲಿ ನನಗೆ ವಿಶ್ವಾಸ ಇದೆ, ಮತ್ತು

ರಾಜ್ಯಾದ್ಯಂತವಿರುವ ಜನತೆಗೆ ವಿಶ್ವಾಸವಿದೆ. ಆದರೆ ಅವರು ಈ ಬಿಲ್ಲನ್ನು ಯಾರದೋ ಪ್ರಲೋಭಕ್ಕೆ ಒಳಗಾಗಿ, ಯಾರದೋ ಅಕೃತ್ಯಕ್ಕೆ ಒಳಗಾಗಿ ತಂದಿರುವುದನ್ನು ನೋಡಿದರೆ ನನಗೆ ವ್ಯಸನವಾಗುತ್ತದೆ. ಅವರು ಇದನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಸಮಾಜವಾದದ ಸಮಾಧಿ ಖಂಡಿತ ಆಗುತ್ತದೆಂದು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಬಯಸುತ್ತೇನೆ.

## ಗಡಿಸಮಸ್ಯೆ - 1974

ಕರ್ನಾಟಕ- ಮಹಾರಾಷ್ಟ್ರ ಗಡಿ ಸಮಸ್ಯೆ ಒಂದು ರಾಜ್ಯ ಪುನರ್ ವಿಂಗಡಣೆಯಾದಾಗಿನಿಂದ ಸುವರ್ಣ ಕರ್ನಾಟಕದವರೆಗೆ ಮುಂದುವರೆದುಕೊಂಡು ಬಂದಿದೆ. ಬೈರೇಗೌಡರು ಯಾವುದೇ ಪಕ್ಷದಲ್ಲಿರಲಿ, ಗಡಿವಿವಾದದ ಬಗ್ಗೆ ತಮ್ಮ ನಿಲುವನ್ನು ಗಟ್ಟಿ ಮಾತುಗಳಲ್ಲಿ ತಿಳಿಸಿದ್ದಾರೆ. ವಿಧಾನ ಮಂಡಲ ಹಲವು ಬಾರಿ ಅಂಗೀಕರಿಸಿರುವ ನಿರ್ಣಯಗಳ ಬಗ್ಗೆ ಮಾತನಾಡಿದ್ದಾರೆ. ರಾಜ್ಯದ ಒಂದು ಅಂಗುಲ ನೆಲವನ್ನೂ ಬಿಟ್ಟುಕೊಡುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಿದ್ದರು. ಮಹಾರಾಷ್ಟ್ರದ ಕುತಂತ್ರಗಳನ್ನು ಬಯಲಿಗೆಳೆದಿದ್ದರು.

ಶ್ರೀ ಬೈರೇಗೌಡ (ವೇಮಗಲ್) : ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿನ ಈ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ನಡೆದಂಥ ಕೆಲವು ಘಟನೆಗಳ ಬಗ್ಗೆ ಒಂದು ನಿರ್ಣಯವನ್ನು ತಂದಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಆ ರೀತಿ ಸ್ವಾಗತಿಸುತ್ತಾ ಈಗ ಈ ಒಂದು ನಿರ್ಣಯವನ್ನು ಯಾವ ಒಂದು ಪರಿಸ್ಥಿತಿಯಲ್ಲಿ ತರುವಂಥಾದ್ದಾಗಿದೆಯೆಂಬುದನ್ನು ಈಗ ನಾನು ಹೇಳಬೇಕಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕುಳಿತಿರತಕ್ಕ ಜಾಗದಲ್ಲಿ, ಕಾಂಗ್ರೆಸ್ ಪಕ್ಷ ಬಿಟ್ಟು, ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳು ಬಿಟ್ಟು ಮತ್ತೆ ಯಾರೂ ಕೂಡ ಕೂತಿರಲಿಲ್ಲ. ಅದೇ ರೀತಿ ಮಹಾರಾಷ್ಟ್ರದಲ್ಲಿಯೂ ಕೂಡ ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಕೂತುಕೊಳ್ಳುತ್ತಾ ಇರತಕ್ಕ ಜಾಗದಲ್ಲಿ ಅಲ್ಲಿರತಕ್ಕ ಕಾಂಗ್ರೆಸ್ ಪಕ್ಷದ ಕಡೆಯವರನ್ನು ಬಿಟ್ಟು ಮತ್ತೆ ಯಾರು ಕುಳಿತುಕೊಳ್ಳುತ್ತಿರಲಿಲ್ಲ. ಅದೇ ರೀತಿಯಲ್ಲಿ 1947ನೇ ಇಸವಿಯಿಂದ ಈ ದಿನದವರೆಗೆ ಕೇಂದ್ರ ಸರ್ಕಾರದಲ್ಲಿಯೂ ಕೂಡ ಕಾಂಗ್ರೆಸ್ ಪಕ್ಷದ ಪ್ರಧಾನ ಮಂತ್ರಿಗಳು ಬಿಟ್ಟು ಮತ್ತೆ ಯಾರೂ ಕುಳಿತಿರಲಿಲ್ಲ. ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮಹಾರಾಷ್ಟ್ರ ಸರ್ಕಾರದಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ನ್ಯಾಯ ವಿಚಾರಣೆಯಾಗಬೇಕು, ಅಷ್ಟೇ ಅಲ್ಲದೆ ಅಲ್ಲಿ ನೊಂದವರಿಗೆ ಪರಿಹಾರ ಕೊಡಬೇಕೆಂದು ಹೇಳುತ್ತಾ ಇದ್ದಾರೆ. ಇದರ ಬಗ್ಗೆ ನನ್ನ ಅಭಿಪ್ರಾಯದಲ್ಲಿರುವ ಒಂದು ಮಾತನ್ನು ಹೇಳುವುದಾದರೆ, ಇದು ಒಂದು ನಾಶಕ. ಇಂತಹ ಒಂದು ನಾಶಕಕ್ಕೂ ಕೂಡ ಕೆಲವು ಸಂದರ್ಭಗಳಲ್ಲಿ ನಮ್ಮ ಒಂದು ಬೆಂಬಲವನ್ನು ಕೊಡಬೇಕಾಗುತ್ತದೆ. ಆದರೆ ಇಲ್ಲಿ ಮುಖ್ಯವಾಗಿ ನಡೆದಿರತಕ್ಕಂಥಾದ್ದು ಏನೆಂದರೆ, ಮಹಾರಾಷ್ಟ್ರದಲ್ಲಿ ಪೆಡಂಭೂತವಾಗಿ ಬೆಳೆದಿರತಕ್ಕ ಶಿವಸೇನೆಯವರ ದೌರ್ಜನ್ಯ. ಈ ಶಿವಸೇನೆ ಯಾರ ಶಿಶು ಎಂದರೆ, ಇದು ಮಹಾರಾಷ್ಟ್ರದಲ್ಲಿ ಮಾನ್ಯ ಶ್ರೀ ಚವಾಣರು ಗೃಹಮಂತ್ರಿಯಾಗಿದ್ದಾಗ ಅವರ ಒಂದು ಅನೈತಿಕ

ಸಂಬಂಧವಾಗಿ ಜನಿಸಿದಂಥ ಕೂಸು. ಆ ಒಂದು ಶಿವಸೇನೆಯೇ ಇವತ್ತು ಬೆಳೆದು ಬಂದಿದೆ. ಸಾಕಷ್ಟು ಸಮಸ್ಯೆಗಳನ್ನು ಕಾಂಗ್ರೆಸ್ ಪಕ್ಷ 1947ನೇ ಇಸವಿಯಿಂದ ಎದುರಿಸಬೇಕಾಗಿ ಬಂದಿದ್ದರೂ ಸಮಯ ಬಂದಾಗ ಹೆಚ್ಚು ಶಕ್ತಿಯನ್ನು ಉಪಯೋಗಿಸದೇ ಇರುವ ಸಂದರ್ಭವೂ ಉಂಟು. ಸಾಧಕವಾಗದೇ ಇರುವ ಸಂದರ್ಭವೂ ಉಂಟು. ಮೊನ್ನೆ ಬೊಂಬಾಯಿನಲ್ಲಿ ಗಲಭೆಗಳು ನಡೆದಾಗ, ಎಡಶಕ್ತಿಗಳ ಬೆಂಬಲವಿತ್ತು. ಮತ್ತು ಅಲ್ಲಿ ಚುನಾವಣೆಗಳಲ್ಲಿ ಎಡಶಕ್ತಿಗಳ ಬೆಂಬಲದಿಂದ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷದ ಬೆಂಬಲದಿಂದಲೇ ಎಡಶಕ್ತಿಗಳಿಗೆ ಜಯ ಆಗಿರಬಹುದು.

**ಶ್ರೀ ಡಿ. ದೇವರಾಜ ಅರಸ್** :- ಎಡಪಕ್ಷಕ್ಕೆ ಜಯ ಏಕೆಂದರೆ ಸೌತ್ ಇಂಡಿಯನ್ ಅವರು ಓಟು ಮಾಡಲಿಲ್ಲ. ಇಲ್ಲದೇ ಹೋದರೆ ಅವರು ಎಲ್ಲಿ ಗೆಲ್ಲುತ್ತಿದ್ದರು?

**ಶ್ರೀ ಸಿ. ಬೈರೇಗೌಡ** :- ಅಲ್ಲಿ ಕಾಂಗ್ರೆಸ್ ಪಕ್ಷ ಬಿಟ್ಟು ಬೇರೆ ಪಕ್ಷವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿನ ಚುನಾವಣೆಯಲ್ಲಿ ಶಿವಸೇನೆಯವರ ಸಹಕಾರ ಬೇಕಾಗಿತ್ತು. ಅವರಿಂದ ಓಟು ಅವರಿಗೆ ಬೇಕಾಗಿತ್ತು. ಸಂದರ್ಭ ಸಾಧಕವಾದ ನಿಲುವನ್ನು ತಾಳದೇ ಇದ್ದುದರಿಂದಲೇ ಅವರು ಸೋತಿದ್ದಾರೆ ಅಲ್ಲಿ ಎಡಶಕ್ತಿಗಳು ಪಡೆದಿರುವ ಜಯವೇ ಈಗ ಎತ್ತಿ ತೋರಿಸುತ್ತಿದೆ. ಅಂತಹ ಸಂದರ್ಭ ಸಾಧಕ ವಾತಾವರಣದಿಂದ ಇಂತಹ ಒಂದು ಶಕ್ತಿಗಳನ್ನು ಬೆಳೆಸಿಕೊಂಡು ಹೋಗುವ ವಿಚಾರವನ್ನು ಅವರು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರೂ ಕೂಡ ನೇರವಾಗಿ ಒಂದು ಕ್ರಮವನ್ನು ತೆಗೆದುಕೊಳ್ಳುವ ಒಂದು ಗುರುತರವಾದ ಜವಾಬ್ದಾರಿಯನ್ನು ಹೊಂದಿದ್ದರೂ ಸುಮಾರು 17 ವರ್ಷಗಳಿಂದ ಈ ಒಂದು ಸಮಸ್ಯೆಯನ್ನು ಬಗೆಹರಿಸಲು ಈ ದೇಶದ ಆಡಳಿತವನ್ನು ಆಳುತ್ತಾ ಇರತಕ್ಕ ಕಾಂಗ್ರೆಸ್ ಪಕ್ಷಕ್ಕೆ ಬಿಡುವಿಲ್ಲ, ಆಲೋಚನೆ ಇಲ್ಲ, ಇನ್ನೂ ಸಾಧ್ಯವಾಗಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈಗ ಇರತಕ್ಕ ಮಹಾಜನ ಕಮಿಷನ್ ವರದಿ, ಅದಕ್ಕೂ ಮುಂಚೆ ಫಜಲಾಲಿ ಕಮಿಷನ್ ವರದಿ, ಅದಕ್ಕೂ ಮುಂಚೆ ಪಾಠಸ್ಕರ್ ಫಾರ್ಮುಲ ಇಂತಹ ಯಾವುದಾದರೂ ಒಂದು ವರದಿಯ ಆಧಾರದ ಮೇಲೆ ಒಂದು ತೀರ್ಮಾನ ಮಾಡಬಹುದಾಗತ್ತು. ಸಂದರ್ಭ ಬಂದಾಗ ಇವುಗಳಲ್ಲಿ ಯಾವುದಾದರೂ ಒಂದು ವೈಜ್ಞಾನಿಕವಾದ ಒಂದು ಆಧಾರದ ಮೇಲೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕೇಂದ್ರ ಸರ್ಕಾರದವರು ಇದುವರೆಗೆ ಪ್ರಯತ್ನಪಟ್ಟಿಲ್ಲ. ಒಟ್ಟಿನಲ್ಲಿ ಈ ದೇಶದಲ್ಲಿ ಎಡಶಕ್ತಿಗಳೇನಾದರೂ ಬೆಳೆದು ಬಂದರೆ ನಿಜವಾಗಿಯೂ ಅದರಿಂದ ದೇಶಕ್ಕೆ ಆಪತ್ತು ಉಂಟು. ಅಂತಹ ಒಂದು ಶಕ್ತಿಯನ್ನು ಉಪಯೋಗಿಸುವ ತಂತ್ರ ಈಗ ಅಲ್ಲಿ ನಡೆಯುತ್ತಿದೆ. ನಾನು ಮೊದಲೇ ಹೇಳಿದ ಹಾಗೆ ಕೇಂದ್ರ ಸರ್ಕಾರ ಯಾವಾಗಲೋ ಈ ಒಂದು ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ಅದನ್ನು ಇದುವರೆಗೆ ಅವರು ಮಾಡಲಿಲ್ಲ. ಈ ಶಿವಸೇನೆ ಫ್ಯಾಸ್ಟಿಸ್ಟ್ ಶಕ್ತಿಯಾಗಿದೆ. ಈ ದೇಶದಲ್ಲಿ ಅವರದು ಇನ್ನೂ ಇತರ ಸಮಸ್ಯೆಗಳೂ ಬಹಳವಾಗಿವೆ. ಆದರೆ ಇವರು ಈ ಒಂದು ಸಮಸ್ಯೆಯನ್ನು ಬಗೆಹರಿಸುತ್ತಾರೆಂಬ ನಂಬಿಕೆಯೂ ಸಹ ನನಗಿಲ್ಲ. ಕಾರಣ ಮಲಗಿ ನಿದ್ರೆ ಮಾಡುವ ಶಕ್ತಿಗಳನ್ನು ಎಬ್ಬಿಸಿ ಅವರಿಂದ ಹೆಚ್ಚು ಪ್ರಯೋಜನವನ್ನು ಪಡೆಯಬೇಕು.

ಕಾರ್ಮಿಕವರ್ಗ ಮತ್ತು ಶ್ರಮಜೀವಿ ವರ್ಗಗಳು ಒಗ್ಗಟ್ಟಾಗುತ್ತಿರುವ ಪರಿಸ್ಥಿತಿಯಲ್ಲಿ ಈ ದೇಶದ ಜನರ ಮನೋಭಾವವನ್ನು ಬೇರೆ ಕಡೆ ತಿರುಗಿಸುವುದಕ್ಕೆ ಇಂತಹ ಒಂದು ಕುತಂತ್ರಗಳು ಆಡಳಿತ ಪಕ್ಷದವರಿಂದ ಈ ದೇಶದಲ್ಲಿ ನಡೆಯುತ್ತಿದೆ. ಅವರು ಅದಕ್ಕೆ ಬೇಕಾದಂತಹ ಸಾಧನೋಪಾಯಗಳನ್ನು ನಡೆಸುತ್ತಿದ್ದಾರೆ. ಪುನಃ ಅವರು ಒಗ್ಗಟ್ಟಾಗಬಾರದೆಂದು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ದೇಶದಲ್ಲಿ ಆರ್ಥಿಕ ಮುಗ್ಗಟ್ಟನ್ನು ಬಗೆಹರಿಸುವುದಕ್ಕೆ, ಇವರಿಗೆ ಇಷ್ಟವಿಲ್ಲ, ಸಾಧ್ಯವಿಲ್ಲ. ಇದರ ಬಗ್ಗೆ ಮಾಡಬೇಕಾದ ಕುತಂತ್ರಗಳನ್ನು ಶಿವಸೇನೆಯ ಮೂಲಕ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಈ ದೇಶದಲ್ಲಿ ಪ್ರಧಾನ ಮಂತ್ರಿಗಳು ಮಹಿಳೆಯಾಗಿದ್ದಾರೆ. ಅಂದ ಮೇಲೆ ಅನೇಕ ಮಹಿಳೆಯರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಮೆರವಣಿಗೆಯಲ್ಲಿ ಬೆತ್ತಲೆಯಲ್ಲಿ ಬಂದರೆಂದರೆ ಇದಕ್ಕಿಂತ ಹೀನಾಯವಾದ ದೃಶ್ಯ ಮತ್ತು ಅಂಥಾದ್ದನ್ನು ಕಾಣುವಂಥ ದೌರ್ಭಾಗ್ಯ ನಮ್ಮ ಜನಗಳಿಗೆ ಒದಗಿದುದು ಬಹಳ ದುರದೃಷ್ಟಕರ. ಅನೀತಿಯುತವಾದದೆಂದು ನಾನು ಹೇಳಬೇಕಾಗಿದೆ. ಇದು ಎಂತಹ ದೌರ್ಭಾಗ್ಯವೆಂಬುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಮಾನ್ಯ ಶ್ರೀ ದೇವೇಗೌಡರೂ ಕೂಡ ಈ ಒಂದು ನಿರ್ಣಯದ ಬಗ್ಗೆ ಒಂದು ತಿದ್ದುಪಡಿಯನ್ನು ಕಳುಹಿಸಿದ್ದಾರೆ ಅದಕ್ಕೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಕಾರಣವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅದನ್ನು ನೇರವಾಗಿ ಹೇಳುವುದು ಬೇಡ, ಪರೋಕ್ಷವಾಗಿ ಹೇಳೋಣವೆಂದು ತಿಳಿಸಿದರು. ಆದರೆ ನಡೆದಿರುವ ಕೃತ್ಯಗಳು ನಿಜವಾಗಿರುವಾಗ, ಅವರ ಮುಖಕ್ಕೆ ನೇರವಾಗಿ ಹೇಳುವುದು ಎಲ್ಲರ ಜವಾಬ್ದಾರಿಯುತ ಕರ್ತವ್ಯವಾಗಿರಬೇಕು. ಅಂತಹ ಒಂದು ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ತಾಳಬೇಕು. ಕೊನೆಯದಾಗಿ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕ ನಿರ್ಣಯ ಮಹಾರಾಷ್ಟ್ರದಲ್ಲಿ ಏನು ನಡೆಯಿತು, ಅದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ಇದರಲ್ಲಿ ನಮೂದಾಗಿದೆ. ಇಂತಹ ದುಷ್ಟಶಕ್ತಿಗಳು ಅವು ಯಾವ ಕಡೆಯಲ್ಲಿಯೇ ಇರಲಿ ಅವರು ಈಗ ನಡೆಸಿರತಕ್ಕ ದುಷ್ಕೃತ್ಯಗಳ ಬಗ್ಗೆ ನ್ಯಾಯಾಂಗ ತನಿಖೆ ಆಗಲೇ ಬೇಕೆಂದು ಸರ್ಕಾರಕ್ಕೆ ಒತ್ತಾಯಪಡಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

## ವಂದನಾ ನಿರ್ಣಯದ ಮೇಲೆ ಭಾಷಣ 1-3-1974

ಈಗಿರತಕ್ಕ ಮಂತ್ರಿಮಂಡಲದಿಂದ ನಮ್ಮ ರಾಜ್ಯದ ಪರಿಸ್ಥಿತಿ ಏನಾಗಿದೆ ಎಂದರೆ 1972-73ರ ಅಂಕಿ ಅಂಶಗಳ ಪ್ರಕಾರ ರಾಷ್ಟ್ರದ ಆದಾಯ ಶೇಕಡಾ 2ರಷ್ಟು ಜಾಸ್ತಿಯಾಗಿದ್ದರೆ ಇವರ ಆಡಳಿತದಲ್ಲಿ ನಮ್ಮ ರಾಜ್ಯದಲ್ಲಿ ಪರ್‌ಕ್ಯಾಪಿಟಾ ಇನ್ ಕಂ ಶೇಕಡಾ 4ರಷ್ಟು ಕಡಮೆಯಾಗಿದೆ. ಇವೊತ್ತು ರಾಜ್ಯದ ಅಭಿವೃದ್ಧಿ ಹಿಂದಕ್ಕೆ ಹೋಗುತ್ತಿದೆ, ಕಡಮೆಯಾಗಿದೆ. ಇದೇ ರೀತಿಯಲ್ಲಿ ಗರೀಬಿ ಹಟಾವೋ ಕಾರ್ಯಕ್ರಮದಲ್ಲಿ ತಮಟೆ ಹೊಡೆದು ಭೂಸುಧಾರಣಾ ಕಾನೂನು ಜಾರಿಗೆ

ತರುತ್ತೇವೆ, ನಗರ ಆಸ್ತಿಮಿತಿ ತರುತ್ತೇವೆ ಎಂದು ಹೇಳುತ್ತಿದ್ದರು. ಈಗ ಇವರು ತಂದಿರತಕ್ಕ ಭೂ ಸುಧಾರಣಾ ಕಾನೂನು ಪ್ರಗತಿಪರ ಕಾನೂನು ಎಂದು ನಾನು ಹೇಳುವುದಿಲ್ಲ. ಇವರ ಇನ್ನೊಂದು ಕಾನೂನು ನಗರ ಆಸ್ತಿ ಮಿತಿ ಕಾನೂನು ಏನಾಯಿತು. ಈ ನಗರ ಆಸ್ತಿಮಿತಿಗೆ ಸಂಬಂಧಪಟ್ಟ ಹಾಗೆ ಈ ಸದನದಲ್ಲಿ ಒಂದು ನಿರ್ಣಯವನ್ನು ತಂದು ಕೇಂದ್ರದಲ್ಲಿ ಪಾರ್ಲಿಮೆಂಟಿನಲ್ಲಿ ಇಂದಿರಾ ಗಾಂಧಿಯವರು ಈ ಕಾನೂನು ಮಾಡುತ್ತಾರೆ ಎಂದು ಆ ನಿರ್ಣಯವನ್ನು ಇಲ್ಲಿ ಪಾಸು ಮಾಡಿ ಕಳುಹಿಸಿದರು. ಆದರೆ ರಾಜ್ಯಪಾಲರ ಭಾಷಣದಲ್ಲಿ ಮೊದಲನೆಯ ಪುಟದಿಂದ ಕೊನೆಯಪುಟದವರೆಗೂ ಹುಡುಕಿದರೂ ಕೂಡ ಈ ನಗರಾಸ್ತಿ ಮಿತಿ ಕಾನೂನಿಗೆ ಸಂಬಂಧಪಟ್ಟ ಪ್ರಸ್ತಾಪವನ್ನು ಮಾಡಿಲ್ಲ. ಏತಕ್ಕೆ ಇವರು ಅರ್ಬನ್ ಸೀಲಿಂಗ್ ಪ್ರಾಪರ್ಟಿ ಕಾನೂನನ್ನು ಏತಕ್ಕೆ ಇವರು ತರುತ್ತಾ ಇಲ್ಲ ಎಂದರೆ ಯಾರು ಈ ದೇಶದಲ್ಲಿ ಲಕ್ಷಾಂತರ ಮಂದಿ ಕಾರ್ಮಿಕರನ್ನು ಶೋಷಣೆ ಮಾಡುತ್ತಾ ರೈತರನ್ನು ಶೋಷಣೆ ಮಾಡುತ್ತಾ ಕೋಟಿಗಟ್ಟಲೆ ಹಣವನ್ನು ಸಂಗ್ರಹಿಸುತ್ತಾರೆಯೋ ಅವರ ಕೃಪಾಕಟಾಕ್ಷದಿಂದ ಇವರು ಇಲ್ಲಿ ಬಂದು ಕುಳಿತುಕೊಂಡಿದ್ದಾರೆ. ಅವರ ಕೃಪಾಕಟಾಕ್ಷವನ್ನು ಕಳೆದುಕೊಂಡರೆ ಇವರಿಗೆ ತೊಂದರೆಯಾಗುತ್ತದೆ. ರಾಜ್ಯದಲ್ಲಿರತಕ್ಕ ಟಾಟಾ, ಬಿರ್ಲಾ ಅವರ ಆಸ್ತಿಯನ್ನು ಮುಟ್ಟುವುದಕ್ಕೆ ಇವರಿಗೆ ಹೆದರಿಕೆಯಾಗಿದೆ. ಆದ್ದರಿಂದ ನಗರಾಸ್ತಿಮಿತಿಯ ಕಾನೂನು ತರುವ ಬಗ್ಗೆ ಈ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ ಅಂಥಾ ಕಾರ್ಯಕ್ರಮಗಳನ್ನು ಈ ದೇಶದಲ್ಲಿ ಅವರು ಮಾಡುವುದಕ್ಕೆ ಹೋಗಿಲ್ಲ. ಗ್ರಾಮಾಂತರ ಪ್ರದೇಶಗಳವರು ಈ ಕಾನೂನನ್ನು ವಿರೋಧ ಮಾಡಿಲ್ಲ. ಇಂದಿರಾ ಗಾಂಧಿಯವರ ಸಮಾಜವಾದ ವರ್ಷೇ ವರ್ಷೇ ಮಾಡಲ್ ಸಮಾಜವಾದ ಬರುತ್ತಿದೆ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ. ಇವರ ಸಮಾಜವಾದ ಈ ರೀತಿಯ ಒಂದು ಪರಿಸ್ಥಿತಿಗೆ ಬಂದಿದೆ.

## ಕರ್ಮಕಾಂಡಗಳು 1-3-74

> ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವ ಘೋಷಿಸಿದ್ದ ನಗರ ಸಮಿತಿ, ಗರೀಬಿ ಹಟಾವೋ, ಮೊದಲಾದ ಅಂಶಗಳು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿಲ್ಲವೆಂದು ಪಕ್ಷೇತರ ಶಾಸನವಾಗಿದ್ದ ಬೈರೇಗೌಡರು ವಂದನಾ ನಿರ್ಣಯವನ್ನು ವಿರೋದಿಸಿದರು.

ಅನೇಕ ಕರ್ಮಕಾಂಡಗಳ ನಿವಾರಣೆಗೆ ಶ್ರೀಮಾನ್ ಚನ್ನಬಸಪ್ಪನವರು ದಕ್ಷರು ಮತ್ತು ಹೆಸರಾಗಿದ್ದರು. ಅವರು ಈಗ ಇಲ್ಲಿ ಇದ್ದಾರೆ. ಅವರು ಈ ಸದನದಲ್ಲಿ ಈಗ ಕುಳಿತುಕೊಂಡಿರತಕ್ಕ ಜಾಗದಲ್ಲಿ ಕುಳಿತುಕೊಂಡು ಹೇಳಿದ ಮಾತುಗಳು ಏನೆಂದರೆ ಶರಾವತಿಯ ಕರ್ಮಕಾಂಡದ ಬಗ್ಗೆ ವಿಧಿವತ್ತಾದ ಸಕಾಲದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಅದನ್ನು ನ್ಯಾಯಾಂಗ ವಿಚಾರಣೆಗೆ ಇಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ಇವೊತ್ತಿನ ದಿವಸ ಅದು ಏನಾಗಿದೆ? ರಾಜ್ಯಪಾಲರ ಭಾಷಣದಲ್ಲಿ ಅದು ಎಲ್ಲಿದೆ? ಅದರ ವಿಷಯದ ಪ್ರಸ್ತಾಪವೇ ಇಲ್ಲ. ಶರಾವತಿಯ ಕರ್ಮಕಾಂಡದ

ಬಗ್ಗೆ ಮೈಸೂರಿನಲ್ಲಿ ಕೆಲವರು ದೊಡ್ಡ ಆಪಾದನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ಕೇಂದ್ರದ ಮಂತ್ರಿ ಮಂಡಲ ಆ ಬಗ್ಗೆ ಪರಿಶೀಲಿಸಲು ಒಂದು ಉಪಸಮಿತಿಯನ್ನು ನೇಮಿಸಿ ಅವರು ಆ ಬಗ್ಗೆ ಪರಿಶೀಲನೆ ಮಾಡಿ ಶರಾವತಿಯಲ್ಲಿ ಯಾವ ಅಕ್ರಮಗಳೂ ನಡೆದಿಲ್ಲ ಎಂದು ಕೇಂದ್ರದ ಕ್ಯಾಬಿನೆಟ್‌ನವರು ಒಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆಗ ಶ್ರೀಮತಿ ಇಂದಿರಾಗಾಂಧಿಯವರು ಆ ಒಂದು ಮಂತ್ರಿಮಂಡಲದ ಸದಸ್ಯರಾಗಿದ್ದರು. ಆದ್ದರಿಂದ ಇವೊತ್ತು ಶ್ರೀಮಾನ್ ಚನ್ನಬಸಪ್ಪನವರು ಈ ಶರಾವತಿ ಕರ್ಮಕಾಂಡದ ಬಗ್ಗೆ ವಿಚಾರಣೆ ನಡೆಸಲು ಹೆದರುತ್ತಿದ್ದಾರೆ. ಏತಕ್ಕೆ ಹೆದರಬೇಕು. ನಿಜವಾದ ಅಂಶ ಏನು ನಡೆದಿದೆ ಎಂಬುದನ್ನು ತಿಳಿಸುವುದು ಅವರ ಜವಾಬ್ದಾರಿ. ಆ ಬಗ್ಗೆ ಅವರು ಈ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಅವರು ಈ ಮಂತ್ರಿಮಂಡಲದಲ್ಲಿ ಇರುವವರೆಗೂ ಅವರು ಶರಾವತಿಯ ಕರ್ಮಕಾಂಡದ ಬಗ್ಗೆ ವಿಚಾರಣೆ ಮಾಡುವುದಿಲ್ಲ. ಭಯಪಡುತ್ತಾರೆ. ಈ ಮಂತ್ರಿ ಮಂಡಲ ಇರುವವರೆಗೂ ಅವರು ಈ ಬಗ್ಗೆ ವಿಚಾರಣೆ ಮಾಡುವುದಿಲ್ಲ ಎಂದು ನಮಗೆ ಅನುಮಾನ ಬರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಅವರು ಸ್ಪಷ್ಟವಾಗಿ ತಿಳಿಸಬೇಕು. ಆಗ ತಮಗೆ ಧೈರ್ಯ ಇದೆಯೇ ಅಥವಾ ಇಲ್ಲವೇ ಎಂಬುದು ಗೊತ್ತಾಗುತ್ತದೆ. ತಮ್ಮ ದಿಟ್ಟ ನಿಲುವನ್ನು ತಾಳಿದರೆ ಕರ್ನಾಟಕದ ಜನರು ಮೆಚ್ಚುತ್ತಾರೆ. ಹಾಸನದಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ನಡೆದಂತಹ ಅಕ್ರಮಗಳ ವಿಷಯ ಏನಾಯಿತು? ಇದರ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತಳೆದು ಇದರಲ್ಲಿ ಯಾರು ಅಕ್ರಮ ವ್ಯವಹಾರವನ್ನು ನಡೆಸಿದ್ದಾರೆ, ಯಾರು ತಪ್ಪಿತಸ್ಥರಾಗಿದ್ದಾರೆ ಎಂಬುದನ್ನು ಕಂಡುಹಿಡಿದು ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ಇದರಲ್ಲಿ ನನಗೆ ಗೊತ್ತಿರುವ ಹಾಗೆ ಪ್ರಭಾವಿ ಜನಗಳ ಒಂದು ಪಾತ್ರ ಇದರಲ್ಲಿ ನಡೆಯುತ್ತಿದೆ ಎಂದು ಗೊತ್ತಾಗಿದೆ. ಆದ್ದರಿಂದ ಈ ಬಗ್ಗೆ ಒಂದು ದಿಟ್ಟವಾದ ನಿಲುವನ್ನು ತಳೆದು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

## ತುಂಬಿ ತುಳುಕುತ್ತಿರುವ ಭ್ರಷ್ಟಾಚಾರ : 1-3-74

ರೈತರಿಗೆ ಗೊಬ್ಬರ, ಬೀಜ, ಇತ್ಯಾದಿ ನೀಡದೆ ಲೆವಿ ಹಾಕಿರುವುದನ್ನು ವಿಧಾನಸಭೆಯಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಉಪ್ಪಿನ ಮೇಲೆ ತೆರಿಗೆ ಹೇರಿಕೆಯನ್ನು ವಿರೋಧಿಸಿದರು.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಫರ್ಟಿಲೈಜರ್ಸ್ ಇವೆ. ಅವಕ್ಕೂ ಲೆವಿ ಹಾಕಿದ್ದಾರೆ. ಆದರೆ ನಾನು ಲೆವಿಗೆ ವಿರೋಧ ಮಾಡುವುದಿಲ್ಲ. ಉತ್ಪಾದನೆ ಚೆನ್ನಾಗಿ ಆಗುತ್ತಿದ್ದರೆ, ಆಗ ತೆರಿಗೆಯನ್ನು ಕೊಡಬೇಕು. ಮಾನ್ಯ ಮಂತ್ರಿಗಳಿಗೆ ಗೊತ್ತಿರುವ ಹಾಗೆ ಈಗಿನ ಒಂದು ಕಲುಷಿತ ವಾತಾವರಣದಲ್ಲಿ ಎಲ್ಲಿ ನೋಡಿದರೂ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ, ಅದು ತಾಂಡವವಾಡುತ್ತಿದೆ. ನ್ಯಾಯವಾಗಿ ಗೌರವವಾಗಿ ಜೀವನವನ್ನು ಈಗ ರೈತ ಮಾಡುವುದಕ್ಕಾಗದೇ

ಇರುವ ಪರಿಸ್ಥಿತಿಯನ್ನು ಇವರು ಉಂಟು ಮಾಡುತ್ತಿದ್ದಾರೆ. ಅವನೂ ಸಹ 5-10 ರೂಪಾಯಿಗಳಿಗೆ ಕೈಯೊಡ್ಡುವ ಪರಿಸ್ಥಿತಿ ಇದೆ. ಆದ್ದರಿಂದ ನಾನು ಈ ಸರ್ಕಾರವನ್ನು ಕೈಜೋಡಿಸಿ ಬೇಡುತ್ತೇನೆ. ಅವನಿಗೆ ಸಕಾಲದಲ್ಲಿ ಬೇಕಾದಂಥ ಸೌಕರ್ಯಗಳನ್ನು ಒದಗಿಸುವ ವ್ಯವಸ್ಥೆಯನ್ನು ಇವರು ಮಾಡಬೇಕು. ಗೊಬ್ಬರ ಕಾಲಕ್ಕೆ ಸರಿಯಾಗಿ ದೊರೆಯುತ್ತಿಲ್ಲ. ಯೂರಿಯಾ ಕೊಡಿ ಎಂದು ಹೇಳಿದರೆ ಅದನ್ನು ಕೊಡುವ ಶಕ್ತಿ ಸರ್ಕಾರಕ್ಕೆ ಇಲ್ಲ. ಮಾನ್ಯ ಶ್ರೀ ಚನ್ನಬಸಪ್ಪನವರು ಹಿಂದೆ ಒಂದು ಮಾತನ್ನು ಹೇಳುತ್ತಿದ್ದರು. ಡಿಕ್ಲರೇಷನ್ ಅನ್ನು ರೈತ ಏತಕ್ಕೆ ಕೊಡಬೇಕೆಂಬುದಾಗಿ. ರೈತರಲ್ಲಿ ಪ್ರತಿಯೊಬ್ಬರಲ್ಲಿಯೂ ಧಾನ್ಯಗಳ ಸ್ಟಾಕ್ ಎಷ್ಟಿದೆಯೆಂಬುದನ್ನು ಸರ್ಕಾರ ಮನಗಾಣಲು ರೈತರು ಡಿಕ್ಲರೇಷನ್ ಕೊಡಬೇಕು ಎಂಬುದಾಗಿ ಹೇಳುತ್ತಿದ್ದರು. ಅದೂ ಅಲ್ಲದೆ, ಪ್ರತಿಯೊಬ್ಬನಲ್ಲಿಯೂ ಗೊಬ್ಬರ ಎಷ್ಟು ಸ್ಟಾಕ್ ಇದೆಯೆಂಬ ಬಗ್ಗೆ ಡಿಕ್ಲರೇಷನ್ ಕೊಡಬೇಕೆಂದು ಹೇಳುತ್ತಾರೆ. ನಾನು ಒಂದು ಮಾತನ್ನು ಕೇಳಬೇಕಾಗಿದೆ. ರೈತರನ್ನು ಡಿಕ್ಲರೇಷನ್ ಕೊಡಬೇಕೆಂದು ಕೇಳುವ ಈ ಸರ್ಕಾರ ತನ್ನ ವಶದಲ್ಲಿ ಗೊಬ್ಬರ ಎಷ್ಟು ಸ್ಟಾಕ್ ಇದೆಯೆಂಬುದನ್ನು ಈಗ ಹೇಳುವುದಕ್ಕಾಗುತ್ತದೆಯೇ? ಅದನ್ನು ಹೇಳುವುದಕ್ಕಾಗದೇ ಇರತಕ್ಕ ಸರ್ಕಾರ ರೈತನಲ್ಲಿ ಧಾನ್ಯಗಳ ಸ್ಟಾಕ್ ಎಷ್ಟು ಇದೆಯೆಂದು ಡಿಕ್ಲರೇಷನ್ ಕೊಡಬೇಕೆಂದು ಕೇಳುವುದು ಯಾವ ನ್ಯಾಯ? ಕೇವಲ 5 ಗ್ರಾಂ ಗೊಬ್ಬರವನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲ ಅಂದಮೇಲೆ ರೈತ ಡಿಕ್ಲರೇಷನ್ ಕೊಡಲಿಲ್ಲವೆಂದರೆ, ಅವನ ಮನೆಯ ಹತ್ತಿರ ಪೊಲೀಸಿನವರನ್ನು ಕಳುಹಿಸುತ್ತೀರಿ, ಮಿಲಿಟರಿಯವರನ್ನು ಕಳುಹಿಸುತ್ತೀರಿ, ಅವರು ಅಲ್ಲಿ ಹೋಗಿ ಜಬರದಸ್ತು ಮಾಡುತ್ತಾರೆ. ಇದರಲ್ಲಿ ನಿಮ್ಮ ನೈತಿಕ ಬೆಲೆಯೇನು? ರೈತರಿಗೆ ಸಾಕಷ್ಟು ಗೊಬ್ಬರ ಕೊಡುವುದಕ್ಕೆ ಈ ಸರ್ಕಾರಕ್ಕೆ ಯೋಗ್ಯತೆ ಇಲ್ಲ. ಅಂದ ಮೇಲೆ ಲೆವಿ ಕೊಡಿ, ರಾಗಿ ಕೊಡಿ, ಭತ್ತ ಕೊಡಿ ಎಂಬುದಾಗಿ ಯಾವ ಒಂದು ಆಧಾರದ ಮೇಲೆ ಕೇಳುತ್ತೀರಿ? ಇವತ್ತು ಗೌರವಕ್ಕಾಗಿ ಜೀವನ ಮಾಡುವ ರೈತರ ಮೇಲೆ ನಿಮ್ಮ ಪೊಲೀಸಿನವರನ್ನು ವಿನಾ ಕಾರಣ ನುಗ್ಗಿಸುವುದು, ಅವರನ್ನು ಲಾಠಿಯಿಂದ ಹೊಡೆಸುವುದು - ಇವು ಅರ್ಥವಿಲ್ಲದ ಮಾತು.

ಶ್ರೀ ಎಚ್.ಎಂ. ಚನ್ನಬಸಪ್ಪ :- ಯಾವುದೇ ವಿಷಯವಾಗಲೀ ಅದನ್ನು ಸ್ಪಷ್ಟವಾಗಿ ನಾವು ತಿಳಿದುಕೊಳ್ಳೋಣ. ರೈತರಿಗೆ ಹಿಂಸೆ ಕೊಡುವುದಕ್ಕೇ ಈ ಸರ್ಕಾರ ಇದೆಯೆಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ರೈತರು ಸುಗ್ಗಿಯೊಳಗೆ ಕಾಳಸಂತೆಕೋರರಂತೆ ಅವರ ಮನೆಗಳಲ್ಲಿ ಆಹಾರಧಾನ್ಯಗಳನ್ನು ಮಡಗುವುದು ತಮಗೂ ಗೊತ್ತಿದೆ. ಇನ್ನು ಕೆಲವು ವರ್ತಕರು ಏನು ಮಾಡುತ್ತಾರೆಂದರೆ ನಾವು ರಂಗೋಲೆ ಸಂದಿಯೊಳಗೆ ಹೋದರೆ, ಅವರು ಅದರ ಕೆಳಗೇ ಹೋಗುತ್ತಾರೆಂದು ನಾನು ಹೇಳುತ್ತೇನೆ. ಅದನ್ನು ತಪ್ಪಿಸುವುದಕ್ಕೋಸ್ಕರ ಅವರೂ ಸಹ ಈ ರೀತಿಯಾಗಿ ಉಪಾಯ ಮಾಡಿದ್ದಾರೆ. ಅದಕ್ಕಿಂತ ಉತ್ತಮವಾದ ಮಾರ್ಗ ಯಾವುದೆಂಬುದನ್ನು ವಿಶ್ವಾಸದಿಂದ ನಾವು ಕನ್ಸಿಡರ್ ಮಾಡಬೇಕಾಗಿದೆ. 15 ಕ್ವಿಂಟಾಲ್ ಇರುವುದನ್ನು 40 ಕ್ವಿಂಟಾಲ್ ಮಾಡಿ ಎಂಬುದಾಗಿ ಹೇಳಿದರೆ ಅದನ್ನೂ ಮಾಡೋಣ, ನೀವು ಬಂದು ಸರ್ಕಾರ ನಡೆಸಿದರೂ

ಅಕ್ರಮವಾಗಿ ಹೋಗತಕ್ಕ ವಿಷಯಗಳು ಯಾವುದೇ ಇದ್ದರೂ ಅವನ್ನೂ ಸಹ ಪತ್ತೆ ಮಾಡುವುದಕ್ಕೆ ನೀವೂ ಸಹ ಪ್ರಯತ್ನ ಮಾಡಬೇಕು. ಅಲ್ಪಸ್ವಲ್ಪ ಬದಲಾವಣೆಗಳನ್ನು ನೀವೂ ಸಹ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ನೀವು ರಚನಾತ್ಮಕವಾದಂತಹ ಸಲಹೆಗಳನ್ನು ಕೊಟ್ಟರೆ ಅವನ್ನು ನಾವು ವಿಶ್ವಾಸದಿಂದ ಕನ್ಸಿಡರ್ ಮಾಡೋಣ.

## ಲೆವಿ ಯಾವ ಧರ್ಮಶಾಸ್ತ್ರದಲ್ಲಿದೆ? 1-3-74

ಶ್ರೀ ಸಿ. ಬೈರೇಗೌಡ :- ಕಾಳಸಂತೆಕೋರರನ್ನು ಬಗ್ಗುಬಡಿಯುವುದರಲ್ಲಿ ನನ್ನ ಸಹಕಾರ ಹಾಗೂ ನನ್ನ ಪಕ್ಷದವರ ಸಹಕಾರ ಸಂಪೂರ್ಣವಾಗಿದೆಯೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಯಾವ ಸರ್ಕಾರ ಏನು ಮಾಡಬೇಕೆಂಬುದನ್ನು ಮಾಡಿ ತೋರಿಸುವವರಲ್ಲಿ ನಾವು ಮೊದಲನೆಯವರು. ನೀವು ರೈತರಿಗೆ ಸಾಕಷ್ಟು ಗೊಬ್ಬರವನ್ನು ಕೊಡದೆಯೇ ಲೆವಿಯನ್ನು ಕೊಡಬೇಕೆಂದು ಅವರನ್ನು ಕೇಳುತ್ತಿದ್ದೀರಿ. ಇದು ಎಲ್ಲಿದೆ? ಯಾವ ಧರ್ಮಶಾಸ್ತ್ರದಲ್ಲಿದೆ? ಪ್ರಪಂಚದಲ್ಲಿ ಇಲ್ಲದೇ ಇರತಕ್ಕದ್ದನ್ನು ತಾವು ಮಾಡುವುದಕ್ಕೆ ಹೊರಟಿದ್ದೀರಿ.

**ಉಪಾಧ್ಯಕ್ಷರು** :- ಧರ್ಮಶಾಸ್ತ್ರಗಳು ಬಹಳ ಹಿಂದಿನವು. Fertilizers came recently, i.e., two- three decades ago atleast in India. The Hon. Member may complete his speech and help the Chair to help others.

ಶ್ರೀ ಸಿ. ಬೈರೇಗೌಡ :- ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ. ಹಿಂದೆ ಇಲ್ಲದೇ ಇರುವುದನ್ನೆಲ್ಲಾ ಇವರು ಮಾಡಲಿಕ್ಕೆ ಹೋಗುತ್ತಿದ್ದಾರೆ. ಅದು ಸರಿ ಹೋಗುವುದಿಲ್ಲ.

**ಕುಡಿಯುವ ನೀರಿನ ಸಮಸ್ಯೆ:** ಇನ್ನು ಇವತ್ತು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಬೆಂಗಳೂರಿಗೆ ಈಗ ಕಾವೇರಿ ನೀರನ್ನು ತೆಗೆದುಕೊಂಡು ಬಂದಿದ್ದಾರೆ. ಬಹಳ ಸಂತೋಷ. ಇವತ್ತು ಅನೇಕ ಗ್ರಾಮಗಳಲ್ಲಿ ಬಗ್ಗಡದ ನೀರೂ ಸಹ ಸಿಗುತ್ತಾ ಇಲ್ಲ. ಸ್ವಾತಂತ್ರ್ಯ ಬಂದು ಸುಮಾರು 26-27 ವರ್ಷಗಳಾದರೂ ಅನೇಕ ಗ್ರಾಮಗಳಲ್ಲಿ ನೀರಿನ ಸೌಕರ್ಯ ಏನೇನೂ ಚೆನ್ನಾಗಿಲ್ಲ. ಇನ್ನೂ ಈಗಲೂ ಕೊಳಚೆಯ ನೀರು ಬೆಂಗಳೂರಿನ ಚರಂಡಿಗಳಲ್ಲಿ ಹರಿಯುತ್ತಿದೆ. ಆ ನೀರೂ ಕೂಡ ಇವತ್ತು ಅನೇಕ ಗ್ರಾಮಗಳಲ್ಲಿ ಸಿಗುತ್ತಾ ಇಲ್ಲ. ಅಂತಹ ಕಡೆಗಳಲ್ಲಿ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಈ ಸರ್ಕಾರ ಮಾಡಬಾರದೇ? ಕೋಲಾರ ತಾಲ್ಲೂಕಿನಲ್ಲಿರುವ 80 ಗ್ರಾಮಗಳಿಗೆ ನೀರು ಸೌಕರ್ಯವಿಲ್ಲವೆಂದು ಸುಮಾರು ಒಂದು ವರ್ಷದಿಂದಲೂ ಪತ್ರ ವ್ಯವಹಾರವನ್ನು ಮಾಡುತ್ತಿದ್ದೇವೆ. ಅಲ್ಲಿಗೆ ನೀರಿನ ಸೌಕರ್ಯವನ್ನು ಕೊಡುವುದಕ್ಕೆ ಇಲ್ಲಿಯವರೆಗೂ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಯಾರೋ ಜಿಯಲಾಜಿಸ್ಟ್ ಬರಬೇಕು, ಇನ್ನೊಬ್ಬರು ಬರಬೇಕು

ಎಂಬುದಾಗಿ ಹೇಳುತ್ತಾರೆ. ದೊಡ್ಡ ದೊಡ್ಡ ನಗರಗಳಲ್ಲಿ ನೀರು ಒದಗಿಸುವುದಕ್ಕಾಗಲೀ, ಟಾರ್ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕಾಗಲೀ ಏನೂ ಬೇಕಾಗಿಲ್ಲ. ಹಳ್ಳಿಗಳಲ್ಲಿ ಇಂತಹ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕಾದರೆ ಇವರಿಗೆ ಎಲ್ಲವೂ ಬೇಕಾಗಿದೆ. ನಗರಗಳಲ್ಲಿ ಎಲ್ಲಿ ಜನತೆ ತಲೆ ಹೊಡೆಯುತ್ತಾರೋ ಎಂಬ ಭಯವಿದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಈ ಸರ್ಕಾರಕ್ಕೆ ಶಕ್ತಿ ಇಲ್ಲವೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನಾದರೂ ಕಾಣಿಸಿದ್ದಾರೆಯೇ ಎಂದರೆ ಅದೇನೂ ಇಲ್ಲ. ಎಲ್ಲೋ ಬಾವಿಗಳನ್ನು ನಿರ್ಮಾಣ ಮಾಡುವುದಕ್ಕೆ 5 ರಿಗ್‌ಗಳನ್ನು ತರಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಈಗಿರತಕ್ಕ ಕಾನೂನುಗಳನ್ನು ಸಡಿಲ ಮಾಡಿ ಹೆಚ್ಚು ಹೆಚ್ಚಾಗಿ ಕುಡಿಯುವ ನೀರಿನ ಬಾವಿಗಳನ್ನು ಎಲ್ಲಾ ಗ್ರಾಮಗಳಲ್ಲಿಯೂ ತೆಗೆಯುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಸ್ವಾಮಿ, ಇವರಿನ್ನು ರಾಜ್ಯದಲ್ಲಿ ಜನತಾ ಹೌಸಿಂಗ್ ಸ್ಕೀಂ ಎಂದು ಮಾಡಿದ್ದಾರೆ. ಹಿಂದೆ ಇದೇ ದಿನಗಳಲ್ಲಿ ಇವರು ನಮ್ಮ ಜಿಲ್ಲೆಯಲ್ಲಿ 280 ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದರು. ನನ್ನ ತಾಲ್ಲೂಕಿನಲ್ಲಿ ಇಲ್ಲಿಯವರೆಗೂ ಒಂದು ಮನೆಯೂ ಇಲ್ಲ.

ಉಪಾಧ್ಯಕ್ಷರು :- ನನ್ನ ಕ್ಷೇತ್ರದಲ್ಲಿ 180 ಮನೆಗಳಾಗಿವೆ. ಹಾಗಿರುವಾಗ ನಿಮ್ಮ ತಾಲ್ಲೂಕಿನಲ್ಲಿ ಏಕೆ ಆಗಲಿಲ್ಲ?

ಶ್ರೀ ಸಿ. ಬೈರೇಗೌಡ :- ಸರ್ಕಾರದವರು ಅಲ್ಲಿ ಮನೆಗಳನ್ನು ಕಟ್ಟಿಸುತ್ತೇವೆಂದು ಬಂದರೆ ಜನರು ಅದಕ್ಕೆ ಬೇಕಾದ ಸಹಾಯಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದರೆ ಸರ್ಕಾರದಲ್ಲಿ ಮೊದಲು ದುಡ್ಡಿರಬೇಕಲ್ಲವೇ? ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷ. ನಾನು ಯಾವ ಸಹಕಾರ ಕೊಡುವುದಕ್ಕೂ ಸಿದ್ಧವಾಗಿದ್ದೆ. ಆದರೆ ಸರ್ಕಾರದವರು ಹಣವಿಲ್ಲವೆಂದು ಹೇಳುತ್ತಿದ್ದಾರೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಾರ್ಮಿಕರ ಬಗ್ಗೆ ಹೇಳಿದ್ದಾರೆ, ಸಂತೋಷ. ಆದರೆ ಸಂಘ ಶಕ್ತಿಗಳನ್ನು ಬಲಪಡಿಸಿಕೊಂಡಿರತಕ್ಕ ಜನರಿಗೆ ದೊರೆಯತಕ್ಕ ಸೌಲಭ್ಯಗಳು ಆ ಜನರಿಗೆ ಇಲ್ಲ. ಆ ಮಿನಿಮಂ ವೇಜಸ್ ಆಕ್ಟ್ - ಓಬೀರಾಯನ ಕಾಲದ್ದು. ಅದನ್ನು ಬದಲಾಯಿಸುವುದಕ್ಕೆ ಇಲ್ಲಿಯತನಕ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇನ್ನು ನಾನು ಈ ಸರ್ಕಾರಕ್ಕೆ ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವರು ದೇಶದಲ್ಲಿ ಗರೀಬಿ ಹಟಾವೋ ಮಾಡುವುದಾಗಿ ಪ್ರಚಾರ ಮಾಡಿಕೊಂಡು ಇಲ್ಲಿ ಬಂದು ಕುಳಿತರು. ಈ ದಿವಸ ಇವರು ಹಿಂದೆ ಹೇಳಿದ್ದೆಲ್ಲಾ ಮಾಯವಾಗಿ ಹೋಯಿತು. ಆದ್ದರಿಂದ ಇವರು ಸದ್ಯ ಹಿಂದೆ ಇಲ್ಲಿ ಜನರಿಗೇನು ಒಂದು ಗರೀಬೀ ಇತ್ತೋ ಅಷ್ಟನ್ನಾದರೂ ವಾಪಸ್ ಅವರಿಗೆ ಕೊಡಿ ಎಂದು ಕೇಳಿಕೊಂಡು ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ರಾಜ್ಯದ ಅರ್ಥಮಂತ್ರಿಗಳು ಕರ್ನಾಟಕ ಪ್ರೊವಿಷನಲ್ ಕಲೆಕ್ಷನ್ ಆಫ್ ಟ್ಯಾಕ್ಸಸ್ ಬಿಲ್-1974 ಎನ್ನುವುದನ್ನು ನಮ್ಮ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಈಗಿರತಕ್ಕ ವಾತಾವರಣದಲ್ಲಿ ಈಗಿರತಕ್ಕ ಸಮಾಜದಲ್ಲಿ ಟ್ಯಾಕ್ಸ್ ಗಳನ್ನು ವಿಧಿಸದೆ ಯಾವ ಸರ್ಕಾರವೂ ನಡೆಯುವುದಕ್ಕೆ ಸಾಧ್ಯವಿಲ್ಲ. ಇದು ಬಂಡವಾಳಶಾಹಿ ಪದ್ಧತಿಯಲ್ಲಿ ಮೂಲಭೂತವಾಗಿರತಕ್ಕ ಗುಟ್ಟು. ಆದರೆ ಟ್ಯಾಕ್ಸಸ್ ಹಾಕಬೇಕಾಗಿರತಕ್ಕ ಪರಿಸ್ಥಿತಿಯಲ್ಲಿ ಯಾರ ಮೇಲೆ ಟ್ಯಾಕ್ಸ್‌ಗಳನ್ನು ಹಾಕಬೇಕು, ಯಾರ ಮೇಲೆ ಹಾಕಬಾರದು ಎನ್ನುವುದು ಬಹಳ ಮುಖ್ಯ. ಎಲ್ಲಿ ನೋಡಿದರೂ ಸಮಾಜವಾದಿಗಳು ನಾವು ಎಂದು ಡಂಗೂರ ಹೊಡೆದು ಇಲ್ಲಿ ಬಂದು ಕೂತಿದ್ದಾರೆ ಈ ಸರ್ಕಾರದವರು. ಇವರು ಉಪ್ಪಿನ ಮೇಲೂ ಇವತ್ತು ಟ್ಯಾಕ್ಸ್‌ಗಳನ್ನು ಹಾಕಿದ್ದಾರೆ. ಇವರು ಅಧಿಕಾರಕ್ಕೆ ಬರುವ ಮೊದಲು ಉಪ್ಪಿನ ಬೆಲೆ ಎಷ್ಟು ಇತ್ತು, ಈಗ ಎಷ್ಟು ಆಗಿದೆ ಎಂದು ಆಲೋಚನೆ ಮಾಡಿದರೆ ನಮಗೆ ಗೊತ್ತಾಗುತ್ತದೆ. ಉಪ್ಪಿಗೋಸ್ಕರ ದಂಡಿ ಸತ್ಯಾಗ್ರಹ ನಡೆಯಿತು, ಇದು ಇತಿಹಾಸದಲ್ಲಿದೆ, ಇದರ ಬಗ್ಗೆ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಉಪ್ಪಿನ ಬೆಲೆ ಇವತ್ತು ಎಷ್ಟು ಜಾಸ್ತಿಯಾಗಿದೆ? ಒಂದಲ್ಲ ಒಂದು ರೀತಿಯಿಂದ ಇದರ ಮೇಲೆ ಟ್ಯಾಕ್ಸ್ ಬಿದ್ದಿದೆ. ನೇರವಾಗಿ ತೆರಿಗೆಯನ್ನು ಹಾಕದಿದ್ದರೂ ಕೂಡ ಉಪ್ಪು ಯಾವ ಪ್ರದೇಶದಿಂದ ಬರಬೇಕೋ ಅಲ್ಲಿಂದ ಇದನ್ನು ತರಿಸಬೇಕಾದರೆ, ಲಾರಿಯಿಂದಲೋ ಅಥವಾ ಟ್ರೈನ್‌ನಲ್ಲಿ ತರಿಸಬೇಕು, ಅದಕ್ಕೆ ಇದರ ಮೇಲೆ ಟ್ಯಾಕ್ಸನ್ನು ಹಾಕಿದ್ದಾರೆ. ಯಾವುದಕ್ಕೆ ಟ್ಯಾಕ್ಸನ್ನು ಹಾಕಬೇಕು, ಯಾವುದಕ್ಕೆ ಹಾಕಬಾರದು ಎನ್ನುವುದರ ಬಗ್ಗೆ ಇವರು ಯೋಚನೆ ಮಾಡಬೇಕು. ಇವರು ಟ್ಯಾಕ್ಸ್ ಹಾಕಿದ ತಕ್ಷಣ ಅದನ್ನು ವಸೂಲು ಮಾಡುವ ಅಧಿಕಾರ ಇವರಿಗೆ ಬೇಕು; ಎಂದು ಈ ಮಸೂದೆಯ ಮೂಲಕ ಕೇಳುತ್ತಿದ್ದಾರೆ. ಹಿಂದೆ ಮಾತನಾಡಿದ ಸದಸ್ಯರುಗಳು ಇದರ ಬಗ್ಗೆ ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ಅದನ್ನು ಪುನರುಚ್ಚಾರ ಮಾಡಿ, ಈ ಸದನದ ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ನೇರವಾದ ತೆರಿಗೆಗಳನ್ನು ಬಿಟ್ಟು ಪರೋಕ್ಷವಾದ ತೆರಿಗೆಗಳನ್ನು ಇವರು ಹಾಕುತ್ತಿದ್ದಾರೆ. ಇವುಗಳನ್ನು ಕೊಡುವುದು ಹೇಗೆ ಸಾಧ್ಯ? 3-6 ತಿಂಗಳು ಆದ ಮೇಲೆ ಟ್ಯಾಕ್ಸಸ್ ಅನ್ನು ಹಿಂದಕ್ಕೆ ಕೊಡುವ ಬಗ್ಗೆ ಮಾನ್ಯ ಹಿರಿಯರು ಚೆನ್ನಾಗಿ ವಿವರ ಹೇಳಿದ್ದಾರೆ. ಸ್ಮಶಾನಕ್ಕೆ ಹೋದ ಹೆಣ, ಸರ್ಕಾರಕ್ಕೆ ಹೋದ ಹಣ ಎರಡು ಒಂದೆ ಎಂದು. ಅಕಸ್ಮಾತ್ತಾಗಿ ಹೆಣ ಏನಾದರೂ ವಾಪಸ್ ಬರುವುದಕ್ಕೆ ಸಾಧ್ಯವಿದ್ದರೂ ಕೂಡ ಅದು ಮನೆ ಸೇರಿಕೊಳ್ಳುತ್ತದೆ. ಆದರೆ ಸರ್ಕಾರದವರು ಏನಾದರೂ ಟ್ಯಾಕ್ಸಸ್ ಅನ್ನು ವಾಪಸ್ ಕೊಡಬೇಕು ಎಂದರೆ ಯಾರಿಗೆ ಕೊಡುವುದು, ಯಾರು ಎನ್ನುವುದು ಇದರಲಿಲ್ಲ. ಇವತ್ತು ಬೀಡಿ, ಸಿಗರೇಟ್ ಮೇಲೆ ಟ್ಯಾಕ್ಸ್ ಹಾಕಿದ್ದಾರೆ. ಒಂದು ದಿವಸಕ್ಕೆ ಲಕ್ಷಾಂತರ ಬೀಡಿ ಸಿಗರೇಟುಗಳು ಖರ್ಚಾಗುತ್ತವೆ, ಬೀಡಿಯ ಮೇಲಿನ ಟ್ಯಾಕ್ಸನ್ನು ವಾಪಸ್ ಕೊಡುವುದಕ್ಕೆ ಆಗುತ್ತದೆಯೇ? ಯಾರಿಗೆ ಇವರು ವಾಪಸ್ ಕೊಡುವುದು? ಇದು

ವಿಚಿತ್ರವಾದ ಪ್ರಸಂಗ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಏನು ಹೇಳುತ್ತಾರೆಯೋ ಎಂದು ನೋಡಬೇಕಾಗಿದೆ. ಸಮಾಜದಲ್ಲಿ ಯಾರಿಗೆ ಟ್ಯಾಕ್ಸ್ ಕೊಡಲಿಕ್ಕೆ ಶಕ್ತಿ ಇದೆಯೋ ಅಂಥವರ ಮೇಲೆ ಟ್ಯಾಕ್ಸನ್ನು ಹಾಕಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ಅಂಥವರ ಮೇಲೆ ಇವರಿಗೆ ಭಯ ಇದೆ. ಸಾಮಾನ್ಯರ ಬೆನ್ನು ಬಗ್ಗಿ ಮುರಿದ ಪರಿಸ್ಥಿತಿಯಲ್ಲಿಯೂ ಇವರು ಅವನನ್ನು ಇನ್ನೂ ಭೂಮಿಯ ಒಳಕ್ಕೆ ತಳ್ಳಬೇಕು ಎಂದು ಸರ್ಕಾರಕ್ಕೆ ಇಚ್ಚೆ ಇದೆಯೆಂದು ಕಾಣುತ್ತದೆ. ಆದ್ದರಿಂದ ಇದು ನೆಲ ಮಟ್ಟಕ್ಕೆ ಇಳಿದಿರತಕ್ಕ ಸಾಮಾನ್ಯರನ್ನು ಭೂಮಿಗೆ ತುಳಿಯುವಂಥ ಮಸೂದೆಯಾಗುತ್ತದೆಂದು ತಿಳಿದು ಇದಕ್ಕೆ ನಾನು ನನ್ನ ಒಪ್ಪಿಗೆ ನೀಡುವುದಕ್ಕೆ ತಯಾರಾಗಿಲ್ಲ ಎಂದು ಹೇಳಿ, ಅಧ್ಯಕ್ಷರು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## ಬಯಲು ಸೀಮೆ ಅಭಿವೃದ್ಧಿ ಮಂಡಲಿ ರಚನೆಗೆ ಸಲಹೆ

74-75ರ ಆಯವ್ಯಯ ವಿರೋಧಿಸಿ ಮಾಡಿದ ಭಾಷಣದಲ್ಲಿ ಸಿ. ಬೈರೇಗೌಡರು ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಚನೆಗೆ ಸಲಹೆ ನೀಡಿದ್ದರು. ನೀರಿನ ಸರ್ವೆ ಸರಿಯಾಗಿ ಆಗುತ್ತಿಲ್ಲವೆಂದೂ ಟೀಕಿಸಿದ್ದರು.
ಬೈರೇಗೌಡರು ಅಪೇಕ್ಷಿಸಿದ್ದ ಮಂಡಲಿ ಈಗ ರಚನೆಯಾಗಿದೆ. - ಸಂ.

ಇನ್ನು ನಮ್ಮ ರಾಜ್ಯದಲ್ಲಿ ವ್ಯವಸಾಯ ಅತಿ ಮುಖ್ಯವಾದದ್ದು ಎಂದು ಅನೇಕ ವರದಿಗಳು ಬಂದಿವೆ. ಇಂತಹ ಒಂದು ವರದಿ ಮುಖ್ಯವಾದುದು ಎಂದರೆ ಒಬ್ಬರು ರೀಸರ್ಚ್ ಸ್ಕಾಲರ್ ಇಂಗ್ಲೆಂಡಿಗೆ ಹೋಗಿ ಹತ್ತು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಕೂಡ ಬಂದು ರೀಸರ್ಚ್ ಕೆಲಸಗಳನ್ನು ಮಾಡಿದ್ದಾರೆ. ಅವರು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರ ಸ್ಥಿತಿಯನ್ನು ಉತ್ತಮಪಡಿಸಲು ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಇಲ್ಲಿ ಹೇಳಿದರೆ ಸೂಕ್ತವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ. South India : Yeserday, to-day and tomorrow : Mysore Villages re-visited : T. Soarlett Epstein. ಎನ್ನುವ ಈ ಪುಸ್ತಕದಲ್ಲಿ "While the wealthy peasants have ridden on the crest of inflation the poor have become poorer" ಎಂದು ಹೇಳಿದ್ದಾರೆ. ಇದು ಇವರೊಬ್ಬರೇ ಹೇಳತಕ್ಕದ್ದೇನೂ ಅಲ್ಲ. ಇದೇ ಪ್ರಪಂಚದ ಇತರ ಪರಿಣಿತರು ಹಾಗೂ ಅಂತರ ರಾಷ್ಟ್ರೀಯ ಪ್ರಖ್ಯಾತಿಯುಳ್ಳವರೂ ಕೂಡ ಹೇಳಿರುವ ಮಾತುಗಳೂ ಇವೇ. ವ್ಯವಸಾಯ ನಮ್ಮ ರಾಜ್ಯದಲ್ಲೂ ನಡೆಯುತ್ತಿದೆ. ವ್ಯವಸಾಯಕ್ಕೆ ಅತಿ ಮುಖ್ಯವಾಗಿ ಬೇಕಾಗಿರುವುದು ಗೊಬ್ಬರ. ಇಂದು ಗೊಬ್ಬರದ ಸ್ಥಿತಿ ಏನಾಗಿದೆ ಎಂದರೆ ನಮಗೆ ಬೇಕಾಗಿರುವ ಗೊಬ್ಬರ ಸುಮಾರು 2.55 ಲಕ್ಷ ಟನ್ನುಗಳಷ್ಟು. ಆದರೆ ಇದುವರೆಗೆ ಸರಬರಾಜು ಆಗಿರತಕ್ಕದ್ದು ಕೇವಲ 92 ಸಾವಿರ ಟನ್ನುಗಳಷ್ಟು ಮಾತ್ರ. ಇದಕ್ಕಿಂತ ಬೇರೆ ಸರ್ಕಾರಕ್ಕೆ

ಬೇಕಿಲ್ಲ ಎಂದು ನಾನು ಭಾವಿಸುತ್ತೇನೆ. ಹೀಗಾದರೆ ವ್ಯವಸಾಯ ನಮ್ಮ ದೇಶದಲ್ಲಿ ಹೇಗೆ ಮುಂದುವರಿಯಲು ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಇದನ್ನು ನೋಡಿದರೆ ನಮಗೆ ಬಹಳ ಆಶ್ಚರ್ಯವಾಗಿದೆ. ವ್ಯವಸಾಯ ನಮ್ಮ ಭಾಗದಲ್ಲಿ ಒಂದೊಂದು ರೀತಿ ಒಂದೊಂದು ಕಡೆ ಇರುತ್ತದೆ. ಬಯಲು ಸೀಮೆಯಲ್ಲಿ ರೇಷ್ಮೆ ವ್ಯವಸಾಯ ಬಹಳ ಮುಖ್ಯವಾಗಿ ನಡೆಯುತ್ತಿದೆ. 1973-74ನೇ ಸಾಲಿನಲ್ಲಿ ಇಪ್ಪತ್ತು ಲಕ್ಷ ಟನ್ನುಗಳಷ್ಟು ರೇಷ್ಮೆ ಉತ್ಪಾದನೆಯಾಯಿತು. ಇದರಿಂದ ಹೆಚ್ಚು ಫಾರಿನ್ ಎಕ್ಸ್‌ಚೇಂಜು ಪಡೆಯಲು ಸಾಧ್ಯವಾಯಿತು. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಹಿಂದೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಿಂದೆ ರಾಜ್ಯ ಸಚಿವರಾಗಿದ್ದ ನಾಗರಾಳ್‌ರವರೂ ಕೂಡ ಬಹಳ ದೊಡ್ಡದಾಗಿ ಒಂದು ಪ್ರಕಟಣೆಯನ್ನು ಹೊರಡಿಸಿ ನಮ್ಮ ದೇಶದಲ್ಲಿ ಸುಮಾರು 80 ಕೋಟಿ ರೂಪಾಯಿಗಳ ಒಂದು ಕ್ರಾಷ್ ಪ್ರೋಗ್ರಾಂ ಇದೆ ಇದರಿಂದ ರೇಷ್ಮೆ ವ್ಯವಸಾಯಕ್ಕೆ ಹಾಗೂ ಇದನ್ನು ಮಾಡುವ ರೈತರಿಗೆ ಎಲ್ಲ ಅನುಕೂಲಗಳನ್ನು ಮಾಡಿಸಿಕೊಡುತ್ತೇವೆಂದು ಹೇಳಿದರು. ಅವರು ಹೇಳಿದಂತೆ 80 ಕೋಟಿ ರೂಪಾಯಿಗಳ ಯೋಜನೆಯಲ್ಲಿ 80 ನಯಾಪೈಸೆಯಷ್ಟು ಕೂಡ ರೇಷ್ಮೆ ವ್ಯವಸಾಯಗಾರರಿಗೆ ಅನುಕೂಲ ಮಾಡಲಾಗಲಿಲ್ಲ. ಇದಕ್ಕೆ ಕಾರಣ ಅವರು ಹೇಳುವುದು ರಿಸರ್ವ್ ಬ್ಯಾಂಕಿನವರು ಹಣ ಕೊಡಲಿಲ್ಲ ಎಂದು. ಈ ರೀತಿ ಹಣ ಹಾಗೂ ಇನ್ನಿತರ ಅಡ್ಡಿ ಆತಂಕಗಳನ್ನು ತಂದು ರೈತರಿಗೇಕೆ ಮೋಸ ಮಾಡಲು ಹೋಗುತ್ತೀರಿ? ಬಹಳ ದೊಡ್ಡದಾಗಿ 80 ಕೋಟಿ ರೂಪಾಯಿಗಳ ಯೋಜನೆ ಇದೆ ಎಂದೇ ಸುಮ್ಮನೆ ಅಪಪ್ರಚಾರ ಮಾಡಬೇಕು. ಬಯಲು ಸೀಮೆ ಪ್ರದೇಶಗಳಾದ ಕೋಲಾರ ಹಾಗೂ ಬೆಂಗಳೂರು ಜಿಲ್ಲೆಯಲ್ಲಿನ ಕೆಲವು ಭಾಗಗಳಲ್ಲಿ ರೇಷ್ಮೆ ವ್ಯವಸಾಯವನ್ನೇ ಹೆಚ್ಚಾಗಿ ಅವಲಂಬನೆ ಮಾಡಿರುವ ರೈತರುಗಳಿದ್ದಾರೆ. ಇಂತಹ ಸಾವಿರಾರು ಜನ ರೇಷ್ಮೆ ವ್ಯವಸಾಯ ಮಾಡುವವರಿಗೆ ತೊಂದರೆಯಾಗಲಿಲ್ಲವೇ? ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಇನ್ನು ಮಲೆನಾಡಿನ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕೆಂದು ಸರ್ಕಾರ ಪ್ರಚಾರ ಮಾಡುತ್ತಿದೆ. ಅಲ್ಲೇನೋ ಇಂದು ಮಳೆ ಬರುತ್ತಿದೆ. ಆದರೆ ಬಯಲು ಸೀಮೆಯಲ್ಲಿ ಎಂದರೆ ಕೋಲಾರ ಹಾಗೂ ಇತರ ಕಡೆಗಳಲ್ಲಿ ಮಳೆ ಕೇವಲ 15 ರಿಂದ 20 ಇಂಚು ಕೂಡ ಬರುತ್ತಿಲ್ಲ. ಇದರಿಂದಾಗಿ ಇಲ್ಲಿ ಜನರಿಗೆ ಕುಡಿಯಲು ನೀರೇ ಇಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ಆಂಧ್ರ ಪ್ರದೇಶದಲ್ಲಿ ಯಾವ ರೀತಿ ರಾಯಲಸೀಮಾ ಡೆವಲಪ್‌ಮೆಂಟು ಬೋರ್ಡ್ ಎಂದು ಇದೆಯೋ ಅದೇ ರೀತಿ ಇಲ್ಲೂ ಕೂಡ ಒಂದು ಅಭಿವೃದ್ಧಿ ಮಂಡಲಿಯನ್ನು ಸರ್ಕಾರ ರಚನೆ ಮಾಡಿ ಇದರ ಮೂಲಕ ಎಲ್ಲ ಭಾಗಗಳಿಗೂ ಅನುಕೂಲವಾಗುವಂತೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲದಿದ್ದರೆ ನಮ್ಮ ಜನಕ್ಕೆ ಏನೂ ಉಪಯೋಗವಾಗುವುದಿಲ್ಲ. ಇಂತಹ ಒಂದು ಮಂಡಲಿ ಮಾಡಬೇಕೆಂದು ಅನೇಕ ಸಾರಿ ಸರ್ಕಾರವನ್ನು ಒತ್ತಾಯ ಮಾಡಿದರು ಇದನ್ನು ಸರ್ಕಾರ ಮಾಡಲಿಲ್ಲ. ಇದಕ್ಕೆ ಇರುವ ತೊಂದರೆಗಳಾದರೂ ಏನು ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಇಂತಹ ವಿಚಾರಗಳ ಬಗ್ಗೆ ತೀವ್ರವಾಗಿ ಗಮನ ಹರಿಸಬೇಕು. ಇಲ್ಲದಿದ್ದರೆ ಜನತೆ ಸುಮ್ಮನೆ ಕೂರುವುದಿಲ್ಲ. ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಎಚ್ಚರಿಕೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ನೀರಿನ ಸರ್ವೇ ಸರಿಯಾಗಿ ನಡೆದಿಲ್ಲ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರು 1973-74ನೇ ಸಾಲಿನ ಸಪ್ಲಿಮೆಂಟರಿ ಗ್ರ್ಯಾಂಟ್ಸ್‌ಗಳನ್ನು ಸಭೆಯ ಮುಂದಿಟ್ಟು ಇದಕ್ಕೆ ನಮ್ಮ ಅನುಮತಿಯನ್ನು ಕೇಳಿದ್ದಾರೆ. ನಾನು ಎರಡು ಮೂರು ಡಿಮ್ಯಾಂಡುಗಳ ಮೇಲೆ ಮಾತ್ರ ಮಾತನಾಡುವವನಿದ್ದೇನೆ.

ಡಿಮ್ಯಾಂಡ್ ನಂಬರ್ (16) ರಲ್ಲಿ ಮಾನ್ಯ ಅರ್ಥ ಸಚಿವರು 12 ಲಕ್ಷದ 50 ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ಅವರು ಅದೇ ಡಿಮ್ಯಾಂಡಿನ ಎಕ್ಸ್‌ಪ್ಲೇನೇಷನಿನಲ್ಲಿ ವಿವರಗಳನ್ನು ತಿಳಿಸುತ್ತ - ಇದೊಂದು ಕೇಂದ್ರ ಸರ್ಕಾರದ ಸ್ಕೀಂ, ಇದಕ್ಕೆ ಸಿಬ್ಬಂದಿ ಬೇಕು, ಯಂತ್ರಸಾಮಗ್ರಿಗಳು ಬೇಕು ಎಂದು ಹೇಳಿದ್ದಾರೆ. ಈ ಇಲಾಖೆಯು ಮೈನ್ಸ್ ಮತ್ತು ಜಿಯಾಲಾಜಿಕಲ್‌ಗೆ ಸಂಬಂಧಿಸಿದ್ದೆಂದು ತಿಳಿದುಕೊಂಡಿದ್ದೇನೆ. ಭೂಗರ್ಭದಲ್ಲಿ ಅಡಗಿರತಕ್ಕ ನೀರನ್ನು ಪತ್ತೆ ಹಚ್ಚಲು ಪ್ರತಿಯೊಂದು ತಾಲ್ಲೂಕಿನಲ್ಲೂ ಸರ್ವಕ್ರಮ ಕೈಗೊಳ್ಳಬೇಕೆಂಬುದು ಇದರ ಮುಖ್ಯ ಉದ್ದೇಶ. ಆದರೆ ಕೆಲವು ತಾಲ್ಲೂಕುಗಳಲ್ಲಿ ಇದರ ಬಗ್ಗೆ ಸರ್ವೆ ಕಾರ್ಯ ನಡೆದಿದೆ. ಆದರೆ ಈಗ ಎಲ್ಲಿ ಸರ್ವೆ ಕಾರ್ಯ ನಡೆದಿದೆ. ಅದಕ್ಕೆ ಕೇವಲ ಒಂದು ಒಂದೂವರೆ ಫರ್ಲಾಂಗ್ ದೂರದಲ್ಲಿತರಕ್ಕ ಅನೇಕ ಹಳ್ಳಿಗಳಲ್ಲಿ ಈ ಸರ್ವೆ ಕಾರ್ಯ ನಡೆದಿಲ್ಲ. ಅಲ್ಲಿ ರೈತರು ಸಾಲ ಪಡೆಯಬೇಕಾಗಿದ್ದರೆ ಭೂಅಭಿವೃದ್ಧಿ ಬ್ಯಾಂಕಿನವರು ಇವರಿಂದ ಒಂದು ಸರ್ಟಿಫಿಕೇಟನ್ನು ಕೇಳುತ್ತಾರೆ. ಈ ಕೆಲಸಗಳನ್ನು ಅವೈಜ್ಞಾನಿಕ ರೀತಿಯಲ್ಲಿ ಮಾಡದೆ ವೈಜ್ಞಾನಿಕ ರೀತಿಯಲ್ಲೇ ಮಾಡಬೇಕೆಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ರಾಜ್ಯದಲ್ಲಿ ಬೈಲುಸೀಮೆ ಎಂದರೆ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಇಂಥ ಜಿಲ್ಲೆಗಳಲ್ಲಿ ದೊಡ್ಡ ನದಿಗಳೂ ಇಲ್ಲ, ದೊಡ್ಡ ಪ್ರಮಾಣದ ಜಲಾಶಯಗಳೂ ಇಲ್ಲ. ನಮ್ಮಲ್ಲಿ ಆಕಾಶದಿಂದ ಮಳೆ ಬಂದರೆ ನೀರು ದೊರೆಯಬೇಕು. ಅದನ್ನು ಬಿಟ್ಟರೆ ಭೂಮಿಯಲ್ಲಿರುವುದನ್ನು ಉಪಯೋಗಿಸಬೇಕು. ಅದನ್ನು ಬಿಟ್ಟರೆ ಕುಡಿಯುವುದಕ್ಕೆ ಕೂಡ ನೀರಿಲ್ಲ. ಮಲೆನಾಡಿನಲ್ಲಿ ಹೆಚ್ಚು ನೀರು ದೊರೆಯಬಹುದು, ಬೈಲು ಪ್ರಾಂತ್ಯದಲ್ಲಿ ಆ ರೀತಿ ಇಲ್ಲ. ಕುಡಿಯುವುದಕ್ಕೆ ಕೂಡ ನೀರು ಸಿಗದೆ ತೊಂದರೆಯಾಗಿದೆ. ಆದರೆ ಸರ್ಕಾರ ಇಲ್ಲಿಯವರೆಗೆ ನಿಖರವಾಗಿ ಎಲ್ಲಿ ನೀರು ದೊರೆಯುವುದು, ಎಲ್ಲಿ ಬಾವಿ ತೆಗೆಯಬಹುದು ಎಂದು ಹೇಳುವ ಪರಿಸ್ಥಿತಿಯಲ್ಲಿಲ್ಲ. ಇಲ್ಲಿಯವರೆಗೆ ಹಾಗೆ ತಿಳಿಸಿಲ್ಲ. ದೇಶಾಭಿವೃದ್ಧಿ ಮತ್ತು ವ್ಯವಸಾಯಾಭಿವೃದ್ಧಿ ಬಗ್ಗೆ ಸರ್ಕಾರ ಪ್ರಚಾರ ಮಾಡುವುದರಲ್ಲಿ ಅರ್ಥವಿಲ್ಲ.

ಡಿಮ್ಯಾಂಡ್ ನಂ. 24 (ಎ) ನಲ್ಲಿ ಇಂದು 69 ಲಕ್ಷ 56 ಸಾವಿರ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅದರಿಂದ ಉಪಯೋಗವಾಗುವಂತಿದ್ದರೆ ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದೆ. ಹಿಂದೆ ಮೈಸೂರು ಸಿಲ್ಕ್ ಎಂದರೆ ಪ್ರಪಂಚದಲ್ಲೇ ಹೆಸರುವಾಸಿಯಾಗಿತ್ತು. ಇಂದು ಬೆಳೆಯುವ

ದೇಶೀಯ ತಳಿ ಚೆನ್ನಾಗಿಲ್ಲ. ಜಪಾನ್, ಚೈನಾ ದೇಶಗಳಲ್ಲಿ ಒಳ್ಳೆಯ ತಳಿಯಿದೆ. ಉತ್ತಮವಾದ ಹುಳು ಸಾಕಿ ಒಳ್ಳೆಯ ರೀತಿನೀತಿಯನ್ನು ಅನುಸರಿಸುತ್ತಿದ್ದಾರೆ. ಇಂದು ನಮ್ಮ ಜಿಲ್ಲೆಯಲ್ಲಿ ತಳಿಗೆ ಸಂಪೂರ್ಣ ರೋಗವುಂಟಾಗಿದೆ. ಹೊಸ ಮತ್ತು ಹಳೆಯ ತಳಿಗಳೆರಡಕ್ಕೂ ರೋಗ ತಗುಲಿದೆ. ಮಾಗಡಿ, ಚನ್ನಪಟ್ಟಣ, ಚಾಮರಾಜನಗರ ಮುಂತಾದ ಕಡೆ ಸೀಡ್ಸ್ ಉತ್ಪತ್ತಿ ಮಾಡುವರು. ಇದು ಬಹಳ ಸೂಕ್ಷ್ಮ ಪ್ರಾಣಿ. ನಮ್ಮ ಕಡೆ ಸುಣ್ಣದ ರೋಗ ತಗುಲುವುದು ಇದರಿಂದ ಗೂಡು ಕಟ್ಟುವುದಿಲ್ಲ, ಕೊನೆಯ ವೇಳೆಗೆ ಈ ರೋಗ ಬರುವುದು. ಇದರಿಂದ ರೈತರಿಗೆ ತೊಂದರೆಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಈ ರೋಗ ಬಂದು ರೈತರು ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ಇಲಾಖೆಯಲ್ಲಿರುವ ಸೀಡ್ ಏರಿಯಾಕ್ಕೆ ಸಂಬಂಧಪಟ್ಟ ಅಧಿಕಾರಿ ಸರ್ಕಾರದ ಗಮನಕ್ಕೆ ಇದನ್ನು ತರಬೇಕಾಗಿದೆ. ಇಷ್ಟು ಜನ ರೈತರಿಗೆ ಇಷ್ಟು ಅಧಿಕಾರಿಗಳು ಎಂದು ಗೊತ್ತು ಮಾಡಿದ್ದಾರೆ. ಫೀಲ್ಡ್ ಆಫೀಸರ್ಸ್, ಡೆಮಾನ್‌ಸ್ಟ್ರೇಟರ್ಸ್ ಮುಂತಾದವರಿದ್ದಾರೆ. ಅವರಿಗೆ ಸಂಬಳ ಸಿಕ್ಕುವುದು, ಗಿಂಬಳ ಕೂಡ ಸಿಕ್ಕುವುದು, ಅವರು ಪ್ರತಿನಿತ್ಯ ಯಾವ ಮೊಟ್ಟೆ ತಂದರು ಮುಂತಾದವುಗಳ ಬಗ್ಗೆ ನಿಖರವಾದ ಲೆಕ್ಕವನ್ನಿಡಬೇಕು. ಆದರೆ ಅಧಿಕಾರಿಗಳು ತಮ್ಮ ಕರ್ತವ್ಯ ಲೋಪ ಮಾಡುವರು. ಇದರಿಂದ ಹುಳು ಸಾಕುವವರಿಗೆ ಕೋಟಿಗಟ್ಟಲೆ ನಷ್ಟವಾಗುವುದು. ಇದನ್ನು ಹಿಂದಿನಿಂದ ಎಷ್ಟೋ ಸಲ ಗಮನಕ್ಕೆ ತಂದರು ಸೂಕ್ತ ಕ್ರಮ ಕೈಗೊಂಡಿಲ್ಲ. ಈ ಇಲಾಖೆ ಮುಖ್ಯಮಂತ್ರಿಗಳ ಕೈಲಿದೆ. ಆದರೂ ಕೂಡ ಅಪಚಾರವಾಗಿ ಲಕ್ಷಾಂತರ ರೈತರಿಗೆ ತೊಂದರೆಯಾಗುತ್ತಿದೆ. ಹಾಗಿರುವಾಗ ಯಾವ ರೀತಿ ಒಪ್ಪಿಕೊಳ್ಳಲು ಸಾಧ್ಯ? ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಹಾಯವಾಗುವುದಾದರೆ ಒಪ್ಪಿಗೆ ಕೊಡಬಹುದು. ಸರ್ಕಾರ ನಾವು ಕಷ್ಟಗಳನ್ನು ಹೇಳುತ್ತಿದ್ದಾಗ್ಯೂ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಖಾಸಗಿಯವರು ಸರಿಯಾಗಿ ಗೂಡುಗಳನ್ನು ಸರಬರಾಜು ಮಾಡುತ್ತಿಲ್ಲ. ಸುಮಾರು ಒಂದೆರಡು ವರ್ಷದ ಹಿಂದೆ ನೂರು ಮೊಟ್ಟೆಗೆ 10-12 ರೂಪಾಯಿ ಇತ್ತು. ಈಗ 30-40 ರೂಪಾಯಿಯಾಗಿದೆ. ಕೆಲವು ಸಂದರ್ಭಗಳಲ್ಲಿ ಹೆಚ್ಚು ಡಿಮ್ಯಾಂಡ್ ಇರುವಾಗ 60 ರೂಪಾಯಿಗಳವರೆಗೂ ಬೆಲೆ ಏರುವುದು. ಇಂಥ ಪರಿಸ್ಥಿತಿ ಇದೆ. ಸೀಡ್ಸ್ ಒದಗಿಸುವವರು ಲೈಸೆನ್ಸ್ ಪಡೆಯಬೇಕೆಂದಿದೆ. ಸರ್ಕಾರದವರು ಸೀಡ್ ಫಾರಂ ಮಾಡಿದ್ದಾರೆ. 3-4 ತಿಂಗಳಿಂದ ಮೊಟ್ಟೆ ತಯಾರು ಮಾಡಿಲ್ಲ. ಆದರೆ ಇನ್ಸ್‌ಪೆಕ್ಟರು, ಡೆಮಾನ್‌ಸ್ಟ್ರೇಟರು ಮುಂತಾದ ಅಧಿಕಾರಿಗಳಿಗೆ ಸಂಬಳ ಕೊಡುತ್ತಿದ್ದಾರೆ. ರೈತರಿಗೆ ಮಾತ್ರ ಇದರಿಂದ ಸಹಾಯವಾಗಿಲ್ಲ. ಒಂದು ಕಡೆ ರೋಗ, ಇನ್ನೊಂದು ಕಡೆ ದುಬಾರಿ ಬೆಲೆ. ಈ ರೀತಿ ರೈತರು ತೊಂದರೆಗೆ ಈಡಾಗಿದ್ದಾರೆ. ಇಂದು ಕರ್ನಾಟಕದಲ್ಲಿ ಭಾರತ ದೇಶದಲ್ಲಿ ಉತ್ಪತ್ತಿಯಾಗುವ ರೇಷ್ಮೆಯಲ್ಲಿ ಶೇಕಡ 80ರಷ್ಟು ಉತ್ಪತ್ತಿಯಾಗುತ್ತಿದೆ. ಇದರಿಂದ ಕೋಟ್ಯಾಂತರ ರೂಪಾಯಿ ವಿದೇಶಿ ವಿನಿಮಯ ದೊರೆಯುತ್ತಿದೆ. ಇದರಿಂದ ಲಾಭವಾಗಿದೆ.

ರೇಷ್ಮೆ ಇಲಾಖೆಯನ್ನು ಮತ್ತು ರೇಷ್ಮೆಯನ್ನು ಅಭಿವೃದ್ಧಿ ಪಡಿಸುವುದು ಆದ್ಯಕರ್ತವ್ಯ ಎಂದು ಭಾವಿಸಿ ಸರ್ಕಾರ ಹೊಸ ಹೊಸದಾಗಿ ಬರುವ ತಳಿಗಳು ರೋಗರಹಿತವಾದ ತಳಿಗಳನ್ನು

ಸಾಕಬೇಕಾಗಿದೆ. ಇವತ್ತು ಅದು ಆಗುತ್ತಾ ಇಲ್ಲ. ರೀಸರ್ಚ್ ಮಾಡುವುದಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚಾದರೂ ಕೂಡ ಚಿಂತೆ ಇಲ್ಲ. ಪ್ರಪಂಚದಲ್ಲಿ ಅತಿ ಉನ್ನತರಾದಂಥ ತಜ್ಞರನ್ನು ಕರೆಸಿ ರೀಸರ್ಚ್ ಮಾಡುವುದಕ್ಕೆ ಅವಕಾಶ ಕೊಟ್ಟು, ರೇಷ್ಮೆಬೆಳೆ ಅಭಿವೃದ್ಧಿ ಮಾಡಬೇಕು ಎಂದು ಸೂಚನೆ ಕೊಟ್ಟು, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

## ಶಿಕ್ಷಣ ಇಲಾಖೆ ಬೇಡಿಕೆ 9-4-74
## ಗ್ರಾಮೀಣ ಶಿಕ್ಷಕರು ಪಾಠ ಹೇಳುವುದಿಲ್ಲ:

ಹಳ್ಳಿಗಳಲ್ಲಿ ಶಿಕ್ಷಣ ಸುಧಾರಣೆಯಾಗಬೇಕು. ಆಗಲೇ ದೇಶದ ಪ್ರಗತಿ ಎಂದು ನಂಬಿದ್ದ ಗೌಡರು ಶಿಕ್ಷಣ ಇಲಾಖೆಯ ಬೇಡಿಕೆ ಮೇಲೆ ಮಾತನಾಡುತ್ತಾ, ಅಲ್ಲಿರುವ ಹುಳುಕುಗಳನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ.

ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತ ಸುಮಾರು 80 ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಅದನ್ನು ನಾನು ವಿರೋಧ ಮಾಡಬೇಕಾಗಿದೆ. ಕಾರಣವೇನೆಂದರೆ, ನನ್ನ ಹಿಂದೆ ಮಾತನಾಡಿದಂಥ ಸದಸ್ಯರೆಲ್ಲರೂ ಅಭಿಪ್ರಾಯಪಟ್ಟ ಪ್ರಕಾರ ಈ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ನರ್ಸರಿ ಶಾಲೆಗಳನ್ನು ರಾಜ್ಯದಲ್ಲಿ ತೆರೆದಿಲ್ಲ. ಮಕ್ಕಳ 3 ರಿಂದ 5 ವರ್ಷದ ಅವಧಿ ಏನಿದೆ. ಇದು ಬಹಳ ಪ್ರಾಮುಖ್ಯವಾದ ಅವಧಿ, ಈ ಅವಧಿಯಲ್ಲಿ ಅಂದರೆ, ಈ ಎರಡು ವರ್ಷಗಳಲ್ಲಿ ಮಕ್ಕಳು ಏನನ್ನು ಕಲಿಯುತ್ತಾರೆ, ಅದನ್ನು ಮುಂದಿನ 50 ವರ್ಷಗಳಲ್ಲಿ ಸಹ ಕಲಿಯುವುದಕ್ಕೆ ಸಾಧ್ಯವಿಲ್ಲ ಎಂದು ರೋಂ ದೇಶದವರು ಹೇಳುತ್ತಾರೆ. ಈ ಬಗ್ಗೆ ಸರ್ಕಾರದವರನ್ನು ನೇರವಾಗಿ ನಾನು ಪ್ರಶ್ನೆ ಮಾಡಬೇಕಾಗಿದೆ, ಏನೆಂದರೆ ನಮ್ಮ ರಾಜ್ಯದಲ್ಲಿ ನರ್ಸರಿ ಶಾಲೆಗಳು ಎಲ್ಲೆಲ್ಲಿವೆ ಎಂಬ ಬಗ್ಗೆ ಮತ್ತು ಅವುಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ನಮಗೆ ಒದಗಿಸಿದ್ದರೆ ನಾನು ಸಂತೋಷ ಪಡುತ್ತಿದ್ದೆ.

ಆದರೆ ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಏನು ಪರಿಸ್ಥಿತಿ ಇದೆ? ಅವರಿಗೆ 3ರಿಂದ 16 ವರ್ಷದ ಮಕ್ಕಳಿಗೂ ಮೈಗೆ ಬಟ್ಟೆ ಇಲ್ಲ, ಹಾಕಿಕೊಳ್ಳುವುದಕ್ಕೆ ಒಂದು ಅಂಗಿಯೂ ಇಲ್ಲ. ಹೊಟ್ಟೆಗೆ ಅನ್ನವೂ ಇಲ್ಲ. ಇಂಥವರಿಗೆ ಪ್ರೀ ಪ್ರೈಮರಿ ಎಜುಕೇಷನ್ ಆಗಲೀ, ಪ್ರೈಮರಿ ಎಜುಕೇಷನ್ ಆಗಲೀ ಇದರಿಂದ ಯಾವ ಪ್ರಯೋಜನ ಆಗುತ್ತದೆ. ಇದನ್ನೇ ತಾವು ಮುಂದಿರಿಸಿಕೊಂಡು ಹೋಗುವುದಾದರೆ ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, ನಾನು ಓದಿದಂತಹ ಶಾಲೆ ಒಂದು ಹರುಕುಮುರುಕು ಕಟ್ಟಡದಲ್ಲಿತ್ತು. ಅದಕ್ಕೆ ಬಾಗಿಲು ಕಿಟಕಿ ಯಾವುದೂ ಇಲ್ಲ. ನಾನು ಓದುವಾಗ ಅಲ್ಲಿ ಸುಮಾರು 7-8 ಅಂಗುಲ ಹಳ್ಳ ಕೊಳ್ಳ ಇತ್ತು.

ಈಗಲೂ ಅಲ್ಲಿ ಇದೇ ಪರಿಸ್ಥಿತಿ ಇದೆ. ಅದಾದ ಮೇಲೆ ನಾನು ಪ್ರೌಢಶಾಲೆಯಲ್ಲಿ ಓದಿದೆ, ಅದು ಗ್ರಾಮಾಂತರ ಪ್ರೌಢಶಾಲೆಯಾದ್ದರಿಂದ ಅಲ್ಲಿ ಸ್ವಾಭಾವಿಕವಾಗಿ ಏನೂ ಬದಲಾವಣೆಯಾಗಿಲ್ಲ. ಅದಾದ ಮೇಲೆ ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದಿದೆ, ಇದನ್ನು ನೋಡಿದರೆ ಸಂತೋಷವಾಗುತ್ತದೆ. ಇದು ಬೃಹದಾಕಾರವಾಗಿ ಬೆಳೆದಿದೆ. ಅದೇ ರೀತಿಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯವೂ ಬೆಳೆದು ಬಂದಿದೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಇಂಥ ಬದಲಾವಣೆಯಾಗಿದೆಯೇ? ಅಲ್ಲಿರತಕ್ಕ ಪಾಠಶಾಲೆಗಳು, ಅಲ್ಲಿರತಕ್ಕ ವಿದ್ಯಾಪದ್ಧತಿಯಾಗಲೀ ಈ ರೀತಿಯಲ್ಲಿ ಬದಲಾವಣೆಯಾಗಿದೆಯೇ? ಪಟ್ಟಣಗಳಲ್ಲಿರತಕ್ಕ ವಿದ್ಯಾಭ್ಯಾಸ ಪಟ್ಟಣಗಳಲ್ಲಿರತಕ್ಕ ಕಟ್ಟಡಗಳು ಬೃಹದಾಕಾರವಾಗಿ ಬೆಳೆದಿವೆ. ಬೆಂಗಳೂರು ನಗರದಲ್ಲಿ ಒಂದೆರಡು ಇನ್ಸ್‌ಟಿಟ್ಯೂಟ್‌ಗಳಿವೆ. ಒಂದು ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಇನ್ಸ್‌ಟಿಟ್ಯೂಟ್ ಆಫ್ ಸೋಷಿಯೊ ಎಕನಾಮಿಕ್ ಚೇಂಜ್ ಎಂದು ಇದೆ. ಈ ಎರಡು ಇನ್ಸ್‌ಟಿಟ್ಯೂಟ್‌ಗಳನ್ನು ಸೇರಿಸಿ 60 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಒಂದಕ್ಕೆ ಸುಮಾರು 30 ಲಕ್ಷ ರೂಪಾಯಿಗಳನ್ನು ಇನ್ನೊಂದಕ್ಕೆ ಸುಮಾರು 26 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವರಲ್ಲಿ ಎಷ್ಟು ಜನ ಹಳ್ಳಿಯ ಪರಿಸ್ಥಿತಿ ಏನು ಇದೆ ಎಂದು ತಿಳಿದುಕೊಂಡು ಬಂದಿದ್ದಾರೆ. ಹಳ್ಳಿಯ ಜನತೆಯ ಆಹಾರ ಪರಿಸ್ಥಿತಿ ಹೇಗಿದೆ, ಅವರ ವೃತ್ತಿಯ ಪರಿಸ್ಥಿತಿ ಹೇಗಿದೆ ಅವರಿಗೆ ಬರತಕ್ಕ ಆದಾಯದ ಮಾರ್ಪಾಡು ಆಗಿದೆಯೇ ಎನ್ನುವುದನ್ನು ನನಗೆ ಗೊತ್ತಿರುವಷ್ಟು ಮಟ್ಟಿಗೆ ಯಾರೂ ಕೂಡ ಹೋಗಿ ತಿಳಿದುಕೊಂಡು ಬಂದಿಲ್ಲ. ಅವರಿಗೆ ಸರ್ಕಾರದವರು ಕಣ್ಣು ಮುಚ್ಚಿಕೊಂಡು ಹಣ ಕೊಡುತ್ತಿದ್ದಾರೆ. ಸರ್ಕಾರದ ಹಣವನ್ನು ಹೊಡೆಯುವುದಕ್ಕೆ ಮಾತ್ರ ಇಂಥ ಸಂಸ್ಥೆಗಳು ಇವೆ. ಒಂದು ನಾಚಿಕೆಗೇಡಿನ ಪ್ರಸಂಗ ಎಂದು ಹಳ್ಳಿಗಾಡುಗಳಲ್ಲಿ ಒಂದು ಪಾಠಶಾಲೆಯನ್ನು ಕಟ್ಟಬೇಕಾದರೆ ಕೇವಲ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ ಇದು ಎಂಥ ಸಮಾಜವಾದ. ಇಲ್ಲಿ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗೆ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ಸುಮಾರು 20 ಸಾವಿರ ಹಳ್ಳಿಗಳು ಇವೆ. ಆ ಹಳ್ಳಿಯಲ್ಲಿರತಕ್ಕ ಮಕ್ಕಳೆಲ್ಲರೂ ವಿದ್ಯೆಯನ್ನು ಕಲಿಯಬೇಕಾಗಿಲ್ಲವೇ ನಗರದಲ್ಲಿ ಏನು ಸೌಲಭ್ಯಗಳನ್ನು ಕೊಡುತ್ತಿದ್ದೀರಿ, ಅವುಗಳನ್ನು ಹಳ್ಳಿಗಳಲ್ಲಿಯೂ ಕೊಡಬೇಕಾಗಿರತಕ್ಕದ್ದು ನಿಮ್ಮ ಜವಾಬ್ದಾರಿ ಅಲ್ಲವೇ? ಈ ಜವಾಬ್ದಾರಿಯನ್ನು ತಾವು ಏಕೆ ಮರೆಮಾಚಿಕೊಂಡಿದ್ದೀರಿ ಇದು ನನಗರ್ಥವಾಗುತ್ತಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಭಾರತದಲ್ಲಿ ಶೇಕಡ 70ರಷ್ಟು ಅವಿದ್ಯಾವಂತರ ಸಂಖ್ಯೆ ಇದೆ. ಇವರೆಲ್ಲರೂ ಭಾರತದ ಹಳ್ಳಿಗಳಲ್ಲಿದ್ದಾರೆ. ಅವಿದ್ಯಾವಂತರಾಗಿರತಕ್ಕ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಹಳ್ಳಿಯಲ್ಲಿರತಕ್ಕ ಉಪಾಧ್ಯಾಯರುಗಳ ಕೆಲಸ ಬರೀ ಸಂಬಳ ತೆಗೆದುಕೊಳ್ಳುವುದು ಆಗಿದೆ, ಇವರು ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕೆ ಅಲ್ಲಿಲ್ಲ, ಒಂದೊಂದು ಬಾರಿ ಪಾಠಶಾಲೆಯ ಬೀಗವನ್ನೂ ಇವರು ತೆಗೆಯುವುದಿಲ್ಲ. ಆದರೆ ನಗರದಲ್ಲಿ ಎಲ್ಲಿಯೂ ಕೂಡ ಇಂಥ ಪರಿಸ್ಥಿತಿ ಇಲ್ಲ. ಎಲ್ಲಾ ಸೌಲಭ್ಯಗಳು ನಗರದ ಮಕ್ಕಳಿಗೆ ಇದೆ.

ಇನ್ನು ಕೇರ್ ಸಂಸ್ಥೆಯವರು ಕೊಡತಕ್ಕ ಮಿಡ್ - ಡೇ- ಮೀಲ್ಸ್ ಬಗ್ಗೆ ಹೇಳುತ್ತೇನೆ ಇದನ್ನು ಯಾರ ಉದ್ಧಾರಕ್ಕೋಸ್ಕರ ಕೊಡತಕ್ಕದ್ದು? ಹಳ್ಳಿಯ ಶಾಲೆಯ ಉಪಾಧ್ಯಾಯರುಗಳಿಂದ ಹಿಡಿದು, ಬೆಂಗಳೂರಿನವರೆಗೂ ಕೂಡ ಇವತ್ತು ಕೇರ್‌ನವರು ಕೊಡತಕ್ಕ ಹಣವನ್ನು ದುರುಪಯೋಗ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಉಪಾಧ್ಯಾಯರುಗಳು ಲಕ್ಷಾಂತರ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾರೆ. ಇದನ್ನೆಲ್ಲಾ ಏಕೆ ತಾವು ತಡೆಗಟ್ಟುವುದಕ್ಕೆ ಆಗಲಿಲ್ಲ. ಹಳ್ಳಿಗಳಲ್ಲಿ ಕೇರ್ ನಾಯಿಗಳು ಬೇರೆ ಇವೆ. ಹೊಟ್ಟೆಗಿಲ್ಲದ ಮಕ್ಕಳಿಗೆ ಇದನ್ನು ಕೊಡದೆ, ಈ ನಾಯಿಗಳಿಗೆ ಕೊಡುತ್ತಿದ್ದಾರೆ ಇವತ್ತಿನ ದಿವಸ ಕೇರ್‌ನವರು ಕೊಡತಕ್ಕ ಆಹಾರವನ್ನು ದುರುಪಯೋಗಪಡಿಸಿಕೊಂಡಿರತಕ್ಕ ನಾಯಿಗಳಿಗೂ ಕಡೆಯಾಗಿದ್ದವರು, ಅವರೆಲ್ಲರೂ ಕೂಡ ಗೌರವ ಸ್ಥಾನದಲ್ಲಿದ್ದಾರೆ. ದೊಡ್ಡ ದೊಡ್ಡ ಅಧಿಕಾರ ಸ್ಥಾನದಲ್ಲಿದ್ದಾರೆ. ಅವರನ್ನು ಮುಟ್ಟುವುದಕ್ಕೆ ನಿಮಗೆ ಭಯವಾಗುತ್ತದೆ. ಎಂಥ ಒತ್ತಾಯ ತಂದರೂ ನಿಮಗೆ ಇದು ಆಗುವುದಿಲ್ಲ. ಇದರ ಈ ಬಗ್ಗೆ ನಾನು ಒಂದು ಪತ್ರವನ್ನು ತಮಗೆ ಬರೆದಿದ್ದೇನೆ. ಅದಕ್ಕೆ ಉತ್ತರ ಕೂಡ ಬಂದಿಲ್ಲ. ಇದನ್ನೆಲ್ಲಾ ವಿಚಾರ ಮಾಡಿ ಸರ್ಕಾರದವರು ತೀವ್ರವಾಗಿ ಕ್ರಮ ತೆಗೆದುಕೊಳ್ಳದಿದ್ದರೆ ವಿದ್ಯಾ ಇಲಾಖೆಯಲ್ಲಿಯೇ ಒಂದು ಅಶಿಸ್ತು ಬೆಳೆಯುತ್ತದೆ.

ಶ್ರೀ ಕೆ.ಎನ್. ವೀರಪ್ಪಗೌಡ :- ಇವರು ಎನ್‌ಜಿಓ ಗುಂಪಿಗೆ ಸೇರುತ್ತಾರೆ ತಾನೆ.

ಶ್ರೀ ಸಿ. ಬೈರೇಗೌಡ :- ಎನ್‌ಜಿಓ ಆಗಲಿ ಯಾರೇ ಆಗಲಿ ಅನ್ಯಾಯ ಮಾಡಿದ್ದರೆ ಶಿಕ್ಷೆಯಾಗಲೇಬೇಕು. ಎನ್‌ಜಿಓಗಳು ಸ್ಟ್ರೈಕ್ ಮಾಡಿದ್ದಕ್ಕೆ ಸಹಾನುಭೂತಿ ತೋರಿಸಿ ಮಾತನಾಡಿದ್ದಕ್ಕೆ ತಾವು ಈ ಮಾತನ್ನು ಹೇಳುತ್ತಿದ್ದೀರಿ. ತಪ್ಪು ಮಾಡಿರತಕ್ಕವರು ಯಾರಿದ್ದರೂ ಕೂಡ ಶಿಕ್ಷೆ ಮಾಡಲೇಬೇಕು. ಅಂಥ ಒಂದು ಎದೆಗಾರಿಕೆ ನಿಮಗೆ ಇಲ್ಲ ಎಂದು ನಮಗೆ ವ್ಯಥೆಯಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಸದಸ್ಯರಾಗಿರತಕ್ಕವರಲ್ಲಿ ನಾನು ಒಬ್ಬ. ಅನೇಕ ಸದಸ್ಯರು, ಕಾಗೋಡು ತಿಮ್ಮಪ್ಪನವರು ಮಾನ್ಯ ಕಕ್ಕಿಲಾಯ ಅವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏನೋ ದೊಡ್ಡ ಅನಾಹುತವಾಗಿದೆ ಆಗಬಾರದ್ದು ಆಗಿದೆ, ನಡೆಯಬಾರದ್ದು ನಡೆದು ಬಿಟ್ಟಿದೆ, ಇದನ್ನು ಎನ್‌ಕ್ವಯರಿ ಮಾಡಬೇಕು ಎಂದು ಹೇಳಿದರು. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ತಪ್ಪು ಮಾಡಿರತಕ್ಕವರು ಯಾರೇ ಆಗಲೀ, ಯಾವುದೇ ಜಾತಿಗೆ ಸಂಬಂಧಪಟ್ಟವರಾಗಲೀ, ಯಾವುದೇ ಉನ್ನತ ಜಾಗದಲ್ಲಿ ಇರಲಿ ಶಿಕ್ಷೆಗೆ ಖಂಡಿತವಾಗಿ ಯಾರು ಅರ್ಹರು ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ. ಇಂದು ಶ್ರೀಮಾನ್ ರಾಮಲಿಂಗ ಅವರ ಪ್ರಕರಣ ಒಂದು ಇದೆ. ಅವರು ಏನು ಎಂದು ನಾನೂ ಕೂಡ ಅವರೊಂದಿಗೆ ಎರಡು ಗಂಟೆಗಳು ಮಾತನಾಡಿ ತಿಳಿದುಕೊಂಡಿದ್ದೇನೆ. ಅವರ ನಡತೆಯ ಬಗ್ಗೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಸಿಂಡಿಕೇಟ್ ಪರಮಾವಧಿಯಿಂದ ಮಾಡಿರತಕ್ಕ ಉಪಸಮಿತಿಯಲ್ಲಿ ಇವರು ಮಾಡಿರತಕ್ಕ ಆರೋಪಗಳ ಬಗ್ಗೆ ತಮ್ಮದು ಏನಾದರೂ ಹೇಳುವುದು ಇದೆಯೇ ಎಂದು ಕೇಳಿದರೆ, ಅವರು ಸಿಂಡಿಕೇಟ್ ಮಾಡತಕ್ಕ ಸಮಿತಿಯಲ್ಲಿ ವಿಶ್ವಾಸ ನನಗಿಲ್ಲ ನಾನು ಸಾಕ್ಷಿಯನ್ನು ಕೊಡಲು ತಯಾರಿಲ್ಲ ಎನ್ನುವುದನ್ನು ಎನ್‌ಕ್ವೈಯರಿ ಆಗುವ ಸಂದರ್ಭದಲ್ಲಿ ಹೇಳಿದ್ದಾರೆ. ಇದು ಅವರ

ಉದ್ಧಟತನವಲ್ಲವೇ. ಇನ್‌ಸಬ್‌ರ್ಡಿನೇಷನ್ ಅಲ್ಲವೇ ರಾಮಲಿಂಗಂ ಅವರಾಗಲೀ, ಆಪಾದನೆಗಳನ್ನು ಮಾಡಿರತಕ್ಕ ಬೇರೆಯವರಾಗಲಿ ಅವರ ಮೂಲ ಉದ್ದೇಶ ಒಳ್ಳೆಯದು ಇದ್ದರೆ, ನಾನೂ ಕೂಡ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದೆ. ಭಾರತದಲ್ಲಿರತಕ್ಕ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ಎಲ್ಲಾ ಸಮರ್ಪಕವಾಗಿ ಎಂದು ಒಪ್ಪಿಕೊಳ್ಳುವುದಕ್ಕೆ ನಾನು ತಯಾರು ಇಲ್ಲ. ಅಲ್ಲಿಯೂ ಕೂಡ ಅಲ್ಪಸ್ವಲ್ಪ ಲೋಪದೋಷಗಳು ಇವೆ. ಅಲ್ಪಸ್ವಲ್ಪ ಇರತಕ್ಕದ್ದನ್ನು ದೊಡ್ಡದನ್ನಾಗಿ ಭೂತಕನ್ನಡಿಯಿಂದ ನೋಡುವುದು ಸರಿಯಲ್ಲ. ಇದನ್ನು ಬಿಟ್ಟು, ಅಲ್ಲಿಯ ವಿಚಾರ ಏನು ಇದೆ, ವಾಸ್ತವಾಂಶ ಏನು ಇದೆ ನಿಜಾಂಶಗಳು ಏನು ಎನ್ನುವುದನ್ನು ಇತರೆ ಸದಸ್ಯರಾಗಲೀ ಅಥವಾ ಸಾರ್ವಜನಿಕರು ತಿಳಿದುಕೊಳ್ಳಬೇಕಾದ್ದು ಅಗತ್ಯ.

ನಾನೂ ಕೂಡ ಅಲ್ಲಿಯ ಸದಸ್ಯನಾಗಿದ್ದೇನೆ. ಅಲ್ಲಿನ ವಿದ್ಯಮಾನಗಳನ್ನು ನಾನು ನೇರವಾಗಿ ನೋಡಿದ್ದೇನೆ. ನನ್ನ ಮಿತ್ರರು ಯಾರೇ ಆಗಲೀ ಅದರ ಬಗ್ಗೆ ಏನು ಹೇಳುತ್ತಿದ್ದಾರೋ ಅಷ್ಟು ಬೃಹದಾಕಾರವಾಗಿ ಏನೂ ಆಗಿಲ್ಲ. ಅವರಿಗೇನೋ ಸಂಶಯವಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಒಂದು ಸಂಶಯ ಪರಿಹಾರ ಮಾಡುವುದಕ್ಕೋಸ್ಕರ ಮತ್ತು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಅದರ ಬಗ್ಗೆ ಸಂಶಯ ಪಡೆದಿದ್ದರೆ ವಿಶ್ವವಿದ್ಯಾನಿಲಯ ತಪ್ಪು ಮಾಡಿದೆ ಎಂಬ ಕಾರಣವಿದ್ದರೆ ಚಾನ್ಸಲರ್ ಅವರ ಮೂಲಕವೇ ಅದನ್ನು ಎನ್‌ಕ್ವೈಯರಿ ಮಾಡಿಸಲಿ. ಇಲ್ಲದಿದ್ದರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ಎನ್‌ಕ್ವೈಯರಿ ಮಾಡಲಿ. ಅಥವಾ ಯಾವುದಾದರೂ ಉಪಸಮಿತಿಯವರು ಎನ್‌ಕ್ವೈಯರಿ ಮಾಡಲಿ. ಏಕೆಂದರೆ ಇದಕ್ಕಾಗಿ ನ್ಯಾಯಾಂಗ ವಿಚಾರಣೆಯಾಗುವ ಅವಶ್ಯಕತೆ ಏನೂ ಇಲ್ಲ. ಅಂತಹದೊಂದು ದುರಾಡಳಿತವೇನೂ ನಡೆದಿಲ್ಲ. ಅಲ್ಲಿ ಏನಾದರೂ ಅಲ್ಪಸ್ವಲ್ಪ ಲೋಪದೋಷಗಳಿದ್ದರೆ ಅವನ್ನು ಚಾನ್ಸಲರ್ ಅವರೇ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ನೇರವಾಗಿ ಒಳಪಟ್ಟಿರುವುದರಿಂದ ಅವರು ಬೇಕಾದರೆ ಎನ್‌ಕ್ವೈಯರಿ ಮಾಡಿ ನಮ್ಮ ಮಾನ್ಯ ಮಿತ್ರರ ಸಂಶಯವನ್ನು ತೊಲಗಿಸುವುದಕ್ಕೆ ಪ್ರಯತ್ನ ಮಾಡಲಿ ಎಂದು ಹೇಳುತ್ತೇನೆ. ಏಕೆಂದರೆ ನನ್ನಲ್ಲಿ ಅಂಕಿ ಅಂಶಗಳಿವೆ. ಅದರ ಮೂಲಕ ಅಲ್ಲಿನ ನಿಜಾಂಶ ಏನೆಂಬುದು ಗೊತ್ತಿದೆ. ಇದನ್ನು ಅಧ್ಯಕ್ಷರ ಮೂಲಕ ಮಂತ್ರಿಗಳಿಗೆ ಒಪ್ಪಿಸುತ್ತೇನೆ.

## ಕಡ್ಡಾಯ ಶಿಕ್ಷಣ ಮಸೂದೆ 19-4-74

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಉಪಾಧ್ಯಕ್ಷರೇ, ಈ ದಿನ ಮಾನ್ಯ ವಿದ್ಯಾ ಸಚಿವರು ಈ ಕಂಪಲ್ಸರಿ ಎಜುಕೇಷನ್ ಆಕ್ಟ್‌ಗೆ ಅಮೆಂಡ್‌ಮೆಂಟನ್ನು ತಂದಿರತಕ್ಕದ್ದನ್ನು ನಾನು ಸ್ವಾಗತಿಸುತ್ತೇನೆ. ಸ್ವಾಗತಿಸುವುದಕ್ಕೆ ಕಾರಣ ಏನೆಂದರೆ, ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುವಂಥ ಒಂದು ಜವಾಬ್ದಾರಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಮತ್ತು ಪಂಚಾಯಿತಿಗಳಿಗೆ ಇದೆ. ಅದೇ ರೀತಿ ಮುನಿಸಿಪಾಲಿಟಿಗಳಿಗೂ ಕೂಡ ಜವಾಬ್ದಾರಿ ಇದೆ ಎಂದು ನಾನಾದರೂ ಭಾವಿಸಿದ್ದೇನೆ. ಈ ಕೆಲಸವನ್ನು ನಿರ್ವಹಿಸುವುದಕ್ಕೆ ಶೇಕಡ 10 ಪರ್ಸೆಂಟ್ ಸೆಸ್ ಕೊಡಬೇಕು ಎನ್ನುವುದು ಸೂಕ್ತವಾಗಿದೆ. ಈ ಕಂಪಲ್ಸರಿ ಎಜುಕೇಷನ್

ಜಾರಿಗೆ ಬಂದು 27 ವರ್ಷಗಳಾದರೂ ಸಹ ನಮ್ಮಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತರ ಸಂಖ್ಯೆಯನ್ನು ಪರಿಶೀಲಿಸುವುದಾದರೆ, ಅದು ನಿಜವಾಗಲೂ ನಾಚಿಕೆಗೇಡಿನ ಪರಿಸ್ಥಿತಿಯಾಗಿದೆ ಎಂದು ನಾನಾದರೂ ಹೇಳಬೇಕಾಗಿದೆ.

ಮೊದಲನೆಯದಾಗಿ, ಸೆನ್‌ಸಸ್‌ನ್ನು ಪ್ರತಿವರ್ಷ ಅಲ್ಲಿರತಕ್ಕಂಥ ಉಪಾಧ್ಯಾಯರು ತೆಗೆಯುತ್ತಾರೆ. ಸೆನ್‌ಸೆಸ್ ಮಾಡಿದರೂ ಸಹ ಲೆಕ್ಕದ ಪ್ರಕಾರ 6 ರಿಂದ 13 ವರ್ಷದೊಳಗಿನ ಎಷ್ಟು ಮಕ್ಕಳು ಶಾಲೆಗೆ ಸೇರಬೇಕಾಗಿತ್ತೊ ಅಷ್ಟು ಮಕ್ಕಳು ಪೂರ್ತಿಯಾಗಿ ಯಾವ ಗ್ರಾಮದಲ್ಲೂ ಸೇರಿಲ್ಲ. ಆದುದರಿಂದ ಸರ್ಕಾರ ಸಂಪೂರ್ಣವಾಗಿ ಇದರಲ್ಲಿ ವಿಫಲವಾಗಿದೆ. ನೀವು ಏನು 10 ಪರ್ಸೆಂಟ್ ಸೆಸ್ ಅನ್ನು ಲೋಕಲ್ ಬಾಡಿಗಳಿಂದ ಪಡೆಯುವುದಕ್ಕೆ ಹೊರಟಿದ್ದೀರಿ, ಆ ಎಜುಕೇಷನ್ ಸೆಸ್ ಅನ್ನು ಬೇಕಾದರೆ ಹೆಚ್ಚು ಮಾಡಿ. ವಿದ್ಯಾಭ್ಯಾಸ ಇಲ್ಲದಿದ್ದರೆ ದೇಶಕ್ಕೆ ಕಳಂಕ ಉಂಟಾಗುತ್ತದೆ. ನೀವು ದೇಶದಲ್ಲಿರುವ ಎಲ್ಲರನ್ನೂ ಕೂಡ ವಿದ್ಯಾವಂತರನ್ನಾಗಿ ಮಾಡುವುದಾದರೆ ಈ ಎಜುಕೇಷನ್ ಸೆಸ್ ಅನ್ನು ಎರಡು ಪಟ್ಟು ಹೆಚ್ಚು ಮಾಡಿದರೂ ನಾನು ಸ್ವಾಗತಿಸುತ್ತೇನೆ. ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡುವ ಜವಾಬ್ದಾರಿ ನಾಗರೀಕ ಸರ್ಕಾರಕ್ಕೆ ಇದೆ. ಅದನ್ನು ನಿರ್ವಹಿಸಬೇಕು ಎಂದು ನಾನು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಯಾರಾದರೂ ನೋಡಿದರೆ ಬಹಳ ಚಿಂತಾಜನಕವಾಗಿರುವುದು ಗೊತ್ತಾಗುತ್ತದೆ ಮತ್ತು ಈ ವಿದ್ಯಾಭ್ಯಾಸಕ್ಕೋಸ್ಕರ 60-70 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಒಂದು ಸಣ್ಣ ಹಳ್ಳಿಯಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸಬೇಕಾದರೆ, ಕೇವಲ 2 ಸಾವಿರ ರೂಪಾಯಿಗಳನ್ನು ಭಿಕ್ಷೆಗೆ ಕೊಡುವ ರೀತಿಯಲ್ಲಿ ಕೊಡುತ್ತಿದ್ದಾರೆ. ಉಳಿದ 3-4-5 ಸಾವಿರ ರೂಪಾಯಿಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಖರ್ಚು ಮಾಡುತ್ತಿವೆ. ವಿದ್ಯಾಭ್ಯಾಸ ಅತ್ಯವಶ್ಯಕವಾಗಿದ್ದರೂ ಕೂಡ ಸರ್ಕಾರ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ 2 ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟ ಹಾಗೆ ಕೊಡುತ್ತಿರುವುದು ಖಂಡಿತವಾಗಿಯೂ ನಾಚಿಕೆಗೇಡಿನ ಪ್ರಸಂಗ. ಯಾವುದೇ ಸರ್ಕಾರ ಇದ್ದರೂ ಕೂಡ ಶಾಲಾ ಕಟ್ಟಡಗಳನ್ನು ಕಟ್ಟಿಸತಕ್ಕಂಥ ಮೂಲ ಜವಾಬ್ದಾರಿ ಸರ್ಕಾರದಾಗಿತ್ತು. ಈ ಕೆಲಸವನ್ನು ಇಲ್ಲಿಯವರೆಗೆ ಮಾಡಿಲ್ಲ. ಶಾಲಾ ಕಟ್ಟಡಗಳನ್ನು ಕಟ್ಟಿಸುವ ಜವಾಬ್ದಾರಿಯನ್ನು ಆಯಾ ಸಾಂಸ್ಥಿಕ ಸಂಸ್ಥೆಗಳಿಗೆ ಬಿಡದೆ 2 ಸಾವಿರದಿಂದ 4 ಸಾವಿರ ರೂಪಾಯಿಗಳವರೆಗೆ ಕೊಟ್ಟರೆ ಹಳ್ಳಿಗಳಲ್ಲಿ ಉತ್ತಮವಾದ ಶಾಲಾ ಕಟ್ಟಡ ಬರುವುದಕ್ಕೆ ವ್ಯವಸ್ಥೆಯಾಗುತ್ತದೆ. ಇದನ್ನು ಖಂಡಿತ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಶಾಲಾ ಕಟ್ಟಡವನ್ನು ಕಟ್ಟಿಸುವುದಕ್ಕೆ ಒಂದು ತಾಲ್ಲೂಕಿಗೆ 2 ಸಾವಿರ ರೂಪಾಯಿಗಳನ್ನು ಕೊಡುತ್ತಾ ಇತರಕ್ಕಂಥ ಪರಿಸ್ಥಿತಿ ಇದ್ದರೂ ಕೂಡ ಕೆಲವು ತಾಲ್ಲೂಕುಗಳಿಗೆ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಒಂದು ನಯಾಪೈಸೆ ಕೂಡ ಕೊಟ್ಟಿಲ್ಲ. ಹಿಂದೆ ಕಟ್ಟಿರತಕ್ಕಂಥ ಕಟ್ಟಡಗಳು ಅನೇಕವು ಬಿದ್ದು ಹೋಗುವ ಪರಿಸ್ಥಿತಿಯಲ್ಲಿದ್ದರೂ ಕೂಡ ಅವನ್ನು ರಿಪೇರಿ ಮಾಡುವುದಕ್ಕೆ ಹಣ ಕೊಟ್ಟಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ, ವಿದ್ಯಾಭ್ಯಾಸದ ಅವಶ್ಯಕತೆ ಇರುವ ಪ್ರದೇಶಗಳಲ್ಲಿ ಕೆಲವರು ಶಾಲೆಗಳನ್ನು ನಡೆಸಿ ಎಂದು ಕಟ್ಟಡಗಳನ್ನು ದಾನವಾಗಿ ಕೊಟ್ಟು ಕಟ್ಟಿರುತ್ತಾರೆ. ಅಂತಹ ಕಟ್ಟಡಗಳನ್ನು ಕೂಡ ರಿಪೇರಿ ಮಾಡುವುದಕ್ಕೆ ಆಗುತ್ತಾ ಇಲ್ಲ. ಎಕ್ಸಿಪೆಂಡಿಚರ್ ಕಂಟ್ರೋಲ್ ಆರ್ಡರ್‌ನಲ್ಲಿ ಎಸ್ಟಿಮೇಟಿಗಿಂತ 2 ಪರ್ಸೆಂಟ್ ಕಡಿಮೆ ಖರ್ಚು ಮಾಡಬೇಕು ಎಂದು ಇದೆ. ಜಿಲ್ಲಾಧಿಕಾರಿಗಳು 5 ಪರ್ಸೆಂಟ್, 6 ಪರ್ಸೆಂಟ್ ಖರ್ಚು ಮಾಡುತ್ತಿದ್ದಾರೆ. ಅದನ್ನು ಮೀರಿದರೆ

ಸರ್ಕಾರಕ್ಕೆ ಬರಬೇಕು ಎಂದು ಇದೆ. ದಾನವಾಗಿ ಬಂದಿರತಕ್ಕಂಥ ಶಾಲಾ ಕಟ್ಟಡಗಳಿಗೆ 500, 600 ರಿಂದ 1000 ರೂಪಾಯಿವರೆಗೆ ಖರ್ಚು ಮಾಡಿದರೆ ಇವತ್ತಿನ ದಿವಸ ಯೋಗ್ಯವಾದ ಕಟ್ಟಡ ಆಗುತ್ತದೆ. ಫೈನಾನ್ಷಿಯಲ್ ರಿಸ್ಟ್ರಿಕ್ಷನ್ ಆರ್ಡರ್ ಪ್ರಕಾರ ಕೇವಲ 2 ಪರ್ಸೆಂಟ್‌ಗಿಂತ ಹೆಚ್ಚಿಗೆ ಖರ್ಚು ಮಾಡಬಾರದು ಎಂದು ಇದೆ.

ದಯವಿಟ್ಟು ಈ ಅವ್ಯವಸ್ಥೆಯನ್ನು ಕಡೆಗಾಣಿಸಿ ಈಗ ಅಗತ್ಯವಾಗಿ ಶಾಲಾ ಕಟ್ಟಡಗಳನ್ನು ರಿಪೇರಿ ಮಾಡಿಸಬೇಕಾಗಿರತಕ್ಕಂಥವುಗಳನ್ನು ರಿಪೇರಿ ಮಾಡಿಸಲು ಕಾನೂನಿನಲ್ಲಿ ಅವಕಾಶ ಮಾಡಿಕೊಡಬೇಕು. ಮತ್ತು ಈ ಶಾಲಾ ಕಟ್ಟಡಗಳಿಗೆ ಈಗ ಸರ್ಕಾರದವರು ಎರಡು ಸಾವಿರ ರೂಪಾಯಿಗಳನ್ನು ಏನು ಕೊಡುತ್ತಿದ್ದಾರೆ ಅದು ಏತಕ್ಕೂ ಸಾಕಾಗುವುದಿಲ್ಲ. ಇವತ್ತಿನ ದಿವಸ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕಾದರೆ ಸುಮಾರು 8 ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ. ತಾಲ್ಲೂಕು ಬೋರ್ಡಿನವರು 6 ಸಾವಿರ ರೂಪಾಯಿಗಳವರೆಗೆ ಅವರು ವಂತಿಕೆಯನ್ನು ಕೊಡಬೇಕಾಗುತ್ತದೆ. ಸರ್ಕಾರದವರು ದೊಡ್ಡದಾಗಿ ವಿದ್ಯಾಭ್ಯಾಸ ಕೊಡುತ್ತಿದ್ದೇವೆಂದು ಹೇಳುತ್ತಾ, ಎರಡು ಸಾವಿರ ರೂಪಾಯಿಗಳು ಕೊಡುವುದು ಸಾಮಾಜಿಕ ನ್ಯಾಯವಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಕನಿಷ್ಠ ಪಕ್ಷ 4 ಸಾವಿರ ರೂಪಾಯಿಗಳವರೆಗಾದರೂ ಸರ್ಕಾರದವರು ಕೊಡಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

## ಎಸ್‌ಎನ್‌ಆರ್ ಆಸ್ಪತ್ರೆ ಬಗ್ಗೆ ಗಮನ ಸೆಳೆಯುವ ಸೂಚನೆ: 7-3-73

## Non availability of x-ray films and drugs at SNR hospital, Kolar.

**Sri. C. Byregowda (Vemgal) :-** Madam, I wish to call the attention of the Minister for Health to the hardship caused to the public due to non- availability of X-Ray films and drugs at S.N.R. Hospital, Kolar.

**Sri. H. Siddaveerappa (Minister of Health) :-** The working of the S.N.R. Hospital, Kolar is satisfactory. There is no dearth of the essentials in the Hospital.

The X-Ray machine went out of order of 18th April 1973 and the Director of Health and Family Planning Services has already given permission on 12th June 1973 for getting the same repaired. The firm has also been reminded to attend to the work. In the meantime, the X-Ray facilities to the public of Kolar are now provided by making use of the X-Ray facilities (including the emergencies) available at the K.N. Sanitoriam, Kolar which is 1 1/2 miles from the S.N.R. Hospital. As

soon as the X-Ray machine is set right by the firm the normal facilities will be restored. This has happened due to circumstances beyond our control.

As regards Drugs, the stock position as on 24th February 1974 as reported by the District Surgeon. S.N.R. Hospital is satisfactory. All essential drugs, including injections, tinctures, oxygen and even bandage cloth are available.

As regards the spirit, the same is not readily available from the market and has been got from the District T.B. Centre and the Sanatorium for day to day use. The licence for spirit has been obtained by the institution and the same is likely to be received in the near future. However, for want of spirit the work of the hospital is not allowed to suffer at any time.

ಶ್ರೀ ಸಿ. ಬೈರೇಗೌಡ :- ಎಕ್ಸ್‌ರೇ ಮೆಷೀನ್ ಕೆಟ್ಟಿದೆ, ಅದನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ ವೆಂಬುದು ಎಕ್ಸ್‌ಪರ್ಟ್ಸ್ ಒಪೀನಿಯನ್. ಸಂಬಂಧಪಟ್ಟ ಕಂಪೆನಿಯ ಅಭಿಪ್ರಾಯ. ಆಗದೇ ಇದ್ದರೂ ಛಾರ್ಜು ಕೊಡಲು ಸರ್ಕಾರ ಒಪ್ಪಿದರೆ ನೋಡಬಹುದು ಎಂದು ಕಂಡೀಷನ್ ಹಾಕಿದ್ದಾರೆ. ಈಗಿರುವ ಮೆಷೀನಿಂದ ಪ್ರಯೋಜನವಿಲ್ಲದಿರುವುದರಿಂದ ಹೊಸದನ್ನು ಕಳಿಸಲು ವ್ಯವಸ್ಥೆ ಮಾಡುವಿರಾ?

ಶ್ರೀ ಎಚ್. ಸಿದ್ಧವೀರಪ್ಪ :- ವಿಚಾರ ಮಾಡೋಣ. ಈಗಿರುವುದನ್ನು ರಿಪೇರಿ ಮಾಡುವುದಕ್ಕೆ ಬರುವುದಿಲ್ಲ ಅಂದರೆ ಇನ್ನೊಂದಕ್ಕೆ ಏರ್ಪಾಡು ಮಾಡಲೇಬೇಕು.

ಶ್ರೀ ಸಿ. ಬೈರೇಗೌಡ :- ಕಂಪೆನಿಯವರು ಬಾರದಿರುವುದಕ್ಕೆ ಅದೇ ಕಾರಣ.

ಶ್ರೀ ಎಚ್. ಸಿದ್ಧವೀರಪ್ಪ :- ಅದು ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ :- ಬ್ಯಾಂಡೇಜಿನ ವಿಚಾರ ಹೇಳಿದ್ದಾರೆ, ಸಂತೋಷ. ಸ್ಪಿರಿಟ್ಟಿನ ವಿಚಾರ ಹೇಳಿರುವುದು ನಿಜ. ಅಲ್ಲಿರುವ ಆಸ್ಪತ್ರೆಯಲ್ಲಿನ ಡಾಕ್ಟರಿಗೆ ರೋಗಿಗಳ ಮೇಲೆ ಅನುಕಂಪವಿದ್ದರೂ ಕೆಲವು ಸಂದರ್ಭಗಳಲ್ಲಿ ಬೇಕಾದ್ದು ಸಿಕ್ಕುತ್ತಿಲ್ಲ, ಯೂರಿನ್ ಎಗ್ಝಾಮಿನ್ ಮಾಡಲು ಸ್ಪಿರಿಟ್ ಸಿಕ್ಕುತ್ತಿಲ್ಲ. ಟಿ.ಬಿ. ಆಸ್ಪತ್ರೆ ಮತ್ತು ಸ್ಯಾನಿಟೋರಿಯಂನಲ್ಲಿ ಸ್ಪಿರಿಟ್ ಇದೆ. ಈ ಆಸ್ಪತ್ರೆಯಲ್ಲಿ ಇಲ್ಲದಿರುವುದಕ್ಕೆ ಕಾರಣ ಸರಬರಾಜು ಮಾಡುತ್ತಿಲ್ಲ. ಐಟಿಎಲ್ ನಿಂದಲೋ ಏನೋ ಮಂಡ್ಯದಲ್ಲಿ ಸಿಕ್ಕುತ್ತದೆ. ಆದರೆ ಹಣವಿಲ್ಲ ಕೊಳ್ಳುವುದಕ್ಕೆ ಎಂದು ಆಸ್ಪತ್ರೆಯವರು ಹೇಳುವರು. ಹಣ ಕೊಟ್ಟರೆ ತರಬಹುದು. ಆದುದರಿಂದ ಹಣ ಕೊಡಲು ವ್ಯವಸ್ಥೆ ಮಾಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ :- ದುಡ್ಡಿಗೆ ಬಾಧಕ ಏನೂ ಇಲ್ಲ, ಇದರಲ್ಲಿ ಕೆಲವು ಪ್ರೊಸೀಜರಲ್ ಡಿಫಿಕಲ್ಟೀಸ್ ಇದೆಯೆಂದು ಕೇಳಿದ್ದೇವೆ. ಮೊದಲು ಈ ಸ್ಪಿರಿಟ್ ಐಟಿಎಲ್‌ನಿಂದ

ಒರುತ್ತಿತ್ತು, ಈಗ ನಮಗೂ ಅವರಿಗೂ ಸ್ವಲ್ಪ ವ್ಯತ್ಯಾಸ ಬಂದು ಅದನ್ನು ನಿಲ್ಲಿಸಿದ್ದೇವೆ. ಈಗ ಅಲ್ಲಿ ಸ್ಪಿರಿಟ್ ಇಲ್ಲದೆ ಅದರ ಅಭಾವ ಇದೆಯೆಂದು ನಮ್ಮ ಗಮನಕ್ಕೆ ಬಂದಿದೆ. ಎಕ್ಸೈಸ್‌ನಿಂದ ಅವಶ್ಯಕವಾದ ಲೈಸೆನ್ಸ್ ಅನ್ನು ತೆಗೆದುಕೊಂಡು ಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ :- ಮಂಡ್ಯದಲ್ಲಿ ಸ್ಪಿರಿಟ್ ಇದೆ.

ಶ್ರೀ ಎಚ್. ಸಿದ್ದವೀರಪ್ಪ :- ಅದಕ್ಕೆ ಲೈಸೆನ್ಸ್ ಬೇಕು.

ಶ್ರೀ ಸಿ. ಬೈರೇಗೌಡ :- ಅವರು ಕ್ಯಾಷ್ ಅಂಡ್ ಕ್ಯಾರಿ ಬೇಸಿಸ್ ಮೇಲೆ ಸ್ಪಿರಿಟ್ ಅನ್ನು ಕೊಡುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ :- ಮಂಡ್ಯ ಶುಗರ್ ಫ್ಯಾಕ್ಟರಿಯಲ್ಲಿ ಸ್ಪಿರಿಟ್ ಇದ್ದರೂ ಕ್ಯಾಷ್ ಕೊಟ್ಟರೆ ಕೊಡುತ್ತೇವೆಂದು ಅವರು ಹೇಳಿರಲಾರರು. ಸ್ಪಿರಿಟ್‌ನ ಅಭಾವ ಇರುವುದು ನಮ್ಮ ಗಮನಕ್ಕೆ ಬಂದಿದೆ. ಎಕ್ಸೈಸ್ ಡಿಪಾರ್ಟ್‌ಮೆಂಟಿನಿಂದ ಲೈಸೆನ್ಸ್ ತೆಗೆದುಕೊಂಡು ಅಲ್ಲಿಗೆ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

## N.R.W.S. SCHEMES IN KOLAR DISTRICT 22-4-74

**Will the Minister of Health be pleased to state :**

a) The names of the villages of Kolar District from which requests for sanction of N.R.W.S. schemes have been received ;

b) Out of this the dates on whcih the concerned panchayats have remitted their share of contribution to Government ;

c) The names of the schemes sanctioned so far;

d) When the remaining schemes would be sanctioned:

**Sri H. SIDDAVEERAPPA (Minister for Health) :**

a) request sanction of N.R.W.S. Schemes have been received from the following villages:- 1. Holur 2. Doddavallabhi and Dinne Hosahalli 3. Vemagal 4. Okkaleri 5. Madanahalli 6. Yalavara 7. Bellur 8. Chatrakodihalli 9. Jannapalli 10. Kurugal 11. Kondalamuthmayakanahalli 12. Chowdenhalli 13. Vanarashi 14. Ammanallur 15. Marjenahalli 16. Shillangere 17. Gajaladinne (K.N. Santorim) 18. Narasapura 19. Kyalanur 20. Kadahalli 21. Jannaghatta 22. Mattanahalli 23. Tottli

b) The details are furnished in the Statement placed on the Table of the House. c) Sanction has been accorded to the water supply schemes of the following villages : 1. Okkaleri (First stage) 2. Shillangere 3. Kyalanur 4. Narasapura 5. Gajaladinne (K.N. Sanatorium) 6. Vemagal (First stage) 7. Holur 8. Doddavallabi and Dinne Hosahalli 9. Bellur 10. Marjenahalli 11. Chatrakodihalli

d) After the concerned Panchayats pay their share of contribution the question of according sanction to those Schemes would be considered.

ಶ್ರೀ ಸಿ. ಬೈರೇಗೌಡ :- ಇಲ್ಲಿ ಕಾಣಿಸಿರತಕ್ಕ ಪಂಚಾಯಿತಿಗಳಲ್ಲಿ ಒಂದರಿಂದ ಐದವರೆಗೆ ಇರತಕ್ಕ ಪಂಚಾಯಿತಿಗಳು ತಮ್ಮ ಭಾಗದ ಹಣವನ್ನು ಕೊಟ್ಟು ಇಲ್ಲಿಗೆ 2-3 ವರ್ಷಗಳಾಗಿದ್ದರೂ ಇನ್ನೂ ಏಕೆ ಅವರಿಗೆ ನೀರಿನ ಸೌಕರ್ಯವನ್ನು ಒದಗಿಸಲಿಲ್ಲ?

ಶ್ರೀ ಎಚ್. ಸಿದ್ದವೀರಪ್ಪ :- ಅಲ್ಲಿಗೂ ಆದಷ್ಟು ಜಾಗ್ರತೆ ಅನುಕೂಲವನ್ನು ಒದಗಿಸಲಾಗುತ್ತದೆ.

ಶ್ರೀ ಸಿ. ಬೈರೇಗೌಡ :- ಸರ್ಕಾರದವರು ಖಚಿತವಾಗಿ ಇಂತಿಷ್ಟು ದಿನಗಳಲ್ಲಿ ನೀರನ್ನು ಕೊಡಲಾಗುತ್ತದೆಂದು ತಿಳಿಸುವುದಕ್ಕೆ ಸಾಧ್ಯವಿಲ್ಲವೇ?

## ಗ್ರಾಮ ಪಂಚಾಯಿತಿ ಚುನಾವಣೆ ಮುಂದೂಡಿಕೆ 19-3-74

ಪ್ರಜಾಪ್ರಭುತ್ವ - ಸಂಸದೀಯ ನಡುವಳಿಕೆಗಳಲ್ಲಿ ತುಂಬಾ ನಂಬಿಕೆ ಇಟ್ಟಿದ್ದ ಸಿ.ಬೈರೇಗೌಡರು ಪಂಚಾಯಿತಿ ಚುನಾವಣೆ ಮುಂದೂಡಿಕೆಯನ್ನು, ಮಂತ್ರಿಗಳ ಭತ್ಯೆ ಏರಿಕೆಯನ್ನು ಸಭೆಗೆ ಮುಖ್ಯಮಂತ್ರಿ, ಮಂತ್ರಿಗಳ ಗೈರನ್ನು ಟೀಕಿಸಿದ್ದರು.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷಣಿಯರೇ, ಸರ್ಕಾರದವರು ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಮುಂದೂಡಬೇಕೆಂದು ನಮ್ಮ ಮುಂದೆ ಒಂದು ಬಿಲ್ಲನ್ನು ಈ ದಿವಸ ಮಂಡಿಸಿದ್ದಾರೆ. ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ.

ಈ ಚುನಾವಣೆಗಳನ್ನು ಮುಂದೂಡುವುದಕ್ಕಾದರೂ ಸರ್ಕಾರದವರು ಕೊಟ್ಟಿರತಕ್ಕ ಒಂದು ಕಾರಣ ಎಂದರೆ ಈ 'ಸ್ಟೇಟ್‌ಮೆಂಟ್ ಆಬ್‌ಜೆಕ್ಟ್ಸ್ ಅಂಡ್ ರೀಜನ್ಸ್' ನಲ್ಲಿ ಕೆಲವು ಅನಾನುಕೂಲಗಳು ಚುನಾವಣೆ ನಡೆಸುವುದಕ್ಕೆ ಅಡಚಣೆಯಾಗಿವೆ ಎಂದು ಹೇಳಿದ್ದಾರೆ. ಈ ದಿವಸ ನಾನೂ ಕೂಡ ಒಬ್ಬ ತಾಲ್ಲೂಕ್ ಬೋರ್ಡ್ ಅಧ್ಯಕ್ಷ. ಈ ಗ್ರಾಮ ಪಂಚಾಯಿತಿಗಳ ಮತ್ತು ತಾಲ್ಲೂಕ್ ಬೋರ್ಡುಗಳಲ್ಲಿ ಏನು ಕೆಲಸ ಕಾರ್ಯಗಳಾಗುತ್ತವೆ ಎಂಬುದರ ಅರಿವು ನನಗಿದೆ. ಆ ಒಂದು ಜ್ಞಾನದ ಪರಿಮಿತಿಯಲ್ಲಿ ನಾನು ಹೇಳುವುದಾದರೆ ಸರ್ಕಾರದವರೇನು ಈ ದಿವಸ ಈ ಮಸೂದೆಯಲ್ಲಿ ಅನ್‌ಅವಾಯ್ಡಬಲ್ ಎಂದು ಕಾರಣಗಳನ್ನು ಹೇಳಿದ್ದಾರೆ ಅವುಗಳನ್ನು

ಯಾರೂ ಒಪ್ಪುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ತಾನೆ ಸಂಡೂರಿನಲ್ಲಿ ಭಾಷಣ ಮಾಡುತ್ತ ಏನು ಹೇಳಿದ್ದಾರೆಂಬ ಅಂಶ ತಮಗೆಲ್ಲರಿಗೂ ಗೊತ್ತಿದ್ದುದೇ ಇದೆ. ಅವರು ಹೇಳಿದಂತೆ ಇಲ್ಲಿ ಅನೇಕರು ಯಾವುದೋ ಒಂದು ಗಾಳಿ ಬೀಸಿದ್ದರಿಂದ ಅವರು ಈ ಶಾಸನಸಭೆಗೆ ನಡೆದ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಅವಕಾಶವಾಯಿತು. ಇಲ್ಲದಿದ್ದರೆ ಇಲ್ಲಿ ಅನೇಕರಿಗೆ ಈ ಸಭೆಗೆ ಆರಿಸಿ ಬರುವುದಕ್ಕಾಗುತ್ತಿರಲಿಲ್ಲ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳೇ ಬಹಿರಂಗವಾಗಿ ಹೇಳಿದ್ದಾರೆ. ಈ ದಿವಸ ಈ ಆಡಳಿತ ಪಕ್ಷದವರು ಚುನಾವಣೆಗೆ ನಿಂತರೆ ಇವರು ಖಂಡಿತ ಆರಿಸಿ ಬರುವುದಕ್ಕಾಗುವುದಿಲ್ಲ. ಆ ಕಾರಣವನ್ನು ಮನಸ್ಸಿನಲ್ಲಿಟ್ಟುಕೊಂಡು ಇವರು ಬೇರೇನೋ ಕಾರಣವನ್ನು ಇಲ್ಲಿ ಸೂಚಿಸಿದ್ದಾರೆ. ಜನತೆ ಇವರ ಕೈಗೆ ಅಧಿಕಾರವನ್ನು ಕೊಟ್ಟು ನೋಡಿದ್ದಾಯಿತು. ಇವರ ಆಡಳಿತಾವಧಿಯಲ್ಲಿ ಜನತೆಗೇನೂ ಅಷ್ಟಾಗಿ ಅನುಕೂಲವಾಗಲಿಲ್ಲ. ಈ ಸರ್ಕಾರ ಜನರ ಏಳಿಗೆಗೆ ಕೆಲಸ ಮಾಡದೆ ಇರುವುದರಿಂದ ಇವರ ಪಕ್ಷ ಗ್ರಾಮಾಂತರ ಪ್ರದೇಶದಲ್ಲಿ ಚುನಾವಣೆಗೆ ನಿಂತರೆ ಇವರು ಖಂಡಿತ ಆರಿಸಿ ಬರುವುದಕ್ಕಾಗುವುದಿಲ್ಲ. ಈ ದಿವಸ ಗ್ರಾಮಾಂತರ ಪರಿಸ್ಥಿತಿ ಪೂರಾ ಹದಗೆಟ್ಟಿದೆ. ದೇಶದಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕಾಗುವುದಿಲ್ಲ ಎಂದು ಹೇಳುವುದು ಅಂದರೆ ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಬೇರೊಂದಿಲ್ಲ. ಹಿಂದೆ ಮಂತ್ರಿಗಳಾಗಿದ್ದ ಶ್ರೀ ವೀರೇಂದ್ರಪಾಟೀಲರ ಕಾಲದಲ್ಲಿ 8 ವರ್ಷಗಳವರೆಗೂ ಇವುಗಳಿಗೆ ಚುನಾವಣೆ ನಡೆಸಲಿಲ್ಲ ಎಂದು ಹೇಳಿ ಇಂದು ಆಡಳಿತದಲ್ಲಿರತಕ್ಕ ಪಕ್ಷ ಭುಜ ತಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆಗ ಎಮರ್ಜೆನ್ಸಿ ಇತ್ತು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾರೆ. ಆದರೆ ಅದೂ ಕೂಡ ಸರಿಯಾದ್ದಲ್ಲ. ನಾನು ಅದನ್ನೂ ಕೂಡ ಸರಿಯಾದ ಒಂದು ಕಾರಣವೆಂದು ಒಪ್ಪತಕ್ಕವನಲ್ಲ. ಈ ದಿವಸ ಆಡಳಿತ ನಡೆಸತಕ್ಕ ಪಕ್ಷ ಸಂಪೂರ್ಣವಾಗಿ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಆ ಒಂದು ಹೆದರಿಕೆಯಿಂದ ಅವರು ಚುನಾವಣೆಗಳನ್ನು ಅಲ್ಲಸಲ್ಲದ ಕಾರಣಗಳನ್ನು ಹೇಳಿ ಮುಂದೂಡಲು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಹಿಂದೆ ಆ ಬೀದರ್ ಜಿಲ್ಲೆಯಲ್ಲಿ ಭೀಕರ ಕ್ಷಾಮ ಬಂದಿತ್ತು. ಅದಾಯಿತು. ಈಗ ಇನ್ನೊಂದು ಕಾರಣ, ನಾಳೆ ಮತ್ತೊಂದು ಕಾರಣ. ಇವಕ್ಕೆ ಕೊನೆ ಮೊದಲಿದ್ದಂತೆ ಕಾಣುತ್ತಿಲ್ಲ. ಕ್ಷಾಮ ಬಂದರೆ ಚುನಾವಣೆಗಳನ್ನು ಮಾಡಬಾರದೆಂದು ಯಾರು ಹೇಳಿದರು? ಇದೆಲ್ಲಾ ಕಳ್ಳನಿಗೆ ಪಿಳ್ಳೆ ನೆವ ಎಂದ ಹಾಗಿದೆ. ಈಗ ಈ ಮಸೂದೆಯಲ್ಲಿ 1975ನೇ ಫೆಬ್ರವರಿವರೆಗೆ ಚುನಾವಣೆಗಳನ್ನು ಮುಂದೂಡಲು ಅನುಮತಿ ಕೇಳಿದ್ದಾರೆ. ಇದಾದ ಮೇಲೆ ಮತ್ತೆ ಯಾವ ಕಾರಣಗಳಿಗಾಗಿ ಮುಂದೂಡಲು ನೆಪಗಳನ್ನು ಎತ್ತುವರೋ ಅದು ತಿಳಿಯದಾಗಿದೆ. ಈ ಆಡಳಿತ ಪಕ್ಷದವರು ನೆನ್ನೆ ತಾನೆ ಒಂದು ಬೈ ಎಲೆಕ್ಷನ್ನಿನಲ್ಲಿ ಸೋತು ಹೋಗಿದ್ದಾರೆ. ಈ ರಾಜ್ಯದಲ್ಲಿ ಲೋಕಸಭೆಗೆ ಒಂದು ಚುನಾವಣೆಯೂ ಮತ್ತು ಇಲ್ಲಿನ ಶಾಸನ ಸಭೆಗೆ ಮೂರು ಚುನಾವಣೆಗಳೂ ನಡೆದುದರಲ್ಲಿ ಇವರು ಹಿಂದೆ ಏನು ಲಕ್ಷ ಲಕ್ಷಗಟ್ಟಲೆ ಓಟುಗಳನ್ನು ಹೆಚ್ಚು ಪಡೆದು ಗೆದ್ದೆವೆಂದು ಹೇಳಿಕೊಳ್ಳುತ್ತಿದ್ದರೋ ಅಂಥವರು ಆ ಲೋಕಸಭಾ ಚುನಾವಣೆಯಲ್ಲಿ ಕೇವಲ ಕೆಲವೇ ಓಟುಗಳಲ್ಲಿ ಗೆದ್ದಿದ್ದಾರೆ.

ಶ್ರೀ ಎಚ್.ಡಿ. **ದೇವೇಗೌಡ:**- ನಾವು ಹಿಂದೆ 23 ವರ್ಷ ಆಡಳಿತವನ್ನು ನಡೆಸಿದವು. ಆದರೆ ನಾವು ಆಗ ಯಾವ ಪಕ್ಷವನ್ನೂ ತಬ್ಬಿಕೊಳ್ಳುವುದಕ್ಕೆ ಹೋಗಲಿಲ್ಲ- ಯಾರಿಗೂ ಟೋಪಿಯನ್ನು ಹಾಕಲಿಲ್ಲ.

ಶ್ರೀ ಎನ್. ರಾಚಯ್ಯ:- ಆ.ಯು.ಪಿ. ಚುನಾವಣೆಯಲ್ಲಿ ಯಾರು ಗೆದ್ದಿದ್ದಾರೆ?

ಶ್ರೀ ಸಿ. ಬೈರೇಗೌಡ:- ಅಲ್ಲಿ ದುಡ್ಡು ಗೆದ್ದಿದೆ. ಆದರೆ ಇಲ್ಲಿ ಮೂರು ಉಪಚುನಾವಣೆಗಳು ನಡೆದಾಗ್ಗೂ ಒಂದರಲ್ಲಾದರೂ ಪಾಪ ಇವರಿಗೆ ಗೆದ್ದು ಬರುವುದಕ್ಕೆ ಸಾಧ್ಯವಾಗಬಾರದೆ? ಅವರಲ್ಲಿ ಅಂಥ ಚೈತನ್ಯವಿಲ್ಲ. ದೇಶದಲ್ಲಿ ಗಾಳಿ ಈ ದಿವಸ ಇವರ ವಿರುದ್ಧವಾದ ದಿಕ್ಕಿನಲ್ಲಿ ಬೀಸುತ್ತಿದೆ.

ಶ್ರೀ ಎಚ್.ಡಿ. ದೇವೇಗೌಡ:- ಆ ಹುಣಸೂರಿನ ಮುನಿಸಿಪಲ್ ಚುನಾವಣೆ ಏನಾಯಿತು?

ಶ್ರೀ ಸಿ. ಬೈರೇಗೌಡ:- ಆದರೆ ಇತ್ತೀಚೆಗೆ ವಿರೋಧಪಕ್ಷದ ನಾಯಕರಾದ ಶ್ರೀ ದೇವೇಗೌಡರನ್ನೂ ಕೂಡ ಆಡಳಿತ ಪಕ್ಷಕ್ಕೆ ಎಳೆಯಲು ಸನ್ನಾಹಗಳು ನಡೆಯುತ್ತಿವೆ. ನಾವು ಇವರನ್ನೂ ಕಾದು ನೋಡಬೇಕಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಅತ್ತಕಡೆಗೆ ಹೋದರೆ ಇವರಿಗೂ ಅವರ ಗತಿಯೇ ಬರುತ್ತದೆ. ಮೊನ್ನೆ ಇಲ್ಲಿ ಇವರ ಪಕ್ಷದ ಚುನಾವಣೆಯ ಫಲಿತಾಂಶ ಹೊರಬಿದ್ದ ನಂತರ ನನಗೆ ಇವರ ಮಾತಿನಲ್ಲಿ ಅನುಮಾನ ಇನ್ನೂ ಹೆಚ್ಚುವುದಕ್ಕೆ ಕಾರಣವಾಗಿದೆ. ಮೈಸೂರಿನಲ್ಲಿ ಇವರ ಪಕ್ಷ ಸೋತು ಹೋಯಿತು. ವಾಸ್ತವಾಂಶಗಳು ಹೀಗೆ ಇದ್ದಾಗ್ಯೂ ಇಲ್ಲಿ ಸರ್ಕಾರದವರು ಕೊಡತಕ್ಕ ಕಾರಣಗಳು ಬಹಳ ಸೋಜಿಗದವುಗಳಾಗಿವೆ. ಅವರು ಇಲ್ಲಿ ಹೇಳಿದ್ದಾರೆ ಅನೇಕ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಸಾರ್ವಜನಿಕರು ತಮಗೆ ಚುನಾವಣೆಗಳನ್ನು ಮುಂದೂಡಲು ಮನವಿಗಳನ್ನು ಸಲ್ಲಿಸಿದ್ದಾರೆ ಎಂದು. ಇದು ಖಂಡಿತ ನಂಬತಕ್ಕ ಮಾತಲ್ಲ. 1958ರಲ್ಲಿ ಏನು ಕೆಲವು ಗ್ರಾಮ ಪಂಚಾಯಿತಿಗಳಿಗೆ ಚುನಾವಣೆಗಳಾದವು ಅಲ್ಲಿಂದ ಇಲ್ಲಿಯತನಕ ಚುನಾವಣೆಗಳಾಗಲಿಲ್ಲ. ಇದಕ್ಕೆ ಪ್ರಜಾಪ್ರಭುತ್ವದಲ್ಲಿ ಏನು ಬೆಲೆ ಇದೆ? ನಾನೇ ಐದಾರು ಗ್ರಾಮ ಪಂಚಾಯಿತಿಗಳ ಅಕ್ರಮದ ಬಗ್ಗೆ ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರೆ ಅಲ್ಲಿ ಅವರನ್ನು ಅಧಿಕಾರದಿಂದ ಬದಲಾವಣೆ ಮಾಡುವುದಕ್ಕಾಗಿಲ್ಲ ಅಂದರೆ ಇದೆಂಥ ಸರ್ಕಾರ? ಬಿಡುವಿಲ್ಲ ಎಂದು ಹೇಳುತ್ತಿದ್ದಾರೆ. ಏನು ಗ್ರಾಮ ಪಂಚಾಯಿತಿಗಳಿಗೆ ಇರುವುದೆಲ್ಲಾ ರಸ್ತೆಗಳನ್ನು ಮಾಡಿಸುವುದು, ಚರಂಡಿಗಳನ್ನು ಮಾಡಿಸುವುದು, ರಸ್ತೆಗಳಲ್ಲಿ ದೀಪ ಅಂಟಿಸುವುದು, ಇಷ್ಟು ಕೆಲಸ ಮಾಡತಕ್ಕ ಸಂಸ್ಥೆಗೆ ಒಂದು ಚುನಾವಣೆ ನಡೆಸುವುದಕ್ಕೆ 10-20 ವರ್ಷಗಳಿಂದ ಸಾಧ್ಯವಾಗಿಲ್ಲ ಎಂದರೆ ಇವರು ರಾಜ್ಯದ ಆಡಳಿತವನ್ನು ಇನ್ನೆಷ್ಟರಮಟ್ಟಿಗೆ ನಡೆಸಬಹುದು? ಅಲ್ಲಿ ಬಹಳ ದಿನಗಳಿಂದ ಒಬ್ಬರೇ ಅಧಿಕಾರ ಗದ್ದುಗೆಯಲ್ಲಿ ಕುಳಿತು ಅವರಿಗೆ ಜಡತ್ವ ಬಂದಿದೆ. ಇವರು ರಾಜಕೀಯ ಕಾರಣಗಳಿಗಾಗಿ ಚುನಾವಣೆಗಳನ್ನು ಮುಂದೂಡುತ್ತಿದ್ದಾರೆ. ಅಂದರೆ ಬಾಯಲ್ಲಿ ಇವರು ಪ್ರಜಾಪ್ರಭುತ್ವದ ಪಾಲಕರೆಂದು ಹೇಳಿಕೊಂಡು ಕೃತಿಯಲ್ಲಿ ಅದನ್ನು ಕೊಲೆ ಮಾಡುತ್ತಿದ್ದಾರೆ. ನಂಬುವುದಕ್ಕೆ ಆಧಾರವಿಲ್ಲ. ಈಗಿರುವ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ, ಆಶ್ವಾಸನೆ ಕೊಡುವುದಕ್ಕೆ ಬೆಲೆಯಿಲ್ಲ, ಅದು ಹೇಳುವ ಮಾತು ನಂಬಿಕೆಗೆ ಅರ್ಹ ಆಗಿಲ್ಲ. ಸರ್ಕಾರ ಚುನಾವಣೆಗಳನ್ನು ಇನ್ನೂ ಮುಂದಕ್ಕೆ ಹಾಕಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಆದುದರಿಂದ ವಿನಂತಿ ಮಾಡಿಕೊಳ್ಳುವುದು, ಕೃಷ್ಣರಾಜ ಕ್ಷೇತ್ರದ ಚುನಾವಣೆ ವಿಚಾರವೇನಾದರೂ ಆಗಲಿ, ಯಾರಾದರೂ ಅದರಲ್ಲಿ ಸೋಲಲಿ, ಬಿಡಲಿ, ಅದನ್ನು ಇಲ್ಲಿಗೆ ಬಿಡೋಣ. ಇಂದು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟು ಗ್ರಾಮ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ನಿಖರವಾಗಿ ಇಷ್ಟು ದಿವಸದಲ್ಲಿ ಚುನಾವಣೆ ನಡೆಸುತ್ತೇವೆ ಎಂದು ಹೇಳಿ. ನಿಮ್ಮ ಸೋಲು

ಅಥವಾ ಗೆಲುವಿನ ವಿಚಾರ ನಮಗೆ ಬೇಕಾಗಿಲ್ಲ. ಜನರಿಗೆ ಬೇಕಾಗಿರುವುದು ಚುನಾವಣೆ, ಅವರಿಗೆ ಬೇಕಾದವರನ್ನು ಆರಿಸಲು ಅವಕಾಶವಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ :– 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಚುನಾವಣೆಗೆ ಭಾರೀ ಹಣ ಬರುತ್ತದಂತೆ, ಅದಕ್ಕೇ ನಿಧಾನ.

ಶ್ರೀ ಸಿ. ಬೈರೇಗೌಡ :– ಇರಬಹುದು. ಈಗ 1975ನೆಯ ಇಸವಿಯವರೆಗೆ ಚುನಾವಣೆಯನ್ನು ಮುಂದೂಡಲು ಕಾರಣವೇನು? ಸಕಾರಣವಿಲ್ಲ. ನಿಮ್ಮವರು ಈಗ ಚುನಾವಣೆ ನಡೆಸಿದರೆ ಬರಲು ಅವಕಾಶವಿಲ್ಲವೆಂದು ಮುಂದೂಡುವುದು ಉಚಿತವಲ್ಲ. ಅದನ್ನು ಬಿಟ್ಟು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿದ್ದರೆ ಒಂದೆರಡು ತಿಂಗಳಲ್ಲಿ ಚುನಾವಣೆ ನಡೆಸುತ್ತೇವೆಂದು ಹೇಳಿ ಅದರಂತೆ ಮಾಡಿ ಎಂದು ತಿಳಿಸಿ ನನ್ನ ಭಾಷಣ ಮುಗಿಸುತ್ತೇನೆ.

## ಸಿ.ಎಂ. ಗೈರುಹಾಜರಿ - 19-3-74

ಶ್ರೀ ಸಿ. ಬೈರೇಗೌಡ :– ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಈ ವಿಷಯ ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲ ಎಂದು ಹೇಳಿದರು ಅಂದರೆ ಕಾನೂನಿನಲ್ಲಿ ಎರಡುಗಂಟೆಗೆ ಮೊದಲು ನಿಲುವಳಿ ಸೂಚನೆ ಕೊಡಬೇಕೆಂದು ಇದೆ ಅದರಂತೆ ಕೊಟ್ಟಿದೆ. ಆದರೂ ಕೂಡ ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲ ಎಂದು ಹೇಳುವುದಾದರೆ ಅವರ ಖುಷಿ, ಅವರ ಮರ್ಜಿ ಏನು ಇದೆಯೋ ಅದರಂತೆ ಈ ಸದನ ನಡೆಯಬೇಕು ಎನ್ನುವುದು ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ ಅನೇಕ ಸಂದರ್ಭಗಳಲ್ಲಿ ತಾವು ಮಂತ್ರಿಮಂಡಲಕ್ಕೆ ಎಚ್ಚರಿಕೆ ಕೊಟ್ಟಿದ್ದೀರಿ. ಏನಂತ ಎಂದರೆ ಸಭೆಯ ಕಾರ್ಯಕಲಾಪಗಳು ನಡೆಯುವಾಗ ಮಂತ್ರಿಗಳು ಹಾಜರಿರಬೇಕು, ಕಾರಣ ಏನೇನು ನಡೆಯುತ್ತದೆ ಎನ್ನುವುದನ್ನು ವೀಕ್ಷಣೆ ಮಾಡಿ ಅದಕ್ಕೆ ಉತ್ತರ ಕೊಡಬೇಕಾಗುವ ಸಂದರ್ಭ ಬರುತ್ತದೆ ಎಂದು. ಅನೇಕ ಸಂದರ್ಭಗಳಲ್ಲಿ ಇಷ್ಟು ಎಚ್ಚರಿಕೆ ಅವರಿಗೆ ಕೊಟ್ಟಿದ್ದರೂ ಕೂಡ ವೇಳೆಗೆ ಮೊದಲೇ ನಿಲುವಳಿ ಸೂಚನೆ ಅವರ ಆಫೀಸಿಗೆ ತಲುಪಿದ್ದರೂ ಕೂಡ ಮುಖ್ಯಮಂತ್ರಿಗಳಿಗೆ ಈ ವಿಷಯ ಗೊತ್ತಿಲ್ಲ ಎಂದರೆ ಇದು ಅಕ್ಷಮ್ಯ ಅಪರಾಧವಾಗುತ್ತದೆ. ಆದುದರಿಂದ ತಾವು ಇದನ್ನು ಅಷ್ಟು ಸುಲಭವಾಗಿ ತಿಳಿದುಕೊಳ್ಳಬಾರದು ಎಂದು ಹೇಳುತ್ತೇನೆ.

ಅಧ್ಯಕ್ಷರು :– ನಾನು ಹಾಗೇನೂ ತಿಳಿದುಕೊಂಡಿಲ್ಲ.

ಶ್ರೀ ಸಿ. ಬೈರೇಗೌಡ :– ಆದರೆ ನಾನು ಹೇಳುವುದು ಏನೆಂದರೆ ಈ ಸದನವನ್ನು ಮಂತ್ರಿ ಮಂಡಲದವರು ಯಾವ ರೀತಿ ಕಾಣುತ್ತಿದ್ದಾರೆ ಎಂದರೆ ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಕಾಣುತ್ತಿದ್ದಾರೆ ಎಂದರೆ ಹಳ್ಳಿಗಳಲ್ಲಿ ಪ್ರೈಮರಿ ಶಾಲೆಯಲ್ಲಿರುವ ಉಪಾಧ್ಯಾಯರುಗಳು ಅಮಾವಾಸ್ಯೆಗೆ ಒಂದು ದಿವಸವೋ ಅಥವಾ ಪೂರ್ಣಿಮೆಗೆ ಒಂದು ದಿವಸವೋ ಹಾಜರಾಗುವ ಹಾಗೆ ಮುಖ್ಯಮಂತ್ರಿಗಳು ಈ ಸದನಕ್ಕೆ ಹಾಜರಾಗುತ್ತಾರೆ. ಆದುದರಿಂದ ಅವರು ಇದನ್ನು ಅಷ್ಟು ಹಗುರವಾಗಿ ತಿಳಿದುಕೊಳ್ಳಬಾರದು ಎಂದು ಹೇಳುತ್ತೇನೆ.

## ಮಂತ್ರಿಗಳ ಭತ್ಯೆ - 19-3-74

ಶ್ರೀ ಸಿ. ಬೈರೇಗೌಡ (ವೇಮಗಲ್) :- ಈ ಸಭೆಯ ಸದಸ್ಯರು ಕೆಲವರು ವಿರೋಧ ಮಾಡಿದರೂ ಈಗಾಗಲೇ ಒಂದು ಮಸೂದೆಗೆ ಅಂಗೀಕಾರ ದೊರಕಿದೆ. ಆ ಆಧಾರದ ಮೇಲೆ ಇದೂ ಕೂಡ ಅಂಗೀಕಾರವಾಗುವುದೆಂದು ನಾನು ಭಾವಿಸುತ್ತೇನೆ. ಇಂದು ವಿದ್ಯುಚ್ಛಕ್ತಿ ಛಾರ್ಜನ್ನು 75 ರಿಂದ 125 ರೂಪಾಯಿಗಳಿಗೆ ಏರಿಸಿದ್ದಾರೆ. ಎಲ್ಲಾ ಧಾರಣೆಗಳೂ ಇಂದು ಜಾಸ್ತಿಯಾಗಿರುವುದಕ್ಕೆ ನಿದರ್ಶನಗಳಿವೆ. ಸದಸ್ಯರ ಸಂಬಳ ಹೆಚ್ಚಲು ಇದೊಂದು ಕಾರಣ. ಆದರೆ ವಿದ್ಯುತ್ ಬಳಕೆಗೆ ಕೊಡುತ್ತಿದ್ದ 75 ರೂಪಾಯಿ ಹೆಚ್ಚಿಸಲು ಕಾರಣವಿಲ್ಲ. ಏಕೆಂದರೆ ಇನ್ನೂ ವಿದ್ಯುತ್ ದರದ ಪುನರ್ವಿಮರ್ಶೆಯಾಗಿಲ್ಲ, ಆದುದರಿಂದ ಹೆಚ್ಚು ಛಾರ್ಜು ಮಂತ್ರಿಗಳು ಕೊಡಬೇಕಾಗುವುದಿಲ್ಲ. ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ಅದನ್ನು ಕೊಡಬೇಕಾದ್ದು ಸಹಜ. ವಿದ್ಯುತ್ ಬಗ್ಗೆ ಹೆಚ್ಚು ಕೊಡಲು ಅಂಕಿಅಂಶ ಒದಗಿಸಿಲ್ಲ. ಆದುದರಿಂದ ವಿದ್ಯುತ್ ಬಳಕೆಗೆ ಹೆಚ್ಚು ಕೊಡಬಾರದು.

ಇದಾದ ಮೇಲೆ ಮಂತ್ರಿಗಳ ವಿಷಯ ಬೇಕಾದಷ್ಟು ಹೇಳಬಹುದು. ಅನೇಕ ಸಂದರ್ಭಗಳಲ್ಲಿ ಈ ಸಭೆಯಲ್ಲಿ ಮಂತ್ರಿಗಳಿರುವುದಿಲ್ಲ. ಆಗ ಛೀಮಾರಿ ಹಾಕುವರು. ಇದು ಜನತೆಗೆ ಸಹ ಗೊತ್ತಿದೆ. ಇಂದು ಇದನ್ನು ನಾವು ಹೆಚ್ಚಾಗಿ ನೋಡುತ್ತಿದ್ದೇವೆ. ನಾವು ಈ ವಿಧೇಯಕವನ್ನೂ ವಿರೋಧ ಮಾಡಿದರೂ ಇದು ಅಂಗೀಕಾರವಾಗುತ್ತದೆ. ಇನ್ನು ಮೇಲೆ ವಿದ್ಯುತ್ ಬಳಕೆಗೆ ಕೊಡುವುದು, ವಾಹವಭತ್ಯ, ದಿನಭತ್ಯ ಮುಂತಾದವು ಹೆಚ್ಚಾಗುವುವು. ಈ ಬಿಲ್ಲನ್ನು ತಂದಿರುವ ನಾಯಕರಾದರೂ ಸರಿಯಾಗಿ ಈ ಸಭೆಗೆ ಬಂದು ಎಲ್ಲಕ್ಕಿಂತ ಈ ಸಭೆ ಮುಖ್ಯವೆಂಬುದನ್ನರಿತು ಅವರಾದರೂ ಈ ನಿಯಮವನ್ನು ಪಾಲಿಸಿದರೆ ಅದರಲ್ಲಿ ಅರ್ಥವಿದೆ. ಆ ಕೆಲಸವನ್ನು ಅವರಾದರೂ ಮಾಡುವರು ಎಂದು ನಂಬಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

## ತುರ್ತು ಪರಿಸ್ಥಿತಿಯಲ್ಲಿನ ಸಭೆ 1975

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಸಂಸದೀಯ ಮಂತ್ರಿಗಳು ಒಂದು ವಿಶೇಷ ನಿರ್ಣಯವನ್ನು ವಿಶೇಷ ಪರಿಸ್ಥಿತಿಯ ಬಗ್ಗೆ ತಂದಿದ್ದಾರೆ. ಈಗಾಗಲೇ ಇತರೇ ಮಾನ್ಯ ಮಿತ್ರರುಗಳು ಈ ಒಂದು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಮತ್ತು ತಮ್ಮ ಅಭಿಪ್ರಾಯಗಳನ್ನು ಕೂಡ ತಿಳಿಸಿದ್ದಾರೆ. ನನಗಿಂತ ಮೊದಲು ಮಾತನಾಡಿದಂಥಾ ಮಾನ್ಯ ಸದಸ್ಯರಾದ ವಿ.ಎನ್. ಪಾಟೀಲರು ಸಮಾಜದಲ್ಲಿರತಕ್ಕ ಕೆಲವು ಘಾತುಕ ಶಕ್ತಿಗಳು ಈಗಿರತಕ್ಕಂಥ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ತಮ್ಮ ಸ್ವಂತ ಲಾಭವನ್ನು ಯಾವ ರೀತಿ ಪಡೆಯುತ್ತಿದ್ದಾರೆ ಎಂಬುದನ್ನು ಉದಾಹರಣೆ ಮೂಲಕ ಹೇಳಿದರು. ಭ್ರಷ್ಟಾಚಾರದಲ್ಲಿ ತೊಡಗಿರತಕ್ಕಂಥ ಅಧಿಕಾರಿಗಳ ಬಗ್ಗೆಯಾಗಲಿ ಅಥವಾ ರಾಜಕಾರಣಿಗಳ ಬಗ್ಗೆ ಆಗಲಿ, ಒಂದು ಮಾತನ್ನಾದರೂ ಸರ್ಕಾರದ ಗಮನಕ್ಕೆ ತಂದು ಜನಸಾಮಾನ್ಯರಿಗೆ ಉಪಯೋಗವಾಗುವ ರೀತಿಯಲ್ಲಿ ಪ್ರಯೋಜನವಾಗುವ ರೀತಿಯಲ್ಲಿ ಈ ಸದನದಲ್ಲಿ ಭಾಗವಹಿಸಬೇಕು. ಈ ರೀತಿ ಸರ್ಕಾರದ

ಗಮನಕ್ಕೆ ತರುವ ಸದಸ್ಯರ ಹಕ್ಕನ್ನು ಮೊಟಕು ಮಾಡುವುದು ಸರಿಯಾದುದಲ್ಲ. ಈ ಸದನ 3-4 ದಿವಸ ಅಥವಾ ಒಂದು ವಾರ ನಡೆಯಬಹುದು. ಅಷ್ಟರ ಮಟ್ಟಿಗಾದರೂ ಶ್ರೀಮತಿ ಇಂದಿರಾಗಾಂಧಿಯವರು ಸಮಾಜಘಾತುಕರು ಯಾರಿದ್ದಾರೆ ಅವರಿಗೆ ಶಿಕ್ಷೆ ಲಭಿಸುತ್ತದೆ ಎಂದು ಹೇಳತಕ್ಕ ಉದ್ದೇಶವನ್ನಿಟ್ಟುಕೊಂಡು ನಮ್ಮ ಹಕ್ಕನ್ನು ಮೊಟಕು ಮಾಡಿದ್ದಾರೆಯೇ? ಇಲ್ಲ ಈ ಎರಡು ಕಾರಣಗಳಿಂದ ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ. ಎಮರ್ಜೆನ್ಸಿ ಸೆಷನ್ ಎಂದು ಹೆಸರು ಇಟ್ಟುಕೊಂಡಿದ್ದಾರೆ. ಎಮರ್ಜೆನ್ಸಿ ಏಕೆ ಎಂದರೆ ನನಗೆ ಗೊತ್ತಿರುವ ಮಟ್ಟಿಗೆ ದೇಶದಲ್ಲಿ ಪ್ರತಿಯೊಬ್ಬರೂ ಏನು ಮಾತನಾಡುತ್ತಿದ್ದಾರೆ ಅದನ್ನೆಲ್ಲಾ ನೋಡಿದರೆ ಆ ರೀತಿಯಾದಂಥ ಘಟನೆ ಎಲ್ಲಿಯೂ ನಡೆದಿಲ್ಲ. ಅಂಥ ಘಟನೆ ಏನಾದರೂ ನಡೆದಿದ್ದರೆ ನಮ್ಮ ಎದುರಿಗೆ ಕೂತಿರತಕ್ಕಂಥವರು 1947ನೇ ಇಸವಿಯಿಂದಲೂ ಅಧಿಕಾರವನ್ನು ನಡೆಸಿಕೊಂಡು ಬಂದಿದ್ದಾರೆ. ಅದು ಅವರಿಂದ ಮಾತ್ರ ನಡೆದಿದೆ. ನಾನು ಕೆಲವು ಪ್ರಗತಿಪರ ನೀತಿಗಳನ್ನು ಧೋರಣೆಗಳನ್ನು ಅನುಸರಿಸತಕ್ಕವನು. ಆದರಿಂದಲೇ ದೇಶದಲ್ಲಿ ಇಂಥ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದರೆ ಇದು ಸತ್ಯಕ್ಕೆ ದೂರವಾದ ಮಾತು. ಜೂನ್ 12ನೇ ತಾರೀಖು ಅಲಹಾಬಾದ್ ಶ್ರೇಷ್ಠ ನ್ಯಾಯಾಲಯದ ತೀರ್ಪು ಬಂತು. ಅದೇ ದಿನ ಗುಜರಾತಿನ ಚುನಾವಣೆಯ ಫಲಿತಾಂಶವೂ ಬಂತು. ಗುಜರಾತಿನ ಜನ ತಮ್ಮ ಇಚ್ಛೆ ಏನು ಇದೆ ತಮ್ಮ ಅಭಿಮತ ಏನು ಇದೆ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಅಲಹಾಬಾದ್‌ನ ಶ್ರೇಷ್ಠ ನ್ಯಾಯಾಲಯವೂ ಕೂಡ ಕಾನೂನು ಏನು ಇದೆ ಎನ್ನುವುದನ್ನು ತೋರಿಸಿಕೊಟ್ಟಿದೆ. ಇದನ್ನು ವಿರೋಧಪಕ್ಷಗಳವರು ಹೋಗಿ ಮಾಡಿದರು, ನ್ಯಾಯಾಧೀಶರುಗಳಿಗೆ ಏನೇನು ಮಾಡಿ ಈ ಕೆಲಸ ಮಾಡಿದ್ದಾರೆಯೇ ಎಂದು ನಾವು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ನ್ಯಾಯಾಂಗ ತನ್ನ ಕರ್ತವ್ಯವನ್ನು ಮಾಡಿದೆ. ದೇಶದಲ್ಲಿರತಕ್ಕ ಕಾನೂನು ಏನು ಎನ್ನುವುದನ್ನು ಸಿದ್ಧ ಮಾಡಿದೆ. ಅತಿ ಕೆಳಮಟ್ಟದವರಾಗಲಿ, ಅತಿ ಮೇಲ್ಮಟ್ಟದವರಾಗಲೀ ನ್ಯಾಯಾಲಯದ ತೀರ್ಪಿಗೆ ಮನ್ನಣೆ ಕೊಡಬೇಕು ಎನ್ನುವುದು ಮುಖ್ಯ. ಯಾರು ಪ್ರಜಾಪ್ರಭುತ್ವದಲ್ಲಿ ಅತಿ ಮೇಲ್ಮಟ್ಟದ ಅಭಿಪ್ರಾಯವನ್ನು ಹೊಂದಿದ್ದಾರೋ ಅವರೇ ಇವತ್ತಿನ ಪರಿಸ್ಥಿತಿಯನ್ನು ಒಪ್ಪತಕ್ಕ ಸ್ಥಿತಿಯಲ್ಲಿಲ್ಲ. ಇದರಿಂದ ನ್ಯಾಯಾಂಗದ ತೀರ್ಮಾನಕ್ಕೆ ಮನ್ನಣೆ ಬರಲಿಲ್ಲ. ಅದಕ್ಕೆ ಬದಲಾಗಿ ಇವತ್ತಿನ ದಿವಸ ಈ ಎಮರ್ಜೆನ್ಸಿ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. 1947ರಿಂದ ಇಲ್ಲಿಯವರೆಗೂ ಜನಕ್ಕೆ ಇವರು ಏನೂ ಮಾಡಿಲ್ಲ. 1947ನೇ ಇಸವಿಯಿಂದ ಅನೇಕ ಚುನಾವಣೆಗಳು ನಡೆದವು. ಅದಾದ ಮೇಲೆ ಕಾಂಗ್ರೆಸ್ ಇಬ್ಭಾಗವಾಯಿತು. ಆವಾಗಿನಿಂದ ಆಡಳಿತ ನಡೆಸತಕ್ಕಂಥವರಿಗೆ ಸಾಮಾನ್ಯ ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ತಮ್ಮ ಕೈಯಿಂದ ಆಗಿಲ್ಲ. ಜನತೆಯು ಇವರು ತಮ್ಮ ಆಶೋತ್ತರಗಳನ್ನು ಈಡೇರಿಸಿಲ್ಲ ಎಂದು ಮನಗಂಡು ಬೇರೆಯವರನ್ನು ಚುನಾಯಿಸಿದ್ದಾರೆ. ನಿಜವಾಗಿಯೂ ಕೂಡ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ದೇಶದಲ್ಲಿ ಗರೀಬಿ ಹಟಾವೋ ಬಡತನವನ್ನು ಹೋಗಲಾಡಿಸುವುದಕ್ಕೆ ದೇಶದ ಪ್ರಧಾನಮಂತ್ರಿಗಳು ಪ್ರಯತ್ನ ಮಾಡಿದ್ದರೆ ಮತ್ತು ಅಲ್ಲಿ ಕಲಿತಂಥ ಪಾಠವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ರಾಜ್ಯಾಂಗದ ಪ್ರಕಾರ ತುರ್ತುಪರಿಸ್ಥಿತಿಯನ್ನು ತರುವುದಕ್ಕೆ ಹೋರಾಟ ಮಾಡಿದ್ದರೆ ಅದಕ್ಕೆ ಯಾರ ಅಡ್ಡಿಯೂ ಇರಲಿಲ್ಲ. ಇವತ್ತು ಸಂಸತ್ತಿನಲ್ಲಿ ಇವರಿಗೆ ಅತಿ ಹೆಚ್ಚಿನ ಮೆಜಾರಿಟಿ ಬಹುಮತ ಇರತಕ್ಕ ಪರಿಸ್ಥಿತಿ ಇದೆ. ರಾಜ್ಯಾಂಗವಾಗಲೀ ಯಾವ ಕಾನೂನು ಆಗಲಿ ಅದಕ್ಕೆ ತಿದ್ದುಪಡಿಯನ್ನು ತಂದರೆ ಯಾವ

ಅಡ್ಡಿ ಆತಂಕ ಇಲ್ಲದೆ ಅದು ಪಾಸ್ ಆಗುವಂಥ ಪರಿಸ್ಥಿತಿ ಇವತ್ತು ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ದೇಶದ ಪ್ರಧಾನ ಮಂತ್ರಿಗಳು ತುರ್ತು ಪರಿಸ್ಥಿತಿಯನ್ನು ತಂದಿದ್ದಾರೆ. ತಮ್ಮ ಒಂದು ಇಕ್ಕಟ್ಟನ್ನು ಬಗೆಹರಿಸಿಕೊಳ್ಳುವುದಕ್ಕೆ ಮತ್ತು ತಾವು ಅಧಿಕಾರದಲ್ಲಿ ಶಾಶ್ವತವಾಗಿ ಉಳಿಯುವುದಕ್ಕೆ ಇವತ್ತಿನ ದಿವಸ ದೇಶದಲ್ಲಿ ಎಮರ್ಜೆನ್ಸಿಯನ್ನು ತಂದಿದ್ದಾರೆ. ಸಾಮಾನ್ಯ ಜನರ ಪರಿಸ್ಥಿತಿಯನ್ನು ತರುವುದಕ್ಕಾಗಲೀ ಅಥವಾ ದೇಶದ ಸಂಪತ್ತನ್ನು ಉತ್ಪತ್ತಿ ಮಾಡತಕ್ಕ ಕಾರ್ಮಿಕ ವರ್ಗದವರಿಗಾಗಲೀ, ರೈತ ವರ್ಗಕ್ಕಾಗಲೀ ಅವರ ಜೀವನ ಮಟ್ಟವನ್ನು ಏರಿಸುವುದಕ್ಕೆ ಆಗಲೀ ಇದು ಯಾವುದಕ್ಕೂ ದೇಶದಲ್ಲಿ ಇಂಥ ಪರಿಸ್ಥಿತಿಯನ್ನು ಇವರು ತರಲಿಲ್ಲ.

ಇವರು ತಂದಿರತಕ್ಕ 20-21 ಅಂಶಗಳನ್ನು ನಾವು ಗಮನಿಸುವುದೆಂದರೆ ಇವತ್ತು ಯಾರೂ ಸ್ಟ್ರೈಕ್ ಮಾಡಬಾರದು ಎಂದು ಇದೆ. ಬಂಡವಾಳಶಾಹಿಗಳ ಅಭಿಪ್ರಾಯದಲ್ಲಿ ಕಾರ್ಮಿಕ ವರ್ಗಗಳ ಶೋಷಣೆಯನ್ನು ಮಾಡುವುದರಲ್ಲಿ, ಕಾರ್ಮಿಕರು ತಮ್ಮ ನ್ಯಾಯವಾದಂಥ ಹೋರಾಟವನ್ನು ನ್ಯಾಯವಾದಂಥ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಕಾರ್ಮಿಕ ವರ್ಗಕ್ಕೆ ಇರತಕ್ಕ ಅಸ್ತ್ರ ಒಂದೇ ಅಂದರೆ ಸ್ಟ್ರೈಕ್ ಮಾಡುವುದು, ಇದು ಚೈನಾ ದೇಶವಲ್ಲ.

ಶ್ರೀ ಡಿ. ದೇವರಾಜ ಅರಸ್:- ಚೈನಾ ದೇಶವಾಗಿದ್ದರೆ ಹೀಗೆ ಮಾತನಾಡುವುದಕ್ಕೆ ಬಿಡುತ್ತಿದ್ದರೆ?

ಶ್ರೀ ಸಿ. ಬೈರೇಗೌಡ:- ಅಂಥ ಒಂದು ಪರಿಸ್ಥಿತಿ ಇಲ್ಲಿಲ್ಲ. ಕಾರ್ಮಿಕ ವರ್ಗದವರ ಹಾಗೂ ರೈತ ವರ್ಗದವರ ಜೀವನ ಮಟ್ಟವನ್ನು ಏರಿಸುವುದಕ್ಕೆ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ? ಇವರ 20 ಅಂಶಗಳ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ವಿ.ಎಸ್. ಪಾಟೀಲರು ಸಿಟ್ಟಿನಿಂದ ನಮ್ಮ ದೇಶದಲ್ಲಿ ಮೈನ್ಸ್ ಆಫ್ ಪ್ರೊಡಕ್ಷನ್ ಅನ್ನು ಹೆಚ್ಚಿಸುವ ಶಕ್ತಿ ಯಾರ ಕೈಯಲ್ಲಿದೆ ಒಂದು ಕೇಳಿದರು. ಭೂಮಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದು ರೈತರ ಕೈಯಲ್ಲಿದೆ. ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚಿಸುವುದು ಕಾರ್ಮಿಕರ ಕೈಯಲ್ಲಿದೆ. ಆದರೆ 1947ನೇ ಇಸವಿಯಲ್ಲಿ ಸುಮಾರು 27 ಕೋಟಿ ರೂಪಾಯಿಗಳ ಬಂಡವಾಳವನ್ನು ಹೊಂದಿದ್ದ ಟಾಟಾ ಅವರು ಇವತ್ತಿನ ದಿವಸ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಬೆಳೆಸಿಕೊಂಡಿದ್ದಾರೆ. ಅವರನ್ನು ಮುಟ್ಟತಕ್ಕ ಧೈರ್ಯ ಯಾರಿಗಾದರೂ ಇದೆಯೇ? ಈ ದೇಶದ ಪ್ರಧಾನ ಮಂತ್ರಿಗಳಿಗಾಗಲೀ ಇದೆಯೇ? ಈ 20 ಕಾರ್ಯಕ್ರಮಗಳಲ್ಲಿ ಉತ್ಪನ್ನ ಸಾಧನಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆಯೇ? ಇದು ಇವರಿಂದ ಸಾಧ್ಯವಾಗುತ್ತದೆಯೇ? ದೇಶದ ಪ್ರತಿಯೊಬ್ಬ ಪ್ರಜೆಯ ಹಕ್ಕು ಇದರಲ್ಲಿದೆ. ಪ್ರತಿಯೊಬ್ಬನ ಜೀವನ ಮಟ್ಟವನ್ನು ಮೇಲೆ ಮಾಡತಕ್ಕ ಕಾರ್ಯಕ್ರಮ ಇದರಲ್ಲಿದ್ದರೆ ನಾನಾದರೂ ಇದನ್ನು ಒಪ್ಪಿಕೊಳ್ಳುತ್ತಿದ್ದೆ.

ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಸಂಸದೀಯ ಮಂತ್ರಿಗಳು ಸಭೆಯ ಒಪ್ಪಿಗೆಗಾಗಿ ರಾಜ್ಯಾಂಗದ 40ನೇ ತಿದ್ದುಪಡಿಯನ್ನು ಮಂಡಿಸಿದ್ದಾರೆ. ಈ ತಿದ್ದುಪಡಿಯನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ಇಚ್ಛಿಸುತ್ತೇನೆ. ಈ ತಿದ್ದುಪಡಿಯಲ್ಲಿ ಎರಡು ಅಂಶಗಳು ಸ್ಪಷ್ಟವಾಗಿ ಕಾಣುತ್ತವೆ. ಒಂದನೆಯದು ಜವಾಬ್ದಾರಿ

ಸ್ಥಾನದಲ್ಲಿರತಕ್ಕವರ ಚುನಾವಣೆಯ ಆಯ್ಕೆಯನ್ನು ಕೋರ್ಟಿನಲ್ಲಿ ಪ್ರಶ್ನೆ ಮಾಡುವ ಹಾಗಿಲ್ಲ. ಮತ್ತು ಕೇಂದ್ರ ಸರ್ಕಾರದವರು ಮಾಡಿತರಕ್ಕ ಕಾನೂನುಗಳನ್ನು ಕೂಡ ಕೋರ್ಟಿನ ಹೊರತಾಗಿ ಇಡತಕ್ಕದ್ದು, ಆದರೆ 9ನೇ ಷೆಡ್ಯೂಲ್‌ನಲ್ಲಿರತಕ್ಕ ಕೆಲವು ಅಂಶಗಳನ್ನು ನಾನಾದರೂ ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ಅತಿ ಕರಾಳವಾದಂತ ಭೀಕರವಾದಂಥ ತಿದ್ದುಪಡಿಯನ್ನು ಈ ದಿನ ತಂದಿದ್ದಾರೆ. ಇವತ್ತಿನ ದಿವಸ ದೇಶದ ಪ್ರಧಾನಮಂತ್ರಿಗಳ ಆಯ್ಕೆಯನ್ನು ಪ್ರಶ್ನಿಸಿ ಕೋರ್ಟಿನಲ್ಲಿ ತಕರಾರು ಅರ್ಜಿಯನ್ನು ಹಾಕಿರತಕ್ಕದ್ದು ಮತ್ತು ಮೇಲಿನ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿರತಕ್ಕದ್ದು ನಮ್ಮ ಮುಂದೆ ಇದೆ. ಅದು ಇದೇ ತಿಂಗಳ ಹನ್ನೊಂದನೆಯ ತಾರೀಖಿಗೆ ವಿಚಾರಣೆಗೆ ಬರುತ್ತದೆ ಮತ್ತು ಈ ವಿಷಯ ದೇಶಕ್ಕೆ ಗೊತ್ತಿದೆ. ಇಂಥ ಸಂದರ್ಭದಲ್ಲಿ ತರಾತುರಿಯಿಂದ, ಆತುರಾತುರದಿಂದ ಈ ತಿದ್ದುಪಡಿಯನ್ನು ತಂದು ಇದಕ್ಕೆ ನಮ್ಮ ಒಪ್ಪಿಗೆಯನ್ನು ಕೇಳುತ್ತಿದ್ದಾರೆ. ಇದರ ಬಗ್ಗೆ ನಾವು ಸಭೆಯಲ್ಲಿ ನಮ್ಮ ಅಭಿಪ್ರಾಯವನ್ನು ಸಂಪೂರ್ಣವಾಗಿ ವ್ಯಕ್ತಮಾಡುವುದಕ್ಕೂ ಕೂಡ ಅವಕಾಶ ಇಲ್ಲದೆ ಇರುವ ರೀತಿಯಲ್ಲಿ ಇದನ್ನು ತಂದಿದ್ದಾರೆ. ಆದರೆ 9ನೇ ಷೆಡ್ಯೂಲ್‌ನಲ್ಲಿ ಕೆಲವು ತಿದ್ದುಪಡಿಗಳನ್ನು ನಮೂದು ಮಾಡಿದ್ದಾರೆ. ಇವುಗಳನ್ನು ನಾನಾದರೂ ಕೂಡ ಸ್ವಾಗತ ಮಾಡುತ್ತೇನೆ. ಇದನ್ನು ತೋರಿಸಿ ಇವತ್ತು ಇವರು ಮಾಡುತ್ತಾ ಇರತಕ್ಕದ್ದು ಏನು? ದೇಶದ ಪ್ರಧಾನ ಮಂತ್ರಿಗಳು ತಮ್ಮ ಸ್ಥಾನವನ್ನು ಭದ್ರಮಾಡಿಕೊಳ್ಳುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತರುತ್ತಿದ್ದಾರೆ. ಇಲ್ಲಿ ಪ್ರಧಾನ ಮಂತ್ರಿಗಳ ಚುನಾವಣೆಯನ್ನು ಮಾತ್ರ ಪ್ರಶ್ನೆ ಮಾಡಿರತಕ್ಕುದ್ದು ಇದೆ. ಸ್ಪೀಕರ್ ಅವರ ಚುನಾವಣೆಯನ್ನಾಗಲಿ ಅಥವಾ ಇನ್ನಾರ ಚುನಾವಣೆಯನ್ನಾಗಲಿ ಇಲ್ಲಿ ಪ್ರಶ್ನೆ ಮಾಡಿಲ್ಲ. ಸ್ಪೀಕರ್ ಅವರು ಪ್ರಮುಖ ವ್ಯಕ್ತಿ ಎಂದು ಅವರನ್ನೂ ಇಲ್ಲಿ ಸೇರಿಸಿದ್ದಾರೆ. ಅದಕ್ಕೆ ಕಾರಣ ಏನೆಂದರೆ ತಾವು ಒಬ್ಬರೆ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುವುದಕ್ಕೆ ಮಸೂದೆಯನ್ನು ತಂದಿದ್ದಾರೆ ಎಂದರೆ ಕೆಲವರು ಹೇಳಬಹುದು ಎನ್ನುವ ಅಪವಾದವನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕಾರ ನಾಲ್ಕು ಜನರ ಹುದ್ದೆಗಳನ್ನು ಇದರಲ್ಲಿ ಸೇರಿಸಿದ್ದಾರೆ. ಕಾನೂನಿಗೆ ಬೆಲೆ ಇದ್ದರೆ, ಅದಕ್ಕೆ ಬೆಲೆ ಕೊಟ್ಟು ಹೋಗಬೇಕು. ಇದು ಪ್ರಧಾನಮಂತ್ರಿಗಳ ಮೊದಲನೆಯ ಕರ್ತವ್ಯ. ಈ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ವಿರೋಧ ಮಾಡುತ್ತೇನೆ.

## ಎಲ್ಲರ ಬಾಯಿಗೆ ಬೀಗ

9ನೇ ಷೆಡ್ಯೂಲ್‌ನಲ್ಲಿ ಕೆಲವು ತಿದ್ದುಪಡಿಗಳಿವೆ. ಇದರಲ್ಲಿ ಪೀಪಲ್ಸ್ ರೆಪ್ರೆಸೆಂಟೇಷನ್ ಆಕ್ಟ್ ಸೇರಿದೆ. ಇದನ್ನು ಏಕೆ ಈಗ ತರುತ್ತಿದ್ದಾರೆ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಭೂಸುಧಾರಣೆ ಮಸೂದೆಯನ್ನು ಸೇರಿಸಿದ್ದಾರೆ. ಸಾಮಾನ್ಯ ಜನರ ಹಿತದೃಷ್ಟಿಯಿಂದ ಇದನ್ನು ತರುತ್ತಿದ್ದಾರೆ. ಆದರೆ ಇಲ್ಲಿಯವರೆಗೆ ತಡ ಮಾಡಿದ್ದು ಏಕೆ? ಸಾಮಾನ್ಯ ಜನರ ಪರವಾಗಿ ಇರತಕ್ಕ ಕಾರ್ಮಿಕರ ಪರವಾಗಿ ಇರತಕ್ಕ, ದುಡಿಯುವವರ ಪರವಾಗಿ ಇರತಕ್ಕೆ ಕಾರ್ಯಕ್ರಮಗಳನ್ನು ನಾನಾದರೂ ಖಂಡಿತವಾಗಿಯೂ ಒಪ್ಪುತ್ತೇನೆ. ಆದರೆ ಇವುಗಳನ್ನು ತರುವುದಕ್ಕೆ ಕಳೆದ 25 ವರ್ಷದಿಂದ ಅಡ್ಡಿ ಏನು ಇತ್ತು? ಈ ದೇಶದಲ್ಲಿ ಆ ಕಾಲದಿಂದ ರೈತರು ಇರಲಿಲ್ಲವೇ, ಕಾರ್ಮಿಕರು

ಇರಲಿಲ್ಲವೆ. ಈಗ ಯಾವ ದೃಷ್ಟಿಯಿಂದ ಇವರು ಬಂದರು. ಇವರು ಭೂಮಿಯ ಮೇಲಿಂದ ಬಂದರೋ ಅಥವಾ ಭೂಮಿಯ ಒಳಗಿನಿಂದ ಬಂದರೋ ಎಂದು ನನಗೆ ಅರ್ಥವಾಗುತ್ತಿಲ್ಲ. ಪ್ರಧಾನ ಮಂತ್ರಿಗಳಿಂದಾಗಿ ಆಡಳಿತ ಕಾಂಗ್ರೆಸ್ ಹೊಸದಾಗಿ ಆಡಳಿತಕ್ಕೆ ಬಂತು. ಈಗ ಸುಮಾರು ನಾಲ್ಕು ವರ್ಷಗಳು ಮುಗಿದು ಹೋಗಿವೆ, ಈ ನಾಲ್ಕು ವರ್ಷದೊಳಗೆ ಪ್ರಗತಿಪರವಾದ ಕಾಯಿದೆಗಳನ್ನು ಏಕೆ ಜಾರಿಗೆ ತರಲಿಲ್ಲ? ಇದಕ್ಕೆ ಯಾರ ಅಡ್ಡಿ ಇತ್ತು? ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲಿ ರಾಜ್ಯದ ವಿಧಾನಸಭೆಗಳಲ್ಲಿ ಬಹುಮತ ಬಹುಶಃ ಕಡಿಮೆ ಇರಲಿಲ್ಲ. ಇದ್ದಿದ್ದರೆ ಇದಕ್ಕೆ ಅಡ್ಡಿ ತರುತ್ತಿದ್ದರೋ ಏನೋ? ತಮ್ಮ ಅಧಿಕಾರ ಗದ್ದುಗೆಯನ್ನು ಕಾಪಾಡಿಕೊಳ್ಳುವುದಕ್ಕೆ ಈ ತಿದ್ದುಪಡಿಯನ್ನು ತರುತ್ತಿದ್ದೀರಿ ಎನ್ನುವುದು ದೇಶದ ಜನತೆಗೆ ಗೊತ್ತಿಲ್ಲವೇ? ಲೋಕಸಭೆಯಲ್ಲಿ ಏನು ನಡೆಯಿತು ಗೊತ್ತಾಗುತ್ತಿಲ್ಲ. ಎಲ್ಲರ ಬಾಯನ್ನು ನೀವು ಮುಚ್ಚಿಸಿದ್ದೀರಿ, ಪತ್ರಿಕೆಗಳವರ ಬಾಯನ್ನು ಮುಚ್ಚಿಸಿದ್ದೀರಿ, ಎಲ್ಲರ ಬಾಯಿಗೆ ಬೀಗವನ್ನು ಹಾಕಿದಂಥ ಪರಿಸ್ಥಿತಿಯನ್ನು ಇಂಥ ಕರಾಳ ಪರಿಸ್ಥಿತಿಯನ್ನು ಉಂಟು ಮಾಡತಕ್ಕ ಜರೂರಾತಿ ಏನು ಇರಲಿಲ್ಲ ಎಂದು ನಾನಾದರೂ ಹೇಳಬೇಕಾಗಿದೆ.

ಮತ್ತೆ ಈವತ್ತಿನ ದಿವಸ ಎಮರ್ಜನ್ಸಿ ವಿಷಯದಲ್ಲಿ ನನ್ನ ಮಿತ್ರರು ಅದನ್ನು ಯಾವಾಗ ಉಪಯೋಗಿಸಬೇಕು, ಯಾವಾಗ ಉಪಯೋಗಿಸಬಾರದು ಎಂಬ ಬಗ್ಗೆ ಹೇಳಿದ್ದಾರೆ. ಅದನ್ನು ಕೆಲವು ಸಮಾಜಘಾತುಕರ ಮೇಲೆ, ಸಮಾಜ ವಿರೋಧಿಗಳ ಮೇಲೆ ಎಮರ್ಜನ್ಸಿ, ಮೀಸಾ ಉಪಯೋಗಿಸಬೇಕು ಎಂದು ಹೇಳಿದರು. ಅದನ್ನು ನಾನಾದರೂ ಕೂಡ ಸ್ವಾಗತ ಮಾಡುತ್ತೇನೆ. ಇ.ಎಂ.ಎಸ್. ನಂಬೂದ್ರಿಪಾಡ್ ಅವರನ್ನು ಹಿಡಿದಿದ್ದಾರೆ. ಪೊಲೀಸರ ಹೊಡೆತ ನಂಬೂದ್ರಿ ಪಾಡ್ ಅವರ ಮೇಲೆ ಬಿದ್ದಿದೆ. ದಬ್ಬಾಳಿಕೆ ಅವರ ಮೇಲೆ ನಡೆಸಿದ್ದಾರೆ. ಅವರನ್ನು ಹೊಡೆದಿದ್ದಾರೆ. ಮಾನ್ಯ ಎಂ.ಎಸ್. ಕೃಷ್ಣನ್‌ರವರು, ವಿ.ಎನ್. ಪಾಟೀಲರು ಸಭೆಯಲ್ಲಿರತಕ್ಕ ಯಾರೇ ಆಗಲಿ ಅವರು ಏನಾದರೂ ದೇಶದಲ್ಲಿರತಕ್ಕ ಮಾನೋಪಲಿಸ್ಟ್ ಇರಬೇಕು ಎಂದು ಹೇಳುತ್ತಾರೆಯೇ? ವೆಸ್ಟೆಡ್ ಇಂಟರೆಸ್ಟ್ ಇರಬೇಕು ಎಂದು ಹೇಳುತ್ತಾರೆಯೇ ದೇಶದಲ್ಲಿ ಇರತಕ್ಕ ಕಾರ್ಮಿಕರ ಸಮಸ್ಯೆ ಬಂದಾಗ ರೈತರ ಸಮಸ್ಯೆ ಬಂದಾಗ ಅವರು ಯಾರ ಪರವಾಗಿ ಇರತಕ್ಕವರು ಎಂಬುದನ್ನು ಅವರು ಹೇಳಬೇಕು. ಅದೇ ರೀತಿಯಲ್ಲಿ 1952ನೇ ಇಸವಿಯಿಂದ ಲೋಕಸಭೆಯಲ್ಲಿ ಸದಸ್ಯರಾದ ಗೋಪಾಲನ್ ಅವರನ್ನೂ ಕೂಡ.......

**ಅಧ್ಯಕ್ಷರು** :- ನಾನು ಬೆಲ್ ಹೊಡೆಯುವುದಕ್ಕೆ ಅರ್ಥ ಇದೆಯೆ ಇಲ್ಲವೆ?

**ಶ್ರೀ ಸಿ. ಬೈರೇಗೌಡ** :- ಇವತ್ತಿನ ದಿವಸ ಎಮರ್ಜನ್ಸಿ ತಂದು ಸರ್ವಾಧಿಕಾರವನ್ನು ಮಾಡುತ್ತಿದ್ದಾರೆ. ಯಾವ ದೇಶದಲ್ಲೂ ಎಮರ್ಜನ್ಸಿ ಇರಬಾರದು, ಜನತೆಯ ಅಭಿಪ್ರಾಯ ಎಲ್ಲಕ್ಕಿಂತ ಮಿಗಿಲಾದುದು, ಜನತೆಯ ಅಭಿಪ್ರಾಯದಲ್ಲಿ ಆಡಳಿತ ವ್ಯವಸ್ಥೆ ಇರಬೇಕು ಎಂದು ಹೇಳುತ್ತಿದ್ದಾರೆ ಅಂತಹ ಶಕ್ತಿಯನ್ನು ದಮನ ಮಾಡುವುದಕ್ಕೆ ಅಂತಹ ಶಕ್ತಿಗಳ ವಿರುದ್ಧ ಮೀಸಾ, ಎಮರ್ಜನ್ಸಿ ತರುತ್ತಿದ್ದಾರೆ. ಈ ಕಾರಣಗಳಿಂದ ನಾನು ಈ ತಿದ್ದುಪಡಿ ಮಸೂದೆಯನ್ನು ವಿರೋಧ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ :– ಮಾನ್ಯ ಲಿಂಗಪ್ಪನವರು ಜಯಪ್ರಕಾಶ್ ನಾರಾಯಣ್ ಅವರ ಶಿಷ್ಯರು ಎನ್ನುವುದು ಎಲ್ಲರಿಗೂ ಗೊತ್ತು. ಅವರು ಎಲ್ಲಾ ಕಾರ್ಖಾನೆಗಳನ್ನು ನ್ಯಾಷನಲೈಸ್ ಮಾಡಿ ಎಂದು ಹೇಳಿದ್ದೀರಾ?

ಶ್ರೀ ಸಿ. ಬೈರೇಗೌಡ :– ಅಂಥ ಕಾರ್ಯಕ್ರಮಗಳು ಏನಾದರೂ ಇದ್ದಿದ್ದರೆ ನಾನಾದರೂ ಒಪ್ಪುತ್ತೇನೆ. ಆದರೆ ಅಂಥ ಕಾರ್ಯಕ್ರಮಗಳು ಯಾವುವೂ ಇಲ್ಲ. ಇವತ್ತಿನ ದಿವಸ ವ್ಯವಸಾಯ ರಂಗದಲ್ಲಿ ಆಗಲೀ ಅಥವಾ ದೇಶದ ಸಂಪತ್ತನ್ನು ಹೆಚ್ಚು ಮಾಡತಕ್ಕ ಕೈಗಾರಿಕಾ ಕ್ಷೇತ್ರದಲ್ಲಿಯೇ ಆಗಲೀ ಇರತಕ್ಕ ಪದಾರ್ಥಗಳ ಬೆಲೆಗಳು ಇಳಿಯುತ್ತಿವೆಯೇ? ಅದೇ ರೀತಿಯಲ್ಲಿ ದೇಶದಲ್ಲಿ ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಇಟ್ಟುಕೊಂಡಿರತಕ್ಕವರು ತಯಾರು ಮಾಡತಕ್ಕ ಪದಾರ್ಥಗಳ ಬೆಲೆಗಳು ಏನಾದರೂ ಇಳಿದಿವೆಯೇ? ಇಲ್ಲ, ಅದಕ್ಕೆ ಬದಲಾಗಿ ಬೆಲೆಗಳು ಏರುತ್ತಿವೆ. ದೇಶದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಉಕ್ಕನ್ನು ತಯಾರು ಮಾಡತತಕ್ಕವರು ಯಾರು? ಎಂದರೆ ಟಾಟಾ ಅವರು. ಅವರು ಉತ್ಪನ್ನ ಮಾಡತಕ್ಕ ಉಕ್ಕು ಒಂದು ಟನ್‌ಗೆ ಸುಮಾರು 80 ರೂಪಾಯಿಗಳಷ್ಟು ಏರಿದೆ. ಇದಕ್ಕೋಸ್ಕರ ಎಮರ್ಜನ್ಸಿಯನ್ನು ದೇಶದಲ್ಲಿ ಏನಾದರೂ ತಂದಿದ್ದೀರಾ? ಅಥವಾ ಜನಸಾಮಾನ್ಯರು ಉಪಯೋಗಿಸುವ ಸೀಮೆಎಣ್ಣೆಯ ಬೆಲೆ ಜಾಸ್ತಿಯಾಗಿದೆ ಎಂದು ಅದಕ್ಕೋಸ್ಕರ ಎಮರ್ಜನ್ಸಿಯನ್ನು ತಂದಿದ್ದೀರಾ?

ಇವತ್ತಿನ ದಿವಸ ಸೀಮೆಎಣ್ಣೆಯ ಬೆಲೆ ಜಾಸ್ತಿಯಾಗಿದೆ. ಸಾಮಾನ್ಯವಾಗಿ ಸಾಮಾನ್ಯ ಜನರು ಮಾತ್ರ ಬಳಸುತ್ತಾರೆ. ನಾವು ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ 20 ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳುವುದಾದರೆ, ಸೀಮೆಎಣ್ಣೆ ಬೆಲೆಯನ್ನು ಹೆಚ್ಚು ಮಾಡುವುದಕ್ಕಾಗಿಯೇ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಿದ್ದೀರಾ? ಅಲ್ಲದೆ, ಈಗ ಉಕ್ಕಿನ ಬೆಲೆಯೂ ಕೂಡ ಹೆಚ್ಚಿದೆ. ಆದುದರಿಂದ, ಇವುಗಳು ಯಾವುವು ಕೂಡ ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆದುಕೊಂಡ ಕಾರ್ಯಕ್ರಮಗಳಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಪ್ರಧಾನ ಮಂತ್ರಿಗಳು ತಂದಿರುವ ಈ 20 ಅಂಶಗಳ ಕಾರ್ಯಕ್ರಮಗಳು ಮೊದಲನೆಯ ಕಂತು ಎಂದು ಹೇಳಲಾಗಿದೆ. ಆದರೆ ಇನ್ನೂ ಇಂತಹ ಎಷ್ಟು ಕಂತುಗಳು ಇವೆಯೋ ಗೊತ್ತಿಲ್ಲ. ಮಾನ್ಯ ಸಚಿವರು ವಿವರವಾಗಿ ತಿಳಿಸಿದ್ದರೆ ನಾವು ಮಾತನಾಡುವ ಕೆಲಸ ತಪ್ಪುತ್ತಿತ್ತು.

ಆಗ ಉಪಾಧ್ಯಕ್ಷರು ಇಂಗ್ಲೀಷ್‌ನಲ್ಲಿ ಹೇಳಿದ್ದಕ್ಕೆ ಬೈರೇಗೌಡರು ನನಗೆ ಅದು ಅರ್ಥವಾಗುವುದಿಲ್ಲ. ಮಾನ್ಯ ವಿ.ಎಸ್. ಪಾಟೀಲರು ಇವೆಲ್ಲವೂ ರಷ್ಯಾ ದೇಶದ ಪಾಲಿಸಿ ಎಂದು ಹೇಳಿದರು. ಆದರೆ ನಾವು ಇರುವುದು ಭಾರತ ದೇಶದಲ್ಲಿ. ನಾನು ಅಪ್ಪಟ ಭಾರತೀಯ. ಭಾರತ ದೇಶದಲ್ಲಿ ಎಂಥಾ ಪರಿಸ್ಥಿತಿ ಇದೆ ಎಂದು ಹೇಳುವುದಕ್ಕೆ ಮಾತ್ರ ನಾನು ನಿಂತಿದ್ದೇನೆ. ಪ್ರಧಾನ ಮಂತ್ರಿಯವರು ಹಾಕಿಕೊಂಡಿರುವ 20 ಅಂಶಗಳ ಕಾರ್ಯಕ್ರಮವನ್ನು ಈಗಾಗಲೇ ಜಾರಿಗೆ ತರಲಾಗಿದೆ. ಆದರೆ ಇದನ್ನು ಹೊಸದಾಗಿ ಜಾರಿಗೆ ತರಬೇಕಾದ ಅವಶ್ಯಕತೆ ಏನೂ ಇರಲಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಈಗ ಕೆಲವು ಕಾಯಿದೆಗಳನ್ನು ತಂದಿದ್ದಾರೆ; ಸಂತೋಷ. ಆದರೆ ಇದೇ ಕಾಯಿದೆಯನ್ನು 3-4 ವರ್ಷಗಳ ಹಿಂದೆಯೇ ಏತಕ್ಕೆ

ತರಲಾಗಲಿಲ್ಲ ಎಂದು ನಾನು ಕೇಳುತ್ತೇನೆ. ಸಣ್ಣ ಆಮಿಷಗಳನ್ನು ತೋರಿಸಿ, ಜನ ಸಾಮಾನ್ಯರನ್ನು ಮೋಸ ಮಾಡಲು ಏತಕ್ಕೆ ಹೋಗುತ್ತಿದ್ದೀರಿ ಎಂದು ನಾನು ಇವತ್ತಿನ ದಿವಸ ಕೇಳಬೇಕಾಗುತ್ತದೆ. ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ, ಚುನಾಯಿತ ಸರ್ಕಾರಗಳನ್ನು ಬಲಾತ್ಕಾರದ ಮೂಲಕ ಮತ್ತು ಶಾಸಕರನ್ನು ರಾಜಿನಾಮೆ ಕೊಡಿಸುವುದಕ್ಕೆ ಕೆಲವರು ಹೊರಟಿದ್ದರು ಮತ್ತು ವಿಧಾನಸಭೆಗಳನ್ನು ಅಸ್ತಿತ್ವದಲ್ಲಿ ಇಲ್ಲದ ಹಾಗೆ ಮಾಡಲು ಹೊರಟಿದ್ದರು ಎಂದು ಹೇಳಿದ್ದಾರೆ. ಹೌದು ಕೆಲವು ಸಂದರ್ಭಗಳಲ್ಲಿ ಅವರು ಬಲಾತ್ಕಾರವಾಗಿ ರಾಜಿನಾಮೆ ಕೊಟ್ಟರೋ ಅಥವಾ ಸ್ವತಃ ರಾಜಿನಾಮೆ ಕೊಟ್ಟರೋ ಎಂಬುದನ್ನು ನಾವು ತಿಳಿದುಕೊಳ್ಳತಕ್ಕ ವಿಚಾರವಾಗಿದೆ. ಆದರೆ, ಈ ದೇಶದ ಚರಿತ್ರೆಯಲ್ಲಿ ಬರೆದಿರತಕ್ಕ ಒಂದು ವಿಚಾರ ಏನು ಇದೆ ಎಂದರೆ, ಇವತ್ತಿನ ದಿವಸ ಪ್ರಜಾಪ್ರಭುತ್ವದಲ್ಲಿ ಬಲಾತ್ಕಾರವಾಗಿ ಸರ್ಕಾರಗಳಿಗೆ ರಾಜಿನಾಮೆ ಕೊಡಿಸುವಂಥ ಕೆಲಸದಲ್ಲಿ ತೊಡಗಿದ್ದಾರೆ ಎಂದು ಕೆಲವರ ಮೇಲೆ, ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ. ಅವರೆ 1958ನೇ ಇಸವಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆಗ ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಅಸ್ತಿತ್ವದಲ್ಲಿ ಇತ್ತು. ಆಗ ಅಲ್ಲಿ ಇದ್ದಂಥ ಕಮ್ಯೂನಿಸ್ಟ್ ಸರ್ಕಾರವನ್ನು ಯಾರು ಉರುಳಿಸಿದ್ದು? ಈ ದೇಶದಲ್ಲಿರುವ ಆರ್.ಎಸ್.ಎಸ್. ಆಗಲೀ, ಜನಸಂಘವಾಗಲೀ ಅಥವಾ ಇತರ ಪಕ್ಷಗಳಾಗಲೀ ನಂಬೂದ್ರಿಪಾಡ್ ನಾಯಕತ್ವದ ಕಮ್ಯೂನಿಸ್ಟ್ ಸರ್ಕಾರವನ್ನು ಉರುಳಿಸಲಿಲ್ಲ. ಪ್ರಜಾಪ್ರಭುತ್ವ ಎಂದು ಕೂಗು ಕೂಗಿ, ಘೋಷಣೆ ಮಾಡಿದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರೇ ಅಲ್ಲಿ ವಿಮೋಚನಾ ಸಮರವನ್ನು ನಡೆಸಿ.....

**ಶ್ರೀ ಡಿ. ದೇವರಾಜ ಅರಸ್** :- ನಂಬೂದ್ರಿಪಾಡ್ ಸರ್ಕಾರವನ್ನು ಉರುಳಿಸಿದ್ದು ನಾಯರ್ ಸೊಸೈಟಿಯವರು.

**ಶ್ರೀ ಸಿ. ಬೈರೇಗೌಡ** :- ನಾಯರ್ ಸೊಸೈಟಿ ಹಿಂದೆ ಯಾರು ಇದ್ದರು ಎನ್ನುವುದೆಲ್ಲಾ ಚೆನ್ನಾಗಿ ಗೊತ್ತಿದೆ. ಇಂಥಾ ಒಂದು ಘೋರ ಕೃತ್ಯವನ್ನು ಮಾಡಿದ ಪ್ರಧಾನ ಮಂತ್ರಿಯವರು ವಿಧಾನಸಭೆಗಳನ್ನು ಡಿಸಾಲ್ವ್ ಮಾಡಿಸಲಿಕ್ಕೆ ಕೆಲವು ಜನರು ಪ್ರೇರೇಪಣೆ ಮಾಡುತ್ತಿದ್ದಾರೆ ಎಂದು ಹೇಳುವುದರಲ್ಲಿ ಯಾವ ಅರ್ಥ ಇದೆ ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಕೇರಳದಲ್ಲಿ ಆಗಿದ್ದ ಸರ್ಕಾರ ಬಂಡವಾಳ ಶಾಹಿಗಳಿಗೆ ರಕ್ಷಣೆ ಕೊಡಬೇಕೆಂದು ಏನು ಹೇಳಲಿಲ್ಲ. ಅಲ್ಲಿ ಜಾತಿ - ಕೋಮುವಾರುಗಳ ಗಲಭೆ ಪ್ರೇರಣೆಯಿಂದ ಯಾವುದೂ ನಡೆಯಲಿಲ್ಲ. ಅವರು ಪ್ರಗತಿಪರವಾದ ಕಾನೂನುಗಳನ್ನು ತಂದರು; ಭೂಸುಧಾರಣೆಯನ್ನು ಜಾರಿಗೆ ತಂದವರು ಅವರು. ವಿದ್ಯಾ ಸಂಸ್ಥೆಗಳಲ್ಲಿ ಹತೋಟಿ ಇರಬೇಕೆಂದು ಹೇಳಿದಾಗ, ಇಲ್ಲಸಲ್ಲದ ಹತೋಟಿ ತಂದು ಆ ಸರ್ಕಾರವನ್ನು ಕಿತ್ತು ಹಾಕಿದ ಜನ ಇವತ್ತಿನ ದಿವಸ ಪ್ರಜಾಪ್ರಭುತ್ವವನ್ನು ರಕ್ಷಿಸುತ್ತೇವೆ ಎನ್ನುವಂಥ ಸೋಗಿನ ಮೇಲೆ ತುರ್ತುಪರಿಸ್ಥಿತಿ ತಂದು, ಜನಗಳು ತಮ್ಮ ಕಷ್ಟ ಕಾರ್ಪಣ್ಯಗಳನ್ನು ಹೇಳುವುದಕ್ಕೂ ಕೂಡ ಅವಕಾಶ ಮಾಡಿಕೊಡದೆ ಇರುವಂಥ ಒಂದು ಪರಿಸ್ಥಿತಿಯನ್ನು ಈವತ್ತಿನ ದಿವಸ ಈ ದೇಶದಲ್ಲಿ ತಂದಿದ್ದಾರೆ.

ಇನ್ನು ರೀಆ್ಯಕ್ಷನರಿ ಅಫಿಸಿಯಲ್ಸ್ ಇದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆ ಅಫಿಸಿಯಲ್ಸ್ ಯಾರ ಕೈಕೆಳಗೆ ಇರುತ್ತಾರೆ? ಆಡಳಿತದಲ್ಲಿರುವ ಸರ್ಕಾರಗಳ ಕೈಕೆಳಗೇ ಇರುತ್ತಾರೆ. ಆಗ ಅವರನ್ನು ಬಲಿಹಾಕಲಿ, ಯಾರ ಕೈಯಲ್ಲಿ ಕೆಲಸ ಮಾಡಲಿಕ್ಕೆ ಆಗದೆ ಇರುತ್ತಾರೆ. ಅಯೋಗ್ಯವಾಗಿ

ಕೆಲಸ ಮಾಡುತ್ತಾರೆ. ಯಾರು ನೀತಿಯಲ್ಲಿ ಅನೀತಿಯುತವಾಗಿ ವರ್ತಿಸುತ್ತಾರೆ ಅಂಥವರನ್ನು ತಕ್ಷಣ ಶಿಕ್ಷೆಗೆ ಗುರಿಪಡಿಸುವ ಅಧಿಕಾರ ಆಡಳಿತ ಸರ್ಕಾರಕ್ಕೆ ಇದೆ. ಮಾಡಬೇಕಾದ್ದು ಸರ್ಕಾರ. ಆದರೆ, ಅದನ್ನು ಮಾಡದೆ ಗರೀಬಿ ಹಟಾವೋ ಎಂದು ಘೋಷಣೆ ಹಾಕುತ್ತಾ, ತಮ್ಮ ತಮ್ಮಗಳ ಗರೀಬಿ ಹಟಾವ್ ಮಾಡಿಕೊಳ್ಳುವ ಕೆಲಸದಲ್ಲಿ ತೊಡಗಿ, ಬೇರೆಯವರ ಅಪರಾಧ ಅಪಚಾರವನ್ನು ಕಂಡುಹಿಡಿಯಲಿಕ್ಕೆ ಹೋಗುತ್ತಿದ್ದಾರೆ ಎಂದರೆ ನನಗೆ ಅರ್ಥವಾಗುವುದಿಲ್ಲ. ಹಾಗಾದರೆ ಯಾರನ್ನು ಬೆಳೆಸುವುದಕ್ಕೆ ತುರ್ತು ಪರಿಸ್ಥಿತಿ ತಂದಿರುವುದು? ವೆಸ್ಟೆಡ್ ಇಂಟರೆಸ್ಟ್ ಮತ್ತು ಜನಸಾಮಾನ್ಯರ ಶೋಷಣೆ ಈ ಎರಡನ್ನೇ ಮೂಲವಾಗಿ ಇಟ್ಟುಕೊಂಡಿರುವವರು ಯಾರು ಇದ್ದಾರೆ. ಅವರನ್ನು ಇನ್ನೂ ಹೆಚ್ಚು ಮೇಲಟ್ಟಕ್ಕೆ ಬೆಳೆಸುವುದಕ್ಕೆ ಈ ಒಂದು ತುರ್ತು ಪರಿಸ್ಥಿತಿಯನ್ನು ತಂದಿದ್ದಾರೆ. ಆದುದರಿಂದ ಇದನ್ನು ವಿರೋಧಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

## ಅಧಿಕಾರಸ್ಥರ ಸ್ವೇಚ್ಛಾಪ್ರವೃತ್ತಿಯಿಂದ ತುರ್ತುಸ್ಥಿತಿ.
## ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ 5-2-1976

ರಾಷ್ಟ್ರದಲ್ಲಿ ತುರ್ತು ಸ್ಥಿತಿ ಘೋಷಣೆಯಾದಾಗ, ವಿಧಾನ ಸಭೆಯಲ್ಲಿ ರಾಜ್ಯಪಾಲರ ಭಾಷಣ ಅನುಮೋದಿಸುವ ವಿಚಾರದಲ್ಲಿ ಮಾತನಾಡಿದ ಪತ್ರಿಕಾ ಸ್ವಾತಂತ್ರ್ಯ ಇಲ್ಲದ್ದರಿಂದ ಹೊರಗಿನ ಪ್ರಪಂಚಕ್ಕೆ ಏನೂ ತಿಳಿಯುವುದಿಲ್ಲ. ಸತ್ತ ಸ್ವಾತಂತ್ರವೋ ಹರಣವಾಗಿದೆ ಎಂದು ಟೀಕಿಸಿದ್ದರು.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ರಾಜ್ಯಪಾಲರು ಈ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಅದಕ್ಕೆ ಅನುಗುಣವಾಗಿ ಈ ಸದನದ ಸದಸ್ಯರು ಅನುಮೋದನೆ ಮಾಡಿ ಈ ಸಭೆಯ ಒಪ್ಪಿಗೆಗಾಗಿ ಅದನ್ನು ಇವತ್ತು ನಮ್ಮ ಮುಂದೆ ಇಟ್ಟಿದ್ದಾರೆ. ರಾಜ್ಯಪಾಲರು ಮಾಡಿರತಕ್ಕ ಭಾಷಣದ ಮೊದಲನೆಯ ಪುಟದ ಕೆಲವು ವಾಕ್ಯಗಳನ್ನು ಇಲ್ಲಿ ನಾನು ಹೇಳಬೇಕೆಂದಿಚ್ಛಿಸುತ್ತೇನೆ. ಅದು ಈ ರೀತಿ ಇದೆ :-

"Last year, when my predecessor, Shri Mohanlal Sukhadia, addressed you, he expressed the hope that there would be a 'change for the better' during 1975. This has come about, chiefly due to the dynamic leadership provided by our Prime Minister in declaring a State of National emergency and announcing the twenty-point economic programme". ಇದು ಬಹುಶಃ ಭಾಷಣದ ಮುಖ್ಯ ಸಾರಾಂಶ. ಅವರ ಭಾಷಣದ ಎಲ್ಲ ಅಂಶಗಳೂ ಇದೊಂದು ವಾಕ್ಯದಲ್ಲಿ ಅಡಗಿದೆಯೆಂದು ಹೇಳಬಹುದು. ಇದರಲ್ಲಿ "change for the better" ಎಂಬುದಾಗಿ ಹೇಳಿದ್ದಾರೆ. ಇದು ನನಗೆ ಹೇಳುವುದಕ್ಕೆ ಶೋಚನೀಯವಾಗುತ್ತದೆ. ಅವರು "change for the worst" ಎಂಬುದಾಗಿ ಹೇಳಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈ ಭಾಷಣವನ್ನು ನಮ್ಮ ಮುಂದಿಟ್ಟು ಅನೇಕ ಉದಾಹರಣೆಗಳ ಮೂಲಕ ಕೆಲವು ಅಂಶಗಳನ್ನು ಹೇಳಿಕೊಂಡಿದ್ದಾರೆ. ಕಳೆದ ಅಧಿವೇಶನದಲ್ಲಿ ನಮ್ಮ ದೇಶದ ಪರಿಸ್ಥಿತಿ ಬಗ್ಗೆ ಅನೇಕ ರೀತಿಯಲ್ಲಿ ವಿರೋಧ ಮಾಡಿದ್ದೆವು. ಆಗ್ಗೆ ನಮ್ಮಲ್ಲಿ ಏನು ಅನುಮಾನ ಇತ್ತೋ ಹಾಗೂ ಏನೊಂದು ಶಂಕೆ

ಇತ್ತೋ ಅವನ್ನೆಲ್ಲಾ ಹೋದಸಾರಿಯೇ ವ್ಯಕ್ತಪಡಿಸಿದ್ದೇವೆ. ಆದರೆ ಅವುಗಳ ಬಗ್ಗೆ ಸರ್ಕಾರದವರು ಯಾವೊಂದು ಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಇವತ್ತೂ ಸಹ ಆ ಒಂದು ಶಂಕೆಯನ್ನು ಕಣ್ಣಾರೆ ನಾವು ಕಾಣುತ್ತಿದ್ದೇವೆ. ಅದನ್ನು ಇಡೀ ಕರ್ನಾಟಕ ಜನತೆ ಇವತ್ತೂ ಕೂಡ ಅನುಭವಿಸುತ್ತಿದ್ದಾರೆ. ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆಂದು ಹೇಳುತ್ತಿದ್ದಾರೆ. ಆ ರೀತಿಯಾಗಿ ನಾವು ಪ್ರಜಾಪ್ರಭುತ್ವದಲ್ಲಿ ಇರಬೇಕಾಗಿದ್ದರೆ........

ಶ್ರೀ ಎಚ್.ಟಿ. ಕೃಷ್ಣಪ್ಪ :- ನಮ್ಮ ಸುದೈವಕ್ಕೆ ರಾಜ್ಯಪಾಲರ ಭಾಷಣದಲ್ಲಿ ಪ್ರಜಾಪ್ರಭುತ್ವ ಎಂಬ ಹೆಸರನ್ನೇ ಹೇಳಿಲ್ಲ.

ಶ್ರೀ ಸಿ. ಬೈರೇಗೌಡ :- ಈ ಪ್ರಜಾಪ್ರಭುತ್ವದಲ್ಲಿ ನಾವು ಪ್ರಜೆಗಳ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿದ್ದೇವೆ. ನಾವು ಯಾವ ರೀತಿ ಕೆಲಸ ಮಾಡಬೇಕೆಂದರೆ, ನಮ್ಮ ದೇಶದಲ್ಲಿರತಕ್ಕ ಎಲ್ಲ ಜನರು ಮಾಡತಕ್ಕ ಕೆಲಸ ಕಾರ್ಯಗಳನ್ನು ನೋಡಿ ಅವರ ಕಲ್ಯಾಣಕ್ಕೆ ಯಾವ ರೀತಿ ದುಡಿಯಬೇಕೆಂಬುದನ್ನು ಇಲ್ಲಿ ಇರತಕ್ಕ 216 ಜನ ಪ್ರತಿನಿಧಿಗಳು ಮುಖ್ಯವಾಗಿ ಗಮನಿಸಬೇಕು. ಈ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದೇ ಪ್ರಜಾಪ್ರತಿನಿಧಿಗಳಾದ ನಮಗೆ ಇರತಕ್ಕ ಆದ್ಯ ಕರ್ತವ್ಯ. ಅದೇ ಪ್ರಜಾಪ್ರಭುತ್ವದಲ್ಲಿ ಮೊದಲನೆಯ ಅಧ್ಯಾಯ. ಇವತ್ತಿನ ದಿವಸ ನಡೆದಿರತಕ್ಕದ್ದು ಸರ್ಕಾರವನ್ನು ಯಾರಾದರೂ ಹೊಗಳಿದರೆ, ಅದು ದಪ್ಪ ದಪ್ಪ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಬರುತ್ತದೆ. ಆದರೆ ಸರ್ಕಾರದಲ್ಲಿರತಕ್ಕ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ನಾನು ನಿಜವಾಗಿ ಹೇಳುವುದಾದರೆ ಅಂತಹ ವಿಚಾರ ಪತ್ರಿಕೆಗಳಲ್ಲಿ ಬರುವುದೇ ಇಲ್ಲ, ಅದು ಇನ್ನೊಬ್ಬರ ಕಿವಿಗೂ ಸಹ ಬೀಳುವುದಿಲ್ಲ. ವಿಧಾನಸಭೆಯಲ್ಲಿ ಈಗ ನನ್ನಿಂದ ಭಾಷಣ ನಡೆದಿದೆಯೆಂದೂ ಸಹ ಪತ್ರಿಕೆಗಳಲ್ಲಿ ಬರುವುದಿಲ್ಲ. ನನ್ನ ಕ್ಷೇತ್ರದಲ್ಲಿ ಹೋಗಿ ಅಲ್ಲಿನ ಜನತೆಗೆ ಇಂತಹ ಭ್ರಷ್ಟಾಚಾರಗಳು ನಡೆಯುತ್ತಾ ಇವೆಯೆಂದು ಹೇಳಿದರೆ, ಈಗಿನ ಒಂದು ಸನ್ನಿವೇಶದಲ್ಲಿ ನಾನು ಸೆಂಟ್ರಲ್ ಜೈಲ್ ನೋಡಬೇಕಾಗುತ್ತದೆ. ಇದು ಪ್ರಜಾಪ್ರಭುತ್ವವೇ? ನಾಚಿಕೆಗೇಡು ಪ್ರಸಂಗ. ಇವರಿಗೆ ನಾಚಿಕೆಯಾಗುವುದಿಲ್ಲವೇ? ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ ಅನುಸರಿಸುವ ಕ್ರಮ ಇದಾಗಿದೆ. ಪ್ರಜಾಪ್ರಭುತ್ವದಲ್ಲಿ ಸ್ವೇಚ್ಛಾಚಾರದಿಂದ ನಡೆಯುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದಕ್ಕೂ ಕಾನೂನುಗಳಿವೆ. ಕಾನೂನುಗಳ ರೀತ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆ. ಇಂದು ಅಧಿಕಾರ ಗದ್ದುಗೆಯಲ್ಲಿರತಕ್ಕವರು ಸ್ವೇಚ್ಛಾಚಾರದಿಂದ ಕೆಲಸ ಮಾಡಿದ್ದರಿಂದ ವಿರೋಧ ಪಕ್ಷಗಳವರು ಪ್ರಜಾಪ್ರಭುತ್ವ ರೀತಿಯಲ್ಲಿ ಪ್ರಶ್ನಿಸಿದ್ದರಿಂದ ಎಮರ್ಜೆನ್ಸಿ ತರಲಾಗಿದೆ. ಈಗ ಇಷ್ಟೊಂದು ಅವ್ಯವಸ್ಥೆಗೆ ಬಂದಿರತಕ್ಕದ್ದಕ್ಕೆ ಕಾರಣ ಅಧಿಕಾರಗದ್ದುಗೆಯಲ್ಲಿರತಕ್ಕವರ ಸ್ವೇಚ್ಛಾವೃತ್ತಿಯೇ ಕಾರಣವೆಂದು ಹೇಳಬಹುದು. ವಿರೋಧ ಪಕ್ಷದವರ ಸ್ವೇಚ್ಛಾಚಾರದಿಂದೇನೂ ಅಲ್ಲ. ಯಾವುದೇ ಪಕ್ಷವಾಗಲೀ ಸ್ವೇಚ್ಛಾವೃತ್ತಿಯಿಂದ ನಡೆದಿದ್ದರೆ ಇವರು ನಡೆಸುತ್ತಿರುವ ಅಧಿಕಾರ ದುರುಪಯೋಗವೇ ಮುಖ್ಯ ಕಾರಣವೆಂದು ನಾನು ಹೇಳುತ್ತೇನೆ. ಅದಕ್ಕೆ ತಕ್ಕ ಕಾನೂನುಗಳಿದ್ದರೂ ಸಹ ಅದನ್ನು ಉಪಯೋಗಿಸುವುದರಲ್ಲಿ ಇವರು ವಿಫಲರಾಗಿದ್ದಾರೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ 27-28 ವರ್ಷಗಳ ಇತಿಹಾಸದಲ್ಲಿ ಇವರು ನಡೆಸಿರತಕ್ಕ ಆಡಳಿತ, ಇವರ ಒಂದು ಆರ್ಥಿಕ ನೀತಿ ಏನಿವೆಯೋ ಅದೆಲ್ಲವೂ ಸಂಪೂರ್ಣವಾಗಿ ವಿಫಲವಾಗಿದೆ. ನನ್ನ ಮಾನ್ಯ ಮಿತ್ರರು ಆ ಪಕ್ಷದವರು ಹೇಳಿದ ಹಾಗೆ ನಾವು ಸಾಧಿಸಬೇಕಾದಂಥ ಕೆಲಸಗಳು ಅನೇಕವಿದ್ದರೂ, ಅವು ಈಗ ಯಾವ ದಿಕ್ಕಿನಲ್ಲಿ ಹೋಗುತ್ತಿದೆಯೆಂದು ನೋಡಿದರೆ ಅದರ

ಒಂದು ಫಲ ನಿಷ್ಫಲವಾಗುವ ಸ್ಥಿತಿಗೆ ಬರುತ್ತಿದೆ. ಆರ್ಥಿಕ ವ್ಯವಸ್ಥೆಯೂ ಸಹ ಹದಗೆಡುತ್ತಿದೆ. ನನಗೆ ಈಗ ವೇಳೆ ಅಭಾವವಿರುವುದರಿಂದ ಅನೇಕ ವಿಚಾರಗಳನ್ನು ಈಗ ದೀರ್ಘವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯವಾಗಿ ಇವರ ಒಂದು ಆರ್ಥಿಕ ನೀತಿಯ ವಿಫಲತೆಯಿಂದ ಇಂತಹ ಒಂದು ತುರ್ತುಪರಿಸ್ಥಿತಿಗೆ ಬಂದಿದ್ದಾರೆಂದು ನಾನು ಮೊಟ್ಟಮೊದಲನೆಯಾಗಿ ಹೇಳಬೇಕಾಗಿದೆ. 1951-52ನೇ ಇಸವಿಯಲ್ಲಿ "ಪಂಚವಾರ್ಷಿಕ ಯೋಜನೆಯ ಯುಗ" ವೆಂಬ ಸಂಕೇತವನ್ನು ಇಟ್ಟುಕೊಂಡು ಆಡಳಿತ ನಡೆಸುತ್ತೇವೆಂದು ಹೇಳಿದಿರಿ. ಆ ಪಂಚವಾರ್ಷಿಕ ಯೋಜನೆ ಈಗ ಎಲ್ಲಿದೆ? ನಾನು ನೋಡಿದ ಹಾಗೆ ರಾಜ್ಯಪಾಲರ ಭಾಷಣದಲ್ಲಿ ಏನಾದರೂ 5ನೇ ಪಂಚವಾರ್ಷಿಕ ಯೋಜನೆಯ ವಿಚಾರವನ್ನು ಹೇಳಿದ್ದಾರೆಯೇ ಎಂದರೆ ಆ ವಿಷಯ ರಾಜ್ಯಪಾಲರ ಭಾಷಣದಲ್ಲಿ ಒಂದು ಕಡೆಯೂ ಇಲ್ಲ.

ಒಂದು ಮಾತನ್ನು ಮಾತ್ರ ಹೇಳಿದ್ದಾರೆ ಅದು ಏನೆಂದರೆ ಅನ್ಯುಯಲ್ ಪ್ಲಾನ್‌ನಲ್ಲಿ ಕಾಳಿ ನದಿಗೆ ಇಷ್ಟು ಬರುತ್ತದೆಂದು ಮಾತ್ರ ಹೇಳಿದ್ದಾರೆ. ಇವತ್ತಿನ ದಿವಸ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ಮಾಡುತ್ತಾರೆ ಎನ್ನುವುದನ್ನಾದರೂ ಕೂಡ ಹೇಳುವುದಕ್ಕೆ ಸರ್ಕಾರ ತಯಾರಾಗಿಲ್ಲ. ಹಿಂದೆ ಒಂದು ಮಾತನ್ನು ಹೇಳಿದ್ದರು, ಗರೀಬಿ ಹಟಾವೋ ಎಂದು. ಈಗ ಯಾವುದೂ ಇಲ್ಲ. ಆದರೆ ಇವತ್ತಿನ ದಿವಸ ನಾವು ಸರ್ವಾಧಿಕಾರದ ಪರಮಾಧಿಕಾರವನ್ನು ಕಾಣುತ್ತಿದ್ದೇವೆ. ಸರ್ಕಾರದ ಅಟಾರ್ನಿ ಜನರಲ್‌ರವರೊಬ್ಬರು ಸುಪ್ರೀಂಕೋರ್ಟಿನಲ್ಲಿ ಒಂದು ವಾದವನ್ನು ಮಂಡಿಸಿದ್ದಾರೆ. ಅದು ಬಹುಶಃ ಜನತೆಗೆ ಏನಾದರೂ ಗೊತ್ತಾದರೆ ಅಧಿಕಾರವನ್ನು ನಡೆಸತಕ್ಕಂಥವರ ಗತಿ ಏನಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈಗಿರತಕ್ಕಂಥ ತುರ್ತು ಪರಿಸ್ಥಿತಿಯಲ್ಲಿ ಯಾರೋ ಒಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ತನ್ನ ಸ್ವಂತ ವೈಯಕ್ತಿಕ ದ್ವೇಷದಿಂದ ಯಾರನ್ನಾದರೂ ಕೊಂದರೂ ಅದನ್ನು ಯಾವ ಕೋರ್ಟಿನಲ್ಲಾಗಲೀ ಪ್ರಶ್ನಿಸುವಂತಿಲ್ಲ. ನಮ್ಮ ಈ ದೇಶದ ಅಟಾರ್ನಿ ಜನರಲ್‌ರವರು ತಮ್ಮ ಈ ವಾದವನ್ನು ಸುಪ್ರೀಂ ಕೋರ್ಟಿನ ಮುಂದೆ ಮಂಡಿಸಿದ್ದಾರೆ. ಇದು ಸರ್ವಾಧಿಕಾರದ ಪರಮಾವಧಿ. ಇವತ್ತಿನ ದಿವಸ ಯಾರನ್ನು ಬೇಕಾದರೂ ಯಾವ ನಿಮಿಷದಲ್ಲಾದರೂ ಜೈಲಿಗೆ ಹಾಕಿ ಅವರ ಪ್ರಾಣವನ್ನು ತೆಗೆಯಬಹುದು. ವಿರೋಧ ಪಕ್ಷದವರನ್ನು ಒಂದೇ ಗುಂಡಿಯಲ್ಲಿ ಸಾಯಿಸುತ್ತಿರುವ ಬಗ್ಗೆ ಕೇಳಲೂ ವ್ಯವಧಾನವಿಲ್ಲದಂಥ ಪರಿಸ್ಥಿತಿಯನ್ನು ತಂದಿಟ್ಟಿದ್ದಾರೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಸಪ್ತ ಸ್ವಾತಂತ್ರ್ಯಗಳು ಮಾಯವಾಗಿವೆ, ಅದು ಎಲ್ಲಿದೆ? ಅದು ಸಂವಿಧಾನದ ಪುಸ್ತಕದಲ್ಲಿಯೂ ಇಲ್ಲವಾಗಿದೆ. ಅದನ್ನು ಯಾರಾದರೂ ಪ್ರಿಂಟ್ ಮಾಡಬೇಕಾಗಿದ್ದರೆ ಆ ಸಪ್ತ ಸ್ವಾತಂತ್ರ್ಯಗಳು ಮಾಯವಾಗಿವೆ. ಸ್ವಾತಂತ್ರ್ಯಕ್ಕೆ ಅತ್ಯಂತ ಅವಶ್ಯಕವಾಗಿ ಬೇಕಾಗಿರತಕ್ಕಂಥ ಸಪ್ತ ಸ್ವಾತಂತ್ರ್ಯಗಳಲ್ಲಿ ಒಂದೂ ಇಲ್ಲ. ಎಲ್ಲಾ ಸತ್ತು ಹೋಗಿವೆ. ಸ್ವಾತಂತ್ರ್ಯಕ್ಕೆ ಮೂಲಭೂತವಾಗಿರತಕ್ಕಂಥ ಹಕ್ಕುಗಳನ್ನು ತೆಗೆದು ಹಾಕಿದ್ದಾರೆ. ಸರ್ಕಾರದವರು ತಮ್ಮ ದಾರಿ ಎಷ್ಟು ಸುಗಮವಾಗಿ ನಡೆಯಬೇಕೋ ಅಷ್ಟು ಸುಗಮವಾಗಿ ನಡೆಯಲು ಅನುಕೂಲಕರವಾದ ನೀತಿಯನ್ನು ಅನುಸರಿಸಿ ಆಡಳಿತವನ್ನು ನಡೆಸುತ್ತಿದ್ದಾರೆ. ಇವತ್ತು ಸ್ವಾತಂತ್ರ್ಯವಿಲ್ಲ. ನಾವು ಮಾತನಾಡುವಾಗ ಹಾಗೆ ಇಲ್ಲ ಮತ್ತು ಶಾಂತಿಯುತವಾಗಿ ಒಂದು ಕಾರ್ಮಿಕ ವರ್ಗವೇ ಆಗಲೀ, ಶ್ರಮಜೀವಿ ವರ್ಗವೇ ಆಗಲೀ ಅಥವಾ ರೈತವರ್ಗವೇ ಆಗಲೀ ಒಂದೆಡೆ ಸೇರಿ ಸಭೆ ನಡೆಸುವ ಹಾಗೆ ಇಲ್ಲ. ಒಂದು ಕಡೆಯಿಂದ ಮತ್ತೊಂದು ಕಡೆಗೆ ನಾವು ಸಂಚಾರ ಮಾಡುವ ಹಾಗೆಯೂ ಇಲ್ಲ.

ಶ್ರೀ ಎಚ್.ಎಂ. ಚನ್ನಬಸಪ್ಪ :- ಯಾವುದನ್ನೂ ಕೂಡ ಲಿಮಿಟ್ ಬಿಟ್ಟು ಹೋಗಕೂಡದು. ಸರಿಯಾದ ರೀತಿಯಲ್ಲಿ ಸ್ವಾತಂತ್ರ್ಯವನ್ನು ಉಪಯೋಗ ಮಾಡಿಕೊಂಡರೆ ಅದರ ಉಪಯೋಗ ಸರಿಯಾಗಿರುತ್ತದೆಯೇ ವಿನಹಃ ಹತೋಟಿ ಬಿಟ್ಟು ಹೋದರೆ ಅದರಿಂದ ಬಹಳ ತೊಂದರೆಯಾಗುತ್ತದೆ. ಇದನ್ನು ತಾವು ಒಪ್ಪಬಹುದು.

ಶ್ರೀ ಎಚ್.ಟಿ. ಕೃಷ್ಣಪ್ಪ :- ಸ್ವಾಮಿ, ಮಾನ್ಯ ಚನ್ನಬಸಪ್ಪನವರು ಮಧ್ಯೆ ಪ್ರವೇಶ ಮಾಡಿ ಹೇಳಿದ್ದರಿಂದ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತಿನ ದಿವಸ ಮಾನ್ಯ ದೇವೇಗೌಡರಿಗೆ ಶಸ್ತ್ರಚಿಕಿತ್ಸೆಯಾಗಿದೆ. ಅವರನ್ನು ನೋಡಲು ಅವರ ಮಕ್ಕಳಿಗೇ ಅವಕಾಶ ಕೊಡುತ್ತಿಲ್ಲ. ಇದನ್ನು ತಾವು ತಮ್ಮ ಅಂತಃಕರಣದಿಂದ ಒಪ್ಪುತ್ತೀರಾ? ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳ ವ್ಯಾಖ್ಯಾನ ಏತಕ್ಕೆ ಬೇಕು? ವಾಸ್ತವವಾಗಿ ಕಾಣುತ್ತಿರತಕ್ಕಂಥ ವಿಷಯಗಳಿಗೆ?

ಶ್ರೀ ಸಿ. ಬೈರೇಗೌಡ :- ಇವತ್ತಿನ ದಿನ ರೈತರಿಗೇ ಆಗಲೀ, ಶ್ರಮಜೀವಿ ವರ್ಗಕ್ಕೇ ಆಗಲೀ ಒಂದು ಕಡೆ ಸೇರಿ ಅವರ ಮೇಲೆ ನಡೆಯುತ್ತಿರತಕ್ಕಂಥ ದಬ್ಬಾಳಿಕೆಯನ್ನು ಖಂಡಿಸಲಿಕ್ಕೆ ಸ್ವಾತಂತ್ರ್ಯವಿಲ್ಲ. ಈ ದೇಶದಲ್ಲಿ ಗುತ್ತೇದಾರಿ ಬಂಡವಾಳಶಾಹಿಗಳು ಸ್ವಾತಂತ್ರ್ಯರಾಗಿ ಸ್ವೇಚ್ಛೆಯಿಂದ ಇದ್ದಾರೆ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳದೇ ಹಾಗೇ ಬಿಟ್ಟಿದ್ದಾರೆ.

ಶ್ರೀ ಎಚ್.ಎಂ. ಚನ್ನಬಸಪ್ಪ :- ಸುಮ್ಮನೇ ಅಪಪ್ರಚಾರ ಮಾಡುವುದು ಸರಿಯಲ್ಲ. ಅವರು ಹೆಚ್ಚು ಇವರು ಕಡಮೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಅದರಲ್ಲಿ ಅರ್ಥವಿಲ್ಲ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ.

ಶ್ರೀ ಸಿ. ಬೈರೇಗೌಡ :- ಈಗ ತಾವು 8.1/3 ಪರ್ಸೆಂಟ್ ಬೋನಸ್ ಕೊಡುತ್ತಿದ್ದನ್ನು 4 ಪರ್ಸೆಂಟ್ ಗೆ ಇಳಿಸಿದ್ದೀರಿ. ಅದನ್ನು ಪ್ರಶ್ನೆ ಮಾಡುವ ಹಕ್ಕು ಇವತ್ತಿನ ದಿವಸ ಕಾರ್ಮಿಕ ವರ್ಗದವರಿಗೆ, ಶ್ರಮ ಜೀವಿ ವರ್ಗದವರಿಗೆ ಇಲ್ಲ. ಇವತ್ತಿನ ದಿವಸ ಅವರಿಗೆ ಕೊಡಬೇಕಾಗಿದ್ದಂಥ ಬೋನಸ್ ಏನಿದೆ ಈ ಆರ್ಡಿನೆನ್ಸ್ ಬಂದಾಗಿನಿಂದ ಈಚೆಗೆ ಸುಮಾರು 250 ಕೋಟಿ ರೂಪಾಯಿಗಳಷ್ಟು ಹಣ ಈ ದೇಶದಲ್ಲಿರತಕ್ಕಂಥ ಗುತ್ತೇದಾರಿ ಬಂಡವಾಳ ಶಾಹಿಗಳ ಕೈಯಲ್ಲಿ ಸೇರಿಹೋಗಿದೆ.

ಶ್ರೀ ಎಚ್.ಎಂ. ಚನ್ನಬಸಪ್ಪ :- ಕಾರ್ಮಿಕರಿಗೆ ಬೋನಸ್ ಕಡಮೆ ಮಾಡಿದ್ದರಿಂದ ಬಾಕಿ ಹಣ ಅವರಿಗೇ ಸೇರಿ ಹೋಯಿತು ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಸಿ. ಬೈರೇಗೌಡ :- ಅದು ಸರ್ಕಾರಕ್ಕೆ ಬಂದಿದ್ದರೆ ನಾನು ಸಂತೋಷಪಡುತ್ತಿದ್ದೆ.

ಶ್ರೀ ಎಚ್.ಎಂ. ಚನ್ನಬಸಪ್ಪ :- ಅವರಿಗೆ ಬೋನಸ್ ಕೊಡುವುದು ಉತ್ಪಾದನೆಯನ್ನು ಅವಲಂಬಿಸಿರುತ್ತದೆ. ಅದು ಉತ್ಪಾದನೆಗೆ ಅನುಗುಣವಾಗಿರಬೇಕು ಎನ್ನುವುದೇ ತತ್ವ. ನಷ್ಟ ಹೊಂದುತ್ತಿದ್ದರೂ ಅವರಿಗೆ ಹೆಚ್ಚಿನ ಬೋನಸ್ ಕೊಡಬೇಕು ಎನ್ನುವುದು ಸರಿಯಲ್ಲ. ಸರಿಯಾದ ವಿಷಯಗಳನ್ನು ಹೇಳಿದರೆ ನಾವು ಒಪ್ಪುತ್ತೇವೆ. ಸತ್ಯಾಂಶಗಳನ್ನು ಹೊರಗೆಡುವುದರಲ್ಲಿ ತಪ್ಪಿಲ್ಲ.

ಶ್ರೀ ಸಿ. ಬೈರೇಗೌಡ :- ಇವತ್ತಿನ ದಿವಸ ಸಕ್ಕರೆಯನ್ನು ಉತ್ಪಾದನೆ ಮಾಡತಕ್ಕಂಥವರು ಪಾಪ ಬಹಳ ಬಡವರೇ ಆಗಿರತಕ್ಕಂಥವರು, ಅವರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದೆ. ಸಿಗುತ್ತಿಲ್ಲ. ಇವತ್ತು ಕಂಟ್ರೋಲ್ ಬಟ್ಟೆಯ ಬೆಲೆಯನ್ನು ಜಾಸ್ತಿ ಮಾಡಿದ್ದೀರಿ ಮತ್ತು ಅದರ ಗುಣಮಟ್ಟವೂ ಕಡಮೆಯಾಗಿದೆ. ಅದನ್ನು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಒಂದು ಕಡೆ ಬೆಲೆಯನ್ನು ಹೆಚ್ಚು ಮಾಡಿ ಅವರಿಗೆ ಹೆಚ್ಚಿನ ಲಾಭವನ್ನು ಬರುವ ಹಾಗೆ ಮಾಡಿದ್ದೀರಿ. ಮತ್ತೊಂದು ಕಡೆ ಜನತೆಗೆ ಒಳ್ಳೆಯ ಗುಣಮಟ್ಟ ಹೊಂದಿರತಕ್ಕಂಥ ಬಟ್ಟೆ ಸಿಗುತ್ತಿಲ್ಲ. ಇದನ್ನು ಯಾರೂ ಕೇಳುವವರೇ ಇಲ್ಲ. ಇಷ್ಟೇ ಅಲ್ಲಾ ಇವತ್ತು ಉತ್ಪಾದನೆ ಕೂಡ ಹೆಚ್ಚಾಗಿದೆ ಎಂದು ಹೇಳುತ್ತಿದ್ದೀರಿ. ಆದರೆ ನಾನು ಒಂದೆರಡು ಉದಾಹರಣೆಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಸುಮಾರು 105 ಮಿನಿ ಸ್ಟೀಲ್ ಪ್ಲಾಂಟ್‌ಗಳನ್ನು ಮುಚ್ಚಿದ್ದಾರೆ. ಕಾರಣ ಉತ್ಪಾದನೆಯಾಗಿರತಕ್ಕಂಥ ವಸ್ತುಗಳು ಖರ್ಚಾಗುತ್ತಿಲ್ಲ.

ಇವೊತ್ತಿನ ದಿವಸ ನಾನು ಸೆಲ್ಫ್ ರಿಲೆಯನ್ಸ್ ಎಂಬ ಪದವನ್ನು ಕೇಳುತ್ತಿದ್ದೇನೆ. ಅದು ಏನೆಂದರೆ ನಮ್ಮ ದೇಶದಲ್ಲಿ ಎಲ್ಲ ತರಹೆ ಉತ್ಪಾದನೆಯನ್ನು ನಾವು ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ನಮ್ಮಲ್ಲಿರತಕ್ಕ ಬಂಡವಾಳ ಏನಾಗಿದೆ ಎಂದರೆ ಹೊರದೇಶದಿಂದ ಸಾಲವನ್ನು ತರದೇ ಇದ್ದರೆ ಕಾಳಿ ನದಿ ಯೋಜನೆಯಾಗಲಿ ಅಥವಾ ಯಾವ ಒಂದು ಯೋಜನೆಯೇ ಆಗಲೀ ನಮ್ಮ ಹಣದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ದೇಶದ ಪರಿಸ್ಥಿತಿ ಏನಾಗಿದೆ ಎಂದು ನೋಡಿದರೆ 1973ರಲ್ಲಿ ಹೊರದೇಶ ಬಂಡವಾಳ ಹೂಡಿದ್ದು 254 ಕೋಟಿ ರೂಪಾಯಿಗಳು ಮಾತ್ರ. ಆದರೆ ಈ ಒಂದು ತುರ್ತು ಪರಿಸ್ಥಿತಿ ಬಂದ ಮೇಲೆ ಏನಾಗಿದೆ ಎಂದರೆ ಒಂದು ಸಾವಿರ ಕೋಟಿ ರೂಪಾಯಿಗಳು ಹೊರದೇಶದಿಂದ ವಿದೇಶಿ ನೆರವು ಬಂದಿದೆ. ನಮ್ಮ ಸ್ಥಿತಿ ವಿದೇಶದ ನೆರವಿನ ಸಹಾಯದಿಂದ ಮಾತ್ರವಾಗಿದೆ. ಇಲ್ಲಿ ಸೆಲ್ಫ್ ರಿಲೆಯನ್ಸ್‌ಗೆ ಸ್ಥಾನವೇ ಇಲ್ಲ.

ಶ್ರೀ ಬಿ.ವಿ. ಕಕ್ಕಿಲ್ಲಾಯ:- ಈಗ ಕುದುರೆಮುಖ ಯೋಜನೆಗೆ ಬರುವ ಹಣ ಯಾರು ದಾನವಾಗಿ ಕೊಡುತ್ತಾ ಇಲ್ಲ.

ಶ್ರೀ ಸಿ. ಬೈರೇಗೌಡ:- ಇನ್ನು ರಾಜ್ಯಪಾಲರ ಭಾಷಣದಲ್ಲಿ ರೈಟ್ಸ್ ಎಂಬ ಬಗ್ಗೆ ಹೇಳಿದ್ದಾರೆ ಅದು ಬಹಳ ಸ್ವಾಗತಾರ್ಹ. ಇದನ್ನು ಹಿಂದೆ ಯಾರು ಮಾಡುತ್ತಿದ್ದರು? ಅದು ಬಹಳ ಮುಖ್ಯ, ಮೊದಲು ಬೊಂಬಾಯಿಗೆ ಹೋದರೆ ಶಿವಸೇನೆಯನ್ನು ಕಂಕುಳಲ್ಲಿ ಎತ್ತಿಕೊಳ್ಳುತ್ತಿದ್ದರು. ಅವರು ಯಾರು ಎಂದು ಕೇಳುತ್ತೇನೆ. ನೀವೆ ಅಲ್ಲವೆ?

ಶ್ರೀ ಎಚ್.ಎಂ. ಚನ್ನಬಸಪ್ಪ:- ರಾಜ್ಯಪಾಲರು ಭಾಷಣದಲ್ಲಿ ಹೇಳಿರುವುದು ಕರ್ನಾಟಕದ ವಿಷಯ. ಬೊಂಬಾಯಿಯಲ್ಲಿ ಏನು ನಡೆದಿದೆ ಎನ್ನುವುದನ್ನು ಇಲ್ಲಿ ಹೇಳಲಿಲ್ಲ. ಕರ್ನಾಟಕದ ಪರಿಸ್ಥಿತಿ ಹೇಳಿದ್ದಾರೆ. ಅದರಲ್ಲಿ ಏನಾದರೂ ತಪ್ಪಿದ್ದರೆ ತಾವು ಹೇಳಬೇಕು.

ಶ್ರೀ ಎಚ್.ಟಿ. ಕೃಷ್ಣಪ್ಪ:- ಮಾನ್ಯ ಚನ್ನಬಸಪ್ಪನವರ ವಾದ ಒಪ್ಪುವುದಾದರೆ ತುರ್ತು ಪರಿಸ್ಥಿತಿಗೆ ಅವಕಾಶ ಇಲ್ಲಿ ಇದೆಯೇ? ಅಥವಾ ಇಲ್ಲವೇ?

ಶ್ರೀ ಕೋಣಂದೂರು ಲಿಂಗಪ್ಪ :- ತಮ್ಮ ಕಡೆಯ ಮಾನ್ಯ ಸದಸ್ಯರು ಜಯಪ್ರಕಾಶ್ ನಾರಾಯಣ್ ಅವರ ಸುದ್ದಿಯನ್ನು ಏತಕ್ಕೆ ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ :- ಇನ್ನು ನಮ್ಮ ದೇಶಕ್ಕೆ ಸಂಬಂಧಪಟ್ಟ ಹಾಗೆ ಭೂಸುಧಾರಣೆ ವಿಷಯ ಹೇಳುವುದಾದರೆ, ಇದನ್ನು ಮೆಚ್ಚತಕ್ಕವರು ಇದು ಆಗಲೇಬೇಕು ಎಂದು ನಿರ್ದಿಷ್ಟವಾದ ಧೋರಣೆಯನ್ನು ಇಟ್ಟುಕೊಂಡಿರುವವರು ಬಹಳ ಜನ ಇದ್ದಾರೆ. ಆದರೆ ಇದು ಇವೊತ್ತಿನ ದಿವಸ ಏನಾಗಿದೆ ಎಂದರೆ ಅನೇಕ ಕಡೆಗಳಲ್ಲಿ ಭೂ ಮಾಲೀಕರು ಅಧಿಕಾರಿಗಳು ಶಾಮೀಲಾಗಿ ಜಮೀನಿಗೆ ಸಂಬಂಧಪಟ್ಟ ಡಿಕ್ಲರೇಷನ್ ಕೊಡುವ ಬಗ್ಗೆ ಕಾಲವನ್ನು ಮುಂದುವರಿಸಿದ್ದಾರೆ. ಇದಕ್ಕೆ ಕಾರಣ ಏನೆಂದರೆ ಅನೇಕ ಕಡೆ ಫಾರಂ ನಂ. 7 ಬರಬೇಕಾದ್ದು ಬರಲಿಲ್ಲ ಎಂದು ಹೇಳಿ ಕಾಲಾವಕಾಶವನ್ನು ಮುಂದುವರಿಸಿದ್ದಾರೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬಲಯುತ ಶಕ್ತಿಗಳು ಜನತೆಗಳ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ ಎನ್ನುವುದು ಸರ್ಕಾರಕ್ಕೆ ವೇದ್ಯವಾಗಿದೆ. ಈ ಡಿಕ್ಲರೇಷನ್ ಬಾರದೇ ಇರುವ ಕಡೆ ಹೋಗಿ, ನೀವು ಇಂತಹ ಕಾನೂನು ಪ್ರಕಾರ ಡಿಕ್ಲರೇಷನ್ ತೆಗೆದುಕೊಂಡು ಕೊಡಬೇಕು ಎಂದು ಹೇಳತಕ್ಕ ಪರಿಸ್ಥಿತಿ ಇರುವಾಗ, ಆ ಜನಗಳ ಸಂಘಟನೆ ಮಾಡತಕ್ಕವರು ಜೈಲಿಗೆ ಹೋಗುವ ಪರಿಸ್ಥಿತಿ ಬಂದಿದೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಭೂ ನ್ಯಾಯ ಮಂಡಲಿಗೆ ಅರ್ಜಿ ಹಾಕಿದ್ದ ರೈತರ ಪರವಾಗಿ ಬಂದ ಇಬ್ಬರು ಕಾರ್ಯಕರ್ತರನ್ನು ಭೂ ಮಾಲಿಕರ ಚಿತಾವಣೆಯಿಂದ ಘೋಷಣೆ ಕೂಗಿದರು ಎಂಬ ನೆಪದ ಮೇಲೆ ಡಿಐಆರ್‌ನಲ್ಲಿ ಅರೆಸ್ಟ್ ಮಾಡಿದ್ದಾರೆ, ಇದು ಯಾವ ನ್ಯಾಯ ಎಂದು ಕೇಳುತ್ತೇನೆ. ಬೇಕಾದರೆ ಇದರ ಬಗ್ಗೆ ನನ್ನ ಹತ್ತಿರ ಪೂರ್ತಿ ಮಾಹಿತಿ ಇದೆ.

ಶ್ರೀ ಕೋಣಂದೂರು ಲಿಂಗಪ್ಪ :- ನಮ್ಮ ಪಕ್ಷದ ಕಾರ್ಯಕರ್ತರ ಬಗ್ಗೆಯೂ ಹೀಗೆ ಆಗಿದೆ.

ಶ್ರೀ ಎಚ್.ಎಂ. ಚನ್ನಬಸಪ್ಪ :- ಅವರನ್ನು ಏತಕ್ಕೋಸ್ಕರ ಅರೆಸ್ಟ್ ಮಾಡಿದ್ದಾರೆ ಅದನ್ನು ವಿಚಾರ ಮಾಡದೆ ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ.

## ತುರ್ತು ಪರಿಸ್ಥಿತಿ ಚರ್ಚೆ - ಅರಸ್ ಸಮರ್ಥನೆ 7-2-76

ಶ್ರೀ ಡಿ. ದೇವರಾಜ ಅರಸ್ :- ಒಳ್ಳೆಯ ಸಂಪ್ರದಾಯವನ್ನು ಸೃಷ್ಟಿ ಮಾಡಬೇಕೆಂದು ಕುಳಿತವರನ್ನು ದೇಶದಲ್ಲಿ ಗೊಂದಲಗಳು, ಗಲಭೆಗಳು, ಅಶಾಂತಿ ಉಂಟಾಗಬಾರದು ಎಂಬ ದೃಷ್ಟಿಯಿಂದ ಅವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಇಟ್ಟಿದ್ದಾರೆ.

ಶ್ರೀ ಎಚ್.ಟಿ. ಕೃಷ್ಣಪ್ಪ :- ಇದೆಲ್ಲಾ ಸ್ವಲ್ಪ ದಿವಸ.

ಶ್ರೀ ಡಿ. ದೇವರಾಜ ಅರಸ್ :- ಅಲ್ಲಿ ಎಷ್ಟು ದಿವಸ ಇರಬೇಕೋ ಅಷ್ಟು ದಿವಸ ಇರಬೇಕು.

**Sri H.T. Krishnappa :-** Second war of independece will commence.

ಶ್ರೀ ಡಿ. ದೇವರಾಜ ಅರಸ್ :- ಯಾವುದೋ ಭವಿಷ್ಯ ಕೇಳಿಕೊಂಡು ಒಂದು ಸೆಕೆಂಡ್ ವಾರ್ ಎಂದರೆ ಗೊತ್ತಿಲ್ಲ. ಇಂಡಿಪೆಂಡೆನ್ಸ್ ಎಂದರೆ ಮೊದಲೇ ಗೊತ್ತಿಲ್ಲ. ಈ ಕೋರ್ಟಿನ ತೀರ್ಮಾನ let the law take its course ಇದು ಅವರಿಗೆ ಅರ್ಥವಾಗುವುದಿಲ್ಲ. ಜಯಪ್ರಕಾಶ್ ನಾರಾಯಣ ಅವರಿಗೂ ಕೂಡ ಫ್ರಸ್ಟ್ರೇಟೆಡ್ ಲೀಡರ್ ಎಂದು ಹೇಳುತ್ತಿದ್ದಾರೆ, ಇದು ಗಾಂಧೀಜಿ ಕಾಲದಿಂದ ಇದೆ, ಅವರು ಹೇಳಿದರು, ಇವರು ಕೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ :- ಅವರ ಬಗ್ಗೆ ಫ್ರಸ್ಟ್ರೇಟೆಡ್ ಲೀಡರ್ ಎಂದು ಹೇಳಬಾರದು. ಏತಕ್ಕೆಂದರೆ ಶ್ರೀಮತಿ ಇಂದಿರಾಗಾಂಧಿಯವರು ಅಧ್ಯಕ್ಷರಾಗಿ ಎಂದು ಅವರಿಗೆ ಹೇಳಿದಾಗ ಜಯಪ್ರಕಾಶ್ ನಾರಾಯಣ್ ಅವರು ಬೇಡ ಎಂದು ಹೇಳಿದರು.

ಶ್ರೀ ಡಿ. ದೇವರಾಜ ಅರಸ್ :- ವಿಶ್ವಾಮಿತ್ರರು ಮೇನಕೆಗೆ ಹೇಳಿದ ಹಾಗೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :- ಈ ಒಂದು ಒಳ್ಳೆಯ ಸನ್ನಿವೇಶಕ್ಕೆ ಹಾಗೆ ಹೇಳಿದರೆ ಇದರ ಮರ್ಮವೇನು?

ಶ್ರೀ ಡಿ. ದೇವರಾಜ ಅರಸ್ :- ಇಂತಹ ಮಾತುಗಳನ್ನು ಹೇಳುವುದಕ್ಕೆ ಪುಟ್ಟಸ್ವಾಮಯ್ಯ ಅವರಿಗೆ ಏನು ಆಪ್ಯಾಯಮಾನವೋ ಅವರಿಗೆ ಮೇನಕೆ ಅಂದ ಕಂಡರೇ ಎರಡು ಕಿವಿಗಳೂ ನೆಟ್ಟಗಾಗಿ ಬಿಡುತ್ತವೆ. ಎಷ್ಟೇ ಆಗಲಿ ಅವರು ರಸಿಕರಲ್ಲವೇ, ಅಲ್ಲಿ ಅವರು ಗಲಾಟೆಯನ್ನು ಏತಕ್ಕೆ ಹೆಚ್ಚಿಸಿದರು 20 ದಿವಸಗಳಲ್ಲಿ ಅ ಸುಪ್ರೀಂಕೋರ್ಟ್‌ನಲ್ಲಿ ಏನಾಗುತ್ತದೆ ಎಂಬುದನ್ನು ಏತಕ್ಕೆ ಕಾಯಬಾರದಾಗಿತ್ತು?

ಶ್ರೀ ಸಿ. ಬೈರೇಗೌಡ :- ಹಾಗಾದರೆ ಹಿಂದೆ ಇದ್ದಂತಹ ರಾಜ್ಯಾಂಗದ ಪ್ರಕಾರ ಸುಪ್ರೀಂಕೋರ್ಟ್ ತೀರ್ಮಾನ ಆಗುವವರೆಗೆ ಸರ್ಕಾರದವರು ಕಾಯಬಹುದಾಗಿತ್ತು ಆದರೆ ರಾಜ್ಯಾಂಗವನ್ನು ಅಷ್ಟು ಬೇಗನೆ ಕಾನೂನು ತಿದ್ದುಪಡಿ ಮಾಡುವ ಅವಸರ ಏನಿತ್ತು ಅವರಿಗೆ?

**Sri Devaraj Urs :-** Please understand the events in their proper timing and perspective. 20 ದಿವಸದಲ್ಲಿ ಅವರು ಏನೂ ಮಾಡಲಿಲ್ಲ.

ಶ್ರೀ ಸಿ. ಬೈರೇಗೌಡ :- ಸುಪ್ರೀಂ ಕೋರ್ಟಿನಲ್ಲಿ ಅಪೀಲ್ ಪೆಂಡಿಂಗ್ ಇರುವಾಗ ಈ ಕಾನೂನನ್ನು ಬದಲಾವಣೆ ಮಾಡಿದರು. ಕಾನೂನು ಪ್ರಕಾರ ಕೋರ್ಟಿನಲ್ಲಿ ಏನು ಆಗಬೇಕಿತ್ತೋ ಆದ ಮೇಲೆ ಈ ಕಾನೂನು ಬದಲಾವಣೆ ಮಾಡಿದ್ದರೆ ಸರಿಯಾಗಿ ಇರುತ್ತಿತ್ತು.

ಶ್ರೀ ಡಿ. ದೇವರಾಜ ಅರಸ್ :- ನೀವು ಹೇಳುವುದಕ್ಕೆ ಈ ತುರ್ತುಪರಿಸ್ಥಿತಿ ಹಿನ್ನೆಲೆಯಾಗಿ ಹೆಚ್ಚಾಗಿ ಬೆಳೆದು ಬಂದಿದೆ.

ಶ್ರೀ ಕೆ.ಎಚ್. ಹನುಮೇಗೌಡ :- ಶ್ರೀ ಚೆನ್ನಾರೆಡ್ಡಿ ಕೇಸ್‌ನಲ್ಲಿ ಅವರು ಸುಪ್ರೀಂಕೋರ್ಟ್‌ಗೆ ಅಪೀಲ್ ಹೋಗುತ್ತಿದ್ದರು. ಅವರನ್ನು ರಾಜಿನಾಮೆ ಕೊಟ್ಟು ಹೋಗಿ ಎಂದು ಪ್ರಧಾನಿಯವರು ಹೇಳಿದ್ದು ಏತಕ್ಕೆ?

ಶ್ರೀ ಡಿ. ದೇವರಾಜ ಅರಸ್ :- ಸುಪ್ರೀಂಕೋರ್ಟ್‌ನವರು 20 ದಿವಸ ಟೈಮ್ ಕೊಟ್ಟಿದ್ದಾರೆ, ನೀವು ಅಪೀಲ್ ಹೋಗಬಹುದು ಎಂದು ಹೇಳಿರಲಿಲ್ಲ. ಚೆನ್ನಾರೆಡ್ಡಿ ಕೇಸ್‌ನಲ್ಲಿ ಈಗಿನ ಕೇಸ್‌ನಲ್ಲಿ ಇದ್ದ ಹಾಗೆ 20 ದಿವಸ ಟೈಮ್ ಕೊಟ್ಟಿರಲಿಲ್ಲ. ಈ 20 ದಿವಸ ಕೊಟ್ಟಿದ್ದಾರೆಂದು ಗಂಭೀರವಾಗಿ ಮನೆಯಲ್ಲಿ ಇರದೆ ಸತ್ಯಾಗ್ರಹ ಮಾಡುತ್ತೇನೆ, ದೇಶದಲ್ಲಿ ಆಂದೋಲನ ಮಾಡುತ್ತೇವೆ ಎಂದು ಅವರು ಏತಕ್ಕೆ ಹೋದರು? ಅವರಿಗೆ ಸೌಜನ್ಯ ಇರಲಿಲ್ಲವೇ?

ಶ್ರೀ ಕೆ.ಎಚ್. ಹನುಮೇಗೌಡ :- ಒಳ್ಳೆಯ ಸಂಪ್ರದಾಯ ಬರಲಿ ಎಂದು ಅವರು ಹೋದರು.

ಶ್ರೀ ಡಿ. ದೇವರಾಜ ಅರಸ್ :- ಅವರಿಗೆ ಒಳ್ಳೆಯ ಸಂಪ್ರದಾಯ ಎಂಬುದರ ಬಗ್ಗೆ ಗೊತ್ತಿಲ್ಲ ಗೊತ್ತಾಗಲಿ.

ಶ್ರೀ ಕೆ.ಎಚ್. ಹನುಮೇಗೌಡ :- ಈ ತರಹ ಮಾತುಗಳನ್ನು ತಮ್ಮ ಬಾಯಿಂದ ಅನ್ನಬಾರದು ಒಳ್ಳೆಯ ಸಂಪ್ರದಾಯ ನಮಗೆ ಇಲ್ಲವೇ? ತಾವು ಮತ್ತು ತಮ್ಮ ಪಾರ್ಟಿಯವರು ದೇವಮಾನವರೇನು? ದೇಶದಲ್ಲಿ ಬೇಕಾದಷ್ಟು ಸ್ಲೋಗನ್‌ಗಳು ಏತಕ್ಕೆ ಬರುತ್ತವೆ? ನಾವು ಬರೇ ಮಾನವರು ನಮಗೆ ಗೊತ್ತಿಲ್ಲ. ತಮ್ಮ ಮುಖಂಡರುಗಳಿಗೆ ಏನಾದರೂ ಅದು ಗೊತ್ತಿದೆಯೇ? ಏತಕ್ಕೆ ಹಾಗೆ ಅನ್ನಬೇಕು?

ಶ್ರೀ ಡಿ. ದೇವರಾಜ ಅರಸ್ :- ನಾನು ಅನ್ನುವುದಲ್ಲ, ಇನ್ನೊಂದು ವಿಚಾರ ಏನೆಂದರೆ ಅವರು ಮಾಸ್ಕೋ ವಿಚಾರ ಹೇಳುತ್ತಿದ್ದರು. ಶ್ರೀಮಾನ್ ಲಿಂಗಪ್ಪನವರಿಗೆ ಬಾಂಗ್ಲಾದೇಶದ ಯುದ್ಧ ಕಾಲದಲ್ಲಿ 7ನೇ ದಳ ಬಂದದ್ದು ಜ್ಞಾಪಕ ಇರಬೇಕು. ಇಂಡಿಯನ್ ಓಶನ್‌ನಲ್ಲಿ ಬಂದಿತ್ತು.

ಶ್ರೀ ಕೋಣಂದೂರು ಲಿಂಗಪ್ಪ :- ಮಾಸ್ಕೋದವರು ಬಾಂಗ್ಲಾ ಯುದ್ಧ ಕಾಲದಲ್ಲೇ ಬಂದದ್ದು, ಅವರು ಏತಕ್ಕೆ ಬಂದದ್ದು?

ಶ್ರೀ ಡಿ. ದೇವರಾಜ ಅರಸ್ :- ಮಾಸ್ಕೋದವರು ಬಂದದ್ದು ನಮ್ಮಿಬ್ಬರಿಗೇ ಅಲ್ಲ ಇಡೀ ದೇಶಕ್ಕೆ ಗೊತ್ತಾಯಿತು. 7ನೇ ದಳ ಏತಕ್ಕೆ ಬಂದದ್ದು ಎಂದರೆ to give protection to Pakistan army. Do you want me to clarify that? ಇದು ಶ್ರೀಮಾನ್ ಲಿಂಗಪ್ಪನವರಿಗೆ ಗೊತ್ತಿಲ್ಲ. ಅವರಿಗೆ ಗೊತ್ತಿಲ್ಲ ಎಂದರೆ ನಾನು ಹೇಳುವುದನ್ನು ಕೇಳಬೇಕು. He thinks as if he knew the information that Seventh Fleet came here to give protection to India. ಶ್ರೀಮಾನ್ ಲಿಂಗಪ್ಪನವರಿಗೆ ಕಷ್ಟ ಏನಾಗಿದೆ ಎಂದರೆ ಜಯಪ್ರಕಾಶ್ ನಾರಾಯಣರು ಏನು ಹೇಳುತ್ತಾರೆ ಅದು ಒಂದೇ ಅವರಿಗೆ ಗೊತ್ತಿರುವುದು.

ಶ್ರೀ ಕೊಣಂದೂರು ಲಿಂಗಪ್ಪ : ತಮಗೆ ಹೇಗೆ ಇಂದಿರಾಗಾಂಧಿಯವರು ಹೇಳಿದ್ದು ಸತ್ಯವಾಗಿ ಕಾಣುತ್ತದೋ ಹಾಗೆ ನಮಗೆ ಜಯಪ್ರಕಾಶ್ ನಾರಾಯಣರು ಹೇಳಿದ್ದು ಸತ್ಯವಾಗಿ ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ್ :- ನಮಗೂ ನಿಮಗೂ ಏನು ವ್ಯತ್ಯಾಸವೆಂದರೆ ತಮಗೆ ಕನ್ ಫ್ಯೂಸ್ ಮೈಂಡ್ ಇರುವ ಮನುಷ್ಯನ ಜೊತೆಗೆ ಸೇರಿಬಿಟ್ಟು ಸಂದರ್ಭಕ್ಕೆ ಅನುಸಾರವಾಗಿ ಕರಿದು ಬಿಳಿದಾಗಿ, ಬಿಳಿದು ಕರಿದಾಗಿ ಕಾಣುತ್ತದೆ. ಅವರು 7ನೇ ಫ್ಲೀಟ್ ಪ್ರೊಟೆಕ್ಷನ್ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನು ಹೇಳಿದೆ ಮತ್ತು ಅದನ್ನು ಇಡೀ ದೇಶ ಒಪ್ಪಿದೆ. 7ನೇ ಫ್ಲೀಟ್ ಬಂದದ್ದು ಬೇರೆ ಕಾರಣಕ್ಕಾಗಿ, ರಷ್ಯಾ ನೇವಿ ಏತಕ್ಕೆ ಬಂತು ಎಂದರೆ ಏನು ಅನಾಹುತ ಮಾಡುತ್ತಾರೋ ಅದನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಬಂದಿದೆ. ಆದರೆ ನೀವು ಅದರ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು. ಈ ದೇಶದಲ್ಲಿ ಏನು ಮಾಡುವುದಕ್ಕೆ ಹೊರಟಿದ್ದಾರೆಂದರೆ they wanted to take full advantage of the political difficulties and economic difficiulties in our country. ಈವೊತ್ತಿನ ದಿವಸ ಯಾವುದೇ ಇತ್ತೀಚಿನ ಪ್ರಪಂಚದ ಇತಿಹಾಸದಲ್ಲಿ ಏನಾದರೂ ಆಂದೋಲನ ನಡೆಯಬೇಕಾದರೆ, ಅದರಲ್ಲೂ ಅಭಿವೃದ್ಧಿಯಾಗುತ್ತಾ ಇರತಕ್ಕಂಥ ದೇಶಗಳಲ್ಲಿ ಅಥವಾ ಅಂಡರ್ ಡೆವೆಲಪಡ್ ದೇಶಗಳಲ್ಲಿ ಎಲ್ಲಿ ನೋಡಿದರೂ ಹೊರ ದೇಶದ ಹಸ್ತಕ್ಷೇಪ ಇದ್ದೇ ಇರುತ್ತದೆ.

ಶ್ರೀ ಕೊಣಂದೂರು ಲಿಂಗಪ್ಪ :- ರಷ್ಯದ್ದೂ ಇದೆ, ಅಮೆರಿಕದ್ದೂ ಇದೆ.

ಶ್ರೀ ಡಿ. ದೇವರಾಜ ಅರಸ್ :- ರಷ್ಯದವರದ್ದು ಇರಬಹುದು, ಅಮೆರಿಕದ್ದು ಇರಬಹುದು, ನಾನು ಇಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಬೈರೇಗೌಡ :- ಯಾವ ಉದ್ದೇಶ ಏನು ಏನು?

ಶ್ರೀ ಡಿ. ದೇವರಾಜ ಅರಸ್ :- ನಿಮ್ಮ ಉದ್ದೇಶ ಚೈನದ್ದು.

ಶ್ರೀ ಸಿ. ಬೈರೇಗೌಡ :- ರಷ್ಯ ಬಂದರೆ ಅವರು ಇಲ್ಲಿರತಕ್ಕ ವಾಸ್ತವ ಪರಿಸ್ಥಿತಿಯನ್ನು ಅರಿತು ನಮಗೆ ಬೇಕಾದ ಅನುಕೂಲತೆ ಮಾಡುತ್ತಾರೆ. ಈವತ್ತಿನ ಪರಿಸ್ಥಿತಿ ಹಾಗಿಲ್ಲ. ತಾವು ಅಮೇರಿಕದ 7ನೇ ಫ್ಲೀಟ್ ಬಂತು ಎಂದು ಹೇಳಿದಿರಿ. ಈಗ ಅಮೆರಿಕದ ಮಲ್ಟಿ ನ್ಯಾಷನಲ್ ಕಾರ್ಪೋರೇಶನ್ ಗಳಿಗೆ ಎಲ್ಲೂ ಇಲ್ಲದೆ ಇರತಕ್ಕ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ್ :- ನೀವು ಮಲ್ಟಿ ನ್ಯಾಷನಲ್ ಕಾರ್ಪೋರೇಶನ್‌ಗಳ ವಿಚಾರವನ್ನು ಅರ್ಥಮಾಡಿಕೊಂಡಿಲ್ಲ. ಇಲ್ಲಿ ವೆಸ್ಟೆಡ್ ಇಂಟರೆಸ್ಟ್ಸ್ ಹ್ಯಾವ್ ಜಾಯಿನ್ಡ್ ಹ್ಯಾಂಡ್ಸ್ ವಿತ್ ಲ್ಯಾಂಡ್ ಲಾರ್ಡ್ಸ್, ಮಾರ್ಕಿಸ್ಟ್ ಲೀಡರ್, ಜನಸಂಘ ಅಂಡ್ ಆನಂದ ಮಾರ್ಗೀಸ್, ಇಂಡಿಯಾ ದೇಶದಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡು ಹೊರಟಿದ್ದೇವೋ ಅದನ್ನು ಮುರಿಯಬೇಕೆಂದು ಅವರ ಉದ್ದೇಶ. ಆದರೆ ಶ್ರೀ ಜಯಪ್ರಕಾಶ್ ನಾರಾಯಣರ ಆತ್ಮದಲ್ಲಿ ಮುರಿಯಬೇಕೆಂದು ಹೇಳುವಷ್ಟು ದೂರ ಹೋಗಿಲ್ಲ ; ಶ್ರೀ ಜಯಪ್ರಕಾಶ್ ನಾರಾಯಣರು ದೇಶದಲ್ಲಿ ಕ್ರಾಂತಿ ಮಾಡಬೇಕೆಂಬ ಮಹತ್ವಾಕಾಂಕ್ಷೆಗೆ ಒಳಗಾಗಿ ಆ ಉದ್ವೇಗದಲ್ಲಿ ಯಾರನ್ನಾದರೂ

ಕಟ್ಟಿಕೊಂಡು ಕ್ರಾಂತಿ ಮಾಡಬೇಕೆಂದಿತ್ತು. ಜಾತೀಯತೆ ತೆಗೆಯುತ್ತೇವೆಂದು ಹೇಳಿ ಜಾತಿವಾದಿಗಳನ್ನು ಕರೆದುಕೊಂಡು ಹೋದರು. ಬ್ಲಾಕ್ ಮಾರ್ಕೆಟರ್ಸ್ ಅನ್ನು ಹೊಡೆದುಹಾಕುತ್ತೇವೆಂದು ಹೇಳಿ ಅವರ ಮಕ್ಕಳನ್ನು ಕಟ್ಟಿಕೊಂಡು ಅವರ ಜೊತೆಗೆ ತಿರುಗಾಡಿದರು.

ಬಿಹಾರಿನ ಕಾಲೇಜು ವಿದ್ಯಾರ್ಥಿಗಳಿಗೆ ಒಂದು ವರ್ಷ ವಿರಾಮ ತೆಗೆದುಕೊಂಡು ಚಳವಳಿ ಮಾಡಿ ಎಂದು ಹೇಳಿದರು. ನಿನ್ನೆ ಶ್ರೀಮಾನ್ ಹೆಗಡೆಯವರು ಅದರ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಆದರೆ ಜಯಪ್ರಕಾಶ್ ನಾರಾಯಣರ ಮಾತನ್ನು ಜನ ಕೇಳಲಿಲ್ಲ. ಅಲ್ಲಿ ಏತಕ್ಕೆ ಹಾಗಾಯಿತೆಂದರೆ ಅಪ್ಪರ್ ಕ್ಲಾಸಸ್ಸಿಗೆ ಸೇರಿದಂತಹ ವಿದ್ಯಾರ್ಥಿಗಳು ಜಯಪ್ರಕಾಶ್ ನಾರಾಯಣ್‌ಕಿ ಜೈ ಎಂದು ಹೊರಟರು. ಅಲ್ಲಿ ಬಡ ಜನ, ಹರಿಜನರ ಮಕ್ಕಳು, ಗಿರಿಜನರ ಮಕ್ಕಳು ಓದುತ್ತಿದ್ದರು. ಆ ವಿದ್ಯಾರ್ಥಿಗಳು ಅವರಿಗೆ ತಿಳಿವಳಿಕೆ ಹೇಳಿದರು "ನಿಮ್ಮ ತಂದೆ ತಾಯಿಗಳಿಗೆ ಸಾಕಷ್ಟು ಹಣ ಇದೆ, ಆಸ್ತಿ ಇದೆ ನಿಮಗೆ ಒಂದು ವರ್ಷ ಹೋದರೂ ಚಿಂತೆ ಇಲ್ಲ, ಎರಡು ವರ್ಷ ಹೋದರೂ ಚಿಂತೆ ಇಲ್ಲ; ನಿಮಗೆ ಅನ್ನ ಹಾಕುತ್ತಾರೆ. ನಾವು ವಿದ್ಯಾವಂತರು ಆಗದಿದ್ದರೆ ನಮಗೆ ಯಾರು ಅನ್ನ ಹಾಕುತ್ತಾರೆ? ನೀವೇ ಯೋಚನೆ ಮಾಡಿ ನೀವು ಹೋಗಬಹುದು ನಾವು ಬರುವುದಿಲ್ಲ" ಎಂದು. ಶ್ರೀಮಂತರ ಮಕ್ಕಳು ಹೋದರು ಬಡವರ ಮಕ್ಕಳು ಚಳವಳಿಗೆ ಹೋಗಲಿಲ್ಲ. ಆಗ ಒಬ್ಬ ಬಡ ಹುಡುಗನನ್ನು ಕೂಡ ಕೊಲೆ ಮಾಡಿದರು. ಈ ವಿಚಾರ ಹೇಳುವುದಕ್ಕೆ ಒಂದು ದಿವಸವಾದರೂ ಸಾಲುವುದಿಲ್ಲ. ಆಂದೋಲನ ಜಾತಿವಾದಿಗಳ ಮುಖೇನ, ಬ್ಲಾಕ್ ಮಾರ್ಕೆಟೀರ್ಸ್ ಮುಖೇನ ನಡೆಯಿತು ಎಂಬ ಮಾತನ್ನು ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ಕರ್ನಾಟಕದಲ್ಲೂ ಕೂಡ ಜಯಪ್ರಕಾಶ್ ನಾರಾಯಣರು ಬಂದಾಗ ಅವರ ಜೊತೆಗೆ ಬಡವರು ಕೆಲವರು ಇದ್ದಿರಬಹುದು. ಅವರು ಹೋದ ಕಡೆ ಬ್ಲಾಕ್ ಮಾರ್ಕೆಟರ್ಸ್ ಹೊರ್ಡ್ಸ್, ಪ್ರಾಫಿಟೀಯರ್ಸ್? ಅವರ ಹಿಂದುಗಡೆ ಬರುತ್ತಿದ್ದರು. ಅಂಥವರನ್ನು ನೋಡಿ ಶ್ರೀಮಾನ್ ಲಿಂಗಪ್ಪನಂಥವರಿಗೆ ಅಸಹ್ಯವಾಯಿತು.

**ಶ್ರೀ ಕೋಣಂದೂರು ಲಿಂಗಪ್ಪ** :- ಅಂಥ ಚಳವಳಿ ತಾನೇ ತಾನಾಗಿ ಸತ್ತು ಹೋಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಎಮರ್ಜೆನ್ಸಿ ಕಾರಣ ನಮ್ಮಲ್ಲಿ ಅಶಿಸ್ತು ಇದ್ದುದು ಎಂದು ಹೇಳಿದರು. ಅವರ ಪಾರ್ಟಿ ಅಶಿಸ್ತಿನಿಂದ ಹುಟ್ಟಿತ್ತು, ಅಶಿಸ್ತಿನಿಂದ ಬೆಳೆಯಿತು, ಅವರಲ್ಲಿ ಶಿಸ್ತು ಮೂಡಿಸಬೇಕಾಗಿದೆ. ಇನ್ನು ಯಾರಿಗೂ ಶಿಸ್ತು ಕಲಿಸಬೇಕಾಗಿಲ್ಲ.

**ಶ್ರೀ ಡಿ. ದೇವರಾಜ ಅರಸ್** :- ನಿಮಗೆ ಹೆದರಿಕೊಂಡು ಅದನ್ನು ಬಿಡುವುದಿಲ್ಲ.

**ಶ್ರೀ ಕೋಣಂದೂರು ಲಿಂಗಪ್ಪ** :- ತಾನೇ ತಾನಾಗಿ ಸರ್ಕಾರ ಉರುಳಿ ಹೋಗುತ್ತದೆ.

**ಶ್ರೀ ಡಿ. ದೇವರಾಜ ಅರಸ್** :- ನಿಮ್ಮಂಥ ಕೆಲವೇ ಜನ ಸೇರಿಕೊಂಡು ಸರ್ಕಾರವನ್ನು ಉರುಳಿಸುವುದಕ್ಕೆ ಸಾಧ್ಯವೇ?

**ಶ್ರೀ ಕೋಣಂದೂರು ಲಿಂಗಪ್ಪ** :- ನಿಮ್ಮಲ್ಲಿ ಅಶಿಸ್ತಿನ ಜನ ತುಂಬಿರುವುದರಿಂದ ನೀವು ನೀವಾಗಿ ಉರುಳಿಕೊಳ್ಳುತ್ತೀರಿ. ಎಮರ್ಜೆನ್ಸಿ ಏತಕ್ಕೆ ತಂದಿರಿ?

ಶ್ರೀ ಡಿ. ದೇವರಾಜ ಅರಸ್ :- ನಿಮ್ಮಂಥವರನ್ನು ಹತೋಟಿಯಲ್ಲಿಡುವುದಕ್ಕೆ ಬ್ಲಾಕ್ ಮಾರ್ಕೆಟರ್ಸ್‌ನ್ನು ಹತೋಟಿಯಲ್ಲಿಡುವುದಕ್ಕೆ, ರಾಜಕೀಯದಲ್ಲಿ ಯಾರು ಹಿಂಸಾ ಮಾರ್ಗದಲ್ಲಿ ಹೊರಟಿದ್ದಾರೋ ಅಂತಹವರನ್ನು ಹತೋಟಿಯಲ್ಲಿಡುವುದಕ್ಕೆ. ನಿಮಗೆ ನಾನು ಇದನ್ನೆಲ್ಲ ವಿವರಿಸುವುದಕ್ಕೆ ಮೂರು ದಿವಸ ಆಗಬಹುದು. ಒಬ್ಬ ವ್ಯಕ್ತಿಯನ್ನು ಕೊಲೆ ಮಾಡುವುದಕ್ಕೆ ಎಷ್ಟು ದಿವಸ ಬೇಕು? ಒಂದು ಸೆಕೆಂಡಿನಲ್ಲಿ ಮಾಡಬಹುದು. ಅದಕ್ಕೆ ದೊಡ್ಡ ಗುಂಪು ಬೇಕೆ? ಹೀಗೆ ಹಿಂಸೆ ಮಾಡಿ ಕೊಲೆ ಮಾಡಲು ಬಿಡುವುದಕ್ಕಾಗುತ್ತದೆಯೇ? ಬೇರೆಯವರನ್ನು ಪ್ರಚೋದನೆ ಮಾಡಿ ಕೊಲೆ ಮಾಡಲು ಬಿಡುವುದಕ್ಕೆ ಆಗುತ್ತದೆಯೇ?

ಶ್ರೀ ಕೋಣಂದೂರು ಲಿಂಗಪ್ಪ :- ಇದಕ್ಕೆಲ್ಲ ಕಾನೂನು ಪ್ರತ್ಯೇಕವಾಗಿ ಇಲ್ಲವೆ?

ಶ್ರೀ ಡಿ. ದೇವರಾಜ ಅರಸ್ :- ನೀವು ಸತ್ತ ಮೇಲೆ ಏನು ಮಾಡಲಿಕ್ಕೆ ಕಾನೂನು ಇದೆ? ಮೊದಲು ದೇಶಕ್ಕೆ ತೊಂದರೆ ಕೊಡತಕ್ಕವರನ್ನು ಹತೋಟಿಯಲ್ಲಿಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ :- ಅಪರಾಧವನ್ನು ಮಾಡಿದವರು ಶಿಕ್ಷೆಗೆ ಅರ್ಹರು.

ಶ್ರೀ ಡಿ. ದೇವರಾಜ ಅರಸ್ :- ಯಾರು ಚಿತಾವಣೆ ಮಾಡುತ್ತಾರೆ, ಯಾರು ಸ್ಟೇಟನ್ನು ಬುಡಮೇಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ, ಯಾರು ಎಸ್ಟಾಬ್ಲಿಷ್‌ಡ್ ಗವರ್ನಮೆಂಟ್ ಅಕಾರ್ಡಿಂಗ್ ಟು ದಿ ಕಾನ್‌ಸ್ಟಿಟ್ಯೂಶನನ್ನು ಉರುಳಿಸುವುದಕ್ಕೆ ಹೋಗುತ್ತಾರೆ, ಅದಕ್ಕೆ ಯಾರು ಪಿತೂರಿ ಮಾಡುತ್ತಾರೆ, ಸನ್ನಾಹ ಮಾಡುತ್ತಾರೆ ಹಿಂಸಾ ಮಾರ್ಗಕ್ಕೆ ಯಾರು ಪ್ರಚೋದನೆ ಮಾಡುತ್ತಾರೆ, ಅಂಥವರನ್ನೆಲ್ಲ ಹತೋಟಿಯಲ್ಲಿಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ :- ಡಿ.ಎಂ.ಕೆ. ಯನ್ನು ಉರುಳಿಸಿದಿರಿ. ಅದರ ಆಯುಷ್ಯ ಇದ್ದುದು ಒಂದು ತಿಂಗಳು.

ಶ್ರೀ ಅರಸ್ :- ಅವರು ಒಂದು ತಿಂಗಳು ಇದ್ದಿದ್ದರೆ ಏನು ಮಾಡುತ್ತಿದ್ದರು?

ಶ್ರೀ ಎಫ್.ಕೆ. ಪಾಟೀಲ್ :- ಸರ್ಕಾರ ಹೋಗಿಲ್ಲ, ಪಾರ್ಟಿ ಬದಲು ಆಯಿತು.

ಶ್ರೀ ಡಿ. ದೇವರಾಜ ಅರಸ್ :- ಎಮರ್ಜನ್ಸಿ ತಂದಿರುವುದಕ್ಕೆ ಕಾರಣ ಪಕ್ಷಗಳು ಅಂಥ ಮಾರ್ಗದಲ್ಲಿ ಹೊರಟಿರುವುದರಿಂದ, ಅದರಿಂದ ಅಪಾಯ ದೇಶಕ್ಕೆ ಇದ್ದುದರಿಂದ ಹೊರಗಡೆಯವರು ಚಿತಾವಣೆ ಮಾಡುತ್ತಾರೆ ಎಂದು ನಮಗೆ ಕಂಡು ಬಂದಿರುವುದರಿಂದ, ಬೇರೆ ಬೇರೆ ರಾಜ್ಯಗಳಲ್ಲಿ ಸ್ಥಿರತೆ ಇರುವುದನ್ನು ಅಸ್ತಿರತೆ ಮಾಡಿರುವುದು ನೋಡಿದ್ದೇವೆ. ಇಕನಾಮಿಕ್ ಫೀಲ್ಡ್ ನಲ್ಲಿ ಹೋರ್ಡಿಂಗ್ ಆಗುತ್ತಿದೆ ಅಲ್ಲಿ ಸ್ಟೆಬಿಲಿಟಿ ಉಳಿಯುವುದು ಕಷ್ಟ.

ಈ ಕಾರಣಗಳಿಂದ ತುರ್ತುಪರಿಸ್ಥಿತಿಯನ್ನು ಜಾರಿಗೆ ತರದೇ ಹೋಗಿದ್ದರೆ ದೇಶಕ್ಕೇ ಅನಾಹುತವಾಗುತ್ತಿತ್ತು. ಹೊರಗಡೆ ದೇಶದಲ್ಲಿ ಏನು ಮಾತು ಬಂತು ಎಂದರೆ ಇಂಡಿಯಾ ದೇಶ ಎಂದರೆ "It looked as if it was functioning Anarchy" ಎಂದು ಹೇಳಿದರು. ಅರಾಜಕತೆ

ತುಂಬಿ ತುಳುಕಾಡುತ್ತಿದೆ ಎಂದು ಹೇಳಿದರು. ಆದ್ದರಿಂದ ಇದಕ್ಕೆ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬಂತು. ಇಲ್ಲದೆ ಇದ್ದರೆ ಅನಾಹುತವಾಗುತ್ತಿತ್ತು. ದೇವರಾಜ್ ಅರಸ್ ಮುಖ್ಯಮಂತ್ರಿಯಾಗಿ ಇರುವುದು ಬಿಡುವುದು ಮುಖ್ಯವಲ್ಲ. ಪ್ರಧಾನಮಂತ್ರಿಯಾಗಿ ಶ್ರೀಮತಿ ಇಂದಿರಾಗಾಂಧಿಯವರು ಇರುವುದು ಬಿಡುವುದು ಮುಖ್ಯವಲ್ಲ. ಇದರಲ್ಲಿ ಅನಾಹುತ ಯಾರಿಗೆ ಆಗುತ್ತದೆ ಎಂಬುದು ಮುಖ್ಯ. ಇದರಲ್ಲಿ ರಾಜಕೀಯ ಮುಖಂಡರ ಜೀವವನ್ನು ಹೊಡೆದುಹಾಕುತ್ತಾರೆ ಎನ್ನುವುದಕ್ಕಿಂತ ಮುಖ್ಯವಾದ ನನ್ನ ಪಕ್ಷದ ಧ್ಯೇಯಗಳಿಗಾಗಿ ನಾನು ನಿಂತಿದ್ದೇನೆ, ನಮ್ಮ ಪಕ್ಷದ ಧೋರಣೆ ಏನು ಎಂದರೆ ಈ ದೇಶದಲ್ಲಿ 40 ಪರ್ಸೆಂಟ್ ಜನರು ಪಾವರ್ಟಿ ಕೆಳಗಡೆ ಇದ್ದಾರೆ ಆ ಬಡ ಜನಗಳಿಗೋಸ್ಕರ ಕೆಲವು ಕಾರ್ಯಕ್ರಮಗಳನ್ನು ನಾವು ಹಾಕಿದ್ದೇವೆ. ಆ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು ಎನ್ನತಕ್ಕಂಥಾ ಒಂದು ವಿಚಾರ ಈ ದೇಶದಲ್ಲಿ ಉಂಟಾಗಿದೆ. ಈ 20 ಅಂಶಗಳ ಕಾರ್ಯಕ್ರಮಗಳನ್ನು ಬಹು ಜನರು ಒಪ್ಪಿದ್ದಾರೆ.

## ಪಾರ್ಲಿಮೆಂಟರಿ ಮಸೂದೆಗೆ ವಿರೋಧ - 9-2-76

ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ನಮ್ಮ ಪಾರ್ಲಿಮೆಂಟ್ ಅಫೇರ್ಸ್ ಮಂತ್ರಿಯವರು ತಮ್ಮ ಮಸೂದೆಯನ್ನು ಮಂಡಿಸಿದ್ದಾರೆ. ಇದನ್ನು ನಾನು ಅತ್ಯಂತ ವಿಷಾದದಿಂದ ವಿರೋಧಿಸಬೇಕಾಗಿದೆ. ಒಂದಾನೊಂದು ಕಾಲದಲ್ಲಿ ಉತ್ತಮವಾಗಿ ಪಾರ್ಲಿಮೆಂಟೇರಿಯನ್ ಆಗಿದ್ದಂತರವರು, ವಿರೋಧ ಪಕ್ಷದಲ್ಲಿ ಇದ್ದುಕೊಂಡು ಸಕ್ರಿಯವಾದ ಕೆಲಸವನ್ನು ಮಾಡಿರತಕ್ಕಂಥ ಅವರು ಆ ಜಾಗ ಬದಲಾವಣೆ ಆದ ಕ್ಷಣ ಅವರ ಮನಸ್ಸು ಮತ್ತು ಆಲೋಚನೆ ಬದಲಾವಣೆ ಆಗಿದೆ ಎನ್ನುವುದು ಇವತ್ತಿನ ದಿವಸ ಶ್ರೀಮಾನ್ ಕೃಷ್ಣ ಅವರ ಮುಖ ನೋಡಿದರೆ ಗೊತ್ತಾಗುತ್ತದೆ. ಅವರೂ ಕೂಡ ಈ ಮಸೂದೆಯನ್ನು ನಾನು ಮಂಡಿಸಬೇಕಾದ ದುರ್ಗತಿ ನನಗೆ ಒದಗಿದೆ, ಈ ದುರ್ಗತಿಯಲ್ಲಿ ಕೆಲಸ ಮಾಡಬೇಕಾಗಿ ಬಂದಿದೆ ಎಂದು ಬಹುಶಃ ಅವರು ಆಲೋಚನೆ ಮಾಡುತ್ತಾ ಇರಬಹುದೆಂದು ನಾನು ಭಾವಿಸುತ್ತೇನೆ. ಈ ಒಂದು ಆತ್ಮಘಾತುಕತನ ಕೆಲಸವನ್ನು ಸರ್ಕಾರದವರು ಇವತ್ತು ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ಮತ್ತೊಂದು ಸಾರಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇದು ನೂರಕ್ಕೆ ನೂರರಷ್ಟು ಆತ್ಮಘಾತುಕವಾಗಿದೆ. ಇದಕ್ಕೆ ಕಾರಣವೇನೆಂಬುದನ್ನು ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಯಾರಾದರೂ ಕೂಡ ಈ ವಿಧಾನಸಭೆ ಅಥವಾ ಈ ದೇಶದ ಪಾರ್ಲಿಮೆಂಟ್ ಈವರೆಗೆ ಕೆಲಸ ಮಾಡಿಕೊಂಡು ಬಂದಿರತಕ್ಕ ರೀತಿಯನ್ನು ಸಿಂಹಾವಲೋಕನ ಮಾಡುವುದಾದರೆ ಸರ್ಕಾರದ ಮನಸ್ಸಿನಲ್ಲಿ ಯಾವ ರೀತಿ ಭಯಭೀತಿ ಹೊಂದಿದೆಯೋ ಈ ಮಸೂದೆಯನ್ನು ತರಲು ತನ್ನ ಅಂತಹ ಭಯಭೀತಿ ಹೊಂದಬೇಕಾದರ ನಿದರ್ಶನ ಒಂದಾದರೂ ಕೂಡ ಇಲ್ಲವೇ ಇಲ್ಲ. ನಮ್ಮ ವಿಧಾನಸಭೆಯ ನಡವಳಿಕೆಯನ್ನು ಉದಾಹರಿಸುವುದಾದರೆ ಅನೇಕ ವಿಷಯಗಳನ್ನು ನಾವಿಲ್ಲಿ ಪ್ರಸ್ತಾಪ ಮಾಡಿದ್ದೇವೆ. ಪ್ರಸ್ತಾಪ ಮಾಡಬೇಕಾಗಿದ್ದರೂ ಸಹ ಪೂರ್ವಭಾವಿಯಾಗಿ ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆಯಬೇಕಾದ್ದು ಇದೆ. ಅದಕ್ಕಿಂತ ಮುಖ್ಯವಾಗಿ ಇಲ್ಲಿ ಪ್ರಸ್ತಾಪ ಮಾಡಿದಂತ ವಿಷಯಗಳು,

ನಮ್ಮ ಕರ್ನಾಟಕ ಜನತೆಗೆ ಹಾಗೂ ಪಾರ್ಲಿಮೆಂಟ್‌ನಲ್ಲಿ ಮಾಡಿದಂತ ಕೆಲವು ಗಹನವಾದ ವಿಷಯಗಳ ಪ್ರಸ್ತಾಪ ಇಡೀ ಭಾರತ ದೇಶದ ಜನತೆಗೆ ಒಳ್ಳೆಯದನ್ನೇ ಉಂಟು ಮಾಡಿಕೊಂಡು ಬಂದರೂ, ಸಹ ಈಗ ಈ ಬದಲಾವಣೆಯನ್ನು ಈ ವಿಧಾನಸಭೆಯಲ್ಲಿ ಅಷ್ಟೇ ಅಲ್ಲ ಪಾರ್ಲಿಮೆಂಟಿನಲ್ಲೂ ಮಾಡಿದ್ದಾರೆ. ಈವತ್ತಿನ ದಿವಸ ವಿಶೇಷವಾಗಿ ಮಾನ್ಯ ಮಂತ್ರಿಯವರು ಈ ಒಂದು ಮಸೂದೆಯನ್ನು ತಂದಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ನಾವು ಈ ಸಭೆಯ ಕಲಾಪಗಳನ್ನು ಗಮನಿಸುವುದಾದರೆ ಇಲ್ಲಿ ಗುಪ್ತಮತದಾನ ನಡೆಯುವುದಿಲ್ಲ. ಕಾರಣವೇನೆಂದರೆ ನಾವು ಪ್ರಜಾಪ್ರತಿನಿಧಿಗಳಾಗಿರತಕ್ಕವರು. ಇಲ್ಲಿ ಬಂದಿದ್ದು ಸರ್ಕಾರ ಯಾವುದೇ ವಿಷಯವನ್ನು ತಂದರೂ ಆ ವಿಷಯದಲ್ಲಿ ನಾವು ಭಾಗವಹಿಸುತ್ತಿದ್ದೇವೆ. ಈ ವಿಷಯದಲ್ಲಿ ನಮ್ಮ ಪಾತ್ರ ಏನು? ಎಂಬುದನ್ನು ನನ್ನ ಕ್ಷೇತ್ರದ ಹಾಗೂ ಜನತೆಗೆ ತಿಳಿದುಕೊಳ್ಳುವ ಅವಶ್ಯಕತೆ ಇದೆ ಎಂಬುದನ್ನು ನಾನು ಯಾರ ಪರವಾಗಿದ್ದೇನೆ, ಚುನಾವಣೆಯಲ್ಲಿ ಏನೇನು ಘೋಷಣೆಗಳನ್ನು ಮಾಡಿರುತ್ತೇನೆ, ಏನೇನು ಆಶ್ವಾಸನೆಗಳನ್ನು ಜನತೆಗೆ ಕೊಟ್ಟಿರುತ್ತೇನೆ ಅದಕ್ಕೆ ಅನುಗುಣವಾಗಿ ನಡೆಯುತ್ತೇನೆಯೇ ಇಲ್ಲವೇ ಇದರ ಬಗ್ಗೆ ನನ್ನ ನಿಲುವೇನು ಮತ್ತು ಸರ್ಕಾರದ ಮತ್ತು ಆಳುವ ಪಕ್ಷದ ನಿಲುವೇನು ಎಂಬುದು ಜನತೆಗೆ ಅರಿವುಂಟು ಮಾಡುವ ಕರ್ತವ್ಯ ಅವಶ್ಯಕವಾಗಿದೆ. ಅವರಿಗೆ ಕೊಟ್ಟಿರತಕ್ಕ ಮಾತಿನ ಪ್ರಕಾರ ಇಲ್ಲಿ ನಡೆಯುತ್ತಾ ಇದ್ದೇನೆಯೇ ಇಲ್ಲವೆ ಎಂದು. ಆದರೆ ಇವತ್ತು ಅದಕ್ಕೆ ಅವಕಾಶವಿಲ್ಲ.

ನಮ್ಮ ಜನರಿಂದ ಮತವನ್ನು ಪಡೆದು ಯಾವ ರೀತಿ ಅಧಿಕಾರವನ್ನು ಪಡೆದು ಬಂದಿದ್ದೇವೆಯೋ ಅದರ ಸದ್ವಿನಿಯೋಗ ಮಾಡುತ್ತಿದ್ದೇವೆಯೇ ಅಥವಾ ಸ್ವಾರ್ಥಕ್ಕಾಗಿ ಉಪಯೋಗ ಮಾಡುತ್ತಿದ್ದೇವೆಯೇ ಎಂಬುದನ್ನು ಜನತೆಗೆ ತಿಳಿಸುವ ಪರಿಸ್ಥಿತಿ ಇವತ್ತಿನ ದಿವಸ ಇಲ್ಲ. ಅಧ್ಯಕ್ಷರೇ, ಇವತ್ತು ವಿಜ್ಞಾನ ಮುಂದುವರೆಯುತ್ತಿದೆ. ಅದೇ ರೀತಿಯಲ್ಲಿ ಮನುಷ್ಯನ ಜ್ಞಾನವು ಮುಂದುವರೆಯುತ್ತಿದೆ. ಈ ರೀತಿಯಾಗಿ ಜ್ಞಾನ ಮುಂದುವರೆಯುತ್ತಿರುವ ಪರಿಸ್ಥಿತಿಯಲ್ಲಿ ನಮಗೆ, 216 ಜನಕ್ಕೆ ಮತವನ್ನು ಕೊಟ್ಟಿರತಕ್ಕಂತ ಜನರು ಸದನದಲ್ಲಿ ಇಡುವಂತಹ ಮಸೂದೆ ಏನಿದೆ ಅದರ ಕಾರ್ಯ ಕಲಾಪಗಳೇನಿವೆ ಅದನ್ನು ತಿಳಿದುಕೊಳ್ಳುವಂತಿಲ್ಲ. ಅದು ಪತ್ರಿಕೆಯಲ್ಲಿ ಬರುವ ಹಾಗಿಲ್ಲ. ಜನತೆ ಓದುವ ಹಾಗಿಲ್ಲ. ತಿಳಿದುಕೊಳ್ಳುವಂತಹ ವ್ಯವಧಾನ ಇಲ್ಲ. ಅಂತಹ ಒಂದು ಮಸೂದೆಯನ್ನು ಇವತ್ತಿನ ದಿವಸ ಮಾನ್ಯ ಸಚಿವ ತಂದಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ಪ್ರಭುವಾಗಿರತಕ್ಕವರು ಪ್ರಜೆ. ಅವರಿಗೋಸ್ಕರ ಈ ಸಭೆಯಲ್ಲಿ ಕೆಲಸ ಮಾಡುತ್ತಿರತಕ್ಕದ್ದು ; ಅವರಿಗೆ ಇಲ್ಲಿ ಏನು ನಡೆಯುತ್ತಿದೆ ಎಂಬುದರ ತಿಳಿವಳಿಕೆ ಇವತ್ತಿನ ದಿವಸ ಇಲ್ಲ. ಈ ಒಂದು ಮಸೂದೆ ಏನಾದರೂ ಕೂಡ ಒಪ್ಪಿಗೆ ಪಡೆದಿದ್ದೇ ಆದರೆ ಇಂತಹ ಆತ್ಮಘಾತುಕ ಕೆಲಸವನ್ನು ಮಾನ್ಯ ಸಚಿವರು ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳಬಹುದು. ಇವತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಇವತ್ತಿನ ದಿವಸ ಕೆಲವು ಸಮಿತಿಗಳು ವರದಿಕೊಟ್ಟಿವೆ. ಅವು ಏನೇನು ಆರೋಪಗಳನ್ನು ಮಾಡಿವೆ ಸಾಬೀತಾಗಿದೆ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ಅದೇ ರೀತಿಯಲ್ಲೇ ಪಾರ್ಲಿಮೆಂಟ್‌ನಲ್ಲೂ ಕೂಡ ಕಳೆದ ವರ್ಷ 15-20 ದಿವಸ ಲೈಸೆನ್ಸ್ ಸ್ಕ್ಯಾಂಡಲ್ ವಿಷಯ ಪ್ರಸ್ತಾಪವಾಯಿತು. ಇವತ್ತಿನ ದಿವಸ ಅದರ ವಿಷಯದಲ್ಲಿ ಸಿಬಿಐ ಪ್ರೋಬ್ ನಡೆಯುತ್ತಿದೆ. ಆ ವಿಷಯದಲ್ಲಿ ಪಾರ್ಲಿಮೆಂಟ್ ಸದಸ್ಯರು ಏನೇನು ಆರೋಪ ಮಾಡಿದರು ಅದು ಸತ್ಯ ಎಂದು ಇವತ್ತಿನ ದಿವಸ

ಒಂದೊಂದಾಗಿ ತಿಳಿದುಬರುತ್ತಿದೆ. ಆ ರೀತಿಯಾದಂಥ ಕೆಲಸ ಇವತ್ತು ನಡೆಯುತ್ತಿದ್ದರೂ ಸಹ ಈಗಿರತಕ್ಕ ಕಾನೂನಿನಿಂದ ಯಾವ ಬಾಧಕ ಕೂಡ ಆಗಿ ಕೆಟ್ಟದ್ದು ಆಗಿಲ್ಲ. ಒಳ್ಳೆಯದೇ ಇಲ್ಲಿಯವರೆಗೂ ಆಗುತ್ತಾ ಬಂದಿದೆ. ಈವತ್ತು ಆಳುವ ಪಕ್ಷ ಮತ್ತು ಈ ದೇಶದ ಪ್ರಧಾನಿಯವರು ಸರ್ವಾಧಿಕಾರದ ಮೆಟ್ಟಿಲನ್ನು ಒಂದೊಂದಾಗಿ ಏರಿ ತುಟ್ಟ ತುದಿಗೆ ಬರುತ್ತಿದ್ದಾರೆ. ಈ ಮಸೂದೆ ಏನಾದರೂ ಒಪ್ಪಿಗೆ ಪಡೆದರೆ ಸರ್ವಾಧಿಕಾರದ ತುಟ್ಟ ತುದಿಗೆ ಹೋದಂತಾಗುತ್ತದೆ. ಅವರು ಏನು ಹೇಳುತ್ತಾರೋ ಅದೇ ಇವತ್ತಿನ ದಿವಸ ಪತ್ರಿಕೆಯಲ್ಲಿ ಬರಬೇಕಾಗಿದೆ.

ಶ್ರೀ ಕೆ.ಎಚ್. ರಂಗನಾಥ :- ಮಿಲಿಟರಿ ಅಡ್ರೆಸ್ ಮಾಡುವುದು ಯಾವ ಅಧಿಕಾರ?

ಶ್ರೀ ಸಿ. ಬೈರೇಗೌಡ :- ಈ ಮಾತು ಆಳುವ ಪಕ್ಷಕ್ಕೆ ಈವತ್ತಿನ ದಿವಸ ಮಂತ್ರವಾಗಿಬಿಟ್ಟಿದೆ. ಮಿಲಿಟರಿ ಅಡ್ರೆಸ್ ಮಾಡಿದರು, ಪೊಲೀಸರನ್ನು ಹಾಗೆ ಮಾಡಿ ಹೀಗೆ ಮಾಡಿ ಎಂದು ಹೇಳಿದರೆಂದು ಹೇಳುತ್ತಿದ್ದಾರೆ. ಎರಡನೆ ಮಹಾಯುದ್ಧದಲ್ಲಿ ಚರ್ಚಿಲ್, ಸ್ಟಾಲಿನ್, ರೂಸ್‌ವೆಲ್ಟ್ ಮೂರು ಜನ ಕೂಡ ಸಭೆ ಸೇರಿದರು. ಅದರಲ್ಲಿರತಕ್ಕ ಒಬ್ಬರು ಪೋಪ್ ಕೂಡ ಕರೆಯಬೇಕು ಎಂದು ಹೇಳಿದಾಗ ಸ್ಟಾಲಿನ್ ಹೇಳುತ್ತಾನೆ "What is the strength of his army" ಎಂದು. ಅದನ್ನು ಈ ಸಂದರ್ಭದಲ್ಲೇ ಹೇಳಬೇಕಾಗುತ್ತದೆ. ಜಯಪ್ರಕಾಶ್ ನಾರಾಯಣ್ ಅವರು ಪ್ರಸ್ತಾಪ ಮಾಡಿದರು ಎಂದು ಹೇಳುತ್ತಾರೆ. Afterall, what is his strength? ಮಿಲಿಟರಿನಲ್ಲೆ, ಪೊಲೀಸಿನಲ್ಲೆ ಇವರು ಹೇಳಿದ್ದನ್ನು ಕೇಳುವಂಥ ಜನ ಇದ್ದರೆ ದೇಶದಲ್ಲಿ ಅದರಿಂದ ದುಷ್ಪರಿಣಾಮವಾಗುತ್ತಿತ್ತು.

ಶ್ರೀ ಕೆ.ಎಚ್. ರಂಗನಾಥ :- ಸರ್ವಾಧಿಕಾರ ಎಂದು ಹೇಳಿದಿರಿ, ಅದಕ್ಕೆ ಹೇಳಿದೆ.

ಶ್ರೀ ಸಿ. ಬೈರೇಗೌಡ :- ಅದನ್ನು ತಪ್ಪು ಎಂದು ತಾವೇನಾದರೂ ಹೇಳುವುದಾದರೆ, ಅದಕ್ಕಿಂತ ಎಷ್ಟೋ ಪಟ್ಟು ಹೀನವಾದಂಥ ಕೆಲಸವನ್ನು ತಾವೂ ಕೂಡ ಮಾಡುವುದಕ್ಕೆ ಹೊರಟಿದ್ದೀರಿ. ಇವತ್ತು ಪತ್ರಿಕೆಗಳು ಯಾರ ಕೈಯಲ್ಲಿದೆ ಎಂಬುದು ಮುಖ್ಯವಾದುದು. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಉತ್ತರ ಕೊಡುವಾಗ ಪತ್ರಿಕೆಗಳು ದೊಡ್ಡ ದೊಡ್ಡ ಬಂಡವಾಳಸ್ಥರ ಕೈಯಲ್ಲಿದೆ ಎಂದು ಹೇಳಿದರು. ಆದರೆ ಅವರನ್ನು ಬೆಳೆಸಿಕೊಂಡು ಬಂದಿರತಕ್ಕದ್ದು ಇಲ್ಲಿಯವರೆಗೂ ಪೋಷಿಸಿಕೊಂಡು ಬಂದಿರತಕ್ಕದ್ದು ಆಡಳಿತಪಕ್ಷದ ಗದ್ದುಗೆಯಲ್ಲಿ ಕುಳಿತಿರತಕ್ಕವರು ನೀವೇ ಎಂಬುದನ್ನು ಮರೆಯಬಾರದು. ಆಳುವ ಪಕ್ಷಕ್ಕೆ ನೇರವಾಗಿ ಕುಣಿಯುವಂಥ ಪತ್ರಿಕೆಗಳು, ತಾಳಕ್ಕೆ ತಕ್ಕಂತೆ ಕುಣಿಯುವಂತಹ ಪತ್ರಿಕೆಗಳಾದರೂ ಸಹ ಇವತ್ತು ಕತ್ತನ್ನು ಹಿಸುಕುವಂತಹ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ನಾನು ಈ ಮಸೂದೆಯನ್ನು ಬದಲಾವಣೆಗೆ ತಕ್ಕಂತೆ ತಂದಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ದುಡಿಯುವ ವರ್ಗದ ಪ್ರಭುತ್ವ ಇದ್ದಾಗ ಅವರ ಕೈಯಲ್ಲೇ ಈ ದೇಶದ ಆಡಳಿತ ಇದ್ದಾಗ ಅಂತಹವರ ಕೈಯಲ್ಲೆ ಪತ್ರಿಕೆ ಇರಬೇಕು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆಡಳಿತವನ್ನು ನಡೆಸುತ್ತಾ ಇರತಕ್ಕವರ ವರ್ಗ ಮತ್ತು ಅವರ ಒಂದು ಪರಿಸರವನ್ನು ನೋಡುವುದಾದರೆ ಈ ವರ್ಗಕ್ಕೆ ವಿರೋಧವಾಗಿರತಕ್ಕ ಜನ ಶ್ರಮಜೀವಿ ವರ್ಗಕ್ಕೆ ವಿರೋಧವಾಗಿರುವಂತಹ ಜನ, ಶ್ರಮಜೀವಿ ವರ್ಗವನ್ನು ಪೋಷಣೆ

ಮಾಡುವುದಕ್ಕೆ ಬದಲಾಗಿ ಅವರನ್ನು ಭೂಮಿ ಮಟ್ಟಕ್ಕೆ ತುಳಿಯುವವರ ಕೈಯಲ್ಲಿ ಈ ರೀತಿಯಾದಂಥ ಅಧಿಕಾರವನ್ನು ಕೊಡಬೇಕು ಎಂದು ಮಾಡಿರತಕ್ಕದ್ದು ತುಂಬಾ ಹೇಯವಾದ ಕೆಲಸ ಎಂದು ಹೇಳಬೇಕಾಗಿದೆ. ಮತ್ತೆ ಅಮೇರಿಕಾದಲ್ಲಿ ಕೂಡ ಒಂದು ಪ್ರಕರಣ ನಡೆಯಿತು. ಅಮೇರಿಕಾ ಇವರಿಗೆ ಪ್ರಿಯವಾಗಿರತಕ್ಕ ದೇಶ. ಅಲ್ಲಿ ಆಡಳಿತ ನಡೆಸುತ್ತಾ ಇರತಕ್ಕವರ ಲೋಪದೋಷಗಳು ಮತ್ತು ವಾಟರ್ ಗ್ರೇಟ್ ಪ್ರಕರಣ, ನಿಕ್ಸನ್ ವಿಚಾರಣೆ ಎಲ್ಲಾ ಪತ್ರಿಕೆಗಳಲ್ಲಿ ಬಂತು. ಬಂದಾಗ ಯಾರೋ ಒಬ್ಬರು ಪ್ರಸ್ತಾಪ ಮಾಡಿದರಂತೆ.

ಶ್ರೀ ಎಸ್.ಎಂ. ಕೃಷ್ಣ :- ಚೈನಾದಲ್ಲಿ ಬಂದಿದೆ.

ಶ್ರೀ ಸಿ. ಬೈರೇಗೌಡ :- ಚೈನಾದಲ್ಲಿ ಏನು ಬರುತ್ತದೆ, ಏನು ಹಾಕುತ್ತಾರೆ ನನಗೆ ಗೊತ್ತಿಲ್ಲ. ಸ್ಪಷ್ಟವಾಗಿ ನಿಮಗೆ ಗೊತ್ತಿದ್ದರೆ ತಿಳಿದು ಹೇಳಿ. ಅಮೇರಿಕಾದಲ್ಲಿ ಪತ್ರಿಕೆಗಳಲ್ಲಿ ಬರುವುದನ್ನು ತಡೆಗಟ್ಟಬೇಕು ಎಂದು ಮಾಡಿರತಕ್ಕ..........

ಶ್ರೀ ಕೆ.ಎಚ್. ರಂಗನಾಥ :- ಚೈನಾ ಪತ್ರಿಕೆಗಳಲ್ಲಿ ಬಂದಿಲ್ಲ.

ಶ್ರೀ ಸಿ. ಬೈರೇಗೌಡ :- ರಂಗನಾಥ ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪತ್ರಿಕೆ ಯಾರ ಕೈಯಲ್ಲಿ ಇರಬೇಕು ಎಂಬುದು ಮುಖ್ಯ.

ಶ್ರೀ ಕೆ.ಎಚ್. ರಂಗನಾಥ :- ಗೋಯಂಕ ಕೈಯಲ್ಲಿರಬೇಕೆ?

ಶ್ರೀ ಸಿ. ಬೈರೇಗೌಡ :- ಅವರನ್ನು ಬೆಳೆಸಿದವರು ನೀವು. ಅಮೇರಿಕಾದಲ್ಲಿ ಬರತಕ್ಕ ಸುದ್ದಿಯನ್ನು ತಡೆಗಟ್ಟಬೇಕು ಎಂಬ ಪ್ರಸ್ತಾಪ ಬಂದಾಗ ಅಲ್ಲಿ ಒಬ್ಬರು ಹೇಳುತ್ತಾರೆ - ಅಮೇರಿಕಾ ದೇಶದ ಪ್ರತಿಯೊಬ್ಬ ಪ್ರಜೆಯೂ ಕೂಡ ಟ್ಯಾಕ್ಸ್ ಕೊಡುತ್ತಾನೆ. ಅವನು ಟ್ಯಾಕ್ಸ್ ಕೊಡುವುದರಿಂದ ಸರ್ಕಾರ ನಡೆಯುತ್ತದೆ, ಆದ್ದರಿಂದ ಸರ್ಕಾರ ಹೇಗೆ ನಡೆಯುತ್ತಿದೆ, ಏನೇನು ನಡೆಯುತ್ತಿದೆ, ಏನೇನು ಮಾಡಿದ್ದಾರೆ ಎಂಬುದು ತಿಳಿಯಬೇಕಾಗಿರುವುದು, ಗೊತ್ತಾಗಬೇಕಾಗಿರುವುದು ಆವಶ್ಯಕವಿದೆ ಎಂದು. ಇಲ್ಲಿ ಇವತ್ತಿನ ದಿವಸ ಏನೇ ಪ್ರಸ್ತಾಪ ಮಾಡಿದರೂ ಕೂಡ ಆಡಳಿತ ಪಕ್ಷದಲ್ಲಿರುವವರು ಮಾಡುವಂತಹ ಅನೇಕ ಭ್ರಷ್ಟಾಚಾರವಾಗಲಿ, ದುರಾಡಳಿತವಾಗಲಿ ಮತ್ತೇನೇ ಆಗಲಿ ಮಾಡಿರತಕ್ಕ ಅನ್ಯಾಯವಾಗಲಿ ಹೇಳಿದರೆ ಬರುವುದಿಲ್ಲ. ಈಗಲೇ ಪತ್ರಿಕೆಯವರು ಕಣ್ಣು, ಮೂಗು, ಬಾಯಿ ಎಲ್ಲಾ ಮುಚ್ಚಿರುವಂತಹ ಪರಿಸ್ಥಿತಿಯಲ್ಲಿ ಇದ್ದಾರೆ. ಈಗ ಅವರ ಕುತ್ತಿಗೆ ಹಿಸುಕುತ್ತೇವೆ ಎಂದು ಹೊರಟಿರುವಾಗ ಅಂತಹ ಸುದ್ದಿಗಳು ಪತ್ರಿಕೆಗಳಲ್ಲಿ ಬರುವುದಿಲ್ಲ. ನಾವು ನಮ್ಮ ಜನರ ಕೆಲಸ ಮಾಡುವುದಕ್ಕೆ ಇಲ್ಲಿ ಬಂದಿದ್ದೇವೆ. ಅಧ್ಯಕ್ಷರೇ, ಇವತ್ತು ಪ್ರಜಾಪ್ರಭುತ್ವದಲ್ಲಿ ಏನಾದರೂ ಕೂಡ ಒಂದು ಗುಂಡು ಸೂಜಿಯ ಮೊನೆಯಷ್ಟಾದರೂ ಕೂಡ ಸರ್ಕಾರಕ್ಕಿದ್ದರೆ ಪ್ರಜಾಪ್ರಭುತ್ವವನ್ನು ಬೆಳೆಸಬೇಕು ಉಳಿಸಬೇಕು ಎಂಬುದು ಕಿಂಚಿತ್ತಾದರೂ ನಮ್ಮ ಸರ್ಕಾರದವರಿಗಿದ್ದರೆ ದಯವಿಟ್ಟು ಈ ಮಸೂದೆಯನ್ನು ವಾಪಸ್ ಪಡೆಯಬೇಕು, ಈಗ ಹೊರಡಿಸಿರತಕ್ಕಂಥ ಸುಗ್ರೀವಾಜ್ಞೆಯನ್ನು ಸಹ ಅವರು ಮಾಡಬೇಕು ಎಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸಚಿವರು ಹೇಳಿದರು, ಈಗ ಮುನಿಸಿಪಾಲಿಟಿಗಳ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ಕೊಟ್ಟಿದೆ ಮತ್ತು ಕೌನ್ಸಿಲರ್ಸ್‌ಗೆ ಮಾಸಾಶನ, ಗೌರವ ವೇತನ ಇನ್ನೂ ಏನೇನೋ ಅನುಕೂಲತೆಗಳನ್ನು ಕೊಟ್ಟಿದೆ ಎಂದು, ಅದನ್ನು ನೋಡಿ ನನಗೆ ಸಂತೋಷವಾಯಿತು. ಆದರೆ ಇವೊತ್ತಿನ ದಿವಸ ಸಾರೋದ್ಧಾರವಾಗಿ ನೀವು ಏನು ಹೇಳುತ್ತಾ ಇದ್ದೀರಿ ಎಂದರೆ ಮೊದಲು 1 ವರ್ಷ ಎಂದು ನೆಪ ಹೇಳಿ, ನಂತರ ಮತ್ತೆ 6 ತಿಂಗಳು ಅಂತ ನೆಪ ಹೇಳಿ ಆಮೇಲೆ ಇನ್ನೇನಾದರೂ ನೆಪ ಹೇಳಿ ಎಷ್ಟು ವರ್ಷ ಬೇಕಾದರೂ ಕೂಡ ಆ ಮುನಿಸಿಪಾಲಿಟಿ ಎಲೆಕ್ಷನ್ ಮಾಡದೇ ಮುಂದೂಡಬಹುದು. ಸಾಮಾನ್ಯವಾಗಿ ಆ ಮುನಿಸಿಪಾಲಿಟಿ ಒಬ್ಬ ಆಡಳಿತದ ಅಧಿಕಾರಿಯಲ್ಲಿದ್ದರೂ ಕೂಡ ಆಡಳಿತ ಪಕ್ಷ ಹೇಳಿದಂತೆ ಕೆಲಸ ಮಾಡ ಬೇಕಾಗುತ್ತದೆ. ಈವೊತ್ತು ಯಾವುದೇ ಒಂದು ಪಕ್ಷ ಆಡಳಿತಕ್ಕೆ ಬಂದರೂ ಕೂಡ ಆ ಪಕ್ಷದ ನೀತಿ ಏನು ಇದೆ ಅದನ್ನು ಕಾರ್ಯಗತಮಾಡಬೇಕಾದರೆ ಬ್ಯೂರಾಕ್ರಸಿ ಎಂದು ಏನು ಹೇಳುತ್ತೇವೋ ಅವರೇ ಆಡಳಿತ ಮಾಡುತ್ತಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 27 ವರ್ಷಗಳಾದರೂ ಕೂಡ ಈ ಬ್ಯೂರಾಕ್ರಸಿ ಅಡ್ಡ ಬಂದು ನಾವೇನೂ ಕೆಲಸ ಸಾಧಿಸಲಿಕ್ಕಾಗಲಿಲ್ಲ ಅನ್ನುವ ದೊಡ್ಡ ದೊಡ್ಡ ಭಾಷಣವನ್ನೂ ಕೂಡ ಈ ಸದನದಲ್ಲಿ ಕೇಳಿದ್ದೂ ಆಯಿತು. ಅಂದರೆ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಈ ಹಿಂದೆ ಇದೇ ಸಭೆಯಲ್ಲಿ ಪ್ರತಿಯೊಂದಕ್ಕೂ ಬ್ಯೂರೊಕ್ರಸಿ ಅಡ್ಡಬಂದಿದೆ ಅಡ್ಡಿ ಬಂದಿದೆ ಎಂದು ಭಾಷಣ ಮಾಡಿದಂತಹವರ ಪಕ್ಷಕ್ಕೆ ಸೇರಿದಂತಹವರೆ ಇಂದು ಆಡಳಿತ ನಡೆಸುತ್ತಿದ್ದರೂ ಸಹ, ಈ ಹಿಂದೆ ಭಾಷಣ ಮಾಡಿದ್ದನ್ನು ಮರೆತು, ಅದೇ ಬ್ಯೂರೊಕ್ರೆಸಿ ಆಡಳಿತವನ್ನು ನಗರಸಭೆಗಳ ಮೇಲೆ ಏರಿಸಬೇಕೆಂದು ಹೊರಟಿರುವುದು ವಿಷಾದನೀಯವಾದಂಥ ಸಂಗತಿಯಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ beyond control of the Government ಎಂಬ ತಕ್ಕಂಥ ಪದಗಳನ್ನು ಇಲ್ಲಿ ಏನು ಬಳಸಿದ್ದಾರೆ, ಅದರಲ್ಲಿ ಯಾವ ನಿರ್ದಿಷ್ಟವಾದಂಥ ಅರ್ಥವೂ ಇಲ್ಲ. ಏನಾದರೂ ಯುದ್ಧ ಮತ್ತು ಪ್ರಳಯವಾದರೆ beyond control of the Government ಎಂದು ಹೇಳಬಹುದು. ಅದು ಯಾವುದೂ ಇಲ್ಲದೆ beyond control of the Government ಎಂದು ಹೇಳಿದರೆ, ಅದಕ್ಕೆ ಯಾವ ಅರ್ಥವೂ ಇಲ್ಲವೆಂದು ಹೇಳಬಹುದು. ಮಾನ್ಯ ಕಾಗೋಡು ತಿಮ್ಮಪ್ಪನವರು ತುರ್ತುಪರಿಸ್ಥಿತಿಯ ಕಾರಣವನ್ನು ಸರ್ಕಾರದವರು ಕೊಟ್ಟು ಈ ರೀತಿ ಬೇಕಾದರೆ ಮಾಡಲು ಅವಕಾಶವಿದೆ ಎಂಬುದಾಗಿ ಹೇಳಿದರು. ಆದರೆ ಅದನ್ನು ನಾನು ಒಪ್ಪುವುದಕ್ಕೆ ತಯಾರಾಗಿಲ್ಲ. ಏಕೆಂದರೆ, ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಿರುವವರೂ ಇವರೇ ಆಗಿದ್ದಾರೆ. Emergencey was not beyond control of the Government.

**Sri. S.M. Krishna :** When things went beyond control of the Government Emergency was brought.

**Sri. C. Byregowda :-** It was not beyond control of the Government. Even before the Emergency things were under the control of the Government. It was well within the control of the Government. It is to

save their own skin they have brought this Emergency. ಇವತ್ತಿನ ದಿವಸ ತಿರುಗೀ ಕೂಡ ಈ ತುರ್ತುಪರಿಸ್ಥಿತಿಯ ಕಾರಣದಿಂದ ಈ ಚುನಾವಣೆಗಳನ್ನು ಮುಂದೂಡುತ್ತಿರುವುದು ಸರಿಯಲ್ಲವೆಂದು ಹೇಳುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಇದನ್ನು ಗೌರವದಿಂದ ತಾವು ವಾಪಸ್ ಪಡೆಯುವುದು ಯೋಗ್ಯವಾಗಿದೆ. ಈಗ ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಿರುವ ಉದ್ದೇಶ ಪ್ರಜಾಪ್ರಭುತ್ವದ ರಕ್ಷಣೆಗೋಸ್ಕರ ಎಂಬುದಾಗಿ ಅಚ್ಚು ಹಾಕಿಸಿ, ಅದನ್ನು ಗೋಡೆಗಳ ಮೇಲೆಲ್ಲಾ ಅಂಟಿಸಿದ್ದಾರೆ.

ಶ್ರೀ ಕೆ.ಬಿ. ಶಿವಯ್ಯ :- ಅದರಿಂದ ನಿಮಗೆ ಅನುಕೂಲವಾಗಿರಬಹುದು.

ಶ್ರೀ ಸಿ. ಬೈರೇಗೌಡ :- ಇಂದು ತುರ್ತುಪರಿಸ್ಥಿತಿ ಜಾರಿಗೆ ಬಂದಿರುವುದಕ್ಕೆ ನೀವೇ ಕಾರಣ. ಈ ಮೂಲಕ ಪ್ರಜಾಪ್ರಭುತ್ವದ ರಕ್ಷಣೆ ಮಾಡುತ್ತಿದ್ದೇವೆಂದು ಗೋಡೆಗಳ ಮೇಲೆ ಪತ್ರಗಳನ್ನು ಅಂಟಿಸುವುದರ ಮೂಲಕ ಜನರಿಗೆ ತಿಳಿಸುತ್ತಿದ್ದೀರಿ. ಈ ಮೊದಲು ನಗರಸಭೆಗಳನ್ನು ಸೂಪರ್‌ಸೀಡ್ ಮಾಡುವಂತಹ ಕಾಲಾವಧಿ ಒಂದು ವರ್ಷ ಮಾತ್ರವೆಂದು ಹೇಳಿದರು. ಅದನ್ನು ನಾವು ಒಪ್ಪಿಕೊಂಡೆವು. ನಂತರ ಅದನ್ನು ಒಂದು ವರ್ಷ ಆರು ತಿಂಗಳು ಎಂದು ಹೇಳಿದರು. ಅದನ್ನು ಸಹ ಒಪ್ಪಿಕೊಂಡೆವು. ಆದರೆ ಈಗಿನ ತಿದ್ದುಪಡಿಯ ಪ್ರಕಾರ ಅದಕ್ಕೆ ಕಾಲಮಿತಿ ಎಂಬುದೇ ಇಲ್ಲವಾಗಿದೆ. ನಿಮ್ಮ ಅಧಿಕಾರಿಗಳ ಆಡಳಿತವನ್ನು ಬಹಳ ಕಾಲದವರೆಗೆ ಹೇರಿದರೆ ಅದು ಪ್ರಜಾಪ್ರಭುತ್ವದ ರಕ್ಷಣೆಯಾಗುತ್ತದೆಯೇ ಎಂದು ನಾನು ತಮ್ಮನ್ನು ಕೇಳುತ್ತೇನೆ? ಇದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹೇಳುತ್ತೇನೆ. ಒಂದು ಕಡೆ ತಾವು ಪ್ರಜಾಪ್ರಭುತ್ವದ ರಕ್ಷಣೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ಮತ್ತೊಂದು ಕಡೆಯಲ್ಲಿ ಈ ರೀತಿಯ ಕಗ್ಗೊಲೆ ಮಾಡುವುದಕ್ಕೆ ಹೊರಟಿದ್ದೀರಿ. ಇದು ಸರಿಯಲ್ಲ ; ಯಾವುದಾದರೂ ಒಂದನ್ನು ಒಪ್ಪಿಕೊಳ್ಳಿ. ಅದು ಬಿಟ್ಟು ತಾವು ಒಂದು ಕಡೆ ರಕ್ಷಣೆ ಮಾಡುತ್ತೇವೆಂದು ಹೇಳಿ ಮತ್ತೊಂದು ಕಡೆ ಅದಕ್ಕೆ ಕೊಡಲಿ ಏಟು ಹಾಕುವುದಕ್ಕೆ ಹೋಗಬೇಡಿ. ಇದರಿಂದಲೇ ನಿಮ್ಮ ರೂಪರೇಷೆಗಳೇನು, ನಿಮ್ಮ ಗುಣಗಳೇನು ಎಂಬುದನ್ನು ಜನರು ಅರ್ಥ ಮಾಡಿಕೊಳ್ಳಬಹುದಾಗಿದೆ. ಪ್ರಜಾಪ್ರಭುತ್ವದ ರಕ್ಷಣೆಯ ದೃಷ್ಟಿಯಿಂದ ಗೌರವಯುತವಾಗಿ ಈ ತಿದ್ದುಪಡಿಯನ್ನು ವಾಪಸ್ ಪಡೆಯುವುದು ಒಳ್ಳೆಯದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

## DEBT RELIEF ಋಣ ಪರಿಹಾರ - 11-11-76

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಸಹಕಾರ ಸಚಿವರು ಕರ್ನಾಟಕ ಡೆಟ್ ರಿಲೀಫ್ ಆಕ್ಟ್‌ಗೆ ತಂದಿರತಕ್ಕಂಥ ತಿದ್ದುಪಡಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮಾನ್ಯ ಮಂತ್ರಿಗಳು ಮಾಡಿರತಕ್ಕಂಥಾ ಒಳ್ಳೆಯ ಕೆಲಸಗಳಲ್ಲಿ ಇದೂ ಕೂಡ ಒಂದಾಗಿದೆ. ಇಂದು ಈ ಬಂಡವಾಳಶಾಹೀ ಸಮಾಜದಲ್ಲಿ ಬಡವರಿಗೆ ಸಾಲವನ್ನು ಹೇರಿ ಅವರ ಸಾಲವನ್ನು ವಸೂಲ್ಮಾಡುವುದರ ಜೊತೆಗೆ ಅವರ ರಕ್ತವನ್ನೂ ಕೂಡ ಹೀರತಕ್ಕಂಥಾ

ಅನೇಕಾನೇಕ ನಿದರ್ಶನಗಳೂ ಇವೆ. ಅವರಿಗೆ ಇದು ಒಂದು ಪಾಶವೀಕೃತ್ಯವಾಗಿ ಪರಿಣಮಿಸಿತ್ತು. ಈಗ ಅವರು ಈ ಪಾಶವೀಕೃತ್ಯದಿಂದ ಮುಕ್ತರಾಗುವ ಕಾಲ ಬಂದಿದೆ. ಬಹಳ ಸಂತೋಷ ಇದು ಅಧಿಕಾರೀ ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟಿರತಕ್ಕಂಥಾದ್ದನ್ನೂ ಕೂಡ ಸ್ವಾಗತ ಮಾಡುತ್ತೇನೆ. ಈ ಹಿಂದೆ ಮಾತಾಡಿದಂಥಾ ಕೆಲವು ಸದಸ್ಯರು ಈ ಬಗ್ಗೆ ಕೆಲವು ಕಡೆ ಇದ್ದಂಥಾ ಅಚಾತುರ್ಯ ಮತ್ತು ಅನ್ಯಾಯಗಳನ್ನು ಕೂಡ ಈ ಸಭೆಯ ಗಮನಕ್ಕೆ ತಂದಿದ್ದಾರೆ. ಹೌದು, ಇದು ಕೆಲವು ಕಡೆ ರಾಜಕೀಯ ಕಾರಣಗಳಿಂದ ಮತ್ತು ಚೀಪ್ ಪಾಪ್ಯುಲಾರಿಟಿ ದೃಷ್ಟಿಯಿಂದ ನೇಮಕವಾಗಿರತಕ್ಕಂಥವರು ಇಂಥಾದ್ದನ್ನು ಮಾಡಿದ್ದಾರೆ.

**Mr. Deputy Speaker :-** I would request the Hon. Member to confine himself to the scope of this Bill.

ಶ್ರೀ ಸಿ. ಬೈರೇಗೌಡ :- ಇದರಲ್ಲಿ ಸಬ್ ಡಿವಿಷನಲ್ ಅನ್ನುವ ಪದಕ್ಕೆ ಬದಲಾಗಿ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅಂತ ಇದೆ. ಮೊದಲು ಸಬ್ ಡಿವಿಷನ್ ಮ್ಯಾಜಿಸ್ಟ್ರೇಟ್ ನಲ್ಲಿದ್ದಾಗ ಏನೇನು ನಡೆದಿದೆ ಅನ್ನುವುದನ್ನು ನಾನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಆಕ್ಟ್‌ಗೆ ತಂದಿರತಕ್ಕಂಥಾ ತಿದ್ದುಪಡಿ ಎಷ್ಟರಮಟ್ಟಿಗೆ ಯೋಗ್ಯವಾಗಿದೆ ಅನ್ನುವುದನ್ನು ನಾನು ಒತ್ತಾಯವಾಗಿ ಹೇಳಬೇಕಾಗಿದೆ. ಆ ಬಗ್ಗೆ ಕಾರಣವನ್ನೂ ಕೂಡ ಕೊಟ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಡೆ ರಾಜಕೀಯ ಕಾರಣಗಳಿಂದ ಈ ಒಂದು ಕಾನೂನನ್ನು ದುರುಪಯೋಗ ಮಾಡಿಕೊಂಡಿರತಕ್ಕಂಥಾದ್ದು ಅಥವಾ ಈವೊತ್ತು ಅಧಿಕಾರ ಗದ್ದುಗೆಯಲ್ಲಿರತಕ್ಕಂಥವರು ಹೊರಗಡೆ ಏನೇನು ನಡೆಸುತ್ತಿದ್ದಾರೆ ಅನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ತಾವು ಈಗ 20 ಅಂಶಗಳ ಕಾರ್ಯಕ್ರಮವನ್ನು ದೇಶದಲ್ಲಿ ಜಾರಿಗೆ ತರುವುದಕ್ಕೆ ಜಿಲ್ಲೆಗೆ ಒಬ್ಬೊಬ್ಬ ಮಂತ್ರಿಗಳನ್ನು ನೇಮಿಸಿರುವುದಾಗಿದೆ. ಒಂದು ಕಡೆ ಏನಾಗಿದೆ ಎಂದರೆ ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಮೂಲಕ ಕೊಡಿ ಅಂತ ಹೇಳಿ ಅದಕ್ಕೆ ಮಂತ್ರಿಗಳು ಚೆಕ್ ಕೊಡುವುದು. ಅದರ ಪಕ್ಕದಲ್ಲೇ ಈ ಮಂತ್ರಿಗಳಿಗೆ ಬೇಕಾಗಿರತಕ್ಕಂಥಾದವರು. ಅಣ್ಣ ತಮ್ಮಂದಿರಾಗಿರತಕ್ಕಂಥಾವರು ಅಥವಾ ಹತ್ತಿರದ ಸಂಬಂಧಿಗಳಾಗಿರತಕ್ಕಂಥವರು ಮನಿಲೆಂಡರ್ಸ್ ಬಿಸಿನೆಸ್ ಇಟ್ಟುಕೊಂಡಿದ್ದರು. ಅವರಿಗೆ ಮನಿಲೆಂಡರ್ ಲೈಸನ್ಸ್ ಇರುವುದೇ ಅನುಮಾನ ಎಂದು ನನಗೆ ಶಂಕೆ ಇದೆ. ಒಂದು ಕಡೆ ಈ ರೀತಿ ಚೆಕ್ ಕೊಡುವುದು ಮತ್ತೊಂದು ಕಡೆ ಆ ಚೆಕ್ ಅನ್ನು ಅವರ ಹೆಸರಿಗೆ ಎಂಡಾರ್ಸ್ ಮಾಡಿರುವ ಅನೇಕ ನಿದರ್ಶನಗಳೂ ಕೂಡ ಇವೆ. ಹೀಗಾದರೆ ಏನು ಮಾಡುವುದು? ಈ ಬಗ್ಗೆ ಸಾಕ್ಷಿ, ಆಧಾರ, ಪುರಾವೆಗಳನ್ನು ಇಟ್ಟುಕೊಂಡು ಹೇಳಿದರೂ ಕೂಡ ಇದನ್ನು ಯಾವ ಉದ್ದೇಶದಿಂದ ಹೇಳುತ್ತೀರಿ ಅಂತ ಕೇಳುತ್ತಾರೆ. ನಾನು ಮಾನ್ಯ ಸಹಕಾರ ಸಚಿವರನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ತಾವು ಒಂದು ವಿಚಾರಣಾ ಸಮಿತಿಯನ್ನು ನೇಮಿಸಿ ನಾನು ತಮಗೆ ಬೇಕಾದರೆ ಎಲ್ಲಿ ಏನು ನಡೆದಿದೆ ಅನ್ನುವುದನ್ನು ಹೇಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ :- ಸ್ವಾಮಿ ಅವರು ಹೇಳುವುದಕ್ಕೆ ಏನು ಪುರಾವೆ ಇಲ್ಲ. ಅವರು ಏನು ಹೇಳುತ್ತಿದ್ದಾರ ಎಂದರೆ ಒಂದು ಕಡೆ ಮಂತ್ರಿಗಳು ಹೋದರು, ಚೆಕ್ ಕೊಟ್ಟರು, ಇನ್ನೊಬ್ಬರು ಅದನ್ನು ತೆಗೆದುಕೊಂಡರು ಅಂದರೆ ಇದು ಏನು? ಹಾಗೆ ಹೀಗೆ ಅಂತ ಹೇಳಿದರೆ ಇದು ಹೇಗೆ ಆಧಾರ ಸ್ವಾಮಿ? ಮೊದಲೇ ಅಧ್ಯಕ್ಷರು ಹೇಳಿದರು ಈ ಬಿಲ್‌ನಲ್ಲಿರುವ ಸ್ಕೋಪ್‌ನ

ಒಳಗೆ ಮಾತನಾಡಬೇಕು ಎಂದು. ಮಾನ್ಯ ಸದಸ್ಯರು ಹೊರಗಡೆ ಏನಾದರೂ ಇಂತಹ ವಿಷಯ ಹೇಳಿದರೆ ಕಂಟೆಪ್ಟ್ ಆಗಬಹುದು, ಈ ಸಭೆಯಲ್ಲಿ ಹೇಳಿದರೆ. ಅದೇನೂ ಕಂಟೆಪ್ಟ್ ಆಗುವುದಿಲ್ಲ. ಮಾನ್ಯ ಸದಸ್ಯರು ಏನೂ ಪುರಾವೆ ಇಲ್ಲದೆ ಈ ರೀತಿಯಾಗಿ ಸುಮ್ಮನೆ ಹೇಳಿಕೊಂಡು ಹೋಗುತ್ತಾ ಇದ್ದರೆ ಏನು ಅಂತ ನಾವು ತಿಳಿಯಬೇಕು. ಕೊಟ್ಟವರ ಹೆಸರು ಹೇಳಬೇಕು, ತೆಗೆದುಕೊಂಡವರ ಹೆಸರು ಹೇಳಬೇಕು. ಅವರು ಈ ತಕ್ಷಣ ಏನೂ ಹೇಳಬೇಕಾದ್ದಿಲ್ಲ, ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಬರೆದುಕೊಡಬಹುದು. ಆವಾಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ ಅದು ತಪ್ಪಾಗುತ್ತದೆ. ಅವರು ತಮ್ಮ ಭಾಷಣವನ್ನು ಬನಪ್ಪ ಪಾರ್ಕ್‌ನಲ್ಲಿ ಮಾಡುವ ಹಾಗೆ ಮಾಡಿದರೆ ಏನು ಮಾಡಬೇಕು?

ಶ್ರೀ ಸಿ. ಬೈರೇಗೌಡ :- ಅಧ್ಯಕ್ಷರೇ ನಾನೇನೂ ಬನಪ್ಪಾ ಪಾರ್ಕಿನಲ್ಲಿ ನಿಂತಿಲ್ಲ. ದಯವಿಟ್ಟು ಕ್ಷಮಿಸಬೇಕು.

**Sri K.H. Ranganath :-** Let it be within the scope of the Bill.

**Mr. Deputy Speaker :-** He can bring honour to himself and greater honour to the House by substantiating his statements.

ಶ್ರೀ ಬೈರೇಗೌಡ :- ಆ ತರಹ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ನಾನು ಇದರ ಬಗ್ಗೆ ಕಾಂಕ್ರೀಟ್ ಆಗಿ, ಸಬ್ ಸ್ಟ್ಯಾನ್‌ಷಿಯಲ್ ಆಗ ಇಡುವುದಕ್ಕೆ ತಯಾರಾಗಿದ್ದೇನೆ.

**Sri. K.H. Ranganath :-** Nobody can prevent him from saying what he wants to in this House.

**Mr. Deputy Speaker :-** He has some privileges also. Why does he not avail of them?

**Sri. K.H. Ranganath :-** This House is supreme that if he has evidence to prove them he can produce them here.

ಶ್ರೀ ಸಿ. ಬೈರೇಗೌಡ :- ಅದಕ್ಕೆ ಸಮಯವಿದೆ. ಅದನ್ನು ಖಂಡಿತ ಮಾಡುತ್ತೇನೆ.

ಶ್ರೀ **ಕೆ.ಎಚ್. ರಂಗನಾಥ್** :- ಈ ಮನೆಯ ರೂಲ್ಸ್ ಪ್ರಕಾರ ಅದನ್ನು ಹೇಳುವುದಕ್ಕೆ ಮೊದಲು ಅದರ ಒಂದು ಕಾಪಿಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಒಂದು ಕಾಪಿಯನ್ನು ಮಾನ್ಯ ಅಧ್ಯಕ್ಷರಿಗೆ ಕೊಡಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ :- ನನ್ನ ಮಾನ್ಯ ಸ್ನೇಹಿತರು ಸಂಬಂಧಪಟ್ಟ ಮಂತ್ರಿಗಳ ಹೆಸರನ್ನು ಹೇಳುವುದಕ್ಕೆ ಧೈರ್ಯ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ :- ಸಮಯ ಬಂದಾಗ ಅದನ್ನು ಹೇಳುವುದಕ್ಕೆ ನಾನು ತಯಾರಿದ್ದೇನೆ.

ಉಪಾಧ್ಯಕ್ಷರು :- ಇದೇ ಸಮಯ, ತಮಗೆ ಹೇಳುವುದಕ್ಕೆ ;

ಶ್ರೀ ಸಿ. ಬೈರೇಗೌಡ :- ಅದಕ್ಕೆ ಸಮಯವಿದೆ, ಆದರೆ...........

ಶ್ರೀ ಕೆ.ಎಚ್. ರಂಗನಾಥ್ :- ಸಮಯ ಬಂದಾಗ ಹೇಳುತ್ತೇನೆಂದರೆ ಹೇಗೆ? We are prepared to face that. I request the Hon'ble member not to make any allegations without any base. Let him follow the Parliamentary procedure. ಅಂಥಾದ್ದು ಏನಾದರೂ ಇದ್ದರೆ ಹೇಳಿ ಇಂದೇ ಹೇಳುವುದಕ್ಕೆ ತೊಂದರೆ ಏನು? ದೇವರೇನಾದರೂ ಎಡಗಡೆ ಅಥವಾ ಬಲಗಡೆ ಹೂ ಕೊಟ್ಟಿದ್ದಾನೇನು?

ಶ್ರೀ ಸಿ. ಬೈರೇಗೌಡ :- ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

**Mr. Deputy Speaker :-** Is it within the scope please Do not go outside the scope of the Bill.

ಶ್ರೀ ಸಿ. ಬೈರೇಗೌಡ :- ಈಗ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟಿದ್ದಾರೆ, ಇಂತಹ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿರುವವರೇ ಈ ರೀತಿ ಮಾಡಿದರೆ ಅವರಿಗೆ ಶಿಕ್ಷೆ ವಿಧಿಸುವುದಕ್ಕೆ ಯಾವ ಕಾನೂನು ಇದೆ?

**Sri. K.H. Ranganath :-** I am really sorry for the Hon'ble Member as a Member of this House we enjoy certain privileges. There is no point in saying 'Ministers are mis-using the power'. ಮಂತ್ರಿಗಳು ಅಧಿಕಾರ ದುರುಪಯೋಗ ಮಾಡುತ್ತಿದ್ದಾರೆಂದರೆ, If he has got any information with him even now let him pass on that information to me. which Minister has done and when- that would have been all right Otherwise it would be only "playing to the gallery". it would be nothing more than that.

**Sri. C. Byre Gowda :-** I don't say all Ministers.

ಉಪಾಧ್ಯಕ್ಷರು :- ತಿದ್ದುಪಡಿಯ ಮೇಲೆ ಮಾತ್ರ ಮಾತನಾಡಿ ಎಂದು ನಾನು ತಮಗೆ ಅನೇಕ ಸಲ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಮಂತ್ರಿಗಳು ಹೇಳುವ ರೀತಿಯಾಗಿ ಕೆಲಸ ಮಾಡುವುದಕ್ಕೆ ನಾನು ಇಲ್ಲಿಗೆ ಬಂದಿಲ್ಲ.

**Mr. Deputy Speaker :-** There are certain procedures to be followed. I told him to make some candid charges.

**Sri. K.H. Ranganath :-** I request the Hon'ble Member and tell him that this is the sovereign body and certain privileges are given to us. Our deliberations should be very dignified. If he has got specific instances I request him to pass on that information, otherwise there is no use of passing on remarks on all the Minister.

**Sri. C. Byre Gowda :-** I did not say all Ministers.

ಶ್ರೀ ಕೆ.ಎಚ್. ರಂಗನಾಥ್ :- ಮಂತ್ರಿಗಳು ಎಂದರೆ ಏನು? ನಾನಾಗಬಹುದು ಮಾನ್ಯ ಪಾಟೀಲರಾಗಬಹುದು ಇಲ್ಲವೇ ಮಾನ್ಯ ಹುಚ್ಚಮಾಸ್ತಿಗೌಡರಾಗಬಹುದು.

ಶ್ರೀ ಸಿ. ಬೈರೇಗೌಡ :- ಮಂತ್ರಿಮಂಡಲದಲ್ಲಿರುವವರು ಎಂದರೆ ಎಲ್ಲರೂ ಹೇಗೆ ಆಗುತ್ತಾರೆ?

ಉಪಾಧ್ಯಕ್ಷರು :- ತಾವು ಈಗ ತಿದ್ದುಪಡಿಯ ಮೇಲೆ ಮಾತನಾಡಿ.

ಶ್ರೀ ಸಿ. ಬೈರೇಗೌಡ :- ಮಾನ್ಯ ಮಂತ್ರಿಗಳು ಈ ಮನೆಯ ರೂಲ್ಸ್ ಪ್ರಕಾರ ಏನಾದರೂ ಹೇಳುವುದಿದ್ದರೆ ನೋಟೀಸ್ ಕೊಟ್ಟು ಹೇಳಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :- ಈ ಸದನದಲ್ಲಿರುವವರ ಬಗ್ಗೆ ಹೇಳುವುದಿದ್ದರೆ ನೋಟೀಸ್ ಕೊಡಬೇಕಾಗಿಲ್ಲ.

**Sri. K.H. Ranganath :-** No there is such procedure.

ಶ್ರೀ ಸಿ. ಬೈರೇಗೌಡ :- ಮಾನ್ಯ ಮಂತ್ರಿಗಳು ಹೇಳಿದಂತೆ ನಾನು ಎಲ್ಲ ಮಂತ್ರಿಗಳ ಮೇಲೂ ಹೇಳಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್ :- ಅವರ ಜಿಲ್ಲೆಯಲ್ಲಿ ನನ್ನ ಸಂಬಂಧಿಕರು ಯಾರೂ ಇಲ್ಲ. ಅವರ ಜಿಲ್ಲೆಗೆ ನಾನು ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರತಕ್ಕಂಥ ಮಂತ್ರಿಯಾಗಿಲ್ಲ ಮತ್ತು ನಾನು ಅವರ ಜಿಲ್ಲೆಗೆ ಹೋಗಿಲ್ಲ. When charges are made it should be specific and supported by facts and figures.

ಶ್ರೀ ಸಿ. ಬೈರೇಗೌಡ :- ನಾನು ಹೇಳದೇ ಇರುವುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಆದಕ್ಕೆ ನಾನು ಜವಾಬ್ದಾರನಲ್ಲ. ನಾನು ಎಲ್ಲರ ಮೇಲೂ ಹೇಳುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಅಧಿಕಾರ ದುರುಪಯೋಗ ಮೇಲ್ಮಟ್ಟದಲ್ಲಿ ನಡೆಯುತ್ತಿದೆ ಎಂದು ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು.

## ಪೊಲೀಸರ ಕಣ್ಣಿನೊಳಕ್ಕೆ ಲಾರಿ ಹಾಕಲು ಸಾಧ್ಯವೆ?

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ದಕ್ಷಿಣ ತಾಲ್ಲೂಕು ಮಾರತ್ ಹಳ್ಳಿಯಲ್ಲಿ ನಡೆದ ಲಾರಿ ಅಪಘಾತ ಮತ್ತು ರಾಜ್ಯಾದ್ಯಂತ ಬಸ್ಸು ಮತ್ತು ಲಾರಿಗಳಲ್ಲಿ ಜನರನ್ನು ಹೇರಿಕೊಂಡು ಹೋಗತಕ್ಕ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಈ ಸೂಚನೆಗೆ ಮುಖ್ಯಮಂತ್ರಿಗಳ ಪರವಾಗಿ ಕಾಮಗಾರಿ ಸಚಿವ ಚನ್ನಬಸಪ್ಪನವರು ಉತ್ತರ ನೀಡಿ ಕಾನೂನಿನಂತೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ಆಗ ಬೈರೇಗೌಡರು:- ಮಾನ್ಯ ಅಧ್ಯಕ್ಷರೇ, ನಾನು ನೋಟೀಸ್ ಕಳುಹಿಸಿದ್ದ ಉದ್ದೇಶ ಏನೆಂದರೆ ಆ ಕಾಲದಲ್ಲಿ ಮಂಡ್ಯ ಬಳಿ ಭೀಕರ ಅಪಘಾತ ನಡೆದಿತ್ತು. ಅದರಲ್ಲಿ ಸುಮಾರು 150 ಜನಕ್ಕೂ ಹೆಚ್ಚು ಜನ ಇದ್ದರು. ಚಿಂತಾಮಣಿ ಹತ್ತಿರ ಕೂಡ ಈ ರೀತಿ ಭೀಕರ ಅಪಘಾತ ನಡದಿದೆ. ಇದೆಲ್ಲಾ ಏತಕ್ಕೆ ನಡೆಯುತ್ತದೆ ಎಂದರೆ ಪೊಲೀಸರು ಜಾಗ್ರತರಾಗಿಲ್ಲದಿರುವುದು ಮತ್ತು ಕಾನೂನನ್ನು ಸರಿಯಾದ ರೀತಿಯಲ್ಲಿ ಜಾರಿಗೆ ಕೊಡದೇ ಇರುವುದರಿಂದ ಈ ರೀತಿಯ ಅಪಘಾತಗಳು ನಡೆಯುತ್ತವೆ. ತಾವೇ ಹೇಳುತ್ತೀರಿ ಆ ಡ್ರೈವರ್‌ಗೆ ವ್ಯಾಲಿಡ್ ಲೈಸೆನ್ಸ್ ಇರಲಿಲ್ಲ. ಲಾರಿಗೆ ಇನ್‌ಷೂರೆನ್ಸ್ ಸರ್ಟಿಫಿಕೇಟ್ ಇಲ್ಲ ಎಂದು ಈ ರೀತಿಯ ಅಕ್ರಮಗಳು ನಡೆಯುತ್ತಾ ಇರುವುದರಿಂದ ಅನೇಕ ಜನ ನಿಸ್ಸಹಾಯಕರು ನಿರಪರಾಧಿಗಳು ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದಾರೆ. ತಾವು ಇಲ್ಲಿ ಕೊಟ್ಟಿರತಕ್ಕ ಉತ್ತರವೇ ತೋರಿಸುತ್ತಿದೆ. ಸಿರ್ಸಿ ಸರ್ಕಲ್‌ನಿಂದ ಸಂಪಂಗಿ ಟ್ಯಾಂಕ್ ರಸ್ತೆವರೆಗೆ ಅದು ಪೆರಿಫರಲ್ ರೋಡ್ ಆಗುತ್ತದೆಯೇ ಎಂಬುದನ್ನು ತಿಳಿಸಬೇಕು. ಅದುವರೆಗೂ ಇದನ್ನು ವಿಥೆಲ್ಡ್ ಮಾಡಿ ನಮಗೆ ಸಂಪೂರ್ಣವಾದ ಮಾಹಿತಿಯನ್ನು ತರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಎಂ. ಚನ್ನಬಸಪ್ಪ :- ನಾನು ಈಗಾಗಲೇ ನನ್ನ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದೇನೆ. ಇಂಥಾದ್ದು ಪೊಲೀಸರ ಕಣ್ಣಿಗೆ ಬಿದ್ದರೆ ನಾವು ಅಪರಾಧಿಗಳಾಗುತ್ತೇವೆ ಎಂದು ತಲೆ ತಪ್ಪಿಸಿಕೊಂಡು ಹೋಗುತ್ತಾರೆ ಎಂದು. ಆದುದರಿಂದ ಅವರು ಪೊಲೀಸರ ಕಣ್ಣಿಗೆ ಬಿದ್ದಿಲ್ಲ. ಅಕಸ್ಮಾತ್ ಅವರು ಪೊಲೀಸರ ಕಣ್ಣಿಗೆ ಬಿದ್ದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದರು. ಈಗ ತಮಗೆಲ್ಲರಿಗೂ ಗೊತ್ತಿರುವಂತೆ ಪೊಲೀಸರು ಇದ್ದು ಎಲ್ಲ ವಿಧವಾದ ಶಾಸನಗಳು ಇದ್ದರೂ ಕೂಡ ಅನೇಕ ಕಳ್ಳತನಗಳು ನಡೆಯುತ್ತಲೇ ಇದೆ. ಅದೇ ರೀತಿ ಎಷ್ಟೋ ಜನ ಡ್ರೈವರ್‌ಗಳು, ಓನರ್ಸ್ ಪೊಲೀಸರ ಕಣ್ಣಿಗೆ ಬೀಳದಂತೆ ನಡೆದುಕೊಳ್ಳುತ್ತಿದ್ದಾರೆ. This is one of the cases where in they have managed successfully to avoid the Police; ಈಗ ಇದು ನಮ್ಮ ಗಮನಕ್ಕೆ ಬಂದಿದೆ. ಇದರ ಬಗ್ಗೆ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ :- ಸ್ವಾಮಿ, ಮೊನ್ನೆ ದಿನ ತುಮಕೂರಿನ ಹತ್ತಿರ ಒಂದು ಅಪಘಾತ ನಡೆದಿದೆ. ಇದಕ್ಕೆ ಕಾರಣ ತಾವು ಕಾನೂನನ್ನು ಸರಿಯಾಗಿ ಜಾರಿಗೆ ಕೊಡದೇ ಇರುವುದು. ಪೊಲೀಸರ ಕಣ್ಣಿಗೆ ಬಿದ್ದರೆ ಎಂದರೆ ಯಾರಾದರೂ ಲಾರಿಯನ್ನು ತೆಗೆದುಕೊಂಡು ಬಂದು ಅವರ ಕಣ್ಣಿನೊಳಕ್ಕೆ ಹಾಕುವುದಕ್ಕೆ ಸಾಧ್ಯವೆ?

ಶ್ರೀ ಎಚ್.ಎಂ. ಚನ್ನಬಸಪ್ಪ :- ನಾನು ಆಗಲೇ ಹೇಳಿದಂತೆ ಎಲ್ಲ ರೀತಿಯ ಶಾಸನಗಳು ಇದ್ದರೂ ಕೂಡ ಈ ರೀತಿ ನಡೆಯುತ್ತವೆ. ಅದಕ್ಕೋಸ್ಕರವೇ ಈ ರೀತಿ ಶಾಸನಗಳನ್ನು ಉಲ್ಲಂಘನೆ ಮಾಡುವಂತ ಅವರನ್ನು ಶಿಕ್ಷೆ ಮಾಡುವ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಯಾರು ಈ ರೀತಿ ತಪ್ಪುಗಳನ್ನು ಮಾಡಿ ತಲೆ ಮರೆಸಿಕೊಂಡು ಹೋಗುತ್ತಾರೆ ಅಂಥವರನ್ನು ಹಿಡಿದು ಖಂಡಿತವಾಗಿ ಶಿಕ್ಷೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಉಪಾಧ್ಯಕ್ಷರೇ, ಈ ದಿನ ನಮ್ಮ ರಾಜ್ಯದ ಮಾನ್ಯ ಆಹಾರ ಸಚಿವರು ಈ ಒಂದು ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್‌ಗೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ತಂದಿದ್ದಾರೆ. ಇದನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು

ಇಚ್ಛಿಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ಈ ಒಂದು ತಿದ್ದುಪಡಿ ಮತ್ತು ಈ ಕಾಯಿದೆಯ ವಿಷಯದಲ್ಲಿ ಹೇಳುವುದಾದರೆ ಇದೊಂದು ಕರಾಳ ಶಾಸನವಾಗಿದೆಯೇ ಹೊರತು ಬೇರೆ ಇನ್ನೇನೂ ಅಲ್ಲವೆಂದು ಹೇಳಬೇಕಾಗಿದೆ. ಇದು ನಮ್ಮ ರಾಜ್ಯದ ರೈತರಿಗೆ ಮಾತ್ರವಲ್ಲ ಇಡೀ ಭಾರತದ ರೈತರೆಲ್ಲರಿಗೂ ಕೂಡ ಒಂದು ಮಾರಕವಾದ ಶಾಸನವಾಗಿದೆ. ಇವತ್ತಿನ ದಿವಸ ಇದನ್ನು ಇನ್ನೂ ಸರಳಗೊಳಿಸಿ ಇನ್ನೂ ಕ್ರಮಬದ್ಧವಾಗಿ ಮಾಡಿ, ಇನ್ನು ರೈತರ ಕುತ್ತಿಗೆಯನ್ನು ಹಿಸುಕುವ ಕೆಲಸವನ್ನು ಮಾಡಬೇಕೆಂದು ನಮ್ಮ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತು ತಾವು ನೋಡುವುದಾದರೆ ಈ ಒಂದು ತಿದ್ದುಪಡಿ ಅಂದರೆ ಲೆವಿಯನ್ನು ಯಾವ ಕಾರಣದಿಂದ ಕೊಡಬೇಕು ಎನ್ನುವ ವಿವರ ಇಲ್ಲಿ ಇಲ್ಲ. ಇದರಲ್ಲಿ ರೈತರಾದ ನೀವು ನಿಮ್ಮ ಬೆವರನ್ನು ಸುರಿಸಿ ಬೆಳೆಯುವ ಕಡೆ ನಿಮ್ಮ ರಕ್ತವನ್ನು ಸುರಿಸಿ ಬೆಳೆದಿದ್ದೀರಿ ಆದುದರಿಂದ ಈ ಲೆವಿಯನ್ನು ಕೊಡಿ ಎಂದು ಹೇಳಿದ್ದಾರೆ ಅಷ್ಟೇ ವಿನಃ ಶಾಸ್ತ್ರೀಯ ಆಧಾರದ ಮೇಲೆ ಆಗಲಿ ಅಥವಾ ನ್ಯಾಯದ ಆಧಾರದ ಮೇಲೆ ಆಗಲಿ ಅಥವಾ ತರ್ಕಬದ್ಧ ಆಧಾರದ ಮೇಲಾಗಲಿ ಇವನ್ನು ಮಾಡಿಲ್ಲ. ಇವತ್ತು ಕಾನೂನು ಮಾಡತಕ್ಕ ಅಧಿಕಾರ ಸರ್ಕಾರಕ್ಕಿದೆ. ಸರ್ಕಾರ ನಡೆಸುವ ಅಧಿಕಾರ ವರ್ಗಕ್ಕೆ ಕೈಯನ್ನು ಎತ್ತಿಸುವ ಒಂದು ಅಧಿಕಾರ ನಿಮಗೆ ಇದೆ. ಆದುದರಿಂದ ನೀವು ಈ ಲೆವಿಯನ್ನು ಕೊಡಲೇಬೇಕು ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಹಿಂದೆ ಮಾತನಾಡಿದ ಮಾನ್ಯ ಸದಸ್ಯರು ಏನಿದ್ದಾರೆ ಅವರು ಮಾತನಾಡಿದ ಬಗ್ಗೆ ನಾನು ಮಾತನಾಡುವುದು ಸರಿಯಲ್ಲ. ಏಕೆಂದರೆ ಅವರ ವಯಸ್ಸಿಗಾದರೂ ನಾನು ಬೆಲೆಯನ್ನು ಕೊಡಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ರೈತರಿಗೆ ಕೊಟ್ಟಿರತಕ್ಕ ಕೆಲವು ಸೌಲಭ್ಯಗಳ ಬಗ್ಗೆ ನಾನು ಆಗಲೆ ಮಾತನಾಡುತ್ತಿದ್ದೆ. ಈಗ ಅದಕ್ಕಿಂತಲೂ ಮೊದಲನೆಯದಾಗಿ ಹೇಳಬೇಕೆಂದರೆ ಕಳೆದ 3-4 ವರ್ಷಗಳ ಹಿಂದೆ ಕೇಂದ್ರ ಸರ್ಕಾರದವರು ಏನು ಹೇಳುತ್ತಿದ್ದರು ಎಂದರೆ, ನಾವು ಹೋಲ್ ಸೇಲ್ ಟ್ರೇಡ್ ಇನ್ ಫುಡ್‌ಗ್ರೈನ್ಸ್ ಅಂದರೆ ಆಹಾರದ ಸಗಟು ವ್ಯಾಪಾರವನ್ನು ನಾವೇ ವಹಿಸಿಕೊಂಡು ರೈತ ಬೆಳೆದ ಮಾಲಿಗೆ ಸರಿಯಾದ ಬೆಲೆಗೆ ಆಹಾರ ತೆಗೆದುಕೊಂಡು ಗ್ರಾಹಕನಿಗೂ ಕೂಡ ಸರಿಯಾದ ಬೆಲೆಗೆ ಧಾನ್ಯಗಳು ಸಿಕ್ಕುವಂತೆ ಮಾಡುತ್ತೇವೆಂದು ಹೇಳಿದ್ದರು. ಅದು ನಮಗೂ ಕೂಡ ಬಹಳ ಸಂತೋಷವಾಗಿತ್ತು. ಈ ರೀತಿ ಬೆಳೆದವರಿಗೆ ಸರಿಯಾದ ಬೆಲೆಯನ್ನು ಕೊಟ್ಟು ಆಹಾರ ಪದಾರ್ಥಗಳನ್ನು ಗ್ರಾಹಕರಿಗೂ ಕೂಡ ನ್ಯಾಯವಾದ ಬೆಲೆಯಲ್ಲಿ ಸರಬರಾಜು ಮಾಡುವ ವಿಷಯವನ್ನು ನಾವು ಹಿಂದೆ ಸ್ವಾಗತ ಮಾಡಿದ್ದೆವು. ನನ್ನ ಮಟ್ಟಿಗೆ ಹೇಳುವುದಾದರೆ ಈ ಮಧ್ಯಸ್ಥಗಾರರನ್ನು ಕಡಮೆ ಮಾಡುವುದೇನು ಅವರು ಇಲ್ಲದಂತೆಯೇ ಮಾಡಿದರೂ ಕೂಡ ನಮಗೆ ಬಹಳ ಸಂತೋಷ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದವರು ಷುಗರ್ ಲಾಬಿಯಿಂಗ್, ಕಾಟನ್ ಲಾಬಿಯಿಂಗ್ ಎಂದು ಮಾಡಿದರು. ಅನಂತರ ಕೊನೆಯದಾಗಿ ಗೋಧಿಯನ್ನು ಮಾಡಿದರು. ಇವರು ಕೈಹಾಕಿದ ಮೂರೇ ತಿಂಗಳಲ್ಲಿ ನಡೆಯಬಾರದಂಥ ಅನಾಹುತ ನಡೆಯಿತು. ಅದಕ್ಕೆ ಕಾರಣ ಏನೆಂದರೆ ಒಂದು ಕಡೆ ಒಂದು ತತ್ವಕ್ಕೆ ಕಟ್ಟುಬಿದ್ದು ಅದನ್ನು ಕಾರ್ಯಗತ ಮಾಡುತ್ತೇವೆಂದು ಹೇಳಿದರು. ಆದರೆ ಇವತ್ತು ಅದು ಸರ್ಕಾರಕ್ಕೆ ಬೇಕಾಗಿಲ್ಲ. ಇಂಥ ಒಳ್ಳೆಯ ಕೆಲಸವನ್ನು ಯಾವ ರೀತಿ ಮುರಿಯಬೇಕೆಂದು ಹೊಂಚು ಹಾಕಿ ಗೋಧಿಯ ಸಗಟು ವ್ಯಾಪಾರವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಸರ್ಕಾರದವರೇ ತಮ್ಮ ಮನಸ್ಸನ್ನು ಪೂರ್ತಿಯಾಗಿ ಮುರಿದಿದ್ದಾರೆ. ಆದರೆ ಇದಕ್ಕೆ ಕಾರಣ ಜನತೆಯಲ್ಲ. ಇದಕ್ಕೆ

ಯಾರು ಹೊಣೆಗಾರರು, ಯಾರು ಇದರ ಹಿಂದೆ ಇದ್ದಾರೆ, ಯಾರು ದೊಡ್ಡ ದೊಡ್ಡ ವ್ಯಕ್ತಿಗಳು ಎಂದು ಇದ್ದಾರೆ ಅವರ ಒಂದು ಪ್ರಭಾವಕ್ಕೆ ಇವರು ಮಣಿದು ಅದನ್ನು ಕೈಬಿಟ್ಟರು. ಅದರ ಒಂದು ಪ್ರತಿಫಲವನ್ನು ನಾವು ಇಂದು ಅನುಭವಿಸುತ್ತಿದ್ದೇವೆ.

ರೈತರ ವಿಷಯದಲ್ಲಿ ಮಾನ್ಯ ನಾಯ್ಡುರವರು ಹೇಳಿದರು ಬಹುಶಃ ಅವರಿಗೆ ಗದ್ದೆ, ಹೊಲ ಇಲ್ಲ ಎಂದು ಕಾಣುತ್ತೆ. ನಾವು ಅವರನ್ನು ಯಾವಾಗ ನೋಡಿದರೂ ಕೂಡ ಬೆಂಗಳೂರಿನಲ್ಲಿಯೇ ಇರುತ್ತಾರೆ. ಕಳೆದ ಮೂರು ನಾಲ್ಕು ವರ್ಷದ ಲೆವಿ ಬೆಲೆ ನೋಡಿದರೆ 5-6 ರೂಪಾಯಿ ಜಾಸ್ತಿಯಾಗಿದೆ. ಆದರೆ ಮೂರು ನಾಲ್ಕು ವರ್ಷದಿಂದ ಈಚೆಗೆ ರೈತನ ಮೇಲೆ ಏರತಕ್ಕ ಕರವನ್ನು ನೋಡಿದರೆ ಗೊತ್ತಾಗುತ್ತದೆ. 500 ರೂಪಾಯಿ ಇದ್ದದ್ದು ಬೆಟರ್‌ಮೆಂಟ್ ಲೆವಿ 1500 ರೂಪಾಯಿ ಅಲ್ಲದೆ ವಿದ್ಯುಚ್ಛಕ್ತಿ ಒಂದು ಯೂನಿಟ್‌ಗೆ 7-8 ಪೈಸೆ ಇದ್ದುದ್ದು 15 ಪೈಸೆಯಾಗಿದೆ. ಡಿಮ್ಯಾಂಡ್ ಚಾರ್ಜ್‌ಸ್ ಎಂದು ಹಾಕುತ್ತಿದ್ದಾರೆ. ಅದಕ್ಕೆ ಅರ್ಥ ಗೊತ್ತಿಲ್ಲ. ವಾಟರ್ ರೇಟಿನಲ್ಲಿ 100ಕ್ಕೆ 100ರಷ್ಟು ಜಾಸ್ತಿ ಆಗಿದೆ. ಆದರೆ ರೈತನಿಗೆ ಕೊಡಬೇಕಾದ ಲೆವಿ ಬೆಲೆಯಲ್ಲಿ ಕೇವಲ 7-8 ರೂಪಾಯಿ ಮಾತ್ರ ಹೆಚ್ಚು ಮಾಡಿದ್ದಾರೆ. ಇದಕ್ಕೆ ಯಾವ ಆಧಾರ ಇದೆ? ಮೂರು ನಾಲ್ಕು ವರ್ಷಕ್ಕೆ ಗೊಬ್ಬರದ ಬೆಲೆಯನ್ನು ಲೆಕ್ಕ ತೆಗೆದುಕೊಂಡರೆ 100ಕ್ಕೆ 100 ಭಾಗ ಜಾಸ್ತಿಯಾಗಿದೆ. ಮಿನಿಮಮ್ ಅಗ್ರಿಕಲ್ಚರ್ ಲೇಬರ್ ವೇಜಸ್ ಜಾರಿಗೆ ತಂದಿದ್ದಾರೆ. ಬಸ್ ಪ್ರಯಾಣದ ದರ ಜಾಸ್ತಿ ಮಾಡಿದ್ದಾರೆ. ಸಾಗಾಣಿಕೆ ಪದಾರ್ಥಗಳ ಬೆಲೆ ಗಗನಕ್ಕೆ ಮುಟ್ಟಿದೆ ಆದರೆ ರೈತ ಕೊಡಬೇಕಾದ ಲೆವಿಗೆ ಬೆಲೆಯನ್ನು ಕಡಮೆ ಮಾಡುವುದಕ್ಕೆ ನಿಮಗೆ ಯಾವ ನೈತಿಕ ಆಧಾರ ಇದೆ ಲೆವಿ ಕೊಡದೇ ಇರುವ ರೈತ ಎರಡರಷ್ಟು ಬೆಲೆ ಕೊಡಬೇಕೆಂದು ಮಾಡಿದ್ದಾರೆ ಒಂದು ಮಾತನ್ನು ಮಾನ್ಯ ಮಂತ್ರಿಗಳಿಗೆ ಕೇಳುತ್ತೇನೆ. ಲೆವಿ ವಸೂಲಿಯಲ್ಲಿ ಈಗಾಗಲೇ ಅನೇಕ ಕಡೆ ದುರುಪಯೋಗವಾಗಿರತಕ್ಕ ನಿದರ್ಶನಗಳು ಅನೇಕ ಇವೆ. ಸಹಕಾರ ಸಂಘಗಳಲ್ಲಿ ಸ್ಟೋರ್ ಮಾಡಿದ್ದಾರೆ. ಗೋಡೌನುಗಳಲ್ಲಿ ಸ್ಟೋರ್ ಮಾಡಿದ್ದಾರೆ ಅಲ್ಲಿ ಎರಡು ಕಾಲಿನ ಮತ್ತು ನಾಲ್ಕು ಕಾಲಿನ ಹೆಗ್ಗಣಗಳು ಇವೆ. ಇಂಥ ನಷ್ಟವಾದರೆ ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ? ಅಂಥವರಿಂದ ಒಂದಕ್ಕೆ ಎರಡು ಬೆಲೆಯಂತೆ ಎಷ್ಟು ವಸೂಲು ಮಾಡಿದ್ದೀರಿ? ಅವರ ಮೇಲೆ ಕೇಸ್ ಹಾಕುತ್ತೇವೆ ಅದು ಕೋರ್ಟಿನಲ್ಲಿ ತೀರ್ಮಾನವಾಗುತ್ತದೆಂದು ಹೇಳುತ್ತೀರಿ. ಆದರೆ ಬೆಳೆದ ರೈತ ಲೆವಿ ಕೊಡದೇ ಹೋದರೆ ಎರಡರಷ್ಟು ದುಡ್ಡು ಕೊಡಬೇಕು. ಅಕ್ರಮ ರೀತಿಯಲ್ಲಿ ಸಂಪಾದನೆ ಮಾಡುವವರು ಅದನ್ನೇ ಜೀವನದ ರೀತಿ ನೀತಿಯನ್ನಾಗಿಟ್ಟುಕೊಂಡಿರುವವರಿಗೆ ಏನು ಮಾಡಿದ್ದೀರಿ? ಫುಡ್ ಕಾರ್ಪೊರೇಷನ್ನಿನ ಮೇಲೆ ಹಾಗೂ ನಿಮ್ಮ ಇಲಾಖೆಯ ಯಾರ ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಧೈರ್ಯ ಇಲ್ಲ. ಅದು ನಿಮಗೆ ಬೇಕಾಗಿಯೂ ಇಲ್ಲ. ಅಂಥ ಒಂದು ಶಕ್ತಿ ನಿಮಗೆ ಇಲ್ಲವೂ ಇಲ್ಲ. ಆದರೆ ಇವತ್ತು ಹಗಲು ರಾತ್ರಿ ದುಡಿಯುವಂತ ರೈತನ ಮೇಲೆ ಅವನು ಲೆವಿ ಕೊಡದೆ ಹೋದರೆ ಎರಡರಷ್ಟು ಕೊಡಬೇಕೆಂದು ಕಾನೂನು ಮಾಡುವುದಕ್ಕೆ ಹೊರಟಿದ್ದೀರಿ. ತಮಗೆ ಯಾವ ರೀತಿಯ ಅಧಿಕಾರ ಇದೆ ಎನ್ನುವುದು ಗೊತ್ತಿಲ್ಲ. ದೇಶದಲ್ಲಿ ಬರೀ ರೈತರೇ ಇಲ್ಲ, ಕಾರ್ಮಿಕರೂ ಇದ್ದಾರೆ. ಅವರೂ ಕೂಡ ದೇಶಕ್ಕಾಗಿ ದುಡಿಯುತ್ತಿದ್ದಾರೆ. ಅವರಿಗೆ ಕಡಮೆ ಬೆಲೆಯಲ್ಲಿ ಆಹಾರ ಒದಗಿಸಿಕೊಡತಕ್ಕದ್ದು ಸರ್ಕಾರದ ಕರ್ತವ್ಯ. ನಾನು ಕೂಡ ಅದನ್ನು ಒಪ್ಪುತ್ತೇನೆ. ಆದರೆ ಇವತ್ತು ಕಾರ್ಮಿಕರಂಗದಲ್ಲಿ ನೋಡುವುದಾದರೆ

ವೇಜಸ್ ಇದೆ, ಕಾಸ್ಟ್ ಆಫ್ ಲಿವಿಂಗ್‌ಗೆ ತಕ್ಕಂತೆ ಡಿ.ಎ. ಜಾಸ್ತಿ ಮಾಡಬೇಕು ಎನ್ನುವ ಕಾಯಿದೆ ಇದೆ. ಸರ್ಕಾರಿ ನೌಕರರಿಗೂ ಅತ್ಯವಶ್ಯಕವಾದ ಪದಾರ್ಥಗಳ ಬೆಲೆ ಜಾಸ್ತಿಯಾದಾಗಲೆಲ್ಲಾ ಡಿ.ಎ. ರೈಸ್ ಮಾಡುತ್ತಾರೆ, ಸಂಬಳ ಕೂಡ ಜಾಸ್ತಿ ಕೊಡುತ್ತಿದ್ದಾರೆ. ಆದರೆ ರೈತರಿಗೆ ಏನು ಕೊಡುತ್ತಿದ್ದೀರಿ? ಕಡಮೆ ಬೆಲೆ ರೈತರಿಗೆ ಏಕೆ ಕೊಡಬೇಕು? ಮನಸ್ವೇಚ್ಛೆ ಸಂಬಳ ಜಾಸ್ತಿ ಮಾಡಿಕೊಳ್ಳುವುದಕ್ಕೆ ಕಾರಣ ಅವರ ಬಾಯಿ ನಡೆಯುತ್ತದೆ. ಯಾರು ಸರ್ಕಾರದ ಮೇಲೆ ಪ್ರಭಾವ ಬೀರುತ್ತಾರೆ ಅವರಿಗೆ ಮಾತ್ರ ಕೊಡುವುದಕ್ಕೆ ಸರ್ಕಾರ ಇದೆ, ಆದರೆ ರೈತ ಬೆಳೆದಂತ ಬೆಳೆಗೆ ಯೋಗ್ಯವಾದ, ನ್ಯಾಯವಾದ ಬೆಲೆಯನ್ನು ನಿರ್ಧಾರ ಮಾಡತಕ್ಕವರು ತಾವು. ಆದರೆ ಇವತ್ತಿನ ದಿವಸ ರೈತರಲ್ಲಿ ಒಗಟ್ಟು ಇಲ್ಲದೇ ಅವರ ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅದೇ ರೀತಿ ಸರ್ಕಾರಿ ನೌಕರರ ಮೇಲಾಗಲೀ, ಕಾರ್ಮಿಕರ ಮೇಲಾಗಲಿ ಕಾನೂನು ಹೇರಿದ್ದರೆ ಅವರು ನಿಮ್ಮನ್ನು ಬದುಕಲು ಬಿಡುತ್ತಿರಲಿಲ್ಲ. ಜೀವಸಹಿತ ಓಡಾಡುವುದಕ್ಕೆ ಬಿಡುತ್ತಾ ಇರಲಿಲ್ಲ. ರೈತರನ್ನು ದುರುಪಯೋಗಪಡಿಸಿಕೊಂಡು ಸರ್ಕಾರ ದೋಚುವುದಕ್ಕೆ ಹೊರಟಿದೆ. ಇದು ದರೋಡೆ ಅಲ್ಲದೆ ಮತ್ತೇನು? ನಿಮ್ಮ ದರೋಡೆಯನ್ನು ಕಂಡು ಒಂದು ದಿವಸ ರೈತರು ಎಚ್ಚೆತ್ತುಕೊಳ್ಳುತ್ತಾರೆ. ನಾನು ಕೂಡ ಅಂಥ ಪರಿಸ್ಥಿತಿ ಬರಲಿ ಎಂದು ಆಶಿಸುತ್ತೇನೆ. ಉತ್ಪಾದನಾ ವಸ್ತುಗಳಾದ ಬಟ್ಟೆ ಜನತಾ ಕಂಟ್ರೋಲ್ ಕ್ಲಾತ್ ಎಷ್ಟು ತರಿಸಿದ್ದರು ಎಷ್ಟು ಮಾರಾಟ ಮಾಡಿದ್ದಾರೆ. ಆದರ ಗುಣಮಟ್ಟ ಇಳಿದಿರತಕ್ಕಂಥಾದ್ದು ನಿಜವಲ್ಲವೇ ಎಂದು ಕೇಳಿದಾಗ ಇದೇ ಸದನದಲ್ಲಿ ಸರ್ಕಾರ ಒಪ್ಪಿಕೊಂಡಿದೆ. ಕಂಟ್ರೋಲ್ ಬಟ್ಟೆಯ ಗುಣಮಟ್ಟ ಇಳಿದಿದೆ ಎಂದು. ಆದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಅದೇ ಬಟ್ಟೆಯನ್ನು ರೈತರಿಗೆ ಮತ್ತು ಕೂಲಿಕಾರರಿಗೆ ಒದಗಿಸುತ್ತಿದ್ದೀರಿ. ಆ ಬಟ್ಟೆ ಶವಸಂಸ್ಕಾರಕ್ಕೂ ಕೂಡ ಯೋಗ್ಯವಾಗಿಲ್ಲ. ಕನ್ಸೂಮರ್ಸ್ ಫೆಡರೇಷನ್‌ನಲ್ಲಿ ಲಕ್ಷಾಂತರ ರೂಪಾಯಿ ಬಟ್ಟೆ ಬಿದ್ದಿದೆ. ಅದನ್ನು ಹೇಳುವರಾರು ಇಲ್ಲ, ಕೇಳುವವರೂ ಇಲ್ಲ. ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ, ಅವರಿಂದ ಲೆವಿ ವಸೂಲು ಮಾಡಿದ್ದೀರಾ? ಅಹಮದಾಬಾದ್ ಮತ್ತು ಬಾಂಬೆಯವರು ಮಿಲ್ಲಿನ ಮಾಲಿಕರಿಗೆ ಇವತ್ತು ಮೀಟರಿಗೆ 50-60 ಪೈಸೆ ಹಾಗೂ ಒಂದು ರೂಪಾಯಿಯಂತೆ ಸಬ್ಸಿಡಿ ಕೊಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಕೊಡುತ್ತಿದ್ದೀರಿ. ತಾವು ಅದಕ್ಕೆ ಅಮೆಂಡ್‌ಮೆಂಟನ್ನು ತಂದರೆ ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಯಾವ ಗೊಬ್ಬರದ ಮೇಲೆ ಕಾರ್ಖಾನೆಯ ಮೇಲೆ ಲೆವಿಯನ್ನು ಹಾಕಿದ್ದೀರಿ. ಬ್ಲಾಕ್ ಮಾರ್ಕೆಟ್ ತಡೆಯುವುದಕ್ಕೆ ಎಷ್ಟರಮಟ್ಟಿಗೆ ಪ್ರಯತ್ನ ಪಟ್ಟಿದ್ದೀರಿ ತಾವು ಲೆಕ್ಕ ಕೊಡಿ. 50-55 ರೂಪಾಯಿ ಇದ್ದಂಥ ಯೂರಿಯಾ 105 ರೂಪಾಯಿಗಳಷ್ಟು ಬೆಲೆಗೆ ಏರಿಸಿದ್ದೀರಿ. ಒಂದು ಸಲ 50 ರೂಪಾಯಿಗಳಷ್ಟು ಬಂದು ಮೂಟೆಗೆ ಜಾಸ್ತಿ ಮಾಡಿದಿರಿ. ನಿಮ್ಮನ್ನು ಕೇಳಿದರೆ ನಾವಲ್ಲ ನಿಗದಿ ಮಾಡಿದ್ದು ಕೇಂದ್ರ ಸರ್ಕಾರದವರೆಂದು ಹೇಳುತ್ತೀರಿ. ರೈತರನ್ನು ಲೆವಿ ಕೊಡಿಯೆಂದು ಕೇಳುವವರು, ಗೊಬ್ಬರದ ಕಾರ್ಖಾನೆಯ ಮೇಲೂ ಲೆವಿಯನ್ನು ಹಾಕಿ ಗೊಬ್ಬರದ ಬೆಲೆಯನ್ನು ನಿಗದಿ ಮಾಡಿ ಮಾರಾಟ ಮಾಡಬೇಕೆಂದು ಹೇಳಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ತಯಾರು ಮಾಡುತ್ತ ಇರುವ ಗೊಬ್ಬರದ ಬೆಲೆಯನ್ನು ನಿಗದಿ ಮಾಡುತ್ತಾ ಇರುವವರು ಈ ಗೊಬ್ಬರದ ಕಾರ್ಖಾನೆಯ ಮ್ಯಾನೇಜ್‌ಮೆಂಟ್‌ನವರು. ಆದರೆ ರೈತ ಕಷ್ಟಪಟ್ಟು ಬೆಳೆದಂಥ ಧಾನ್ಯಗಳಿಗೆ ಬೆಲೆಯನ್ನು ನಿಗದಿ ಮಾಡುವುದು ರೈತರಿಗೆ ಕೊಟ್ಟಿಲ್ಲ. ನೀವು ಹೇಳುತ್ತೀರಿ ಬೆಲೆಯನ್ನು ನಿಗದಿ ಮಾಡುವುದು ಕೇಂದ್ರ ಸರ್ಕಾರವೆಂದು. ಕೇಂದ್ರ ಸರ್ಕಾರದವರು ಹೇಳುತ್ತಾರೆ

ನೀವು ಕೇಳುತ್ತೀರಿ, ಅದರಂತೆ ರೈತರಿಗೆ ಬೆಲೆಯನ್ನು ಕೊಡುತ್ತೇವೆಂದರೆ ಇದು ಯಾವ ನ್ಯಾಯವೆಂದು ಕೇಳಬೇಕಾಗಿದೆ. ಈವತ್ತಿನ ದಿವಸ ಸರ್ಕಾರದ ರಂಗದಲ್ಲಿಯೇ ತಯಾರಾಗುತ್ತಿರುವ ಕಬ್ಬಿಣ ಬೇಕು ಎಂದರೆ, ಆತನಿಗೆ ಕಂಟ್ರೋಲ್ ರೇಟಿನಲ್ಲಿ ಸಿಕ್ಕುತ್ತಿಲ್ಲ. ಕರ್ನಾಟಕದಲ್ಲಿ ಹಾಸನದಲ್ಲಿ ತಯಾರು ಮಾಡುತ್ತಿರುವ ಉಪಕರಣಗಳನ್ನು ರೈತರಿಗೆ ಕಡಮೆ ಬೆಲೆಯಲ್ಲಿ ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾವುದನ್ನು ಕೇಳಿದರೂ ಲೆಕ್ಕ ಕೊಡುವುದಕ್ಕೆ ಇವತ್ತಿನ ದಿವಸ ಸರ್ಕಾರ ತಯಾರಾಗಿಲ್ಲ. ಅದಕ್ಕೆ ಬದಲಾಗಿ ಸರ್ಕಾರದವರು ವಿದ್ಯುಚ್ಛಕ್ತಿಯ ಮೇಲೆ ದರಗಳನ್ನು ಜಾಸ್ತಿ ಮಾಡಿದ್ದಾರೆ. ಬೆಟರ್‌ಮೆಂಟ್ ಲೆವಿಯನ್ನು ಜಾಸ್ತಿ ಮಾಡಿದ್ದಾರೆ. ವಾಟರ್ ರೇಟನ್ನು ಜಾಸ್ತಿ ಮಾಡಿದ್ದಾರೆ. ರೈತರಿಗೆ ಅತಿಮುಖ್ಯವಾಗಿ ತನ್ನ ಬೇಸಾಯಕ್ಕೆ ಏನು ಬೇಕೋ ಅವುಗಳ ಮೇಲೆಲ್ಲ ಟ್ಯಾಕ್ಸಿನ ಹೊರೆಯ ರೂಪದಲ್ಲಿ ಹೇರಲಿಕ್ಕೆ ಹೊರಟಿದ್ದೀರಿ. ರೈತನು ಮಾಡಿದಂಥ ಪಾಪವಾದರೂ ಏನು ಎಂದು ಕೇಳಬೇಕಾಗಿದೆ. ಅವನು ಮಾಡಿದಂಥ ಪಾಪವನ್ನು ಅಳೆಯಲು ಒಂದು ಸ್ಕೇಲನ್ನು ತಯಾರು ಮಾಡಿದರೆ ಅದರಿಂದಲೂ ಕೂಡ ಸರಿಯಾದ ಅಳತೆ ಸಿಗುತ್ತದೋ ಇಲ್ಲವೋ ತಿಳಿಯುವುದಿಲ್ಲ. ಇಷ್ಟಾದರೂ ಸಹ ನಾಚಿಕೆಯಿಲ್ಲದೆ ರೈತ ಲೆವಿಯನ್ನು ಕೊಡದಿದ್ದರೆ ಎರಡರಷ್ಟು ಬೆಲೆಯನ್ನು ವಸೂಲು ಮಾಡುವುದಕ್ಕೆ ಹೊರಟಿರುತ್ತೀರಿ. ಏನು ದುರ್ಗತಿ ಸರ್ಕಾರಕ್ಕೆ ಬಂದಿತೋ ಗೊತ್ತಿಲ್ಲ. ಸಹಕಾರಿ ಸಂಘಗಳಲ್ಲಿ ದುರುಪಯೋಗ ಮಾಡಿದವರನ್ನು ಬಿಟ್ಟಿರುತ್ತೀರಿ. ಸರ್ಕಾರದಲ್ಲಿ ಲೂಟಿ ಮಾಡಿದಂಥವರನ್ನು ಬಿಟ್ಟಿರುತ್ತೀರಿ. ದೇಶದಲ್ಲಿ ಆಹಾರದ ಕೊರತೆಯಿರುವಾಗ, ಹೆಚ್ಚಿನ ಆಹಾರವನ್ನು ಉತ್ಪಾದನೆ ಮಾಡಬೇಕೆಂದು ಹೇಳುತ್ತಿರುವ ಸಂದರ್ಭದಲ್ಲಿ ಕ್ವಾಲಿಟಿ ಆಫ್ ಫುಡ್ ಉತ್ಪಾದನೆ ಮಾಡಬೇಕೆಂದು ಹೇಳತಕ್ಕಂಥ ಸಂದರ್ಭದಲ್ಲಿ ರೈತನಿಗೆ ಬೇಕಾದಂತ ಉತ್ತೇಜನವನ್ನು ಕೊಡದೆ, ರೈತನನ್ನು ಬಗ್ಗು ಬಡಿಯುವಂಥ ಕೆಲಸವನ್ನು ಸರ್ಕಾರದವರು ಏತಕ್ಕೆ ಮಾಡುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ಇದೇ ಸದನದಲ್ಲಿ ಮಾನ್ಯ ಪ್ರಭಾಕರ್‌ರವರು ಒಂದು ಪ್ರಶ್ನೆಯನ್ನು ಕೇಳಿದರು. ತಮಿಳುನಾಡಿನಿಂದ ಎಷ್ಟು ಅಕ್ಕಿ ಮತ್ತು ಭತ್ತವನ್ನು ತರಿಸುತ್ತಿದ್ದೀರೆಂದು, ಅದನ್ನು ಎಲ್ಲೆಲ್ಲಿ ವಿತರಣೆ ಮಾಡಿದ್ದೀರಿ, ಯಾರಿಗೆ ಕೊಟ್ಟಿದ್ದೀರೆಂದು ಪ್ರಶ್ನೆ ಕೇಳಿರುತ್ತಾರೆ. ಮಾನ್ಯ ಸದಸ್ಯರು ಈಗ ಇಲ್ಲಿಲ್ಲ. ಅವರ ಪ್ರಶ್ನೆಗೆ ಉತ್ತರ ಬರಲಿಲ್ಲ. ಆದರೂ ಕೂಡ ಇವತ್ತಿನ ದಿವಸ ಉತ್ತರ ಅಚ್ಚಾಗಿದೆ. ಕಳೆದ ನಾಲ್ಕು ವರ್ಷದಿಂದ ತಮಿಳುನಾಡಿನಿಂದ ಸುಮಾರು 9940 ಹಾಗೂ 12514 ಕ್ವಿಂಟಾಲ್‌ಗಳಷ್ಟು ಭತ್ತ 1973-74ನೇ ಸಾಲಿನಲ್ಲಿ ಒಂದು ಸಾರಿ ತರಿಸಿಕೊಂಡಿದ್ದೇವೆಂದು ಹೇಳಿದಿರಿ. ಆದರೆ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದು ಏನು ಎಂದರೆ ಭತ್ತಕ್ಕೆ ಬದಲಾಗಿ ವಿದ್ಯುತ್ತನ್ನು ಕೊಟ್ಟು ಅದರ ಆಧಾರದ ಮೇಲೆ ತಂದಿದ್ದೇವೆಂದು. ಆದರೆ ಇದಕ್ಕೆ ವಾಪಸ್ ಕೊಟ್ಟಿದ್ದು ಏನು ಎಂದರೆ ಏನೂ ಇರುವುದಿಲ್ಲ. ಈವತ್ತಿನ ದಿವಸ ಏನೂ ಕೊಟ್ಟಿಲ್ಲವೆನ್ನುವುದು ಅಚ್ಚಾಗಿರತಕ್ಕಂಥ ಉತ್ತರದಿಂದ ಗೊತ್ತಾಗುತ್ತಾ ಇದೆ. ಆದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಒಂದು ಕ್ವಿಂಟಾಲ್‌ನಷ್ಟು ಭತ್ತ ಕೂಡ ತಮಿಳುನಾಡಿನಿಂದ ಕರ್ನಾಟ ಬಂದಿಲ್ಲ. ಇದು ಎಲ್ಲಿ ಹೋಯಿತು ಎಂದರೆ ಅವರಿಗೆ ಬೇಕಾದಂಥ ಏಜೆಂಟರಿಗೆ ಲೈಸೆನ್ಸ್ ಕೊಟ್ಟು ಮಂಡಿಯಲ್ಲಿರತಕ್ಕಂಥ ಏಜೆಂಟರ ಮೂಲಕ ತಮಿಳುನಾಡಿನಿಂದ ಕೇರಳಕ್ಕೆ ರವಾನೆಯಾಗಿ ಲಕ್ಷಾಂತರ ರೂಪಾಯಿಗಳಷ್ಟು ಲಾಭವನ್ನು ಮಾಡಿದ್ದಾರೆ. ಅಂಥವರಿಂದ ಯಾವ ಲೆವಿಯನ್ನು, ಯಾವ ಬೆಟರ್‌ಮೆಂಟ್ ಅನ್ನು ಮಾಡಿರುತ್ತೀರಿ. ಸರಕು ಎಲ್ಲಿ ಹೋಯಿತು ಎಂದು ಕೇಳಿದರೆ ಅದಕ್ಕೆ ಉತ್ತರ ಸೊಸೈಟಿಗಳಿಗೆ ಹಂಚಿದ್ದೇವೆ ಎಂದು ಹೇಳುತ್ತೀರಿ, ಎಲ್ಲೆಲ್ಲಿಂದ ಬಂತು? ಯಾವ ಯಾವ ದರದಲ್ಲಿ ಹಂಚಿದೀರಿ, ಯಾವ ಯಾವ ಜಿಲ್ಲೆಗೆ ಹಂಚಿದ್ದೀರೆಂದು

ಹೇಳುವುದಕ್ಕೆ ಲೆಕ್ಕ ಕೊಡಿ ಎಂದು ಕೇಳುತ್ತಿದ್ದೇನೆ? ಈವತ್ತಿನ ದಿವಸ ರೈತರ ಮೇಲೆ ಒಂದಕ್ಕೆ ಎರಡರಷ್ಟು ದಂಡವನ್ನು ಹಾಕುವುದಕ್ಕೆ ಹೊರಟಿರುತ್ತೀರಿ. ನೀವು ಮಾಡುತ್ತಿರುವ ಅನಾಚಾರಕ್ಕೆ, ಭ್ರಷ್ಟಾಚಾರಕ್ಕೆ ಮಿತಿ ಇಲ್ಲದಂತಾಗಿದೆ. ಸುಲಭವಾಗಿ ಹೇಳಿ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೀರಿ. ದಯವಿಟ್ಟು ಲೆಕ್ಕವನ್ನು ಕೊಡಿ. ಎಮರ್ಜೆನ್ಸಿ ಎಂದು ಹೇಳಿ ನಮ್ಮ ಬಾಯನ್ನು ಮುಚ್ಚಿಸಿ ನಿಮ್ಮ ಕೆಲಸವನ್ನು ಮಾಡಿಕೊಳ್ಳುವುದು ಬಹಳ ದಿವಸಗಳು ನಡೆಯುವುದಿಲ್ಲ ಎಮರ್ಜೆನ್ಸಿ ಇರಬಹುದು. ಜನರ ಬಾಯನ್ನು ಅದುಮಿಟ್ಟುಕೊಳ್ಳಲು ಸಾಧ್ಯವಿಲ್ಲ. ಈ ರೀತಿ ಅನ್ಯಾಯ ನಡೆಯುವುದಾದರೆ ನಿಮ್ಮ ಎಮರ್ಜೆನ್ಸಿಯನ್ನು ಮುರಿಯಲೇ ಬೇಕಾಗುತ್ತದೆ. ಈ ರೀತಿಯಾದ ಕೆಲಸವನ್ನು ಮಾಡುವುದಕ್ಕೆ ನಿಮಗೆ ಕಾನೂನು ಕಾಯಿದೆಗಳು ಇರುವುದಿಲ್ಲ. ಎಲ್ಲಿ ಹೋಯಿತು ಭತ್ತ ಮತ್ತು ಅಕ್ಕಿ, ಕೇರಳಕ್ಕೆ ಹೋಯಿತೆ? ಯಾರು ಯಾರಿಗೆ ಲೈಸನ್ಸ್‌ಗಳನ್ನು ಕೊಟ್ಟಿದ್ದೀರಿ, ಕರ್ನಾಟಕದಲ್ಲಿ ಭತ್ತವನ್ನು, ಅಕ್ಕಿಯನ್ನು ಹಂಚಿರುವುದಕ್ಕೆ ಸಂಪೂರ್ಣವಾದ ಮಾಹಿತಿಯನ್ನು ಕೊಡಬೇಕೆಂದು ಕೇಳುತ್ತೇನೆ.

ಆಹಾರ ಧಾನ್ಯಗಳನ್ನು ಹೊರಗಡೆಯಿಂದ ತಂದರೆ ಆಹಾರ ಧಾನ್ಯದ ಬೆಲೆ ಇಳಿಯುತ್ತದೆ. ಇವತ್ತು ಅದಾಗುತ್ತಿದೆ. ಇವತ್ತು ಹೋರ್ಡರ್ಸ್‌ಗೆ ಅವಕಾಶ ಇಲ್ಲ. ಬ್ಯಾಂಕಿನಲ್ಲೂ ಹೆಚ್ಚಿನ ಸೌಲಭ್ಯ ಇಲ್ಲ. ಅದರಿಂದ ಇವತ್ತಿನ ದಿವಸ ಬೆಲೆ ಕಡಮೆಯಾಗುತ್ತಿದೆ. ನಾವು ದೇಶದಲ್ಲಿ ಜನರ ರಕ್ತವನ್ನು ಹೀರುತ್ತಾ ಇರುವ ಜನರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದಾಗ ಕ್ರಮ ತೆಗೆದುಕೊಂಡಿದ್ದು ಕೃಷ್ಣನ್ ಅವರ ಪಾರ್ಟಿಯ ಕಾಮ್ರೇಡ್‌ಗಳ ಮೇಲೆ. ಅವರ ಮೇಲೆ ಲಾಠಿ ಏಟುಗಳು ಬಿದ್ದವು. ತರಗುಪೇಟೆಯಲ್ಲಿ ಲಾಠಿ ಏಟು ಬಿತ್ತು. ಇದು ಬೆಂಗಳೂರಿನಲ್ಲಿ ನಡೆದಂಥ ವಿಷಯ ಹೇಳುತ್ತಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್ :- ನಮ್ಮ ಪಾರ್ಟಿಯಿಂದ ಅಖಿಲ ಭಾರತ ಮಟ್ಟದಲ್ಲಿ ಚಳವಳಿ ಮಾಡುವುದಕ್ಕೆ ಹೋದವು, ಅದೇ ರೀತಿ ಬೆಂಗಳೂರಿನಲ್ಲೂ ಮಾಡಿದೆವು. ಬೆಂಗಳೂರಿನಲ್ಲಿ ಡೀಹೋರ್ಡಿಂಗ್ ಮಾಡುವುದಕ್ಕೆ ಬಿಡಲಿಲ್ಲ. ಪೊಲೀಸಿನವರಿಗೆ ಜಾಗ ತೋರಿಸುತ್ತೇವೆ ಎಂದು ಹೇಳಿದರೂ ಬಿಡಲಿಲ್ಲ. ನಮ್ಮನ್ನು ಅರೆಸ್ಟ್ ಮಾಡಿ ವಾಲಂಟಿಯರ್ಸ್‌ಗಳನ್ನು ಹಿಡಿದುಕೊಂಡು ಬಡಿದರು.

## ರೈತರೇ ಅವರ ಬೆಳೆಗೆ ಬೆಲೆ ನಿಗದಿ ಮಾಡಲಿ

ಶ್ರೀ ಸಿ. ಬೈರೇಗೌಡ :- ನಿಜ ಹೇಳಿದರೆ ಲಾಠಿ ಏಟು. ಹೋರ್ಡರ್ಸ್‌ನ್ನು ಹಿಡಿದರೆ ಆಹಾರಧಾನ್ಯ ಹೊರಗೆ ಬರುತ್ತದೆ ಎಂದು ಹೇಳಿದರೆ ಅದನ್ನು ಮಾಡಲಿಲ್ಲ. ಹೋರ್ಡರ್ಸನ್ನು ಇವತ್ತಿನ ದಿವಸ ರಕ್ಷಣೆ ಕೊಟ್ಟರು. ಅವತ್ತಿನ ದಿವಸ ಬೆಲೆಗಳು ಜಾಸ್ತಿಯಾಗುತ್ತಿದೆ ಎಂದಾಗ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲಾ ಕಡೆ ಬೆಲೆಗಳು ಜಾಸ್ತಿಯಾಗಿವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಆಕಾಶಪುರಾಣ ಹೇಳಿದರು. ಇವತ್ತು ರೈತ ಲೆವಿ ಕೊಡದೇ ಇದ್ದರೆ ಅದರ ಎರಡರಷ್ಟು ವಸೂಲಿ ಮಾಡಬೇಕು. ಅವರಿಗೆ ಪೆನಾಲ್ಟಿ ಹಾಕಬೇಕು ಎಂದು ತಿದ್ದುಪಡಿ ತಂದಿದ್ದಾರೆ. ಆದರೆ ಸರ್ಕಾರದವರು ಮಾಡುವಂಥ ಅನ್ಯಾಯಗಳಿಗೆ ಯಾರು ಪೆನಾಲ್ಟಿ ಹಾಕಬೇಕಾಗಿದೆ. ನಾವು ಬೆಲೆಗಳು ಜಾಸ್ತಿಯಾಗುತ್ತಿದೆ ಎಂದು ಹೇಳಿದರೆ ಅದು ಇಂಟರ್ ನ್ಯಾಷನಲ್

ಫಿನಾಮಿನಾ ಆಗಿದೆ ಎಂದು ಹೇಳಿದರು. ಹಾಗಾದರೆ ಈಗ ಯಾವ ಯಾವ ದೇಶದಲ್ಲಿ ಏನೇನಾಗಿದೆ, ಇಲ್ಲಿ ಮಾತ್ರ ಯಾತಕ್ಕೆ ಬೆಲೆ ಕಡಿಮೆಯಾಗುತ್ತಿದೆ ಹೇಳಿ. ಸರಿಯಾದಂಥ ಕ್ರಮ ಜರುಗಿಸಿದ್ದರೆ ಆಗಲೂ ಕೂಡ ಬೆಲೆ ಹತೋಟಿಯಲ್ಲಿಡುವುದಕ್ಕೆ ಸಾಧ್ಯವಿತ್ತು. ಆದರೆ ಆಗ ಮಾಡಲಿಲ್ಲ. ಹೋರ್ಡರ್ಸ್, ಬ್ಲಾಕ್‌ಮಾರ್ಕೆಟರ್ಸ್, ಸ್ಮಗ್ಲರ್ಸ್ ಅವರೆಲ್ಲರೂ ಸರ್ಕಾರದ ಪರವಾಗಿ ಕೆಲಸ ಮಾಡುತ್ತಿದ್ದವರು. ಆದ್ದರಿಂದ ಬೆಲೆಗಳು ಜಾಸ್ತಿಯಾಗುವುದಕ್ಕೆ ಅವಕಾಶವಾಯಿತು. ಆವತ್ತಿನ ದಿವಸ ನ್ಯಾಯವಾಗಿ ಕೆಲಸ ಮಾಡುವುದಕ್ಕೆ ಸರ್ಕಾರಕ್ಕೆ ಇಚ್ಛೆ ಇರಲಿಲ್ಲ. ಆ ಕಾರಣದಿಂದ ಬೆಲೆಗಳು ಜಾಸ್ತಿಯಾಗುತ್ತಿತ್ತು. ಈಗಲೂ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ರೈತನಿಗೆ ಸರಿಯಾಗಿ ಪ್ರೋತ್ಸಾಹ, ರೈತನಿಗೆ ಬೇಕಾದಂತ ಅನುಕೂಲತೆಗಳನ್ನು ಒದಗಿಸಿಕೊಡಿ. ಕಾರ್ಖಾನೆಗಳವರು ತಾವು ತಯಾರು ಮಾಡತಕ್ಕ ಪದಾರ್ಥಗಳಿಗೆ ಬೆಲೆ ನಿಗದಿ ಮಾಡುವಂಥ ಅನುಕೂಲತೆ ಹೇಗೆ ಪಡೆದಿದ್ದಾರೆಯೋ ಅದೇ ರೀತಿ ಅನುಕೂಲತೆ ರೈತರಿಗೂ ಒದಗಿಸಿಕೊಡಿ. ಅವರಿಂದ ಬೆಳೆದಂಥ ಪದಾರ್ಥಕ್ಕೆ ಅವರೇ ಬೆಲೆಯನ್ನು ನಿಗದಿ ಮಾಡಲಿ ; ಆ ರೀತಿ ಏಕೆ ಮಾಡಬಾರದು? ಆ ರೀತಿಯಾದಂಥ ಕಾನೂನು ತರುವುದಕ್ಕೆ ಸರ್ಕಾರಕ್ಕೆ ಇಚ್ಛೆ ಇಲ್ಲ. ನಾವು ಆ ರೀತಿಯಾದಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ವಿಷಯ ಮತ್ತೆ ಎತ್ತಬೇಕಾಗುತ್ತದೆ. ಇವರು ಮಾಡಿದಂಥ ಕರ್ಮಕಾಂಡ ವರದಿಯಲ್ಲಿದೆ. ಅದಕ್ಕೆ ಏನು ತಮ್ಮ ಉತ್ತರ?

ಶ್ರೀಮತಿ ಇ. ಇ. ವಾಜ್ :– ಉತ್ತರ ಕೊಡೋಣ.

ಶ್ರೀ ಸಿ. ಬೈರೇಗೌಡ :– ಡಿಸೆಂಬರ್ 1975ರಲ್ಲಿ ರಿಪೋರ್ಟ್ ಕೊಟ್ಟಿದೆ. 6-7 ತಿಂಗಳಾಯಿತು ಅದಕ್ಕೆ ಏನಿದೆ ತಮ್ಮ ಉತ್ತರ. ಯಾರೋ ಒಬ್ಬ ಏಜೆಂಟರನ್ನು ಕರೆದು ಅವರಿಗೆ ಕೊಡಬೇಕು ಎಂದು ನಿರ್ಧಾರ ಕೈಗೊಂಡಿರಿ.

ಶ್ರೀಮತಿ ಇ. ಇ. ವಾಜ್ :– ಎಷ್ಟು ಸಲ ಹೇಳಿದ್ದೇ ಹೇಳುವುದು?

ಶ್ರೀ ಸಿ. ಬೈರೇಗೌಡ :– ನೀವು ಮಾಡಿದ್ದೇ ಮಾಡಿದರೆ ನಾವು ಹೇಳಿದ್ದೇ ಹೇಳಬೇಕಾಗುತ್ತದೆ. ಒಂದಾದ ಮೇಲೊಂದು ಅನ್ಯಾಯ ಮಾಡುತ್ತಾ ಇದ್ದರೆ ಹೇಳಬೇಕಾಗುತ್ತದೆ. ರಿಪೋರ್ಟ್ ಕೊಟ್ಟು ಐದಾರು ತಿಂಗಳಾಯಿತು. ಏನು ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಅದನ್ನೂ ಕೂಡ ಇವತ್ತಿನ ದಿವಸ ಹೇಳಬೇಕಾಗಿದೆ. ಇವತ್ತು ತಮಗೆ ಮೆಜಾರಿಟಿ ಇರಬಹುದು. ನಿಮ್ಮ ಪಾರ್ಟಿಯವರ ಬಾಯನ್ನು ಇಲ್ಲಿ ಮುಚ್ಚಿಸಿದ್ದೀರಿ ಹೊರಗಡೆ ನಮ್ಮ ಬಾಯನ್ನು ಹೇಗೆ ಮುಚ್ಚಿಸಿದ್ದೀರೋ ಅದೇ ರೀತಿ ನಿಮ್ಮ ಪಾರ್ಟಿಯವರ ಬಾಯಿಯನ್ನು ಇಲ್ಲಿ ಮತ್ತು ಹೊರಗಡೆ ಎರಡೂ ಕಡೆಗಳಲ್ಲಿ ಮುಚ್ಚಿಸಿದ್ದೀರಿ. ನೀವು ಮಾಡಿರತಕ್ಕ ಅನ್ಯಾಯ, ಅಕ್ರಮ ಬೇಕಾದಷ್ಟು ಇವೆ. ತುರ್ತುಪರಿಸ್ಥಿತಿಯಲ್ಲಿ ನೀವು ಏನೇನು ಕೆಲಸ ಮಾಡುತ್ತಿದ್ದೀರಿ ಎಂಬುದು ಪತ್ರಿಕೆಯಲ್ಲಿ ಬರುವುದಿಲ್ಲ. ಆದ್ದರಿಂದ ಪರವಾಗಿಲ್ಲ ಎಂದು ತಿಳಿದುಕೊಂಡಿರಬಹುದು. ಅದರೆ ರೆಕಾರ್ಡ್ಸ್‌ನಲ್ಲಿರುತ್ತದೆ. ಅದಕ್ಕೋಸ್ಕರವಾದರೂ ಸರಿಯಾಗಿ ಕೆಲಸ ಮಾಡಬೇಕಾಗಿದೆ. ತಮಿಳುನಾಡಿನಿಂದ ಬಂದಂಥ ಅಕ್ಕಿ ಎಲ್ಲಿ ಹೋಯಿತು? ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿ ಪ್ರಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ?

**Mr. Deputy Speaker :-** The Hon'ble Member may please be within the scope and he may be rest assured that whatever he has spoken beyond the scope will not be replied by the Hon'ble Minister also.

**Smt. E. E. Vaz :-** I think our Hon'ble Member has not known that he has easily wasted his lungs.

**Sri. C. Byregowda :-** I have not wasted. I have done my duty.

**Mr. Deputy Speaker :-** Who says that the Hon'ble member has not done his duty. To day he has done his duty most splendidly. Nobody will dispute it. All the same, I have given a little attitude.

ಶ್ರೀ ಸಿ. ಬೈರೇಗೌಡ :- ಈಗ ಲೆವಿ ಕೊಡದೇ ಇದ್ದರೆ ಎರಡರಷ್ಟು ಕೊಡಬೇಕು ಎಂದು ಹೇಳಿದ್ದೀರಿ. ರೈತ ಬೆಳೆದ ತಪ್ಪಿಗೆ ಪೆನಾಲ್ಟಿ ಬೇರೆ ಕೊಡಬೇಕೆ? ನಿಮಗೆ ಅಧಿಕಾರ ಇದೆ ಎಂದು ಹೇಳುತ್ತಾ ಇರಿ, ನಿಮ್ಮ ಕಥೆ ಮುಗಿಯಲಿ ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿರುವುದೇನೆಂದರೆ ಕೊನೇಪಕ್ಷ ಈ ಒಂದು ತಿದ್ದುಪಡಿಯನ್ನಾದರೂ ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## ತಂತಿ ಕಂಬ ಇಲ್ಲದೆ ಪವರ್ ಬಿಡುವುದು

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪವರ್ ಮಂತ್ರಿಗಳು ತಂತಿ ಮತ್ತು ಕಂಬ ಇಲ್ಲದೆ ಪವರನ್ನು ಬಿಡುವುದಕ್ಕೆ ಹೊರಟಿದ್ದಾರೆ. ಇದು ಒಂದು ಹೊಸ ವಿಧಾನವಾಗಿರುತ್ತದೆ. ಈಗ ತಂದಿರುವ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ರಿಕವರಿ ಥ್ರ್ಯೂಸ್ 1976 ಬಿಲ್ ಏನು ತಂದಿರುತ್ತಾರೆ ಇದನ್ನು ಸ್ವಾಗತ ಮಾಡಬೇಕು ಎಂದೆನಿಸುತ್ತದೆ. ಇದನ್ನು ಒಳಹೊಕ್ಕು ನೋಡಿದರೆ ಇದರಲ್ಲಿ ಕಂಡುಬರುವ ಲೋಪದೋಷಗಳಿಗೆ ಕಾರಣವೆಂದರೆ ಇಲಾಖೆಯ ಅದಕ್ಷತೆಯೇ ಕಾರಣವಾಗಿರುತ್ತದೆ ಎನ್ನುವುದು ಖಂಡಿತವಾಗಿಯೂ ತಿಳಿದುಬರುತ್ತದೆ. ಇರಿಗೇಷನ್ ಪಂಪ್‌ಸೆಟ್‌ಗಳು ಮತ್ತು ಮನೆಗಳಿಗೆ ನಿಮ್ಮ ಕಡೆಯಲ್ಲಿ ಮೀಟರ್‌ಗಳಲ್ಲಿ ಸ್ಪಾಟ್ ರೀಡಿಂಗ್ ನೋಡಿ ಬಿಲ್ಲನ್ನು ಕೊಡುವ ಪದ್ಧತಿ ಇರುತ್ತದೆ. ಅನೇಕ ಸಂದರ್ಭದಲ್ಲಿ ಈ ರೀತಿ ಸ್ಪಾಟ್ ಬಿಲ್ಲನ್ನು ಕೊಟ್ಟು ಹೋದರೂ ಅರಿಯರ್ಸ್ ಉಂಟು ಎಂದು ಹೇಳುತ್ತಲೆ ಇರುತ್ತಾರೆ. ಅರಿಯರ್ಸ್ ಎಷ್ಟು ಇರುತ್ತದೆನ್ನುವುದು ಗೊತ್ತಿರುವುದೇ ಇಲ್ಲ. ಆದರೆ ಜೊತೆಗೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಎಷ್ಟು ವಿದ್ಯುಚ್ಛಕ್ತಿಯನ್ನು ಖರ್ಚು ಮಾಡುತ್ತಾರೆಂದು ಮೀಟರುಗಳನ್ನು ಹಾಕುತ್ತಾರೆ. ಇವರು ಹಾಕುವ ಮೀಟರ್ ಕ್ವಾಲಿಟಿಯನ್ನು ನೋಡಿದರೆ ಬಹುಶ ಇವುಗಳನ್ನು ಹಾಕಿದ 2-3 ವರ್ಷಗಳಲ್ಲಿಯೇ ಸುಟ್ಟು ಹೋಗುತ್ತದೆ. ಇದಕ್ಕೆ ಯಾರು ಕಾರಣರು ಎನ್ನುವುದನ್ನು ನೋಡುವುದಿಲ್ಲ. ಮೀಟರ್ ಕ್ವಾಲಿಟಿಯನ್ನು ನೋಡುವುದಿಲ್ಲ. ಇದು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತದೋ ಇಲ್ಲವೋ ನೋಡುವುದಿಲ್ಲ. ಇದು ಸುಟ್ಟು ಹೋಗಲು ಯಾರು ಕಾರಣರು ಇದನ್ನು ತನಿಖೆ

ಮಾಡುವುದಿಲ್ಲ. ಒಂದು ಮೀಟರ್ ಸುಟ್ಟು ಹೋದರೆ 100-150 ರೂಪಾಯಿಗಳ ದಂಡವನ್ನು ಐಪಿ ಸೆಟ್ಟು ಇಟ್ಟುಕೊಂಡಿರುವ ಮಾಲಿಕನ ಮೇಲೆ ಹೊರಿಸಿಬಿಡುತ್ತಾರೆ. ನಿಜವಾಗಿಯೂ ಮೀಟರ್‌ಗಳು ಸುಟ್ಟು ಹೋಗಿದ್ದರೆ ರೈತರಿಂದ ವಸೂಲು ಮಾಡಿ, ಬೇಡವೆಂದು ಹೇಳುವುದಿಲ್ಲ. ಮೀಟರ್‌ಗಳಲ್ಲಿಯೇ ದೋಷವಿದ್ದು ಅದಕ್ಕೆ ಸುಟ್ಟುಹೋದರೆ ಅದರ ನಷ್ಟವನ್ನು ರೈತರಿಂದಲೇ ವಸೂಲು ಮಾಡುವುದು ಎಂದರೆ ನಾನು ಇದನ್ನು ವಿರೋಧ ಮಾಡಲೇ ಬೇಕಾಗುತ್ತದೆ. ಅರಿಯರ್ಸ್ ಬಗ್ಗೆ ಎಷ್ಟು ಬಾಕಿ ಇರುತ್ತದೆಂದು ಕೇಳಿದರೆ ಇದರ ಲೆಕ್ಕ ಸಿಕ್ಕುವುದೇ ಕಷ್ಟವಾಗಿರುತ್ತದೆ. ಒಂದು ಎರಡು ಐಪಿ ಸೆಟ್ಟುಗಳನ್ನು ಇಟ್ಟುಕೊಂಡಿರುವವರಿಂದ ಯಾರಿಂದಲೂ ಅರಿಯರ್ಸ್ ಇರುವುದಿಲ್ಲ. ಈವತ್ತಿನ ದಿವಸ ದೇಶದಲ್ಲಿ ಲೂಟಿ ಮಾಡುತ್ತಿರುವ ದೊಡ್ಡ ದೊಡ್ಡ ಕದೀಮರಿಂದ ಎಲೆಕ್ಟ್ರಿಸಿಟಿ ಬಾಕಿ ಇರುತ್ತದೆ. ಒಂದು ಯೂನಿಟ್ಟಿಗೆ 15ಪೈಸೆ ಜಾಸ್ತಿ ಮಾಡಬೇಕೆಂದಿದ್ದರೂ ಅವರಿಗೆ 5 ಪೈಸೆ ಜಾಸ್ತಿ ಮಾಡಿರುತ್ತಾರೆ. ಅಗ್ರಿಮೆಂಟ್ ಪ್ರಕಾರ ಕಡಮೆ ಬೆಲೆಯಲ್ಲಿ ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದರೂ ಕೂಡ ವಿದ್ಯುಚ್ಛಕ್ತಿ ಬಿಲ್ಲನ್ನು ಕಟ್ಟದೆ ಬಾಕಿ ಇಟ್ಟುಕೊಂಡಿರುತ್ತಾರೆ. ಇದನ್ನು ವಸೂಲು ಮಾಡುವುದು ವಿದ್ಯುಚ್ಛಕ್ತಿ ಮಂಡಳಿಯ ಕರ್ತವ್ಯವಾಗಿರುತ್ತದೆ. ಲ್ಯಾಂಡ್ ರೆವಿನ್ಯೂವನ್ನು ಯಾವ ರೀತಿಯಲ್ಲಿ ವಸೂಲು ಮಾಡುತ್ತೀರೋ ಆ ರೀತಿ ಎಲೆಕ್ಟ್ರಿಸಿಟಿ ಬಿಲ್ ವಸೂಲು ಮಾಡಬೇಕೆಂದು ಹೇಳುತ್ತೇನೆ. ಈವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕನ್ನೇ ತೆಗೆದುಕೊಂಡರೆ ಎರಡು ವರ್ಷಗಳಿಂದ ಐಪಿ ಸೆಟ್ಟುಗಳಿಂದ ಬಾಕಿ ಬರಬೇಕಾದ್ದು ಇರುತ್ತದೆ. ಈವತ್ತಿನ ದಿವಸ ಅಲ್ಯೂಮಿಯಂ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದೀರಿ ಅವರು ಯಾವ ರೀತಿಯಲ್ಲಿ ಕಡಮೆ ಬೆಲೆಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದರೋ ಅದೇ ರೀತಿಯಲ್ಲಿ ಶೇಕಡ 70 ಪರ್ಸೆಂಟ್, 80 ಪರ್ಸೆಂಟ್‌ರಷ್ಟು ಉತ್ಪಾದನೆಯಲ್ಲಿ ಲೆವಿಯನ್ನು ಕೊಡಲೇಬೇಕೆಂದು ಕಡ್ಡಾಯವನ್ನು ಹಾಕಿದರೆ ಒಪ್ಪಿಕೊಳ್ಳುತ್ತೇನೆ. 1966 ರಿಂದ 76ನೇ ಇಸವಿಯವರೆಗೂ ಇಂಡಸ್ಟ್ರೀಸ್‌ಗಳನ್ನು ಸ್ಥಾಪನೆ ಮಾಡಿಕೊಂಡು ಬಂದಿರುತ್ತಾರೆ. ಇದರ ಎಷ್ಟು ಅರಿಯರ್ಸ್ ಉಳಿದುಕೊಂಡಿದೆ. ಹೀಗೆ ಉಳಿದುಕೊಂಡಿರುವ ಅರಿಯರ್ಸ್‌ಗೆ ಆಗತಕ್ಕಂಥ ಬಡ್ಡಿ ಎಷ್ಟು ಇದನ್ನು ಲೆಕ್ಕ ಹಾಕಿ ನೋಡಬೇಕು. ಇದನ್ನು ಯಾವಾಗ ತೀರಿಸುತ್ತಾರೋ ಒಂದು ಅರ್ಥವಾಗಿಲ್ಲ. ಆದ್ದರಿಂದ ಈಗ ತಾವು ಒಂದು ಕಾನೂನನ್ನು ಏನು ತರುತ್ತಿದ್ದೀರಿ. ಆದ್ದರಿಂದ ಇನ್ನು ಮೇಲಾದರೂ ಕೂಡ ಬಾಕಿ ನಿಲ್ಲದಂತೆ ವಿದ್ಯುಚ್ಛಕ್ತಿ ಮಂಡಲಿಗೆ ಬರಬೇಕಾದ ಬಾಕಿ ಹಣವನ್ನು ವಸೂಲು ಮಾಡುವುದರಲ್ಲಿ ದಕ್ಷತೆಯಿಂದ ಕೆಲಸ ಮಾಡಿದರೆ ನಮಗೆ ಬಹಳ ಸಂತೋಷ. ಆದರೆ ಇದು ನಿಮ್ಮಿಂದ ಸಾಧ್ಯವಾಗುವುದಿಲ್ಲ ಎನ್ನುವುದನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

## ಹೋಟೆಲ್ ತಿಂಡಿ ದರದ ಬಗ್ಗೆ

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಬೆಲೆ ವಿಷಯದಲ್ಲಿ ಸರ್ಕಾರ ಆಲಸ್ಯ ಮನೋಭಾವನೆ ತಾಳಿದರೆ ನನಗೆ ಸಿಟ್ಟು ಬರುತ್ತದೆ. ತರಕಾರಿ ಬೆಳೆದಂಥ ರೈತರಿಗೆ ಹೊಟ್ಟೆ ಉರಿಯುತ್ತಿದೆ, ಕೆ.ಜಿ. ಟೊಮ್ಯಾಟೋ 1 ರೂಪಾಯಿಗೆ ಮಾರಾಟವಾಗುತ್ತಿದೆ. ರಾಗಿ, ಭತ್ತ 200 ರೂಪಾಯಿಗೂ ಕೇಳುವವರಿಲ್ಲ. ಆಲೂಗಡ್ಡೆ ಕೇಳುವವರಿಲ್ಲ. ಈರುಳ್ಳಿ 28 ರೂಪಾಯಿಗೆ

ಕ್ವಿಂಟಾಲ್ ಬರುತ್ತಿದೆ. ಇಷ್ಟೆಲ್ಲಾ ಆಹಾರ ಪದಾರ್ಥಗಳ ಬೆಲೆಗಳು ಕಡಮೆ ಇದ್ದರೂ ಸಹ ಹೊರಗಡೆಯಿಂದ ಬರತಕ್ಕ ಜನತೆಯ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಹೋಟೆಲ್‌ನವರು. ಅವರು ಹೇಳಿದ್ದೇ ರೇಟಾಗಿದೆ. ಮೂರು ಬಾಸುಂದಿ 7 ರೂಪಾಯಿ 50 ನಯಾಪೈಸೆ. ಯಾರಪ್ಪನ ಮನೆ ಗಂಟು? 6 ವಡೆ 2 ರೂಪಾಯಿ 40 ಪೈಸೆ. ಅವರಿಷ್ಟ ಬಂದಹಾಗೆ ರೇಟ್ ಹಾಕಿಕೊಂಡು ಜನತೆಯ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು :- ಬಾಸುಂದಿಗೆ ಹಾಲು, ಸಕ್ಕರೆಯನ್ನು ತಾವು ಒದಗಿಸಿದ್ದೀರಾ?

ಶ್ರೀ ಸಿ. ಬೈರೇಗೌಡ :- ಹಳ್ಳಿಯಿಂದ ಹಾಲು ಬರುತ್ತದೆ. ಸಕ್ಕರೆ ಕಂಟ್ರೋಲ್ ಮಾಡಿದ್ದಾರೆ. ಉದ್ದಿನ ವಡೆ 40 ಪೈಸೆ. ಯಾತಕ್ಕ ಈ ರೀತಿಯಾದ ಆಲಸ್ಯ ಮನೋಭಾವನೆ ತೋರುತ್ತಿರುವುದು? ನನಗಂತೂ ಅರ್ಥವಾಗುವುದಿಲ್ಲ. 100 ರೂಪಾಯಿಗೆ ಮಾರಾಟವಾಗುತ್ತಿದ್ದ ಕುರಿ ಈಗ 40 ರೂಪಾಯಿ ಆಗಿದೆ. ಹಂದಿ, ಕೋಳಿ ಕೇಳುವವರಿಲ್ಲ. ಒಂದು ಚಿಕನ್ ಮಸಾಲೆ 7 ರೂಪಾಯಿ 8 ರೂಪಾಯಿ. ಜನ ಅದನ್ನು ಮುಟ್ಟಲೇಬಾರದು? ಈಗ ನಮ್ಮಂಥವರು ಬೆಂಗಳೂರಿಗೆ ಬರುತ್ತೇವೆ, ನಾವು ಎಲ್ಲಿಗೆ ಹೋಗೋಣ? ಅವರು ಹಾಕಿದ್ದೇ ರೇಟು, ಹೇಳುವವರಿಲ್ಲ, ಕೇಳುವವರಿಲ್ಲ. ನಿನ್ನೆ ದಿವಸ ಮಾನ್ಯ ಮಂತ್ರಿಗಳು ಹೇಳಿದರು ರೈತರಿಗೆ ಬೇಕಾದಂಥ ಪದಾರ್ಥಗಳ ಬೆಲೆ 10 ರೂಪಾಯಿ ಓಪನ್ ಮಾರ್ಕೆಟ್‌ನಲ್ಲಿ ಇಳಿಸಿದ್ದೇವೆ ಎಂದು ಆಗ ಯಾರನ್ನೂ ಕೇಳಲಿಲ್ಲ. ಈಗ ಹೋಟೆಲ್‌ನವರ ಹತ್ತಿರ ಸಂಧಾನ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು :- ಮಾನ್ಯ ಬೈರೇಗೌಡರೇನು ಜಗಳ ಮಾಡುತ್ತೀರೋ, ಸ್ಪಷ್ಟೀಕರಣ ಕೇಳುತ್ತಾರೋ, ವಾದ ಮಾಡುತ್ತೀರೋ, ಭಾಷಣ ಮಾಡುತ್ತಿರೋ?

ಶ್ರೀ ಸಿ. ಬೈರೇಗೌಡ :- ಸರ್ಕಾರದ ಆಲಸ್ಯ ಮನೋಭಾವನೆ ನೋಡಿದರೆ ಹೊಟ್ಟೆ ಉರಿಯುತ್ತದೆ.

ಶ್ರೀಮತಿ ಇ.ಇ. ವಾಜ್ :- ಮಾನ್ಯ ಅಧ್ಯಕ್ಷರೆ, ಬೈರೇಗೌಡರು ಬಾಸುಂದಿ ವಿಷಯ ಹೇಳಿದರು. ಅದಕ್ಕೆ ಆಲೂಗಡ್ಡೆ ಕೂಡ ಹಾಕುವುದಿಲ್ಲ ಎಂದು ಕಾಣುತ್ತದೆ. ತಿಂಡಿ ಬೆಲೆಗಳನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬೇಕೆಂದು ಒತ್ತಾಯ ತರುತ್ತಿದ್ದೇವೆ. ಈ ಬಗ್ಗೆ ತೀವ್ರವಾಗಿ ಗಮನ ಕೊಡುತ್ತಿದ್ದೇವೆ.

# ಅವಧಿ: 2 ಜನತಾ ಸಹ ಸದಸ್ಯ 1983-84

1978ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಪರಾಭವಗೊಂಡ ಸಿ. ಬೈರೇಗೌಡರು, ತಾಲ್ಲೂಕು ಮಂಡಲಿ ಅಧ್ಯಕ್ಷರಾಗಿ ತಾಲ್ಲೂಕು ಹಾಗೂ ಕ್ಷೇತ್ರದಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ, ಜನಮಾನಸದಲ್ಲಿ ಬೇರೂರಲು ಪ್ರಯತ್ನಿಸಿದರು. ಅದರ ಪ್ರತಿಫಲವೇ 1983ರಲ್ಲಿ ಅವರು ಸಾಧಿಸಿದ ಅದ್ಭುತ ವಿಜಯ. 1983ರಲ್ಲಿ ಕಾಂಗ್ರೆಸ್ ಸೋಲು ಅನುಭವಿಸಿದಾಗ ರಾಜ್ಯದ ಪ್ರಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ರಚನೆಯಲ್ಲಿ ಹೆಗಡೆಯವರಿಗೆ ಬೈರೇಗೌಡರು ಪೂರ್ಣ ಬೆಂಬಲ ನೀಡಿದರು. ಬಿಜೆಪಿ ಸಹಕಾರದೊಡನೆ ಸರ್ಕಾರ ರಚಿಸಿದ ರಾಮಕೃಷ್ಣ ಹೆಗಡೆಯವರು 1984ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಸೋತಿದ್ದರಿಂದ, ವಿಧಾನಸಭೆಯಲ್ಲಿ ಬಹುಮತವಿದ್ದರೂ, ವಿಸರ್ಜನೆ ಮಾಡಿ ಮತ್ತೆ ಚುನಾವಣೆಗಳಿಗೆ ಹೋದರು.

ಈ ಕಾಲದಲ್ಲಿ ಪಕ್ಷೇತರರಾಗಿದ್ದ ಸಿ. ಬೈರೇಗೌಡರನ್ನು ಕಾಂಗ್ರೆಸ್‌ಗೆ ಸೆಳೆಯುವ ಯತ್ನವೂ ನಡೆಯುತ್ತಿತ್ತು. ಹೆಗಡೆಯವರು ಸಿ. ಬೈರೇಗೌಡರವರಿಗೆ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿ ಅಧ್ಯಕ್ಷತೆಯನ್ನು ನೀಡಿದ್ದರು. ಕಾಂಗ್ರೆಸ್‌ಗೆ ಬಂದರೆ ಹಣ ಕೊಡುವುದಾಗಿ ವೀರಪ್ಪಮೊಯ್ಲಿ ಆಮಿಷ ಒಡ್ಡಿದ್ದಾರೆ ಎಂಬ ವರದಿಗಳ ಹಿನ್ನೆಲೆಯಲ್ಲಿ 'ಟೇಪ್ ಹಗರಣ' ಖ್ಯಾತಿ ಪಡೆಯಿತು. ರಾಷ್ಟ್ರದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದ ಈ ಘಟನೆ ಸಂಸತ್‌ನಲ್ಲೂ, ವಿಧಾನಸಭೆಯಲ್ಲೂ ಪ್ರತಿಧ್ವನಿಸಿತು. ಮುಖ್ಯಮಂತ್ರಿ ಹೆಗಡೆಯವರು ಈ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಿದಾಗ, ಬೈರೇಗೌಡರು ಜಲಮಂಡಲಿ ಅಧ್ಯಕ್ಷತೆಗೆ ರಾಜಿನಾಮೆ ನೀಡಿದರು. ಟೇಪ್ ಪ್ರಕರಣದ ಬಗ್ಗೆ ಗೌಡರು ತೀರಾ ಭಾವುಕರಾಗಿದ್ದರು. ಅವರ ಜೊತೆ ಆಗ, ಇಂದಿನ (2004-05) ಕೃಷಿ ಸಚಿವ ಕೆ. ಶ್ರೀನಿವಾಸಗೌಡರಿದ್ದರು. ಆಗಾಗ್ಗೆ ಈ ಟೇಪ್ ಪ್ರಕರಣ ಪ್ರತಿಧ್ವನಿಸುತ್ತಿತ್ತು.

ಎರಡು ವರ್ಷದ ಅವಧಿಯಲ್ಲಿಯೇ ಶಾಸಕರಾಗಿ ಕೈವಾರದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಗೌಡರು ಆಡಿದ ಮಾತಿನಿಂದ ನೋವಾಗಿದೆ ಎಂದು ಗಲಾಟೆ ನಡೆಯಿತು. ವಿಧಾನಸಭೆಯಲ್ಲೂ ಪ್ರಸ್ತಾಪವಾಯಿತು. ಅದನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ.

## ಸಭೆ ಸಮಾರಂಭಗಳಲ್ಲಿ
## ಬೈರೇಗೌಡ ಉವಾಚ

ಶಿಕ್ಷಣ ಕ್ಷೇತ್ರದಲ್ಲಿನ ತಾರತಮ್ಯ ನಿವಾರಿಸಲು, ಗ್ರಾಮೀಣ ಪ್ರದೇಶದವರಿಗೆ ಸ್ಥಾನ ಮೀಸಲಾತಿ ಜಾರಿಗೆ ತರುವ ಬಗ್ಗೆ ಜನತಾ ಸರ್ಕಾರದ ಚಿಂತನೆ.

5-9-83

ವರ್ಗರಹಿತ ಸಮಾಜದ ಸೃಷ್ಠಿ ವಿದ್ಯಾಭ್ಯಾಸದಿಂದ ಆರಂಭವಾಗಬೇಕು.

5-9-83

ಕೋಲಾರ ನೀರು ಪೂರೈಕೆ ವ್ಯವಸ್ಥೆಯನ್ನು ಮಂಡಲಿಗೆ ವಹಿಸಿ -

16-8-83

ಬಡವರು ಬೆವರು ಸುರಿಸಿ ಸಂಪಾದಿಸಿದ ಹಣ ಕಂದಾಯ - ತೆರಿಗೆ ರೂಪದಲ್ಲಿ ಬೊಕ್ಕಸಕ್ಕೆ ಹೋಗಿದ್ದರೂ ಜಿಲ್ಲೆ ಬಗ್ಗೆ ಸರ್ಕಾರದ ಅನಾದರಣೆಗೆ ಹಿಂದಿನ ರಾಜಕೀಯ ನಾಯಕರುಗಳ ಛಲ ಇಲ್ಲದ್ದೆ ಕಾರಣ.

12-4-83

ಪಕ್ಷಕ್ಕೆ ಹಿಡಿದ ಗ್ರಹಣ ಬಿಟ್ಟಿದೆ - ಜೀವರಾಜ ಆಳ್ವ ಕಾರ್ಯಾಧ್ಯಕ್ಷ ಸ್ಥಾನ ಪದತ್ಯಾಗ ಮಾಡಿದಾಗ

6-7-84

# ಕೈವಾರ ಸಮ್ಮೇಳನ : ಸಿ.ಬಿ. ವೈಯಕ್ತಿಕ ಹೇಳಿಕೆ

> ಕೋಲಾರ ಜಿಲ್ಲೆ ಕೈವಾರದಲ್ಲಿ 1984ರ ಮಾರ್ಚ್‌ನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬೈರೇಗೌಡ ಮತ್ತು ಚೌಡರೆಡ್ಡಿ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. ಒಂದು ಸಣ್ಣ ಘಟನೆಯನ್ನು ಕನ್ನಡ ಚಳವಳಿಯ ನಾರಾಯ ಕುಮಾರ್ ವಿಧಾನಸಭೆಯಲ್ಲಿ ಪ್ರಸ್ತಾಪಿಸಿ, ಬೈರೇಗೌಡರನ್ನು ಟೀಕಿಸಿದ್ದರು. ಅದಕ್ಕೆ ಗೌಡರು ವೈಯಕ್ತಿಕ ಹೇಳಿಕೆ ನೀಡಿದರು.

ಶ್ರೀ ಸಿ. ಬೈರೇಗೌಡರು (ವೇಮಗಲ್) - ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರದ ಮುಖ್ಯ ಸ್ಥಳವಾದ ಕೈವಾರದಲ್ಲಿ ಕಳೆದ ತಿಂಗಳು 23, 24 ಮತ್ತು 25ನೇ ತಾರೀಖುಗಳಲ್ಲಿ 56ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಈ ಸಮ್ಮೇಳನ ಅನೇಕ ಪ್ರಥಮಗಳನ್ನು ಸ್ಥಾಪಿಸಿತು. ಪ್ರಥಮವಾಗಿ ಈ ಸಮ್ಮೇಳನ ಒಂದು ಹಳ್ಳಿಯಲ್ಲಿ ನಡೆಯಿತು. ಎರಡನೆಯದಾಗಿ ಶೇಕಡಾ 60ರಿಂದ 70ರವರೆಗೆ ತೆಲುಗು ಭಾಷೆಯನ್ನಾಡುವ ಕೋಲಾರ ಜಿಲ್ಲೆಯಲ್ಲಿ ಈ ಸಮ್ಮೇಳನ ನಡೆಯಿತು. ಕನ್ನಡ ಭಾಷೆಯನ್ನು ಮಾತನಾಡುವಂತಹ ಜನರು ಜಿಲ್ಲೆಯಲ್ಲಿ ಮೆಜಾರಿಟಿಯಲ್ಲಿ ಇಲ್ಲ. ಇಂತಹ ಜಿಲ್ಲೆಯಲ್ಲಿ ನಡೆದ ಸಮ್ಮೇಳನಕ್ಕೆ 1500 ಜನ ಪ್ರತಿನಿಧಿಗಳು ಬಂದಿದ್ದರು. ಈ ಸಮ್ಮೇಳನಕ್ಕೆ ಕೇವಲ ಕರ್ನಾಟಕದಿಂದ ಅಲ್ಲದೆ, ಪೂನಾ, ಮದ್ರಾಸ್, ಮುಂಬೈ, ದೆಹಲಿ, ಗೋವಾ, ಕೇರಳ ಹಾಗೂ ಇನ್ನಿತರ ಕಡೆಗಳಿಂದ ಪ್ರತಿನಿಧಿಗಳಾಗಿ ಬಂದಿದ್ದರು. ಅಮೇರಿಕಾದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿರುವ ಶ್ರೀ ಎ.ಕೆ. ರಾಮಾನುಜಂ ಅವರು ಸಹ ಬಂದಿದ್ದರು. ಇವರು ಅಮೇರಿಕಾದಲ್ಲಿ ವಾಸ ಮಾಡುತ್ತಿದ್ದರೂ ಸಹ ಕನ್ನಡದಲ್ಲಿ ಹೆಸರಾಂತ ಬರಹಗಾರರಾಗಿದ್ದಾರೆ. ಅಲ್ಲಿ ಹೆಚ್ಚಿನ ವೇತನವನ್ನು ಇವರು ಪಡೆಯುತ್ತಿದ್ದಾರೆ. ಇಂತಹ ಬರಹಗಾರರೊಬ್ಬರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನ ನಡೆಸಲು ಕರ್ನಾಟಕ ಸರ್ಕಾರ 3 ಲಕ್ಷ ರೂಪಾಯಿಗಳ ಅನುದಾನ ಕೊಟ್ಟಿತ್ತು. ಇದರ ಜೊತೆಗೆ ಈ ಸಮ್ಮೇಳನ ನಡೆದ ಹಳ್ಳಿಗೆ ವಿದ್ಯುತ್ ದೀಪಗಳನ್ನು ಹಾಕಿಸಲು ಒಂದು ಲಕ್ಷದ 30 ಸಾವಿರ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ರಸ್ತೆ ಹಾಗೂ ಚರಂಡಿಗಳಿಗಾಗಿ ಸರ್ಕಾರ ಸಾಕಷ್ಟು ಹಣವನ್ನು ಖರ್ಚು ಮಾಡಿವೆ.

ಅಧ್ಯಕ್ಷರು - ತಾವು ವಿವರಗಳಿಗೆ ಹೋಗಬೇಡಿ, ಎರಡು ನಿಮಿಷಗಳ ಅವಕಾಶ ಕೇಳಿದ್ದೀರಿ. ಆದ್ದರಿಂದ ಅಷ್ಟರಲ್ಲಿ ತಾವು ಹೇಳಿ ಮುಗಿಸಿಬಿಡಿ.

ಶ್ರೀ ಸಿ. ಬೈರೇಗೌಡ - 3 ದಿನಗಳ ಕಾಲ ಈ ಸಮ್ಮೇಳನ ನಡೆಯಿತು. ಮೊದಲನೆಯ ದಿವಸ ಮುಖ್ಯಮಂತ್ರಿಗಳು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿಕೊಟ್ಟರು. ಇದು ವಿಚಾರಗೋಷ್ಠಿಗಳು ನಡೆದವು.

ಅಧ್ಯಕ್ಷರು - ತಾವು ತಮ್ಮ ವೈಯಕ್ತಿಕ ವಿವರಣೆ ಕೊಡಬೇಕೇ ಹೊರತು ಸಮ್ಮೇಳನ ವಿವರಗಳಿಗೆ ಹೋಗುತ್ತಿರುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡರ - ನಾನು ಮೊದಲೇ ತಮಗೆ ಹೇಳಿದಂತೆ ಕೋಲಾರದಲ್ಲಿ ಶೇಕಡಾ 60 ರಿಂದ ಶೇಕಡಾ 70 ರವರೆಗೆ ತೆಲುಗು ಮಾತನಾಡುವಂತಹ ಜನರು ಇದ್ದಾರೆ. ಇಂತಹ ಜಾಗದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಇದರಲ್ಲಿ ಭಾಗವಹಿಸಿದಂಥ.....

ಶ್ರೀ ಕೆ.ಎಚ್. ರಂಗನಾಥ್ - ಕೋಲಾರ ಜಿಲ್ಲೆಯಲ್ಲಿ ಶೇಕಡಾ 60 ರಿಂದ ಶೇಕಡಾ 70 ರವರೆಗೆ ತೆಲುಗು ಮಾತನಾಡುವ ಜನರಿದ್ದಾರೆಂದು ಈಗ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರಿಗೆ ಒಂದು ವಿಚಾರ ಗೊತ್ತಿಲ್ಲವೆಂದು ಕಾಣುತ್ತದೆ. ಏನೆಂದರೆ ಫಜಲಾಲಿ ಕಮೀಷನ್ ವರದಿ ಬರುವುದಕ್ಕೆ ಮೊದಲೇ ಅಂದರೆ 1952 ರಿಂದ 1957ರವರೆಗೆ ಈ ಹಿಂದಿನ ಮೈಸೂರು ಅಸಂಬ್ಲಿಯಲ್ಲಿ ಇದೆಲ್ಲವನ್ನೂ ಆಗಿನ ಮಾನ್ಯ ಮುಖ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ತೆಲುಗು ಮಾತನಾಡುವಂತಹ ಜನರು ಹೆಚ್ಚು ಇದ್ದಾರೆಂಬ ಇವರ ಮಾತು ಈಗಿನ ನಡವಳಿಕೆಗಳಿಗೆ ಹೋಗುವುದು ಸರಿಯಲ್ಲ. ಆದ್ದರಿಂದ ಮಾನ್ಯ ಸದಸ್ಯರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಅಲ್ಲಿ ತೆಲುಗು ಭಾಷೆ ಮಾತನಾಡುವಂತಹ ಜನರು ಶೇಕಡ ಎಷ್ಟು ಇದ್ದಾರೆ ಎಂಬುದನ್ನು ಹೊಸದಾಗಿ ಹೇಳುವುದಕ್ಕೆ ಬದಲು ಸಂಬಂಧಪಟ್ಟ ವಿಷಯ ಏನಿದೆ ಎಂಬುದನ್ನು ಪ್ರಸ್ತಾಪ ಮಾಡುವುದು ಒಳ್ಳೆಯದು ಎಂದು.

ಸಿ.ಬಿ.ಬೈರೇಗೌಡ - ಹೊಸದಾಗಿ ನಾನು ಏನನ್ನೂ ಹೇಳುತ್ತಿಲ್ಲ. ಇರುವಂತಹ ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಅಲ್ಲಿ ಇಂತಹ ಒಂದು ಹಿನ್ನೆಲೆ ಇದ್ದರೂ ಸಹ ನಾವು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಹಳ ಉತ್ಸಾಹದಿಂದ ಮಾಡಿದ್ದೇನೆ. ಇದಕ್ಕೂ ಮೊದಲು ಅಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು. ಕನ್ನಡ ಭಾಷೆಯ ಅಭಿಮಾನದ ಬಗ್ಗೆ ಪ್ರೀತಿ ವಿಶ್ವಾಸದ ಬಗ್ಗೆ ನಾವು ಯಾರಿಗೂ ಕಡಮೆ ಇಲ್ಲ ಹಾಗೂ ಯಾರಿಗೂ ಹಿಂದುಳಿದವರಲ್ಲ ಎಂಬುದನ್ನು ನಡೆಸಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕಾಗಿ ಇಷ್ಟೆಲ್ಲಾ ವಿವರಣೆ ಕೊಡುತ್ತಿದ್ದೇನೆಯೇ ಹೊರತು ಕೋಲಾರ ಜಿಲ್ಲೆಯನ್ನು ತೆಗೆದುಕೊಂಡು ಹೋಗಿ ಇನ್ನು ಏನೋ ಮಾಡಿ ಎನ್ನುವ ಅರ್ಥದಿಂದ ನಾನು ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ - ಈ ಬಗ್ಗೆ ಇಲ್ಲಿ ನಾವು ಯಾರೂ ಸಹ ಪ್ರಶ್ನೆ ಮಾಡಿಲ್ಲ. ಆದರೂ ಸಹ ಇವರು ಏತಕ್ಕೆ ವಿವರಗಳನ್ನು ಕೊಡುತ್ತಿದ್ದಾರೆ?

ಶ್ರೀ ಸಿ. ಬೈರೇಗೌಡ - ಏತಕ್ಕೆ ವಿವರಣೆ ಕೊಡುತ್ತಿದ್ದೇನೆಂಬುದನ್ನು ಹೇಳುತ್ತೇನೆ. ನಾವು ಈ ರೀತಿಯಾಗಿ ಈ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದರೂ ಸಹ ಅಲ್ಲಿ ನಡೆದಂಥ ಒಂದು ಸಣ್ಣ ಘಟನೆಯ ಬಗ್ಗೆ ಈ ಸಭೆಯಲ್ಲಿ ಮಾನ್ಯ ಸದಸ್ಯರಾದಂಥ ಶ್ರೀ ನಾರಾಯಣಕುಮಾರ್ ಅವರು ನನ್ನ ಮೇಲೆ ಆಪಾದನೆ ಮಾಡಿದ್ದಾರೆ. ಆ ಸಮ್ಮೇಳನಕ್ಕೆ ಬಂದಿದ್ದ ಕೆಲವರ ಮೇಲೆ ನಾನು ವಾಚಾಮಗೋಚರವಾಗಿ ಬೈದೆ ಎಂದು ಹೇಳಿದ್ದಾರೆ. ಇದೇ ಮಾತನ್ನು ಅವರು ಮೂರು ಸಲ ಹೇಳಿದ್ದಾರೆ. ಅವರು ಏನೇನು ಈ ಬಗ್ಗೆ ಮಾತನಾಡಿದ್ದಾರೆಂಬ ಬಗ್ಗೆ ನನ್ನ ಹತ್ತಿರ ಟಿಪ್ಪಣಿ ಕೂಡ

ಇದೆ. ಈ ಬಗ್ಗೆ ನಾನು ವಿವರಣೆ ಕೊಡಬೇಕಾಗಿದೆ. ಮುಖ್ಯಮಂತ್ರಿಗಳು ಕೂಡ ಈ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಕೊಟ್ಟಿರುವ ವಿವರಣೆಯಲ್ಲಿ ಒಂದು ತಪ್ಪು ಏನಾಗಿದೆ ಎಂದರೆ.......

ಶ್ರೀ ಎಂ.ಎಸ್. ಕೃಷ್ಣನ್ – ಶ್ರೀ ನಾರಾಯಣ್‌ಕುಮಾರ್ ಅವರು ಸಭೆಯಲ್ಲಿ ಇಲ್ಲದಿರುವಾಗ ಇವರು ವಿವರಣೆ ಕೊಟ್ಟರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಅವರು ಈಗ ಸಭೆಯಲ್ಲಿ ಇದ್ದಿದ್ದರೆ ಇನ್ನೂ ಏನಾದರೂ ವಾಚಾಮಗೋಚರವಾಗಿ ಹೇಳುತ್ತಿದ್ದರೆಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ – ನನ್ನ ಮಾತೃಭಾಷೆ ತೆಲುಗು ಎಂದು ಮುಖ್ಯಮಂತ್ರಿಗಳು ತಮ್ಮ ವಿವರಣೆಯಲ್ಲಿ ತಿಳಿಸಿದ್ದಾರೆ. ಆದರೆ ನನ್ನ ಬ್ರದರ್ - ಇನ್ ಲಾ ಆದಂಥ ಶ್ರೀ ಚೌಡರೆಡ್ಡಿ ಅವರ ಮಾತೃ ಭಾಷೆ ತೆಲುಗು. ಈ ಸಮ್ಮೇಳನವನ್ನು ವ್ಯವಸ್ಥಿತವಾಗಿ ನಡೆಸಲು ಮಾನ್ಯ ಎಂ. ಎಸ್. ರಾಮಯ್ಯನವರು ಐದಾರು ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ.

ಅಧ್ಯಕ್ಷರು – ಈಗ ಅದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೀರಿ?

ಶ್ರೀ ಸಿ. ಬೈರೇಗೌಡ – ಇವರ ವಿಚಾರಗಳನ್ನು ಸಹ ಮಾನ್ಯ ನಾರಾಯಣ್‌ಕುಮಾರ್ ಅವರು ಪ್ರಸ್ತಾಪ ಮಾಡಿರುವುದರಿಂದ ನಾನು ಹೇಳಬೇಕಾಗಿದೆ.

ಶ್ರೀ ಎಂ. ಎಸ್ ಕೃಷ್ಣನ್ – ಮಾನ್ಯ ಸದಸ್ಯರು ಈಗಾಗಲೇ ಅಂತರರಾಷ್ಟ್ರೀಯವಾಗಿ ಪ್ರಖ್ಯಾತಿ ಹೊಂದಿದ್ದಾರೆ. ಟೇಪೆಲ್ಲಾ ಮಾಡಿಸಿ ಟೇಪೇಗೌಡರೆಂದು ಹೆಸರು ಪಡೆದಿದ್ದಾರೆ. ಆದರೂ ಇದನ್ನೆಲ್ಲಾ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದಾರೋ ನನಗೆ ಅರ್ಥವಾಗುವುದಿಲ್ಲ.

ಶ್ರೀ ಬೈರೇಗೌಡ – ನಾವು ಎಷ್ಟೊಂದು ಉತ್ಸಾಹದಿಂದ ಈ ಸಮ್ಮೇಳನವನ್ನು ನಡೆಸಿದ್ದೇವೆ. ಆದರೂ ನಾನು ಅಲ್ಲಿ ಕೆಲವರನ್ನು ವಾಚಾಮಗೋಚರವಾಗಿ ಬೈದೆ ಎಂದರೆ ನನ್ನ ಮನಸ್ಸಿಗೆ ನೋವಾಗುತ್ತದೆ. ಮತ್ತು ನನಗೆ ವ್ಯಥೆಯಾಗುತ್ತದೆ. ಅವರು ಈ ರೀತಿಯೆಲ್ಲಾ ಹೇಳಿರುವುದು ಸತ್ಯಕ್ಕೆ ದೂರವಾದುದು. ಆ ಸಮ್ಮೇಳನಕ್ಕೆ ದೇಶದ ನಾನಾ ಭಾಗಗಳಿಂದ ಅನೇಕ ಪತ್ರಿಕಾಕರ್ತರು ಬಂದಿದ್ದರು. ಆದ್ದರಿಂದ ಅಲ್ಲಿ ಏನು ನಡೆಯಿತೆಂಬುದು ಅವರಿಗೆಲ್ಲಾ ಗೊತ್ತಿದೆ. ಅಲ್ಲಿ ನಡೆದಿದ್ದು ಒಂದು ಸಣ್ಣ ವಿಷಯ. ಅದೇನೆಂದರೆ, ಬಂಗಾರಪೇಟೆ ಮತ್ತು ಕೆ. ಜಿ.ಎಫ್. ನಲ್ಲಿ ಗೋಕಾಕ್ ವರದಿ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಕೆಲವರು ಸೇರಿಕೊಂಡು ಒಂದು ಆರೋಪ ಮಾಡಿದರು. ಇದು ನನಗೆ ಗೊತ್ತಿಲ್ಲದ ವಿಚಾರ, ಇದು ನನಗೆ ಗೊತ್ತಿಲ್ಲದ ಸಮಾಚಾರವೆಂದು ಅವರಿಗೆ ಹೇಳಿದರೂ ಸಹ ಕೆಲವು ಯುವಕರು ಸೇರಿಕೊಂಡು ಸಣ್ಣ ಗಲಾಟೆ ಮಾಡಿದರು. ಮಾನ್ಯ ನಾರಾಯಣಕುಮಾರ್‌ರವರು ಇಲ್ಲಿ ಒಂದು ಯಾವ ವಿಚಾರವೂ ಗೊತ್ತಿಲ್ಲದೆ ಆಪಾದನೆಗಳನ್ನು ಮಾಡಿರುವುದು ಸತ್ಯಕ್ಕೆ ದೂರವಾದುದು. ಇನ್ನೊಂದು ವಿಚಾರ ಏನೆಂದರೆ ತಾವು ಆ ದಿವಸ ವಿಧಾನ ಸಭೆಗೂ ಕೂಡ ರಜೆಯನ್ನು ಕೊಟ್ಟಿದ್ದೀರಿ. ಇಲ್ಲಿಂದ ಶಾಸಕರು ಹೋಗಿಬರುವುದಕ್ಕೆ ಕೂಡ ವಾಹನ ಸೌಕರ್ಯವನ್ನು ಏರ್ಪಾಡು ಮಾಡಲಾಗಿತ್ತು. ಆದರೆ ಅವರು ಯಾರೂ ಕೂಡ

ಅಲ್ಲಿಗೆ ಬರತಕ್ಕ ಸಾಹಸದ ಕೆಲಸವನ್ನು ಮಾಡಲಿಲ್ಲ. ಕನ್ನಡ ಚಳವಳಿಯ ಹೆಸರಿನಲ್ಲಿ ಅವರು ಕಲೆಕ್ಷನ್ ಚಳವಳಿಯನ್ನು ಮಾಡುತ್ತಿದ್ದಾರೆ......

ಅಧ್ಯಕ್ಷರು - ತಾವು ದಯವಿಟ್ಟು ಕೂತುಕೊಳ್ಳಿ, ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರದಲ್ಲಿ ಪೂರ್ಣ ಪರಿಚಯ ಅಥವಾ ಪೂರ್ಣ ವಿವರಣೆಯನ್ನು ತಾವು ಕೊಡಬೇಕಾದ ಅಗತ್ಯವೇನೂ ಇಲ್ಲ. ನಮಗೂ ಸಾಕಷ್ಟು ವಿಚಾರಗೊತ್ತಿದೆ. ನೀವು ಸಾಕಷ್ಟು ಚೆನ್ನಾಗಿ ಅದನ್ನು ಮಾಡಿದ್ದೀರೆಂದು ನಮಗೆ ತಿಳಿದು ಬಂದಿದೆ. ಅದು ರೆಕಾರ್ಡ್‌ನಲ್ಲಿ ಹೋಗಿದೆ.

ಶ್ರೀ ಸಿ. ಬೈರೇಗೌಡ - ಇವರು ಸಮ್ಮೇಳನಕ್ಕೆ ಬರದೇ ಏನು ಮಾಡುತ್ತಿದ್ದರು? ಕನ್ನಡಕ್ಕೋಸ್ಕರ ನಾವು ನಮ್ಮ ಪ್ರಾಣವನ್ನು ಕೊಡುತ್ತೇವೆ ನಮ್ಮ ರಕ್ತವನ್ನು ಕೊಡುತ್ತೇವೆಂದು ಹೇಳುತ್ತಿದ್ದ ಈ ಜನ ಆವತ್ತು ಎಲ್ಲಿ ಹೋಗಿದ್ದರು. ಕೋಲಾರ ಜಿಲ್ಲೆಯಲ್ಲಿ 2 ಸಮ್ಮೇಳನವನ್ನು ಮಾಡಿದರು. ಆ ಸಂದರ್ಭದಲ್ಲಿ ಕನ್ನಡಕ್ಕಾಗಿ ಪ್ರಾಣವನ್ನು ಕೊಡತಕ್ಕ ಜನರು, ರಕ್ತವನ್ನು ಕೊಡತಕ್ಕ ಜನರು ಕನ್ನಡ ಕನ್ನಡ ಎಂದು 365 ದಿವಸವೂ ಬೊಬ್ಬೆ ಹೊಡೆದುಕೊಳ್ಳುತ್ತಿದ್ದ ಈ ಜನ ಆವತ್ತು ಎಲ್ಲಿಗೆ ಹೋಗಿದ್ದರು ಎಂದು ನಾನು ಕೇಳಬೇಕಾಗಿದೆ, ಇವರು ಕನ್ನಡದ ಹೆಸರಿನಲ್ಲಿ ಕಲೆಕ್ಷನ್ ಚಳವಳಿಯನ್ನು ಮಾಡತಕ್ಕ .......

**Mr. Speaker** - Don't record.

## ಅರಣ್ಯ ಸಂರಕ್ಷಣೆ ಕಾಳಜಿ ಪ್ರಶ್ನೆ - 7-2-84

ಅರಣ್ಯ ಸಂರಕ್ಷಣೆ, ಕೆರೆಗಳ ಹೂಳು ತೆಗೆಯುವುದು, ಬರ ಪರಿಸ್ಥಿತಿಗಳ ಬಗ್ಗೆಯೂ ಅವರು ಸಭೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತಿದ್ದರು. ಆಡಳಿತ ಪಕ್ಷದ ಸದಸ್ಯರಾಗಿದ್ದರೂ, ಲೋಪದೋಷಗಳನ್ನು ಎತ್ತಿ ತೋರಿಸುವುದರಲ್ಲಿ ಹಿಂದೆ ಬೀಳುತ್ತಿರಲಿಲ್ಲ.

7-2-84 ರಲ್ಲಿ ವಿಧಾನಸಭೆಯಲ್ಲಿ ಮಾತನಾಡಿದ ಅವರು, ಅರಣ್ಯ ಇಲಾಖೆಯವರು ಬೇಸಿಗೆ ಕಾಲದಲ್ಲಿ ನಾಟಿ ಮಾಡುತ್ತಾರೆ. ಮಳೆಗಾಲದಲ್ಲಿ ಸಸಿ ನಾಟಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ? ಪಕ್ಕದಲ್ಲಿರುವ ಸಣ್ಣ ಹಿಡುವಳಿದಾರರಿಗೆ ಮರಗಿಡಗಳ ಸಂರಕ್ಷಣೆ ಹೊಣೆ ಕೊಡುತ್ತೀರಾ ಎಂದು ಹೇಳಿದ್ದರು.

## ಮಾರಕವಾಗುವಂತಹ ಕೈಗಾರಿಕೆಗಳ ಸ್ಥಾಪನೆಗೆ ಬೈರೇಗೌಡ ವಿರೋಧ

ತೀರಾ ಹಿಂದುಳಿದಿರುವ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿನ ಉದ್ಯಮಗಳು ಆರಂಭಗೊಂಡು ದುಡಿಯುವ ಕೈಗೆ ಕೆಲಸ ನೀಡಬೇಕೆಂಬ ವಾದ ಸಮರ್ಪಕವಾದರೂ ಸ್ಥಳೀಯರಿಗೆ ಮಾರಕವಾಗುವಂತಿದ್ದರೆ ಅವುಗಳ ಸ್ಥಾಪನೆಯು ಅವಶ್ಯಕತೆಯಿಲ್ಲವೆಂದು ಮೀನುಗಾರಿಕೆ ಸಚಿವ ಸಿ. ಬೈರೇಗೌಡ ಅವರು ನುಡಿದರು.

ಚಿಕ್ಕಬಳ್ಳಾಪುರ ತಾಲ್ಲೂಕಿನ ಬಂಡಮ್ಮನಹಳ್ಳಿಯಲ್ಲಿ 22-10-85ರಂದು ಜಪಾನಿ ಸಹಯೋಗದ 'ಸ್ಪನ್‌ಸಿಲ್ಕ್' ಇಂಡಿಯಾ ಲಿಮಿಟೆಡ್‌ನ ಉದ್ಘಾಟನಾ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಈಗಾಗಲೇ ಕೋಲಾರ ಬಳಿಯಿರುವ ಖಾಸಗಿ ಕಾರ್ಖಾನೆಯೊಂದು ಅನುಸರಿಸುತ್ತಿರುವ ಸ್ಥಳವಂದಿಗರ ವಿರೋಧಿ ನೀತಿಯ ವಿರುದ್ಧ ಅವರು ಚಳುವಳಿಗೆ ಇಳಿದಿರುವುದರಿಂದ ಜನರ ಸಹನೆ ಪರೀಕ್ಷಿಸದೆ ಅದನ್ನು ಬೇರೆಡೆಗೆ ಸ್ಥಳಾಂತರಿಸಿ ಇಲ್ಲವೆ ಸರ್ಕಾರದಿಂದ ನೀಡುವ ಎಲ್ಲ ರೀತಿಯ ನೆರವನ್ನೂ ನಿಲ್ಲಿಸಿ ಎಂದು ಅವರು ಕೈಗಾರಿಕಾ ಸಚಿವ ಜೆ.ಎಚ್. ಪಟೇಲರನ್ನು ಕೋರಿದರು.

# ಅವಧಿ : 3 1985-89

1985ರಲ್ಲಿ ಜನತಾದಿಂದ ಗೆಲುವು ಸಾಧಿಸಿದ ಬೈರೇಗೌಡರನ್ನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಜಿಲ್ಲೆಗೆ ಪ್ರಾತಿನಿಧ್ಯ ನೀಡಿ, ಮೀನುಗಾರಿಕೆ ಮತ್ತು ಬಂದರು ಸಚಿವರಾಗಿ ನೇಮಿಸಿದರು. ಗೌಡರಿಗೆ ಆ ಖಾತೆ ಅಷ್ಟು ಇಷ್ಟವಿರದಿದ್ದರೂ, ಸಹ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಿ, ಕರಾವಳಿ ಜನರ ಪ್ರೀತಿಯನ್ನು ಗಳಿಸಿದರು. ಅವರು ಸಚಿವರಾಗಿದ್ದುದು ಕೇವಲ ಒಂದೂವರೆ ವರ್ಷ, ಅನಂತರ ಹೆಗಡೆಯವರೊಡನೆ ಭಿನ್ನಾಭಿಪ್ರಾಯ ಬಂದು, ಅವರು ಸಂಪುಟ ಪುನರ್ರಚನೆಯಲ್ಲಿ ಬೈರೇಗೌಡರನ್ನು ಕೈಬಿಟ್ಟರು. ಸಚಿವರಾಗಿದ್ದಾಗ ವಿಧಾನಸಭೆಯಲ್ಲಿ ಪದೇ ಪದೇ ಟೇಪ್ ಹಗರಣ ಮತ್ತು ಮೀನುಸಾಕಣೆ, ತಿನ್ನುವ ವಿಚಾರ ಪ್ರಸ್ತಾಪಕ್ಕೆ ಬರುತ್ತಿತ್ತು. ಮಂತ್ರಿ ಪದವಿ ಹೋದ ಮೇಲೆ ಆಡಳಿತ ಪಕ್ಷದ ಸದಸ್ಯರಾಗಿದ್ದುಕೊಂಡು, ಸರ್ಕಾರದ ತೀರ್ಮಾನಗಳನ್ನು ಸಭೆಯಲ್ಲಿ ಹಾಗೂ ಸಭೆ ಹೊರಗೆ ಬಲವಾಗಿ ಸಮರ್ಥಿಸಿದ್ದರು. 1988-89 ರಲ್ಲಿ ಹೆಗಡೆ - ದೇವೇಗೌಡ ವಿರಸದಲ್ಲಿ ಗೌಡರ ಪರವಾಗಿ ನಿಂತ ಸಿ.ಬಿ. ಅವರು 1989ರ ಚುನಾವಣೆಯಲ್ಲಿ ಜನತಾಪಕ್ಷ (ಜೆಪಿ)ಯಿಂದ ಸ್ಪರ್ಧಿಸಿದ್ದರು.

## ಸಭೆ ಸಮಾರಂಭಗಳಲ್ಲಿ ಬೈರೇಗೌಡ ಉವಾಚ

ಕರ್ನಾಟಕದಲ್ಲಿ ಕೃಷಿ ಕ್ರಾಂತಿಗಾಗಿ ಹೊಸ ನೀತಿಯನ್ನು ಜಾರಿಗೆ ಕೊಟ್ಟರು. ನಿರ್ದಾಕ್ಷಿಣ್ಯತೆ - ನಿಷ್ಪಕ್ಷಪಾತತೆ ಬೆಳೆಸಿಕೊಳ್ಳಲು ಅಧಿಕಾರಿಗಳಿಗೆ ಸದಾ ಸೂಚಿಸುತ್ತಿದ್ದರು.

ರಾಜ್ಯದಲ್ಲಿ ನೀರು ಮಣ್ಣಿನ ಸಮಗ್ರ ನಿರ್ವಹಣೆಗೆ 500 ಕೋಟಿ ರೂ.ಗಳ ಯೋಜನೆ ತಯಾರಿಸುತ್ತಿದ್ದರು.

ಆಲೂಗಡ್ಡೆ, ಈರುಳ್ಳಿ ರಫ್ತಿಗೆ ಪರವಾನಗಿ ನೀಡಲು ಕೇಂದ್ರಕ್ಕೆ ಮನವಿ.

ಕೋಲಾರ ಜಿಲ್ಲೆ ಅವರ ಕಾಲದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯಲ್ಲಿ 16 ರಿಂದ 5ನೇ ಸ್ಥಾನಕ್ಕೆ ಏರಿತು. ರೈತರಿಗೆ ಗೊಬ್ಬರ, ಉತ್ತಮ ತಳಿ ಬೀಜಗಳನ್ನು ಹಳ್ಳಿಗಳಲ್ಲೇ ಪೂರೈಸಲು ಹಾಗೂ ಮಾಹಿತಿ ತಂತ್ರಜ್ಞಾನ ಒದಗಿಸಲು ರೈತ ಸಂಪರ್ಕ ಕೇಂದ್ರಗಳನ್ನು ಆರಂಭಿಸಿದರು.

ಕೃಷಿ ತರಬೇತಿ ಅವಧಿಯನ್ನು 3 ತಿಂಗಳಿಂದ 10 ತಿಂಗಳಿಗೆ ವಿಸ್ತರಣೆ ಮಾಡಿ, ದಿನ ಭತ್ಯೆಯನ್ನು ರೂ. 15 ರಿಂದ ರೂ. 25ಕ್ಕೆ ಏರಿಸಿದರು.

ಪ್ರತಿ ಜಿಲ್ಲೆಯಲ್ಲೂ ಹಣ್ಣು ಸಂಸ್ಕರಣಾ ಕೇಂದ್ರಗಳ ಸ್ಥಾಪನೆಯ ಪ್ರಸ್ತಾಪ ಇಟ್ಟಿದ್ದರು.

10-11-97

ಶ್ರೀ ಸಿ. ಭೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಮಂತ್ರಿ) - ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1986 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,49,13,000 ರೂಪಾಯಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,20,70,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ರೇವು ಮತ್ತು ಜಲಸಾರಿಗೆ ಸೇವೆಗಳು

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1986 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,44,57,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,48,50,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು - ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಎಸ್. ಬಂಗಾರಪ್ಪ (ಮಾನ್ಯ ವಿರೋಧಪಕ್ಷದ ನಾಯಕರು)

ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಮಂಡಿಸಿರತಕ್ಕಂಥ ಬೇಡಿಕೆ ಸಂಖ್ಯೆ ನಂ. 4, ಮತ್ತು 47ನೇ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ನಿಂತಿದ್ದೇನೆ.

ಶ್ರೀ ನಾರಾಯಣರಾವ್ (ಅವರು ಅಧ್ಯಕ್ಷ ಪೀಠದಲ್ಲಿದ್ದರು).

ಇಷ್ಟೊಂದು ಮೊತ್ತದ ಹಣವನ್ನು ಸದನ ಮಂಜೂರು ಮಾಡಿಕೊಡಬೇಕು. ಏಕೆಂದರೆ ಇಲಾಖೆಯನ್ನು ಈ ವರ್ಷದಲ್ಲಿ ನಡೆಸಬೇಕು. ಮಾನ್ಯ ಭೈರೇಗೌಡರು ಮೀನುಗಾರಿಕೆ ಬಂದರು ಮತ್ತು ಸಾರಿಗೆ ಇಲಾಖೆಯನ್ನು ನಡೆಸುವುದಕ್ಕಾಗಿ ಹಣ ಕೊಡಬೇಕು. ಹಣ ಮಂಜೂರು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಯಾವುದೇ ಪಕ್ಷದ ಸರ್ಕಾರವಿದ್ದರೂ ಮಂಜೂರು ಮಾಡಬೇಕು. ಕೊನೇಪಕ್ಷ ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕಾದರೂ ಹಣ ಮಂಜೂರು ಮಾಡಬೇಕಲ್ಲ. ಇಲ್ಲದಿದ್ದರೆ ಇಲಾಖೆ ನಡೆಸುವುದಕ್ಕಾಗುವುದಿಲ್ಲ. ಬರೀ ಸಂಬಳ ಕೊಡುವುದಕ್ಕಾಗಿಯೇ ಸರ್ಕಾರಕ್ಕೆ ಇರುವುದಿಲ್ಲ. ಸಂಬಳಕೊಟ್ಟು ಅಧಿಕಾರಿಗಳನ್ನು ಇಟ್ಟಮೇಲೆ

ಜನಹಿತ ಕಾರ್ಯಕ್ರಮಗಳನ್ನು ಅವರು ಮಾಡಬೇಕಾಗುತ್ತದೆ. ಅಂತಿಮವಾಗಿ ಅದರ ಪ್ರತಿಫಲ ಜನತೆಗೆ ಸಿಗಬೇಕು. ಒಳ್ಳೆಯ ಆಡಳಿತದ ಮುಖಾಂತರ ಜನತೆಗೆ ಪ್ರತಿಫಲ ಸಿಗಬೇಕು ಎಂಬುದು ಸದುದ್ದೇಶ. ಆ ದೃಷ್ಟಿಯಿಂದ ಇಲಾಖೆಯಲ್ಲಿ ಒಳ್ಳೆಯದಾಗಿದ್ದರೆ ಮಂಜೂರು ಮಾಡೋಣ. ವಿರೋಧ ಏತಕ್ಕೆ ಬರುತ್ತದೆ? ಯಾವಾಗ ಬರುತ್ತದೆ? ಸರ್ಕಾರದ ಖಜಾನೆ ಹಣವನ್ನು ಸದನದಲ್ಲಿ ಏನು ಮಂಜೂರು ಮಾಡುತ್ತದೆ, ಅದು ಸದುಪಯೋಗವಾಗದೆ ದುರುಪಯೋಗವಾಗತಕ್ಕ ಸಂದರ್ಭಗಳು ಉದ್ಭವವಾದಾಗ ವಿರೋಧಿಸತಕ್ಕ ವಿಚಾರಧಾರೆಗೆ ಎಲ್ಲಿಲ್ಲದ ಮಹತ್ವ ಸ್ಪಷ್ಟವಾಗಿ ಬರುತ್ತದೆ. ಇದು ಪ್ರಜಾಪ್ರಭುತ್ವದ ನೀತಿ. ಈ ನೀತಿಗೆ ಚ್ಯುತಿ ಬಾರದ ರೀತಿಯಲ್ಲಿ ವಿರೋಧ ಮಾಡತಕ್ಕ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ. ಜೊತೆಗೆ ಅಧಿಕಾರದ ದುರುಪಯೋಗಗಳು ನಡೆದಾಗ ಅದನ್ನು ಕೂಡ ಈ ಸದನದ ಗಮನಕ್ಕೆ ತಂದು ತನ್ಮೂಲಕ ಕರ್ನಾಟಕ ರಾಜ್ಯದ ಜನತೆಯ ಗಮನಕ್ಕೆ ತಂದು ಭವಿಷ್ಯದಲ್ಲಿ ಇದು ಮತ್ತೆ ಆಗಬಾರದು ಎಂದು ಸೂಚನೆ ಕೊಡುತ್ತೇವೆ. ಜನತೆ ನಿರೀಕ್ಷೆ ಮಾಡುತ್ತಿದೆ. ಈ ಕೆಲವು ಉದ್ದೇಶಗಳಿಂದ ಈ ಬೇಡಿಕೆಗಳನ್ನು ವಿರೋಧಿಸಬೇಕಾಗಿದೆ. ಸರ್ಕಾರದ ಕೆಟ್ಟ ನೀತಿ ಇರುವಾಗ ಹಣ ದುರುಪಯೋಗವಾಗಬಹುದು. ಅದಕ್ಕೋಸ್ಕರ ನೀತಿ ಯಾವಾಗಲೂ ಚೊಕ್ಕವಾಗಿರಬೇಕು, ಸ್ಪಷ್ಟವಾಗಿರಬೇಕು. ಭವಿಷ್ಯದ ಬಗ್ಗೆ ಗುರಿಯಿರಬೇಕು. ಒಳ್ಳೆಯ ಫಲಿತಾಂಶ ತರತಕ್ಕ ನೀತಿಯನ್ನು ರೂಪಿಸಬೇಕು. ಮೀನುಗಾರಿಕೆ ಮತ್ತು ಬಂದರು ಇಲಾಖೆಗಳ ಬಗ್ಗೆ ವ್ಯಾಖ್ಯಾನವನ್ನು ಪ್ರಭಾಕರ್‌ರಾಣೆಯವರು ಮತ್ತಿತರ ಸದಸ್ಯರು ಮಾಡುತ್ತಾರೆ. ಏಕೆಂದರೆ ಅವರು ಸಮುದ್ರ ದಡದಿಂದ ಬರತಕ್ಕವರು. ಮೀನು ಅಲ್ಲಿ ಮಾತ್ರ ಸಿಗುವುದಿಲ್ಲ, ಒಳನಾಡಿನಲ್ಲಿ ಕೂಡ ಮೀನುಗಾರಿಕೆ ಬೆಳೆಸಬೇಕು ಎಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಅದು ಕೂಡ ಒಳ್ಳೆ ನೀತಿ. ಕೆರೆಗಳು, ಕುಂಟೆಗಳು ಇತ್ಯಾದಿಗಳಲ್ಲಿ ಮೀನು ಇರಬಹುದು. ಬಾವಿಯಲ್ಲೂ ಇರಬಹುದು. ಹೇಳುವುದಕ್ಕಾಗುವುದಿಲ್ಲ. ಈ ರೀತಿ ವಿಚಾರಧಾರೆ ಇದ್ದರೆ ಹೆಚ್ಚಾಗಿ ಗಮನ ಕೊಡತಕ್ಕದ್ದು, ಸಮುದ್ರದಲ್ಲಿ ಮೀನು ಹಿಡಿಯುತ್ತೇವೆ ಅದಕ್ಕೆ ಅದರ ಬಗ್ಗೆ ವಿವರಗಳನ್ನು ಮಾನ್ಯ ಸದಸ್ಯರು ಮಾತನಾಡುತ್ತಾರೆ. ಮಾನ್ಯ ಬೈರೇಗೌಡರು ಮೀನು ತಿಂದಿದ್ದಾರೋ ಇಲ್ಲವೋ ಗೊತ್ತಿಲ್ಲ, ಕೋಲಾರ ಜಿಲ್ಲೆಯವರು ಅವರು. ಅಲ್ಲಿ ಮಳೆ ಪ್ರಮಾಣ ಕಡಮೆ.

ಶ್ರೀ ಸಿ. ಬೈರೇಗೌಡ – ಒಟ್ಟಿಗೆ ಅನೇಕ ಸಾರಿ ತಿಂದಿದ್ದೇವೆ.

ಶ್ರೀ ಎಚ್.ಜಿ. ಚನ್ನಪ್ಪ – ಕೆರೆಗಳು ಬತ್ತಿ ಹೋಗಿವೆ. ನೀರಿಲ್ಲ.

ಶ್ರೀ ಎಸ್. ಬಂಗಾರಪ್ಪ – ಮಳೆಯೇ ಆಗುವುದಿಲ್ಲ. ಮೀನು ಸಿಗುವುದು ಕಡಮೆ ಎಂದು ಹೇಳಿದೆ. ನಿಮಗೆ ಮೀನು ತಿನ್ನುವುದಕ್ಕೆ ಬರುವುದಿಲ್ಲ ಅಂತ ಇಲ್ಲ.

ಅಲ್ಲಿ ಮೀನಿನ ಅಭಿವೃದ್ಧಿ ಬಹಳ ಕಡಮೆ ಹಾಗೂ ಅಲ್ಲಿ ಅನೇಕ ಜಾತಿಯ ಮೀನುಗಳು ಸಿಗುವುದಿಲ್ಲ. ಆದ್ದರಿಂದ ಮೀನನ್ನು ಅವರು ತಿಂದಿಲ್ಲ ಎನ್ನುವ ಭಾವನೆ ಬರುತ್ತದೆ. ಮತ್ತೆ ಮೀನು ತಿನ್ನ ತಕ್ಕಂತಹ ದಕ್ಷಿಣ ಕನ್ನಡದ ಜನ ಯಾವ ರೀತಿ ಚುರುಕಾಗಿ, ಬುದ್ಧಿವಂತರಾಗಿ ಇರುತ್ತಾರೋ

ಆ ರೀತಿ ಮಾನ್ಯ ಮೀನುಗಾರಿಕಾ ಮಂತ್ರಿಗಳು ಕಾಣಿಸುತ್ತಿಲ್ಲ. ಆದ್ದರಿಂದ ಅವರು ಮೀನನ್ನು ತಿಂದಿದ್ದಾರೋ ಇಲ್ಲವೋ ತಿನ್ನುವ ಅನುಮಾನ ಬಂತು. ಇವತ್ತು ಮೀನುಗಾರರಿಗೆ ಬೇಕಾಗುವ ಬಲೆಗಳು, ದೋಣಿಗಳು ಹಾಗೂ ಇನ್ನಿತರ ವಸ್ತುಗಳ ಬಗ್ಗೆ ಹೆಚ್ಚಿನ ಸಹಾಯವನ್ನು ಒದಗಿಸಬೇಕಾಗುತ್ತದೆ. ಇವತ್ತು ಮೀನಿನ ಉತ್ಪಾದನೆ ದಿನೇ ದಿನೇ ಕುಂಠಿತವಾಗುತ್ತಿದೆ ಎನ್ನುವುದನ್ನು ಕೇಳಿದ್ದೇನೆ. ಇವತ್ತು ಮೀನುಗಾರರಿಗೆ ತಮ್ಮ ಸಹಾಯ ಸೌಲಭ್ಯ ಕೊಟ್ಟು ಅವರು ಹೆಚ್ಚೆಚ್ಚು ಮೀನು ಹಿಡಿಯುವ ಬಗ್ಗೆ ಅವರಿಗೆ ಉತ್ತೇಜನ ಕೊಡಬೇಕು. ಆದರೂ ಈ ಮಧ್ಯವರ್ತಿಗಳ ಹಾವಳಿ ಈ ವಿಷಯದಲ್ಲೂ ತಪ್ಪಿಲ್ಲ. ಇವತ್ತು ಮೀನುಗಾರರು ಕಷ್ಟಪಟ್ಟು ಸಮುದ್ರದ ಮಧ್ಯೆ ಹೋಗಿ ಜೀವದ ಹಂಗು ತೊರೆದು ಮೀನನ್ನು ಹಿಡಿದು ಕೊಡುವುದನ್ನು ತಪ್ಪಿಸಬೇಕು. ಈ ಎಲ್ಲಾ ವಿಷಯಗಳ ಬಗ್ಗೆ ಸಮುದ್ರ ತೀರದಿಂದ ಬಂದಂತಹ ಮಾನ್ಯ ಸದಸ್ಯರುಗಳು ಮಾತನಾಡುತ್ತಾರೆ. ಇನ್ನು ಬಂದರು ಬಗ್ಗೆ ಮಾತನಾಡಬೇಕೆಂದರೆ ರಾಜ್ಯದ ಎರಡು ಜಿಲ್ಲೆಗಳಲ್ಲಿ ಮಾತ್ರ ಸಮುದ್ರ ತೀರ ಇದೆ. ಮಂಗಳೂರಿನ ಪೆರಂಬೂರಿನಲ್ಲಿ ಮೇಜರ್ ಪೋರ್ಟ್ ಇದೆ. ಅಲ್ಲಿ ಬಂದವರಿಗೆ ಜಾಗವನ್ನು ಅಕ್ವೈರ್ ಮಾಡಿದ್ದು ಅಲ್ಲಿನ ಜನರಿಗೆ ಇನ್ನೂ ಬೇರೆ ಸೈಟ್ ಕೊಟ್ಟಿಲ್ಲ. ಇದು ಕೇಂದ್ರಕ್ಕೆ ಸಂಬಂಧಪಟ್ಟಿದ್ದು ಎಂದು ತಾವು ಹೇಳಬಹುದು. ಅವರು ಆ ಬಗ್ಗೆ ಕೇಂದ್ರದ ಜೊತೆ ವ್ಯವಹಾರ ನಡೆಸುವುದರ ಜೊತೆಗೆ ರಾಜ್ಯ ಸರ್ಕಾರ ಕೂಡಾ ಆ ಬಗ್ಗೆ ಕೇಂದ್ರದ ಗಮನಕ್ಕೆ ತಂದು ಅವರಿಗೆ ಬೇರೆ ವ್ಯವಸ್ಥೆ ಮಾಡಿಸುವ ಕಾರ್ಯ ಮಾಡಬೇಕಾಗುತ್ತದೆ.

ಹಳೇ ಮಂಗಳೂರು ಬಂದರು ಮತ್ತು ಕಾರವಾರ ಬಂದರುಗಳು ಕಾರ್ಯಗತ ಮಾಡತಕ್ಕ ಪರಿಸ್ಥಿತಿ ಬಂದರೆ ನಮ್ಮ ಕಡಲ ವ್ಯಾಪಾರಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಟ್ಟಂತಾಗುತ್ತದೆ. ಎರಡು ಬಂದರುಗಳ ಕೆಲಸವನ್ನು ಅತೀ ಜಾಗ್ರತೆಯಿಂದ ಮುಗಿಸಬೇಕೆಂಬ ಅಭಿಲಾಷೆ ರಾಜ್ಯ ಸರ್ಕಾರಕ್ಕೆ ಇರಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಹತ್ತಿರ ಇನ್ನೂ ಸಾಕಷ್ಟು ಸಾಮಗ್ರಿಗಳು ಇದ್ದು, ಸಮಯದ ಅಭಾವದಿಂದ ಇಷ್ಟು ಮಾತ್ರ ಹೇಳಿ ಈ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಸಭೆಯನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

## ಅಧಿಕಾರಿ ವರ್ಗಾವಣೆ ವಿಚಾರ

ಮಾನ್ಯ ಕಾನಡೆಯವರು ಅಧಿಕಾರಿ ವರ್ಗಾವಣೆ ವಿಚಾರ ಪ್ರಸ್ತಾಪ ಮಾಡಿದರು. ಗೋಪಾಲ ಎಂಬುವವರು ಮೀನುಗಾರಿಕೆ ಇಲಾಖೆಯಲ್ಲಿ 14 ವರ್ಷಗಳ ಕೆಲಸ ಮಾಡಿದ ಮೇಲೆ ಬಡ್ತಿ ಕೊಟ್ಟು ಕಾರವಾರಕ್ಕೆ 1981ರಲ್ಲಿ ವರ್ಗ ಮಾಡಿದ್ದೇವೆ ಎಂದು ಸಿ. ಬೈರೇಗೌಡರು ಉತ್ತರಿಸಿದರು.

ಶ್ರೀ ಕೆ.ಬಿ. ಮಲ್ಲಪ್ಪ - ಇದು ಉತ್ತರಕ್ಕೆ ಸಂಬಂಧಪಟ್ಟ ವಿಚಾರ ಅಲ್ಲ. ಇದರ ಬಗ್ಗೆ ನಾಳೆ ಕೇಳಿ.

ಛೇರ್ಮನ್ - ಎರಡು ನಿಮಿಷದಲ್ಲಿ ಹೇಳುತ್ತಾರೆ. ಸ್ವಲ್ಪ ತಾಳಿ.

ಶ್ರೀ ಎಸ್. ಬಂಗಾರಪ್ಪ - ಬಹುಶಃ ಈ ವಿಚಾರದಲ್ಲಿ ಕಾನಡೆಯವರು ಬಿಡುವ ಹಾಗೆ ಕಾಣಲಿಲ್ಲವೆಂದು ಕಾಣುತ್ತದೆ. ಅವರ ಹತ್ತಿರವೂ ವಿವರಗಳಿವೆ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಅದನ್ನು ಬುಧವಾರ ಪ್ರತ್ಯೇಕವಾಗಿ ಹೇಳಿ.

ಶ್ರೀ ಸಿ. ಬೈರೇಗೌಡ - ಸೂಕ್ಷ್ಮವಾಗಿ ಹೇಳಿಬಿಡುತ್ತೇನೆ.

ಶ್ರೀ ಎಂ. ಜಿ. ಕಾನಡೆ - ಸೂಕ್ಷ್ಮವಾಗಿ ಅಲ್ಲ. ವಿವರವಾಗಿ ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ - 1981ರಲ್ಲಿ ಬೆಂಗಳೂರಿನಿಂದ ಕಾರವಾರಕ್ಕೆ ಅವರನ್ನು ವರ್ಗ ಮಾಡಿದ್ದೇವೆ. ಆದರೆ ಅವರು ವರ್ಗವಾಗಿರತಕ್ಕ ಸ್ಥಳಕ್ಕೆ ಹೋಗಲಿಲ್ಲ. ಅದರ ಜೊತೆಗೆ ಮೀನುಗಾರಿಕೆ ಇಲಾಖೆ ಉದ್ಯೋಗಿ ಗೋಕುಲ ಎಂಬುವರ ಲೀವ್ ಟ್ರಾವಲ್ ಕನ್‌ಸೇಷನ್ ಮೇಲೆ ಡೆಲ್ಲಿಗೆ ಹೋಗಿ ಬರಬೇಕೆಂದು 3 ಸಾವಿರ ರೂಪಾಯಿ ಪಡೆದಿದ್ದಾರೆ. ಅದಕ್ಕೆ ಲೆಕ್ಕ ಕೊಟ್ಟಿಲ್ಲ. ಹೋಗಿ ಬಂದುದಕ್ಕೆ ಕಾನೂನು ಪ್ರಕಾರ ಏನು ಕ್ರಮಗಳನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ಇದರ ಮೇಲಿದ್ದ ಆರೋಪವನ್ನು ವಿಚಾರಣೆ ಮಾಡಲು ವಿಜಿಲೆನ್ಸ್ ಕಮೀಷನ್ನಿಗೆ ಕಳುಹಿಸಿದ ಬಳಿಕ ವಿಚಾರಣೆ ನಡೆಸಿ ಕೊಟ್ಟ ವರದಿಯಲ್ಲಿ ಆರೋಪಗಳು ಸಾಬೀತಾಗಿವೆ. ಅಲ್ಲದೆ ಅವರ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳಬಹುದೆಂದು ಹೇಳಿ ಅವರನ್ನು ನಿರ್ದೇಶಕರು ಕೆಲಸದಿಂದ ತೆಗೆದಿದ್ದಾರೆ. ಅದಾದ ಮೇಲೆ ಅವರುಗಳಿಗೆ ಮುಖ್ಯಮಂತ್ರಿ ಎನ್ಸ್ ಫೋರ್ಸ್‌ಮೆಂಟಲ್ ಡಿಐಜಿ ವಿಚಾರಣೆ ನಡೆಸಿ ಮೇಲ್ಮನವಿ ಸಲ್ಲಿಸಿದ್ದಾರೆ. ಆಗಲೂ ಸಹ ನಿರ್ದೇಶಕರು ತೆಗೆದುಕೊಂಡ ಕ್ರಮ ಸಕ್ರಮವಾಗಿದೆ. ಸರ್ಕಾರದಿಂದ ತೀರ್ಮಾನವಾಗಿದೆ. ನಂತರ ಅವರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ. ರಾಜ್ಯಪಾಲರು ಸರ್ಕಾರದಿಂದ ವಿವರ ಪಡೆದು ಸರ್ಕಾರ ಮತ್ತು ನಿರ್ದೇಶಕರು ತೆಗೆದುಕೊಂಡ ಕ್ರಮ ಸರಿಯಾಗಿದೆ ಎಂದು ಬರೆದಿದ್ದಾರೆ. ಅದಾದ ಮೇಲೆ ಮತ್ತೆ ಮುಖ್ಯಮಂತ್ರಿಗಳಿಗೆ ಮತ್ತು ಗೃಹಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳು ಕಡತ ತರಿಸಿ ಇದು ಜುಡಿಶಿಯಲ್ ಮ್ಯಾಟರ್ ಆದ್ದರಿಂದ ಪುನಃ ಅದನ್ನು ಪುನಃ ಅದನ್ನು ವಾಪಸ್ಸು ಕಳುಹಿಸಿದ್ದಾರೆ. ನಂತರ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದಾರೆ. ಅಂದರೆ ಅಪೀಲು ತರಹ ಅಲ್ಲ, ಪಿಟಿಷನ್ ಕಳುಹಿಸಿದ್ದಾರೆ. ಅಲ್ಲದೆ ಪ್ರಧಾನ ಮಂತ್ರಿಗಳಿಗೂ ಕೂಡ ಮಾಡುತ್ತಿರುವ ಮನವಿ ಸಲ್ಲಿಸಿದ್ದಾರೆ. ಇಷ್ಟಾದ ಮೇಲೆ ಅವರು ಧರಣಿ ಸತ್ಯಾಗ್ರಹವಾಗಿರುವುದಾಗಿ ತಿಳಿದು ಬಂದಿದೆ. ಇದನ್ನು ಕಾನೂನು ರೀತ್ಯ ನೋಡುವುದಾದರೆ ಎಳ್ಳಷ್ಟೂ ಮಾಡದೆ ಇರತಕ್ಕ ರೀತಿಯಲ್ಲಿ ಕಾಣುತ್ತದೆ. ಆದರೆ ಇವರು ನಿರ್ದೇಶಕರ ಮತ್ತು ಬೇರೆಯವರು ಮಾಡಿರತಕ್ಕ ಅಪಾದನೆಗಳು ಹಾಗೂ 4 ಜನ ನಿಮ್ಮ ವರ್ಗಕ್ಕೆ ಸೇರಿದ ಅಧಿಕಾರಿಗಳು ಸೂಯಿಸೈಡ್ ಮಾಡಿಕೊಳ್ಳುವುದಕ್ಕೆ ಇವರೇ ಕಾರಣರು ಎಂಬ ಆಪಾದನೆ ಬಗ್ಗೆ ಸಿವಿಲ್ ಕೋರ್ಟ್ ಆಪಾದನೆ ಬಗ್ಗೆ ವರದಿ ಕಳುಹಿಸಿದ್ದಾರೆ. ಇದೆಲ್ಲವನ್ನು ಗಮನಿಸಿದಾಗ ಮತ್ತು ಕಾನೂನು ದೃಷ್ಟಿಯಿಂದ ಇವರನ್ನು ನೋಡಿದರೆ ಇವರಿಗೆ ಯಾವ ವಿಧವಾದ ಅನುಕೂಲ ಕಲ್ಪಿಸಿಕೊಡುವುದಕ್ಕೆ ಪುನಃ ಕೆಲಸಕ್ಕೆ ಸೇರಿಸಿಕೊಳ್ಳತಕ್ಕ ಅವಕಾಶವಿಲ್ಲ.

ಶ್ರೀ ಎಂ. ಜಿ. ಕಾನಡೆ 11-5-80ರ ಸರ್ಕಾರಿ ಆಜ್ಞೆಯಲ್ಲಿ ಇವರನ್ನು ಸಸ್ಪೆಂಡ್ ಮಾಡಿ ವಿಚಾರಣೆ ನಡೆಸಿ ಎಂದು ಹೇಳಿದ್ದಾರೆ. ಆದರೆ ಇವರು ಡಿಸ್‌ಮಿಸ್ ಮಾಡಿದ್ದಾರೆ. ಸರ್ಕಾರ ಯಾವ ಯಾವ ಸಂದರ್ಭದಲ್ಲಿ ವಿಚಾರಣೆ ನಡೆಸಿದೆ ಹೇಳಿ.

ಶ್ರೀ ಸಿ. ಬೈರೇಗೌಡ – ನಾನು ಒಂದು ಸಲಹೆ ಮಾಡುತ್ತೇನೆ. ಅವರ ಹತ್ತಿರ ಏನೇನು ದಾಖಲಾತಿ ಇದೆ ಅದನ್ನು ಕೊಡಲಿ. ಪುನಃ ನಾನು ಅದನ್ನು ಖುದ್ದಾಗಿ ನೋಡುತ್ತೇನೆ. ನೋಡಿ ನ್ಯಾಯ ಇದ್ದರೆ ಖಂಡಿತ ನ್ಯಾಯ ದೊರಕಿಸಿಕೊಡತಕ್ಕ ಭರವಸೆ ಕೊಡುತ್ತೇನೆ.

## ಪಿ.ಎಸ್.ಸಿ. ಕುರಿತು ಚರ್ಚೆ

ಶ್ರೀ ಎಸ್. ಬಂಗಾರಪ್ಪ – ಹೋದಸಾರಿ ಮಾನ್ಯ ಜೀವರಾಜ ಆಳ್ವ ಅವರನ್ನು ವರಾಹಿ ಯೋಜನೆ ಬಗ್ಗೆ ಕೇಳಿದ್ದೆ. ಅವರು ಉತ್ತರ ಕೊಡಲಿಲ್ಲ. ಈಗ ಸಮಯ ಇಲ್ಲದಿರುವುದರಿಂದ ಮತ್ತೆ ಹಿಂದಕ್ಕೆ ಹೋಗುವುದಿಲ್ಲ. ಐ.ಎ.ಎಸ್. ಅಧಿಕಾರಿಗಳು ಕಂಟ್ರಾಕ್ಟರುಗಳನ್ನು ಬ್ಲಾಕ್‌ಲಿಸ್ಟ್‌ನಲ್ಲಿ ಸೇರಿಸತಕ್ಕದರ ಬಗ್ಗೆ ಹೇಳಿದ್ದೆ, ಯಾವ ಐ.ಎ.ಎಸ್. ಅಧಿಕಾರಿ ಕಂಟ್ರಾಕ್ಟರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸಿದರು ಎಂದು ಹೇಳಲಿಲ್ಲ. ಅದನ್ನು ಹೇಳಿದರೆ ಒಳ್ಳೆಯದು. ಮೀನುಗಾರಿಕೆ ಇಲಾಖೆಗೆ ಲೋಕಸೇವಾ ಆಯೋಗದವರು ಸೂಪರಿಂಟೆಂಡೆಂಟ್ ಅವರನ್ನು ಆಯ್ಕೆ ಮಾಡಿ ಕಳುಹಿಸಿರುವ ವಿಚಾರವನ್ನು ಮಂತ್ರಿಗಳು ಹೇಳಿದರು. ಆದರೆ ಆ ಆಜ್ಞೆಯನ್ನು ತಡೆಹಿಡಿದಿರುವುದಾಗಿ ತಿಳಿದು ಬಂತು. ಅದಕ್ಕೆ 6 ತಿಂಗಳು ಟೈಂ ಇರುತ್ತದೆ. ಈಗಾಗಲೇ ಒಂದು ತಿಂಗಳು ಕಳೆದಿದೆ. ಅಲ್ಲಿ ಎಷ್ಟು ಪೋಸ್ಟ್ ಇದೆ. ಆ ಆಜ್ಞೆಯನ್ನು ತಡೆ ಹಿಡಿಯಲು ಕಾರಣವೇನು ? ಈ ಬಗ್ಗೆ ಕೂಡ ಹೇಳುವುದು ಒಳ್ಳೆಯದು. ಮೈಸೂರು ತಾಲ್ಲೂಕಿನ ಬೆಟ್ಟದ ಕೆರೆಯಲ್ಲಿ ಮೀನು ಹಿಡಿಯುವ ಹಕ್ಕನ್ನು ಒಬ್ಬರಿಗೆ ಕೊಟ್ಟು ಲೀಸ್ ಆರ್ಡರ್ ಮುಗಿದಿರುವುದರಿಂದ ಕಂಡವರೆಲ್ಲ ಮೀನು ಹಿಡಿದು ಹಾಳಾಯಿತು ಎಂದು ಹೇಳಿದ್ದಾರೆ. ಆ ಕೆರೆಯನ್ನು ಯಾರಿಗೆ ಕೊಟ್ಟಿದ್ದೀರಿ ?

ಶ್ರೀ ಸಿ. ಬೈರೇಗೌಡ – ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ 20 ಜನ ಸೂಪರಿಂಟೆಂಡೆಂಟ್ ಆಫ್ ಫಿಷರೀಶ್ ಹುದ್ದೆಗೆ ಸೆಲೆಕ್ಟ್ ಆಗಿ ಲಿಸ್ಟ್ ಕಳುಹಿಸಿರುವುದು ನಿಜ ಈ ಇಲಾಖೆಯಲ್ಲಿ ಏನಾಗಿದೆ ಎಂಬ ಬಗ್ಗೆ ಮುಂಗಾರು ಪತ್ರಿಕೆಯಲ್ಲಿ ಬಂದಿರುವುದನ್ನು ಸ್ನೇಹಿತರೊಬ್ಬರು ಓದಿದರು. ಅದರಲ್ಲಿ ಕೆಲವು ಅಂಶಗಳನ್ನು ಬಿಟ್ಟರೆ ಸಾಕಷ್ಟು ಸತ್ಯಾಂಶ ಇದೆ. ನಾನು ಕೆಲವು ಕಡೆ ಹಠಾತ್ ಭೇಟಿ ಕೊಟ್ಟು ನೋಡಿದ್ದೇನೆ. ಎಲ್ಲಿ ಕೆಲಸ ಇಲ್ಲವೋ ಅಂಥ ಕಡೆ ಸಾಕಷ್ಟು ಮಂದಿ ಅಧಿಕಾರಿಗಳು ಇದ್ದಾರೆ. ಅವರು 4 ಘಂಟೆಗೆ ಕಚೇರಿಗೆ ಬೀಗ ಹಾಕುತ್ತಾರೆ ಇನ್ನೊಂದು ಕಡೆ ಕೆರೆ ಹತ್ತಿರ ಏನು ಮಾಡುತ್ತೀರಿ ಎಂದರೆ ಏನೂ ಇಲ್ಲ ಅನ್ನುತ್ತಾರೆ. ಏಕೆಂದರೆ ನಮಗೆ ಒಂದು ತಿಂಗಳಿಂದ ಬೋಟ್ ಇಲ್ಲ ಅನ್ನುತ್ತಾರೆ. ತಿಂಗಳಿನಿಂದ ಏನು ಮಾಡುತ್ತಿದ್ದೀರಿ ಎಂದು ಏನೂ ಇಲ್ಲ ಅನ್ನುತ್ತಾರೆ. ಒಂದು

ತಿಂಗಳಲ್ಲಿ ಏನು ನೀವು ಕೆಲಸವನ್ನು ಮಾಡಿದ್ದೀರಿ ಎಂದು ಲೆಕ್ಕ ಕೊಡಿ ಎಂದರೆ ಹೇಳಿದ್ದೆ. ಅವರು 1 ದಿವಸದಲ್ಲಿ 1 ಕೆಜಿ, 2ಕೆಜಿ, 3ಕೆಜಿ ಮೀನನ್ನು ಹಿಡಿದಿದ್ದಾರೆ. ಅವರು ಯಾವುದೇ ವರ್ಷದಲ್ಲೂ 1 ಸಾವಿರ ಕೆಜಿಗಿಂತಲೂ ಹೆಚ್ಚು ಮೀನನ್ನು ಹಿಡಿದಿರುವುದಿಲ್ಲ. ಆದರೂ ಅಲ್ಲಿ 3 ಜನ ಅಧಿಕಾರಿಗಳು ಇದ್ದಾರೆ. ಈ ರೀತಿ ಎಲ್ಲಾ ಕಡೆಯೂ ಅಷ್ಟು ಅಧಿಕಾರಿಗಳು ಇದ್ದು ಕೆಲಸ ಮಾತ್ರ ಸಾಕಷ್ಟು ಆಗಿಲ್ಲ. ಇದು ಬಹಳ ದಿವಸಗಳಿಂದ ನಡೆಯುತ್ತಾ ಬಂದಿದೆ. ಆದುದರಿಂದ ಈಗ ನಾನು ಏನು ತೀರ್ಮಾನ ಮಾಡಿದ್ದೇನೆಂದರೆ, ಈಗ ಒಂದು ಫಾರ್ಮ್ ಕೊಟ್ಟು ಯಾರು ಯಾರು ಏನೇನು ಕೆಲಸ ಮಾಡಿದ್ದಾರೆ ಅವರ ಪರ್ಫಾಮೆನ್ಸ್ ಏನು ಎನ್ನುವುದನ್ನು ಈಗಾಗಲೇ ವರದಿ ತರಿಸಿದ್ದೇನೆ. ಅದನ್ನು ನಾನೇ ಕುಳಿತು ತೀರ್ಮಾನ ಮಾಡಬೇಕೆಂದು ಇದ್ದೆ. ಆದರೆ ಅಧಿವೇಶನ ಇರುವುದರಿಂದ ಸಾಧ್ಯವಾಗಿಲ್ಲ. ಪ್ರತಿಯೊಬ್ಬರ ಕೆಲಸವನ್ನು ರಿವ್ಯೂ ಮಾಡಿ ಅವರ ಅವಶ್ಯಕತೆ ಇದೆಯೇ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಬೇಕೆನ್ನುವ ಉದ್ದೇಶದಿಂದ ರಿವ್ಯೂ ಮಾಡಬೇಕೆಂದು ವಿಚಾರ ಇದೆ.

ಶ್ರೀ ಎಸ್. ಬಂಗಾರಪ್ಪ – ವಿಷಯ ಹೀಗೆ ಇದ್ದರೆ ಎಷ್ಟು ಪೋಸ್ಟ್ ಬೇಕು ಎನ್ನುವ ಬಗ್ಗೆ ಪಿ.ಎಸ್.ಸಿ. ಗೆ ಪತ್ರ ಏತಕ್ಕೆ ಹೋಯಿತು ? ಹಾಗೆ ಅಷ್ಟು ಪೋಸ್ಟ್‌ಗಳು ಬೇಕು ಎಂದು ನಿಮಗೆ ಮಾಹಿತಿ ಕೊಟ್ಟ ಅಧಿಕಾರಿಗಳು ಯಾರು ? ಮತ್ತೆ ಬಹಳ ದಿವಸಗಳಿಂದ ಅವರಿಗೆ ಕೆಲಸ ಇಲ್ಲ ಎನ್ನುವ ವಿಷಯ ತಮ್ಮ ಗಮನಕ್ಕೆ ಬಂದಿದೆ ಎಂದಿರಿ. ಇವತ್ತು ಕೆಲಸವೇ ಇಲ್ಲದಿದ್ದಾಗ ಅಷ್ಟು ಪೋಸ್ಟ್ ಕ್ರಿಯೇಟ್ ಮಾಡಿ ಆ ಬಗ್ಗೆ ಅಡ್ವರ್‌ಟೈಸ್‌ಮೆಂಟ್ ಮಾಡಿ ಅವರಿಗೆ ಇಂಟರ್‌ವ್ಯೂಗೆ ಕರೆಯಬೇಕಾದರೆ ಪಿ.ಎಸ್.ಸಿ.ಗೂ ಎಷ್ಟು ಖರ್ಚು ? ಈವತ್ತು ಆ ಕ್ಯಾಂಡಿಡೇಟ್ಸ್ ತಲೆ ಬೋಳಿಸತಕ್ಕ ಕೆಲಸವನ್ನು ಏಕೆ ಮಾಡಿದಿರಿ ? ಬಹಳ ದಿವಸಗಳಿಂದ ಕೆಲಸವಿಲ್ಲವೆಂದು ಹೇಳುತ್ತೀರಿ. ಇವತ್ತು ಅಧಿಕಾರಿಗಳು ಸಣ್ಣವರೇ ಇರಬಹುದು. ಅಥವಾ ದೊಡ್ಡವರೇ ಇರಬಹುದು ಅವರಿಗೆ ಏನು ಶಿಕ್ಷೆ ಕೊಟ್ಟು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಸಿ. ಬೈರೇಗೌಡ – ಎಲ್ಲಾ ಅಂಶಗಳನ್ನು ಗಮನಿಸಿಯೇ ವರ್ಕನ್ನು ರಿವ್ಯೂ ಮಾಡಿದ ಮೇಲೆ ಎಷ್ಟು ಜನರ ಅವಶ್ಯಕತೆ ಇದೆ ಅಷ್ಟನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಮತ್ತೆ ಅವರು ಕೆರೆ ವಿಚಾರವಾಗಿ ಹೇಳಿದ್ದಾರೆ. ನಮ್ಮ ಕಡೆಯೂ ಸಾಕಷ್ಟು ಮೀನಿಗೋಸ್ಕರ ಜಗಳ ನಡೆಯುತ್ತವೆ. ಈ ಬಗ್ಗೆ ನಿಮ್ಮ ಕಡೆಯೂ ನಡೆಯುತ್ತದೆ ಎಂದು ಈಗ ಗೊತ್ತಾಯಿತು. ಫಿಶ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಮೈಸೂರಿನಲ್ಲೂ ಇದೆ. ಅದರಲ್ಲಿ ಜಿಲ್ಲಾಧಿಕಾರಿಗಳವರ ಒಂದು ಸಮಿತಿ ಇರುತ್ತದೆ. ಅಲ್ಲಿ ಕೆಲವರಿಂದ ಅಪ್ಲಿಕೇಶನ್ ಕರೆದು ಕೆಲವರಿಗೆ ಟ್ರೈನಿಂಗ್ ಕೊಟ್ಟು ಅದರ ಆಧಾರದ ಮೇಲೆ ಇಂತಿಂತಹವರಿಗೆ ಇಂತಿಂತಹ ಕೆರೆಗಳು ಎಂದು ವಹಿಸುತ್ತಾರೆ. ಇವತ್ತು ಈ ಯೋಜನೆ ಕೆಳಗೆ ಅನೇಕ ಯುವಕರು ಮೀನನ್ನು ಸಾಕುತ್ತಿದ್ದಾರೆ. ಇವತ್ತು ಏನಾಗಿದೆ ಎಂದರೆ ಮೊದಲು ಆ ಕೆರೆಗಳಲ್ಲಿ ಮೀನು ಬಿಟ್ಟು ಸಾಕಿ ಅವನ್ನು ಹಿಡಿಯತಕ್ಕ ಪರಿಪಾಠವಿರಲಿಲ್ಲ. ಇವತ್ತು ಟ್ರೈನಿಂಗ್ ಆಗಿರುವವರು ಮೀನು ಬಿಟ್ಟು ಒಳ್ಳೊಳ್ಳೆ ಮೀನುಗಳನ್ನು ಸಮೃದ್ಧಿಯಾಗಿ ಬೆಳೆಸಿದ ಮೇಲೆ ಎಲ್ಲರ ಕಣ್ಣೂ ಅವುಗಳ ಮೇಲೆ ಬಿದ್ದವೆ.

ಎಲ್ಲರೂ ಅವನ್ನು ಹಿಡಿಯುತ್ತಾರೆ. ಇವತ್ತು ಏನು ಎಫ್.ಎಫ್.ಡಿ.ಎ.ಯವರು ಹಣ ಖರ್ಚು ಮಾಡಿದರೂ ಪ್ರತಿಫಲ ಅವರಿಗೆ ಸಿಗುತ್ತಿಲ್ಲ. ಇದರಿಂದ ಈ ಯೋಜನೆಯೇ ತಲೆ ಕೆಳಗು ಆಗತಕ್ಕ ಪರಿಸ್ಥಿತಿ ಬಂದಿದೆ. ಇದರಿಂದ ಇದನ್ನು ಇಟ್ಟುಕೊಳ್ಳಬೇಕೇ ಬೇಡವೇ ಎನ್ನುವ ಪ್ರಶ್ನೆ ಬಂದಿದೆ. ಆದರೆ ಇದನ್ನು ಕಾರ್ಯಗತ ಮಾಡಬೇಕೆಂದು ಕೇಂದ್ರ ಸರ್ಕಾರದ ಆದೇಶ ಇದೆ. ಇದು ಎರಡೂ ಸರ್ಕಾರಗಳು ಸೇರಿ ನಡೆಸುತ್ತಿರುವ ಯೋಜನೆ. ಈ ಉದ್ದೇಶ ಏನೇ ಒಳ್ಳೆಯದಿದ್ದರೂ ಅದು ಸಫಲ ಆಗುತ್ತಾ ಇಲ್ಲ ಎನ್ನುವ ಪರಿಸ್ಥಿತಿ ಬರುತ್ತಿದೆ. ಆ ಕೆರೆ ಬಗ್ಗೆ ನನಗೂ ಅರ್ಜಿ ಬಂದಿದೆ. ನಾನು ಮೈಸೂರು ಕಡೆ ಹೋದಾಗ ನಾನೇ ಖುದ್ದು ಅಲ್ಲಿಗೆ ಹೋಗಿ ವಿಚಾರ ಮಾಡಿ ಬರುವ ಆಲೋಚನೆ ಮಾಡುತ್ತಿದ್ದೇನೆ. ಆ ಕಡೆ ಹೋದಾಗ ನಾನೇ ಅದನ್ನು ಸರಿಪಡಿಸುತ್ತೇನೆಂದು ಹೇಳುತ್ತೇನೆ.

## ಮೀನುಗಾರರಿಗೆ ಡೀಸಲ್ ಸಬ್ಸಿಡಿ ಬಗ್ಗೆ ಪ್ರಶ್ನೋತ್ತರ : 1 -4-85

ಶ್ರೀ ಜಿ.ಎಸ್.ಆಚಾರ್ (ಬೈಂದೂರು) - ಮಾನ್ಯ ಮೀನುಗಾರಿಕೆ ಹಾಗೂ ಬಂದರುಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರ ಮೀನುಗಾರರಿಗೆ ನೀಡಲು ತೀರ್ಮಾನಿಸಿದ ಡೀಸಲ್ ಸಬ್‌ಸಿಡಿ ಯಾವಾಗ ಕೊಡಲಾಗುವುದು ಮತ್ತು ವಿಳಂಬಕ್ಕೆ ಕಾರಣವೇನು?

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರು ಸಚಿವರು)

ಅ) 1984 ರಲ್ಲಿ ವಿಧಾನ ಸಭೆಯಲ್ಲಿ ಆಯವ್ಯಯದ ಮೇಲಿನ ಚರ್ಚೆ ನಡೆಯುತ್ತಿದ್ದಾಗ ಮಾನ್ಯ ಮುಖ್ಯಮಂತ್ರಿಗಳು ಮೀನುಗಾರಿಕೆಗೆ 1984-85 ನೇ ಸಾಲಿನಿಂದ ಡೀಸಲ್ ಮೇಲಿನ ಮಾರಾಟ ಕರದ ವಿನಾಯಿತಿಗೆ ಬದಲಾಗಿ ಅವರು ಪಾವತಿ ಮಾಡಿದ ಮಾರಾಟ ಕರಕ್ಕೆ ಸಮನಾದ ಹಣವನ್ನು ಸಹಾಯ ಧನದ ರೂಪದಲ್ಲಿ ಪಾವತಿ ಮಾಡುವುದಾಗಿ ಭರವಸೆ ಕೊಟ್ಟಿದ್ದುದು ಸರಿಯಷ್ಟೆ. ಆದರೆ ಈ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವಾಗಲು ಕಾರಣವೇನೆಂದರೆ ಇದಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳತ್ತ ಸರ್ಕಾರ ಗಮನವನ್ನು ಹರಿಸಬೇಕಾಗಿತ್ತು. ಅವು ಯಾವುವೆಂದರೆ ಯೋಜನೆಗೆ ಒದಗಿಸಬೇಕಾದ ಹಣ ಮೀನುಗಾರರ ಸಂಘಟಿತ ಸಂಸ್ಥೆಗಳವರು ಇಡಬೇಕಾದ ದಾಖಲಾತಿಗಳು ಮಂಜೂರು ಮಾಡುವ ಮತ್ತು ವಿತರಣೆ ಮಾಡುವಲ್ಲಿ ಅನುಸರಿಸಬೇಕಾದ ನಿಯಮಗಳು ವಗೈರೆ.

ಈ ಯೋಜನೆಯನ್ನು ಕಾರ್ಯಗತಗೊಳಿಸಲು ವರ್ಷಕ್ಕೆ ಸುಮಾರು ರೂ. 1,01 ಕೋಟಿ ಅಗತ್ಯವಿದ್ದು, ಈ ಅಗಾಧ ವೆಚ್ಚವನ್ನು ಭರಿಸಲು ಇರುವ ಸಂಪನ್ಮೂಲಗಳನ್ನು ಪರಿಶೀಲಿಸಬೇಕಾಗಿತ್ತು. ಈಗ ಎಲ್ಲಾ ಪರಿಶೀಲನೆ ಮುಗಿದಿದ್ದು, ಈ ಯೋಜನೆಯನ್ನು 1984-85ರಿಂದಲೇ ಕಾರ್ಯರೂಪಕ್ಕೆ

ತರುವ ಸರ್ಕಾರದ ಆದೇಶವನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು ಮತ್ತು ಮೀನುಗಾರರಿಗೆ ಸಲ್ಲಬೇಕಾದ ಹಣವನ್ನು ಪ್ರಸಕ್ತ ಸಾಲಿನ ಜೂನ್ - ಜುಲೈ ತಿಂಗಳಲ್ಲಿ ಪಾವತಿ ಮಾಡಲಾಗುವುದು.

ಶ್ರೀ ಜಿ.ಎಸ್. ಆಚಾರ್ - ಬರೇ ಸಂಪನ್ಮೂಲಗಳ ಪರಿಶೀಲನೆ ಮಾತ್ರ ಮುಗಿದಿದೆಯೇ ಅಥವಾ ಸದಸ್ಯರು, ಸಂಸ್ಥೆಗಳು ಇಡಬೇಕಾಗಿರುವ ದಾಖಲಾತಿ ಮಂಜೂರು ಮಾಡುವ ನಿಯಮಗಳು, ಇತ್ಯಾದಿ ಎಲ್ಲವೂ ರಚನೆಯಾಗಿದೆಯೋ ಎಂದು ಕೇಳಬಯಸುತ್ತೇವೆ.

ಶ್ರೀ ಸಿ. ಬೈರೇಗೌಡ - ಅಧ್ಯಕ್ಷರೇ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಈಗ ಸರ್ಕಾರದ ಆಜ್ಞೆ ಒಂದೆರಡು ದಿವಸಗಳಲ್ಲಿ ಹೊರಬೀಳಲಿದೆ. ಎಲ್ಲಾ ಅಂಶಗಳನ್ನು ಪರಿಶೀಲನೆ ಮಾಡಿ ಆಗಿದೆ. ಈಗ ಸರಕಾರ ಆಜ್ಞೆಯನ್ನು ಹೊರಡಿಸಲಿದೆ. ಅದೇ ರೀತಿ 1984-85 ರಲ್ಲಿ ಸಲ್ಲಬೇಕಾದಂತಹ ಹಣವನ್ನೂ ಕೂಡಾ ಪೂರ್ವಾನ್ವಯವಾಗಿ ಸರಕಾರ ಕೊಡುವುದಕ್ಕೆ ಒಪ್ಪಿದೆ.

ಶ್ರೀ ಜಿ.ಎಸ್. ಆಚಾರ್ಯ - ಈ ರೀತಿ ಮುಂದಿನ ವರ್ಷಗಳಲ್ಲಿ ಮುಂದುವರೆಯುತ್ತದೆಯೇ ಎಂದು ಕೇಳ ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ - ಹೌದು, ಇದು ಪ್ರತೀ ವರ್ಷವೂ ಅನ್ವಯವಾಗತಕ್ಕ ಕಾರ್ಯ. ಸರಕಾರ ಒಪ್ಪಿರತಕ್ಕಂತಹ ಕಾರ್ಯ.

ಶ್ರೀ ಪ್ರತಾಪಚಂದ್ರಶೆಟ್ಟಿ - ಅಧ್ಯಕ್ಷರೇ ನಾವು ಕೇಳಿರುವ ಪ್ರಶ್ನೆಗಳಿಗೆ ತಾವು ಉತ್ತರ ಕೊಟ್ಟ ಹಾಗೆ ಕಾಣುವುದಿಲ್ಲ. ಅವರು ಕೇಳುತ್ತಾ ಇರುವುದು, ಡೀಸೆಲ್ ಸಬ್ಸಿಡಿ ಕೊಡುತ್ತಾ ಇದ್ದಾರೋ? ಇದ್ದರೆ ಯಾವಾಗ ಕೊಡುತ್ತಾರೆ? ಕೊಡದಿರುವುದಕ್ಕೆ ವಿಳಂಬವಾಗಿರುವುದಕ್ಕೆ ಕಾರಣ ಏನು? ಎಂದು ಕೇಳಿದರೆ ಅದಕ್ಕೆ ಮಂತ್ರಿಗಳು ಬೇರೆ ಉತ್ತರ ಕೊಡುತ್ತಾರೆ. ಕೊಡುತ್ತಾರೋ, ಇಲ್ಲವೋ ಎಂಬುದಕ್ಕೆ ನಮಗೆ ಉತ್ತರ ಬೇಕಾಗಿದೆಯೇ ಹೊರತು, ನೀವು ತೆಗೆದುಕೊಂಡ ಹಲವಾರು ಕ್ರಮಗಳನ್ನು ಮೀನುಗಾರರಿಗೆ ಕೊಡುತ್ತೇವೆಂದು ಹೇಳಿದರೆ ಆಗುತ್ತದೆಯೇ?

ಶ್ರೀ ಸಿ. ಬೈರೇಗೌಡ - ಅಧ್ಯಕ್ಷರೇ, ಉತ್ತರದ ಪ್ರತಿಯನ್ನು ಬೇಕಾದರೆ ಅವರಿಗೆ ಕಳುಹಿಸಿಕೊಡುತ್ತೇನೆ. ಮತ್ತೊಂದು ಸಾರಿ ಅವರು ಓದಿಕೊಂಡರೆ, ಅವರಿಗೆ ಸರಿಯಾಗಿ ಅರ್ಥವಾಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ - ಅವರಿಗೆ ನೀವು ಕೊಡುತ್ತೇವೆಂದು ಹೇಳಿ, ನಂಬಿಸಿ, ಕೊಡದೇ ಈಗ ಕೊಡುತ್ತೇವೆಂದು ಹೇಳುವುದು ಸರಿಯಲ್ಲ. ಅವರು ಬಹಳ ಕಷ್ಟದಲ್ಲಿದ್ದಾರೆ. ಅವರು 195 ಮೈಲುಗಳ ಕರಾವಳಿಯಲ್ಲಿ ಮೀನುಗಾರಿಕೆಯಿಂದ ಕಷ್ಟಪಟ್ಟು ದುಡಿಯತಕ್ಕಂತಹ ಜನರು ಅವರಿಗೆ ನೀವು ಸಬ್ಸಿಡಿ ಕೊಡುತ್ತೇವೆಂದು ಹೇಳಿ ಕೊಡದಿರುವುದಕ್ಕೆ ಕಾರಣ ಏನು?

ಶ್ರೀ ಸಿ. ಬೈರೇಗೌಡ - ಮಾನ್ಯ ಅಧ್ಯಕ್ಷರೇ, ನಾವು ಬಡವರನ್ನು ನಂಬಿಸಿ, ಈಗ ಅವರಿಗೆ ಕೊಡುವುದಿಲ್ಲ ಎನ್ನುವಂತಹ ಮಾತನ್ನು ನಾನಂತೂ ಹೇಳಲಿಲ್ಲಾ. ಹಾಗೆಯೇ ಅದು ಸರಕಾರದ ನೀತಿಯೂ ಅಲ್ಲ. ಕೊಡುತ್ತೇವೆಂದು ಸರಕಾರ ಮಾತು ಕೊಟ್ಟಿದೆ. ಅದಕ್ಕಾಗಿ ಸಕಲ ಸಿದ್ಧತೆಗಳೂ ಕೂಡಾ ಆಗಿವೆ, ಕೊಡುತ್ತೇವೆ.

ಶ್ರೀ ಜಿ.ಆರ್. ಆಚಾರ್ಯ - ಆದರೆ ತಾವುಗಳು......

**ಅಧ್ಯಕ್ಷರು** - ಕೊಡುತ್ತೇವೆಂದು ಹೇಳಿದ್ದಾರಲ್ಲಾ?

ಶ್ರೀ ಪ್ರತಾಪಚಂದ್ರ ಶೆಟ್ಟಿ - ಅಧ್ಯಕ್ಷರೇ, ಕೊಡುತ್ತೇವೆಂದು ಹೇಳಿದ್ದಾರೆ. ಇನ್ನೂ ನಿರ್ಣಯವಾದಂತಹ ವಿಷಯ ತಿಳಿಸಿಲ್ಲ. ಯಾವಾಗ ಕೊಡುತ್ತಾರೆಂದು ಎನ್ನುವ ವಿಚಾರವನ್ನು ನಾವು ಇಲ್ಲಿ ಕೇಳುತ್ತಿದ್ದೇವೆ ಅಷ್ಟೆ.

ಶ್ರೀ ಬಿ. ರಾಚಯ್ಯ - ಅಧ್ಯಕ್ಷರೆ, ಪೂರ್ವಾನ್ವಯ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಇನ್ನೂ ಏನುಬೇಕು?

**ಅಧ್ಯಕ್ಷರು** - ಆಚಾರ್ಯರವರೇ, ಅವರು ಪೂರ್ವಾನ್ವಯ ಮಾಡಿಕೊಡುತ್ತೇವೆಂದು ಹೇಳಿದ್ದಾರಲ್ಲ! ಇನ್ನೂ ಏನು ಬೇಕು ನಿಮಗೆ? ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ - ಕನ್ನಡದಲ್ಲಿ ಉತ್ತರವನ್ನು ಸರಿಯಾಗಿ ಕೊಟ್ಟಿರುತ್ತದೆ. ಕನ್ನಡ ಬಾರದಿದ್ದರೆ, ಸರಿಯಾಗಿ ಕಲಿತುಕೊಳ್ಳಬೇಕು.

ಶ್ರೀ ಪ್ರತಾಪಚಂದ್ರಶೆಟ್ಟಿ - ಕನ್ನಡವನ್ನು ನಾವು ನಿಮ್ಮ ಕಡೆಯಿಂದ ಕಲಿತುಕೊಳ್ಳಬೇಕಾಗಿಲ್ಲ. ನೀವೇ ಸರಿಯಾಗಿ ತಿಳಿದುಕೊಳ್ಳಿ, ವಿಷಯ ಬಿಟ್ಟು ಬೇರೆ ಮಾತಾಡುತ್ತಿದ್ದೀರಿ...

**ಅಧ್ಯಕ್ಷರು** - ನೀವು ಅಡ್ಡವಾಗಿ ಮಾತನಾಡುತ್ತಿದ್ದೀರಿ. ಸೂಕ್ತ ರೀತಿಯಲ್ಲಿ ಮಾತನಾಡಬೇಕು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ - ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಹೇಳಿದರು, ಮಾನ್ಯ ಇದಿನಬ್ಬ ಮತ್ತಿತರ ಸದಸ್ಯರು ಏನು ಪ್ರಶ್ನೆ ಹಾಕಿದರು, ಅದಕ್ಕೆ ಮಂತ್ರಿಗಳು, ನಾನು ಎಲ್ಲಾ ಉತ್ತರ ಕೊಟ್ಟಿದ್ದೇನೆ. ನೋಡಿರಿ ಮತ್ತೊಮ್ಮೆ ಬೇಕಾದರೆ ಎಲ್ಲ ಉತ್ತರವನ್ನೂ ಕಳುಹಿಸಿಕೊಡುತ್ತೇನೆ. ಎನ್ನತಕ್ಕಂತಹ ಮಾತನ್ನು ಹೇಳಿದರು. ಇದು ಹೇಳತಕ್ಕದ್ದಲ್ಲ. ಯಾವುದಾದರೂ ಪ್ರಶ್ನೆಗೆ ಉತ್ತರ ಕೇಳಿದಾಗ, ಉತ್ತರ ಕೊಟ್ಟಿದ್ದಾಗ ಸ್ಪಷ್ಟೀಕರಣ ಕೇಳತಕ್ಕಂತಹ ಹಕ್ಕು ಎಲ್ಲಾ ಸದಸ್ಯರಿಗೂ ಇದೆ. ಸಂಬಂಧಪಟ್ಟ ಮಂತ್ರಿಗಳು ಇದ್ದಾಗ ಸದಸ್ಯರಿಗೆ ಕೊಡತಕ್ಕ ಉತ್ತರವೂ ಸ್ಪಷ್ಟವಾಗಿ ಇರಬೇಕು. ಕೊಟ್ಟ ಉತ್ತರವು ಸರಿಯಾಗಿಲ್ಲವಾದರೆ, ಸ್ಪಷ್ಟೀಕರಣ ಕೇಳತಕ್ಕಂತಹ ಹಕ್ಕು ಎಲ್ಲರಿಗೂ ಇದೆ ತಾವುಗಳು ಇನ್ನೊಮ್ಮೆ ಕಳುಹಿಸಿ ಕೊಡುತ್ತೇನೆ. ಓದಿಕೊಳ್ಳಿರಿ ಎನ್ನತಕ್ಕಂತಹ ಮಾತು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ - ಇವರು ಸಮುದ್ರ ಮತ್ತು ಬಂದರು ಎರಡನ್ನೂ ನೋಡತಕ್ಕಂತಹ ಮಂತ್ರಿ. ಅವರೇ ಸರಿಯಾಗಿ ಒಂದು ಉತ್ತರವನ್ನು ಕೊಡುವುದನ್ನು ಬಿಟ್ಟು ಉದ್ಧಟತನದ ಮಾತನ್ನು ಹೇಳುವುದು ಸರಿಯಲ್ಲ. ಉತ್ತರವನ್ನು ನೋಡಿದ್ದೀರಾ? ಪುನಃ ಕಳುಹಿಸಬೇಕೆ ಎಂದು ಅವರು ಹೇಳತಕ್ಕ ಮಾತುಗಳು ಸರಿಯಲ್ಲ....

ಶ್ರೀ ವಿ. ವಸಂತ ಸಾಲ್ಯಾನ್ - ಮಾನ್ಯ ಅಧ್ಯಕ್ಷರೇ, ಈಗ ಮೀನುಗಾರಿಕೆ ಅವಧಿ ಮುಗಿಯುತ್ತಾ ಬಂದಿದೆ. ಅದರೊಳಗಾಗಿ ಸಚಿವರು ಕೊಡುವಂತಹ ಪ್ರಯತ್ನ ಮಾಡಬೇಕು ಮತ್ತು ನಾನು ಮೀನುಗಾರರ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೆ. ಮೀನುಗಾರಿಕೆಗೆ ಮೀನಿನ ಕ್ಷಾಮ ಬಂದಿರುವ ವಿಚಾರದಲ್ಲಿ ಹೇಳಿದ್ದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನಿನ ಕ್ಷಾಮವೇ ಇಲ್ಲವೆಂದು ನನಗೆ ಉತ್ತರಕೊಟ್ಟಿದ್ದಾರೆ. ಅದು ಸರಿಯಲ್ಲ, ದಕ್ಷಣ ಕನ್ನಡ ಜಿಲ್ಲೆಯಲ್ಲಿ ಮೀನಿನ ಕ್ಷಾಮ ಬಂದಿದೆ. ಅದಕ್ಕಾಗಿ ಸೂಕ್ತವಾಗಿ ಕ್ರಮ ತೆಗೆದುಕೊಂಡು ಮೀನುಗಾರರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಆಚಾರ್ - ಅಧ್ಯಕ್ಷರೇ, ಸರಕಾರ ಹಿಂದೆ ಕೊಟ್ಟ ವಾಗ್ದಾನ ಬೇರೆ. ಈಗ ಇಲ್ಲಿ ಆಗುತ್ತಿರುವ ವಿಧಾನ ಬೇರೆ. ಹಿಂದೆ ಮೀನುಗಾರರಿಗೆ ಡೀಸೆಲ್ ಸಬ್ಸಿಡಿ ಕೊಡಬೇಕೆಂದು ಮೀನುಗಾರರು ಬೇಡಿಕೆ ಎತ್ತಿದ್ದು, ಅದನ್ನು ಪರಿಶೀಲಿಸುವುದಾಗಿ ಸರಕಾರವು ಒಪ್ಪಿಕೊಂಡಿತ್ತು. ಈಗ ಅದರ ಬದಲಿಗೆ ಮಾರಾಟ ಕರಕ್ಕೆ ಸಮನಾದ ಹಣವನ್ನೂ ಸಹಾಯ ಧನ ಮಾಡುವುದರ ರೀತಿಯಲ್ಲಿ ಅದಕ್ಕೆ ಮೀನುಗಾರರಿಂದ ಬೇಕಾದ ರಿಕಾರ್ಡ್ಸ್‌ಗಳನ್ನು ತೆಗೆದುಕೊಂಡು, ಪುರಾವೆಗಳನ್ನು ತೆಗೆದುಕೊಂಡು ಮಾಡುವ ಒಂದು ಸುದೀರ್ಘವಾದ ವಿಚಾರ ಇಲ್ಲಿ ಕಂಡುಬರುತ್ತಿದೆ. ಇದು ಬಹುಶಃ ಮೀನುಗಾರರಿಗೆ ಕೊಡಬೇಕಾದ ಸಬ್ಸಿಡಿಯನ್ನು ಆದಷ್ಟು ಕಡಮೆ ಮಾಡುವ ದೃಷ್ಟಿಯಿಂದ ಸರಕಾರ ಯೋಚಿಸುತ್ತಿದೆಯೋ ಏನೋ ಎಂದು ನಮಗೆ ಕಂಡು ಬರುತ್ತಾ ಇದೆ.

ಶ್ರೀ ಸಿ. ಬೈರೇಗೌಡ - ಅಧ್ಯಕ್ಷರೇ, ಕಡಮೆ ಮಾಡತಕ್ಕದ್ದು, ಸರಕಾರದ ಉದ್ದೇಶ ಖಂಡಿತಾ ಅಲ್ಲ. ಸರಕಾರದಿಂದ ಹಣ ಪಾವತಿ ಮಾಡಬೇಕಾದರೆ ಅದಕ್ಕೆ ಸರಿಯಾದ ಒಂದು ಲೆಕ್ಕ ದಾಖಲೆ ಇತರ ನಿಯಮಗಳ ಪ್ರಕಾರ ಎಲ್ಲವನ್ನೂ ಇಡಬೇಕಾಗುತ್ತದೆ. ಹಣ ತೆಗೆದು ಸ್ವಂತ ವ್ಯವಹಾರ ನಡೆಸಿದ ಹಾಗೆ ಸರಕಾರಿ ವ್ಯವಹಾರ ನಡೆಸುವುದಕ್ಕಾಗುವುದಿಲ್ಲ. ಅದಕ್ಕೆ ಪ್ರತಿಯೊಂದಕ್ಕೂ, ಯಾರು ಕೊಂಡಿರುತ್ತಾರೋ ಅವರು ಲೆಕ್ಕ ಕೊಡಬೇಕಾಗುತ್ತದೆ. ಸರಿಯಾದ ದಾಖಲೆಗಳನ್ನು ಇಡಬೇಕಾಗುತ್ತದೆ. ಈಗ ಅದಕ್ಕೋಸ್ಕರ ಒಂದು ಯೋಜನೆ ತಯಾರಾಗಿದೆ. ಅದರ ಪ್ರಕಾರ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆ.

# ದುರ್ದೆಸೆ ಬರುವುದು ಬೇಡ 22-8-87

ವಿಧಾನಸಭಾ ಚರ್ಚೆಯಲ್ಲಿ ಕರ ಮತ್ತು ಬಟ್ಟೆ ವಿತರಣೆ ವಿಚಾರದಲ್ಲಿ ಸಚಿವ ಲಕ್ಷ್ಮೀಸಾಗರ್ ಅವರು ಮೇಲೆ ಖಾದಿಬಟ್ಟೆ,
ಗಾಂಧಿಟೋಪಿ ಹಾಕಿಲ್ಲ. ಆತ್ಮದಲ್ಲಿ ಗಾಂಧಿ ತತ್ವವನ್ನು ಅನುಸರಿಸುವರು ಎಂದಾಗ,
ಅಧ್ಯಕ್ಷರು ಮೇಲೆ ಖಾದಿ ಹಾಕದಿದ್ದರೂ ಆತ್ಮದಲ್ಲಿ ಗಾಂಧಿತತ್ವ ಹೇಳುತ್ತಾರೆ ಎಂದರು.
ಆಗ ಮತ್ತೆ ಕೆ.ಎಚ್. ಪಾಟೀಲರು ಮತ್ತು ಬೈರೇಗೌಡರು ಚರ್ಚಿಸಿದರು.

ಸರ್ಕಾರವನ್ನು ನಡೆಸಲು ಜನ ಆರಿಸಿ ಕಳುಹಿಸುತ್ತಾರೆ. ಅವರು ತಪ್ಪು ಮಾಡಿದರೂ ಅವರನ್ನು ತೆಗೆಯುವುದಕ್ಕೆ ಅವಕಾಶವಿಲ್ಲ. ಐದು ವರ್ಷದವರೆಗೂ ಕೈಕಟ್ಟಿಕೊಂಡು ಕೂತುಕೊಳ್ಳಬೇಕು. ಸರ್ಕಾರ ಎಂಥದ್ದು ಎಂಬುದನ್ನು ತಿಳಿಯಬೇಕಾದರೆ ಅವರು ತರುವಂಥ ಕಾನೂನಿನಿಂದ ಸಾಧ್ಯ ತಮಗೆ ಗೊತ್ತಿದೆ. ಈ ಸರ್ಕಾರ ಬರುವುದಕ್ಕೆ ಬಹಳ ಮಟ್ಟಿಗೆ ಅನುಕೂಲ ಮಾಡಿದವರು ಎಂದರೆ ಜರ್ನಲಿಸ್ಟ್. ಅವರು ಇದ್ದದ್ದು ಎಲ್ಲಾ ಕೂಡಿಸಿ ಬರೆದರು. ಇವರ ಬಗ್ಗೆ ಹರಿಶ್ಚಂದ್ರರು ಹಾಗೆ ಮಾಡುತ್ತಾರೆ. ಹೀಗೆ ಮಾಡುತ್ತಾರೆ ಚಂದ್ರನನ್ನು ಭೂಮಿಗೆ ತರುತ್ತಾರೆ ಎಂದರೆ ಬರೆದರು. ಇದನ್ನು ನಂಬಿದ ಜನ ಇವರಿಗೆ ಓಟುಗಳನ್ನು ಕೊಟ್ಟರು. ಇಂಥ ಉಪಕಾರ ಮಾಡಿದವರಿಗೆ ಅಪಕಾರ ಮಾಡುವುದು ಯಾವ ನ್ಯಾಯ?

ಶ್ರೀ ಸಿ. ಬೈರೇಗೌಡ – ನೀವು ಎಷ್ಟು ಹೇಳಿದರೂ ಜನ ನಂಬುವುದಿಲ್ಲ ಬಿಡಿ.

ಶ್ರೀ ಕೆ.ಎಚ್. ಪಾಟೀಲ್ – ಮಾನ್ಯ ಮೊಯಿಲಿಯವರನ್ನು ಪೇಚಿಗೆ ಸಿಕ್ಕಿಸಿದ್ದಿರಿ ಎಂದು ಮಾನ್ಯ ಹೆಗಡೆಯವರು ನಿಮ್ಮನ್ನು ಮಂತ್ರಿ ಮಾಡಿದ್ದಾರೆ. ನೀವು ಸುಮ್ಮನೆ ಕೂಡಿ, ನಿಮಗೆ ಇದೆಲ್ಲಾ ಗೊತ್ತಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ – ನೀವು ಅದಕ್ಕೆ ಭಾಗಿಯಾಗಿದ್ದರಲ್ಲ.

ಶ್ರೀ ಕೆ.ಎಚ್. ಪಾಟೀಲ್ – ನಾನು ಮಾಡಿದ್ದರಲ್ಲಿ ಒಂದು ಭಾಗ ಮಾಡಿದರೂ ನಿಮಗೆ ಮೋಕ್ಷ ಸಿಗುತ್ತದೆ.

ಶ್ರೀ ಸಿ. ಬೈರೇಗೌಡ – ನೀವೂ ಭಾಗಿಯಾಗಿ ಕೈಯಲ್ಲಿ ಏನೂ ಮಾಡುವುದಕ್ಕಾಗದೆ ಕೂತರಲ್ಲ.

ಶ್ರೀ ಕೆ.ಎಚ್. ಪಾಟೀಲ್ – ನಾನು ಮಾಡಿದಷ್ಟು ಮಾಡದಿದ್ದರೂ ಮಾಡಿದ್ದನ್ನು ನೋಡುವಷ್ಟು ಭಾಗ್ಯ ಬಂದರೆ ದೇವರು ನಿಮಗೆ ಸಾಕ್ಷಾತ್ಕಾರ ಮಾಡುತ್ತಾನೆ.

ಶ್ರೀ ಸಿ. ಬೈರೇಗೌಡ – ನೀವು ಮಾಡಿದ್ದನ್ನು ನೋಡತಕ್ಕ ದುರ್ದೆಸೆ ಬರುವುದುಮಾತ್ರ ಬೇಡ.

ಶ್ರೀ ಕೆ. ಎಚ್ ಪಾಟೀಲ್ – ನಿಮ್ಮಂಥ ಪಾಪಿಗಳು ನೋಡಬಾರದು ಬಿಡಿ.

# Misappropriate - ವ್ಯಾಖ್ಯಾನ - 2-4-85

ಶ್ರೀ ವೀರಪ್ಪ ಮೊಯ್ಲಿ ಅಕ್ಕಿಯ ಕತೆ ಹೇಳಬೇಕಾದರೆ ಸುಮಾರು 50 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಕೇಂದ್ರ ಸರ್ಕಾರ ಬಡವರಿಗೆ ಸಾರ್ವಜನಿಕ ವಿತರಣಾ ಕಾರ್ಯಕ್ರಮದಲ್ಲಿ ಸಬ್ಸಿಡಿಯಾಗಿ ಕೊಡುತ್ತಿದೆ. ಅದನ್ನೇ ತಿರುಗಿ ನಮ್ಮ ಕಾರ್ಯಕ್ರಮ ಎಂದು ಹೇಳಿ 50 ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಮಾಡುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟರೆ ನಾಳೆ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರುತ್ತದೆ. ಆ ಕಾರ್ಯಕ್ರಮ ಈಗಾಗಲೇ ಜಾರಿಯಲ್ಲಿದೆ. ಇದು ಒಂದು ಕೃತ್ರಿಮ ವ್ಯವಸ್ಥೆ. ಅಂತಹ ಕೆಲಸವನ್ನು ಮಾಡತಕ್ಕ ಒಂದು ಪ್ರಯತ್ನವನ್ನು ಅವರು ಮಾಡಿದ್ದಾರೆ. ಅದನ್ನು ನಮ್ಮ ಕಾರ್ಯಕ್ರಮ ಎಂದು ಹೇಳುವುದಕ್ಕೆ ಒಂದು ಪ್ರಯತ್ನವನ್ನು ಅವರು ಮಾಡಿದ್ದಾರೆ. ಅದನ್ನು ನಮ್ಮ ಕಾರ್ಯಕ್ರಮ ಎಂದು ಹೇಳುವುದಕ್ಕೆ ಯಾವುದೇ ಆಧಾರ ತಮ್ಮಲ್ಲಿಲ್ಲ. ಇವರ ಚಿಂತನ ಚಿಲುಮೆ ಇದನ್ನೇ ಆಲೋಚನೆ ಮಾಡುತ್ತಿದೆ. ಕೇಂದ್ರ ಸರ್ಕಾರದಿಂದ ಬರತಕ್ಕ ಸಬ್ಸಿಡಿಯನ್ನು ಡೈವರ್ಟ್ ಮಾಡಿ, ಒಂದು ರೀತಿಯ ದುರುಪಯೋಗ ಮಾಡಿಕೊಂಡು ಇದು ರಾಜ್ಯ ಸರ್ಕಾರದ ಕಾರ್ಯಕ್ರಮಗಳೆಂದು ಹೇಳುವುದರಲ್ಲೇ ಅವರು ಚಿಂತನೆ ಸಾಗಿದೆ.

ಶ್ರೀ ಸಿ. ಬೈರೇಗೌಡ – ಮಿಸ್ ಅಪ್ರೋಪ್ರಿಯೇಷನ್ ಎಂದರೆ ಏನು ಅರ್ಥ ?

Sri M. Veerappa Moily - It is misapplication. Diversion of Funds which also amounts to mis-appropriate, If the funds of one scheme are diverted to another scheme, it is mis-appropriation.

ಶ್ರೀ ಸಿ. ಬೈರೇಗೌಡ – ತಾವೂ ಕೂಡ ವಕೀಲರು ಇದ್ದೀರಿ. ಮಿಸ್ ಅಪ್ಲಿಕೇಷನ್‌ಗೂ ಮಿಸ್ ಅಪ್ರೋಪ್ರಿಯೇಷನ್‌ಗೂ - ಇರತಕ್ಕ ವ್ಯತ್ಯಾಸ ಏನು ಎಂಬುದನ್ನು ಮಾನ್ಯ ಸದಸ್ಯರು ತಿಳಿಸುತ್ತಾರೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ, ಯಾವ ಶಬ್ದ ಅನುಕೂಲವಾಗುತ್ತದೆಯೋ ಅದನ್ನೇ ತಾವು ತೆಗೆದುಕೊಳ್ಳಿ. ಮಿಸ್ ಅಪ್ಲಿಕೇಷನ್ ಅಂತಲೇ ಬೇಕಾದರೆ ತಾವು ತೆಗೆದುಕೊಳ್ಳಿ.

Sri Blasius M. D'Silva - Mis - application is doing with consent Mis-appropriation - I am sorry Sri M. Veerappa Molly - You may do it under a shadow. If your think tank gives you a certificate, them it becomes appropriation.

# ಅವಧಿ - 4 : 1989-94

ವಿಧಾನ ಸಭೆಗೆ 24-11-89 ರಂದು ನಡೆದ ಚುನಾವಣೆಯಲ್ಲಿ ಚಕ್ರದೊಳಗೆ ನೇಗಿಲು ಹೊತ್ತ ರೈತನ ಚಿಹ್ನೆಯ ಮೇಲೆ ದೇವೇಗೌಡರ ಜನತಾ ಪಕ್ಷದಿಂದ ಸ್ಪರ್ಧಿಸಿ ಜಯಶಾಲಿಯಾದ ಬೈರೇಗೌಡರು, ಆ ಪಕ್ಷದ ಎಲ್ಲಾ ಅತಿರಥ ಮಹಾರಥರು ದೇವೇಗೌಡರು ಸೇರಿದಂತೆ ಸೋಲುಂಡರೂ ಇಬ್ಬರು ಸದಸ್ಯರ ತಂಡಕ್ಕೆ ನಾಯಕರಾದವರು. ಹೀಗಾಗಿ ವಿಧಾನಸಭೆ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಹೆಚ್ಚಿನ ಅವಕಾಶ ಲಭಿಸಿತ್ತು.

18-12-1989 ರಂದು ಮೊದಲ ಅಧಿವೇಶನ ಆರಂಭವಾಗಿ, ಕಾಂಗ್ರೆಸ್ 5 ವರ್ಷಗಳ ಆಡಳಿತದಲ್ಲಿ ಮೂವರು ಮುಖ್ಯಮಂತ್ರಿಗಳನ್ನು ರಾಜ್ಯ ಕಂಡಿತು.

ಈ ಐದು ವರ್ಷಗಳಲ್ಲಿ ಬೈರೇಗೌಡರು ವಿಧಾನ ಸಭೆಯಲ್ಲಿ ಪಾಲ್ಗೊಂಡಿದ್ದ ನಡವಳಿಕೆಗಳನ್ನು, ಭಾಷಣಗಳನ್ನು ದಾಖಲಿಸಲು ಹೆಚ್ಚು ಪುಟಗಳು ಬೇಕಾಗಬಹುದು. ಆದರೆ ಅದಕ್ಕೆ ಅವಕಾಶವಿಲ್ಲ.

ವಿಷಯ ಯಾವುದೇ ಇರಲಿ, ಅದರ ಮೇಲೆ ಅಧಿಕಾರಯುತವಾಗಿ ಮಾತನಾಡುತ್ತಿದ್ದ ಗೌಡರು, ರೈತರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸದೆ ಹೋದಾಗ ಸಭಾತ್ಯಾಗ ಮಾಡಿ ಪ್ರತಿಭಟನೆ ತೋರಿಸಿದ್ದಾರೆ.

## ಸಭೆ ಸಮಾರಂಭಗಳಲ್ಲಿ
## ಬೈರೇಗೌಡ ಉವಾಚ

ಪಕ್ಷದ ಲೋಕಸಭಾ ಅಭ್ಯರ್ಥಿ ಪರಾಭವದ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ಬೈರೇಗೌಡರು ಸಚಿವರ ಪದವಿಗೆ ರಾಜೀನಾಮೆ ನೀಡಿದ್ದರು. ಆದರೆ ಮುಖ್ಯಮಂತ್ರಿಗಳು ಅಂಗೀಕರಿಸಲಿಲ್ಲ.

10-5-96

ಕಾಂಗ್ರೆಸ್ - ಬಿಜೆಪಿಗಳಿಂದ ಸಮಾನಾಂತರ ದೂರದಲ್ಲಿರಲು ಅನ್ಯ ರಾಜಕೀಯ ಶಕ್ತಿಗಳನ್ನು ಒಂದು ಗೂಡಿಸಲು ಪಟೇಲ್ - ಸಿದ್ಧರಾಮಯ್ಯನವರಿಗೆ ಅಧಿಕಾರ ನೀಡುವ ನಿರ್ಣಯ.

ರಾಜಕೀಯ ಇಚ್ಛಾ ಶಕ್ತಿಯ ಅಭಾವ, ಸ್ವಚ್ಛತೆ ಹಾಗೂ ನಿರ್ದಿಷ್ಟವಲ್ಲದ ನಡವಳಿಗಳಿಂದಾಗಿ ದೇಶ ಇಂದು ಕವಲು ದಾರಿಯಲ್ಲಿದೆ. ಬೇಡದ ಚುನಾವಣೆ ಜನರ ಮೇಲೆ ಹೇರಲ್ಪಟ್ಟಿದೆ.

ಮಂಡನೆ : ಸಿಬಿ. ದಳ ಕಾರ್ಯಕಾರಿ ಸಮಿತಿಯಲ್ಲಿ

14-7-99

ಶರದ್‌ಯಾದವ್ ನೇತೃತ್ವ ಸಿಬಿಗೆ ಅಧಿಕಾರ

27-7-99

# ರೈಲು ಹೋದ ಮೇಲೆ ಟಿಕೆಟ್ - 18-3-91

91ರಲ್ಲಿ ಗಡಿ ಸಮಸ್ಯೆ ಬಗ್ಗೆ ವಿಧಾನಸಭೆ ಮಸೂದೆ ಸರ್ವಾನುಮತದಿಂದ ಅಂಗೀಕರಿಸಿದಾಗ, ಹಾಜರಿರದ ಎಂಇಎಸ್ ಸದಸ್ಯರು ಆ ನಂತರ ಅದನ್ನು ವಿರೋಧಿಸಿ, ಸಭೆಯಲ್ಲಿ ಆಕ್ಷೇಪಣೆ ಎತ್ತಿ ಗದ್ದಲ ಮಾಡಿದಾಗ.........

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಯಾವುದೇ ಸದಸ್ಯರ ಹಕ್ಕನ್ನು ಕಿತ್ತುಕೊಳ್ಳತಕ್ಕಂಥದ್ದಲ್ಲ. ಅವರು ತಮ್ಮ ನಿಲುವನ್ನು ಹೇಳಬೇಕಾಗಿದ್ರೆ ಅದನ್ನು ಈ ಮಸೂದೆ ಮಂಡನೆ ಮಾಡುವ ಸಮಯದಲ್ಲಿ, ಈ ಮಸೂದೆಯ ಕನ್ಸಿಡರ್ ಮಾಡುವ ಸ್ಟೇಜ್‌ನಲ್ಲಿ ಹಾಗೂ ಪಾಸ್ ಮಾಡುವಾಗ ಮಾಡಬಹುದಾಗಿತ್ತು. ಆದರೆ ಆ ಸಂದರ್ಭದಲ್ಲಿ ಅವರು ಏಕೆ ಇರಲಿಲ್ಲವೋ ನನಗೆ ಗೊತ್ತಿಲ್ಲ. ಅವರು ಸದನದಲ್ಲಿ ಇರಲಿಲ್ಲವೆಂಬ ಕಾರಣಕ್ಕಾಗಿ ಮಸೂದೆ ಪಾಸ್ ಆಗುವುದು ನಿಲ್ಲುವುದಕ್ಕಾಗುವುದಿಲ್ಲ. ಅವರು ಇದ್ದರು ಎಂದು ಮಸೂದೆಯನ್ನು ಮುಂದುವರಿಸುವುದಕ್ಕೂ ಆಗುವುದಿಲ್ಲ. ಹೀಗೆ ಒಂದು ಮಸೂದೆಯನ್ನು ಶಾಸನಬದ್ಧವಾಗಿ ಪಾಸ್ ಮಾಡುವ ಬಗ್ಗೆ ಅನೇಕ ಜನ ಸದಸ್ಯರು ಪಾಲ್ಗೊಂಡು ಆ ಮೇಲೆ ಮಸೂದೆಯನ್ನು ಒಪ್ಪಿಗೆಗಾಗಿ ಮತಕ್ಕೆ ಹಾಕಿದಾಗ ಒಬ್ಬರಾದರೂ ಅದರ ವಿರುದ್ಧ ಚಕಾರ ಎತ್ತಲಿಲ್ಲ. ಈಗ, ಆ ಮಸೂದೆ ಮಂಡನೆಯಾಗಿ ಪಾಸ್ ಆಗಿರುವುದು ಸರಿಯಲ್ಲವೆಂದು ಅವರು ವಾದ ಹೂಡಿದ್ದರೆ, ಅದು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಅವರು ಮಾಡಲೇಬೇಕಾದರೆ ಅದಕ್ಕೆ ಅವರಿಗೆ ಬಹಿರಂಗ ಮಾರ್ಗಗಳಿವೆ. ತಾವು ಹೇಳಿದಂತೆ ಇದರ ಬಗ್ಗೆ ಅವರು ಕೋರ್ಟಿಗೂ ಹೋಗಬಹುದು, ಕಛೇರಿಗೂ ಹೋಗಬಹುದು. ಆದ್ದರಿಂದ ಅವರು ಈ ದಿವಸ ಮಾಡುತ್ತಿರುವ ಪ್ರತಿಭಟನೆ ಸರಿಯಲ್ಲವೆಂದು ನಾನು ಮನವಿ ಮಾಡುತ್ತೇನೆ. ಈ ಮಾರ್ಗವನ್ನು ಅವರು ಕೈಬಿಡಬೇಕು.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಈ ದಿವಸ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರಾದ ನನ್ನ 4 ಜನ ಸ್ನೇಹಿತರು ಇಲ್ಲಿ ಬಂದು ಕುಳಿತಿದ್ದಾರೆ. ಇದು ಒಂದು ದೃಷ್ಟಿಯಿಂದ ರೈಲು ಹೋದ ಮೇಲೆ ಟಿಕೆಟ್ ಕೊಂಡುಕೊಂಡ ಹಾಗಿದೆ ಇವರ ನೀತಿ.

ಶ್ರೀ ವಾಟಾಳ್ ನಾಗರಾಜ್ :- ಇಲ್ಲಿ ರೈಲೂ ಇಲ್ಲ, ಟಿಕೇಟೂ ಇಲ್ಲ. ಅದರ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ :- ಏಕೆಂದರೆ ಈ ಮಸೂದೆಯಲ್ಲಿ..........

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ :- ಸದನದಲ್ಲಿ ತೀರ್ಮಾನ ಆದ ಮೇಲೆ......

ಶ್ರೀ ಕೆ.ಎಚ್. ರಂಗನಾಥ್ :- ಈ ಸದನ ಈ ಕಾನೂನನ್ನು ಪಾಸ್ ಮಾಡಿದೆ. ತಾವು ಅಪ್ಪಣೆ ಕೊಡಿಸಿದ ಹಾಗೆ ಇಡೀ ಸದನ ಈ ಕಾನೂನನ್ನು ಸರ್ವಾನುಮತದಿಂದ ಪಾಸ್ ಮಾಡಿದೆ. ಯಾಕೆ ಅಂದರೆ ಇದಕ್ಕೆ ಒಂದು ಹಿನ್ನೆಲೆ ಕೂಡ ಇದೆ. ಈ ಒಂದು ಅಪರಾಧವನ್ನು ಮಾಡುತ್ತಾ

ಇರತಕ್ಕಂತಹ ಸಮಯದಲ್ಲಿ ಈ ಸದನದಲ್ಲಿ ನಾವೆಲ್ಲಾ ಒತ್ತಾಯ ಮಾಡಿದ್ದೇವೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು. ತಾವು ಕೂಡ ಅದನ್ನು ಬಹಳ ತೀವ್ರತೆಯಿಂದ ಆದೇಶ ಕೊಟ್ಟಿದ್ದೀರಿ. ಹೀಗಾಗಿ ಸರ್ಕಾರ ಶೀಘ್ರವಾಗಿ ಈ ಕಾನೂನನ್ನು ತಂದಿತ್ತು. ಇಂಟ್ರಡ್ಯೂಸ್ ಮಾಡುವಂತಹ ಸಂದರ್ಭದಲ್ಲಿ ಸಹ ಇದರ ತೀವ್ರತೆಯನ್ನು ಪರಿಗಣಿಸಿ ಅದನ್ನು ಯುನಾನಿಮಸ್ ಆಗಿ ಪಾಸ್ ಮಾಡಿದೆ. ಮಾನ್ಯ ಸದಸ್ಯರು ಇರಬೇಕು ಅಥವಾ ಇರಬಾರದು ಎಂಬುದು ಅದು ಅವರಿಗೆ ಬಿಟ್ಟಿದ್ದು. ಆದರೆ ಇವತ್ತು ಪಾಸ್ ಆಗಿದೆ. ಪಾಸ್ ಆಗಿ ಕಾನೂನು ಆಗಿರುವಾಗ ಅದು ಅಲ್ಟ್ರಾ ವೈರಸ್ ಎಂದು ಹೇಳಿ ತಮಗೆ ಪತ್ರ ಬರೆದಿದ್ದಾರೆ. ತಾವು ಹೇಳಿದಿರಿ, ನನಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು. ಹೀಗಿರುವಾಗ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಈ ಕ್ರಮ ಅನುಸರಿಸತಕ್ಕದ್ದು ಸಾಧುವಾದುದಲ್ಲ. ಈ ರೀತಿಯಲ್ಲಿ ತೆಗೆದುಕೊಂಡು ಹೋಗತಕ್ಕದ್ದು ಇದು ಅನಾರ್ಕಿ. ಆದ್ದರಿಂದ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅವರನ್ನು ಹೊರಕ್ಕೆ ಹಾಕಿಸದೇ ಬೇರೆ ದಾರಿನೇ ಇಲ್ಲ. ಇಲ್ಲದೇ ಹೋದರೆ ಇಂತಹ ಅಕ್ರಮವನ್ನು ಈ ಸದನದಲ್ಲಿ ಮತ್ತೆ ಮತ್ತ ಮೇಲೆ ಮೇಲೆ ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ. ನಾವು ಮೂಕ ಪ್ರೇಕ್ಷಕರಾಗಿ ಇಲ್ಲಿ ಇರಬೇಕಾದಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಯಾವ ಮಾತಿಗೂ ಅವಕಾಶ ಕೊಡದಂತೆ ಮಾನ್ಯ ಸದಸ್ಯರನ್ನು ಹೊರಗೆ ಹಾಕಬೇಕು. ಈ ಸದನ ತನ್ನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕು.

ಶ್ರೀ ಸಿ. ಬೈರೇಗೌಡ :- ನಾನು ಆ ಮಾತನ್ನು ಏಕೆ ಹೇಳಿದೆ ಅಂದರೆ ಮಾನ್ಯ ರಂಗನಾಥ್ ಅವರು ಹೇಳಿದ ರೀತಿಯಲ್ಲಿ.....

**ಅಧ್ಯಕ್ಷರು** :- ಸ್ವಲ್ಪ ಕಂಡೆನ್ಸ್ ಮಾಡಿ....

ಶ್ರೀ ಸಿ. ಬೈರೇಗೌಡ :- ಇಲ್ಲಿ ಮಾತನಾಡುವುದಕ್ಕೆ ಯಾವ ನಿರ್ಬಂಧವೂ ಇಲ್ಲ. ಅನಿರ್ಬಂಧಿತವಾದ ಹಕ್ಕು ಈ ಸದನದಲ್ಲಿ ಇದೆ. ಆದರೆ ಅದನ್ನು ಮಸೂದೆಯ ರೂಪದಲ್ಲಿ ತಂದಾಗ ಇವರಿಗೆ ಸರ್ವ ಸ್ವತಂತ್ರ ಇತ್ತು. ಆಗ ವಿರೋಧ ಮಾಡಲು ಇವರು ಸರ್ವ ಸ್ವತಂತ್ರರು ಆಗಿದ್ದರು. ಇದರ ಬಗ್ಗೆ ವಿರೋಧ ಮಾಡುವುದಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಆಗ ಸಭೆಯಲ್ಲಿರಲಿಲ್ಲ. ಇವರು ಮಸೂದೆ ಬಂದಾಗ ತಮ್ಮ ಅಭಿಪ್ರಾಯ ವ್ಯಕ್ತ ಮಾಡುವುದಕ್ಕೆ ಸ್ವತಂತ್ರರಾಗಿದ್ದರು. ಅಂತಹ ಸಂದರ್ಭವನ್ನು ಇವರು ಉಪಯೋಗಿಸಿಕೊಳ್ಳಲಿಲ್ಲ.

ಆ ಸಂದರ್ಭ ಉಪಯೋಗಿಸಿಕೊಳ್ಳದೆ ಅವಿರೋಧವಾಗಿ ಪಾಸಾಗಿ ಮಸೂದೆ ಕಾನೂನು ಆಗತಕ್ಕ ಪರಿಸ್ಥಿತಿ ಬಂದಿರುವಾಗ ಈಗ ಈ ವಿಚಾರದಲ್ಲಿ ತಕರಾರು ಹೂಡುವುದಾದರೆ ಇದಕ್ಕೆ ಏನು ಹೇಳಬೇಕು? ರೈಲ್ ಹೋದ ಮೇಲೆ ಟಿಕೆಟ್ ಕೊಂಡೊಕೊಂಡರು ಎಂಬ ಮಾತನ್ನು ಹೇಳಬೇಕಾಗುತ್ತದೆ. ಆದ್ದರಿಂದ ಇದು ಸಾಧುವಾದುದು ಅಲ್ಲ. ಆದ್ದರಿಂದ ಇವರು ಅಭಿಪ್ರಾಯ ತಿಳಿಸುವುದಕ್ಕೆ ಆಗ ಈ ಅವಕಾಶ ಇತ್ತು. ಆ ಅವಕಾಶವನ್ನು ಈಗ ಕಳೆದುಕೊಂಡಿದ್ದಾರೆ. ಈ

ಸದನ ಈ ಮಸೂದೆಯನ್ನು ಅವಿರೋಧವಾಗಿ ಪಾಸ್ ಮಾಡಿದ್ದು ಕೂಡ ಆಗಿದೆ. ಅದಕ್ಕೆ ಹಿನ್ನೆಲೆ ಕೂಡ ಇದೆ. ಕಳೆದ ಹತ್ತಾರು ವರ್ಷಗಳಿಂದ ಈ ಬೆಳಗಾಂ ಸಮಸ್ಯೆ ಒಂದಲ್ಲ ಹತ್ತಾರು ಸಾರಿ ಪ್ರಸ್ತಾಪ ಆಗಿದೆ. ಅಲ್ಲಿರತಕ್ಕೆ ಬಾವುಟ ಇಳಿಸಬೇಕು ಎನ್ನುವ ಒತ್ತಾಯ ಕೂಡ ಈ ಭಾಗದ ಎಲ್ಲ ಸದಸ್ಯರಿಂದ ಹಿಂದೆ ಬಂದಿದೆ. ಅದು ಈ ಸದನದಲ್ಲಿ ಬಂದಂತಹ ಅಭಿಪ್ರಾಯ. ಈಗ ಈ ಸದನದಲ್ಲಿ ಬಂದ ಒತ್ತಾಯದ ಮೇರೆಗೆ ಸಂದರ್ಭದಲ್ಲಿ ಇದು ಉಚಿತ ಅಲ್ಲ. ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಸಹ ವಿನಂತಿಸಿಕೊಳ್ಳುತ್ತೇನೆ.

## ಸಾಲುಮರ 19-3-91

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಮುಖ್ಯ ಜಿಲ್ಲಾ ರಸ್ತೆ ಇತರ ಜಿಲ್ಲಾ ರಸ್ತೆ ಹಾಗೂ ಗ್ರಾಮೀಣ ರಸ್ತೆಗಳ ಪಕ್ಕದಲ್ಲಿರುವ ಸಾಲುಮರಗಳ ನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ?

ಆ) ಕೆಲವು ಕಡೆ ರಸ್ತೆ ಬದಿಗಳ ಮರಗಳನ್ನು ಅಡೆ ತಡೆ ಇಲ್ಲದೆ ಕತ್ತರಿಸುವುದು ನಿಜವೇ?

ಇ) ಈ ರಸ್ತೆಗಳ ಬದಿಯಲ್ಲಿರುವ ಸಾಲು ಮರಗಳನ್ನು ಅವುಗಳ ಇನ್ನೂ ಒಳ್ಳೆ ರಕ್ಷಣೆಗಾಗಿ ಹತ್ತಿರದಲ್ಲಿರುವ ಮನೆ ಮಾಲೀಕರಿಗೆ ಒಪ್ಪಿಸಲು ಯಾವುದಾದರೂ ಪ್ರಸ್ತಾವನೆಯನ್ನು ಸರ್ಕಾರವು ಕೈಗೊಂಡಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಚಿತ್ರದುರ್ಗ, ಕೋಲಾರ, ತುಮಕೂರು, ಉತ್ತರ ಕನ್ನಡ, ಚಿಕ್ಕಮಗಳೂರು, ರಾಯಚೂರು, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆ ಬದಿಯಲ್ಲಿರುವ ಸಾಲುಮರಗಳನ್ನು ಸಂಬಂಧಪಟ್ಟ ಮುಖ್ಯ ಇಂಜಿನಿಯರ್‌ರವರು ನಿರ್ವಹಣೆ ಮಾಡುತ್ತಾರೆ. ಮಿಕ್ಕ ಜಿಲ್ಲೆಗಳಲ್ಲಿ ಬರುವ ರಸ್ತೆ ಸಾಲು ಮರಗಳನ್ನು ಅರಣ್ಯ ಇಲಾಖೆಯವರು ನಿರ್ವಹಣೆ ಮಾಡುತ್ತಾರೆ.

## ಜಿಲ್ಲೆಯಲ್ಲಿ ಪೋಲೀಸ್ ಬಲಸೆನ್ಸಿಟಿವ್ ಜಿಲ್ಲೆ 10-09-1991

ಬೈರೇಗೌಡರು ವಿಧಾನ ಸಭೆಯ ಚರ್ಚೆಗಳಲ್ಲಿ ಭಾಗವಹಿಸುವುದರ ಜೊತೆಗೆ ಆಗಾಗ್ಗೆ ನಿಲುವಳಿ ಸೂಚನೆ, ಗಮನ ಸೆಳೆಯುವ ಸೂಚನೆ, ಮಸೂದೆಯಗಳಿಗೆ ತಿದ್ದುಪಡಿ ಮಂಡಿಸುತ್ತಿದ್ದರಲ್ಲದೆ, ಪ್ರಮುಖ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು: 91 ರಲ್ಲಿ ಕೋಲಾರದಲ್ಲಿ ಕೋಮು ಗಲಭೆಗಳಾಗಿ ಜಿಲ್ಲೆಯನ್ನು ಕೇಂದ್ರ ಸೂಕ್ಷ್ಮ ಜಿಲ್ಲೆ ಎಂದು ಪರಿಗಣಿಸಿದೆ ಎಂದು ಸುದ್ದಿ ಬಗೆಗೆ ಪ್ರಶ್ನೆ ಕೇಳಿದ್ದರು.

ಶ್ರೀ ಬೈರೇಗೌಡ (ವೇಮಗಲ್): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೋಲಾರ ಜಿಲ್ಲೆಯುನ್ನು ದೇಶದ ಐದನೇ ಹೈಪರ್ ಸೆನ್ಸ್‌ಟೀವ್ ಜಿಲ್ಲೆಯುನ್ನಾಗಿ ಪರಿಗಣಿಸಿದೆಯೇ?*

*ಆ) ಕೋಲಾರ ಜಿಲ್ಲೆ ಡಕಾಯಿತಿಗೆ ಹೆಸರಾಂತ ಪ್ರದೇಶವೇ?*

*ಇ) ಕೋಲಾರ ಜಿಲ್ಲೆಯ ಪೋಲೀಸರ ಪ್ರತಿ ದರ್ಜೆಯ ಬಲಾಬಲವೇನು?*

*ಈ) ಕೋಲಾರ ಜಿಲ್ಲೆಯಲ್ಲಿನ ವಿಸ್ತೀರ್ಣ, ಜನಸಂಖ್ಯೆ ಹಳ್ಳಿಗಳ ಸಂಖ್ಯೆ ಹೊರ ಪೋಲೀಸ್ ಠಾಣೆಗಳ ವ್ಯಾಪ್ತಿ ಪೋಲೀಸ್ ಠಾಣೆಗಳ ಸಂಖ್ಯೆ ಮತ್ತು ಅವುಗಳ ಹೆಸರಿನ ವಿವರವೇನು?*

*ಉ) ಕಾರ್ಯಭಾರಕ್ಕನುಗುಣವಾಗಿ ಕೋಲಾರ ಜಿಲ್ಲೆಯಲ್ಲಿ ಪೋಲೀಸ್ ಬಲ ಇಲ್ಲದಿರುವುದು ನಿಜವೇ?*

*ಊ) ಅಗತ್ಯತೆ ಹಾಗೂ ಕಾರ್ಯಭಾರಕ್ಕನುಗುಣವಾಗಿ ಸರ್ಕಾರ ತಕ್ಷಣದಲ್ಲಿ ಪೋಲೀಸ್ ಬಲವನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?*

*ಋ) ಕೋಲಾರ ತಾಲ್ಲೂಕಿನ ಕ್ಯಾಲನೂರಿನಲ್ಲಿ ಆಗಾಗ್ಗೆ ಮತೀಯ ಗಲಭೆಗಳು ನಡೆಯುತ್ತಿರುವದು ನಿಜವೇ?*

*ೠ) ಈ ಹಳ್ಳಿಯಲ್ಲಿ ಸರ್ಕಾರ ಹೊಸ ಪೋಲೀಸ್ ಠಾಣೆಯನ್ನು ತೆರೆಯುವುದೇ?*

*ಶ್ರೀ ಧರ್ಮಸಿಂಗ್ (ಗೃಹ ಸಚಿವರು):*

*ಅ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.*

*ಆ) ಹೌದು.*

*ಇ)*

| | |
|---|---|
| *ಸೂಪರಿಂಟೆಂಡೆಂಟ್ ಆಫ್ ಪೋಲೀಸ್* | *1* |
| *ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್* | *3* |
| *ಸಿವಿಲ್ ಪೋಲೀಸ್ ಇನ್ಸ್‌ಪೆಕ್ಟರ್* | *9* |
| *ರಿಸರ್ವ್ ಪೋಲೀಸ್ ಇನ್ಸ್‌ಪೆಕ್ಟರ್* | *1* |
| *ಪೋಲೀಸ್ ಸಬ್ ಇನ್ಸ್‌ಪೆಕ್ಟರ್* | *30* |
| *ಅಸಿಸ್ಟಂಟ್ ಸಬ್ ಇನ್ಸ್‌ಪೆಕ್ಟರ್* | *33* |
| *ಸಿವಿಲ್ ಹೆಡ್ ಕಾನ್‌ಸ್ಟೇಬಲ್* | *164* |
| *ಸಿವಿಲ್ ಪೋಲೀಸ್ ಕಾನ್‌ಸ್ಟೇಬಲ್* | *544* |

| | | |
|---|---|---|
| | *ರಿಸರ್ವ್ ಸಬ್‌ಇನ್ಸ್‌ಪೆಕ್ಟರ್* | *3* |
| | *ಅಸಿಸ್ಟೆಂಟ್ ರಿಸರ್ವ್ ಸಬ್‌ಇನ್ಸ್‌ಪೆಕ್ಟರ್* | *5* |
| | *ಸಶಸ್ತ್ರ ಹೆಡ್ ಕಾನ್‌ಸ್ಟೇಬಲ್* | *34* |
| | *ಸಶಸ್ತ್ರ ಪೋಲೀಸ್ ಕಾನ್‌ಸ್ಟೇಬಲ್* | *161* |
| *ಈ)* | *ವಿಸ್ತೀರ್ಣ* | *7816* |
| | *ಜನಸಂಖ್ಯೆ* | *16,30,563* |
| | *ಹಳ್ಳಿಗಳು* | *2931* |

*ಹೊರಠಾಣೆಗಳು ಮತ್ತು ಪೋಲೀಸ್ ಠಾಣೆಗಳು 24, ಹೊರವಲಯ- 18*

*ಉ)* *ಹೌದು*

*ಊ)* *ಹೌದು. ಕರ್ನಾಟಕ ರಾಜ್ಯದಲ್ಲಿ ಪೋಲೀಸ್ ಸಿಬ್ಬಂದಿ ಸಮಗ್ರ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.*

*ಋ)* *ಇಲ್ಲ, ದಿನಾಂಕ 23-8-91 ರಂದು ಮಾತ್ರ ಒಂದು ಪ್ರಕರಣ ಜರುಗಿದೆ.*

*ೠ)* *ಕ್ಯಾಲನೂರಿನಲ್ಲಿ ಪೋಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆ ಈ ವರ್ಷದಲ್ಲಿ ಇರುವುದಿಲ್ಲ.*

ಶ್ರೀ ಸಿ. ಬೈರೇಗೌಡ :- ಸ್ವಾಮಿ ನನ್ನ ಮೊದಲನೆಯ ಪ್ರಶ್ನೆಗೆ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಎಂದು ಅಂಥ ಹೇಳುತ್ತಿದ್ದೀರಿ. ತಮ್ಮ ಗಮನಕ್ಕೆ ಬರದೇ ಇರಬಹುದು. ಆದರೆ ಈ ರೀತಿ ದೇಶದ ಐದನೆಯ ಹೈಪರ್ ಸೆನ್ಸಿಟಿವ್ ಜಿಲ್ಲೆಯಾಗಿ ಇರತಕ್ಕಂಥದ್ದು ಅದು ನಿಜವೇ? ಅಥವಾ ನಿಜವಲ್ಲವೆ? ಗಮನಕ್ಕೆ ಬಾರದೇ ಇರತಕ್ಕಂಥ ವಿಚಾರ ಬೇರೆ. ಆದರೆ ವಾಸ್ತವ ಸ್ಥಿತಿ ಏನು?

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೇ, ಕಮ್ಯುನಲ್ ಸೆನ್ಸಿಟಿವ್ ಪ್ಲೇಸ್ ಕೋಲಾರ ಅಲ್ಲವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದಕ್ಕೆ ಇಲ್ಲ ಎಂದು ನಾನು ಹೇಳಿದ್ದೇನೆ. ಏಕೆಂದರೆ, ಕಮ್ಯುನಲ್ ಸೆನ್ಸಿಟಿವ್ ಪ್ಲೇಸ್ ಅನ್ನು ಐಡೆಂಟಿಫೈ ಮಾಡುವಾಗ ರಾಜ್ಯದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಮಾಡುತ್ತೇವೆ. ಅದರಲ್ಲಿ ಕೋಲಾರ ಜಿಲ್ಲೆ ಇಲ್ಲ. ಇತ್ತೀಚೆಗೆ ಅಲ್ಲಿ ಕೆಲವು ಘಟನೆಗಳಾಗಿದೆ. ಆದರೆ ಅವು ಬೇರೆ. ಆದ್ದರಿಂದಲೇ ಇಲ್ಲ ಎಂದು ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ :- ಸ್ವಾಮಿ, ಕಾರ್ಯಭಾರಕ್ಕನುಗುಣವಾಗಿ ಕೋಲಾರ ಜಿಲ್ಲೆಯಲ್ಲಿ ಪೋಲೀಸ್ ಬಲ ಇಲ್ಲದಿರುವುದು ನಿಜವೇ? ಎಂದು ನಾನು ಕೇಳಿರುವುದಕ್ಕೆ ಹೌದು ಎಂದು ಉತ್ತರ ಹೇಳಿದ್ದೀರಿ. ಹಾಗಾದರೆ ಷಾರ್ಟೇಜ್ ಇರತಕದ್ದು ಎಷ್ಟು? ಎಂದು ಹೇಳುತ್ತೀರಾ?

ಇನ್ನು ಎರಡನೆಯದಾಗಿ ಕ್ಯಾಲನೂರಿನಲ್ಲಿ ಕಳೆದ 2 ತಿಂಗಳಲ್ಲಿ ನಡೆದಿರುವುದನ್ನು ಹೇಳಿದ್ದೀರಿ. ಇದಕ್ಕೆ ಮುಂಚಿತವಾಗಿ 2 ವರ್ಷಗಳಿಂದ ಅಲ್ಲಿ 2-3 ಸಾರಿ ಘಟನೆಗಳು ನಡೆದಿವೆ. ಆದುದರಿಂದ

ಅಲ್ಲಿ ಪೋಲೀಸ್ ಸ್ಟೇಷನ್ ಅನ್ನು ಅತಿಶೀಘ್ರವಾಗಿ ತೆರೆಯಬೇಕಾದ ಅವಶ್ಯಕತೆ ಇದೆ. ಇದನ್ನು ಶೀಘ್ರವಾಗಿ ತಾವು ಮಾಡುವುದಕ್ಕೆ ಹೊರಟಿದ್ದೀರಿ. ಈಗ ರಾಜ್ಯದಲ್ಲಿ ಎಷ್ಟೋ ಪೊಲೀಸ್ ಸ್ಟೇಷನ್‌ಗಳನ್ನು ತೆರೆಯಬೇಕೆಂದು ತಾವು ಯೋಚನೆ ಮಾಡಿಕೊಂಡಿದ್ದೀರಿ. ಆ ಯೋಜನೆಯಲ್ಲಿ ಈ ಊರಿಗೂ ಒಂದು ಪೊಲೀಸ್ ಸ್ಟೇಷನ್ ಅನ್ನು ಕೊಡುವುದಕ್ಕೆ ತಾವು ಆಶ್ವಾಸನೆ ಕೊಡುತ್ತೀರಾ?

ಶ್ರೀ ಧರ್ಮಸಿಂಗ್ :- ಕ್ಯಾಲನೂರಿನಲ್ಲಿ 1978 ಮತ್ತು 1991ರಲ್ಲಿ ಸ್ವಲ್ಪ ಗಲಭೆಗಳು ಆಗಿವೆ. ಆದರೆ ಪೊಲೀಸ್ ಸಿಬ್ಬಂದಿ ಕಡಿಮೆ ಇದೆಯೆಂದು ತಾವು ಏನು ಪ್ರಸ್ತಾಪ ಮಾಡಿದ್ದೀರಿ ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. 2245 ಜನಸಂಖ್ಯೆಗೆ ಒಬ್ಬ ಸಿವಿಲ್ ಪೋಲೀಸ್ ಕಾನ್‌ಸ್ಟೇಬಲ್ ಇದ್ದಾನೆ. ಬೇರೆ ರಾಜ್ಯಗಳಲ್ಲಿ ಸ್ವಲ್ಪ ಹೆಚ್ಚಿಗೆ ಇದೆ. ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಪೋಲೀಸ್ ಕಾನ್‌ಸ್ಟೇಬಲ್‌ಗಳು ಇರಬೇಕೋ ಅಷ್ಟು ಪ್ರಮಾಣದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲ ಎನ್ನತಕ್ಕ ದೃಷ್ಟಿಯಿಂದ 1991-92ನೇ ಸಾಲಿನಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ನಾವು ಕೊಟ್ಟಿದ್ದೇವೆ. 1000 ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ಭರ್ತಿ ಮಾಡಬೇಕೆಂದು ಈಗಾಗಲೇ ಸರ್ಕಾರ ಆದೇಶ ಹೊರಡಿಸಿದೆ. ನ್ಯಾಷನಲ್ ಪೋಲೀಸ್ ಕಮೀಷನ್ ಅಂದರೆ ಧರ್ಮವೀರ ಕಮಿಷನ್‌ನವರು ಒಂದು ರಿಪೋರ್ಟನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಪೊಲೀಸ್ ಸ್ಟೇಷನ್ಸ್, ಫೈರ್ ಸ್ಟೇಷನ್ಸ್, ಆರ್ಮ್ಡ್ ಪೋಲೀಸನ್ನು ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಕ್ಯಾಲನೂರಿನಲ್ಲಿ 1978ರಲ್ಲಿ ಗಲಭೆಯಾಗಿದೆ. ಅದು ನಮಾಜ್ ಮಾಡುವಾಗ ಮತ್ತು 1991ರಲ್ಲಿ ಕೂಡ ಒಂದು ಗಲಭೆಯಾಗಿದೆ. ಅಲ್ಲಿಯೂ ಕೂಡ ಪೊಲೀಸ್ ಸ್ಟೇಷನ್‌ನ ಅವಶ್ಯಕತೆ ಇದೆ. ಇನ್ನು 5 ವರ್ಷಗಳಲ್ಲಿ 55 ಪೊಲೀಸ್ ಸ್ಟೇಷನ್‌ಗಳನ್ನು ತೆರೆಯಬೇಕೆಂಬ ತೀರ್ಮಾನವನ್ನು ನಾವು ತೆಗೆದುಕೊಂಡು ಆ ಪೈಕಿ 15 ಪೊಲೀಸ್ ಸ್ಟೇಷನ್‌ಗಳನ್ನು ಕೂಡಲೇ ತೆರೆಯುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅದರ ಜೊತೆಯಲ್ಲಿ ಇವನ್ನೂ ಕೂಡ ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ:- ಈ 15ರಲ್ಲಿ ಒಂದನ್ನು ನಮಗೆ ಕೊಡಿ ಎಂದು ನಾನು ಕೇಳುತ್ತಿದ್ದೇವೆ.

ಶ್ರೀ ಧರ್ಮಸಿಂಗ್:- ಮಾಡೋಣ.

ಶ್ರೀ ಸಿ. ಬೈರೇಗೌಡ:- ಥ್ಯಾಂಕ್ಯೂ.

## ಸಭಾಧ್ಯಕ್ಷರಲ್ಲಿ ಕ್ಷಮೆ 10-9-91

ಶ್ರೀ ಸಿ. ಬೈರೇಗೌಡ :- ತಮ್ಮಲ್ಲಿ ಒಂದು ನಿವೇದನೆ ಅಧ್ಯಕ್ಷರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಅಧ್ಯಕ್ಷರೇ ನಮ್ಮ ವರ್ತನೆಯಿಂದ ತಮಗೆ ಬೇಜಾರಾಗಿದ್ದರೆ ನಾವು ಬಹಿರಂಗವಾಗಿ ಕ್ಷಮಾಪಣೆಯನ್ನು ಕೇಳುತ್ತೇವೆ. ನಿಮಗೆ ಯಾವ ರೀತಿಯಾದ ಬೇಜಾರನ್ನು, ಮನಸ್ಸಿಗೆ ನೋವನ್ನು ಉಂಟು ಮಾಡಬೇಕೆಂದಿಲ್ಲ.

# ವಿಧಾನಸಭೆ ವಿಸರ್ಜನೆ ಬಗ್ಗೆ 20-3-91

91ರಲ್ಲಿ ಲೋಕಸಭೆ ವಿಸರ್ಜನೆಯಾದಾಗ, ರಾಜ್ಯ ವಿಧಾನಸಭೆಯೂ ವಿಸರ್ಜನೆಯಾಗುತ್ತೆ ಎಂಬ ವದಂತಿಗಳು ಹಬ್ಬಿದ್ದವು. ಆ ಸಂಬಂಧ ವಿಧಾನಸಭೆಯಲ್ಲಿ ನಡೆದ ಮಾತಿನ ಚಕಮಕಿ.

ಶ್ರೀ ಸಿ. ಬೈರೇಗೌಡ :- ಇವತ್ತು ಲೋಕಸಭೆ ವಿಸರ್ಜನೆಯಾಗಿದೆ. ಅದರ ಜೊತೆಯಲ್ಲೇ ವಿಧಾನಸಭೆಯನ್ನು ಕೂಡ ವಿಸರ್ಜನೆ ಆಗುತ್ತದೆ ಎಂಬ ಮಾತನ್ನು ಜನರು ಆಡುವುದನ್ನು ಕೇಳುತ್ತಿದ್ದೇವೆ. ಸದನ ಮುಗಿಸಿಕೊಂಡು ಹೊರಗಡೆ ಹೋದರೆ ವಿಧಾನಸಭೆ ವಿಸರ್ಜನೆ ಆಗುತ್ತದೆಯೇ ಎಂಬ ಮಾತನ್ನು ಎಲ್ಲಾದರೂ ಹೇಳಬೇಕಾಗುತ್ತದೆ. ಸರ್ಕಾರದವರು ವಿಧಾನಸಭೆಯನ್ನು ಕೂಡ ವಿಸರ್ಜನೆ ಮಾಡತಕ್ಕ ಆಲೋಚನೆ ಏನಾದರೂ ಇದೆಯೇ ಅಥವಾ ಮಾಡುವುದಿಲ್ಲವೇ ಎನ್ನತಕ್ಕದ್ದನ್ನು ಹೇಳಬೇಕು. ಏಕೆಂದರೆ ವಿಸರ್ಜನೆ ಮಾಡುವುದಾದರೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದರೂ ವ್ಯರ್ಥವಾಗುತ್ತದೆ. ನಾವು ಹೇಳತಕ್ಕದ್ದೆಲ್ಲವೂ ವ್ಯರ್ಥವಾಗುತ್ತದೆ. ಆದ್ದರಿಂದ ಸರ್ಕಾರದವರ ನಿಲುವು ಏನು ಎಂಬುದನ್ನು ದಯವಿಟ್ಟು ತಿಳಿಸಬೇಕು. ನಮ್ಮ ಕ್ಷೇತ್ರಕ್ಕೆ ಹೋದರೆ ಜನ ಕೇಳುತ್ತಾರೆ. ನೀವು ಶಾಸಕರಾಗಿರುತ್ತೀರೋ ಇಲ್ಲವೋ ಎಂದು ಕೇಳುತ್ತಾರೆ. ಅವರಿಗೆ ನಾವು ಏನು ಉತ್ತರ ಹೇಳುವುದು? ಆದ್ದರಿಂದ ಸರ್ಕಾರದವರು ದಯವಿಟ್ಟು ಉತ್ತರ ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಬೈರೇಗೌಡರು ಹೇಳಿದರಲ್ಲ, ನಾನು ಮೊನ್ನೆ ಹುಬ್ಬಳ್ಳಿಗೆ ಹೋಗಿದ್ದೆ. ಅಲ್ಲಿ ಲೋಕಸಭೆ ವಿಸರ್ಜನೆ ಆಗುತ್ತಿದೆ, ನಿಮ್ಮ ಅಸೆಂಬ್ಲಿಯೂ ವಿಸರ್ಜನೆ ಆಗುತ್ತದೆಯೇ ಎಂದು ಕೇಳಿದರು. ಏತಕ್ಕೆ ಈ ಪ್ರಶ್ನೆ ಹಾಕುತ್ತಿದ್ದೀರಿ ಎಂದು ನಾನು ಕೇಳಿದೆ. ಅದಕ್ಕೆ ಅವರು ಹೇಳಿದರು, ಕಾಂಗ್ರೆಸ್‌ನಲ್ಲಿ ಬಹಳ ಕಚ್ಚಾಟ ನಡೆಯುತ್ತಿದೆ. ಬಹಳ ಜಗಳ ಮಾಡುತ್ತಿದ್ದಾರೆ, ಒಂದು ಕಡೆ ವೀರಪ್ಪ ಮೊಯಿಲಿ - ಖರ್ಗೆಯವರ ಜಗಳ, ಇನ್ನೊಂದು ಕಡೆ ಘೋರ್ಪಡೆ-ರಂಗನಾಥ್ ಜಗಳ ಆಗುತ್ತಿದೆ ಅದಕ್ಕೆ ಈಗಾಗಲೇ ಬಂಗಾರಪ್ಪನವರು ವಿಧಾನಸಭೆ ವಿಸರ್ಜನೆಗೆ ಶಿಫಾರಸು ಮಾಡಿದ್ದಾರೆ ಎಂದು ಹೇಳಿದರು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಲೋಕಸಭೆ ವಿಸರ್ಜನೆಯಾಗಿದೆ, ನೀವೂ ವಿಸರ್ಜನೆ ಮಾಡಿದರೆ ಒಳ್ಳೆಯದು ಎರಡೂ ಕೂಡ ಒಮ್ಮಲೇ ಚುನಾವಣೆ ಮಾಡೋಣ ಎಂದು ಹೇಳಿದೆ. ಅದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಏನು ಹೇಳುತ್ತಾರೋ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷರೆ, ತಮಗೇನಾದರೂ ಈ ಬಗ್ಗೆ ವರ್ತಮಾನ ಇದ್ದರೆ ತಿಳಿಸಬೇಕು. ಏನೂ ಇಲ್ಲ ತಾನೆ?

ಉಪಾಧ್ಯಕ್ಷರು :- ನಿಮಗೂ ಇಲ್ಲ, ನಮಗೂ ಇಲ್ಲ.

ಶ್ರೀ ಸಿ. ಬೈರೇಗೌಡ :- ತೀರ್ಮಾನ ಮಾಡುವುದು ನೀವು. ವಿಸರ್ಜನೆ ಮಾಡಿದರೆ ಅದು ರಾಷ್ಟ್ರಾಧ್ಯಕ್ಷರಿಗೆ ಹೋಗಬೇಕಾಗುತ್ತದೆ. ಉಪಾಧ್ಯಕ್ಷರು ಸಭೆ ಸೇರಿದರೆ ಬಂದು ಕುಳಿತುಕೊಳ್ಳುತ್ತಾರೆ. ಆದ್ದರಿಂದ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಅದರ ಸಂಬಂಧ ಇಲ್ಲ. ವಿಸರ್ಜನೆ

ಮಾಡಬೇಕೋ ಬೇಡವೋ ಎಂದು ಅದು ತಾವು ಮಾಡಬೇಕಾಗಿರುವ ಕೆಲಸ. ಅವರಿಗೆ ಹೇಗೆ ಗೊತ್ತಾಗುತ್ತದೆ? ಅವರಿಗೆ ಸಂಬಂಧ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :- ಈ ವರ್ತಮಾನ ಮಾನ್ಯ ಉಪಾಧ್ಯಕ್ಷಣೆಯವರಿಗೆ ಗೊತ್ತಿರಬಹುದು. ಇಲ್ಲದಿದ್ದರೆ ಮಾನ್ಯ ಬೈರೇಗೌಡರಿಗೆ ಗೊತ್ತಿರಬಹುದು. ಏಕೆಂದರೆ ಬೈರೇಗೌಡರ ಹತ್ತಿರ ಬಹಳ ವರ್ತಮಾನಗಳು ಇರುತ್ತವೆ. ಒಂದು ವರ್ತಮಾನವನ್ನು ಬಿಟ್ಟಿದ್ದಾರೆ. ಏಕೆಂದರೆ ದೂರದರ್ಶನವಾಗಲೀ, ಆಲ್ ಇಂಡಿಯಾ ರೇಡಿಯೋ ಆಗಲೀ, He is a power centre ಆದುದರಿಂದ ವರ್ತಮಾನ ಅಲ್ಲಿಂದಲೇ ಬಂದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ :- ಚರ್ಚೆ ಯಾವಾಗ ಆಗುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ :- ಲೇಖಾನುದಾನ ತೆಗೆದುಕೊಂಡಿದ್ದಾರೆ. ಅಂದರೆ ಚರ್ಚೆಗೆ ಅವಕಾಶ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ. ಅವಕಾಶ ಸಿಕ್ಕಿದರೆ ನಾವು ನೀವು ಚರ್ಚೆ ಮಾಡೋಣ.

ಶ್ರೀ ಟಿ.ಎಂ. ಮಂಜುನಾಥ :- ಮಾನ್ಯ ಚಂದ್ರೇಗೌಡರೇ, ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೇ. ನಾವು ನೀವು ಎಲ್ಲಾ ಪಕ್ಷಗಳು ಒಂದು ತತ್ವದ, ಸಿದ್ಧಾಂತದ ಮೇಲೆ ಚುನಾವಣೆಗೆ ಹೋಗಿದ್ದೇವೆ. ಜನ ನಮಗೆ ಐದು ವರ್ಷಕ್ಕೆ ಅಧಿಕಾರ ಮಾಡಲು ಅವಕಾಶ ಕೊಟ್ಟಿದ್ದಾರೆ. ತಾವು ಅನುಮಾನ ಪಡುವುದು ಬಿಡಿ. ನಾವು ಐದು ವರ್ಷ ಇದ್ದೇ ಇರುತ್ತೇವೆ. ಕರ್ನಾಟಕದ ಜನತೆ ನಮಗೆ ಆಶೀರ್ವಾದ ಮಾಡಿದ್ದಾರೆ. ನೀವು ಯಾಕೆ ಇಲ್ಲ ಸಲ್ಲದ ಅನುಮಾನವನ್ನು, ಸಂಶಯವನ್ನು ವ್ಯಕ್ತಪಡಿಸಿ ಅದರ ಬಗ್ಗೆ ಗೊಂದಲವನ್ನು ಏರ್ಪಡಿತಸಕ್ಕದ್ದು ಬೇಡ ಎಂದು ಹಳೆಯ ನಮ್ಮ ಸ್ಪೀಕರ್ ಸಾಹೇಬರು ಅಪ್ಪಣೆ ಕೊಡಿಸಿದ್ದಾರೆ. ಅದಕ್ಕಾಗಿ ಏನು ಬೇಕೋ ನಿಮಗೆ ಅನುಮಾನ ಇಲ್ಲದ ರೀತಿಯಲ್ಲಿ ನಾವು ಉತ್ತರ ಕೊಟ್ಟು ಒಂದೊಂದು ಭಾಗದಲ್ಲಿ ಸಹಿತ ಬಜೆಟ್ ವಿಚಾರದಲ್ಲಿ ಮಾತನಾಡತಕ್ಕ ಅವಕಾಶ ಕ್ರಮಬದ್ಧವಾಗಿ ನಿಮಗೆ ಕೊಡಲಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಇದನ್ನು ತೀರ್ಮಾನ ಮಾಡತಕ್ಕ ಹಕ್ಕು ನಿಮಗೆ ಇದ್ದಿದ್ದರೆ ಈ ಪ್ರಶ್ನೆ ಕೇಳುತ್ತಾ ಇರಲಿಲ್ಲ. ತೀರ್ಮಾನ ಮಾಡುವ ಹಕ್ಕು ನಿಮ್ಮ ಕೈಯಲ್ಲಿ ಇಲ್ಲ. ಆದ್ದರಿಂದ ಕೇಳಬೇಕಾಯಿತು.

ಶ್ರೀ ಸಿ. ಬೈರೇಗೌಡ :- ಇವರು ಉತ್ತರ ಕೊಡುವುದು ನೋಡಿದರೆ ನಮ್ಮ ಅನುಮಾನ ಏನು ಇತ್ತು ಅದು ಇನ್ನೂ ಬಲವಾಗುತ್ತಿದೆ. ಏಕೆಂದರೆ ಮಾನ್ಯ ಮಂಜುನಾಥ ಅವರು ಹೇಳಿದ ತಕ್ಷಣ ತಮ್ಮ ಹೆಗಲನ್ನು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. ಇವರು ಉತ್ತರ ಕೊಡುತ್ತಾ ಇರುವುದು ನೋಡಿದರೆ ಅನುಮಾನ ಇನ್ನೂ ಪ್ರಬಲ ಆಗುತ್ತಿದೆ. ನಿಮಿಷ ನಿಮಿಷಕ್ಕೆ ಕೂಡ ಅನುಮಾನ ಪ್ರಬಲವಾಗಿ ಏರುತ್ತಿದೆ. ಆದ್ದರಿಂದ ಈ ಅನುಮಾನ ಏನು ಇದೆ, ಅದು ನಮ್ಮಲ್ಲಿ ಇಲ್ಲ. ಆ ಕಡೆ ಇರತಕ್ಕಂಥ ಮಾನ್ಯ ಸದಸ್ಯರಿಗೂ ಕೂಡ ಅನುಮಾನ ಇದೆ. ಈ ಸದನ ಎಷ್ಟು ದಿವಸ ಇರುತ್ತದೆ ಎಂದು? ಎಷ್ಟು ಅವಧಿಯೊಳಗೆ ಡಿಸಾಲ್ವ್ ಆಗುತ್ತದೆ? ಇವತ್ತು ಡಿಸಾಲ್ವ್ ಆಗುತ್ತದೋ ಅಥವಾ ನಾಳೆ ಡಿಸಾಲ್ವ್ ಆಗುತ್ತದೋ ಅಥವಾ ಒಂದು ವಾರದಲ್ಲಿ ಡಿಸಾಲ್ವ್ ಆಗುತ್ತದೋ ಎನ್ನತಕ್ಕ ಅನುಮಾನ ಎಲ್ಲಾ ಕಡೆ ನಮ್ಮಲ್ಲಿರತಕ್ಕಂಥ ಈ ಅನುಮಾನವನ್ನು ಮಾನ್ಯ ಮುಖ್ಯ ಮಂತ್ರಿಗಳು ಬಗೆಹರಿಸಿದರೆ ನಾವು ಅವರಿಗೆ ಕೃತಜ್ಞರಾಗುತ್ತೇವೆ. ಏಕೆಂದರೆ ನಾವು ಊರಿಗೆ ಹೋದರೆ ಏನಾದರೂ ಹೇಳಬೇಕಾಗುತ್ತದೆ.

# ಗ್ರಾಮೀಣಾಭಿವೃದ್ಧಿ ಸಚಿವರ ಗೈರುಹಾಜರಿಗೆ ಆಕ್ಷೇಪ 4-3-91

ರಾಜ್ಯದಲ್ಲಿ ತೀವ್ರ ಬರಗಾಲ ತಲೆದೋರಿ, ಕುಡಿಯುವ ನೀರಿನ ಸಮಸ್ಯೆ ಸಭೆಯಲ್ಲಿ ಪ್ರಸ್ತಾಪಿತವಾದಾಗ, ಗ್ರಾಮೀಣಾಭಿವೃದ್ಧಿ ಸಚಿವರು ಹಾಜರಿರದ ಬಗ್ಗೆ........

ಶ್ರೀ ಸಿ. ಬೈರೇಗೌಡ :- ಎಲ್ಲ ಸಂದರ್ಭದಲ್ಲೂ ಎಲ್ಲಾ ಸಚಿವರೂ ಇಲ್ಲಿರಬೇಕೆಂಬ ವಾದದಲ್ಲಿ ಹುರುಳಿಲ್ಲ. ಅದನ್ನು ನಾನು ಒಪ್ಪುವುದೂ ಇಲ್ಲ. ಆದರೆ ಈಗ ಚರ್ಚೆಯಾಗುತ್ತಿರುವುದು ಬರಗಾಲದ ಪರಿಸ್ಥಿತಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಯಿದು.

ಮಾನ್ಯ ಕಂದಾಯ ಸಚಿವರು ಇಲ್ಲಿದ್ದಾರೆ ಅವರು ಬರಗಾಲ ಕಾಮಗಾರಿ ಬಗ್ಗೆ ಹಣಕಾಸು ಕೊಡುತ್ತೇವೆಂದು ಹೇಳಿದರೆ ಸರಿ. ಆದರೆ ಕುಡಿಯುವ ನೀರಿನ ಸಮಸ್ಯೆ ಇದೆಯಲ್ಲ ಅದನ್ನು ಹೋಗಲಾಡಿಸುವವರು ಯಾರು? ಜನ ಜಾನುವಾರುಗಳಿಗೆ ಗ್ರಾಮೀಣ ಪ್ರದೇಶಗಳಲ್ಲಿ ನೀರಿಲ್ಲ ಅದನ್ನು ಒದಗಿಸಲು ಜವಾಬ್ದಾರಿ ಹೊತ್ತಿರುವ ಸಚಿವರು ಇಂದು ಇಲ್ಲಿ ಇಲ್ಲ. ಆದ್ದರಿಂದ ಈ ಸದನಕ್ಕಿಂತ ಸಚಿವರು ಹೆಚ್ಚೋ ಅಥವಾ ಸಚಿವರಿಗಿಂತ ಈ ಸದನ ಹೆಚ್ಚೋ ಎಂದು ತಮ್ಮನ್ನು ಕೇಳುತ್ತಿದ್ದೇನೆ. ತಾವು ತೀರ್ಪು ಕೊಡಬೇಕು. ಏಕೆಂದರೆ ಇವರು ಎಲ್ಲವನ್ನೂ ಗ್ರಾಂಟೆಡಾಗಿ ತೆಗೆದುಕೊಂಡಿದ್ದಾರೆ. ನಾನು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಸಾಕಷ್ಟು ಸಾಹಿತ್ಯ ಸಿದ್ಧಮಾಡಿಕೊಂಡು ಬಂದಿದ್ದೇನೆ. ಅದನ್ನೆಲ್ಲ ಯಾರಿಗೆ ಹೇಳಬೇಕು ತಮಗೂ ಗೊತ್ತಿರುವಂತೆ ಮಾನ್ಯ ಮುಖ್ಯಮಂತ್ರಿಗಳ ಮನೆ ಎದುರಿಗೆ ನನ್ನ ತಾಲ್ಲೂಕಿನಲ್ಲಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತಿಳಿಸಲು ಧರಣಿ ನಡೆಸಿದ್ದೇವೆ ಸಾವಿರಾರು ಜನ ಬಂದಿದ್ದರು. ಅದಕ್ಕೆ ಇಲ್ಲಿ ರೂಪುಕೊಟ್ಟು ಹೇಳಬೇಕಾಗಿರುವುದು ಪರಿಹಾರ ಕಂಡುಕೊಳ್ಳುವುದು ನನ್ನ ಜವಾಬ್ದಾರಿ ಏಕೆಂದರೆ ನಾವೆಲ್ಲಾ ಜನತೆಯ ಪ್ರತಿನಿಧಿಗಳು ಅವರ ಕಷ್ಟಕಾರ್ಪಣ್ಯಗಳನ್ನು ನಾವು ಇಲ್ಲಿ ಪ್ರತಿಬಿಂಬಿಸಬೇಕಾಗಿದೆ. ಕಂದಾಯ ಸಚಿವರೇನೋ ನೋಟ್ ಮಾಡಿಕೊಂಡು ಎಲ್ಲಾ ತಿಳಿಸುತ್ತೇನೆ ಎಂದು ಹೇಳಬಹುದು. ಆದರೆ ನಮ್ಮ ಮಾತುಕೇಳಿ ಸಂಬಂಧಿಸಿದ ಸಚಿವರು ಕ್ರಮ ತೆಗೆದುಕೊಳ್ಳುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಇಂಥ ಬರಗಾಲ ಸ್ಥಿತಿ ಇರುವಾಗ ಸರ್ಕಾರ ತುದಿಗಾಲಲ್ಲಿ ನಿಂತಿರಬೇಕು. ಈಗ ನಾವು ಯಾರಿಗೆ ಹೇಳಬೇಕು. ಶ್ರೀಮತಿ ನಾಗರತ್ನಮ್ಮನವರು ಇದ್ದಿದ್ದರೆ ಅವರ ತಾಲ್ಲೂಕಿನಲ್ಲಿ ನನಗಿಂತ ಭೀಕರ ಪರಿಸ್ಥಿತಿ ಕುಡಿಯುವ ನೀರಿನದಿರಬಹುದು. ಗುಲ್ಬರ್ಗ ಜಿಲ್ಲೆಗೆ ಆ ಸ್ಥಿತಿ ಇರಬಹುದು. ರಾಜ್ಯದಲ್ಲೆಲ್ಲ ಸರ್ಕಾರದ ಲೆಕ್ಕದ ಪ್ರಕಾರವೇ ಒಂದೆರಡು ಜಿಲ್ಲೆ ಬಿಟ್ಟರೆ ಭೀಕರ ಪರಿಸ್ಥಿತಿ ಇದೆ. ಸರ್ಕಾರವೂ ಇದನ್ನು ಒಪ್ಪಿಕೊಂಡಿದೆ. ಇಂಥ ಪರಿಸ್ಥಿತಿಗೆ ನಮ್ಮನ್ನು ಒಡ್ಡಬೇಡಿ. ಜನತೆಯನ್ನು ಒಡ್ಡಬೇಡಿ ಎಂದು ತಮ್ಮನ್ನೂ ಸರ್ಕಾರವನ್ನೂ ಕೋರುತ್ತೇನೆ.

# ಕುಡಿಯುವ ನೀರು 18-3-91

ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬೈರೇಗೌಡರು ಸದನದಲ್ಲಿ ಅವಕಾಶ ಸಿಕ್ಕಿದಾಗಲೆಲ್ಲಾ ಪ್ರಸ್ತಾಪಿಸುತ್ತಿದ್ದರು. 91ರಲ್ಲಿ 10, 15 ದಿನದಲ್ಲಿ ನಾಲ್ಕೈದು ಬಾರಿ ಈ ಬಗ್ಗೆ ಅವರು ಮಾತನಾಡಿದ್ದಾರೆ......

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, 2-3 ಹಳ್ಳಿಗಳನ್ನು ಸೇರಿಸಿ ಕಿರು ನೀರು ಸರಬರಾಜು ಯೋಜನೆಯನ್ನು ಮಾಡಲಿಕ್ಕೆ ಸರ್ಕಾರ ಸಿದ್ಧವಿದೆ ಎಂದು ತಿಳಿಸಿದ್ದಾರೆ. ಇದಕ್ಕೆ ಮಾನ್ಯ ಬಸವಲಿಂಗಪ್ಪನವರನ್ನು ಅಭಿನಂದಿಸುತ್ತೇನೆ. ಈಗಾಗಲೇ ಕೋಲಾರ ಜಿಲ್ಲೆಯ ಜಿಲ್ಲಾ ಪರಿಷತ್ ಮೂಲಕ ನಿಮ್ಮ ಇಂಜಿನೀಯರ್-ಇನ್- ಚೀಫ್ ಆಗಿರುವವರು ಕಳುಹಿಸಿಕೊಟ್ಟಿರತಕ್ಕಂಥ ಒಂದು ನಿರ್ದೇಶನದ ಮೇಲೆ ಜಿಲ್ಲಾ ಪರಿಷತ್‌ನಲ್ಲಿರತಕ್ಕಂಥ ಎಲ್ಲ ಮಾನ್ಯ ಸದಸ್ಯರು, ಶಾಸಕರು, ಅಧ್ಯಕ್ಷರು ಎಲ್ಲ ಸೇರಿ ಆ ರೀತಿಯಾದ ಒಂದು ಪಟ್ಟಿಯನ್ನು ಇಂಜಿನೀಯರ್-ಇನ್-ಚೀಫ್ ಅವರಿಗೆ ಕಳುಹಿಸಿದ್ದಾರೆ. ಅದಕ್ಕೆ ಸರ್ಕಾರದವರು ಮಂಜೂರಾತಿ ಕೊಟ್ಟು ಅಥವಾ ಇಂಜಿನೀಯರ್-ಇನ್-ಚೀಫ್‌ರವರಿಗೆ ಆ ಎಲ್ಲ ಯೋಜನೆಗಳನ್ನು ಕೈಗೆತ್ತಿಕೊಂಡು ಈ ವರ್ಷವೇ ಮಾಡಲು ನಿರ್ದೇಶನವನ್ನು ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ :- ಮಾನ್ಯ ಸದಸ್ಯರ ಸಲಹೆ ಒಳ್ಳೆಯದು.

ಶ್ರೀ ಸಿ. ಬೈರೇಗೌಡ :- ಮಾನ್ಯ ಸಚಿವರು ಮಾಡುತ್ತೇವೆ ಅಥವಾ ಇಲ್ಲವೆಂದು ಹೇಳಲಿ. ಪ್ರಪೋಸಲ್ಸ್ ನಿಮ್ಮ ಹತ್ತಿರವೇ ಇದೆ. ಆದ್ದರಿಂದ ಮಾಡುತ್ತೇವೆ ಅಥವ ಇಲ್ಲ ಇವೆರಡರ ಪೈಕಿ ಒಂದು ಹೇಳಲಿ?

ಶ್ರೀ ಬಿ. ಬಸವಲಿಂಗಪ್ಪ :- ದುಡ್ಡು ಬೇಕಲ್ಲ.

ಶ್ರೀ ಸಿ. ಬೈರೇಗೌಡ :- ಆ ಪ್ರಶ್ನೆ ಬೇರೆ, ಕುಡಿಯಲಿಕ್ಕೆ ಜನರಿಗೆ ನೀರು ಬೇಕಲ್ಲ.

ಶ್ರೀ ಬಿ. ಬಸವಲಿಂಗಪ್ಪ :- ಮಾನ್ಯ ಅಧ್ಯಕ್ಷರೇ ಇದು ಬಹಳ ಗುರುತರವಾದ ಸಮಸ್ಯೆಯಾಗಿರುವುದರಿಂದ ಉತ್ತರವನ್ನು ಸವಿಸ್ತಾರವಾಗಿ ಕೊಡಬೇಕಾಗುತ್ತದೆ. ಮಾನ್ಯ ಬೈರೇಗೌಡರು ಪ್ರಪೋಸಲ್ಸ್ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಈಗ ತಾನೇ ನೋಡಿದ್ದೇನೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ ಈಗತಾನೇ ನೋಡಿದ್ದೇನೆಂದು ಹೇಳುತ್ತಿದ್ದಾರೆ. ಆದರೆ ಹತ್ತಾರು ಸಾರಿ ಇದೇ ವಿಚಾರವನ್ನು ಅವರು ಸದನದಲ್ಲಿರುವಾಗಲೆಲ್ಲ ಹೇಳಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ :- ಈಗ ಬೈರೇಗೌಡರು ಹೇಳತಕ್ಕಂಥ ವಿಚಾರ ಏನಿದೆ. ಅದನ್ನು ಮಾಡುತ್ತೇವೆಂದು ಹೇಳಿದ್ದೇನೆ. ಅದಕ್ಕೆ ಹಣ ಬೇಕಾಗಿದೆ. ಈ ವರ್ಷ ಮುಗಿಯುತ್ತಾ ಬಂದಿದೆ. ಅದಕ್ಕೆ ಒಂದು ಸಮಗ್ರವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕೋಲಾರ ಜಿಲ್ಲೆಯಲ್ಲಿರತಕ್ಕಂಥ ಸಮಸ್ಯೆ ನನಗೆ ಗೊತ್ತಿದೆ. ಅಲ್ಲಿ 300 ಅಡಿಗಿಂತಲೂ ಕೆಳಗೆ ಹೋಗಿದೆ. ಆದ್ದರಿಂದ ಈಗ ಖಾಯಂ ಆಗಿ ಸಿಗತಕ್ಕಂಥ ನೀರಿನ ಒಂದು ನೆಲೆ ಸಿಗಬೇಕಲ್ಲ. ನಾನೇ ನಿಮ್ಮ ಜೊತೆಗೆ ಬರುತ್ತೇನೆ. ಹೋಗೋಣ. ಜನರಿಗೆ ನೀರು ಒದಗಿಸತಕ್ಕ ಕೆಲಸಕ್ಕೆ ನೀವು ಯಾವಾಗ ಕರೆದರೂ ನಾನು ಬರುತ್ತೇನೆ. ನಾಳೆಯೇ ಬೇಕಾದರೆ ಹೋಗೋಣ.

# ಕುಡಿಯುವ ನೀರು: ಮತ್ತೊಮ್ಮೆ 19-3-91

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಈಗ ತಾನೆ ಮಾತನಾಡಿದ ಮಾನ್ಯ ಸದಸ್ಯರು ಒಂದು ಒಳ್ಳೆಯ ಮತ್ತು ಸಂದರ್ಭೋಚಿತವಾದ ಮಾತನ್ನು ಹೇಳಿದ್ದಾರೆ. ಅದೇನೆಂದರೆ ನಾವು ಜನರಿಗೆ ನೀರು ಕೊಡದಿದ್ದರೆ ಅವರೇ ನಮಗೆ ನೀರು ಕುಡಿಸುತ್ತಾರೆ ಎಂದು ಸೂಕ್ಷ್ಮವಾಗಿ ಹೇಳಿದ್ದಾರೆ. ಬೇರೆ ಬೇರೆ ಮಾನ್ಯ ಸದಸ್ಯರು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾತನಾಡಿದ್ದರೂ ಎಲ್ಲರ ಮಾತಿನ ಅರ್ಥ ಒಂದೇ ಆಗಿದೆ. ನಮಗೆ ಜನ ನೀರು ಕುಡಿಸುವುದಕ್ಕೆ ಅವರ ಹತ್ತಿರ ನೀರು ಇಲ್ಲದಿದ್ದರೂ ಕೂಡ ಎಲ್ಲಿ ಅವರಿಗೆ ನಮಗೆ ಕುಡಿಸುವಷ್ಟು ನೀರು ಸಿಗುತ್ತದೋ ಅಲ್ಲಿ ಕುಡಿಸುತ್ತಾರೆ ಅಥವಾ ನಮ್ಮನ್ನು ಅಲ್ಲಿ ಮುಳುಗಿಸುತ್ತಾರೆ. ಅಂಥ ಒಂದು ಭೀಕರ ಪರಿಸ್ಥಿತಿಯು ನಮ್ಮ ಇಡೀ ರಾಜ್ಯದಲ್ಲಿ ಇಂದು ಉದ್ಭವವಾಗಿದೆ. ಇಡೀ ರಾಜ್ಯದಲ್ಲಿ ಇಂದು ಈ ಸಮಸ್ಯೆಯ ಬಗ್ಗೆ ಜನರು ಕಾತರರಾಗಿದ್ದಾರೆ. ಈ ಹಿಂದೆ ನಾವುಗಳು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡಬೇಕಾಗಿತ್ತು. ಅದು ಸಂಪ್ರದಾಯವೂ ಆಗಿತ್ತು. ಆದರೆ ನಾವುಗಳು ಅದನ್ನು ಮತ್ತು ಬೇರೆ ಎಲ್ಲಾ ವಿಚಾರಗಳನ್ನು ಬದಿಗೊತ್ತಿ ಜನರಿಗೆ ನೀರನ್ನು ಒದಗಿಸುವ ಬಗ್ಗೆ ಮತ್ತು ರಾಜ್ಯದಲ್ಲಿದ್ದ ಬರಗಾಲದ ಭೀಕರತೆಯನ್ನು ಅರ್ಥಮಾಡಿಕೊಂಡು ಆ ಕುರಿತು ಎಲ್ಲರೂ ಇಲ್ಲಿ ಚರ್ಚೆ ಮಾಡಿದ್ದೇವೆ.

ಈ ಸದನದಲ್ಲಿ ಈ ಅಧಿವೇಶನದಲ್ಲಿಯೇ ಕುಡಿಯುವ ನೀರಿನ ಬಗ್ಗೆ ಇದು ಎರಡನೇ ಸಾರಿ ಚರ್ಚೆಯಾಗುತ್ತಿದೆ. ನಿಮ್ಮ ನಿಯಮಾವಳಿಯಲ್ಲಿ ಕೂಡಾ ಒಂದು ವಿಚಾರವನ್ನು ಒಂದು ಸಾರಿ ಚರ್ಚೆ ಮಾಡಿದ ಮೇಲೆ ಮತ್ತೊಂದು ಸಾರಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಆದರೂ ಸಹಾ ವಿಶೇಷವಾಗಿ ತಾವು ಔದಾರ್ಯವನ್ನು ತೋರಿಸಿದ್ದೀರಿ. ಇದರ ಬಗ್ಗೆ ಚರ್ಚೆಗೂ ಕೂಡಾ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಚರ್ಚೆಗೆ ಅವಕಾಶವನ್ನು ತಾವು ಏತಕ್ಕೆ ಕೊಟ್ಟಿದ್ದೀರಿ ಎಂದರೆ ಇದು ತಮಗೂ ಕೂಡ ಅರ್ಥವಾಗಿದೆ. ಕುಡಿಯುವ ನೀರಿನ ಬಗ್ಗೆ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎನ್ನುವುದು ತಮಗೆ ಅರ್ಥವಾಗಿರುವ ಕಾರಣಕ್ಕೋಸ್ಕರ ತಾವು ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ನಾವು ಕೂಡಾ ಅರ್ಥಮಾಡಿ ಕೊಳ್ಳಬೇಕಾಗಿರತಕ್ಕಂಥದ್ದು. ಇವತ್ತು ರಾಜ್ಯದಲ್ಲಿ ಅದರಲ್ಲೂ ಪ್ರಮುಖವಾಗಿ ನನ್ನ ಕ್ಷೇತ್ರ ಮತ್ತು ನಮ್ಮ ಜಿಲ್ಲೆಯಲ್ಲಿ ಶೇಕಡ 70ರಿಂದ 80ರಷ್ಟು ಹಳ್ಳಿಗಳಲ್ಲಿ ಕುಡಿಯುವುದಕ್ಕೂ ನೀರು ಇಲ್ಲ. ಮಂತ್ರಿಗಳು ಹೇಳುತ್ತಾರೆ, ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅಥವಾ ಈ ಹಿಂದೆಯೂ ಕೂಡ ಹೇಳಿದ್ದಾರೆ. ನಾವು ಬರ ಪರಿಹಾರ ಕಾಮಗಾರಿಯಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ, ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳುತ್ತಾರೆ. ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಮಾಡಿದ್ದಾರೆ. ಆದರೆ ಪರಿಸ್ಥಿತಿ ಎಷ್ಟಿದೆ ಎಂದರೆ ಇದು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವ ಪರಿಸ್ಥಿತಿ ಆಗಿದೆ.ಅಷ್ಟೊಂದು ಪರಿಸ್ಥಿತಿ ಭೀಕರವಾಗಿದೆ. ಶೇಕಡ 70ರಿಂದ 80ರಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದ್ದರೂ ಸಹಾ ಒಂದೊಂದು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ ಎಂದು

ಬಿಡುಗಡೆ ಮಾಡಿರತಕ್ಕಂಥದ್ದು ಒಂದೂವರೆ ಲಕ್ಷ - ಎರಡು ಲಕ್ಷ ರೂಪಾಯಿಗಳು ಮಾತ್ರ. ಆದರಿಂದ ಎಷ್ಟು ಕೊಳವೆ ಬಾವಿಗಳು ಆಗಿವೆ ಎಂದು ಹೇಳಿದರೆ ಆರರಿಂದ ಎಂಟು ಕೊಳವೆಬಾವಿಗಳನ್ನು ತೆಗೆಯುವುದಕ್ಕೆ ಮಾತ್ರ ಸಾಧ್ಯವಾಗಿದೆ. ಆದರೆ ಪ್ರತಿ ತಾಲ್ಲೂಕಿನಲ್ಲಿ 100 ರಿಂದ 150, 200 ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಆದ್ದರಿಂದ ಕನಿಷ್ಟ ಇವತ್ತಿನ ದಿವಸ ತತ್‌ಕ್ಷಣ 100 ಕೊಳವೆ ಬಾವಿಯಾದರೂ ಆಗಬೇಕಾಗಿರತಕ್ಕಂಥ ಅವಶ್ಯಕತೆ ಪ್ರತಿ ತಾಲ್ಲೂಕಿನಲ್ಲಿಯೂ ಇದೆ. ಆದರೆ ಬಿಡುಗಡೆ ಮಾಡಿರತಕ್ಕಂಥ ಹಣದಲ್ಲಿ ಹಾಕಿರತಕ್ಕಂಥ ಕೊಳವೆಬಾವಿಗಳು ಎಷ್ಟೆಂದರೆ ಆರರಿಂದ ಎಂಟು ಮಾತ್ರ. ಇವತ್ತಿನ ದಿವಸ ಪ್ರತಿ ತಾಲ್ಲೂಕಿನಲ್ಲಿ ಹಾಕಿರತಕ್ಕಂಥದ್ದು ಏನೂ ಸಾಕಾಗುತ್ತಿಲ್ಲ. ಪ್ರತಿ ಹಳ್ಳಿಯಲ್ಲಿಯೂ ಕೂಡಾ ಕುಡಿಯುವ ನೀರಿನ ತೊಂದರೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಹೆಣ್ಣುಮಕ್ಕಳು ಮೈಲಿಗಟ್ಟಲೆ ನೀರು ತರುವುದಕ್ಕೆ ಹೋಗುತ್ತಿದ್ದಾರೆ. ನೀವು ಕೇಳಬಹುದು ಅಲ್ಲಿ ಎಲ್ಲಿ ನೀರು ಸಿಗುತ್ತದೆ ಎಂದು. ದೂರದಲ್ಲಿ ತೋಟಗಳು ಇರುತ್ತವೆ. ಅಲ್ಲಿ ಕೊಳವೆಬಾವಿಯನ್ನು ಹಾಕಿರುತ್ತಾರೆ. ತೋಟದಲ್ಲಿ ನೀರನ್ನು ಬಿಡುತ್ತಿದ್ದರೆ ಅಲ್ಲಿ ಹೋಗಿ ನೀರನ್ನು ತರತಕ್ಕಂಥ ದೃಶ್ಯವನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡಾ ಕಾಣಬಹುದು. ಅಷ್ಟೇ ಅಲ್ಲ, ಅನೇಕ ಹಳ್ಳಿಗಳಲ್ಲಿ ಸೈಕಲ್ ಮೇಲೆ 3-4 ಕೊಡಗಳನ್ನು ಕಟ್ಟಿಕೊಂಡು ಮೈಲಿಗಟ್ಟಲೆ ಹೋಗಿ ನೀರನ್ನು ತರತಕ್ಕಂಥ ಪರಿಸ್ಥಿತಿಯನ್ನು ಇವತ್ತಿನ ದಿವಸ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ನೋಡಬಹುದು. ಇದನ್ನು ನಾವು ಎಷ್ಟೇ ಒತ್ತಾಯ ಮಾಡಿ ಇದನ್ನೆಲ್ಲಾ ಸರ್ಕಾರಕ್ಕೆ ಸರ್ಕಾರದ ಗಮನಕ್ಕೆ ತಂದರೂ ಕೂಡ ಸರ್ಕಾರ ಹಣವನ್ನು ಬಿಡುಗಡೆ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ಇಲ್ಲ. ಕೊಡುತ್ತೇವೆ, ಕೊಡುತ್ತೇವೆ ಎಂದು ಹೇಳಿ ಕೊಟ್ಟಿರತಕ್ಕಂಥದ್ದು ಐದಾರು ಕೊಳವೆ ಬಾವಿಗಳಿಗೆ ಮಾತ್ರ ಕೊಟ್ಟಿದ್ದಾರೆ. ಈ ಹಿಂದೆ ಇದನ್ನು ಸಭೆಯ ಗಮನಕ್ಕೂ ಕೂಡ ತಂದಿದ್ದೆ. ಈಗಲೂ ಕೂಡ ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಹಿಂದೆ ಇದ್ದಂಥ ಅರ್ಥ ಮಂತ್ರಿಗಳು ಕಳೆದ ಬಜೆಟ್ ಅಧಿವೇಶನದಲ್ಲಿ ಅವರು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ 25 ಕೋಟಿ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶದ ನೀರಾವರಿಗಾಗಿ ನಾವು ಈ ಸಾರಿ ಹೆಚ್ಚುವರಿಯಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿಯೇ ಹೇಳಿದ್ದರು. ಅದು ಅಷ್ಟೇ ಅಲ್ಲ, ಮಾಜಿ ಗ್ರಾಮೀಣಾಭಿವೃದ್ಧಿ ಸಚಿವರು ಕೂಡಾ ಇವತ್ತಿನ ದಿವಸ ಈ ಸದನದಲ್ಲಿಯೇ ಇದ್ದಾರೆ, ಅವರು ಒಂದು ಯೋಜನೆಯನ್ನೇ ಕೊಟ್ಟರು. ಯೋಜನೆಯಲ್ಲಿರತಕ್ಕಂಥ ಸುಮಾರು 37.8 ಕೋಟಿ ರೂಪಾಯಿಯ ಜೊತೆಗೆ ಈ 25 ಕೋಟಿ ರೂಪಾಯಿಗಳನ್ನು ಸೇರಿಸಿ ಸುಮಾರು 85 ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ತಯಾರು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದರು. ಈ 85 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣ ಖರ್ಚಾಯಿತು ಎಂದು ಅವರೇ ಹೇಳಬೇಕು. ಏಕೆಂದರೆ ಆ ಇಲಾಖೆಯ ಜವಾಬ್ದಾರಿಯನ್ನು ಮಾನ್ಯ ಘೋರ್ಪಡೆಯವರೇ ಕೆಲವು ಕಾಲ ವಹಿಸಿದ್ದರು. ಅವರಾದ ಮೇಲೆ ಮಾನ್ಯ ಬಸವಲಿಂಗಪ್ಪನವರು ಈಗ ಆ ಇಲಾಖೆಯ ಜವಾಬ್ದಾರಿಯನ್ನು ವಹಿಸಿದ್ದಾರೆ.

ಉಪಾಧ್ಯಕ್ಷರು :- ಮಾನ್ಯ ಬೈರೇಗೌಡರೇ, ಬೇಗ ಮುಗಿಸಿ. ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ. ಎಲ್ಲರಿಗೂ ಅವಕಾಶವನ್ನು ಕೊಡಬೇಕು.

ಶ್ರೀ ಸಿ. ಬೈರೇಗೌಡ :- ಮಾನ್ಯ ಉಪಾಧ್ಯಕ್ಷರೇ, ಇದು ಸಾಮಾನ್ಯವಾದಂಥ ವಿಚಾರವಲ್ಲ. ಬಹಳ ತೀವ್ರತರವಾದಂಥ ವಿಚಾರದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಸರ್ಕಾರ ನಾವು ಏನೇ ಹೇಳಿದರೂ ಕೂಡ ಕಲ್ಲಿಗಿಂತ ಗಟ್ಟಿಯಾಗಿ ಕುಳಿತಿದೆ. ಜನರಿಗೆ ಕುಡಿಯುವುದಕ್ಕೂ ಕೂಡಾ ನೀರನ್ನು ಕೊಡಲಾರದಂಥ ಪರಿಸ್ಥಿತಿಗೆ, ಅಂತ ಒಂದು ಪರಿಸ್ಥಿತಿಗೆ ಸರ್ಕಾರ ಇವತ್ತು ಬಂದು ಕುಳಿತಿದೆ. ಇವತ್ತು ಈ ಯೋಜನೆ ಏನು ಆಯಿತು. ಆ ಹಣ ಏನಾಯಿತು ಎನ್ನತಕ್ಕಂಥದ್ದರ ಬಗ್ಗೆ ಅವರು ವಿವರವನ್ನು ಕೊಡಬೇಕು. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ಇವತ್ತು ನನ್ನ ಎದುರುಗಡೆ ಒಂದು ಆಜ್ಞೆ ಇದೆ.

ಈ ರಾಜ್ಯದಲ್ಲಿ ನೀರನ್ನು ಒದಗಿಸತಕ್ಕ ಇಲಾಖೆ ಏನಿದೆ, ಅದಕ್ಕೆ ಒಬ್ಬ ಇಂಜಿನಿಯರ್ ಇದ್ದಾರೆ. Office of the Engineer - in- chief, Public Health, Engineering Bangalore Urban District.

ಜನಾರೋಗ್ಯ ಇಲಾಖೆಯ ಪ್ರಧಾನ ಮುಖ್ಯ ಇಂಜಿನಿಯರ್‌ರವರು ಒಂದು ಆಜ್ಞೆಯನ್ನು ರಾಜ್ಯದಲ್ಲಿರತಕ್ಕ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ಮತ್ತು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ಅವರಿಗೂ ಸಹ ಕಳುಹಿಸಿದ್ದಾರೆ. To the Deputy Commissioner Bangalore, Urban District, Bangalore, To the Chief Secretary, Zilla Parishad Kolar....

ಇದೇ ರೀತಿ ಪತ್ರವನ್ನು ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ಕಳುಹಿಸಿದ್ದಾರೆ. ಅದರಲ್ಲಿರುವ ವಿಷಯ ಏನೆಂದರೆ :

**Sub :** Preparation of programmes for implementation of Rural Water supply Scheme of the proposed additional grant of Rs. 25 crores for the year 1990-91.

The Government of Karnataka is contemplating to relate additional grant of Rs. 25 crores to provide drinking water to the villages which are facing shortage of drinking water. This is in addition to plan allocation already made by Government for the current financial year. Drinking water supply is considered to be one of the priority sector and Government desides to provide immediate relief to the population in need of adequate potable drinking water supply...

ನಾನು ಎಲ್ಲವನ್ನೂ ಹೇಳಲಿಕ್ಕೆ ಹೋಗುವುದಿಲ್ಲ. ಅದರಲ್ಲಿ ಯಾವ್ಯಾವುದಕ್ಕೆ ಆದ್ಯತೆ ಕೊಟ್ಟಿದ್ದಾರೆ. ಅಂದರೆ Piped water supply schemes, Mini water supply schemes, borewell with hand pumps, reviving the existing piped water supply and mini water supply, augmentation of piped water supply schemes....

ಈ ರೀತಿ 5 ವಿಧದಲ್ಲಿ ಕಾರ್ಯಕ್ರಮವನ್ನು ಅವರೇ ಹಾಕಿದ್ದಾರೆ. ಅದರ ಮೇಲೆ ಯಾವ ರೀತಿಯಾಗಿ ಹಳ್ಳಿಗಳನ್ನು ಸೆಲೆಕ್ಟ್ ಮಾಡಬೇಕು ಎಂಬ ಬಗ್ಗೆ ವಿವರವಾದಂತಹ ಪ್ರೊಸೀಜರ್ ಅನ್ನು ಅವರು ತಿಳಿಸಿದ್ದಾರೆ. ಇದಾದ ಮೇಲೆ ಎಲ್ಲಾ ಜಿಲ್ಲಾ ಪರಿಷತ್ತಿಗೂ ಈ ರೀತಿಯಾದ ಪತ್ರ ಹೋಗಿದೆ. ಕೋಲಾರ ಜಿಲ್ಲೆಯಲ್ಲಿ ಇದರ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮದ ಪತ್ರದ ಪ್ರತಿ ಕೂಡ ನನ್ನ ಹತ್ತಿರ ಇದೆ. 10 ಪುಟದ ಕಾರ್ಯಕ್ರಮವನ್ನು ಯಾರ ರೀತಿ ಹಾಕಿದ್ದಾರೆ ಅನ್ನತಕ್ಕದ್ದು ಮತ್ತು ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಎಲ್ಲಾ ಪಕ್ಷದ ಸದಸ್ಯರೂ ಹಾಗೂ ಶಾಸನ ಸಭಾ ಸದಸ್ಯರುಗಳು ತಮ್ಮ ತಮ್ಮ ಸಲಹೆಯನ್ನು ನೀಡಿದ್ದಾರೆ. 22-9-1990ರ ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಇಂಜಿನಿಯರ್ ಇನ್ ಚೀಫ್ ಕೊಟ್ಟಿರತಕ್ಕ ಪತ್ರದಲ್ಲಿ ಕೋಲಾರ ಜಿಲ್ಲೆಗೆ 1.23 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆ. 1.23 ಕೋಟಿ ಹಣವನ್ನು ಕೋಲಾರ ಜಿಲ್ಲಾ ಪರಿಷತ್ತಿನ ಸದಸ್ಯರು ಶಾಸಕರು ಎಲ್ಲರೂ ಸೇರಿ ಸುಮಾರು 10 ಪುಟದ ಅವರ ತೀರ್ಮಾನವನ್ನು ಇವತ್ತಿನ ದಿವಸ ಕೊಟ್ಟಿದ್ದಾರೆ. ಇದರಲ್ಲಿ ಇಲ್ಲಿಯವರೆಗೂ ಕೂಡ ಒಂದು ಸಣ್ಣ ಕೆಲಸವೂ ಆಗಿಲ್ಲ. ನೀರು ಕೊಡುವುದಕ್ಕೆ ಸಹ ಸರ್ಕಾರ ಪ್ರಯತ್ನ ಪಟ್ಟಿಲ್ಲ.

ಉಪಾಧ್ಯಕ್ಷಣಿಯರು :- ಇನ್ನೂ 9 ಜನ ಮಾತನಾಡಬೇಕೆಂದಿದ್ದಾರೆ, ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ :- ಈ ವಿಚಾರವನ್ನು ಅನೇಕ ಸಾರಿ ಅವರ ಗಮನಕ್ಕೆ ತಂದಿದ್ದೇವೆ. ಆದರೆ ಅವರಿಗೆ ಈ ಕಡ ತಿರುಗಿ ನೋಡುವಂತಹದ್ದೇ ಆಗಲಿ ಅಥವಾ ಹಳ್ಳಿಯಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವುದನ್ನು ತಿಳಿದುಕೊಳ್ಳುವಂತಹ ವ್ಯವಧಾನ ಅವರಿಗೆ ಇಲ್ಲವೆಂದು ಬಹಳ ವಿಷಾದದಿಂದ ನಾನು ಹೇಳಬೇಕಾಗಿದೆ. ಅವರು ತಿಳಿದುಕೊಂಡಿದ್ದರೆ ಅವರು ಈ ರೀತಿಯಾಗಿ ವ್ಯವಹಾರ ನಡೆಸುತ್ತಿರಲಿಲ್ಲ. ಈ ರೀತಿಯ ನಡವಳಿಕೆ ಅವರಿಂದ ನೀವು ನಿರೀಕ್ಷೆ ಮಾಡಿರಲಿಲ್ಲ. ಇವತ್ತಿಗೂ ಸಹ ಈ ಕುಡಿಯುವ ನೀರನ್ನು ಒದಗಿಸುವುದಕ್ಕೆ ಯಾವ ಒಂದು ಪ್ರಯತ್ನವನ್ನೂ ಸಹ ಮಾಡಿಲ್ಲ. ನಾನು ಸರ್ಕಾರದ ತೀರ್ಮಾನಗಳನ್ನು ಸಹ ಓದಿದ್ದೇನೆ. ಇದು ಬಹಳ ದುರದೃಷ್ಟಕರ ನಾನು ಈ ಸರ್ಕಾರದ ನೀತಿಯನ್ನು ನನ್ನ ಶಕ್ತಿ ಎಷ್ಟಿದೆ ಅಷ್ಟನ್ನು ಉಪಯೋಗಿಸಿ ಖಂಡಿಸುತ್ತೇನೆ. ಗತ್ಯಂತರ ಇಲ್ಲ. ಈ ಸಭೆ 21ಕ್ಕೆ ಮುಗಿಯುತ್ತದೆ. ನಾವು ಊರಿಗೆ ಹೋಗಬೇಕಾಗಿದೆ. ಊರಿಗೆ ಹೋದಾಗ ಸರಿಯಾಗಿ ನೀರು ಇಲ್ಲ ಎಂದು ಕೇಳುತ್ತಾರೆ. ನಾವು ಏನು ಉತ್ತರ ಹೇಳಬೇಕಾಗಿದೆ. ಆದ್ದರಿಂದ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ನಾನು ಕೇಳುವುದು ಒಂದೇ ಒಂದು ಮಾತು ಏನೆಂದರೆ ನೀವು ನೀರು ಕೊಡುತ್ತೀರೋ ಇಲ್ಲವೋ? ಅದನ್ನು ಹೇಳಿ. ಈಗ ನೀವು ಏನು ಹೇಳುತ್ತೀರೋ ಅದನ್ನೇ ನಾವು ಅವರಿಗೆ ಹೇಳುತ್ತೇವೆ.

ನೀವು ಬಂದಾಗ ಅವರು ನಿಮ್ಮ ಮುಖಕ್ಕೆ ಮಂಗಳಾರತಿ ಎತ್ತತಕ್ಕೆ ಕಾಲ ದೂರ ಇಲ್ಲ. ಅದು ನಿಮಗೆ ಜ್ಞಾಪಕ ಇದ್ದಿದ್ದರೆ, ನೀವು ಈ ರೀತಿಯಾದಂಥ ವ್ಯವಹಾರವನ್ನು ಈ ರೀತಿಯಾದ ಉದ್ಧಟತನವನ್ನು ತೋರಿಸುತ್ತಿರಲಿಲ್ಲ. ಈ ಉದ್ಧಟತವನ್ನು ಬಿಟ್ಟು ಪ್ರತಿ ನಿಮಿಷದಲ್ಲೂ ಜನರಿಗೆ ಏನು ತೊಂದರೆ ಇದೆ, ಅದನ್ನು ಬಗೆಹರಿಸತಕ್ಕ ಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

# ಕೋಲಾರ ಜಿಲ್ಲೆಗೆ ನೀರು ಅಭಾವ 27-3-91

ಶ್ರೀ ಸಿ. ಬೈರೇಗೌಡ :- ಕುಡಿಯುವ ನೀರಿನ ಬಗ್ಗೆ ಸದನದಲ್ಲಿ ಬಹಳ ಚರ್ಚೆಯಾಗಿದೆ. ಆದರೆ ಅದರ ಪ್ರತಿಫಲ ಸಿಗುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಶನಿವಾರದ ದಿವಸ ನಮ್ಮ ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಸಭೆ ನಡೆದು ಪ್ರಾಮುಖ್ಯವಾಗಿ ಎರಡು ಘಂಟೆಯವರೆಗೆ ಚರ್ಚೆಯಾಯಿತು. ವಿರೋಧ ಪಕ್ಷದ ಸದಸ್ಯರೂ ಕೂಡ ಆವತ್ತಿನ ದಿವಸ ಸಭೆಯಲ್ಲಿ ಭಾಗವಹಿಸಿದ್ದೆವು. ಕೊಳವೆ ಬಾವಿಗಳನ್ನು ಹಾಕಿಸುವ ಕಾರ್ಯಕ್ರಮವನ್ನು ಮಾತ್ರ ಮುಂದಿಟ್ಟು ಬಾಕಿ ಎಲ್ಲಾ ವಿಚಾರವನ್ನು ಬದಿಗಿಟ್ಟು ಚರ್ಚೆ ಮಾಡಿದೆವು. ಅದನ್ನು ಚರ್ಚೆ ಮಾಡಿದ ಸಂದರ್ಭದಲ್ಲಿ ಆದಂಥಾದ್ದು ಏನು ಎಂದರೆ ಕೆಲವು ಕಡೆ ವರ್ಷದ ಪ್ರಾರಂಭದಲ್ಲಿ ಮತೀಯ ಗಲಭೆಗಳು ಪ್ರಾರಂಭವಾಯಿತು. ಆ ಕಾರಣದಿಂದ ತಕ್ಷಣ ಕೊಳವೆ ಬಾವಿಗಳನ್ನು ಹಾಕತಕ್ಕಂಥಾದ್ದು ಆಗಲಿಲ್ಲ. ನಂತರ ಡೀಸೆಲ್ ಕೊರತೆ ಪ್ರಾರಂಭವಾಯಿತು. ಆಗ ಕೆಲಸ ಬಂದಾಯಿತು. ಅದಾದ ಮೇಲೆ ಕೆಲವು ಕಡೆ ಸಿಮೆಂಟ್ ಸಿಗಲಿಲ್ಲ. ಕೆಲಸ ಕುಂಠಿತವಾಯಿತು. ಈಗ ಇದೆಲ್ಲ ಆದ ಮೇಲೆ ಡೀಸೆಲ್ ಬೆಲೆ ಜಾಸ್ತಿಯಾಯಿತು ಎಂಬ ಕಾರಣಕ್ಕೋಸ್ಕರ ರಿಗ್ ಇರತಕ್ಕಂತಹವರು ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಮುಂದೆ ಬರುತ್ತಿಲ್ಲ. ಕಾರಣವೇನೆಂದರೆ ಒಂದು ಮೀಟರ್‌ಗೆ 170-180 ಷೆಡ್ಯೂಲ್ ರೇಟ್ ಇದೆ. ಈ ಎಲ್ಲಾ ಕಾರಣಗಳಿಂದ ಹೆಚ್ಚುವರಿಯಾಗಿರತಕ್ಕಂತಹ ಬೆಲೆ 220 ರೂಪಾಯಿಯವರೆಗೆ ಕೇಳುತ್ತಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಇದರ ಬಗ್ಗೆ ತೀರ್ಮಾನ ಮಾಡಿ ಹೆಚ್ಚಿಗೆ ಬೆಲೆ ಕೊಟ್ಟು ಒಂದೆರಡು ಬಾವಿ ಹಾಕಿಸಿ ಎಂದು ಹೇಳಿದೆವು.

ಈ ಕಾರಣದಿಂದ ಕೆಲಸ ತಡವಾಗುತ್ತಿದೆ. ಸ್ವಲ್ಪಮಟ್ಟಿಗೆ ಹಣ ಹೆಚ್ಚಾದರೂ ಕೂಡ ಇದನ್ನು ಕೈಗೆತ್ತಿಕೊಳ್ಳಬೇಕು. ಕೆಲಸ ಮಾಡತಕ್ಕಂಹವರು ಅಲ್ಲಿ ಇದ್ದರೂ ಕೂಡ ಸ್ವಲ್ಪಮಟ್ಟಿಗೆ ಹಣವಿದ್ದರೂ ಕೂಡ ರಿವೈಸ್ಡ್ ರೇಟನ್ನು ಮಾಡಿಕೊಡದೇ ಇರುವ ಕಾರಣದಿಂದ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ಇದು ರಾಜ್ಯದಾದ್ಯಂತ ಇರತಕ್ಕಂತಹ ಸಮಸ್ಯೆಯಾದರೂ ಕೂಡ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಹೆಚ್ಚು ಇದೆ. ನಿನ್ನೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಭೇಟಿಯಾಗಿ ಮನವಿಯನ್ನು ಕೊಟ್ಟಿದ್ದಾರೆಂದು ತಿಳಿಯಿತು. ಅದರಲ್ಲಿ ಇದೆಲ್ಲವನ್ನು ಹೇಳಿದ್ದಾರೆ. ಇವತ್ತೇ ದೂರವಾಣಿ ಮೂಲಕ ಟೆಲೆಕ್ಸ್ ಮೂಲಕ ಯಾವುದಾದರೂ ಒಂದು ರೂಪದಲ್ಲಿ ಕೋಲಾರ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ರಿವೈಸ್ಡ್ ರೇಟ್ ಏನು ಇದೆ ಅದರ ಪ್ರಕಾರ ಕೊಟ್ಟು ತಕ್ಷಣ ಕೆಲಸವನ್ನು ಪ್ರಾರಂಭ ಮಾಡುವಂತೆ ನಿರ್ದೇಶನ ಕೊಡಬೇಕು. ಜಿಲ್ಲಾಧಿಕಾರಿಗಳಿಗೆ ಮಾನ್ಯ ಖರ್ಗೆಯವರು ಹಣ ಕೊಟ್ಟಿದ್ದಾರೆ, ಅದು ನಡೆಯುತ್ತಿದೆ. ಒಂದೇ ತಾಲ್ಲೂಕಿನಲ್ಲಿ ಜಿಲ್ಲಾಧಿಕಾರಿ ಕೊಳವೆ ಬಾವಿಗಳಿಗೆ ಹೆಚ್ಚಿನ ಬೆಲೆ ಕೊಡುತ್ತಿದ್ದಾರೆ. ಜಿಲ್ಲಾ ಪರಿಷತ್ ಕೊಡುತ್ತಿರುವುದಕ್ಕೆ ಕಡಿಮೆ ರೇಟ್ ಎಂದರೆ ಯಾರೂ ಬರುವುದಿಲ್ಲ. ಅಲ್ಲಿ ತೀವ್ರವಾದ ಪರಿಸ್ಥಿತಿ ಇದೆ ಇದನ್ನು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಾವು ನಿರ್ದೇಶನ ಕೊಟ್ಟು ಹೆಚ್ಚಿನ ಬೆಲೆಯನ್ನು ನೀಡಿ ಕೊಳವೆ ಬಾವಿಗಳನ್ನು ಹಾಕಿಸುವುದಕ್ಕೆ ಏರ್ಪಾಡು ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ :- ಈಗ ಪ್ರೈವೇಟ್ ರಿಗ್‌ನವರು ಬೇರೆ ಇದ್ದಾರೆ. ಸರ್ಕಾರದವರೇ ರಿಗ್ ಮಾಡತಕ್ಕಂಥ ವ್ಯವಸ್ಥೆ ಕೂಡ ಇದೆ. ಪ್ರೈವೇಟ್ ರಿಗ್ಗರ್ಸ್‌ದು ಬೇರೆ ರೇಟ್ ಇದೆ. ಮಾನ್ಯ ಬೈರೇಗೌಡರು ಹೇಳಿದ ಹಾಗೆ, ನಾನು ಮಾಲೂರಿಗೆ ಹೋದಾಗ ನನಗೆ ತಿಳುವಳಿಕೆಗೆ ಬಂದ ಹಾಗೆ, ಇದರ ರೇಟ್ ಜಾಸ್ತಿ ಮಾಡಬೇಕೆಂದು ಹೇಳುತ್ತಿದ್ದಾರೆ. 200 ರೂ. ಮಾಡಬೇಕು. 175 ರೂ. ಮಾಡಬೇಕೆಂದು ಹೇಳಿದ್ದಾರೆ. ನಾನು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಇದನ್ನೆಲ್ಲಾ ಟೆಂಡರ್ ಕರೆಯಬೇಕು, ಮಾಡಬೇಕು ಎಂದರೆ ಈಗ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಒಂದು ನಿರ್ಧಾರ ಇವತ್ತು ಅಥವಾ ನಾಳೆ ತೆಗೆದುಕೊಳ್ಳುತ್ತೇವೆಂದು ಈ ಸಭೆಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಅಧ್ಯಕ್ಷರು :- ಬೈರೇಗೌಡರು ಏನು ಪಾಯಿಂಟ್ ಔಟ್ ಮಾಡಿದರು ಎಂದರೆ ಪ್ಯಾರಲಲ್ ಡೆವೆಲಪ್‌ಮೆಂಟ್ ನಡೆಯುತ್ತಿದೆ. ಡಿಸ್ಟ್ರಿಕ್ಟ್‌ನಲ್ಲಿ ಒಂದು ರಿಲೀಫ್ ಮೆಜರ್ಸ್ The Deputy Commisioner takes a decision ತೆಗೆದುಕೊಂಡು ಇಷ್ಟು ಮೀಟರ್‌ಗೆ ಇಷ್ಟು ದುಡ್ಡು ಎಂದು ಕೊಡುತ್ತಿದ್ದಾರೆ. Zilla Parishad, as you know, is bound by certain directions given by the Government and they are unable to take any decision with reference to this very point. So, this confusion has get to be cleared.

ಶ್ರೀ ಬಿ. **ಬಸವಲಿಂಗಪ್ಪ** :- ಮಾನ್ಯ ಅಧ್ಯಕ್ಷರೇ, ಈಗ ಡಿ.ಸಿ.ಗೆ ಕೊಡತಕ್ಕಂಥ ಹಣ ಬೇರೆ, ನಾವು ಜಿಲ್ಲಾ ಪರಿಷತ್‌ನಿಂದ ಖರ್ಚು ಮಾಡತಕ್ಕಂಥ ಹಣ ಬೇರೆ. ಅವರಿಗೆ ಸೀಮಿತರಾಗಿರತಕ್ಕಂಥಾದ್ದು ಡಿ.ಸಿ. ಕೊಡತಕ್ಕಂಥ ಹಣ. ಜಿಲ್ಲಾ ಪರಿಷತ್ ಇದಕ್ಕೆ ಸೀಮಿತ ಏನಿಲ್ಲ. ನಾವು ಸಮಗ್ರ ತೀರ್ಮಾನ ಮಾಡಿಕೊಂಡಿದ್ದೇವೆ. ಪ್ರತಿ ತಾಲ್ಲೂಕಿನಲ್ಲಿಯೂ ಕೂಡ ಎಂತಹ ಅಭಾವ ಪರಿಸ್ಥಿತಿಯಲ್ಲೂ ಕೂಡ ನಾವು ಜನಗಳಿಗೆ ಇದೊಂದು ಕಷ್ಟವನ್ನು ನಿವಾರಣೆ ಮಾಡಬೇಕೆಂದು ತೀರ್ಮಾನ ಮಾಡಿರುತ್ತೇವೆ. ಅದಕ್ಕೋಸ್ಕರ ನಾವು ಇನ್‌ಸ್ಟ್ರಕ್ಷನ್ಸ್ ಕೂಡ ಕೊಟ್ಟಿದ್ದೇವೆ. ಮೀಟಿಂಗ್ ಮಾಡಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ. ಈಗ ಎಲ್ಲಿ ದೂರು ಕೇಳಿ ಬರುತ್ತಿದೆ, ಅಲ್ಲಿ ಮಾಡಿಲ್ಲ, ಇಲ್ಲಿ ಮಾಡಿಲ್ಲ ಎಂದು, ಮಾನ್ಯ ಸದಸ್ಯರು ಅಧ್ಯಕ್ಷರಾಗಿರುವುದರಿಂದ ತಾವೇ ತೀರ್ಮಾನ ತೆಗೆದುಕೊಳ್ಳಿರಿ, ಎಷ್ಟು ಬೋರ್ ಮಾಡುತ್ತೀರಿ ಮಾಡಿರಿ. ಅದಕ್ಕೆ ಹಣ ಒದಗಿಸತಕ್ಕಂಥಾದ್ದಕ್ಕೆ ಕೊರತೆ ಇಲ್ಲ ಎಂದು ಹೇಳಿದ್ದೇನೆ ಮತ್ತು ಜಿಲ್ಲೆಗೆ ಎಷ್ಟೆಷ್ಟು ಕೊಡುತ್ತೀರಿ. ಪಂಚಾಯತ್ ಸಮಿತಿಗೆ ಎಷ್ಟೆಷ್ಟು ಕೊಡುತ್ತೀರಿ ಎಂದು ಕೇಳಿದ್ದಾರೆ, ನಾನು ಅದನ್ನು ತೀರ್ಮಾನ ಮಾಡುತ್ತೇನೆ.

ಶ್ರೀ ಸಿ. **ಬೈರೇಗೌಡ** :- ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಮತ್ತೊಂದು ಸಾರಿ ಗಮನಕ್ಕೆ ತರತಕ್ಕಂಥ ವಿಚಾರ ಏನೆಂದರೆ ಈಗ ಡ್ರಿಲ್ಲಿಂಗ್ ರೇಟ್ ಬಗ್ಗೆ ಮತ್ತು ಕುಡಿಯುವ ನೀರಿನ ವಿಚಾರವನ್ನು ನಾವು ಇಲ್ಲಿ ನಾಲ್ಕನೆಯ ಸಾರಿ ಪ್ರಸ್ತಾಪ ಮಾಡುತ್ತಿದ್ದೇವೆ. ಇದರ ಬಗ್ಗೆ ಇನ್ನು ಯಾವ ತರಹ ಹೇಳಬೇಕೋ ಗೊತ್ತಾಗುತ್ತಿಲ್ಲ. ಸ್ಥಳಕ್ಕೆ ಹೋದರೆ ನಮಗೆ ಎಷ್ಟು ಸಿಟ್ಟು ಬರುತ್ತದೆ ಎಂದರೆ ಜನ ಬಂದು ನಮ್ಮನ್ನು ಪದೆಪದೇ ನೀರು ಕೊಡಿ ಎಂದು ಕೇಳುತ್ತಾರೆ. ಈ ಎಲ್ಲಾ ವ್ಯವಸ್ಥೆಯನ್ನು ಕೂಡ ಸರ್ವನಾಶ ಮಾಡಬೇಕೆನ್ನುವಷ್ಟು ಸಿಟ್ಟು ನನಗೆ ಬರುತ್ತದೆ. ಕುಡಿಯುವ

ನೀರಿನ ಬಗ್ಗೆ ನಾಲ್ಕು ಸಾರಿ ಇಲ್ಲಿ ಚರ್ಚೆ ಆಗಿದೆ. ರೇಟ್ ಬಗ್ಗೆ ಇನ್ನು ಒಂದೆರಡು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಹೇಗೆ? ಮೊದಲನೆ ಸಾರಿ ಈ ವಿಷಯ ಅವರನ್ನು ಕಾಡಿಸಿತು. ಎರಡನೆಯ ಸಾರಿ ಅವರನ್ನು ಈ ವಿಷಯ ಕಾಡಿಸಿತು. ಮೂರನೇ ಸಾರಿ ಕಾಡಿಸಿತು. ನಾಲ್ಕನೇ ಸಾರಿ ಈ ವಿಷಯ ಅವರನ್ನು ಕಾಡಿಸಿದರೂ ಸಹ ಅವರು ಇವತ್ತು ಇನ್ನು ಒಂದೆರಡು ದಿವಸಗಳಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳುವುದರ ಅರ್ಥ ಏನು? ತಮ್ಮ ಗಮನಕ್ಕೂ ಕೂಡ ನಾನು ತಂದಿದ್ದೇನೆ. ಜಿಲ್ಲಾಧಿಕಾರಿಗಳಿಗೆ ಕೊಡತಕ್ಕಂಥ ಹಣ ಬೇರೆ. ಜಿಲ್ಲಾ ಪರಿಷತ್ತುಗಳಿಗೆ ಕೊಡತಕ್ಕಂಥ ಹಣ ಬೇರೆ ಎಂದು ಅವರು ಹೇಳಿದರು ನಿಜ ನಾನು ಒಪ್ಪಿಕೊಳ್ಳುತ್ತೇನೆ. ಹಣ ಯಾರದೇ ಆಗಿರಲಿ ಜನಗಳಿಗೆ ಕುಡಿಯುವ ನೀರು ಬಹಳ ಮುಖ್ಯ. ಇದು ಜಿಲ್ಲಾ ಪರಿಷತ್ತು ಬೋರ್‌ವೆಲ್. ಇದರಲ್ಲಿ ಒಂದು ತರಹ ನೀರು ಸರ್ಕಾರದಿಂದ ಬರಗಾಲ ಕಾಮಗಾರಿಯಲ್ಲಿ ಮಾಡಿಸುತ್ತಿರುವಂತಹ ಬೋರ್‌ವೆಲ್. ಇದರಲ್ಲಿ ಬೇರೆ ಒಂದು ತರಹದ ಬಣ್ಣದ ನೀರು ಬರುತ್ತದೆಂದು ಏನಾದರೂ ಇದೆಯೇ ಮಾನ್ಯ ಅಧ್ಯಕ್ಷರೇ? ಇರತಕ್ಕಂಥಾದ್ದು ಎಲ್ಲಾ ಒಂದೇ ನೀರು. ಒಟ್ಟಿನಲ್ಲಿ ಜನಗಳಿಗೆ ನೀರು ಬೇಕು. ನಾವು ಈಗಾಗಲೇ ಸರ್ಕಾರದಲ್ಲಿ ಮನವಿ ಮಾಡಿದ್ದೇವೆ. ಅಲ್ಲಿ ಈಗಾಗಲೇ ಕೆಲಸ ನಡೆಯುತ್ತಿದೆ. ಕೊಳವೆ ಬಾವಿಗಳು ಆಗುತ್ತಿವೆ. ಜಿಲ್ಲಾ ಪರಿಷತ್ತಿನಿಂದ ಇವತ್ತು ಸಂಪೂರ್ಣವಾಗಿ ಕೆಲಸ ನಿಂತು ಹೋಗಿದೆ. ಅಲ್ಲಿ ಏನೂ ಕೆಲಸ ಆಗುತ್ತಿಲ್ಲ. ಆದ್ದರಿಂದ ಸರ್ಕಾರ ನಾಳೆ ನಾಡಿದ್ದು ತೀರ್ಮಾನ ತೆಗೆದುಕೊಂಡರೆ ಹೇಗೆ? ಈ ಸದನದಲ್ಲಿ ತಾವು ಹೇಳಬೇಕು. ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ ಸರ್ಕಾರದ ಬಳಿ ಇದೆ. ನಮ್ಮ ಕಷ್ಟವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇವೆ. ದಯಮಾಡಿ ಈಗಲೇ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

## ಕಾವೇರಿ ನೀರು ಹಂಚಿಕೆ 6-9-91

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರಗಳು ಬದಲಾವಣೆಗಳಾಗಿವೆ. ಮೊದಲು ಕಾಂಗ್ರೆಸ್ ಸರ್ಕಾರವಿತ್ತು. ಆಮೇಲೆ ಜನತಾ ಸರ್ಕಾರ ಅಧಿಕಾರದಲ್ಲಿತ್ತು ಪುನಃ ಕಾಂಗ್ರೆಸ್ ಸರ್ಕಾರ ಈಗ ಅಧಿಕಾರಕ್ಕೆ ಬಂದಿದೆ. ಸರ್ಕಾರಗಳು ಬದಲಾವಣೆ ಆಗಿದ್ದರೂ ಸಹ ನೀರು ಹಂಚಿಕೆ ವಿಚಾರದಲ್ಲಿ ಸ್ಪಷ್ಟವಾದಂತಹ ನಿಲುವು ತಳೆದಿರತಕ್ಕದ್ದು ಇವತ್ತು ನಮ್ಮ ಮುಂದಿದೆ. ಆ ನಿಲುವು ಏನೆಂದರೆ ಅಕ್ಕ ಪಕ್ಕದ ರಾಜ್ಯಗಳು ಮಧುರ ವಾತಾವರಣದಲ್ಲಿ ಇರಬೇಕಾಗುತ್ತದೆ. ಆ ಮಧುರವಾದ ವಾತಾವರಣದಲ್ಲಿ ಕೊಟ್ಟು ಮತ್ತು ತೆಗೆದುಕೊಳ್ಳುವಂತಹ ಒಂದು ನೀತಿಯನ್ನು ಅನುಸರಿಸಿ ನದಿ ನೀರಿನ ಹಂಚಿಕೆ ಆಗಬೇಕೆನ್ನುವ ಕರ್ನಾಟಕದ ವಾದ ಏನಿತ್ತು ಅದು ಇವತ್ತಿನ ದಿವಸ ಸರ್ವೋಚ್ಚ ನ್ಯಾಯಾಲಯದಲ್ಲೂ ಕೂಡ ಪ್ರತಿಬಿಂಬವಾಗಿದೆ. ಸರ್ವಪಕ್ಷಗಳ ನಿಯೋಗವನ್ನು ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ ಅವರ ಮುಂದೆ ಹೋದಾಗ ಇದೇ ಮಾತನ್ನು ಹೇಳಿದ್ದೇವೆ. ಸಂಬಂಧಪಟ್ಟ ರಾಜ್ಯಗಳಾದ ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಪಾಂಡಿಚೇರಿ ರಾಜ್ಯಗಳವರನ್ನು ಕರೆದು ಒಂದು ಮಧುರವಾದ ವಾತಾವರಣದಲ್ಲಿ ಇದನ್ನು

ಬಗೆಹರಿಸಿ ಎನ್ನತಕ್ಕ ಬೇಡಿಕೆಯನ್ನು ಇಟ್ಟಿದ್ದೆವು. ಅದು ನಾನಾ ಕಾರಣಗಳಿಂದ ಈಡೇರಲಿಲ್ಲ. ಆಗ ಏಕಪಕ್ಷೀಯ ವಾದ ತೀರ್ಮಾನವನ್ನು ಕೇಂದ್ರ ಸರ್ಕಾರ ತೆಗೆದುಕೊಂಡಿತ್ತು. ಅದರಿಂದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಇವೊತ್ತಿನ ದಿವಸ ಟ್ರಿಬ್ಯುನಲ್ ರಚನೆಯಾಗಿದೆ. ಎರಡೂ ರಾಜ್ಯಗಳ ಒಟ್ಟಾಭಿಪ್ರಾಯಕ್ಕಾಗಲಿ ಅಥವಾ ಎರಡೂ ರಾಜ್ಯಗಳ ಮಧುರ ಸಂಬಂಧಕ್ಕಾಗಲಿ ಧಕ್ಕೆ ಬರತಕ್ಕ ರೀತಿಯಲ್ಲಿ ಇಲ್ಲಿಯವರೆಗೆ ನಡವಳಿಕೆಗಳು ನಡೆದಿದೆ. ಇನ್ನು ಮುಂದಾದರೂ ಆ ದಾರಿಯನ್ನು ಬಿಡಬೇಕು ಎರಡೂ ರಾಜ್ಯಗಳು ಘರ್ಷಣೆಯ ಹಾದಿಯನ್ನು ಬಿಟ್ಟು ಸಂಬಂಧಪಟ್ಟ ರಾಜ್ಯಗಳವರು ಒಂದು ಕಡೆ ಕುಳಿತು ಚರ್ಚೆ ಮಾಡಿ ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಮಾರ್ಗದರ್ಶನ ಸಿಕ್ಕಿದೆ. ಇದನ್ನು ನಮ್ಮ ಸರ್ಕಾರ ಉಪಯೋಗಿಸಿಕೊಳ್ಳುವುದು ಅತಿ ಅವಶ್ಯಕತೆಯಿದೆ. ಇದನ್ನು ನಾನು ಸ್ವಾಗತ ಮಾಡಿ ನಮ್ಮ ಸರ್ಕಾರ ಇವತ್ತಿನ ದಿವಸ ಇದಕ್ಕೆ ಮುಂದಾಗಬೇಕು, ಇತರೆ ರಾಜ್ಯಗಳ ಜೊತೆಯಲ್ಲಿ ಸಂಪರ್ಕವನ್ನು ಬೆಳೆಸಿ ಮಧುರ ವಾತಾವರಣದಲ್ಲಿ ಒಳ್ಳೆಯ ರೀತಿಯಲ್ಲಿ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

## ಕಾವೇರಿ ನೀರು: ಒಂದು ಪ್ರಶ್ನೋತ್ತರ 10-9-91

ಪಿ.ಜಿ.ಆರ್. ಸಿಂಧ್ಯಾ :- ಸಾಧ್ಯವಾದರೆ ಉಳಿದರೆ ಕೋಲಾರದವರು ಕೇಳುತ್ತಿದ್ದಾರೆ ಪಾಪ ಅವರಿಗೂ ಕೊಡಿ ನಮ್ಮದೇನೂ ತಕರಾರು ಇಲ್ಲ.

ಶ್ರೀ ವಾಟಾಳ್ ನಾಗರಾಜ್ :- ಏನೋ ಪಾಪ ಎಂದು ಹೇಳುತ್ತಿದ್ದಾರಲ್ಲ ಇಲ್ಲಿ ಪಾಪ ಪುಣ್ಯದ ಪ್ರಶ್ನೆ ಇಲ್ಲ ಸ್ವಾಮಿ. ಬೆಂಗಳೂರಿಗೆ ತರುತ್ತಿರುವ ನೀರನ್ನು ನಿಮಗೆ ಕೊಡುತ್ತೇವೆ. ನಿಮಗೇ ಪಾಪ ಎನ್ನಬೇಕೇ ಹೊರತು ಅವರಿಗಲ್ಲ. ನಿಮಗೆ ನಾವು ನೀರು ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಮಾನ್ಯ ಸಿಂಧ್ಯರವರು ಅರ್ಥ ಮಾಡಿಕೊಳ್ಳಬೇಕು ಇಲ್ಲಿ ಪಾಪದ ಪ್ರಶ್ನೆ ಬರುವುದಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಕೋಲಾರ, ಹೊಸಕೋಟೆ, ಬಂಗಾರಪೇಟೆ, ಗೌರಿಬಿದನೂರು ಇವೆಲ್ಲಾ ಕರ್ನಾಟಕದಲ್ಲೇ ಇರತಕ್ಕದ್ದು ಎಂದು ತಿಳಿದುಕೊಳ್ಳಬೇಕು. ಪಾಪ ಎಂದರೆ ಏನು ಅರ್ಥ ಪಾಪ ಎಂದು ಹೇಳುತ್ತಿದ್ದೀರಲ್ಲ, ಇದರ ಅರ್ಥ ಏನು?

(ಗೊಂದಲ)

ಉಪಾಧ್ಯಕ್ಷರು :- ನೀರು ಕೊಟ್ಟರೆ ಪುಣ್ಯ ಬರುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ :– ಅಪಾಲಜಿ ಕೇಳಬೇಕಾ ಏನಾಗಬೇಕು ಹೇಳಿರಿ.

ಶ್ರೀ ಸಿ. ಬೈರೇಗೌಡ :– ಕೊಟ್ಟೇ ಕೊಡಬೇಕೆಂದು ಹೇಳಿರಿ ದಯವಿಟ್ಟು ಕೊಡಬೇಕೆಂದು ಹೇಳಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :– ಆಯಿತು ಪಾಪನೋ ಪುಣ್ಯಾನೋ ಅವರಿಗೂ ನೀರು ಕೊಡಿರಿ.

ಶ್ರೀ ಸಿ. ಬೈರೇಗೌಡ :– ನಾನು ಅಧ್ಯಕ್ಷನಾಗಿದ್ದಾಗಲೇ 100 ಕೋಟಿ ರೂ. ಯೋಜನೆ ಬಗ್ಗೆ ಗಮನಹರಿಸಿದ್ದು, ಹೋದಸಾರಿಯೇ ಇದನ್ನು ಪರಿಶೀಲನೆ ಮಾಡುತ್ತೇವೆಂದಿದ್ದರು. ಈಗ ಅದು 250 ಕೋಟಿಗೆ ಮುಟ್ಟಿದೆ.

ಶ್ರೀ ಕೆ.ಎಚ್. ರಂಗನಾಥ್ :– ಬಿಡುವುದಕ್ಕೆ ನೀರು ಇರಬೇಕಲ್ಲವೆ?

ಶ್ರೀ ಸಿ. ಬೈರೇಗೌಡ :– Drinking water always gets priority. ಇದು ನಿಮ್ಮ ಇಂಟರ್ ಸ್ಟೇಟ್ ರಿವರ್ ವಾಟರ್. ಕುಡಿಯುವ ನೀರಿನ ಬಗ್ಗೆ ಯಾರೂ ಅಡ್ಡಿ ಮಾಡುವುದಕ್ಕಾಗುವುದಿಲ್ಲ. ಕಾವೇರಿಯಲ್ಲಿ ನೀರು ಇಲ್ಲವೇ? ಈ ಯೋಜನೆ ಆಗುತ್ತದೋ ಇಲ್ಲವೋ ಎಂದು ಒಂದು ನಿರ್ದಿಷ್ಟವಾಗಿ ಹೇಳಿ. ಹೋದಸಾರಿ ಪರಶೀಲಿಸುವುದಾಗಿ ಹೇಳಿದ್ದೀರಿ.

ಶ್ರೀ ಕೆ.ಎಚ್. ರಂಗನಾಥ್ :– ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ಬೆಂಗಳೂರಿಗೆ ಆಗಿ ಉಳಿದ ನೀರನ್ನು ನಿಮಗೆ ಕೊಡಬೇಕು. ಸುಮ್ಮನೆ ಕೊಡುತ್ತೇವೆ ಎಂದು ಹೇಳಿ ಇಲ್ಲಿನ ಜನರಿಗೇ ನೀರು ಇಲ್ಲದೇ ಅವರು ಸತ್ತು ಹೋದರೆ ಏನು ಮಾಡುತ್ತಾರೆ? ಮೊದಲು ಎಲ್ಲವನ್ನೂ ಕೂಲಂಕುಷವಾಗಿ ನೋಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ :– ಕಡೇ ಪಕ್ಷ ಡೀಟೈಲ್ ಎಸ್ಟಿಮೇಟ್ ಅನ್ನಾದರೂ ಮಾಡಿ. ಹಣಕಾಸಿನ ವ್ಯವಸ್ಥೆ ಬಗ್ಗೆ ಕೂಡ ನೋಡಬೇಕೆಂದು ಹೇಳಿದ್ದಾರೆ. ಇವತ್ತು ಕೆಜಿಎಫ್‌ನಲ್ಲಿ ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳು ಇದ್ದಾರೆ. ಅವರನ್ನು ಕರೆಯಿಸಿ ಮಾತನಾಡಿ, ಎಲ್‌ಐಸಿಯಿಂದ ಕೊಡುತ್ತಾರೆ, ವಿಶ್ವಬ್ಯಾಂಕಿನವರು ಹಣ ಕೊಡುತ್ತಾರೆ. ಅಲ್ಲಿರತಕ್ಕ ಮುನಿಸಿಪಾಲಿಟಿಯವರನ್ನು ಕರೆಯಿಸಿ ಮಾತನಾಡಿ. ಇದು ಮಲ್ಟಿ ಜಾಯಿಂಟ್ ವೆಂಚರ್ ಆಗಬೇಕಾಗುತ್ತದೆ. ಈ ಯೋಜನೆ ಮಾಡುತ್ತೇವೆಂದರೆ ಜನರೂ ಕೂಡ ಹಣವನ್ನು ಅಡ್ವಾನ್ಸ್ ಆಗಿ ಕೊಡುವುದಕ್ಕೆ ಮುಂದೆ ಬರುತ್ತಾರೆಂದು ನಂಬಿಕೆ ನನಗೆ ಇದೆ. ಆದ್ದರಿಂದ ಈ ಬಗ್ಗೆ ಪಾಸಿಟೀವ್ ಅಷ್ಯೂರೆನ್ಸ್ ಕೊಡಿ.

## ಕೋಲಾರದಲ್ಲಿ ವಿದ್ಯುತ್ ಉತ್ಪಾದನೆ 12-3-91

ಶ್ರೀ ಸಿ. ಬೈರೇಗೌಡ :– ಹಿಂದೆ ಕೋಲಾರದಲ್ಲಿ ಒಂದು ಜನರೇಟಿಂಗ್ ಸ್ಟೇಷನ್ ಸ್ಥಾಪನೆ ಮಾಡಬೇಕು ಎಂಬ ಬಗ್ಗೆ ಸರ್ಕಾರ ಒಂದು ತೀರ್ಮಾನ ಮಾಡಿತು. ಆದರೆ ಅದು ಕಾರ್ಯಗತ ಆಗಲಿಲ್ಲ. ಈಗ ಹೊಸದಾಗಿ ತಾವು ಖಾಸಗಿ ರಂಗದಲ್ಲಿದ್ದವರನ್ನು ಆಹ್ವಾನ ಮಾಡುವವರಿದ್ದೀರಿ. ಇಂತಹ ಸಂದರ್ಭದಲ್ಲಿ ಕೋಲಾರದಲ್ಲಿ ಒಂದು ಜನರೇಟಿಂಗ್ ಸ್ಟೇಷನ್

ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಡೀಸಲ್ ಆಗಬಹುದು ಅಥವಾ ಥರ್ಮಲ್ ಆಗಬಹುದು. ಯಾವುದಾದರೂ ಒಂದನ್ನು ಹಾಕುವುದಕ್ಕೆ ತಾವು ಆಶ್ವಾಸನೆ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ :- ಈ ವಿಚಾರ ಕೂಡ ಪಟ್ಟಿಯಲ್ಲಿದೆ. ಕೋಲಾರವನ್ನು ಒಳಗೊಂಡಂತೆ ಸುಮಾರು 4-5 ಕಡೆಗಳಲ್ಲಿ ಹಾಕತಕ್ಕಂಥ ಯೋಚನೆ ಇದೆ. ಈಗ ನಾವು ಯಲಹಂಕದಲ್ಲಿ ಏನು ಮಾಡುತ್ತಿದ್ದೇವೆ ಅದೇ ರೀತಿಯಾಗಿ ಕೋಲಾರ ಕೂಡ ಅದರಲ್ಲಿ ಸೇರಿಕೊಂಡಿದೆ. ನಮ್ಮ ಆದ್ಯತಾ ಪಟ್ಟಿಯಲ್ಲಿ ಕೂಡ ಅದು ಇದೆ. ಅದಕ್ಕೆ ನಾವು ಗಮನ ಕೊಟ್ಟಿದ್ದೇವೆ. ಏಕೆಂದರೆ ಡೀಸಲ್ ಪರಿಸ್ಥಿತಿಯಲ್ಲಿ ಇನ್ನು ಮುಂದೆ ತೊಂದರೆ ಬರಲಾರದು ಈಗ ತೊಂದರೆ ಬಂದರೂ ಕೂಡ ಒಂದು ವೇಳೆ ಗಲ್ಫ್‌ವಾರ್ ನಿಂತಿರಲಿಲ್ಲ ಎಂದು ಇಟ್ಟುಕೊಳ್ಳೋಣ, ಅದು ಯಾವಾಗಲೂ ನಡೆದುಕೊಳ್ಳುತ್ತಾ ಇರುವುದಕ್ಕೆ ಆಗುವುದಿಲ್ಲ. ಅಷ್ಟರೊಳಗೆ ನಾವು ಸಿದ್ಧತೆಗಳನ್ನು ಮಾಡಿಕೊಂಡು ರೆಡಿ ಇರಬೇಕಾಗುತ್ತದೆ. ಕೋಲಾರವನ್ನು ನಾವು ಪಟ್ಟಿಯಲ್ಲಿ ಇಟ್ಟುಕೊಂಡಿದ್ದೇವೆ.

## ಜಿಲ್ಲೆಯ ವಿದ್ಯುತ್ ಸ್ಥಿತಿ 14-3-91

ಶ್ರೀ ಸಿ. ಬೈರೇಗೌಡ :- ವಿದ್ಯುಚ್ಛಕ್ತಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅದರ ಬಗ್ಗೆ ಮಂತ್ರಿಗಳು ಹೇಳಿಕೆ ಕೊಡುವುದು ಇದ್ದರೆ ಅದು ಮೊದಲು ಆಗಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಕೋಲಾರ ಜಿಲ್ಲೆಯ ಕೋಲಾರ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಂಗಾರಪೇಟೆ ಮತ್ತು ಇತರ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಿಗೆ ದಿನವಹಿ 15 ಗಂಟೆಗಳ ಕಾಲ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುತ್ತಿದೆ. ಚಿಂತಾಮಣಿ ತಾಲ್ಲೂಕಿಗೆ 12ನೇ ಮಾರ್ಚ್ 1991ರಂದು ಬೆಳಿಗ್ಗೆ 10-37 ಗಂಟೆಯಿಂದ ಸಂಜೆ 5-30 ಗಂಟೆಯವರೆಗೆ ಗೌರಿಬಿದನೂರು- ಚಿಂತಾಮಣಿಯ 66 ಕೆ.ವಿ. ಪ್ರಸರಣ ಲೈನ್, ಬೈಲಸಂದ್ರದ ಬಳಿ ಕಡಿದುಹೋಗಿ ಅಲ್ಲಿ ವಿದ್ಯುಚ್ಛಕ್ತಿ ಸರಬರಾಜಿಗೆ ಅಡಚಣೆ ಉಂಟಾಯಿತು. ಕಡಿದು ಹೋದ ಲೈನನ್ನು ದುರಸ್ತಿ ಮಾಡಿ 12ನೇ ಮಾರ್ಚ್ 1991ರಂದು ಸಂಜೆ 5-30 ಗಂಟೆಗೆ ವಿದ್ಯುಚ್ಛಕ್ತಿ ಮಂಡಳಿಯ ತುಮಕೂರು ವೃತ್ತದ ಅಧೀಕ್ಷಕ ಅಭಿಯಂತರ ವಿದ್ಯುತ್ ಅವರನ್ನು ಮತ್ತು ಚಿಕ್ಕಬಳ್ಳಾಪುರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರನ್ನು ಚಿಂತಾಮಣಿಗೆ ಕಳುಹಿಸಿದ್ದು, ಅವರು ಧರಣಿ ಕುಳಿತಿರುವ ರೈತರನ್ನು ಸಾಂತ್ವನಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ತಿಳಿಸಿರುವಂತೆ 8ನೇ ಮಾರ್ಚ್ 1991 ರಂದು ಕೋಲಾರದಲ್ಲಿ 2-5 ಎಂ.ವಿ. 66-11 ಕೆ.ವಿ. ಪರಿವರ್ತಕಗಳನ್ನು ಚಾಲನೆ ಮಾಡಲಾಗಿದೆ. ಇದರಿಂದಾಗಿ, ಕೋಲಾರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿ ಉತ್ತಮಗೊಂಡಿದೆ.

ಮುಳಬಾಗಿಲಿನ 66 ಕೆ.ವಿ. ಲೈನು ಮುಗಿಯುವ ಹಂತದಲ್ಲಿದ್ದು, ಈ ತಿಂಗಳ ಕೊನೆಯ ವೇಳೆಗೆ ಇದರ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ವಿಜಯಪುರ 66 ಕೆ.ವಿ. ಲೈನು ಒಂದು ವಾರದಲ್ಲಿ ಮುಗಿಯುತ್ತದೆ. ಈ ಹೊಸ ಲೈನುಗಳನ್ನು ಚಾಲನೆ ಮಾಡುವುದರಿಂದ ಮುಳಬಾಗಿಲು, ವಿಜಯಪುರ, ಶಿಡ್ಲಘಟ್ಟಗಳಲ್ಲಿ ವಿದ್ಯುತ್ ಬಲ ಉತ್ತಮಗೊಳ್ಳುತ್ತದೆ. ಚಿಕ್ಕಬಳ್ಳಾಪುರಕ್ಕೆ ಪೀಣ್ಯದಿಂದ ಹಿಂದಿದ್ದ ಸರಬರಾಜನ್ನು ತಪ್ಪಿಸಿ, ಈಗ ಸುಮಾರು 15 ದಿವಸಗಳಿಂದ ಗೌರಿಬಿದನೂರಿನಿಂದ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿರುವುದರಿಂದ ಅಲ್ಲೂ ಸಹ, ವಿದ್ಯುತ್ ಬಲವು ಉತ್ತಮಗೊಂಡಿದೆ. ವಿದ್ಯುಚ್ಛಕ್ತಿ ಮಂಡಳಿಯು ರೈತರ ಮತ್ತು ಎಲ್ಲಾ ವರ್ಗದ ಬಳಕೆದಾರರ ಕಷ್ಟ-ಸುಖಗಳನ್ನು ಗಮನದಲ್ಲಿರಿಸಿ, ಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ನಿವಾರಿಸುವುದಕ್ಕೆ ಸರ್ವ ವಿಧಗಳಲ್ಲೂ ಪ್ರಯತ್ನಗಳನ್ನು ಮಾಡುತ್ತಿದೆ. ಮಂಡಳಿಯ ಅಧ್ಯಕ್ಷರು, ಇತರ ಉನ್ನತ ಅಧಿಕಾರಿಗಳೊಂದಿಗೆ ಕೋಲಾರ ಜಿಲ್ಲೆಯ ಮೇಲ್ಕಂಡ ತಾಲ್ಲೂಕುಗಳಿಗೆ 28ನೇ ಫೆಬ್ರವರಿ 1991ರಂದು ಖುದ್ದಾಗಿ ಭೇಟಿ ನೀಡಿ ರೈತರು ಮತ್ತು ಸ್ಥಳೀಯ ಶಾಸಕರುಗಳನ್ನು ಸಂಪರ್ಕಿಸಿ ಅವರ ಕುಂದು ಕೊರತೆಗಳನ್ನು ಅರಿತು ತುರ್ತು ಕೆಲಸಗಳಿಗೆ ಸ್ಥಳದಲ್ಲೇ ಆದೇಶಗಳನ್ನು ನೀಡಿ, ಪರಿಸ್ಥಿತಿ ಉತ್ತಮಗೊಳ್ಳುವುದಕ್ಕೆ ಏರ್ಪಾಡು ಮಾಡಿದ್ದಾರೆ. ಇನ್ನೂ ಸಮಸ್ಯೆ ಉಳಿದಿದ್ದರೆ ನಾವು ಕೆ.ಇ.ಬಿ. ಯ ಉನ್ನತ ಅಧಿಕಾರಿಗಳನ್ನು ಪುನಃ ಕಳಿಸೋಣ. ಅದರ ಮಾಹಿತಿ ತರಿಸಿ ಎಲ್ಲೆಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ :- ಸರ್ಕಾರಕ್ಕೂ ನಮಗೂ ತಕರಾರು ಇರತಕ್ಕದ್ದು ಎಲ್ಲಿ ಎಂದರೆ, ದಿವಸದಲ್ಲಿ 15 ಗಂಟೆ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. 15 ಗಂಟೆ ಅಲ್ಲ, ಒಂದೊಂದು ದಿವಸ 5-6 ಗಂಟೆ ಕೂಡ ವಿದ್ಯುತ್ ಸರಬರಾಜು ಆಗುತ್ತಿಲ್ಲ.

**ಅಧ್ಯಕ್ಷರು** :- ಕಾರಣ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ :- ಇದು ಪ್ರತಿನಿತ್ಯ ಆಗುತ್ತಿರುವಂಥಾದ್ದು. ಮಾನ್ಯ ಮಂತ್ರಿಗಳು 15 ಗಂಟೆ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ ಎಂದು ಹೇಳುವುದು ಬರೇ ಕಾಗದದ ಮೇಲಿದೆ ಅಷ್ಟೆ. ವಾಸ್ತವಿಕವಾಗಿ ಈ ಪರಿಸ್ಥಿತಿ ಅಲ್ಲಿ ಇಲ್ಲ. ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಬರುವ ಹಾಗಿದ್ದರೆ ಬನ್ನಿ, ಈಗಲೇ ಹೋಗೋಣ, ನೀವು ಹೇಳಿದ ಹೇಳಿಕೆ ನಿಜವಾದರೆ ನಾನು ಬೇಷರತ್ ಕ್ಷಮೆ ಬೇಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ತಾವು ಹೇಳಿಕೆಯನ್ನು ತಪ್ಪಾಗಿ ಕೊಟ್ಟಿದ್ದೀರಿ ಅಥವಾ ಮರೆಮಾಚಿ ಕೊಟ್ಟಿದ್ದೀರಿ ಎಂದು ನಾನು ಆಪಾದನೆ ಮಾಡುತ್ತಿಲ್ಲ. ತಾವು ಪರಿಸ್ಥಿತಿ ಹೀಗೆ ಇದೆ ಎಂದು ಹೇಳಿದ್ದೀರಿ. ಒಂದು ಮಾತನ್ನು ತಮಗೆ ಹೇಳುವುದಿದ್ದರೆ ಕೋಲಾರ ಜಿಲ್ಲೆಯಲ್ಲಿ ಈಗ ಆಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಎಲೆಕ್ಟ್ರಿಸಿಟಿ ಫೆಸಿಲಿಟಿ ಏನಿದೆ, ಅದು ಬಹುಶಃ ಕರ್ನಾಟಕ ರಾಜ್ಯದ ಬೇರೆ ಯಾವ ಜಿಲ್ಲೆಯಲ್ಲೂ ಆಗಿದೆಯೆಂದು ನನಗನ್ನಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ :- ಈ ಮಾತನ್ನು ರೈತರ ಎದುರಿಗೆ ಬಂದು ಹೇಳಿ. ಸ್ಥಳ ಪರಿಶೀಲನೆ ಮಾಡಿ, ಇದನ್ನು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಈಗ ಎರಡನೆಯ ಪ್ರಶ್ನೆ ಏನೆಂದರೆ, ಕೆಲವು ಸಮಸ್ಯೆಗಳು ಇನ್ನೂ ಕೂಡ ಪರಿಹಾರ ಆಗತಕ್ಕದ್ದು ಇದೆ ಆಗಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಕೆಇಬಿಯ ಉನ್ನತ ಅಧಿಕಾರಿಯನ್ನು ಇವತ್ತೇ ಕಳಿಸಿ, ಅದನ್ನು ಪರಿಶೀಲನೆ ಮಾಡಿ......

ಶ್ರೀ ಸಿ. ಬೈರೇಗೌಡ :- ಚೀಫ್ ಇಂಜಿನಿಯರ್ ಅವರನ್ನೇ ಕಳಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಆಗಲಿ, ಅವರನ್ನೇ ಕಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಈ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಎಲ್ಲ ವಿರೋಧ ಪಕ್ಷಗಳ ಮುಖಂಡರ ಸಭೆ ಕರೆಯುವುದಾಗಿ ಹೇಳಿದ್ದೀರ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸಮಸ್ಯೆ ಇರತಕ್ಕಂಥ ಜಿಲ್ಲೆಗಳ ಶಾಸಕರ ಸಭೆ ಮಾಡುವುದಕ್ಕೆ ಅಡ್ಡಿ ಇಲ್ಲ. ಸಭೆ ಕರೆಯುವುದು ಒಂದು ಭಾಗ. ಇದಕ್ಕಿಂತ ಹೆಚ್ಚಾಗಿ ಆಕಸ್ಮಿಕವಾಗಿ ಪ್ರಚಲಿತವಾದ ಸಮಸ್ಯೆಗಳು ಏನಿವೆ, ಅದನ್ನು ಪರಿಹಾರ ಮಾಡುವುದಕ್ಕೆ K.E.B. is fully engaged in this task. ಅದನ್ನು ಮಾಡೋಣ. ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ಸಭೆ ಕರೆಯುವುದಕ್ಕೆ ನಾವು ಏರ್ಪಾಡು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ :- ಇನ್ನೊಂದು ಏನೆಂದರೆ....

ಅಧ್ಯಕ್ಷರು :- ಚರ್ಚೆ ಸಾಧ್ಯವಾಗುವುದಿಲ್ಲ, ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಚೀಫ್ ಇಂಜಿನಿಯರ್ ಬರುತ್ತಾರೆ, ಅವರ ಜೊತೆಗೆ ನೀವು ಹೋಗಿ ಹೇಳಿ.

ಶ್ರೀ ಸಿ. ಬೈರೇಗೌಡ :- ಹೈಟೆನ್ಷನ್ ಪವರ್ ಅನ್ನು ಕೊಡತಕ್ಕಂಥ.....

ಅಧ್ಯಕ್ಷರು :- ಸಾಕು ಬಿಡಿ.

ಶ್ರೀ ಸಿ. ಬೈರೇಗೌಡ :- ಸರ್ಕಾರದಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು :- ಬೈರೇಗೌಡ, ತಾವು ಸಾಕಷ್ಟು ಸದನದ ಗಮನ ಸೆಳೆದಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ :- ಆದರೆ ಸರ್ಕಾರದವರು ಉತ್ತರ ಹೇಳಿಲ್ಲ.

ಅಧ್ಯಕ್ಷರು :- ಅವರು ಉತ್ತರ ಹೇಳಿ ಆಯಿತು. ಚೀಫ್ ಇಂಜಿನಿಯರ್ ಅವರನ್ನು ಕಳಿಸಿಕೊಡುತ್ತೇನೆ ಎಂದು ಹೇಳಿದ್ದಾರೆ. ಈಗ ಶ್ರೀ ಎಂ.ವಿ. ವೆಂಕಟಪ್ಪ.....

ಶ್ರೀ ಸಿ. ಬೈರೇಗೌಡ :- ಕಾರ್ಖಾನೆಗಳಿಗೆ ಪವರ್ ಕಟ್ ಹೆಚ್ಚು ಮಾಡಿ ಅದನ್ನು ವ್ಯವಸಾಯಕ್ಕೆ ಕೊಡಿ ಎಂದು ಹೇಳುತ್ತಿದ್ದೇನೆ. ಇದನ್ನು ಏಪ್ರಿಲ್ ಮಧ್ಯಭಾಗದವರೆಗೆ ಕೊಟ್ಟರೂ ಸಾಕು. 15-20 ದಿವಸ ಹೆಚ್ಚಿಗೆ ಕರೆಂಟನ್ನು ವ್ಯವಸಾಯಕ್ಕೆ ಕೊಡಿ, ಅದು ಮಾಡುವುದಕ್ಕೆ ಸಾಧ್ಯವಿದೆ, ಮಾಡಬಹುದು, ಹಿಂದೆ ಕೂಡ ಮಾಡಿದೆ.

ಶ್ರೀ ಎಂ.ವಿ. ವೆಂಕಟಪ್ಪ :- ಮುಳಬಾಗಲಿನಲ್ಲಿ 66 ಕೆ.ವಿ. ಲೈನ್ ಏನಿದೆ, ಅದನ್ನು 31ನೇ ಮಾರ್ಚಿಯೊಳಗೆ ಮುಗಿಸುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದರು, ಈಗ ಮಂತ್ರಿಗಳೂ

ಹೇಳುತ್ತಿದ್ದಾರೆ. ನಮಗೆ ಬಂದಿರತಕ್ಕ ಮಾಹಿತಿ ಪ್ರಕಾರ, ಮಾರ್ಚ್ 31ರೊಳಗೆ ಮುಗಿಯುವ ಚಾನ್ಸಸ್ ಇರುವುದಿಲ್ಲ. 31ನೇ ತಾರೀಖಿನೊಳಗೆ ಆಗದಿದ್ದರೆ ಅಂತಹ ಅಧಿಕಾರಿಗಳನ್ನು ಏನು ಮಾಡಬೇಕು.

ಶ್ರೀ ಸಿ. ಬೈರೇಗೌಡ :- ನಮ್ಮ ಪರಿಸ್ಥಿತಿಯನ್ನು ದಯವಿಟ್ಟು ಅರ್ಥಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಕಾರಣ ಏನೆಂದರೆ, ಸಾವಿರಾರು ಎಕರೆಯಲ್ಲಿ ಬೆಳೆದಿರತಕ್ಕ ಟೊಮ್ಯಾಟೊ, ಆಲೂಗಡ್ಡೆ ಮತ್ತು ತರಕಾರಿ ಬೆಳೆಗಳು ಎಲ್ಲವೂ ಸರ್ವನಾಶವಾಗುತ್ತಿವೆ. ರೈತರ ಬಗ್ಗೆ ಅದರಲ್ಲೂ ನಮ್ಮ ಜಿಲ್ಲೆಯ ರೈತರಿಗೆ ಕುಡಿಯುವುದಕ್ಕೆ ನೀರು ಸಿಕ್ಕುತ್ತಾ ಇಲ್ಲ. ದಯಮಾಡಿ ನಮ್ಮ ಮೇಲೆ ಕನಿಕರ ತೋರಿಸಬೇಕೆಂದು ವಿನಂತಿಸುತ್ತೇನೆ. ಅಲ್ಲಿನ ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೋ ಅಷ್ಟು ಗಂಭೀರವಾಗಿ ಸರ್ಕಾರ ಪರಿಶೀಲನೆ ಮಾಡುತ್ತಾ ಇಲ್ಲ, ಗಮನಕ್ಕೆ ತೆಗೆದುಕೊಂಡಿಲ್ಲ. ಅದೇ ನಮಗೆ ಇರತಕ್ಕ ತಾಪತ್ರಯ. ಆದುದರಿಂದ ಅವರು ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಇವತ್ತಿಗೆ ಮೂರನೇ ದಿವಸ.

**ಅಧ್ಯಕ್ಷರು** :- ಬೆಳೆಯನ್ನು ಉಳಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ...

ಶ್ರೀ ಎಂ. ವೀರಪ್ಪ ಮೊಯಿಲಿ :- ಆ ಪ್ರಯತ್ನವನ್ನು ಇವತ್ತು ಮಾಡುತ್ತಿದ್ದೇವೆ. ಪ್ರಶ್ನೆ ಬರೀ ವಿದ್ಯುತ್ ಕೊಡುವುದಿಲ್ಲ, ನಾನು ವಿಶ್ಲೇಷಣೆಗೆ ಹೋಗುವುದಿಲ್ಲ. ಕೆಲವು ಸಾರಿ ವಿದ್ಯುತ್ ಜಾಸ್ತಿ ಕೊಟ್ಟರೂ ಸಹ The system is not in a position to absorb in many of the places. ಈ ಪರಿಸ್ಥಿತಿ ಇದೆ, ತಮಗೂ ಗೊತ್ತಿರಬಹುದು. ಯಾವುದೇ ಕೈಗಾರಿಕೆಯನ್ನು ನಿಲ್ಲಿಸಿ, ಅಲ್ಲಿನ ವಿದ್ಯುತ್ ಕೋಲಾರಕ್ಕೆ ಹೋಗತಕ್ಕ ಸಿಸ್ಟಂ ನಮ್ಮಲ್ಲಿ ಇದೆಯೇ? You have to develop that

ಶ್ರೀ ಸಿ. ಬೈರೇಗೌಡ :- ನಮ್ಮ ಜಿಲ್ಲೆಯ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಾ ಇಲ್ಲ. ಬರೀ ಕಾಗದದ ಮೇಲೆ ಹೇಳಿಕೆ ಕೊಡುತ್ತಾರೆ. 15 ಗಂಟೆ ಕಾಲ ವಿದ್ಯುತ್ ಕೊಡುತ್ತಿದ್ದೇವೆಂದು ಕಾಗದದ ಮೇಲೆ ಹೇಳಿಕೆ ಇದೆ. ಮಾನ್ಯ ವೀರಪ್ಪ ಮೊಯಿಲಿಯವರೇ ಇವತ್ತಿನ ದಿವಸ ಬರಲಿ. ಈ ಮಾತನ್ನು ಹಳ್ಳಿಗಳಲ್ಲಿ ರೈತರ ಮುಂದೆ ಹೇಳಲಿ, ಅವರು ಒಪ್ಪಿಕೊಳ್ಳಲಿ ನಾನು ಅಲ್ಲೇ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಅವರ ಕ್ಷಮೆ ಬೇಡುತ್ತೇನೆ. ಇವತ್ತು ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ, ತೀವ್ರವಾಗಿದೆ ಬೆಳೆಗೆ ಉಂಟಾಗಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ?

**ಅಧ್ಯಕ್ಷರು** :- ನಾನು ಏನು ಮಾಡಬೇಕೆಂದು ಹೇಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ :- ಕೆ.ಇ.ಬಿ. ಚೇರ್ಮನ್ ಹೋಗಿದ್ದಾರೆ, ಚೀಫ್ ಇಂಜಿನಿಯರ್ಸ್ ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ :- ಅದೆಲ್ಲಾ ನಿಜ ಆದರೆ.....

ಶ್ರೀ ಎಂ. ವೀರಪ್ಪ ಮೊಯಿಲಿ :– ತಾವೇ ನಿಂತು ಬಿಟ್ಟರೆ ನಾವು ಮಾತನಾಡಬೇಕೋ, ಬೇಡವೋ, Whether you want me to reply or not? We cannot just run the House like this. I am sorry.

**Mr. Speaker :-** You are right. We cannot run the House like this. Certainly, you are right. I concede to the point.

ಶ್ರೀ ಎಂ. ವೀರಪ್ಪ ಮೊಯಿಲಿ : ಫೆಬ್ರವರಿ 25ನೇ ತಾರೀಖು ಕೆಇಬಿ ಅಧ್ಯಕ್ಷರು ಹೋಗಿದ್ದರು. ಚೀಫ್ ಎಂಜಿನಿಯರ್ ಹೋಗಿದ್ದರು. ಅಲ್ಲಿ ಏನು ದುರಸ್ತಿ ಮಾಡಬೇಕೋ ಅದನ್ನೆಲ್ಲ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ತೊಂದರೆ ಇಲ್ಲ ಎಂದು ಹೇಳುವುದಿಲ್ಲ. ರೈತರ ಸಮಸ್ಯೆ ಜ್ವಲಂತವಾಗಿದೆ. ಇವತ್ತು ತಾವು ಹೊಸ ಸಮಸ್ಯೆಗಳನ್ನು ತಾವು ಹೇಳಿದಿರಿ. ನಾವು ಮುಖ್ಯ ಎಂಜಿನಿಯರ್‌ರವರನ್ನು ಇವತ್ತೇ ಕಳುಹಿಸುತ್ತೇವೆ. ಇವತ್ತೇ ಕಳಿಸಿ, ಅಲ್ಲಿ ಸ್ಥಳೀಯವಾಗಿ ಏನು ದುರಸ್ತಿ ಮಾಡಬೇಕು, ಏನು ಸಲಹೆ ಮಾಡುವುದಕ್ಕೆ ಸಾಧ್ಯ ಇದೆ, ಅದನ್ನು ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಇವತ್ತು ಇಷ್ಟು ಆಶ್ವಾಸನೆ ನಾವು ಕೊಡುತ್ತಿದ್ದೇವೆ.

Practically the whole KEb with lock, stock and barrel is in Kolar District Since ten days.

**Mr. Speaker :** It is shuttling between Mulbagal and Kolar...

ಶ್ರೀ ಎಚ್. ಏಕಾಂತಯ್ಯ :– ಅಲ್ಲೇ ಇದ್ದರೆ ನಮ್ಮ ಗತಿ ಏನು? ನಮ್ಮ ಕಡೆಗೂ ಹೋಗುವುದಕ್ಕೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸನ್ಮಾನ್ಯ ಶಾಸಕರು ಕೆಇಬಿ ವಿಚಾರದಲ್ಲಿ ಸಾಕಷ್ಟು ತಿಳಿದುಕೊಂಡಿದ್ದಾರೆ. ಅದಕ್ಕಾಗಿ ಮುಖ್ಯ ಇಂಜಿನಿಯರ್‌ರವರನ್ನು ನಾವು ಕಳುಹಿಸುತ್ತೇವೆ, ಏನೇನು ಪರಿಹಾರ ಮಾಡುವುದಕ್ಕೆ ಸಾಧ್ಯ ಇದೆ, ಅದರ ಬಗ್ಗೆ ರೈತರನ್ನು ಭೇಟಿ ಮಾಡಿ ಸಮಸ್ಯೆ ಪರಿಹಾರ ಮಾಡುವುದಕ್ಕೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ. ಕಳೆದ ಬಾರಿ ಶಾಸಕರನ್ನು ಕರೆಯಬೇಕಾಗಿತ್ತು. ಆದರೂ ಕೆಇಬಿ ಸುಮ್ಮನೆ ಕುಳಿತುಕೊಂಡಿಲ್ಲ. ಕೆಲವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ಸದನ ಮುಗಿಯುವ ಮೊದಲು ತಮ್ಮನ್ನೆಲ್ಲಾ ಕರೆಸಿ ಏನೇನು ಸಮಸ್ಯೆಗಳು ಇವೆ ಅದನ್ನು ತಿಳಿದುಕೊಳ್ಳುತ್ತೇವೆ. ಹೊಸ ನೀತಿಯ ವಿಚಾರ ತಾವು ಪ್ರಸ್ತಾಪ ಮಾಡಿದ್ದೀರಿ. ವಿದ್ಯುತ್ ಸರಬರಾಜು ಬಗ್ಗೆ ಹೊಸ ನೀತಿಯನ್ನು ಪ್ರಸ್ತಾಪ ಮಾಡಿದ್ದೀರಿ. ಹೊಸ ನೀತಿಯ ಬಗ್ಗೆ ಇವತ್ತು ಸ್ಪಾಟ್ ಡಿಸಿಷನ್ ಹೇಳುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು 60 ಸಾವಿರ ಪಂಪ್ ಸೆಟ್‌ಗಳಲ್ಲಿ ವಿದ್ಯುತ್ ಸಂಪರ್ಕ ಏನೂ ಮಾಡಿಲ್ಲ ಎಂದು ಹೇಳಿದರು. 51 ಸಾವಿರ ಚಿಲ್ಲರೆ ಪಂಪ್ ಸೆಟ್ಸ್ ಎನರ್ಜೈಸ್ ಮಾಡಿರುತ್ತೇವೆ ಎಂದು ಹೇಳಿದ್ದೇವೆ. ತಂತಿ ಕಂಬ ಇಲ್ಲದಿದ್ದರೆ ಮಾರ್ಚ್ ತಿಂಗಳ ಒಂದು ವಾರದ ಒಳಗೆ 51 ಸಾವಿರ ಪಂಪ್ ಸೆಟ್ಸ್ ಹೇಗೆ ಎನರ್ಜೈಸ್ ಮಾಡುವುದು. ಇದನ್ನು ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಬಂಡೆಗಲ್ಲು ಅವರೋ ನಾವೋ ಎಂಬ ಪ್ರಶ್ನೆ ಮಾಡಬೇಕಾಗುತ್ತದೆ. ಇಷ್ಟು ಹೇಳಿದರೂ ಈ

ರೀತಿ ಮಾಡಿದರೆ ಬಂಡೆಗಲ್ಲು ಅವರಾಗುತ್ತಾರೆ ನಾವು ಆಗುವುದಿಲ್ಲ. ಈ ಸಮಸ್ಯೆ ಬಹಳ ಜ್ವಲಂತವಾಗಿದೆ. ಒಂದು ವರ್ಷದಲ್ಲಿ ಎರಡು ವರ್ಷದಲ್ಲಿ ಇದರ ಬಗ್ಗೆ ಯೋಜನೆ ತಯಾರು ಮಾಡಿಕೊಂಡು ಪರಿಹಾರ ಮಾಡಬೇಕಾಗುತ್ತದೆ. ಇದು ಸಿಸ್ಟಮ್ ಇಂಪ್ರೂವ್‌ಮೆಂಟ್ ಸಮಸ್ಯೆ ಇದೆ. ವಿದ್ಯುತ್ ಉತ್ಪಾದನೆಗೆ ನಾವು ಎಷ್ಟು ಪ್ರಾಮುಖ್ಯತೆ ಕೊಡುತ್ತೇವೋ ಅಷ್ಟೇ ಪ್ರಾಮುಖ್ಯತೆಯನ್ನು ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೂ ಕೂಡಾ ಕೊಡಬೇಕಾಗಿತ್ತು. ಆದರೆ ಕೊಟ್ಟಿರುವುದಿಲ್ಲ. ಕೊಡದಿದ್ದರೆ ಈ ಸಮಸ್ಯೆ ಇನ್ನೂ ಅಸ್ತವ್ಯಸ್ತವಾಗಿ ಉಳಿಯುತ್ತದೆ. ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ನಾವು ಬಹಳಷ್ಟು ಪ್ರಾಮುಖ್ಯತೆಯನ್ನು ಕೊಟ್ಟು ಒಂದೆರಡು ವರ್ಷದಿಂದ ಪ್ರಯತ್ನ ನಡೆಸುತ್ತಿದ್ದೇವೆ. ಅದಕ್ಕೆ ಸಮಾಲೋಚನೆ ಮಾಡೋಣ. ಏನಾದರೂ ಹೊಸ ಸೂಚನೆಗಳನ್ನು ಕೊಟ್ಟರೆ ನಾವು ವಿಚಾರ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ :- ಒಂದು ಆಪಾದನೆಯನ್ನು ಮಾನ್ಯ ಬೈರೇಗೌಡರು ಮಾಡಿದ್ದಾರೆ. It has gone on record.

**ಅಧ್ಯಕ್ಷರು** :- ರೆಕಾರ್ಡ್‌ಗೆ ಹೋಗಿಲ್ಲ.

**Sri. M.Veerappa Moily :** If you stage a walk out, the Chief Engineer will not go to Kolar.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಬೈರೇಗೌಡರು ಒಂದು ಆಪಾದನೆ ಮಾಡಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ಈ ವಿಚಾರದಲ್ಲಿ ಸಲಹೆ ಕೊಡಬೇಕೆಂದು ನಾನು ಮೂರು ಸಲ ಎದ್ದೆ. ಅವಕಾಶ ಕೊಡಲಿಲ್ಲ, ನನಗೂ ಸ್ವಲ್ಪ ಅವಕಾಶ ಕೊಡಿ ಎಂದು ಕೇಳಿದರೆ, ನೀವು ಮಲೆನಾಡಿನವರು, ನಿಮಗೆ ವಿದ್ಯುಚ್ಛಕ್ತಿ ಬಗ್ಗೆ ಆಸಕ್ತಿ ಇಲ್ಲ ಎಂದು ಅವರು ಹೇಳಿದರು. ಅದು ರೆಕಾರ್ಡ್‌ಗೆ ಹೋದರೆ, ನಾನು ವಿರೋಧ ಪಕ್ಷದ ನಾಯಕನಾಗಿ ಚರ್ಚೆ ಮಾಡುವುದು ಹೇಗೆ? ನಾವು ಒಂದು ರಾಜಕೀಯ ಪಕ್ಷಕ್ಕೆ ಸೇರಿದವರು ಇಂತಹ ಆಪಾದನೆಗಳು ಅಲ್ಲಿ ಹೋಗಕೂಡದು. ನನ್ನ ಸಲಹೆ ಏನೆಂದರೆ ಇದರ ಬಗ್ಗೆ ತಾವು ಚರ್ಚೆಗೆ ಅವಕಾಶ ಕೊಡಿ. ವಿಸ್ತೃತವಾಗಿ ಚರ್ಚೆ ಮಾಡೋಣ. ಇದರ ಬಗ್ಗೆ ಹೇಳುವುದು ಬೇಕಾದಷ್ಟು ಇದೆ. ಈಗ ಅವರು ಏನು ಆಪಾದನೆ ಮಾಡಿದ್ದಾರೆ ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. I cannot function here as a leaderof the oppositon. No such allegations should be made.

**ಅಧ್ಯಕ್ಷರು** :- ವಾಪಸ್ ತೆಗೆದುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಮೂರು ಸಾರಿ ಎದ್ದದ್ದೂ ಕೂಡ ಅವರ ಪರವಾಗಿ

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಅವರ ಮೇಲೆ ಆಪಾದನೆ ಮಾಡಬೇಕನ್ನತಕ್ಕಂಥಾದ್ದಲ್ಲ. ಈ ವಿಚಾರ ಬಹಳ ಗಂಭೀರವಾಗಿದೆ ಇದು ರಾಜ್ಯದಾದ್ಯಂತ ಇರತಕ್ಕಂಥ ಪರಿಸ್ಥಿತಿ. ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಬೆಳೆ ಒಣಗಿ ಹೋಗಿ ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ ಅದರ ಪ್ರತಿಬಿಂಬ ಇಲ್ಲಿ ಆಗುತ್ತಿಲ್ಲ ಎನ್ನುವುದೇ ಹೊರತು ಬೇರೇನೂ ಅಲ್ಲ. ನಾನು ಅವರ

ಮೇಲೆ ಆರೋಪ ಹೊರಿಸತಕ್ಕಂಥದ್ದಾಗಲಿ ಅಥವಾ ತಮ್ಮ ಮನಸ್ಸಿಗೆ ನೋವು ತರಬೇಕೆನ್ನುವುದಾಗಲಿ ನನಗೆ ಇಲ್ಲ. ಅದರ ಪ್ರತಿಬಿಂಬ ಇಲ್ಲಿ ಆಗಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :- ಅದಕ್ಕೋಸ್ಕರ ಅವರಿಗೆ ತಾವು ಅವಕಾಶ ಕೊಟ್ಟಿದ್ದೀರಿ ಎನ್ನುವ ಕಾರಣಕ್ಕಾಗಿ ನಾವು ಕುಳಿತಿದ್ದೆವು.

ಅಧ್ಯಕ್ಷರು :- ಇದರ ಬಗ್ಗೆ ಸಾಕಷ್ಟು ಸಮಯ ಆಗಿದೆ. ಸರ್ಕಾರದವರು ಈ ವಿಷಯದ ಬಗ್ಗೆ ಚರ್ಚೆಗೆ ಸಿದ್ಧ ಎಂದು ಹೇಳಿದ್ದಾರೆ. ಅದಕ್ಕೆ ಈ ವಿಷಯವನ್ನು ಚರ್ಚೆ ಮಾಡಲು ನಾನು ಇನ್ನೊಂದು ದಿವಸ ಅವಕಾಶ ಮಾಡಿ ಕೊಡುತ್ತೇನೆ.

## ಬೈರೇಗೌಡ - ಮೊಯಿಲಿ ಚಕಮಕಿ

ಸಭಾತ್ಯಾಗ ಮಾಡಿದರೆ, ಎಂಜಿನಿಯರ್ ಕಳಿಸಲ್ಲ ಎಂಬ ಮೊಯಿಲಿ ಹೇಳಿಕೆ ಬಗ್ಗೆ ವಿಸ್ತೃತ ಚರ್ಚೆ ಜರುಗಿತು...

ಡಾ. ಜೀವರಾಜ ಆಳ್ವ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬೈರೇಗೌಡರು ವಾಕ್‌ಔಟ್ ಮಾಡಿದರೆ ನಾವು ಮುಖ್ಯ ಇಂಜಿನಿಯರ್‌ರವರನ್ನು ಅಲ್ಲಿಗೆ ಕಳುಹಿಸಿಕೊಡುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅದು ಸಾಧ್ಯವಿಲ್ಲ. He cannot get away with that. It is wrong. He cannot say like ಇಲ್ಲಿ ಸಭಾತ್ಯಾಗ ಮಾಡುವುದು ಸದಸ್ಯರ ಹಕ್ಕು. ಆದರೆ ಅವರು ಹಕ್ಕುಚ್ಯುತಿಯಾಗಿ ಮಾತನಾಡುತ್ತಾರೆ. ಅದು ತಪ್ಪು ನಾನು ಸುಮ್ಮನೆ ಕುಳಿತುಕೊಂಡಿದ್ದೆ. ಯಾವುದಕ್ಕೂ ಒಂದು ಮಿತಿ ಇದೆ. ಸರ್ಕಾರ ಯಾವುದೇ ವ್ಯವಸ್ಥೆಯಲ್ಲಿದ್ದರೂ ಕೂಡ ಬೈರೇಗೌಡರು ವಾಕ್ ಔಟ್ ಮಾಡಿದರೆ ನಾವು ಮುಖ್ಯ ಇಂಜಿನಿಯರ್ ರವರನ್ನು ಕಳುಹಿಸಿಕೊಡುವುದಿಲ್ಲವೆಂದು ಹೇಳುವುದು ದುರಹಂಕಾರದ ಪರಮಾಧಿಯಾಗುತ್ತದೆ. ಅದು ಸಾಧ್ಯವಿಲ್ಲ.

**Mr. Speaker :** I declare the matter closed.

**Dr. Jeevaraja Alva :** The hon Member was well within his rights. The matter pertains to the Government and the people of Kolar and not of Mr. Byregowda and Mr. Veerappa Moily.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ನಾನು ಒಂದೇ ಮಾತಿನಲ್ಲಿ ಮುಗಿಸುತ್ತೇನೆ. ಮಾನ್ಯ ಮಂತ್ರಿಗಳು 15 ಗಂಟೆಗಳ ಕಾಲ ಸತತವಾಗಿ ವಿದ್ಯುತ್ ಕೊಡುತ್ತೇವೆಂದು ಹೇಳಿದರು. ಆದರೆ ಆ ರೀತಿ ಇಲ್ಲ. 15 ಗಂಟೆಗಳ ಕಾಲ ವಿದ್ಯುತ್ ಕೊಟ್ಟರೆ ನಾನು ಆ ಸ್ಥಳದಲ್ಲಿಯೇ ಸಾಷ್ಟಾಂಗ ನಮಸ್ಕಾರ ಮಾಡಿ ಅವರನ್ನು ಕ್ಷಮೆ ಕೇಳುತ್ತೇನೆ ಎನ್ನುವ ಮಾತನ್ನು ಹೇಳಿದೆ. ಅವರು ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿದಾಗ ನಾವೇನು ಮಾಡಬೇಕು?

ಅಧ್ಯಕ್ಷರು :- ವಾಕ್ ಔಟ್ ಮಾಡಬೇಕು.

ಶ್ರೀ ಸಿ. ಬೈರೇಗೌಡ :- ಅದಕ್ಕೋಸ್ಕರವೇ ವಾಕ್‌ಔಟ್ ಮಾಡುತ್ತೇನೆ ಎಂದು ಹೇಳಿದ್ದು. ಮುಖ್ಯ ಇಂಜಿನಿಯರನ್ನು ಕಳುಹಿಸುವುದಿಲ್ಲ ಎಂದು ಅವರು ಹೇಳಿದಾಗ ನಾವು ಏನು ಮಾಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :- ಈ ಪ್ರಕರಣವನ್ನು ಮುಗಿಸಿದ ನಂತರ ಬೇರೆ ಕಾರ್ಯ ಕಲಾಪಕ್ಕೆ ಹೋಗುವುದು ಒಳ್ಳೆಯದು. ಮಾನ್ಯ ಬೈರೇಗೌಡರ ಕಳಕಳಿ ಸರ್ಕಾರಕ್ಕೆ ಅರ್ಥವಾಗುತ್ತದೆ ಎಂದು ನಾನು ಸುಮ್ಮನೆ ಕುಳಿತಿದ್ದೆ. ಆದರೆ ಅವರು ಹೇಳಿದ್ದಕ್ಕೆ ಇವರು ಚೀಫ್ ಇಂಜಿನಿಯರನ್ನು ಕಳುಹಿಸುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೆ ತಾವು ಹೇಳಿದ್ದೀರಿ ನಾನು ಅದನ್ನು ಪುನಃ ಉಚ್ಚರಿಸಬೇಕಾದ ಅವಶ್ಯಕತೆಯಿಲ್ಲ. ಬಿಸ್‌ನೆಸ್ ಲಿಸ್ಟ್‌ನಲ್ಲಿ ಇಲ್ಲದಿದ್ದರೂ The Government went out of the way in giving statement n response to the problem of the hon. Member.

ಏಕೆಂದರೆ ತಾವು ಹೇಳಿದ ಪ್ರಕಾರ ಇವತ್ತು ಏನಾದರೂ ಪ್ರತಿಷ್ಠೆ ಮೇಲೆ....... Yesterday also the hon. Member raised this. Today also he has raised it. I said whatever the Government has done in the matter.

ಫೆಬ್ರವರಿ 28ನೇ ತಾರೀಖು ಛೇರ್ಮನ್‌ರು ಹೋಗಿ ಅಲ್ಲಿನ ಸಮಸ್ಯೆಯನ್ನು ಅಧ್ಯಯನ ಮಾಡಿಕೊಂಡು ಬಂದಿದ್ದಾರೆ. ಸ್ಪಾಟ್‌ನಲ್ಲಿ ಕೆಲವು ಡಿಸೀಷನ್ ತೆಗೆದುಕೊಂಡಿದ್ದಾರೆ. ಅದರ ಮೇಲೆ ಕೆಲವು ಸಮಸ್ಯೆಗಳು ಉದ್ಭವವಾಗಿದೆ ಎಂದು ತಾವು ಇವತ್ತು ಏನು ಹೇಳಿದ್ದೀರಿ, ನಾವು ಸಹಾ ಅದರ ಬಗ್ಗೆ ಸಾಕಷ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ.

I Went out of the way. ತಮಗೆ ಗೊತ್ತಿದೆ ಕರ್ನಾಟಕ ರಾಜ್ಯದ ವಿದ್ಯುತ್ ಸರಬರಾಜು ನೋಡತಕ್ಕಂಥ ಜವಾಬ್ದಾರಿ ಯಾರಿಗಿದೆ? ಸರ್ಕಾರಕ್ಕಿದೆ. If the KEB concentrates only on one district, what would happen to the rest of the places. But still we are doing because we have to give respect to the hon. Member. We don't mind taking up this. ಅವರು ವಾಕ್‌ಔಟ್ ಮಾಡುತ್ತೇನೆಂದು ನಮ್ಮಿಂದ ಯಾವುದೇ ಪ್ರಚೋದನೆ ಇರಲಿಲ್ಲ. ಪ್ರಚೋದನೆ ಇದ್ದಿದ್ದರೆ ಅದಾಗಬಹುದಾಗಿತ್ತು. ಐ ಯಾಮ್ ವೆರಿ ಸಾರಿ. ನಾವು ಇಷ್ಟು ಉದಾತ್ತತೆಯನ್ನು ತೋರಿಸಿದರೂ ದುರಹಂಕಾರವೆಂದು ಡಿಕ್ಷ್ನರಿಯಲ್ಲಿದ್ದರೆ

**Dr. Jeevaraj Alva :** I am very sorry. I did not use its.

ಶ್ರೀ ಎಂ. ವೀರಪ್ಪ ಮೊಯಿಲಿ :- ಆದರೆ ಯಾವ ಸಂದರ್ಭದಲ್ಲಿ ಯಾವುದಕ್ಕೆ ಯಾವ ಶಬ್ದವನ್ನು ಉಪಯೋಗ ಮಾಡಬೇಕು ಎನ್ನುವ ಈ ಆಯ್ಕೆ ಮುಖ್ಯವಾದುದು. ತಾವು ಒಮ್ಮೆಲೆ ಸಡನ್ನಾಗಿ ದುರಹಂಕಾರ ಎನ್ನುವ ಶಬ್ದ ಏನು ಉಪಯೋಗ ಮಾಡಿದ್ದೀರಿ ಬಹುಶಃ ಆ ಶಬ್ದ ಈ ಕಡೆ ಬರುವುದಿಲ್ಲ. ಮಾನ್ಯ ಬೈರೇಗೌಡರು ಏನು ಹೇಳಿದ್ದಾರೆ ಅದಕ್ಕೆ ನಮ್ಮ ಸಹಮತ ಇದೆ. ನಾವು ಅದಕ್ಕೆ ಸ್ಪಂದಿಸುತ್ತೇವೆ. Here is a government which will respond and which has responded more adequately than what is required. We are sending the Chief Engineer. I said 'Dont' walk out co-operate with the Government'. We are here to solve the problem.

# ವಿದ್ಯುತ್

ಶ್ರೀ ಸಿ. ಬೈರೇಗೌಡ : ಎಲೆಕ್ಟ್ರಿಸಿಟಿ ಬಗ್ಗೆ ಏನೂ ಹೇಳಲಿಲ್ಲ.

ಅಧ್ಯಕ್ಷರು :- ಎಲೆಕ್ಟ್ರಿಸಿಟಿ ಬಗ್ಗೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರಲ್ಲಾ, ಅವರದು ಆರು ಪ್ರಶ್ನೆಗಳು ಇವತ್ತಿನ ದಿವಸ ಇದ್ದವು.

ಶ್ರೀ ಸಿ. ಬೈರೇಗೌಡ :- ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ರಾಜ್ಯದಾದ್ಯಂತ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಪವರ್ ಇಲ್ಲದಿದ್ದರೆ ಒಂದು ತೊಟ್ಟು ಕೂಡಾ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ, ಸಾಧ್ಯವೇ ಇಲ್ಲ.

ಅಧ್ಯಕ್ಷರು :- ರಾಜ್ಯಾದ್ಯಂತ ಏನು ಸಮಸ್ಯೆ ಇದೆ, ಅದು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಇದೆ. ಅದನ್ನೆಲ್ಲಾ ಒಟ್ಟು ಕ್ರೋಢೀಕರಿಸಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಹೊಸದಾಗಿ ಹೇಳುವುದು ಏನು ಇದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರು ಸ್ವಲ್ಪಮಟ್ಟಿಗೆ ಬಗೆಹರಿಸಿಕೊಂಡಿದ್ದಾರೆ. ಮತ್ತು ನಾವು ಕೂಡಾ ಈಗಾಗಲೇ ಒಂದು ಜನರಲ್ ಇನ್ಸಟ್ರಕ್ಷನ್ ಅನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಕುಡಿಯುವ ನೀರಿನ ಯೋಜನೆಗಳು ರೆಡಿ ಇದೆ, ಅಂಥದ್ದಕ್ಕೆ ಆದ್ಯತೆ ಕೊಟ್ಟು ಕನೆಕ್ಷನ್ ಮೊದಲು ಕೊಡಬೇಕು ಎಂದು ಈಗಾಗಲೇ ಹೇಳಿದೆ. ಕೆಲವು ಕಡೆ ಆ ರೀತಿ ಆಗಿದೆ. ನಿಮ್ಮ ಕಡೆಯಲ್ಲಿಯೂ ಇಂಪ್ರೂವ್‌ಮೆಂಟ್ ಆಗುತ್ತಿದೆ. ಈಗಾಗಲೇ ತಾವು ಸಾಕಾದಷ್ಟು ಮಟ್ಟಿಗೆ ಅದರ ಲಾಭವನ್ನು ಪಡೆದುಕೊಂಡಿದ್ದೀರಿ.

ಶ್ರೀ ಸಿ. ಬೈರೇಗೌಡ :- ಪವರ್ ಇದ್ದರೆ ಮೋಟಾರ್ ರನ್ ಆಗುತ್ತದೆ. ಪವರ್ ಇಲ್ಲದೆ, ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ, ಆದ್ಯತೆಯ ಮೇಲೆ ಕೊಡಿ ಎಂದು ಹೇಳಿದರೆ ಅಲ್ಲಿ ಇಲ್ಲದಿದ್ದರೆ ಅವರು ಎಲ್ಲಿಂದ ತಂದು ಕೊಡುತ್ತಾರೆ?

ಅಧ್ಯಕ್ಷರು :- ಕನೆಕ್ಷನ್ಸ್ ಕೊಡಿ ಎಂದು ಅವರು ಹೇಳುವುದು.

ಶ್ರೀ ಸಿ. ಬೈರೇಗೌಡ :- ಅದನ್ನೇ ನಾನು ಹೇಳುತ್ತಿದ್ದೇನೆ. ಪವರ್ ಇಲ್ಲದಿದ್ದರೆ ಕನೆಕ್ಷನ್ಸ್ ಅನ್ನು ಎಲ್ಲಿಂದ ತಂದುಕೊಡುತ್ತಾರೆ. ಇವತ್ತು ಇರತಕ್ಕಂಥದ್ದು ಆ ಸಮಸ್ಯೆ ಅನೇಕ ತಾಲ್ಲೂಕುಗಳಲ್ಲಿ, ಅನೇಕ ಗ್ರಾಮಗಳಲ್ಲಿ ಆ ಸಮಸ್ಯೆ ಇದೆ. ನಮ್ಮ ಸಿಂಧ್ಯಾರವರು ಏನೋ ಒಂದು ಸಲಹೆಯನ್ನು ಕೊಡುತ್ತಿದ್ದಾರೆ, ಬ್ಯಾಟರಿ ಎಂದು ಹೇಳುತ್ತಿದ್ದಾರೆ, ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಪವರ್ ಜನರೇಷನನ್ನು ಅವರು ಏಳು ವರ್ಷಗಳಲ್ಲಿ ಸರಿಯಾಗಿ ಮಾಡಿ ಇಟ್ಟಿದ್ದರೆ ಬ್ಯಾಟರಿಯನ್ನು ಹಾಕಿಸತಕ್ಕಂಥ ಪರಿಸ್ಥಿತಿಯೇ ಬರುತ್ತಿರಲಿಲ್ಲ. ಎಲ್ಲಾ ಕಡೆಗೂ ಕೂಡಾ ಕೊಟ್ಟುಬಿಡುತ್ತಿದ್ದವು.

# ಕೋಲಾರದಲ್ಲಿ ವಿದ್ಯುತ್ ಕೇಂದ್ರದ ಸ್ಥಾಪನೆ

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರದಲ್ಲಿರುವ 220 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಯಾವಾಗ ಸ್ಥಾಪಿಸಲಾಯಿತು?

ಆ) ಈ ವಿದ್ಯುತ್ ಉಪ ಕೇಂದ್ರದಿಂದ ಸರಬರಾಜಾಗುತ್ತಿರುವ ಪ್ರದೇಶಗಳು ಹಾಗೂ ಈ ಉಪ ಕೇಂದ್ರದಲ್ಲಿ ಬೇಕಾಗಿರುವ ವಿದ್ಯುತ್ ಪರಿವರ್ತಕಗಳ ಸಂಖ್ಯೆ ಎಷ್ಟು?

ಇ) ಬೇಕಾಗಿರುವಷ್ಟು ವಿದ್ಯುತ್ ಉಪಕೇಂದ್ರಗಳನ್ನು ಇನ್ನೂ ಹಾಕದಿರುವ ಸಂಗತಿಯು ನಿಜವೆ?

ಶ್ರೀ ಎಸ್. ಬಂಗಾರಪ್ಪ ಮುಖ್ಯ ಮಂತ್ರಿಗಳು :-

ಅ) ಆಗಸ್ಟ್ 1989ರಿಂದ.

ಆ) ಈ ವಿದ್ಯುತ್ ಉಪ ಕೇಂದ್ರದ ಕೋಲಾರ, ಶ್ರೀನಿವಾಸಪುರ, ಮುಳಬಾಗಿಲು ಮತ್ತು ಮಾಲೂರು ತಾಲ್ಲೂಕುಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರದಲ್ಲಿ 2 ಐ 100 ಎಂ.ವಿ.ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಅಳವಡಿಸಲು ಉದ್ದೇಶಿಸಿದ್ದು, ಇದರ ಪೈಕಿ ಒಂದು ಈಗ ಕೆಲಸ ನಿರ್ವಹಿಸುತ್ತಿದೆ. ಇನ್ನೊಂದು ಪರಿವರ್ತಕವನ್ನು ಅಳವಡಿಸಬೇಕಾಗಿದೆ.

ಅಲ್ಲದೆ, ಈ ವಿದ್ಯುತ್ ಉಪಕೇಂದ್ರದಲ್ಲಿ 2 x 5 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ.

ಇ) ಹೌದು. ಕೋಲಾರ ಜಿಲ್ಲೆಯಲ್ಲಿ ಬೇಕಾಗಿರುವ ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಹಂತ ಹಂತವಾಗಿ ಅವಶ್ಯಕತೆ ಹಾಗೂ ಆದ್ಯತೆಯ ಮೇರೆಗೆ ಸ್ಥಾಪಿಸಲಾಗುವುದು.

ಶ್ರೀ ಸಿ. ಬೈರೇಗೌಡ :- ಸನ್ಮಾನ್ಯ ಅಧ್ಯಕ್ಷರೇ 2x100 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ ಅನ್ನು ಅಲ್ಲಿ ಹಾಕುವುದಕ್ಕೆ ಬದಲಾಗಿ ಒಂದೇ ಒಂದು ಹಾಕಿರತಕ್ಕಂಥಾದ್ದು, ಈಗ ಉಳಿದಿರತಕ್ಕಂಥ ಮತ್ತೊಂದನ್ನು ಯಾವಾಗ ಅಲ್ಲಿ ಹಾಕುತ್ತೀರಿ ಮತ್ತೆ 2ಐ500 ಎಂ.ವಿ.ಎ. ತಾವು ಅಳವಡಿಸಲಾಗುತ್ತಿದೆಯೆಂದು ಹೇಳುತ್ತೀರಿ. ಅಲ್ಲಿಗೆ ಬೇಕಾಗಿರತಕ್ಕಂಥದ್ದು 2x5ಎಂ.ವಿ.ಎ ಅಲ್ಲ, ಇದು 20 ಎಂ.ವಿ.ಎ. ಬೇಕಾಗಿರತಕ್ಕಂಥದ್ದು. ಇದನ್ನು ಯಾವಾಗ ಹಾಕುತ್ತೀರಿ ಮತ್ತೆ ಅವಶ್ಯಕತೆ ಹಾಗೂ ಬೇರೆ ಬೇರೆ ಸಬ್‌ಸ್ಟೇಷನ್ಸ್ ಅವಶ್ಯಕತೆ ಹಾಗೂ ಆದ್ಯತೆಯ ಮೇರೆಗೆ ಸ್ಥಾಪಿಸಲಾಗುವುದು ಎಂದು ಹೇಳಿದ್ದೀರಿ. ಇದನ್ನು ಯಾವಾಗ ಸ್ಥಾಪನೆ ಮಾಡುತ್ತೀರಿ? ಮತ್ತು ವೇಮಗಲ್ ನಲ್ಲಿ ಒಂದು ಸಬ್ ಸ್ಟೇಷನ್ ಈಗಿರತಕ್ಕಂತಹ ಕೆಪಾಸಿಟಿ ಏನು ಇದೆ, ಅದು ಎಕ್ಸಾಸ್ಟ್ ಆಗಿದೆ. ಓವರ್ ಲೋಡ್ ಆಗುತ್ತಾ ಇದೆ. ಅದಕ್ಕೆ ಅಡಿಷನಲ್ ಟ್ರಾನ್ಸ್ ಫಾರ್ಮರನ್ನು ಯಾವಾಗ ಹಾಕುತ್ತೀರಿ? ಮತ್ತು ಡೀಸೆಲ್ ಜನರೇಟಿಂಗ್ ಸ್ಟೇಷನ್ ಅನ್ನು ಕೋಲಾರದಲ್ಲಿ ಹಾಕಬೇಕಾಗಿತ್ತು. ಕೋಲಾರದಲ್ಲಿ ಅದನ್ನು ಯಾವಾ ಹಾಕುತ್ತೀರಿ?

ಶ್ರೀ ಎಸ್. ಬಂಗಾರಪ್ಪ :- ಸನ್ಮಾನ್ಯ ಅಧ್ಯಕ್ಷರೇ, ಡೀಸೆಲ್ ಸ್ಟೇಷನ್ ವಿಚಾರ ಕೂಡ ಪ್ರಸ್ತಾಪಕ್ಕೆ ಬಂದಿದೆ. ಈ ಬಗ್ಗೆ ತಮಗೆ ಹೇಳಬೇಕಾದರೆ ನಿಮಗೆ ಗೊತ್ತಿರುವ ಹಾಗೆ ಮೊನ್ನೆ ಮೊನ್ನೆ ನಾವು ನೀವು ಮಾತನಾಡಿದ್ದೇವೆ. ತಾವು ಒಂದು ಡೆಲಿಗೇಷನ್ ತೆಗೆದುಕೊಂಡು ಬಂದಾಗಲೂ ಸಹ ಎಲ್ಲಾ ವಿಚಾರಗಳನ್ನು ಹೇಳಿದ್ದೇವೆ. ಆಮೇಲೆ ಕೆಲವು ಕಾರ್ಯಕ್ರಮ ಕೂಡ ಹಾಕಿದ್ದೇವೆ. ಇನ್ನು ಉಳಿದಿರತಕ್ಕಂಥದ್ದು ನಾವು ಕೂಡಲೇ ಎನ್‌ಜಿಇಎಫ್‌ನಿಂದ ತರಿಸಿಕೊಂಡು ಅಳವಡಿಸಬೇಕು ಅನ್ನುವಂತಹದ್ದು ಮುಖ್ಯವಾಗಿರತಕ್ಕಂಥ ಒತ್ತಡ ಇದೆ. ಏತಕ್ಕೆಂದರೆ ಬರಗಾಲದಲ್ಲಿ ಬೋರ್‌ವೆಲ್‌ಗಳಿಗೆ ನಾವು ಆ ರೀತಿಯಿಂದ ಡ್ರಾಪ್ ಆಗದ ಹಾಗೆ ಸರಿಯಾಗಿ ವಿದ್ಯುತ್ ಕೊಡಬೇಕೆಂದರೆ ಇದು ಆಗಲೇ ಬೇಕಾಗುತ್ತದೆ. ಅದರ ಬಗ್ಗೆ ನಾವು ಈಗಾಗಲೇ ಕೆಇಬಿಯ ಛೇರ್ಮನ್ ರವರಲ್ಲಿ ಮಾತನಾಡಿ ಎನ್‌ಜಿಇಎಫ್‌ಗೆ ಕೂಡ ಈಗಾಗಲೇ ವಿಚಾರ ತಿಳಿಸಿ ಕೂಡಲೇ ಕಾರ್ಯಕ್ರಮ ಹಾಕುತ್ತೇವೆ. ಸದ್ಯದಲ್ಲೇ ಅದನ್ನು ಕೂಡ ನಾವು ಒದಗಿಸಿಕೊಡುತ್ತಿದ್ದೇವೆ. ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. 1990-91ರ ಬಜೆಟ್‌ನಲ್ಲಿ ಕೂಡ 150 ಲಕ್ಷವನ್ನು ಇದಕ್ಕೆ ನಾವು ಇಟ್ಟಿದ್ದೇವೆ. ಮಾರ್ಚ್ ಎಂಡ್‌ವರೆಗೂ ಖರ್ಚು ಮಾಡುವುದಕ್ಕಾಗಿ ಅಂದರೆ ತೊಂದರೆಯಾಗಬಾರದು ಅನ್ನುವ ದೃಷ್ಟಿಯಿಂದ ನಾವು ಹಣವನ್ನು ಕೂಡ ಇಟ್ಟಿದ್ದೇವೆ. 2x100. 220 ಕೆ.ವಿ. ಸ್ಟೇಷನ್ ಕೋಲಾರದಲ್ಲಿ ಏನಿದೆ, ಅದು towns of Kolar, Srinivasapur, Mulbagal and Malur. ಈ ಸ್ಥಳಗಳಿಗೆ ಸರ್ವ್ ಮಾಡುತ್ತಿದೆ. ಉಳಿದಿರತಕ್ಕಂಥದ್ದನ್ನು ನಾವು ಒದಗಿಸಿಕೊಡುತ್ತಿದ್ದೇವೆ. ಇದೇ ಪ್ರಶ್ನೆ ಹಿಂದೆ ಬಂದಿದ್ದಾಗ ನಾವು ಉತ್ತರ ಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ನಾನು ಸ್ಪೆಸಿಫಿಕ್ ಆಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅದಕ್ಕೆ ಸ್ಪೆಸಿಫಿಕ್ ಆಗಿ ಉತ್ತರವನ್ನು ದಯವಿಟ್ಟು ಅವರು ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಏನೆಂದರೆ ಇಲ್ಲಿ, ಇನ್ನೊಂದು ಪರಿವರ್ತಕವನ್ನು ಅಳವಡಿಸಬೇಕಾಗಿದೆ ಎಂದು ಹೇಳಿದ್ದೀರಿ. ಅಂದರೆ 100 ಎಂವಿ ಕೆಪಾಸಿಟಿ ಟ್ರಾನ್ಸ್‌ಫಾರ್ಮರನ್ನು ಮತ್ತೊಂದು ಹಾಕಬೇಕಾಗುತ್ತದೆಂದು ತಾವು ಒಪ್ಪುತ್ತಿದ್ದೀರಿ. ಅದನ್ನು ಯಾವಾಗ ಹಾಕುತ್ತೀರಿ? ಆಮೇಲೆ 2x5 ಎಂವಿಎ ಅಳವಡಿಸಲಾಗುತ್ತದೆಂದು ಹೇಳುತ್ತಿದ್ದೀರಿ. ಅಲ್ಲಿ ರಿಕ್ವಯರ್‌ಮೆಂಟ್ ಇರತಕ್ಕಂಥದ್ದು 2x5 ಎಂವಿಎ ಅಲ್ಲ, 20 ಎಂವಿಎ ಬೇಕು. ಈ ಟ್ರಾನ್ಸ್ ಫಾರ್ಮರನ್ನು ಯಾವಾಗ ಹಾಕುತ್ತೀರಿ. ಮತ್ತೆ ಬೇಕಾಗಿರುವಷ್ಟು ವಿದ್ಯುತ್ ಉಪಕೇಂದ್ರಗಳನ್ನು ಇನ್ನು ಹಾಕದಿರುವುದು ನಿಜವೇ ಎನ್ನುವುದು ಹೌದು ಎಂದು ತಾವು ಒಪ್ಪಿಕೊಂಡಿದ್ದೀರಿ. ಈಗ ಹೊಸದಾಗಿ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರತಕ್ಕಂಥ ಉಪ ಕೇಂದ್ರಗಳು ಯಾವುವು? ಅದರಲ್ಲಿ ವೇಮಗಲ್‌ನಲ್ಲಿ ಒಂದನ್ನು ಈಗಾಗಲೇ ಸ್ಥಾಪಿಸಲಾಗಿದೆ. ಅಲ್ಲಿರತಕ್ಕಂಥ ಟ್ರಾನ್ಸ್‌ಫಾರ್ಮರ್ ಕ್ಯಾಪಾಸಿಟಿ ಎಕ್ಸೀಡ್ ಆಗಿದೆ. ಓವರ್ ಲೋಡ್ ಆಗುತ್ತಿದೆ. ಅಲ್ಲಿ ಅಡಿಷನಲ್ ಟ್ರಾನ್ಸ್‌ಫಾರ್ಮರ್ ಬೇಕಾಗಿದೆ. ಅದನ್ನು ಯಾವಾಗ ಹಾಕುತ್ತೀರೋ

ಶ್ರೀ ಎಸ್. ಬಂಗಾರಪ್ಪ :- ಎರಡು ಟ್ರಾನ್ಸ್‌ಫಾರ್ಮರ್ಸ್ of MVA capacity are also being installed for improving the power supply to ಕೋಲಾರ, ಶ್ರೀನಿವಾಸಪುರ ಮತ್ತು ಮುಳಬಾಗಿಲು ಎಲ್ಲೆಲ್ಲಿ ಸಬ್ ಸ್ಟೇಷನ್ ಬೇಕು ಎಂದು ಏನು ತಾವು

ಕೇಳಿದ್ದೀರಿ, ಆ ಬಗ್ಗೆ ಹೇಳಬೇಕೆಂದರೆ ಬಂಗಾರಪೇಟೆ ವರ್ಕ್ಸ್ ಪ್ರೋಗ್ರೇಸ್ಸೀವ್ ಆಗಿ ನಡೆಯುತ್ತಿದೆ. ಬಂಗಾರಪೇಟೆ 2 ಇ 8 ಎಂವಿಎ ಟ್ರಾನ್ಸ್ ಫಾರ್ಮರ್ at estimated cost of Rs. 167.74 lakhs ಒಂದು. ಎರಡನೆಯದು ಮುಳಬಾಗಲಿನಲ್ಲಿ 2x6 ಎಂವಿಎ at an estimated cost Rs. 38.52 lakhs, at Srinivasapur 2x12 MVA at an estimated cost of Rs. 107 lakhs. These are all the works under progress. ಈಗ ನಡೆಯುತ್ತಿರತಕ್ಕಂಥದ್ದು. ನಮ್ಮಲ್ಲಿ 66.11 ಕೆ.ವಿ. sub stations in following places will be established.

## ಸರ್ಕಾರಕ್ಕೆ ಕಿವಿ ಇದೆಯೋ ಇಲ್ಲವೋ 22-3-91

### ಸೆಕೆಂಡ್ಸ್ ಮದ್ಯದ ಬಗ್ಗೆ.........

ಅಬ್ಕಾರಿ ಲಾಬಿಗೆ ಬೈರೇಗೌಡರು ಮೊದಲಿನಿಂದಲೂ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದರು. ಸೆಕೆಂಡ್ಸ್ ಮದ್ಯದ ಬಗ್ಗೆ ಅಂಕಿ ಅಂಶಗಳೊಡನೆ ಗಂಟೆಗಟ್ಟಲೆ ಮಾತನಾಡುತ್ತಿದ್ದರು. ಈ ಸರ್ಕಾರ ಎಕ್ಸೈಸ್‌ದೊರೆಗಳ ಸರ್ಕಾರ ಎಂದು ಜರಿದು ಮಾಡಿದ ಭಾಷಣ

ಉಪಾಧ್ಯಕ್ಷಣಿಯವರು :- ಶ್ರೀಯುತ ಬೈರೇಗೌಡರೆ, ತಾವು ಗೌರ್ನರ್ಸ್ ಅಡ್ರೆಸ್ ಮೇಲೆ ಒಂದೂವರೆ ಗಂಟೆ ಮಾತನಾಡಿದ್ದೀರಿ. ಇದರಲ್ಲಿ ಕಡಿಮೆ ಟೈಂ ತೆಗೆದುಕೊಂಡರೆ ಬೇರೆಯವರಿಗೆ ಅವಕಾಶವಾಗುತ್ತದೆ.

ಶ್ರೀ ಸಿ. ಬೈರೇಗೌಡ :- ಪ್ರಯತ್ನ ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ಇಲ್ಲಿ ನಾನು ಮಾತನಾಡಬೇಕಾಗಿದ್ದರೆ ಬಹಳ ಶ್ರಮವಹಿಸಿ ಏನೇನು ನಡೆದಿದೆ. ಏನೇನು ಆಗುತ್ತಿದೆ ಎಂಬ ಬಗ್ಗೆ ಅನೇಕ ದಾಖಲೆಗಳನ್ನು ಮತ್ತು ಈ ಸದನದ ವರದಿಗಳನ್ನು ಉಲ್ಲೇಖಿಸಿ ಮಾತನಾಡತಕ್ಕ ಅಭ್ಯಾಸವನ್ನು ಇಟ್ಟುಕೊಂಡಿದ್ದೇನೆ. ಅದೇ ಕೆಲಸವನ್ನು ನಾನು ಹಿಂದೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಕೂಡ ಮಾಡಿದ್ದೆ. ಆದರೆ ಇವತ್ತು ಸಂಬಂಧಪಟ್ಟ ಮಂತ್ರಿಗಳಿಲ್ಲ. ತಾವು ಹೇಳುತ್ತೀರಿ ಬಸವಲಿಂಗಪ್ಪನವರಿದ್ದಾರೆ, ಹಿಂದುಗಡೆ ಮುನಿಯಪ್ಪನವರಿದ್ದಾರೆ ಎಂದು. ದೈಹಿಕವಾಗಿ ಅವರು ಇಲ್ಲಿರುತ್ತಾರೆ. ಆದರೆ ತಲೆ ಎಲ್ಲೆಲ್ಲಿ ಉಪಯೋಗಿಸುತ್ತಾರೆ ಗೊತ್ತಿಲ್ಲ. ಇದಕ್ಕೆ ಉದಾಹರಣೆ ಏನೆಂದರೆ ಹಿಂದೆ ಮಾಡಿದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿದಾಗ ಏನೇನು ಗುರುತರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದೆ ಅದು ರಾಜ್ಯದ ಆಡಳಿತದ ಮೇಲೆ ಪರಿಣಾಮ ಬೀರತಕ್ಕ ವಿಚಾರಗಳು. ಅದ್ಯಾವುದಕ್ಕೂ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಪ್ರಯತ್ನವನ್ನೇ ಮಾಡಿಲ್ಲ. ಅದು ಏನು ತೋರಿಸುತ್ತದೆಂದರೆ ದೈಹಿಕವಾಗಿ ಇಲ್ಲಿರಬೇಕು, ಇರುತ್ತಾರೆ. ಸರ್ಕಾರಕ್ಕೆ ನಾನು ಹೇಳುವುದು ಕೇಳಿಸುವುದಿಲ್ಲ. ಅದಕ್ಕೆ ಕಿವಿ ಇದೆಯೋ ಇಲ್ಲವೋ ಗೊತ್ತಿಲ್ಲ. ಇದನ್ನು ನಾನು ತೀವ್ರವಾಗಿ ಪ್ರತಿಭಟಿಸಿ ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾ.........

ಶ್ರೀ ಬಿ. ಬಸವಲಿಂಗಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದ್ದೆಲ್ಲಾ ಮಾಡುತ್ತೇವೆ. ಪುನಃ ಇಲ್ಲಿ ತಕರಾರು ಏತಕ್ಕೆ? ನಾವು ದೈಹಿಕವಾಗಿಯೂ ಇರುತ್ತೇವೆ, ಮಾನಸಿಕವಾಗಿಯೂ ಇರುತ್ತೇವೆ. ನೀವು ಹೇಳಿದ್ದೆಲ್ಲಾ ಕೇಳಿದ್ದೇವೆ.

ಶ್ರೀ ಏ. ಮುನಿಯಪ್ಪ :- ನೀವು ಪ್ರತಿಭಟಿಸಿ ಕುಳಿತುಕೊಳ್ಳುತ್ತೀರಿ ಅಂದುಕೊಂಡಿದ್ದೆ. ಮಾತನಾಡುತ್ತಿದ್ದೀರಲ್ಲ.

ಶ್ರೀ ಸಿ. ಬೈರೇಗೌಡ :- ನಾನು ಪ್ರಸ್ತಾಪ ಮಾಡಿದ ಅನೇಕ ವಿಚಾರಗಳಿಗೆ ಉತ್ತರ ಬರಲಿಲ್ಲ. ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರ ಆಗಿರುವುದಕ್ಕೆ, ಸಾರ್ವಜನಿಕ ಹಣ ಹಾಳಾಗಿರುವ ವಿಚಾರ ಪ್ರಸ್ತಾಪ ಮಾಡಿದ್ದೆ. ಅದ್ಯಾವುದಕ್ಕೂ ಉತ್ತರ ಕೊಡಲಿಲ್ಲ. ಅವರು ಕ್ರಮ ತೆಗೆದುಕೊಂಡರೆ ಅಷ್ಟೇ ಸಾಕು. ಕ್ರಮ ತೆಗೆದುಕೊಂಡಿರುವುದೂ ಕೂಡ ಇಲ್ಲ. ಆದ್ದರಿಂದಲೇ ಪ್ರತಿಭಟನೆ ಸೂಚಿಸುತ್ತೇನೆ ಎಂದು ಹೇಳಿದ್ದು. ನನ್ನ ಕೆಲಸವನ್ನು ನಾನು ರಾಜ್ಯದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಮಾಡಬೇಕಾಗಿದೆ. ಆ ಕೆಲಸಕ್ಕೆ ನಾನು ನಿಂತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅರ್ಥಮಂತ್ರಿಗಳಾಗಿರತಕ್ಕ ಮಾನ್ಯ ಬಂಗಾರಪ್ಪನವರು ತಮ್ಮ ಮೊದಲನೇ ಆಯವ್ಯಯ ಪತ್ರವನ್ನು ಸದನದ ಒಪ್ಪಿಗೆಗಾಗಿ ಅಂದರೆ ತಾತ್ಕಾಲಿಕವಾಗಿ ಓಟ್ ಆನ್ ಅಕೌಂಟ್ ಒಪ್ಪಿಗೆಗಾಗಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ಗತ್ಯಂತರವಿಲ್ಲದೆ ಅನ್ಯ ಮಾರ್ಗವಿಲ್ಲದೆ ವಿರೋಧಿಸಲೇಬೇಕಾಗಿದೆ. ಕಾರಣ ಏನೆಂದರೆ ಈ ರಾಜ್ಯದಲ್ಲಿ ಒಂದು ಪರಿಪಾಠ ಬಂದಿದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಪರಿಪಾಠ ಏನು ಬಂದಿದೆ ಎಂದರೆ ಯಾರು ಮುಖ್ಯಮಂತ್ರಿಗಳಾಗುತ್ತಾರೆ, ಯಾವ ಭಾಗದಿಂದ ಅವರು ಬರುತ್ತಾರೆ ಆ ಭಾಗಕ್ಕೆ ಅವರು ಸೀಮಿತವಾಗಿ ಮುಖ್ಯಮಂತ್ರಿಗಳಾಗಿದ್ದಾರೆ ಎಂಬ ಭಾವನೆ ಇವತ್ತಿನ ದಿವಸ ನನಗಂತೂ ಕೂಡ ಬಂದಿದೆ.

ಕಾರಣ ಏನು ಎಂದರೆ ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಗಾಗಿ ಒಂದು ವಿಶೇಷವಾಗಿ ಅಭಿವೃದ್ಧಿ ಮಂಡಲಿಯನ್ನು ಸ್ಥಾಪನೆ ಮಾಡಿದರು. ಅದಕ್ಕೆ 50 ಕೋಟಿ ರೂಪಾಯಿವರೆಗೆ ಹಣ ಕೊಟ್ಟಿದ್ದಾರೆ. ನಾನು ಅದನ್ನು ಮಾಡಬಾರದು ಎಂದು ಹೇಳುವುದಿಲ್ಲ. ಅದನ್ನು ಸ್ವಾಗತ ಕೂಡ ಮಾಡಿದ್ದೇನೆ. ಅದೇ ರೀತಿ ಈ ರಾಜ್ಯದ ಮಲೆನಾಡು ಪ್ರದೇಶದಿಂದ ಬಂದಿರತಕ್ಕವರು ಬಂಗಾರಪ್ಪನವರು. ಅವರು ಬಂದ ತಕ್ಷಣ ಅವರಿಗೆ ಬೇರೆ ಏನೂ ಕಾಣಲಿಲ್ಲ. ಅವರಿಗೆ ಕಂಡಿದ್ದು ಮಲೆನಾಡು ಪ್ರದೇಶ ಮಾತ್ರ. ಒಂದೆರಡು ಅಂಕಿ ಅಂಶಗಳನ್ನು ನಾನು ಸದನದ ಮುಂದೆ ಇಟ್ಟರೆ ಅದು ಸೂಕ್ತವೆಂದು ನಾನು ಭಾವಿಸಿದ್ದೇನೆ.

ತಾವು ಇಲ್ಲಿ ಎಕನಾಮಿಕ್ ಸರ್ವೆಯನ್ನು ಕೊಟ್ಟಿದ್ದೀರಿ. ಎಕನಾಮಿಕ್ ಸರ್ವೆಯನ್ನು ನಾವು ಪರಿಶೀಲನೆ ಮಾಡಿ ನೋಡಿದರೆ ಅದರಲ್ಲಿ ಕೋಲಾರ ಜಿಲ್ಲೆ ಕೊನೆಯಲ್ಲಿದೆ. ಇವೊತ್ತಿನ ದಿವಸ ಇದನ್ನು ಸಭೆಯ ಗಮನಕ್ಕೆ ಮತ್ತು ರಾಜ್ಯದ ಜನತೆಯ ಗಮನಕ್ಕೆ ತರಬೇಕಾದ್ದು ನನ್ನ ಕರ್ತವ್ಯ. ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ಎಲ್ಲಾ ಜಿಲ್ಲೆಗಳ ಬಗ್ಗೆ ಓದುವುದಕ್ಕೆ ಹೋಗುವುದಿಲ್ಲ. ಇಲ್ಲಿ ಪರ್‌ಕ್ಯಾಪಿಟಾ ಇನ್‌ಕಂ ಬಳ್ಳಾರಿ ಜಿಲ್ಲೆಯಲ್ಲಿ ರೂ. 3789.50, ಬೀದರ್ 2776.98,

ಅದೇ ರೀತಿ ಗುಲ್ಬರ್ಗ 3154.47, ರಾಯಚೂರು 2838.49 ಮತ್ತು ಕೋಲಾರ 2421.93. ಇದು ನಾನು ಹೇಳುವ ಅಂಕಿ ಅಂಶ ಅಲ್ಲ. ಸರ್ಕಾರದಿಂದ ಕೊಟ್ಟಿರತಕ್ಕದ್ದು. ಇದನ್ನು ಗಮನಿಸಿದರೆ, ಏನು ಅರ್ಥವಾಗುತ್ತದೆಂದರೆ ಇಲ್ಲಿ ಯಾರು ಮುಖ್ಯಮಂತ್ರಿಗಳಾಗುತ್ತಾರೋ, ಶ್ರೀ ಬಂಗಾರಪ್ಪನವರು ಆಗಬಹುದು,ಮಾನ್ಯ ವಿರೋಧ ಪಕ್ಷದವರು ಆಗಬಹುದು ಆದಲ್ಲಿ ಅವರು ಸಮಗ್ರವಾಗಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿರಬೇಕು. ಆದರೆ, ರಾಜ್ಯದ ದುರಾದೃಷ್ಟ, ಅವರು ಕೇವಲ ಒಂದು ಪ್ರದೇಶದ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ವಿನಾ ವಿಶಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಮಾಡದೇ ಇರತಕ್ಕಂಥ ಉದಾಹರಣೆ ನಮ್ಮೆದುರಿಗಿದೆ. ಆದುದರಿಂದ, ನಾನು ಈ ಸಂದರ್ಭದಲ್ಲಿ ಇದನ್ನು ಪ್ರಚಾರ ಮಾಡಲಿಕ್ಕೆ ಬಯಸುತ್ತೇನೆ. ಕೋಲಾರ ಜಿಲ್ಲೆಯ ಪಕ್ಕದಲ್ಲಿರತಕ್ಕ ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಇಂತಹ ಜಿಲ್ಲೆಗಳಲ್ಲಿ ಮಳೆ ಬೀಳದೆ ಕುಡಿಯುವ ನೀರಿಗೆ ತಾಪತ್ರಯವಾಗಿದೆ. ಈ ವಿಷಯದ ಬಗ್ಗೆ ಸದನದಲ್ಲಿ ಈಗಾಗಲೇ ಮೂರು ಬಾರಿ ಚರ್ಚೆಯಾಗಿದೆ. ಆದುದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಯಾವ ಮುಖ್ಯಮಂತ್ರಿಯೇ ಆಗಲಿ, ಯಾವುದೇ ಒಂದು ಪ್ರದೇಶದಿಂದ ಚುನಾಯಿತರಾಗಿ ಬಂದಿದ್ದರೆ, ಅವರು ಏಕೀಕೃತ ಕರ್ನಾಟಕದ ಮುಖ್ಯಮಂತ್ರಿಯಾಗಿ ಕೆಲಸ ಮಾಡಬೇಕು. ಇಲ್ಲಿ ಜನತೆಗೆ ಏನು ಅನಾನುಕೂಲ, ತೊಂದರೆ ಇದೆ? ಅದನ್ನು ಬಗೆಹರಿಸತಕ್ಕ ಒಂದು ಕಾರ್ಯಕ್ರಮವನ್ನು ಹಾಕಬೇಕೇ ವಿನಾ ಒಂದು ಪ್ರದೇಶಕ್ಕೆ ಹಾಕಿಕೊಳ್ಳುವ ಕಾರ್ಯಕ್ರಮಗಳನ್ನು ಇನ್ನು ಮುಂದಾದರೂ ಕೈಬಿಡಬೇಕು.

ಈಗ ಮಾಡಿದ್ದಾರೆ, ಸಂತೋಷ. ಆದರೆ, ಅದೇ ರೀತಿಯಲ್ಲಿ ಉಳಿದಿರತಕ್ಕ ಇತರ ಪ್ರದೇಶಗಳಲ್ಲಿಯೂ ಕೂಡ ಅಭಿವೃದ್ಧಿ ಪಡಿತಕ್ಕಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೇ, ಇದೇ ರೀತಿ ಇವೊತ್ತಿನ ದಿವಸ ರಾಜ್ಯಕ್ಕೆ ಹೊಸ ಹೊಸ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಆದರೆ, ಕೆಲವೊಂದು ಕಾರ್ಯಕ್ರಮಗಳಿಗೆ ಹಣ ಬೇಕು, ಹಣ ಬರಬೇಕು. ಅಂಕಿ ಅಂಶಗಳ ಪ್ರಕಾರ ಇವೊತ್ತು ಎಷ್ಟು ಹಣ ಬರಬೇಕಾಗಿತ್ತೋ ಅಷ್ಟು ಹಣ ಇನ್ನೂ ಕೂಡ ಬಂದಿಲ್ಲ. ಬಂದಿಲ್ಲದಿರತಕ್ಕ ಉದಾಹರಣೆಯನ್ನು ಈಗಾಗಲೇ ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥ ಮಾನ್ಯ ಶ್ರೀ ಘೋರ್ಪಡೆಯವರು ಮತ್ತು ಮಾನ್ಯ ಸದಸ್ಯರು ಹೇಳಿದ್ದಾರೆ. ಕುಡಿಯುವ ನೀರಿಗಾಗಿ ಹೆಚ್ಚುವರಿ ಬರತಕ್ಕಂಥ ಆದಾಯದಲ್ಲಿ 25 ಕೋಟಿ ರೂ. ಕೊಡುತ್ತೇವೆಂಬ ಮಾತನ್ನು ಕೂಡಾ ಹೇಳಿದ್ದಾರೆ. ನಾನು ಈ ವಾದಕ್ಕೆ ಎಲ್ಲಾ ವಿವರಗಳನ್ನು ಕೊಡುವುದಕ್ಕ ಇಷ್ಟಪಡುತ್ತೇನೆ. ರೂ. 25 ಕೋಟಿಯಲ್ಲಿ ಒಂದು ಪೈಸೆಯೂ ಕೊಡಲಿಲ್ಲ. ಅದು ಕೊಡದೇ ಇದ್ದರೆ, ಮಾನ್ಯ ಶ್ರೀ ಘೋರ್ಪಡೆಯವರು ನಿನ್ನೆ ದಿವಸ ಹೇಳಿದ್ದಾರೆ, ಬಜೆಟ್ ನಲ್ಲಿ ಏನೇನು ಕಾರ್ಯಕ್ರಮ ಇದೆ, ಆ ಕಾರ್ಯಕ್ರಮಗಳಲ್ಲಿರತಕ್ಕಂಥ ಹಣವನ್ನು ಕುಡಿಯುವ ನೀರಿಗಾಗಿ ಬಿಡುಗಡೆ ಮಾಡತಕ್ಕಂಥ ಪರಿಸ್ಥಿತಿಗೆ ಬಂದಿದ್ದೇವೆಂದು ಆಡಳಿತ ಪಕ್ಷದ ಸದಸ್ಯರು ಹೇಳಿದ ಮೇಲೆ, ಅದಕ್ಕಿಂತ ಮುಂದೆ ಹೋಗಿ ಹೇಳುವುದು ಉಚಿತವಲ್ಲವೆಂದು ಭಾವಿಸುತ್ತೇನೆ. 55 ಕೋಟಿ ರೂಪಾಯಿಯನ್ನು ನೀರಾವರಿಗೆ ಒದಗಿಸಿದ್ದರಲ್ಲಿ ಎಷ್ಟು ಖರ್ಚಾಗಿದೆ ಎಂದು ಇಲ್ಲಿ ಹೇಳಿದ್ದೇನೆ. ಅದು ಕಡತದಲ್ಲಿ ಇದೆ. ಮತ್ತೊಂದು ಸಾರಿ ಹೇಳುವುದಕ್ಕೆ ಹೋಗುವುದಿಲ್ಲ.

ಇದಕ್ಕೆ ಕಾರಣವೇನೆಂದರೆ ಸರ್ಕಾರಕ್ಕೆ ಯಾವ್ಯಾವ ಮೂಲಗಳಿಂದ ಆದಾಯ ಬರಬೇಕಾಗಿತ್ತು ಆ ಮೂಲಗಳಿಂದ ಆದಾಯ ಬರುತ್ತಿಲ್ಲ. ಅದರಲ್ಲೂ ಮಾನ್ಯ ಬಂಗಾರಪ್ಪನವರ ಸರ್ಕಾರ ಬಂದ ಮೇಲೆ ಈ ರಾಜ್ಯದ ಹಣಕಾಸಿನ ಅವ್ಯವಸ್ಥೆ, ದುರ್ವ್ಯವಸ್ಥೆ ಯಥೇಚ್ಛವಾಗಿ ಇವತ್ತಿನ ದಿವಸ ನಡೆಯುತ್ತಿದೆ. ಇದಕ್ಕೆ ಇವತ್ತಿನ ದಿವಸ ಬಡಾಯಿಯನ್ನು ಕೊಚ್ಚಿಕೊಂಡಿದ್ದಾರೆ. ಯಾವುದರಲ್ಲಿ ಅಂದರೆ ಈ ರಾಜ್ಯದ ಅಬಕಾರಿ ವಿಚಾರದಲ್ಲಿ 556 ಕೋಟಿ ರೂ.ಗಳ ಹಣ ಬರಬೇಕಾಗಿದೆ ಎಂದು ಹೇಳಿದ್ದಾರೆ. ಆದರೆ ಅದು ಬರುತ್ತಿಲ್ಲ. ಅದು 426.27 ಕೋಟಿ ರೂಪಾಯಿ ಎಂದು ಅವರೇ ಹೇಳಿಕೊಂಡಿದ್ದಾರೆ. ಇದಕ್ಕೆ ಕಾರಣ ಏನು ಎಂದರೆ ಈ ಮುಖ್ಯಮಂತ್ರಿಗಳ ಈ ಭಾಷಣವೇನು ಇದೆ ಇದು ಈ ರಾಜ್ಯದ ಎಕ್ಸೈಸ್ ದೊರೆಗಳ ಬ್ರೀಫ್ ಕೇಸಿನಿಂದ ಹೊರಗಡೆ ಬಂದಿರತಕ್ಕಂತಹ ವರದಿ ಇದು.

ಶ್ರೀ ಕೆ. ಶಿವಮೂರ್ತಿ :- ಮಾನ್ಯ ಬೈರೇಗೌಡರು ಬಹಳ ಚೆನ್ನಾಗಿ ಭಾಷಣ ಮಾಡುತ್ತಿದ್ದಾರೆ. ಅವರು ಹಿಂದೆ ಎಕ್ಸೈಸ್ ಮಂತ್ರಿಗಳಾಗಿದ್ದರು ಎಂದು ಅನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಮೀನುಗಾರಿಕಾ ಮಂತ್ರಿಗಳಾಗಿದ್ದರು. ಮೀನಿಗೂ ಬೀರಿಗೂ ಸಂಬಂಧವಿಲ್ಲ. ಮೀನು ಎಲ್ಲಿ? ಬೀರು, ಬ್ರಾಂದಿ, ವಿಸ್ಕಿ ಎಲ್ಲಿ? ಅವರು ಕುಡಿಯುವುದನ್ನೂ ನಾನು ನೋಡಿಲ್ಲ.

ಶ್ರೀ ಕೆ. ಶಿವಮೂರ್ತಿ :- ಆದರೆ ಅದರ ಬಗ್ಗೆ ಆಳವಾದ ಅಗಾಧವಾದ ಪಾಂಡಿತ್ಯವಿದೆ.

ಶ್ರೀ ವಾಟಾಳ್ ನಾಗರಾಜ್ :- ಅದು ನನಗೆ ಗೊತ್ತಿಲ್ಲ. ಅಗೋಚರವಾಗಿ ತಾವು ಕಂಡುಹಿಡಿದಿರಬಹುದು.

ಶ್ರೀ ಕೆ. ಶಿವಮೂರ್ತಿ :- ಉತ್ತಮವಾದ ಸಲಹೆ ಕೊಡಲಿ ಈಗ ಏಕೆ ಈ ಪ್ರಸಕ್ತ ದೊರೆಗಳಿಂದ ಬಂದಿರುವುದು ಎಂದು ಹೇಳುತ್ತಿದ್ದಾರೆ ಅದು ಸರಿಯಲ್ಲ. ತಮ್ಮ ಸಲಹೆ ಇದ್ದರೆ ಕೊಡ ಒಪ್ಪಿಕೊಳ್ಳುತ್ತೇನೆ.

ಶ್ರೀ ಬನ್ನಿಕೋಡ್ ಎಚ್. ಬಸಪ್ಪ :- ಅವರು ಅದನ್ನೇ ಹೇಳುವುದಕ್ಕೆ ಹೊರಟಿದ್ದಾರೆ ಕೇಳಿ.

ಶ್ರೀ ಸಿ. ಬೈರೇಗೌಡ :- ಏನೇನಾಗಿದೆ ಎಂದು ಹೇಳುವುದಕ್ಕೇ ನಾನು ಇಲ್ಲಿ ನಿಂತಿದ್ದೇನೆ. ಇವತ್ತು ಹೊಸದಾಗಿ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ.

ಶ್ರೀ ಆರ್.ಎನ್. ನಾಯಕ್ :- ಪುಸ್ತಕಗಳು ಪ್ರಿಂಟಿಂಗ್ ಪ್ರೆಸ್‌ನಿಂದ ಬರುತ್ತವೆ. ಅಷ್ಟೂ ಸಾಮಾನ್ಯ ಜ್ಞಾನ ಇಲ್ಲದಿದ್ದರೆ ಏನು ಮಾಡುವುದಕ್ಕಾಗುತ್ತದೆ? ಎಕ್ಸೈಸ್ ದೊರೆಗಳಿಂದ ಬ್ಯಾಗಿನಿಂದ ಈಚೆಗೆ ಬರುತ್ತದೆಂದು ಹೇಳುತ್ತಿದ್ದೀರಿ. ನಿಮ್ಮ ಸಾಮಾನ್ಯ ನಾಲೆಡ್ಜ್ ಎಲ್ಲಿ ಹೋಯಿತು.

ಶ್ರೀ ಸಿ. ಬೈರೇಗೌಡ :- ಎಕ್ಸೈಸ್ ದೊರೆಗಳ ಬ್ರೀಫ್ ಕೇಸ್‌ನಿಂದ ಬಂತೋ ಅಥವಾ ಅವರ ಜೇಬಿನಿಂದ ಬಂತೋ ಎನ್ನುವುದನ್ನು ತಿಳಿಸುತ್ತೇನೆ. ಯಾರ ಜೇಬಿನಿಂದ ಬಂತು ಎನ್ನುವುದನ್ನು ತಿಳಿಸುತ್ತೇನೆ. ನಾನು ಮೊದಲ ಬಾರಿಗೆ ಈ ಮಾತನ್ನು ಹೇಳುತ್ತಿಲ್ಲ. ನಮ್ಮ ಸರ್ಕಾರವಿದ್ದಾಗಲೂ ಕೂಡ ಆವತ್ತೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಒಂದು ದಿವಸಕ್ಕೆ ಒಂದು ಕೋಟಿ

ರೂಪಾಯಿ ನಷ್ಟವಾಗುತ್ತದೆ ಹಣ ಪೋಲಾಗುತ್ತದೆಂದು ಅವತ್ತೂ ಹೇಳಿದ್ದೆ. ಆವತ್ತಿನ ದಿವಸ ಕೆಲವರು ಲಘುವಾಗಿ ಮಾತನಾಡಿದ್ದೂ ಉಂಟು. ಬೇರೆ ಬೇರೆ ಮಾತನಾಡಿದ್ದೂ ಉಂಟು. ನಾನು ಆವತ್ತಿನ ದಿವಸ ಏನು ಹೇಳಿದ್ದೆ ಅದು ಅಕ್ಷರಶಃ ಸಾಬೀತಾಗಿದೆ ಇವತ್ತಿನ ದಿವಸ. ರಾತ್ರಿ ಹೊತ್ತಿನಲ್ಲಿ ಯಾವ ಬಾವಿಯನ್ನು ಚೆನ್ನಾಗಿ ಕಂಡಿರುತ್ತೇವೆಯೋ ಸ್ಪಷ್ಟವಾಗಿ ಗೋಚರಿಸಿದೆಯೋ ಅದೇ ಬಾವಿಯಲ್ಲಿ ಹಗಲು ಬೀಳತಕ್ಕಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ.

ಏನೆಂದರೆ ಸೆಕೆಂಡ್ಸ್ ಹಾವಳಿಯನ್ನು ತಡೆಗಟ್ಟುವುದಕ್ಕೆ ಒಂದು ದಿಟ್ಟವಾದ ಕಾರ್ಯಕ್ರಮವನ್ನು ಹಿಂದೆ ಇದ್ದ ಅಬಕಾರಿ ಮಂತ್ರಿ ಹಾಗೂ ಅರ್ಥಮಂತ್ರಿಗಳು ತೆಗೆದುಕೊಂಡದ್ದರು. ಅದನ್ನು ನಾನು ಸ್ವಾಗತ ಮಾಡಿದ್ದೆ. ಇದೇ ಸದನದಲ್ಲಿ ಕೂಡ ಅಭಿನಂದನೆಯನ್ನು ಮಾಡಿದ್ದೇನೆ. ನಾನು ಈಗಲೂ ಕೂಡ ಅಭಿನಂದಿಸುವುದಕ್ಕೆ ಇಷ್ಟಪಡುತ್ತೇನೆ. ಕಾರಣ ಏನೆಂದರೆ ಅವರ ಕಾಲದಲ್ಲಿ ತೆಗೆದುಕೊಂಡಂತಹ ದಿಟ್ಟ ಕ್ರಮದಿಂದ ಸರ್ಕಾರಕ್ಕೆ ಆದಾಯ ಹೆಚ್ಚಾಗಿ ಬಂದಿದೆ. ಆ ಅಂಕಿಅಂಶಗಳನ್ನು ನೀವು ಇವತ್ತಿನ ದಿವಸ ಹೇಳುತ್ತಿದ್ದೀರಿ. ಅದನ್ನೆಲ್ಲ ಬಿಚ್ಚಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತಿನ ದಿವಸ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ತಕ್ಷಣವೇ ಏನು ಪರಂಪರೆ ಇತ್ತೋ ಏನು ಕಾರ್ಯಕ್ರಮವನ್ನು ಹಾಕಿದ್ದರೋ ಆ ಕಾರ್ಯಕ್ರಮವೆಲ್ಲವನ್ನು ಮಣ್ಣುಪಾಲು ಮಾಡತಕ್ಕ ಕಾರ್ಯಕ್ರಮ ನಡೆದಿದೆ. ಒಂದನೆಯದು ಈ ಸೆಕೆಂಡ್ ಹಾವಳಿಯನ್ನು ತಡೆಗಟ್ಟುವುದಕ್ಕೋಸ್ಕರ ಅಬಕಾರಿ ಹೋಲ್‌ಸೇಲ್ ಏನಿದೆ ಅದನ್ನು ಎಂಎಸ್‌ಐಎಲ್‌ನಿಂದ ಮಾಡಿಸಬೇಕು ಎನ್ನತಕ್ಕದ್ದನ್ನು ಮಾಡಲಿಕ್ಕೆ ಎಕ್ಸೈಜ್ ನಿಯಮವನ್ನು ತಿದ್ದುಪಡಿ ಮಾಡಿ ಸಂಪೂರ್ಣವಾಗಿ......

ಶ್ರೀ ಕೆ. ಶಿವಮೂರ್ತಿ :- ಈ ವಿಷಯ ಸುಪ್ರೀಂಕೋರ್ಟ್ ಮುಂದಿದೆ. ಆದ್ದರಿಂದ ಅದರ ಬಗ್ಗೆ ಮಾತನಾಡತಕ್ಕದ್ದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ :- ಏನು ವಿಷಯ ಸುಪ್ರೀಂಕೋರ್ಟ್ ಮುಂದಿದೆ? ಅದು ತಮಗೂ ಕೂಡ ಗೊತ್ತಿಲ್ಲ. ನಾನು ಆ ವಿಚಾರವನ್ನು ಬಿಟ್ಟು ಇಲ್ಲಿ ಏನು ನಡೆಯುತ್ತದೆ ತಾವೇನು ಮಾಡಿದ್ದೀರಿ ಅದನ್ನು ಹೇಳುತ್ತಿದ್ದೇನೆ. ನಿಯಮಗಳನ್ನು ತಿದ್ದುಪಡಿ ಮಾಡಿದ್ದು ಅದು ಕೋರ್ಟಿಗೆ ಹೋಯಿತು ಅದು ನನಗೂ ಗೊತ್ತಿದೆ. ಕೋರ್ಟಿನಲ್ಲಿರುವುದು ಅದು ಅಲ್ಲಿರಲಿ. ಅದು ರಾಜ್ಯದ ಕೋರ್ಟಿನಲ್ಲಿ ತೀರ್ಮಾನವಾಗಿತ್ತು. ಈಗ ಅದು ಸುಪ್ರೀಂ ಕೋರ್ಟಿನಲ್ಲಿದೆ. ಅದಕ್ಕೆ ಇನ್ನು ಹೆಚ್ಚಿನ ಒತ್ತು ಕೊಡುವುದಕ್ಕೋಸ್ಕರ, ಅದಕ್ಕೆ ಬಲ ಕೊಡುವುದಕ್ಕೋಸ್ಕರ ಎಕ್ಸೈಜ್ ಕಾನೂನಿಗೆ ಒಂದು ಸುಗ್ರೀವಾಜ್ಞೆಯನ್ನು ತಂದರು. ಸುಗ್ರೀವಾಜ್ಞೆಯ ಪ್ರತಿ ನನ್ನ ಹತ್ತಿರವಿದೆ. ಇದು ಸಾಮಾನ್ಯವಾಗಿ ಸುಗ್ರೀವಾಜ್ಞೆಗಳನ್ನು ತಂದರೂ ಅದರಲ್ಲೂ ಅತಿಮುಖ್ಯವಾಗಿರತಕ್ಕ ವಿಚಾರವನ್ನು ತಂದಾಗ ಅದು ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ, ರಾಜ್ಯದ ಅಭಿವೃದ್ಧಿಯ ಮೇಲೆ ಪರಿಣಾಮ ಬೀರತಕ್ಕ ಕ್ರಮ. ದಿಟ್ಟತನದಿಂದ ತೆಗೆದುಕೊಂಡಂತಹ ಸುಗ್ರೀವಾಜ್ಞೆ ಇಲ್ಲಿದೆ.

ಆ ನೋಟಿಫಿಕೇಶನ್ ನಂ. ಈ ರೀತಿ ಇದೆ. ನಂ, ಎಫ್‌ಎಡಬ್ಲ್ಯು 34 ಎಲ್‌ಎನ್‌ಜಿ 90 ಬೆಂಗಳೂರು, ದಿನಾಂಕ 13-8-90 ಕರ್ನಾಟಕ ಆರ್ಡಿನೆನ್ಸ್ ನಂ. 4 1990 ಈ ಆರ್ಡಿನೆನ್ಸ್ ಮೂಲಕ ಸರ್ಕಾರ ಎಕ್ಸೈಜ್ ಕಾನೂನಿಗೆ ತಿದ್ದುಪಡಿ ಮಾಡುವುದಕ್ಕೆ ತಂದಿತು. ಆದರೆ ಅದು ಈ

ಸದನದ ಮುಂದೆ ಬರಲಿಲ್ಲ. ಈ ಸುಗ್ರೀವಾಜ್ಞೆಯನ್ನು ಯಾವ ಉದ್ದೇಶದಿಂದ ತರಲಾಗಿತ್ತು ಆ ಆರ್ಡಿನೆನ್ಸ್‌ನ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ಓದುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಅದು ಪ್ರಿಂಟ್ ಆಗಿದೆ. ಮೂಲ ಉದ್ದೇಶ ಏನಿದೆ ಅದು ಕಾನೂನನ್ನು ತಿದ್ದುಪಡಿ ಮಾಡಿ ಈ ಸೆಕೆಂಡ್ಸ್ ಹಾವಳಿಯನ್ನು ರದ್ದು ಮಾಡತಕ್ಕ ಉದ್ದೇಶವಿದ್ದರೆ, ಆ ಉದ್ದೇಶವನ್ನು ರೈಟ್ ಎಬೌಟರ್ನ್ ಮಾಡುವ ಕೆಲಸವನ್ನು ಈ ಸರ್ಕಾರ ತೆಗೆದುಕೊಂಡಿದೆ. ಆಮೇಲೆ ಈ ನಿಯಮ  ಏನಿದೆ ಈ ಸದನದ ಅಜೆಂಡಾದಲ್ಲೂ ಕೂಡ ಅದು ಬಂದಿತ್ತು. ಮಸೂದೆ ಸದನದಲ್ಲಿ ಇಂಟರ್‌ಡಕ್ಷನ್ ಆಗಬೇಕೆಂದು ಅಜೆಂಡಾದಲ್ಲಿ ಬಂದಿದೆ. ಅದರ ಬಗ್ಗೆ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಸಹ ಚರ್ಚೆಯಾಯಿತು. ಈ ಬಿಲ್‌ನ ಬಗ್ಗೆ ಚರ್ಚೆ ಮಾಡಬೇಕೆಂದು ಅದು ಅಲ್ಲಿ ಚರ್ಚೆಗೆ ಬಂದಿತ್ತು. ಆದರೆ ಈ ಸದನಕ್ಕೆ ಅದು ಬರಲಿಲ್ಲ. ಇವತ್ತು ಆ ಬಿಲ್ ಇಲ್ಲಿದೆ.

ಶ್ರೀ ಜಿ.ಎಸ್. ಆಚಾರ್ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಕೆ. ಶಿವಮೂರ್ತಿ :– ಆ ಬಿಲ್ ಇಲ್ಲಿ ಬಂತಲ್ಲ ಅವತ್ತು ಅಸೆಂಬ್ಲಿ ನಡೆಯಿತೇನು? ಜಿಲ್ಲಾ ಪರಿಷತ್ತು ಮಸೂದೆಯನ್ನು ಹರಿದುಹಾಕಿ ಧರಣಿ ಮಾಡತಕ್ಕಂಥ ಸಂದರ್ಭ ಬಂತು.....

ಶ್ರೀ ಸಿ. ಬೈರೇಗೌಡ :– ಎಲ್ಲಾ ಅಚ್ಚಾಗಿದೆ. ಎಲ್‌ಎ ಬಿಲ್ ನಂ. 24 ಆಫ್ 1990. ಇದನ್ನು ತಂದಿದ್ದಿರೋ ಇಲ್ಲವೇ? ಏಕೆ ಇದನ್ನು ಕಾನೂನು ಮಾಡಲಿಲ್ಲ? ಸದನದ ಒಪ್ಪಿಗೆಯನ್ನು ಏಕೆ ಪಡೆಯಲಿಲ್ಲ? ನಾವು ಏನಾದರೂ ವಿರೋಧ ಮಾಡುತ್ತೇವೆ ಎಂದು ಹೇಳಿದ್ದೀವಾ? ಏಕೆ ಮಾಡಲಿಲ್ಲ ಇದನ್ನು? ಇದರ ಬಗ್ಗೆ ಸರ್ಕಾರ ರಾಜ್ಯದ ಜನತೆಗೆ ಉತ್ತರ ಕೊಡಬೇಕಾಗಿದೆ. ಆರ್ಡಿನೆನ್ಸ್ ತಂದಿದ್ದು ಏತಕ್ಕೆ? ಈ ಬಿಲ್ ಅನ್ನು ಅಚ್ಚು ಹಾಕಸಿ ಈ ಸದನದಲ್ಲಿ ಅದನ್ನು ಇಡಬೇಕೆಂಬ ತೀರ್ಮಾನಕ್ಕೆ ಸರ್ಕಾರ ಬಂದು ಪುನಃ ವಾಪಸ್ಸು ಹೋಗಿರತಕ್ಕಂಥಾದ್ದಕ್ಕೆ ಕಾರಣ ಏನು? ಆದ್ದರಿಂದ ನಾನು ಹೇಳಿದೆ. ಇವತ್ತು ಈ ಭಾಷಣ ಏನಿದೆ, ಇದು ಎಕ್ಸೈಸ್ ದೊರೆಗಳ ಬ್ರೀಫ್ ಕೇಸ್‌ನಿಂದ ಬಂದಿರತಕ್ಕ ಭಾಷಣವಾಗಿದೆಯೆಂದು ಇದೇ ಹೇಳುತ್ತದೆ. ತಾವು ನಡೆದುಕೊಂಡಿರತಕ್ಕಂಥ ರೀತಿಯನ್ನು ಇದು ತೋರಿಸುತ್ತದೆ. ಇದಕ್ಕಿಂತ ಜ್ವಲಂತ ಉದಾಹರಣೆ ಬೇರೆ ಬೇಕಾಗಿಲ್ಲ. ಇನ್ನೊಂದು, ಈ ಕೇಸ್ ಬಗ್ಗೆ ಮಾತನಾಡಿ ನನಗೆ ಜ್ಞಾಪಕ ಮಾಡಿಕೊಟ್ಟರು. ಅದು ಏನೆಂದರೆ, ಸುಪ್ರೀಂಕೋರ್ಟಿನಲ್ಲಿ ಕೇಸು ಇರತಕ್ಕದ್ದು ನಿಜ. ಯಾರು ಪ್ರತಿವಾದಿಗಳು, ಎಕ್ಸೈಸ್ ದೊರೆಗಳಾಗಿರತಕ್ಕಂಥವರು ಸುಪ್ರೀಂಕೋರ್ಟಿಗೆ ಹೋಗಿದ್ದಾರೆ, ಅವರ ಪರವಾಗಿ ಒಬ್ಬ ಶ್ರೀ ರಾಮಸ್ವಾಮಿ ಎನ್ನತಕ್ಕಂಥವರು ವಾದ ಮಾಡುತ್ತಿದ್ದರು. ಅವರು ಇವತ್ತಿನ ದಿವಸ ದೇಶದ ಅಟಾರ್ನಿ ಜನರಲ್ ಆಗಿ ನೇಮಕಗೊಂಡಿದ್ದಾರೆ. ಇವತ್ತು ಅಲ್ಲಿ ಏನು ನಡೆಯುತ್ತಿದೆ? ಅವರನ್ನು ಪುನಃ ಈ ಕೇಸನ್ನು ವಾದ ಮಾಡುವುದಕ್ಕೆ, ಈ ಎಕ್ಸೈಸ್ ದೊರೆಗಳ ಪರವಾಗಿ ವಾದ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯತಕ್ಕಂಥ ಒಂದು ಪ್ರಯತ್ನವನ್ನು ಇವತ್ತು ಆ ವಕೀಲರು ನಡೆಸಿದ್ದಾರೆ ಸುಪ್ರೀಂಕೋರ್ಟಿನಲ್ಲಿ.

ಇದಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡಕೂಡದು. ಒಪ್ಪಿಗೆ ಕೊಡದಿರುವುದರ ಬಗ್ಗೆ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗಿತ್ತು. ಅದು ಬರೆದಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಒಂದು ರೀತಿಯಲ್ಲಿ ನೀವೇನಾದರೂ ಆ ರೀತಿ ಒಪ್ಪಿಗೆ ಕೊಟ್ಟರೆ, ಮೊನ್ನೆ ದಿವಸ

ಒಂದು ಸಣ್ಣ ವಿಚಾರಕ್ಕೆ ಈ ರಾಜ್ಯದ ಒಬ್ಬ ಹಿರಿಯ ಅಧಿಕಾರಿಯಾದಂಥವರು, ಹಿಂದೆ ಮುಖ್ಯ ಕಾರ್ಯದರ್ಶಿಯವರಾಗಿದ್ದ ಶ್ರೀ ಶಂಕರನಾರಾಯಣನ್ ರವರ ವಿಚಾರದಲ್ಲಿ ರಾಜ್ಯ ಸರ್ಕಾರದ ಪರವಾಗಿ ವಾದ ಮಾಡುವುದಕ್ಕೆ ಅವರನ್ನು ಡೆಲ್ಲಿಯಿಂದ ಕರೆಸಿದ್ದರು. ಆ ಒಂದು ಕೇಸಿನಲ್ಲಿ ಟ್ರಿಬ್ಯುನಲ್ ಮುಂದೆ ವಾದ ಮಾಡುವುದಕ್ಕೆ ಬಂದಿದ್ದರು. ಆ ಕೇಸಿನಲ್ಲಿ ರಾಜ್ಯ ಸರ್ಕಾರದ ಪರವಾಗಿ ಅದೇ ವಕೀಲರು ಇನ್ನೊಂದು ಕೇಸಿನಲ್ಲಿ ರಾಜ್ಯದ ಹಿತ ಕಾಪಾಡತಕ್ಕಂಥ ಮೊಕದ್ದಮೆಯಲ್ಲಿ ರಾಜ್ಯದ ವಿರುದ್ಧವಾಗಿ ವಾದ ಮಾಡತಕ್ಕಂಥ ಒಂದು ಪ್ರಯತ್ನ ಇವತ್ತಿನ ದಿವಸ ನಡೆಯುತ್ತಿದೆ. ಇದಕ್ಕೆ ರಾಜ್ಯ ಸರ್ಕಾರ ಏನಾದರೂ ತನ್ನ ವಿರೋಧವನ್ನು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆಯೇ ಅಥವಾ ಇಲ್ಲವೇ ಎನ್ನತಕ್ಕಂಥದ್ದನ್ನು ಈ ಸದನಕ್ಕೆ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ವಿನಂತಿಸುತ್ತೇನೆ. ಈಗ ಅಧ್ಯಕ್ಷಿಣಿಯವರೇ....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :- ಈಗ ಅಲ್ಲಿ ಅಧ್ಯಕ್ಷರು ಇದ್ದಾರೆ ನೋಡಿ. ನೀವು ನಮ್ಮ ಕಡೆ ನೋಡಿ ಮಾತನಾಡುತ್ತೀರಿ.

ಶ್ರೀ ಸಿ. ಬೈರೇಗೌಡ :- ಹೌದು, ತಪ್ಪಾಯಿತು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :- ಎಕ್ಸೈಸ್ ಕಡೆಗೆ ಹೋಗುವುದರಿಂದ ಈ ತರಹ ಆಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ :- ಅವರು ಭಾಷಣದಲ್ಲಿ ಮೈಮರೆತಿರುವುದರಿಂದ ವಿಷಯದ ಕಡೆಗೆ ಹೋಗುತ್ತಿದ್ದಾರೆ.

ಚೇರ್ಮನ್ :- ನೀವು ಎಲ್ಲ ಪಾಯಿಂಟ್ಸನ್ನೂ ಕವರ್ ಮಾಡಿದ್ದೀರಿ. ದಯವಿಟ್ಟು ಬೇಗ ಮುಗಿಸಿಬಿಡಿ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಇವತ್ತು ಈ ಸೆಕೆಂಡ್ಸ್ ಎನ್ನತಕ್ಕದ್ದು ಇದರಲ್ಲಿ ಎರಡು-ಮೂರು ತರಹದ್ದು ಇದೆ. ಇವತ್ತು ಬೀದಿ ಬೀದಿಯಲ್ಲಿ, ಹಾದಿ ಹಾದಿಯಲ್ಲಿ ನಡೆಯುತ್ತಿದೆ. ನಾನು ಆಗಲೇ ಪ್ರಸ್ತಾಪ ಮಾಡಿದೆ. ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿಯಷ್ಟು ಒಂದು ಕಾಲದಲ್ಲಿ ಹೋಗಿತ್ತು ಎಂದು. ಇವತ್ತು ಅದನ್ನು ಮೀರಿಸತಕ್ಕ ರೀತಿಯಲ್ಲಿ ಎಲ್ಲಿ ನೋಡಿದರೂ ಕೂಡ ಈ ಸೆಕೆಂಡ್ಸ್ ಪ್ರಭಾವ ರಾಜ್ಯದಲ್ಲಿ ನಡೆಯುತ್ತಿದೆ. ಬೆಂಗಳೂರಿನಲ್ಲೊ ಹಾದಿ, ಹಾದಿಯಲ್ಲಿ ಮೂಲೆ ಮೂಲೆಯಲ್ಲಿ ನಡೆಯುತ್ತಿದೆ. ಇವತ್ತು ನಾನು ಅನೇಕ ಲೇಬಲ್ಸ್‌ಗಳನ್ನು ಇಲ್ಲಿ ತಂದಿದ್ದೇನೆ. ಇವುಗಳನ್ನು ರಾಜ್ಯದಲ್ಲಿ ಮಾರಾಟ ಮಾಡಕೂಡದು, ಇವುಗಳಿಗೆ ನಿಷೇಧ ಇದೆ. ಅವುಗಳಲ್ಲಿ 4-5ನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

Haywards Whisky. not for sale in Madhya Pradesh, not for sale in Rajasthan, Macdowell. Batch No. 16th January, 91 for export Lord John. Delux Whisky, Royal Brandy for export only. Macdowell Whisky. Western Blend whisky. Western XXX rum.

ಈ ರೀತಿಯಾಗಿ ಅನೇಕ ಬ್ರಾಂಡ್‌ಗಳು ರಾಜ್ಯದಲ್ಲಿ ಮಾರಾಟವಾಗುತ್ತಿದೆ. ಇವೆಲ್ಲವೂ ರಾಜ್ಯದಲ್ಲಿ ಮಾರಾಟವಾಗಬಾರದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :- ಈಗ ನಮಗೆ ಗೊತ್ತಾಯಿತು, ಇವರು ತೊಂದರೆ ತೆಗೆದುಕೊಳ್ಳುತ್ತಿದ್ದಾರೆ. ಬಹಳಷ್ಟು ಸ್ಟಡಿ ಮಾಡಿ, ಬಹಳಷ್ಟು ತೊಂದರೆ ತೆಗೆದುಕೊಂಡು ಭಾಷಣ ಮಾಡುತ್ತೇನೆಂದು ತಾವು ಪ್ರಾರಂಭದಲ್ಲಿ ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಸಭೆಯಲ್ಲಿ ಒಂದು ರೀತಿಯ ರುಚಿ ಹತ್ತುತ್ತಿದೆ ಮತ್ತು ಏರುತ್ತಿದೆ. ಸಭೆ ದಾರಿ ತಪ್ಪಿತು, ಈ ಬಗ್ಗೆ ಸ್ವಲ್ಪ ಗಮನ ಹರಿಸಬೇಕು.

ಶ್ರೀ ಸಿ. ಬೈರೇಗೌಡ :- ಈ ರೀತಿಯಲ್ಲಿ ಹಾದಿ ಬೀದಿಯಲ್ಲಿ ನಡೆಯುತ್ತಿದೆ. ಹಿಂದೆ ಒಂದು ಕೋಟಿ ರೂಪಾಯಿ ಎಂದು ಹೇಳಿದೆ. ಅದನ್ನು ಮೀರತಕ್ಕ ರೀತಿಯಲ್ಲಿ ಐಎಂಎಫ್‌ಎಲ್ ಹೋಗುತ್ತಿದೆ. ಇನ್ನು ಸಾರಾಯಿ ಬಗ್ಗೆ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಇದು ಪೂರ್ತಿಯಾಗಿ ನಮಗೆ ಬರುತ್ತಾ ಇಲ್ಲ. ಮಂಥ್ಲಿ ರೆಂಟಲ್ಸ್ ಬರುತ್ತಾ ಇಲ್ಲ ಎನ್ನುವುದನ್ನು ಅವರೂ ಒಪ್ಪಿದ್ದಾರೆ. ಬರದೇ ಇರುವುದಕ್ಕೆ ಕಾರಣ ಇದೆ.

ಮತ್ತೊಂದು ಸಾರಿ ಹೇಳಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ತಮ್ಮ ಜಿಲ್ಲೆ ಅಧ್ಯಕ್ಷರೇ (ಮಾನ್ಯ ಬಿ.ಎಸ್. ಆಜಾದ್‌ರವರು ಅಧ್ಯಕ್ಷ ಪೀಠದಲ್ಲಿದ್ದರು) ತಾವೂ ಕೂಡ ಇಲ್ಲಿ ಒತ್ತಾಯ ಮಾಡಿದ್ದೀರಿ. ಅಲ್ಲಿ ಹೆಂಡವನ್ನು ಇಳಿಸುವುದಕ್ಕೆ ಮಾರಾಟ ಮಾಡುವುದಕ್ಕೆ ಎಲ್ಲಾ ಪಕ್ಷದ ಶಾಸಕರೂ ಸರ್ಕಾರದ ಮೇಲೆ ಒತ್ತಾಯವನ್ನು ತಂದಿರುತ್ತಾರೆ. ಈ ಒತ್ತಾಯ ಯಾವಾಗ ಬಂತು ಎಂದರೆ ಹರಾಜು ಎಲ್ಲವೂ ಮುಗಿದು ಹೋಗಿತ್ತು. ಮುಗಿದು ಹೋದ ಮೇಲೆ ಒತ್ತಾಯ ಬಂತು. ಹಿಂದೆ ಇದ್ದ ಸರ್ಕಾರ, ಈ ಮೂರ್ತೇದಾರರು ಯಾರಿದ್ದಾರೆ, ಅವರಿಗೆ ಬೇರೆ ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂದೂ ಯಾರು ನಿರುದ್ಯೋಗಿಗಳಾಗಿದ್ದಾರೆ, ಅವರಿಗೆ ಬೇರೆ ಪರ್ಯಾಯ ವ್ಯವಸ್ಥೆ ಮಾಡಿ, ಉದ್ಯೋಗವನ್ನು ಕೊಡತಕ್ಕ ಕೆಲಸವನ್ನು ಮಾಡುವುದಾಗಿ ಆ ಸಂದರ್ಭದಲ್ಲಿ ಆಶ್ವಾಸನೆ ಮಾಡಿದರು. ಮಾನ್ಯ ಬಂಗಾರಪ್ಪನವರು ಬಂದ ತಕ್ಷಣ ಮಾಡಿದ ಕೆಲಸ ಏನೆಂದರೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಹೋಗಲಿಲ್ಲ. ಯಾರು ನಿರುದ್ಯೋಗಿಗಳಾಗಿದ್ದಾರೆ, ಅವರಿಗೆ ಬೇರೆ ಉದ್ಯೋಗ ಕೊಡತಕ್ಕ ಕೆಲಸ ಮಾಡಲಿಲ್ಲ. ಧಾರಾಳವಾಗಿ ಹೆಂಡವನ್ನು ಇಳಿಸಿ ಮಾರಾಟ ಮಾಡಿ ಎಂಬ ಆಜ್ಞೆಯನ್ನು ಮಾಡಿದ್ದಾರೆ. ಇವತ್ತಿನ ದಿವಸ ಎಕ್ಸೈಸ್ ಬಾಬಿನಲ್ಲಿ ಪ್ರತಿಯೊಂದು ಕೂಡ ಸರ್ಕಾರದ ಕಾನೂನು ಪ್ರಕಾರ ಪ್ರತಿಯೊಂದಕ್ಕೂ ಕಾನೂನು ಇದೆ.

ಇದನ್ನು ಯಾವ ರೀತಿ ಇಡಬೇಕು, ಯಾವ ರೀತಿ ತಯಾರಿಸಬೇಕೆನ್ನುವುದಕ್ಕೆ ಕಾನೂನು ಇದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಇಲ್ಲ. ಅಲ್ಲಿ ಹೆಂಡ ಹರಾಜು ಮಾಡಬೇಕಾಗಿತ್ತು. ಇಲ್ಲಿಯವರೆಗೂ ಕೂಡಾ ಹೆಂಡವನ್ನು ಹರಾಜು ಮಾಡಲಿಲ್ಲ. ಅದರ ಜೊತೆಗೆ ಇವತ್ತು ಅಲ್ಲಿ ಏನಾಗಿದೆ ಎಂದರೆ, ಯಾರು ಸಾರಾಯಿ ಗುತ್ತಿಗೆದಾರರು ಇದ್ದರು ಅವರು ನಮಗೆ ವ್ಯಾಪಾರ ಕಡಿಮೆ ಆಯಿತು, ಮೊದಲು ನೀವು ಹೆಂಡ ಮಾರಾಟ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದ್ದೀರಿ, ಆದರೆ ಪುನಃ ತಾವು ಈಗ ಹೆಂಡ ಮಾರಾಟ ಮಾಡಲು ಅವಕಾಶ ಕೊಟ್ಟಿರುವುದರಿಂದ ನಮಗೆ ಸಾರಾಯಿ ಮಾರಾಟವಾಗುತ್ತಿಲ್ಲ ಎನ್ನತಕ್ಕಂಥ ವಾದವನ್ನು ಇವತ್ತು

ಕೋರ್ಟಿನಲ್ಲಿ ಹೂಡಿದ್ದಾರೆ. ಹೀಗಿದೆ, ಇದರ ಹಿಕ್ಮತ್ತು ಏನು ಎಂದು ಆಮೇಲೆ ಹೇಳುತ್ತೇನೆ. ಸುಮಾರು ದಕ್ಷಿಣ ಕನ್ನಡ ಜಿಲ್ಲೆ ಒಂದರಿಂದ ರಾಜ್ಯದ ಬೊಕ್ಕಸಕ್ಕೆ 50 ಕೋಟಿ ರೂಪಾಯಿಗಳಷ್ಟು ಹಣ ಕಡಿಮೆ ಬರುತ್ತಿದೆ. ಒತ್ತಾಯ ಬಂದಿದೆ, ಅವಕಾಶ ನೀಡಿದ್ದೇವೆ ಎಂದು ಹೇಳಬಹುದು, ಆದರೆ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂದು ಹೇಳಿತ್ತು. ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಬದಲು ಕಾನೂನಿಗೆ ವಿರುದ್ಧವಾಗಿ ಅಲ್ಲಿ ಮಾರಾಟವಾಗುತ್ತಿರತಕ್ಕಂಥ ಹೆಂಡದಿಂದ ಒಂದು ವ್ಯವಸ್ಥೆ ಮಾಡುವುದಕ್ಕೆ ಬದಲು ಕಾನೂನಿಗೆ ವಿರುದ್ಧವಾಗಿ ಅಲ್ಲಿ ಮಾರಾಟವಾಗುತ್ತಿರತಕ್ಕಂಥ ಹೆಂಡದಿಂದ ಒಂದು ನಯಾಪೈಸೆ ಸಹ ಸರ್ಕಾರಕ್ಕೆ ಆದಾಯ ಇಲ್ಲ. ಯಾರು ಹರಾಜಿನಲ್ಲಿ ಸಾರಾಯಿ ಗುತ್ತಿಗೆ ಪಡೆದಿದ್ದರು ಅವರಿಂದಲೂ ಹಣ ಬರುತ್ತಿಲ್ಲ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆ ಒಂದರಿಂದಲೇ ಸುಮಾರು 50 ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರಬೇಕಾಗಿರುವುದು ಬರುತ್ತಿಲ್ಲ. ಉಳಿದ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ಅನೇಕರು ಇವತ್ತಿನ ದಿವಸ ಕೋರ್ಟ್ ಮುಂದೆ ಹೋಗಿದ್ದಾರೆ.

ಹೀಗೆ ಕೋರ್ಟಿಗೆ ಹೋಗಿ ಎಂದು ಸರ್ಕಾರದಿಂದಲೇ ಇವರಿಗೆ ಪ್ರೇರಣೆ. ಇವರು ಕೋರ್ಟಿಗೆ ಹೋಗಿದ್ದಾರೆ. ಅಲ್ಲಿ ಏನಾದರೂ ಸರ್ಕಾರದವರು ಕೇವಿಯಟ್ ಹಾಕಿದ್ದಾರೆಯೋ? ಯಾವ ಯಾವ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಕೋರ್ಟಿಗೆ ಹೋಗುತ್ತಾರೆ ಎಂದು ಇವರಿಗೆ ಗೊತ್ತಿಲ್ಲದೆ ಇಲ್ಲ. ಸಣ್ಣಪುಟ್ಟ ನೆವಗಳನ್ನು ಒಡ್ಡಿ ಕೋರ್ಟಿಗೆ ಹೋಗಿದ್ದಾರೆ. ಸರ್ಕಾರಕ್ಕೆ ಮಾಹಿತಿ ಕೂಡಾ ಇಲ್ಲದೇ ಇಲ್ಲ. ಹಾಗಾದರೆ ಯಾವ ಯಾವ ತಾಲ್ಲೂಕಿನಲ್ಲಿ ನೀವು ಕೇವಿಯಟ್ ಹಾಕಿದ್ದೀರಿ? ಕೇವಿಯಟ್ ಹಾಕದೇ ಇದ್ದರೆ ಅಬ್ಜೆಕ್ಷನ್ಸ್ ಹಾಕಬಹುದು. ಒಂದು ಸಲ್ಪಸ್ವೇ ಸಿಕ್ಕಿತು ಎಂದರೆ ಕೇವಿಯಟ್ ಇಲ್ಲ, ಏನೂ ಇಲ್ಲ. ಎಕ್ಸೈಸ್ ದೊರೆಗಳು ಆರಾಮ ಅವರಿಗಿಂತಲೂ ಸರ್ಕಾರ ಆರಾಮ. ಈ ಕೇಸುಗಳಲ್ಲಿ ಅಬ್ಜೆಕ್ಷನ್ ಹಾಕತಕ್ಕದ್ದು ಸರ್ಕಾರದ ಪ್ರಥಮ ಕರ್ತವ್ಯ. ಆ ಪ್ರಥಮ ಕರ್ತವ್ಯವನ್ನು ಸರ್ಕಾರ ಮಾಡಲಿಲ್ಲ. ಮಾಡತಕ್ಕಂಥ ಪ್ರಯತ್ನ ಕೂಡಾ ಆಗುತ್ತಿಲ್ಲ. ಸರ್ಕಾರದ ವಕೀಲರಿಗೆ ತಾಕೀತು ಮಾಡಬೇಕಾಗಿತ್ತು. ಇಷ್ಟು ಕೇಸ್ ನಲ್ಲಿ ಇಷ್ಟನೇ ತಾರೀಖಿನ ಒಳಗಾಗಿ ಅಬ್ಜೆಕ್ಷನ್ಸ್ ಹಾಕಬೇಕೆಂದು ಹೇಳಬೇಕಾಗಿತ್ತು. ಆದರೆ ಸರ್ಕಾರ ಆ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಸಾರಾಯಿ ಬಾಬಿನಲ್ಲಿ ಏನು ಹಣ ಬರಬೇಕಾಗಿತ್ತು ಅದು ಬರುತ್ತಿಲ್ಲ. 18 ಕೋಟಿ ರೂಪಾಯಿ ಬರಬೇಕೆಂದು ಸರ್ಕಾರದವರು ಹೇಳಿದ್ದಾರೆ. ಅದು ಇನ್ನೂ ಹೆಚ್ಚಾಗತಕ್ಕಂಥ ಸಂದರ್ಭ ಇದೆ. ಆದುದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಯಾವ ಯಾವ ತಾಲ್ಲೂಕಿನಲ್ಲಿ ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದೀರಿ? ತಡೆಯಾಜ್ಞೆ ಕೊಡದಂತೆ ಕೇವಿಯಟ್ ಹಾಕಿದ್ದೀರಿ? ಹಾಕದೇ ಇದ್ದರೆ ಕಾರಣ ಏನು? ಇದಕ್ಕೆ ಇವರೂ ಶಾಮೀಲಾಗಿದ್ದಾರೆ ಎಂಬುದೇ ಕಾರಣ. ಕೋರ್ಟಿನಿಂದ ಸ್ಟೇ ಆದಮೇಲೆ ಅಬ್ಜೆಕ್ಷನ್ಸ್ ಹಾಕಬೇಕಾಗಿತ್ತು. ಯಾವ ಯಾವ ಕೇಸಸ್ ನಲ್ಲಿ ಅಬ್ಜೆಕ್ಷನ್ಸ್ ಹಾಕಿದ್ದೀರಿ ಎಂಬುದನ್ನು ಈ ಸದನದ ಮುಂದೆ ಇಡಬೇಕು. ಇದು ರಾಜ್ಯದ ಜನತೆಗೆ ಗೊತ್ತಾಗಬೇಕು. ಇದನ್ನು ನಾನು ಒತ್ತಾಯ ಮಾಡುತ್ತೇನೆ. ಈ ಸರ್ಕಾರದ ಬಂದ ಮೇಲೆ ರೆಕ್ಟಿಫೈಡ್ ಸ್ಪಿರಿಟ್ ವಿಚಾರ ಏನಾಗಿದೆ ಎಂದು ಹೇಳುತ್ತೇನೆ. ಒಂದು ಸಲ ಮಾನ್ಯ ಬಂಗಾರಪ್ಪನವರು ವಿರೋಧ ಪಕ್ಷದ ಕಡೆ ಕುಳಿತಿದ್ದಾಗ ಅವರು ಮಾತನಾಡಿ, ಮಾತನಾಡಿ, ಕೊನೆಗೆ ಎಷ್ಟು ಗಂಟೆ ಮಾತನಾಡಿದರೋ ಗೊತ್ತಾಗಲಿಲ್ಲ.

ಕೊನೆಗೆ ಅವರ ಕೈಯಲ್ಲಿ ಮಾತನಾಡುವುದಕ್ಕೆ ಕೂಡಾ ಆಗಲಿಲ್ಲ. ಆಗ ಶಿವಮೂರ್ತಿಯವರು ಹಿಂದುಗಡೆ ಕುಳಿತಿದ್ದರು ಎಂದು ಕಾಣುತ್ತದೆ. ನೀವು ಇರಲಿಲ್ಲವೆಂದು ಕಾಣುತ್ತದೆ. ನಾನೂ ಕೂಡ ಆ ದೃಶ್ಯವನ್ನು ನೋಡಿದೆ. ಅವರು ಅಧಿಕಾರಕ್ಕೆ ಬಂದ ಮೇಲೆ ಈ ಸ್ಪಿರಿಟ್ ವಿಚಾರ ಏನಾಗಿದೆ, ಅಧ್ಯಕ್ಷರೇ, ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ಮೂರನೇ ಸಾರಿ ಈ ಸದನದಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚೆ ಆಯಿತು. ಇವತ್ತು ಸಾರಾಯಿ ಯಾವ ಊರಿನಲ್ಲಿ ಇಲ್ಲ ಎಲ್ಲಾ ಊರಿನಲ್ಲೂ ಸಾರಾಯಿ ಸಿಗುತ್ತಿದೆ.

ಮಾನ್ಯ ಸದಸ್ಯರೊಬ್ಬರು ಹೇಳುತ್ತಿದ್ದಾರೆ ಬೇಕಾದಷ್ಟು ಸಿಗುತ್ತಿದೆ ಎಂದು. ಕುಡಿಯುವ ನೀರು ಇಲ್ಲ. ಫ್ಯಾಕ್‌ನಲ್ಲಿ, ಪ್ಲಾಸ್ಟಿಕ್ ಚೀಲದಲ್ಲಿ ಮನೆ ಮನೆಯಲ್ಲೂ ಸಿಗುತ್ತಿದೆ ಎಂದು ಮಾನ್ಯ ಸದಸ್ಯರು ಮತ್ತೊಬ್ಬರು ಹೇಳುತ್ತಿದ್ದರು. ಇದಕ್ಕೆ ಎಲ್ಲಿಂದ ಈ ಸ್ಪಿರಿಟ್ ಬರುತ್ತದೆ. ಈ ಸ್ಪಿರಿಟ್‌ದು ಒಂದು ದೊಡ್ಡ ಕಥೆ ಇದೆ. ಇವತ್ತು ಇಲ್ಲಿ ನನ್ನ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ನಾನು ಈ ಸದನದ ಗಮನಕ್ಕೆ ತರಬೇಕಾಗಿರತಕ್ಕಂಥ ಅವಶ್ಯಕತೆ ಇದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 552 ದಿನಾಂಕ 8-3-91ರಲ್ಲಿ ಈ ಸದನದ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಅಂಕಿಅಂಶಗಳು ಇವೆ. ನಾನು ಅವೆಲ್ಲವನಿನೂ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಶ್ನೆ ಕೇಳಿರತಕ್ಕಂಥಾದ್ದು ಯಾವ ಪ್ರಕಾರ ಇದೆ ಎಂದರೆ ನಾನು ಕೆಲವು ತಾರೀಖುಗಳನ್ನು ಕೇಳಿದ್ದೇನೆ. ದಿನಾಂಕ 1-7-87 ಮತ್ತು 1-7-88 ಮತ್ತು 1-7-89 ಮತ್ತು 1-7-90 ಮತ್ತು 1-11-90ರಂದು ಈ ರಾಸಾಯನಿಕ ಘಟಕಗಳಿಗೆ ನೀಡಿದ ಲೈಸನ್ಸ್ ಗಳು ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಆ ಉತ್ತರ ಈ ರೀತಿ ಇದೆ. ದಿನಾಂಕ 1-7-80ರಲ್ಲಿ ಆರ್ ಎಸ್-2 ಅಂದರೆ ರೆಕ್ಟಿಫೈಡ್ ಸ್ಪಿರಿಟ್. ಎರಡಕ್ಕೆ ಡಿಎಲ್ ಮೂರು ಒಂದಕ್ಕೆ, 1-7-88ರಲ್ಲಿ ಎರಡಕ್ಕೆ ಡಿಎಲ್ ಮೂರು ಎರಡಕ್ಕೆ ಮತ್ತು 1-7-89ರಂದು ಇಲ್ಲ, ಇಲ್ಲ, 1-7-91 ಇಲ್ಲ ಇಲ್ಲ 1-11-91ರಲ್ಲಿ 30ಕ್ಕೆ ಕೊಟ್ಟಿದ್ದಾರೆ. ಹಿಂದಿನ ವರ್ಷಗಳಲ್ಲಿ ಇಲ್ಲ-ಇಲ್ಲ- ಎಂದು ಬಂದು ಈ ಸರ್ಕಾರ ಬಂದ ತಕ್ಷಣ ದಿನಾಂಕ 1-11-91ರಂದು 30ಕ್ಕೆ ಕೊಟ್ಟಿದ್ದಾರೆ. ಆದರೆ ಅದು 30 ಅಲ್ಲ. ಅವತ್ತು ನನ್ನ ಲೆಕ್ಕದ ಪ್ರಕಾರ ಸುಮಾರು 80 ಕೆಮಿಕಲ್ ಯೂನಿಟ್ಸ್‌ಗೆ ಲೈಸೆನ್ಸ್ ರಿನ್ಯೂ ಮಾಡಿರತಕ್ಕಂಥ ಕೆಲಸ ಮಾಡಿದ್ದಾರೆ. ಸುಮಾರು 80 ಕೆಮಿಕಲ್ ಯೂನಿಟ್ಸ್‌ಗೆ ಕೊಟ್ಟಿದ್ದಾರೆ. ವರ್ಷೇ ವರ್ಷೇ ನಾವು ಅವರಿಗೆ ಎಷ್ಟು ಕೋಟಾ ಕೊಡಬೇಕೆನ್ನುವ ಉತ್ತರ ಕೊಟ್ಟಿದ್ದಾರೆ. ಅವೆಲ್ಲವನ್ನೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಈ ಸರ್ಕಾರ ಬಂದ ಮೇಲೆ ಯಾರ್‍ಯಾರಿಗೆ ಎಷ್ಟೆಷ್ಟು ಸ್ಪಿರಿಟ್ ಕೊಟ್ಟಿದ್ದಾರೆ ಎನ್ನತಕ್ಕಂಥ ವಿವರಗಳು ಪೂರ್ತಿಯಾಗಿದೆ. 1-7-90ರವರೆಗೆ 45 ಕಂಪನಿಗಳಿಗೆ ಸ್ಪಿರಿಟ್ ಕೊಟ್ಟಿದ್ದಾರೆ. ಸುಮಾರು ಒಂದು ಕೋಟಿ 17 ಲಕ್ಷ 75 ಸಾವಿರ 273 ಲೀಟರ್ ಕೊಟ್ಟಿದ್ದಾರೆ. ಇದು ಕೆಮಿಕಲ್ ಯೂನಿಟ್ಸ್‌ಗೆ ಕೊಟ್ಟಿರತಕ್ಕಂಥಾದ್ದು. ಇದರಲ್ಲಿ ನಾನು ಬೇರೆ ಕೆಲಸ ಕೂಡ ಮಾಡಿದೆ. ಆದರೆ ಇದು 45 ಅಲ್ಲ. 3-4 ಕಂಪನಿಗಳನ್ನು ಬಿಟ್ಟರೆ ಯಾವುದೂ ಕೂಡ ಅಲ್ಲ. ಯಾವ ಒಂದು ಉದ್ದೇಶದಿಂದ ಸ್ಪಿರಿಟ್ ಉಪಯೋಗಿಸುತ್ತಾರೋ ಅದಕ್ಕೆ ಉಪಯೋಗಿಸುತ್ತಿಲ್ಲ. ಅವರೆಲ್ಲರೂ ಕೂಡ ಆಗಲೇ ನಾನು ಪ್ರಸ್ತಾಪ ಮಾಡಿದಂತಹ ಸೆಕೆಂಡ್ಸ್‌ಗೆ ಐಎಂಎಫ್‌ಎಲ್‌ಗೆ ಹಾಗೂ ಸಾರಾಯಿಗೆ ಉಪಯೋಗಿಸುತ್ತಾರೆ. ಒಂದು ಲೀಟರ್ ಸ್ಪಿರಿಟ್ ಗೆ ಎಷ್ಟು ಬೆಲೆ ಆಗುತ್ತದೆಂದು ನಾನು

ತಿಳಿದುಕೊಳ್ಳಲು ಪ್ರಯತ್ನ ಮಾಡಿದೆ ಅವರು ಸರ್ಕಾರಕ್ಕೆ ಕೊಡತಕ್ಕಂಥ ಬೆಲೆ 5-65 ಪೈಸೆ ಆದರೆ ಇದಕ್ಕೆ ಇನ್ನೊಂದು ವಿಚಾರ ಮಾನ್ಯ ಅಧ್ಯಕ್ಷರೇ 3 ರೂಪಾಯಿ ಎಕ್ಸೈಜ್ ಡ್ಯೂಟಿ ಕೊಡಬೇಕು. ಆ ಎಕ್ಸೈಜ್ ಡ್ಯೂಟಿ ಕೊಡದಂತೆ ಸ್ಟೇ ತಗೆದುಕೊಂಡಿದ್ದಾರೆ. ಸರ್ಕಾರ ಇಂಡಸ್ಟ್ರಿಯಲ್ ಆಲ್ಕೋಹಾಲ್‌ನಲ್ಲಿ ಇಂಡಸ್ಟ್ರಿಗಳಿಗೆ ಕೊಡುವುದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಇದೆ. ಹಲವಾರು ವರ್ಷಗಳಾಗಿದೆ. ಆ ಸ್ಟೇ ಇಲ್ಲಿಯವರೆಗೆ ವೆಕೇಟ್ ಮಾಡತಕ್ಕಂಥ ಕೆಲಸಕ್ಕೆ ತಮ್ಮ ಸರ್ಕಾರದಿಂದ ಆಗಿಲ್ಲ. ಇವತ್ತು ಇದರ ಕಾಸ್ಟ್ ಅಲ್ಲಿ 5.75 ಇಶ್ಯೂ ಪ್ರೈಸ್ ಇದೆ. ಆಫೀಸಿನಲ್ಲಿ ಒಂದು ಲೀಟರಿಗೆ ಒಂದು ರೂಪಾಯಿ ಕೊಡಬೇಕು. ಅದು ಸರ್ಕಾರಿ ಖಜಾನೆಗೆ ಬರತಕ್ಕದ್ದಲ್ಲ.

ಅದು ಆಫೀಸ್ ಖರ್ಚು, ಅದಾದಮೇಲೆ ಅದು ಹೊರಗಡೆ ಬರುತ್ತದೆ. ಟ್ರಾನ್ಸ್ ಪೋರ್ಟೇಷನ್ ಚಾರ್ಜಸ್ ಎಲ್ಲಾ ಸೇರಿ ಒಂದು ಲೀಟರ್ ಸ್ಪಿರಿಟಿಗೆ 10 ರೂಪಾಯಿ ಆಗುತ್ತದೆ. ಹೌದಾ ಶಿವಮೂರ್ತಿಯವರೇ? ಅದನ್ನು 20ರಿಂದ 22 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಈ 10 ರೂಪಾಯಿ ಇದೆಯಲ್ಲಾ ಖರ್ಚು, ಅದರಲ್ಲಿ 3 ರೂಪಾಯಿ ಬೇರೆ ಇದೆ, ಈ 3 ರೂಪಾಯಿ ಯಾರ ಶೇರ್? ಶಿವಮೂರ್ತಿಯವರೇ, ಅವರು ಹೇಳುವುದಿಲ್ಲವೆಂದು ನನಗೆ ಗೊತ್ತಿದೆ. ನೋಡಿ ಅವರು ಸುಮ್ಮನೆ ಇದ್ದಾರೆ. ಈ 3 ರೂಪಾಯಿ ಎಲ್ಲಿ? ಯಾರಿಗೆ ಸೇರುತ್ತದೆ? ಪ್ರತಿ ಕೋಟಾದಲ್ಲೂ ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ನಲ್ಲಿ 3 ರೂಪಾಯಿ ಅಧಿಕಾರ ಸೂತ್ರ ಹಿಡಿದಿರತಕ್ಕಂಥವರ ಜೇಬಿಗೆ ಹೋಗುತ್ತದೆ. ಒಂದು ಲಕ್ಷ ರೆಕ್ಟಿಫೈಡ್ ಸ್ಪಿರಿಟ್ ಮಾಡಿದರೆ 3 ಲಕ್ಷ ರೂಪಾಯಿ ಸೇರುತ್ತದೆ. ಇನ್ನೂ ಒಂದು ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಒಂದು ವಿಷಯವನ್ನು ಹೇಳಿದೆ, ಕಳೆದ ಆರು ತಿಂಗಳಲ್ಲಿ ಇವರು ಎಷ್ಟು ಕೊಟ್ಟಿದ್ದಾರೆ ಎನ್ನುವ ಅಂಕಿ ಅಂಶ ಕೂಡ ಇದೆ. ಕಳೆದ ಆರು ತಿಂಗಳಲ್ಲಿ ಎಷ್ಟು ಕೊಟ್ಟಿದ್ದಾರೆಂದರೆ, statment showing the names of chemical units. Licenced quota sanctioned. quantity allotted for 1990-91 quantity allotted from 1-7-90 to 1-1-91.

ಈ 6, 7 ತಿಂಗಳಲ್ಲಿ ಎಷ್ಟು ಕೊಟ್ಟಿದ್ದಾರೆ ಅಧ್ಯಕ್ಷರೆ? ಸುಮಾರು 85 ಲಕ್ಷ ಲೀಟರ್ ರೆಕ್ಟಿಫೈಡ್ ಸ್ಪಿರಿಟನ್ನು ಕೊಟ್ಟಿದ್ದಾರೆ. ಹಿಂದೆ 1 ಕೋಟಿ 80 ಲಕ್ಷ ಲೀಟರ್ ಕೊಟ್ಟಿದ್ದಾರೆ. ಇವರು ಬಂದ ಮೇಲೆ 85 ಲಕ್ಷ ಲೀಟರ್, ರೆಕ್ಟಿಫೈಡ್ ಸ್ಪಿರಿಟ್ ಕೊಟ್ಟಿದ್ದಾರೆ. ಇವತ್ತು ಒಂದು ಲೀಟರಿಗೆ 3 ರೂಪಾಯಿ ಇವರಿಗೆ ಸೇರುತ್ತಿದೆ. ಇವರ ಜೇಬಿಗೆ ಸೇರುತ್ತಿದೆ. ಇದರ ಬಗ್ಗೆ ಈ ಹಿಂದೆ ಸದನ ಸಮಿತಿ ವರದಿ ಕೊಟ್ಟಿದೆ. ಇದರ ಬಗ್ಗೆ ಪಾಪ ಅವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಶಿವಮೂರ್ತಿಯವರೇ ಬಿಡುವಾಗಿದ್ದಾಗ ಆ ವರದಿಯನ್ನು ಓದಿ. ಆ ವರದಿ ಬಂದ ಮೇಲೆ ಎಲ್ಲಾ ಕೆಮಿಕಲ್ ಯೂನಿಟ್ಸ್‌ಗಳ ಇನ್‌ಸ್ಪೆಕ್ಷನ್ ಆಯಿತು. ಆಮೇಲೆ ಈ ರೀತಿ ಸ್ಪಿರಿಟನ್ನು ಕೊಡಬೇಕಾದರೆ ಏನೇನೋ ನಿರ್ಬಂಧ ಇರಬೇಕೆಂದು ಮಾಡಲಾಗಿದೆ. ಹಿಂದಿನ ಸರ್ಕಾರ ಇದನ್ನು ಮಾಡಿದೆ. ಅದೇ ನೀವು ಬಂದ ಮೇಲೆ ಅದಕ್ಕೆ ಇದ್ದಕ್ಕಿದ್ದ ಹಾಗೆ ಜೀವ ಕೊಟ್ಟಿದ್ದೀರಿ. ನಿರ್ಜೀವವಾಗಿದ್ದ ಅದಕ್ಕೆ ಸಂಜೀವನಿಯಾಗಿ ಅದಕ್ಕೆ ಜೀವವನ್ನು ಕೊಟ್ಟಿದ್ದೀರಿ.

ಉಪಾಧ್ಯಕ್ಷಣೆಯವರು (ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) :- ಆದ್ದರಿಂದ ನಾನು ಇದರ ಬಗ್ಗೆ ಗುರುತರವಾದ ಆಪಾದನೆ ಮಾಡುತ್ತಿದ್ದೇನೆ. ಇವತ್ತಿನ ದಿವಸ ಈ ಬಾಬಿನಲ್ಲೇ 2 ರಿಂದ 3 ಕೋಟಿ ರೂಪಾಯಿಗಳು ನಿಮಗೆ ಬರುತ್ತಿದೆ. ಇದು

ಎಲ್ಲಿಗೆ ಹೋಗುತ್ತಿದೆ? ಇದನ್ನು ಲಘುವಾಗಿ ಭಾವಿಸಕೂಡದೆಂದು ನಾನು ಹೇಳುತ್ತೇನೆ. ಈ ಸದನದ ಸಮಿತಿ ವರದಿ ಇದ್ದರೂ ಕೂಡಾ ಅದೆಲ್ಲವನ್ನೂ ಬದಿಗೊತ್ತಿ ಹಿಂದೆ ಮಾಡದೇ ಇರತಕ್ಕಂಥ ಕೆಲಸವನ್ನು ನೀವು ಮಾಡುವುದಕ್ಕೆ ಹೊರಟಿದ್ದೀರಿ. ಇದಕ್ಕೆ ಪ್ರಬಲವಾದ ಕಾರಣ ಇದೆ.

ಅದರಿಂದ ನಾನು ಹೇಳಿದ್ದು, ಬಜೆಟ್ ಯಾವ ಎಕ್ಸೈಜ್ ದೊರೆಗಳ ಬ್ರೀಫ್ ಕೇಸ್‌ನಿಂದ ಬಂದಿದೆ ಎಂದು ಹೇಳಿದ್ದು. ಅದರ ಬಗ್ಗೆ ಈ ಸದನದ ಒಂದು ವಿಶೇಷವಾದ ಸಮಿತಿಯನ್ನು ಮಾಡಬೇಕು. ಎಕ್ಸೈಜ್ ಯೂನಿಟ್ಸ್‌ಗೆ ಕೊಟ್ಟಿರತಕ್ಕದ್ದು ನೀವು ಕೋರ್ಟಿನಲ್ಲಿ ನಡೆಸಿದ್ದೀರಿ. ಕೆಲವು ಮೊಕದ್ದಮೆಗಳು ಇವತ್ತಿನವರೆಗೆ ಕೂಡ ಇದ್ದಾವೆ, ಯಾವುದೇ ಅಬ್ಜೆಕ್ಷನ್ಸ್ ಇಲ್ಲದೆ ಇವತ್ತು ನಡೆಯುತ್ತಿದೆ. ಅದರ ಬಗ್ಗೆ ಕೂಡಾ ತನಿಖೆ ಆಗಬೇಕಾಗಿದೆ. ನೀವು ಹೇಳಬಹುದು, ಕೋರ್ಟಿನ ಮುಂದೆ ಇದೆ ಎಂದು. ಹೌದು, ಕೋರ್ಟ್ ಮುಂದೆ ಇರತಕ್ಕದ್ದು ಲೀಗಲ್ ಮ್ಯಾಟರ್. ಆದರೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮ ಏನು? ನೀವು ಶಾಮೀಲಾಗಿರತಕ್ಕ ಕ್ರಮ, ಸರ್ಕಾರ ಶಾಮೀಲಾಗಿರತಕ್ಕ ಕ್ರಮ, ಅದು ಇವತ್ತಿನ ದಿವಸ ಬಯಲಿಗೆ ಬರಬೇಕಾಗಿದೆ. ಬಯಲಿಗೆ ಬರಬೇಕಾಗಿದ್ದರೆ ಈ ಸದನದ ಒಂದು ಸಮಿತಿ ಆಗಬೇಕಾಗಿದೆ. ನಾನು ಅದನ್ನು ಒತ್ತಾಯ ಮಾಡುತ್ತೇನೆ. ಇಲ್ಲದೇ ಇದ್ದರೆ ಇವತ್ತು ಏನು ನಡೆಯುತ್ತಿದೆ, ಅವರೇ ಒಪ್ಪಿಕೊಂಡಿದ್ದಾರೆ ಏನೂ ಹಣ ಬರುತ್ತಾ ಇಲ್ಲ ಎಂದು. ಅದನ್ನು ನಾನು ಹೇಳಬೇಕಾಗಿಲ್ಲ. ಎಷ್ಟು ಹಣ ಬರಬೇಕಾಗಿತ್ತು? ಇವತ್ತು ಎಲ್ಲಿಯವರೆಗೆ ಹೋಗಿದೆ ಎಂದರೆ, ನಾನು ಆ ವಿವರಕ್ಕೆ ಹೋಗುವುದಿಲ್ಲ.

ಉಪಾಧ್ಯಕ್ಷಿಣಿಯವರು :- ದಯಮಾಡಿ ಮುಗಿಸಿ, ಯಾಕೆಂದರೆ ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಸಿ. ಬೈರೇಗೌಡ :- ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ, ಹೆಂಡತಿ ಗಂಡ ಡ್ರೈವರ್ಸ್‌ಗೆ ಹಾಕಿದ್ದಾರೆ ಕೆಲವುಕಡೆ. ಯಾಕೆಂದರೆ ಬ್ಯಾಂಕ್ ಗ್ಯಾರಂಟಿ ಇದೆ. ಮೂರು ತಿಂಗಳೂ, 10 ದಿವಸದವರೆಗೆ ಬ್ಯಾಂಕ್ ಗ್ಯಾರಂಟಿ ಕೊಡಬೇಕು. ಒಂದು ತಿಂಗಳ ಕ್ಯಾಷ್ ನಿಮ್ಮ ಜೊತೆಯಲ್ಲಿ ಇರುತ್ತದೆ. ಸರ್ಕಾರದ ಕೈಯಲ್ಲಿ ಇರುತ್ತದೆ, ಅವೆಲ್ಲಾ ಹಣ. ಅದು ಯಾವುದನ್ನೂ ಕೂಡ ಮುಟ್ಟುಗೋಲು ಹಾಕಿಕೊಳ್ಳತಕ್ಕಂಥದ್ದಕ್ಕೆ ಇವರು ಪ್ರಯತ್ನ ಮಾಡಿಲ್ಲ. ಆ ಹಣವನ್ನು ಮುಟ್ಟುಗೋಲು ಹಾಕಿಕೊಂಡಿಲ್ಲ. ಇವತ್ತು ಎಲ್ಲಿಯವರೆಗೆ ಹೋಗಿದೆ ಎಂದರೆ ಒಂದು ತಿಂಗಳೂ ಅಡ್ವಾನ್ಸ್ ಆಗಿ ಕೊಡಬೇಕು.

ಕೆಲವು ಕಡೆ ಡೇ-ಟು-ಡೇ ನಾಳೆಯದನ್ನು ಇವತ್ತು ಕಟ್ಟಿಸಿಕೊಳ್ಳುತ್ತಿದ್ದಾರೆ. ಇದು ಕೂಡ ಕೆಲವು ತಾಲ್ಲೂಕುಗಳಲ್ಲಿ ನಡೆದಿದೆ. ನಿನ್ನೆಯದನ್ನು ತಿಂಗಳಾನುಗಟ್ಟಲೆ ವಸೂಲು ಮಾಡದೇ ಬಿಟ್ಟಿರತಕ್ಕ ನಿದರ್ಶನಗಳು ಕೂಡ ಇದ್ದಾವೆ. ಅವೆಲ್ಲವೂ ಕೂಡ ಹೊರಗೆ ಬರಬೇಕಾಗಿದೆ. ಕೋರ್ಟಿನಲ್ಲಿರತಕ್ಕ ವಿಚಾರವಲ್ಲ ನಾನು ಹೇಳುತ್ತಾ ಇರತಕ್ಕಂಥವು. ನಿಮ್ಮ ಹೊಂದಾಣಿಕೆ ಇದೆಯಲ್ಲಾ. ಸರ್ಕಾರದ ಹೊಂದಾಣಿಕೆ ಇವತ್ತಿನ ದಿವಸ ಈಚೆಗೆ ಬರಬೇಕಾಗಿದ್ದರೆ ಈ ಸದನದ ಒಂದು ಸಮಿತಿ ಆಗಬೇಕು. ಇದು ಅತೀ ಅವಶ್ಯಕ. ಇಲ್ಲ ಸರ್ಕಾರ ಒಪ್ಪಿದರೆ ಎಕ್ಸೈಜ್ ದೊರೆಗಳ ಜೇಬಿನಿಂದ ಅಥವಾ ಬ್ರೀಫ್ ಕೇಸ್‌ನಿಂದ ಬಂದಿರತಕ್ಕದ್ದು ಅಲ್ಲ ಸರ್ಕಾರ. ಬರೇ ಎಕ್ಸೈಜ್ ದೊರೆಗಳ ಸರ್ಕಾರ ಒಂದು ನಾನು ಹೇಳಲೇಬೇಕಾಗುತ್ತದೆ. ಇಷ್ಟನ್ನು ಹೇಳುತ್ತಾ....

ಉಪಾಧ್ಯಕ್ಷಿಣಿಯವರು :- ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. ತಮಗೆ ಗೊತ್ತಿದೆ, ಇವತ್ತು ನಾವು ಚರ್ಚೆಯನ್ನು ಮುಗಿಸಬೇಕು.

ಶ್ರೀ ಸಿ. ಬೈರೇಗೌಡ :- ಇಷ್ಟು ವಿಷಯವನ್ನು ಹೇಳುತ್ತಾ ಇನ್ನೂ ನನಗೆ ಮಾತನಾಡುವುದು ಬಹಳ ಇತ್ತು. ಆದರೂ ಕಾಲಾವಕಾಶ ಇಲ್ಲದೆ ಇರುವ ಕಾರಣ ನಾನು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## ಕೋಲಾರ: ವಿದ್ಯಾರ್ಥಿ-ಶಿಕ್ಷಕರ ಅನುಪಾತ

ಶ್ರೀ ಸಿ. ಬೈರೇಗೌಡ :- ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ (ಶಾಲಾ ಕಾಲೇಜುಗಳೂ ಸೇರಿ) ಪ್ರೌಢ ಶಾಲೆಗಳು, ಕಿರಿಯ ಕಾಲೇಜು ಮತ್ತು ಕಾಲೇಜುಗಳ ಸಂಖ್ಯೆ ಎಷ್ಟು? ಈ ಶಾಲೆಗಳಲ್ಲಿ ಶಿಕ್ಷಕರ ಮತ್ತು ಮಕ್ಕಳ ಅನುಪಾತ ಎಷ್ಟು?

ಆ) ಈ ಇರುವ ಶಿಕ್ಷಕರ ಸಂಖ್ಯೆಯು ಮಕ್ಕಳ ಮತ್ತು ಶಿಕ್ಷಕರ ಅನುಪಾತಕ್ಕೆ ಸರಿಯಾಗುವುದೇ?

ಇ) ಹಾಗಿಲ್ಲದಿದ್ದಲ್ಲಿ ಖಾಲಿ ಇರುವ ಪ್ರತಿಯೊಂದು ವರ್ಗದ ಹುದ್ದೆ ಸಂಖ್ಯೆ ಮತ್ತು ಯಾವ ದಿನಾಂಕ ಎಲ್ಲಾ ಹುದ್ದೆಗಳನ್ನು ತುಂಬಲಾಗುವುದು.

ಶ್ರೀ ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :-

ಅ) ಪ್ರಾಥಮಿಕ ಶಾಲೆಗಳು - 1981 ಪ್ರೌಢ ಶಾಲೆಗಳು - 85

ಪದವಿಪೂರ್ವ ಕಾಲೇಜು - 24 ಕಾಲೇಜುಗಳು - 13

ಆ) ವಿದ್ಯಾರ್ಥಿಗಳ ಉಪಾಧ್ಯಾಯರ ಅನುಪಾತ ಅನುಸರಿಸಲಾಗಿದೆ. ಆದರೆ ಇದು ಕಾಲೇಜುಗಳಿಗೆ ಅನ್ವಯಿಸುವುದಿಲ್ಲ.

ಇ) ಕಿರಿಯ ಕಾಲೇಜು ಉಪನ್ಯಾಸಕರ ಹುದ್ದೆಗಳನ್ನು ತುಂಬುವ ಬಗ್ಗೆ ಪೂರ್ವಭಾವಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಖಾಲಿ ಇರುವ ಸರ್ಕಾರಿ ಪ್ರಾಮಿಕ ಶಾಲೆಗಳ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ನೇಮಕಾತಿ ಆದೇಶ ನೀಡಲಾಗುವುದು.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ನಾನು ಸ್ಟೂಡೆಂಟ್-ಟೀಚರ್ ರೇಶಿಯೋ ಕೇಳಿದ್ದೇನೆ. ಆದಕ್ಕೆ ಉತ್ತರ ಬಂದಿಲ್ಲ. ಸುಮ್ಮನೆ ಎಷ್ಟು ಕಾಲೇಜುಗಳಿವೆ, ಎಷ್ಟು ಶಾಲೆಗಳಿವೆ, ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ಪ್ರತಿ ವರ್ಗದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಯನ್ನು ಕೊಡುವುದಕ್ಕೆ ಹೇಳಿದ್ದೆ, ಎಷ್ಟು ಖಾಲಿ ಇದೆಯೆಂದು ಕೂಡಾ ತಿಳಿಸಿಲ್ಲ. ಸರ್ಕಾರಕ್ಕೆ ಇದೊಂದು ಪರಿಪಾಠವಾಗಿದೆ. ಉತ್ತರ ಕೊಡುವುದು ಕೊಟ್ಟರೆ ಪೂರ್ತಿಯಾದಂಥ ಉತ್ತರವನ್ನು ಕೊಡುವುದಿಲ್ಲ.

ಅನೇಕ ಸಂದರ್ಭದಲ್ಲಿ ತಪ್ಪು ಉತ್ತರಗಳನ್ನು ಸಹ ಕೊಡುತ್ತಾರೆ. ನನಗೆ ಯಾವ ಪ್ರಶ್ನೆ ಕೇಳಬೇಕೆಂದು ತೋಚುತ್ತಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಏನು ಹೇಳಬೇಕೆಂದಿದ್ದಾರೋ ಅದನ್ನು ಹೇಳಲಿ.

ಶ್ರೀ ವೀರಪ್ಪ ಮೊಯಿಲಿ :- ಈಗ ಮಾನ್ಯ ಶಾಸಕರು ಎತ್ತಿದಂಥ ಒಂದು ಮುಖ್ಯವಾದ ವಿಚಾರವೆಂದರೆ ಮಕ್ಕಳ ಮತ್ತು ಶಿಕ್ಷಕರ ಅನುಪಾತ (ರೇಶಿಯೋ) ಸರಿ ಇದೆಯೇ ಎಂದು. ಪ್ರಾಥಮಿಕ ಶಾಲೆಯ ದಾಮಾಷ ಪ್ರಕಾರ, ತೋರಿಕೆಯ ಮಟ್ಟಿಗೆ ಅನುಪಾತ ಸರಿಯಾಗಿದೆ.

ಶ್ರೀ ಸಿ. ಬೈರೇಗೌಡ :- ಶಿಕ್ಷಕರ ಮಕ್ಕಳ ಅನುಪಾತ ಎಷ್ಟೆಂದು ಕೇಳಿದ್ದೇನೆ? What is the student pupil ration? ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಎಲ್ಲಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ :-ಆ ವಿಷಯಕ್ಕೆ ನಾನು ಬರುತ್ತಿದ್ದೇನೆ. ನಾನು ಅದನ್ನೇ ಹೇಳುತ್ತಿದ್ದೇನೆ. ಅಧ್ಯಾಪಕರ ಸಂಖ್ಯೆಯನ್ನು ನಾವು ಏನು ಕಾಣಿಸಿದ್ದೇವೆ, ಅದು ತೋರಿಕೆಯ ಮಟ್ಟಿಗೆ ಹೇಳುವುದಾದರೆ, ಈ ಅನುಪಾತ ಸರಿಯಾಗಿದೆ.

ಈಗ ಪ್ರೈಮರಿ ಸ್ಕೂಲ್ ನಲ್ಲಿ ಈ ಅನುಪಾತ 1:50 ಇದೆ. ಐವತ್ತು ಮಕ್ಕಳಗೆ ಒಬ್ಬ ಅಧ್ಯಾಪಕರು ಇರಬೇಕು ಎಂದು ಇದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಅನುಪಾತವನ್ನು ನಾವು ನಿರ್ವಹಣೆ ಮಾಡಲಿಕ್ಕೆ ಆಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ಒಂದು ಗ್ರಾಮದಲ್ಲಿ 20 ಮಕ್ಕಳು ಇದ್ದರೂ ಕೂಡ ನಾವು ಅಧ್ಯಾಪಕರನ್ನು ನೇಮಿಸಬೇಕಾಗುತ್ತದೆ. ಅದಕ್ಕೆ ಹೋಲಿಸಿದರೆ ಈ ಅನುಪಾತ ಸರಿಯಾಗವುದಿಲ್ಲ. ಅನುಪಾತಕ್ಕೆ ಹೊಂದಾಣಿಕೆ ಆಗುವುದಿಲ್ಲ. ಈ ಅನುಪಾತಕ್ಕೆ ಹೊಂದಾಣಿಕೆ ಮಾಡಲಿಕ್ಕೆ ಈಗಾಗಲೇ ನಾವು ಕಾರ್ಯಕ್ರಮಗಳನ್ನು ತೆಗೆದಕೊಂಡಿದ್ದೇನೆ. ಮೊದಲನೆಯದಾಗಿ ಈಗ ಪ್ರಾಥಮಿಕ ಶಿಕ್ಷಕರ ಮಂಜೂರಾದ ಹುದ್ದೆಗಳನ್ನು ಬಹುತಃ ಇನ್ನೆರಡರು ವಾರಗಳ ಒಳಗೆ ಭರ್ತಿ ಮಾಡುತ್ತೇವೆ. ಮೂರನೇ ಹಂತದ ಕಪ್ಪು ಹಲಗೆ ಯೋಜನೆ ಏನು ಇದೆ, ಅದರಡಿ ಇಡೀ ರಾಜ್ಯದಲ್ಲಿ 2701 ಅಧ್ಯಾಪಕರ ಸ್ಥಳಗಳನ್ನು ಭರ್ತಿ ಮಾಡುತ್ತಿದ್ದೇವೆ. ಅದರಂತೆ, ನಾವು ಕೋಲಾರದಲ್ಲೂ ಕೂಡ ಮಾಡುತ್ತೇವೆ. ನಾಲ್ಕುನೇ ಪೇಸ್‌ನಲ್ಲಿ ಸುಮಾರು 4597 ಅಧ್ಯಾಪಕರ ಹುದ್ದೆಗಳನ್ನು ರಾಜ್ಯದಲ್ಲಿ ಬರುವ ವರ್ಷದಲ್ಲಿ ಭರ್ತಿ ಮಾಡುವುದಕ್ಕೆ ಕ್ರಮ ತೆಗೆದಕೊಂಡಿದ್ದೇವೆ. ಮುಂದಿನ ಅಕಾಡೆಮಿಕ್ ವರ್ಷ ಪ್ರಾರಂಭವಾಗುವಾಗ ಪ್ರಾಥಮಿಕ ಶಾಲಾ ಶಿಕ್ಷಕರುಗಳನ್ನು ಅನುಪಾತದ ದೃಷ್ಟಿಯಿಂದ ತುಂಬಲಿಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ವಾರದಲ್ಲಿ ಹಮ್ಮಿಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ :- ಕಾಲೇಜಿನ ಬಗ್ಗೆ ಏನೂ ಹೇಳಿಲ್ಲ. ಈಗ ನಾನು ಪ್ರಾಥಮಿಕ ಶಾಲೆಗಳ, ಪ್ರೌಢಶಾಲೆಗಳ, ಪದವಿಪೂರ್ವ ಕಾಲೇಜುಗಳ ಮತ್ತು ಕಾಲೇಜುಗಳ ಸ್ಥಿತಿಗತಿಯ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೇ, ಈಗ ಪ್ರೌಢಶಾಲೆಗಳಿಗೆ ಮಂಜೂರಾದಂಥ ಹುದ್ದೆಗಳು ಏನು ಇವೆ, ಅದನ್ನು ಇಡೀ ರಾಜ್ಯದಲ್ಲಿ ಇನ್ನೊಂದು ತಿಂಗಳಲ್ಲಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಬರುವ ಅಕಾಡೆಮಿಕ್ ವರ್ಷದಲ್ಲಿ ಮಂಜೂರಾದಂಥ ಹುದ್ದೆಗಳನ್ನು ಕೋಲಾರದಲ್ಲಿ ತುಂಬುತ್ತೇವೆ. ಇನ್ನು ಕಾಲೇಜು ಅಧ್ಯಾಪಕರುಗಳ ಹುದ್ದೆ ಬಗ್ಗೆ

ನಾನು ಹಣಕಾಸಿನ ಇಲಾಖೆ ಜೊತೆಯಲ್ಲಿ ಈಗಾಗಲೇ ಚರ್ಚಿಸಿದ್ದೇನೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಬಿದ್ದಿವೆ. ಅಂತಹ ಹುದ್ದೆಗಳನ್ನು ನಾವು ಮುಂದೆ ಬರತಕ್ಕಂಥ ಅಕಾಡೆಮಿಕ್ ವರ್ಷದಲ್ಲಿ ಭರ್ತಿ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ :- ಕೋಲಾರ ಜಿಲ್ಲೆಯಲ್ಲಿ ಶಿಕ್ಷಕರ ನೇಮಕಾತಿಗೆ ಸೀಮಿತಗೊಳಿಸಿರುವ ಅಂಕಿ ಅಂಶಗಳನ್ನು ಕೊಟ್ಟಿಲ್ಲ. ರಾಜ್ಯದಲ್ಲಿ ಕಾಲೇಜುಗಳು ಎಷ್ಟಿವೆ? ಅದಕ್ಕೂ ಉತ್ತರ ಕೊಟ್ಟಿಲ್ಲ ಮತ್ತು ಅಧ್ಯಾಪಕರ ಹುದ್ದೆಗಳು ಎಷ್ಟಿವೆ? ಇವೆಲ್ಲದರ ವಿವರ ಕೊಡಲು ಮಾನ್ಯ ಮಂತ್ರಿಗಳಿಗೆ ತಿಳಿಸಬೇಕು.

ಅಧ್ಯಕ್ಷರು :- ಎಲ್ಲಾ ಮಾಹಿತಿಯನ್ನು ಕೊಡುತ್ತಾರೆ.

## ಹೋಟೆಲ್ ತಿಂಡಿದರ - ಸಿ.ಬಿ. ಸಭಾತ್ಯಾಗ 6-1-93

ಹೊಟೇಲ್ ತಿಂಡಿಗಳ ದರ ಏರಿಕೆಯಿಂದ ಶ್ರೀ ಸಾಮಾನ್ಯರಿಗೆ ತೊಂದರೆಯಾಗಿದೆ. ಸರ್ಕಾರ ಬೆಲೆ ಕಡಿಮೆ ಮಾಡುವ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ ಎಂದು ವಾಟಾಳ್ ನಾಗರಾಜ್ ಜೊತೆ ವಿಧಾನ ಸಭೆಯಲ್ಲಿ ಸಭಾತ್ಯಾಗ ಮಾಡಿದರು.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ಹೋಟೆಲ್‌ಗಳಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಗಗನ ಮುಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :-

ಅ) ಹೋಟೆಲ್‌ಗಳಲ್ಲಿ ತಿಂಡಿ ಹಾಗೂ ಊಟದ ಬೆಲೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಆಗಿಂದಾಗ್ಗೆ ಹೋಟೆಲ್ ಮಾಲಿಕರ ಸಂಘದವರನ್ನು ಕರೆದು ಸಭೆ ಜರುಗಿಸಿ ಹೋಟೆಲುಗಳಲ್ಲಿನ ತಿಂಡಿ ಪದಾರ್ಥಗಳ ಬೆಲೆ ಇಳಿಸಲು ಪ್ರಯತ್ನಿಸಲಾಗುತ್ತಿದೆ. ಸರ್ಕಾರಿ ಆದೇಶ ಸಂಖ್ಯೆ ಎಫ್‌ಟಿಡಿ 40 ಡಿಐಎಂ 84 ದಿನಾಂಕ 7-7-85ರಲ್ಲಿ ಆಹಾರ ಮತ್ತು ಸಾರಿಗೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಹೋಟೆಲು ತಿಂಡಿಗಳ ಬೆಲೆಗಳು ಏರಿಕೆ ಮಟ್ಟದಲ್ಲಿದ್ದಾಗ ಯಾವ ರೀತಿಯಾಗಿ ಇವುಗಳನ್ನು ಇಳಿಸಲು ಕ್ರಮ ಕೈಗೊಳ್ಳಬೇಕೆಂಬುದನ್ನು ಪರಿಗಣಿಸಲಾಗುತ್ತಿದೆ. ದಿನಾಂಕ 25-4-92ರಂದು ಹೋಟೆಲು ಮಾಲಿಕರ ಸಂಘದೊಂದಿಗೆ ಸಭೆ ಜರುಗಿಸಿ ಹೋಟೆಲುಗಳ ತಿಂಡಿ ಪದಾರ್ಥಗಳ ಬೆಲೆ ಕಡಮೆಗೊಳಿಸಲು ಪ್ರಯತ್ನಿಸಲಾಯಿತು. ಆದರೂ ಅಗತ್ಯ ವಸ್ತುಗಳ ಅಧಿನಿಯಮದಡಿಯಲ್ಲಿ ಹೋಟೆಲುಗಳಲ್ಲಿ ನೀಡಲಾದ ಆಹಾರ ಪದಾರ್ಥಗಳ ಬೆಲೆ ನಿಯಂತ್ರಿಸಲು ಅವಕಾಶವಿಲ್ಲ.

- ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಬೆಲೆಗಳು ಏರಿದಾಗ ಇಳಿಸಲು ಕ್ರಮ ಕೈಗೊಳ್ಳಬೇಕು ಎಂಬುದನ್ನು ಪರಿಗಣಿಸಲಾಗುತ್ತದೆ ಅನ್ನತಕ್ಕಂತಹ ಉತ್ತರ ಕೊಟ್ಟಿದ್ದಾರೆ. ಪ್ರತಿನಿತ್ಯವೂ ಕೂಡ ಈ ತಿಂಡಿ ಬೆಲೆ ಹೋಟೆಲ್‌ನಲ್ಲಿ ಏರತಕ್ಕಂಥದ್ದೆ. ಈ ವಾರ ಇದ್ದಿದ್ದು ಬೆಲೆ ಮುಂದಿನ ವಾರ ಇರುವುದಿಲ್ಲ. ಮುಂದಿನ ವಾರದ ಬೆಲೆ ಅದಕ್ಕೆ ಮುಂದೆ ಹೋಗುತ್ತದೆ. ಒಂದು ತಿಂಗಳಲ್ಲಿ ಶೇಕಡ 10ರಿಂದ 15ರಷ್ಟು ಬೆಲೆಗಳು ಪ್ರತಿ ತಿಂಗಳು ಏರುತ್ತಾ ಇದೆ. ಏರುತ್ತಿರತಕ್ಕಂತ ಪರಿಸ್ಥಿತಿಯಲ್ಲಿ ಇವರು ಪರಿಗಣಿಸಲಾಗುತ್ತಿದೆ ಎಂದು ಅಂದರೆ ಇದು ಉತ್ತರ ಎಷ್ಟರಮಟ್ಟಿಗೆ ಸಮಂಜಸ ಎನ್ನತಕ್ಕಂಥಾದ್ದು ಎಂದು. ಮತ್ತೆ 1992ರಲ್ಲಿ ಒಂದು ಸಭೆ ಸೇರಿದ್ದಾರೆ, ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. 25-4-92ರಲ್ಲಿ ಒಂದು ಸಮಿತಿ ಸಭೆ ನಡೆದದ್ದು ಅಲ್ಲಿಂದ ಇಲ್ಲಿಯವರೆಗೂ ಸುಮಾರು ಎಂಟು ತಿಂಗಳ ಕಾಲ ಸಭೆಯೇ ನಡೆದಿಲ್ಲ. ನಾನು ಹೇಳಿದ ಹಾಗೆ ಪ್ರತಿ ತಿಂಗಳು ಪ್ರತಿ ದಿವಸವೂ ಬೆಲೆ ಏರುತ್ತಾ ಇದ್ದರೆ ಇವರು ಎಂಟು ತಿಂಗಳ ಕಾಲ ಸಭೆ ನಡೆಸದೆ ಇದ್ದರೆ ಹೇಗೆ?

ಶ್ರೀಮತಿ ಮನೋರಮಾ ಮಧ್ವರಾಜ್ :- ಮಾನ್ಯ ಅಧ್ಯಕ್ಷಣಿಯವರೆ, ಈ ಹೋಟೆಲ್ ಬೆಲೆಗಳನ್ನು ತಿಂಡಿಗಳ ಬೆಲೆಯನ್ನು ಇಳಿಸಲಿಕ್ಕೆ ಅಂದರೆ ಅವರನ್ನು ಕಂಟ್ರೋಲ್‌ನಲ್ಲಿ ಇಡಲಿಕ್ಕೆ ನಮ್ಮ ಈಗಿನ ಎಸೆನ್ಸ್‌ಷಿಯಲ್ ಕಮೋಡಿಟಿಸ್ ಆಕ್ಟ್‌ನಲ್ಲಿ ಯಾವುದೇ ಕಂಟ್ರೋಲ್ ಮಾಡುವಂತ ಆದೇಶ ಇಲ್ಲ. ಹಾಗಾಗಿ ಆ ಅವಕಾಶ ಇಲ್ಲಿ ಇಲ್ಲ.

**Sri. C. Byregowda** : It is a state government subject. Any state Government can declare under the Essential Commodites at any articles that are coming under the Act. ಇಷ್ಟು ಪ್ರಮಾಣದಲ್ಲಿ ಬೆಲೆ ಏರುತ್ತಾ ಇದ್ದರೂ ಸಹ ನೀವು ಏಕೆ ಸುಮ್ಮನೆ ಕುಳಿತಿದ್ದೀರಿ. You can declare at this moment.

ತಾವು ದಯವಿಟ್ಟು ಹೇಳಿ ಈಗ. ನೀವೇ ಹೇಳುತ್ತಿದ್ದೀರಿ ಅವಕಾಶ ಇಲ್ಲ ಎಂದು. ಈಗಾಗಲೇ You can declare at this moment. ಈ ನಿಮಿಷದಿಂದ ನಾನು ಡಿಕ್ಲೇರ್ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ದಯವಿಟ್ಟು ಒಪ್ಪಿಕೊಳ್ಳಿ. ಹಾಗಾದರೆ, ಈ ಸಮಿತಿ ಸಭೆ ಏಕೆ ನಡೆಯಲಿಲ್ಲ? 1992ರಿಂದ 1993 ಬಂದರೂ ಸಮಿತಿ ಸಭೆ ನಡೆದಿಲ್ಲ ಅಥವಾ ಅಂತಹ ಸಮಿತಿಯನ್ನು ಏಕೆ ಇಟ್ಟುಕೊಂಡಿದ್ದೀರಿ?

ಶ್ರೀಮತಿ ಮನೋರಮಾ ಮಧ್ವರಾಜ್ :- ನಮ್ಮ ಆಹಾರ ಇಲಾಖೆಯ ಕಾರ್ಯದರ್ಶಿಗಳೆ ಈ ಸಮಿತಿಯ ಅಧ್ಯಕ್ಷರು. ಮಾಲಿಕರ ಸಂಘದ ಸಭೆಯನ್ನು ಕರೆಯಿಸಿ ಅವರನ್ನು ಕೇಳಲಿಕ್ಕೆ ನಾನು ಖಂಡಿತ ಕೂಡಲೇ ಹೇಳುತ್ತೇನೆ.

ಈ ಸಂದರ್ಭದಲ್ಲಿ ವಾಟಾಳ್ ನಾಗರಾಜ್ ಮಾತನಾಡಿ, ಸರ್ಕಾರ ಜನರ ಪರ ಇಲ್ಲ, ಹೋಟೆಲ್ ಮಾಲಿಕರ ಪರ ಇದೆ ಎಂದು ಆರೋಪಿಸಿದರು.

ಶ್ರೀಮತಿ ಮನೋರಮಾ ಮಧ್ವರಾಜ್ :- ಮಾನ್ಯ ಸಭಾಧ್ಯಕ್ಷಿಣಿಯವರೇ ನಾವು ಹೋಟೆಲ್ ಮಾಲಿಕರ ಪರವೂ ಇಲ್ಲ, ಹೋಟೆಲ್‌ಗೆ ಹೋಗಿ ತಿಂಡಿ ತಿನ್ನುವುದೂ ಇಲ್ಲ. ಹಾಗೆ ಬೇಕಾದರೆ ಮನೆಯಲ್ಲಿ ತಿಂಡಿ ಮಾಡಿ ತಿಂದರೆ ಸೂಕ್ತ ಎಂದು ನನ್ನ ಭಾವನೆ ಮತ್ತು ನಮ್ಮ

ನಾಗರಾಜ್ ಅವರು ಮತ್ತಿತರರಿಗೆ 35 ರೂಪಾಯಿ ದೋಸೆ ತಿನ್ನಲಿಕ್ಕೆ ಆಗಬಹುದು, ಅವರು ಬಹುಶಃ 5 ಸ್ಟಾರ್ ಅಥವಾ 3 ಸ್ಟಾರ್ ಹೋಟೆಲ್‌ಗೆ ಹೋಗಿರಬೇಕು.

ಶ್ರೀ ವಾಟಾಳ್ ನಾಗರಾಜ್ :- ಬಳೇಪೇಟೆ ಒಂದು ಗಲ್ಲಿಯಲ್ಲಿ, ಅಂದರೆ ನಾನು ಅಲ್ಲಿ ತಿನ್ನತಕ್ಕವರನ್ನು ಬಯ್ಯುತ್ತಾ ಇಲ್ಲ. ಹೋಗೋಣ ಬನ್ನಿ ಈಗಲೇ ನಾನು ತೋರಿಸುತ್ತೇನೆ ನಿಮಗ್ಯಾಕೆ ಬನ್ನಿ ಹೋಗೋಣ. ಅಧ್ಯಕ್ಷರೆ ಈ ಸಭೆಯನ್ನು ಮುಂದೂಡಿ ನೋಡಿಯೇ ಬಿಡೋಣ ತೀರ್ಮಾನ ಆಗಿ ಬಿಡಲಿ.

ಶ್ರೀಮತಿ ಮನೋರಮಾ ಮಧ್ವರಾಜ್ :- ಅದೇ ರೀತಿ ನಮ್ಮ ರಸ್ತೆ ಬದಿಗಳಲ್ಲಿ ಗಾಡಿ ತಳ್ಳಿಕೊಂಡು ಹೋಗುವವರಲ್ಲಿ ಎಂಟಾಣೆಗೂ ಕಾಫಿ ಸಿಗುತ್ತದೆ. ಒಂದು ರೂಪಾಯಿಗೆ ದೋಸೆ ಸಿಗುತ್ತದೆ. ಅದನ್ನು ಬೇಕಾದರೆ ತಿನ್ನಬಹುದು.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷಿಣಿಯವರೇ, ನಾನು ಮೊದಲು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಎಸೆನ್‌ಷಿಯಲ್ ಕಮಾಡಿಟಿ ಆಕ್ಟ್ ಪ್ರಕಾರ ಇದು ಬರುವುದಿಲ್ಲ ಎಂದು ಹೇಳಿದ್ದಾರೆ. ನನ್ನ ಮನವಿ ಏನು ಅಂದರೆ ಇದನ್ನು ಡಿಕ್ಲೇರ್ ಮಾಡುವುದಕ್ಕೆ ನಿಮಗೆ ಇರತಕ್ಕ ಅಡೆತಡೆಗಳು ಏನು ಅಥವಾ ಯಾವ ಕಾರಣದಿಂದ ಇದನ್ನು ಡಿಕ್ಲೇರ್ ಮಾಡುವುದಕ್ಕೆ ಮಾಡುತ್ತಾ ಇಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್ :- ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ :- ಪರಿಶೀಲಿಸುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ಗಮನಕ್ಕೆ ಬರದೇ ಇದ್ದರೆ ಪರಿಶೀಲಿಸುತ್ತೇವೆ ಎಂದು ಹೇಳತಕ್ಕ ಉತ್ತರ ಸಮಂಜಸವಾಗುತ್ತಿತ್ತು. ಆದರೆ ಇದರ ಸಭೆ 92 ಏಪ್ರಿಲ್‌ನಲ್ಲಿ ನಡೆದಿರತಕ್ಕಂಥದ್ದು ಕಳೆದ 8 ತಿಂಗಳಿಂದ ಸಭೆ ನಡೆದಿಲ್ಲ. ಪರಿಶೀಲಿಸುತ್ತೇವೆ ಎಂದು ಹೇಳುವುದರ ಅರ್ಥ ಏನು ಇದೆ.

ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಇದನ್ನು ಡಿಕ್ಲೇರ್ ಮಾಡುತ್ತೇವೆಂದು ಹೇಳಲಿ. ಇಲ್ಲದಿದ್ದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಪ್ರಕಾರ ಹೋಟೆಲ್ ಮಾಲಿಕರ ಪರವಾಗಿ ಈ ಸರ್ಕಾರ ಇದೆ ಎಂದು ನಾವು ಆರೋಪ ಮಾಡಬೇಕಾಗುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್ :- ಮಾನ್ಯ ಅಧ್ಯಕ್ಷಿಣಿಯವರೇ ಹೋಟೆಲ್ ಮಾಲಿಕರ ಪರವಾಗಿ ಸರ್ಕಾರವೇನೂ ಇಲ್ಲ. ಆದರೆ ಕಾಯಿದೆ ತರಲಿಕ್ಕೆ ನಾವು ಪರಿಶೀಲಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಸಚಿವರು ಕೊಟ್ಟ ಉತ್ತರ ಸಮರ್ಪಕವಾಗಿ ಇಲ್ಲ. ಇದು ಜನಸಾಮಾನ್ಯರಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ. ಇದು ಒಬ್ಬರ ಪ್ರಶ್ನೆಯಲ್ಲ. ಜನಸಾಮಾನ್ಯರ ಪ್ರಶ್ನೆಯಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಅಡ್ಡಿ ಆತಂಕ ಏನಿದೆ. ಪರಿಶೀಲಿಸುತ್ತೇವೆಂದರೆ ಏನು ಅರ್ಥ? ಎಂಟು ತಿಂಗಳಿಂದ ಒಂದು ಸಭೆ ಕೂಡ ನಡೆದಿಲ್ಲ.

ಉಪಾಧ್ಯಕ್ಷಣಿಯವರು :- ತಾವು ಇವತ್ತು ಅವರ ಗಮನಕ್ಕೆ ತಂದಿದ್ದೀರಿ. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ :- ಅಡ್ಡಿ ಆತಂಕ ಏನಿದೆ, ಎಸೆನ್‌ಷಿಯಲ್ ಕಮಾಡೆಟೀಸ್ ಆಕ್ಟ್ ಪ್ರಕಾರ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೇವೆಂದು ಅದನ್ನಾದರೂ ಮಾನ್ಯ ಸಚಿವರು ಹೇಳಲಿ.

ಶ್ರೀಮತಿ ಮನೋರಮಾ ಮಧ್ವರಾಜ್ :- ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಆದಷ್ಟು ಬೇಗ ಒಂದು ಸಭೆಯನ್ನು ಕರೆದು ಚರ್ಚೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಇದನ್ನು ತೀವ್ರವಾಗಿ ತೆಗೆದುಕೊಳ್ಳಬೇಕು. ಏತಕ್ಕೆಂದರೆ ಲಕ್ಷಾಂತರ ಜನ ಹೋಟೆಲ್ ತಿಂಡಿಯನ್ನು ತಿಂದು ಜೀವನ ಮಾಡುತ್ತಿರುವವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದರೆ ನಾವು ಇಲ್ಲಿ ಏತಕ್ಕೆ ಕುಳಿತಿರಬೇಕು.

ಉಪಾಧ್ಯಕ್ಷಣಿಯವರು :- ಮಾನ್ಯ ಸಚಿವೆಯವರು ಆದಷ್ಟು ಜಾಗ್ರತೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ :- ಸರ್ಕಾರ ಹೋಟೆಲ್ ಮಾಲಿಕರ ಪರವಾಗಿ ಇದೆ. ಸರ್ಕಾರ ಅವರ ಹಿತವನ್ನು ಕಾಪಾಡುವ ಪ್ರಯತ್ನ ಮಾಡುತ್ತಿದೆ. ಇದು ಹೋಟೆಲ್ ಮಾಲಿಕರ ಪರವಾಗಿ ಇರತಕ್ಕಂಥ ಸರ್ಕಾರ. ಈ ಸರ್ಕಾರಕ್ಕೆ ಧಿಕ್ಕಾರ ಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ. ಸರ್ಕಾರದ ನೀತಿಗೆ ಧಿಕ್ಕಾರ ಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಶ್ರೀ ವಾಟಾಳ್ ನಾಗರಾಜ್ ಮತ್ತು ಮಾನ್ಯ ಶ್ರೀ ಸಿ. ಬೈರೇಗೌಡರು ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುತ್ತಾ ಸಭಾತ್ಯಾಗ ಮಾಡಿದರು)

## ಶಿಕ್ಷಣ ಮಸೂದೆ ಬಗ್ಗೆ ಆತ್ಮವಂಚನೆ ಬೇಡ - 13-1-93

ಶಿಕ್ಷಣದಿಂದಲೇ ಅಭಿವೃದ್ಧಿ ಎಂಬುದನ್ನು ಪ್ರತಿಪಾದಿಸುತ್ತಿದ್ದ ಗೌಡರು, ಆಂಗ್ಲ, ಕನ್ನಡ ಮಾಧ್ಯಮ, ಕಾಲೇಜುಗಳ ಡೊನೇಷನ್ ಎಲ್ಲವನ್ನು ಪ್ರಸ್ತಾಪಿಸುತ್ತಿದ್ದರು. ಶಿಕ್ಷಣ ಮಸೂದೆ ಚರ್ಚೆಯಲ್ಲಿ ಅವರಿಗೂ, ಆರ್.ಎಲ್. ಜಾಲಪ್ಪನವರಿಗೂ ಮಾತಿನ ಚಕಮಕಿ ನಡೆಯಿತು. ತಮ್ಮ ಅಭಿಪ್ರಾಯವನ್ನು ಸಿ.ಬಿ.ಸ್ಪಷ್ಟ ಪಡಿಸಿದ್ದಾರೆ.

ಶಿಕ್ಷಣ ಮಸೂದೆಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಬೈರೇಗೌಡರು:- ಮಾನ್ಯ ಅಧ್ಯಕ್ಷರೇ, ಎಲ್ಲಾ ಕಿಸೆಗೆ ಹೋಗುತ್ತಿದೆ. ಕಿಸೆಗೆ ಹಾಕಬೇಕೆಂದೇ ನಡೆಸುತ್ತಿರುವುದು, ಅದರಲ್ಲಿ ಅನುಮಾನವಿಲ್ಲ. ಏತಕ್ಕೋ ದೇಶಪಾಂಡೆಯವರಿಗೆ ಅನುಮಾನ ಇದ್ದಂತೆ ಇದೆ, ಇದು ಬರೀ ಅಷ್ಟಕ್ಕೆ ನಿಂತಿಲ್ಲ. ಇಂತಹ ಕಡೆ ಇಂತಹವರಿಗೆ ಸೇರಿಸಿಕೊಳ್ಳಿ ಎಂದು ಪಟ್ಟಿಗಳನ್ನು ಕಳುಹಿಸುತ್ತಾರಲ್ಲ ನಾಯಕರು ಅವರು ಯಾರೂ ಕಡಮೆ ಏನಿಲ್ಲ. ಈ ನಾಯಕರುಗಳ ಕಿಸೆಗೆ (5 ಲಕ್ಷ ಹೋಗುತ್ತಿದೆ, ಅದೂ ದೊಡ್ಡ ದೊಡ್ಡ ಮಹಾನ್ ನಾಯಕರುಗಳ ಕಿಸೆಗೆ ಹೋಗುತ್ತಿದೆ)

ನಾವೆಲ್ಲರೂ ಈಗ ಇಲ್ಲಿ ನಿಂತುಕೊಂಡು ಆತ್ಮವಂಚನೆ ಮಾಡಿಕೊಳ್ಳುವುದು ಬೇಡ. ಮಂತ್ರಿಗಳಾಗಿರತಕ್ಕಂಥವರು ಯಾರ್‍ಯಾರು, ಯಾವ ಯಾವ ಕಾಲೇಜಿಗೆ, ನೀವು ಪಟ್ಟಿಯನ್ನು ಕಳುಹಿಸಿದ್ದೀರಿ? ನಿಮ್ಮ ಕಾಗದದ ಮೇಲೆ ಯಾವ್ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಜನರಿಗೆ ಪ್ರವೇಶ ದೊರಕಿದೆ? ಇಂಥ ವಿಚಾರವನ್ನು ನೀವು ಹೌದು ಇದು ಆಗಿದೆ ಎಂದು ಒಪ್ಪಿಕೊಂಡರೆ, ಆಗ ನಿಮ್ಮ ಸತ್ಯಸಂಧತೆಯನ್ನು ನಾನು ಮೆಚ್ಚಿಕೊಳ್ಳುತ್ತೇನೆ. ನಾನು ನಿಮ್ಮ ಸರ್ಕಾರ ಎಂದು ಹೇಳುತ್ತಿರತಕ್ಕಂಥಾದ್ದು ನಾನು ನಿಮ್ಮ ಕಾಂಗ್ರೆಸ್ (ಐ) ಸರ್ಕಾರದ ಬಗ್ಗೆ. ಕಳೆದ ಮೂರು ವರ್ಷಗಳಿಂದ ನಿಮ್ಮ ಸರ್ಕಾರದ ಯಾವ ಯಾವ ಮಂತ್ರಿಗಳ ಕಾಗದದ ಮೇಲೆ ಎಷ್ಟೆಷ್ಟು ಪ್ರವೇಶ ಪಡೆದಿದ್ದೀರಿ ಎಂದು ಹೇಳಬೇಕು. ನಿಮಗೆ ಕೊಡಲು ಆಗದಿದ್ದರೆ ನಾನೇ ಬೇಕಾದರೂ ಕೊಡುತ್ತೇನೆ.......

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ನಾನು ಮಾತನಾಡುವಾಗ ಸದನದಲ್ಲಿ ಇರಲಿಲ್ಲ. ಈಗ ಬಂದಿದ್ದಾರೆ. ಅವರಿಗೆ ಬಹಳ ಪ್ರಿಯವಾದಂಥ ವಿಚಾರವನ್ನು ಹೇಳಿದ್ದೇನೆ. ಶಿಕ್ಷಣ ಮಾಧ್ಯಮದ ಬಗ್ಗೆ ನಿಮ್ಮ ನೀತಿ ಏನು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಗೋಕಾಕ್ ವರದಿ ಬಗ್ಗೆ ನೀವು ಒಪ್ಪಿದ್ದೀರೋ ಅದರ ಬಗ್ಗೆಯೂ ನಿರ್ಧಾರವಾಗಿಲ್ಲ. ತಾವು ಶಿಕ್ಷಣ ಸಚಿವರಾಗಿದ್ದಾಗ ಹೇಳಿದ್ದೀರಿ, ಅದಕೊ□ಂದು ಸಮಿತಿಯನ್ನು ಮಾಡಿದ್ದೀರಿ. ಅದರ ವರದಿ ಏನಾಯಿತು?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ನಾವು ಯಾವ ಸಮಿತಿಯನ್ನು ಡಾ: ನರಸಿಂಹಯ್ಯನವರು ಎಲ್ಲಾ ಕೂಡಿ ಮಾಡಿದ್ದೇವೆ ಅದು ಪೂರ್ತಿಯಾಗಿ ಅನುಷ್ಠಾನವಾಗಿದೆ. ತಮಗೆ ಸರ್ಕಾರದ ಆದೇಶವನ್ನು ಬೇಕಾದರೆ ಕೊಡುತ್ತೇನೆ. ಅದನ್ನು ನಾವು ಅನುಷ್ಠಾನ ಮಾಡಿದ್ದೇವೆ. ಇವೊತ್ತಿಗೂ ಕೂಡ, ಈ ಆಂಗ್ಲ ಮಾಧ್ಯಮ ಯಾವ ತರಹ ಇರಬೇಕು, ಸಮಿತಿಯವರು ಏನು ವರದಿ ಕೊಟ್ಟಿದ್ದಾರೆ, ಸರ್ಕಾರದವರು ಅದರ ಪ್ರಕಾರವೇ ಆದೇಶವನ್ನು ಕೊಟ್ಟಿದ್ದೇವೆ. ಹಾಗೆಯೇ ಇವೊತ್ತು ನಡೆಯುತ್ತಾ ಇರುವುದು. ಗೋಕಾಕ್ ವರದಿಯು ಕೂಡ ಅನುಷ್ಠಾನವಾಗಿದೆ. ಯಾವುದು ಸರಿಯಾಗಿ ಆಗಿದೆ, ಆಗಿಲ್ಲ ಎಂಬ ಬಗ್ಗೆ ನಾವೆಲ್ಲರೂ ಮಾತನಾಡೋಣ. ಕನ್ನಡ ಭಾಷೆ ನುಡಿಯ ವಿಚಾರದಲ್ಲಿ ಎಲ್ಲರಿಗೂ ಆಸಕ್ತಿ ಇದೆ. ಅದನ್ನು ಬಿಟ್ಟು ಆಸಕ್ತಿ ಇದ್ದವರದ್ದು ಮಾತ್ರ ಸಭೆ ಕರೆಯೋಣ ಅಂದರೆ ಅದು ತಪ್ಪು ಅರ್ಥವಾಗಬಹುದು. ಇದರ ಬಗ್ಗೆ ಎಷ್ಟು ಅನುಷ್ಠಾನವಾಗಿದೆ, ಯಾವುದು ಆಗಿಲ್ಲ? ಯಾವುದನ್ನು ಮಾಡಬಹುದು? ಕನ್ನಡದ ನುಡಿ, ಭಾಷೆ, ಸಾಹಿತ್ಯದ ಅಭಿವೃದ್ಧಿಯ ಬಗ್ಗೆ ನಾನು ಒಂದು ಸಭೆಯನ್ನು ಕರೆಯುತ್ತೇನೆ. ಎರಡೂ ಸದನಗಳ ಶಾಸಕರನ್ನು ಕರೆದು ಚರ್ಚೆ ಮಾಡೋಣ. ಎಲ್ಲಿ ಅನುಷ್ಠಾನ ಮಾಡಬೇಕು? ಎಷ್ಟು ಶಕ್ತಿ ಕೊಡಬೇಕು? ಎಂಬ ಬಗ್ಗೆ ಅಧಿವೇಶನ ಆದ ಮೇಲೆ ಒಂದು ಸಭೆಯನ್ನು ಕರೆಯೋಣ.

ಶ್ರೀ ವಾಟಾಳ್ ನಾಗರಾಜ್ :- ಅವರು ಹೇಳುವಾಗ ನಮ್ಮ ಕಾರ್ಯಕ್ರಮ ಜಾಸ್ತಿಯಾಯಿತು ಎಂದು ನೀವು ಹೇಳಬಾರದೂ ಎಂದು. ನಾವೆಂದೂ ಹೇಳುವುದಕ್ಕೆ ಹೋಗೋದಿಲ್ಲ, ನಿಮಗೆ ಹೇಳುವವರು ಬೇರೆ ಇರಬಹುದು. ನಾವು ಇಂತಹ ನಿಮ್ಮ ಕಾರ್ಯಕ್ರಮಗಳು ಆಗುವಾಗ ಶಹಭಾಶ್‌ಗಿರಿ ಕೊಡುತ್ತೇವೆ. ಅದರಲ್ಲಿ ಏನೂ ಅನುಮಾನವಿಲ್ಲ. ಆದ್ದರಿಂದ ಇದೂ ಬಹಳ ಮುಖ್ಯವಾದದ್ದು, ಈ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳನ್ನು ತಡೆಹಿಡಿಯುವುದಕ್ಕೆ ಏನು ಕ್ರಮ ಬರಬೇಕು ಮತ್ತು ಇಲ್ಲಿ ಮಾಡುವಂತಹ ಅಕ್ರಮಗಳನ್ನು........

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು ಹೇಳಿದಾಗಲೇ ನಾನು ಹೇಳಿದೆ, ಏನೆಂದರೆ ಇದರ ಬಗ್ಗೆ ನಾವು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ನಿರ್ಣಯದ ಆಧಾರ ತೆಗೆದುಕೊಂಡು ನಮ್ಮ ಕ್ಯಾಪಿಟೇಶನ್ ಫೀ ಪ್ರಾಹಿಬಿಷನ್ ಆಕ್ಟ್ ಮಸೂದೆ ಏನಿದೆ, ಅದಕ್ಕೆ ಸಮನ್ವಯವಾಗಿ ಈಗಾಗಲೇ ಒಂದು ನಿಯಮಾವಳಿ ಸಿದ್ಧಪಡಿಸಿದ್ದೇವೆ. ನಾನು ಶಿಕ್ಷಣ ಸಚಿವನಿದ್ದಾಗಲೇ ಕ್ಯಾಬಿನೆಟ್ಟಿಗೆ ನಾನು ಇದನ್ನು ತಂದಿದ್ದೇವೆ. Cabinet has deferred it. The Cabinet is going to re-open the subject . ನಾವು ಹೇಳಿದ್ದೇವೆ ಇದು ನೂರು ದಿವಸಗಳ ಕಾರ್ಯಕ್ರಮದಲ್ಲಿ ಇದೆ. ಆದ್ದರಿಂದ ಆ ನಿಯಮಾವಳಿಯನ್ನು ಕ್ಯಾಬಿನೆಟ್‌ಗೆ ಆದಷ್ಟು ಜಾಗ್ರತೆ ತಂದು ನಾವು ಒಪ್ಪಿಗೆ ಕೊಡುತ್ತೇವೆ. ಏನು ಕ್ಯಾಪಿಟೇಶನ್ ಫೀ ಬಗ್ಗೆ ತಾವುಗಳು ಎತ್ತಿದ್ದೀರಿ, ಇದಕ್ಕೆ ಸಮರ್ಪಕವಾದ ಉತ್ತರ ಕೊಡಲಿಕ್ಕೆ ಆಮೇಲೆ ಸಾಧ್ಯವಾಗುತ್ತದೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ, ನಾವೆಲ್ಲರೂ ಇಲ್ಲಿ ನಿಂತು ಆತ್ಮವಂಚನೆ ಮಾಡಿಕೊಳ್ಳದೆ ಕೆಲಸ ಮಾಡುವ ಅವಶ್ಯಕತೆ ಇದೆ, ಆ ದೃಷ್ಟಿಯಿಂದ ನಾವು ಇಲ್ಲಿ ಬಂದಿರುವುದು ಆದರೆ ಇವತ್ತು ಈ ಮಸೂದೆ ಏನು ತಂದಿದ್ದಾರೆ ಅದನ್ನು ಓದಿದಾಗ, ಕೇಳಿದಾಗ ಇದು ಆತ್ಮವಂಚನೆಯ ಕೆಲಸ ನಡೆಯುತ್ತದೆ ಎಂದು ನಾನಂತೂ ಸ್ಪಷ್ಟವಾಗಿ ಇಲ್ಲಿ ಹೇಳುತ್ತೇನೆ. ನಾನು ಬೇರೆ ಎಲ್ಲಿಂದಲೂ ಪ್ರಾರಂಭ ಮಾಡುವುದಿಲ್ಲ. ಇವತ್ತು ಈ ಬಿಲ್ಲನ್ನು ಪೈಲಟ್ ಮಾಡುತ್ತಿರುವವರು ಮಾನ್ಯ ರಾಮಸ್ವಾಮಿಯವರು. ರಾಮಸ್ವಾಮಿಯವರು ಮಲೆನಾಡು ತಾಂತ್ರಿಕ ವಿದ್ಯಾ ಸಂಸ್ಥೆಗೆ ಅಧ್ಯಕ್ಷರಾಗಿದ್ದಾರೆ. ಅಲ್ಲಿ ಏನೇನು ನಡೆಯುತ್ತಿದೆ ಎಂದು ನಿರ್ವಂಚನೆಯಿಂದ ಅವರು ಒಂದು ಮಾತನ್ನು ಹೇಳಲಿ, ನೂರು ಬಾರಿ ಹೇಳಬೇಡಿ, ಒಂದು ಅಂಶ ಸತ್ಯ ಹೇಳಿಬಿಟ್ಟರೆ ಸಾಕು. ಅದಾದ ಮೇಲೆ ನಿಮ್ಮ ಕಾಂಗ್ರೆಸ್‌ನ ಅನೇಕ ಶಾಸಕರು ಒಂದು ಮೆಮೊರಾಂಡಮನ್ನು ಪ್ರಧಾನಮಂತ್ರಿಗಳವರೆಗೂ ಈ ಸರ್ಕಾರದಲ್ಲಿ ಏನೇನು ನಡೀತಿದೆ ಅಂತ ಹೋಗಿ ಕೊಟ್ಟಿದ್ದಾರೆ ಆ ಮೆಮೊರ್ಯಾಂಡಮನ್ನು ಡ್ರಾಫ್ಟ್ ಮಾಡುವುದರಲ್ಲಿ ರಾಮಸ್ವಾಮಿಯವರು ಬಹಳ ಪ್ರಮುಖ ಪಾತ್ರ ವಹಿಸಿದ್ದಾರೆ. ಅದರಲ್ಲಿ ಪ್ರಮುಖ ಒಂದು ಆರೋಪ ಇರುವುದೆಂದರೆ ಈ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಮಾನ್ಯತೆ ಪಡೆಯದ ಅಂದರೆ ಅವರಿಗೆಷ್ಟು ಪ್ರವೇಶಕ್ಕೆ ಅವಕಾಶ ಇರುತ್ತದೆಯೋ ಅದಕ್ಕಿಂತ ಹೆಚ್ಚಿಗೆ ಪ್ರವೇಶ ಕೊಡಿಸಿ ಮನಸ್ಸು ಬಂದಂತೆ ಕೆಲವು ಪ್ರವೇಶ ಕೊಡಿಸಿದ್ದಾರೆ. ಅದರಲ್ಲಿ ಕೋಟ್ಯಂತರ ರೂಪಾಯಿಗಳ ದುರ್ವ್ಯವಹಾರ ನಡೆಸಿದ್ದಾರೆ. ಜೋಬಿಗೆ ಹೋಗಿದೆ ಎಂದೇ ಪದ ಅಲ್ಲಿ ಬಳಸಿರುವುದು. ಇವತ್ತು ಆ ಮಂತ್ರಿ ಸ್ಥಾನದಲ್ಲಿ ಕುಳಿತು ನೀವೇ ತಯಾರು ಮಾಡಿರುವ ಮೆಮೊರ್ಯಾಂಡಮನ್ನು ಒಪ್ಪಿ ಸತ್ಯವನ್ನು ಹೇಳಲೇಬೇಕಾಗುತ್ತದೆ. ನೀವು ಆ ಸತ್ಯ ನುಡಿಯುತ್ತೀರೆಂಬ ನಂಬಿಕೆ ನನಗಿದೆ, ನುಡಿಯದಿದ್ದರೆ ಆತ್ಮವಂಚನೆಯನ್ನು ನೀವು ಮಾಡಿಕೊಳ್ತೀರಿ ಅಥವಾ ಏನೋ ಉದ್ದೇಶಕ್ಕಾಗಿ ಆ ಮೆಮೊರ್ಯಾಂಡಮನ್ನು ಕೊಟ್ಟಿರಬಹುದು ಎನ್ನುವ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ.

ರಾಜ್ಯದ ಜನತೆ ಕೂಡ ಆ ತೀರ್ಮಾನಕ್ಕೆ ಬರುತ್ತಾರೆ. ಇದಾದ ಮೇಲೆ ಎಷ್ಟು ದಿವಸ ಬೇಕಾದರೂ ಹೇಳುವಷ್ಟು ಸಾಮಗ್ರಿ, ಸರಕು ಇದರಲ್ಲಿ ಇದೆ. ಅನೇಕ ಮಾನ್ಯ ಮಂತ್ರಿಗಳಾಗಿರತಕ್ಕಂಥವರು, ಮಾನ್ಯ ವೀರಪ್ಪ ಮೊಯಿಲಿರವರು ಸಮೇತ ಇಂಜಿನಿಯರಿಂಗ್ ಕಾಲೇಜುಗಳಿಗೆ, ಮೆಡಿಕಲ್

ಕಾಲೇಜುಗಳಿಗೆ ಮಾನ್ಯ ಮಂತ್ರಿ ಮಹೋದಯರ ಪತ್ರದ ಮೇಲೆ ಅಡ್ಮಿಶನ್ ಸಿಕ್ಕಿದೆ. ವಿಐಪಿ ಸೀಟ್ಸ್, ಇಲ್ಲಿ ಬಹಳ ಸ್ವಾರಸ್ಯ ಇದೆ. ಅಲ್ಲಿ ಸಂಸ್ಥೆಗಳನ್ನು ಯಾರು ನಡೆಸುತ್ತಾರೆ, ಅದೇನು ಧರ್ಮ ಸಂಸ್ಥೆಗಳಲ್ಲ. ದುಡ್ಡು ತೆಗೆದುಕೊಂಡು ನಡೆಸುವುದಕ್ಕೆ ಸಂಸ್ಥೆಗಳು ಇರತಕ್ಕಂಥದ್ದು. ಹೌದೇ ಜಾಲಪ್ಪನವರೇ.

ಶ್ರೀ ಆರ್.ಎಲ್. ಜಾಲಪ್ಪ :- ಮಾನ್ಯ ಅಧ್ಯಕ್ಷಿಣಿಯವರೆ, ವೇದಾಂತ ಹೇಳುವುದು ಬಹಳ ಸುಲಭ. ಪುಸ್ತಕದ ಬದನೆಕಾಯಿ. ಕರ್ನಾಟಕದಲ್ಲಿರುವ ಎಜುಕೇಷನ್ ಪರಿಸ್ಥಿತಿಯನ್ನು ನೋಡಿದರೆ ನೂರಕ್ಕೆ 75ರಷ್ಟು ಪ್ರೈಮರಿ ಸ್ಕೂಲ್‌ಗಳಲ್ಲಿ 13 ಲಕ್ಷ ಪ್ರೈಮರಿ ಸ್ಕೂಲ್‌ಗಳಲ್ಲಿ ಮುಕ್ಕಾಲು ಭಾಗ ಸಿಂಗಲ್ ರೂಮ್ ಕ್ಲಾಸಸ್. ಮುಕ್ಕಾಲು ಭಾಗ ಸಿಂಗಲ್ ಟೀಚರ್ ಸ್ಕೂಲ್ಸ್. ಕಾಲೇಜುಗಳಲ್ಲಿ ಎಕ್ವಿಪ್‌ಮೆಂಟ್ ಇಲ್ಲ. ಸ್ಪೋರ್ಟ್ಸ್ ಫೀಲ್ಡ್ ಇಲ್ಲ. ಇದನ್ನು ನಾನು ಹೇಳುವುದಿಲ್ಲ. ಕರ್ನಾಟಕ ಸರ್ಕಾರದವರೇ ಇದನ್ನು ಒದಗಿಸಿದ್ದಾರೆ. ಇದು ಸುಪ್ರೀಂ ಕೋರ್ಟ್ ಮುಂದೆ ಇದೆ. ಒಂದು ಸಮಯ ಪ್ರೈವೇಟ್ ಎಜುಕೇಷನಿಸ್ಟ್ ಮುಂದೆ ಬರದಿದ್ದರೆ ಇರಬಹುದು. ರಾಜಕಾರಣಿಗಳೆಲ್ಲ ಸತ್ಯವಂತರಲ್ಲ ಇವರು. ಅದೇ ರೀತಿ ಕೆಲವು ಇನ್ಸ್‌ಟಿಟ್ಯೂಷನ್ಸ್‌ಗಳೂ ಅಂಡರ್ ಡೀಲಿಂಗ್ಸ್ ಮಾಡಿಕೊಂಡು ಕ್ಯಾಪಿಟೇಶನ್ ಫೀಯನ್ನು ತೆಗೆದುಕೊಳ್ಳುತ್ತಿರಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಹುಬ್ಬಳ್ಳಿ, ಬಳ್ಳಾರಿ ಮೆಡಿಕಲ್ ಕಾಲೇಜುಗಳ ಗತಿ ಏನಾಗಿದೆ? ಅದಕ್ಕೆ ಸ್ಟಾಂಡರ್ಡ್ ಇದೆಯೇ? ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಸೊಫೆಸ್ಟಿಕೇಟೆಡ್ ಎಕ್ವಿಪ್‌ಮೆಂಟನ್ನು ಪ್ರೊವೈಡ್ ಮಾಡಿದ್ದಾರೆ ಮತ್ತು ಸರ್ಕಾರ ಏನು ಕೆಲಸವನ್ನು ಮಾಡಬೇಕಾಗಿತ್ತು, ಅದರ ಹತ್ತರಷ್ಟು ಇವತ್ತಿನ ದಿವಸ ಕೆಲಸ ಮಾಡಿ ಜನತೆಗೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೂಡ ಲೇಟೆಸ್ಟ್ ಎಕ್ವಿಪ್‌ಮೆಂಟ್‌ಗಳನ್ನು ತರಿಸಿ ಸ್ಟೂಡೆಂಟ್ಸ್‌ಗೆ ಟ್ರೈನಿಂಗ್ ಕೊಡುತ್ತಿದ್ದಾರೆ. ಸುಮ್ಮನೆ ಏನೂ ಇಲ್ಲದೆ ಕುಳಿತುಕೊಂಡು ಏನೋ ಒಂದು ಸೀಟು ಕೇಳಿದಾಗ ಸಿಕ್ಕಲಿಲ್ಲ ಎಂದು ಹೇಳಿ ಕ್ರಿಟಿಸೈಜ್ ಮಾಡುವುದಕ್ಕೂ ಕೂಡ, ಕಾಲೇಜು ನಡೆಸುವುದಕ್ಕೂ ಬಹಳ ವ್ಯತ್ಯಾಸ ಇದೆ ಅಧ್ಯಕ್ಷಣಿಯವರೇ? ಕಾಲೇಜು ನಡೆಸಬೇಕು. ನಾವು ಕಾಲೇಜುಗಳನ್ನು ನಡೆಸುತ್ತಿರುವವರು ದ್ರೋಹಿಗಳೇನಲ್ಲ ಅಥವಾ ನಾವೇನೂ ಎಲ್ಲಾ ತೆಗೆದುಕೊಂಡು ಹೋಗಿ ಮನೆಯಲ್ಲಿ ಹೆಂಡತಿ, ಮಕ್ಕಳನ್ನು ಸಾಕುತ್ತಿಲ್ಲ. ನಾನು ಒಬ್ಬ ಇಲ್ಲಿ ಅಧ್ಯಕ್ಷನಾಗಿ ಕುಳಿತುಕೊಂಡಿದ್ದೇನೆ. ವಿಧಿ ಇಲ್ಲ, ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕು. The samething is with Mr. Harnahalli Ramaswamy also. ಇವರು ಯಾರು ಇಲ್ಲಿ ಭಾಷಣವನ್ನು ಮಾಡುತ್ತಾರೋ ಅವರು ಸೀಟನ್ನು ಕೇಳಲಿಲ್ಲವೇ? ಸುಮ್ಮನೆ ಏನು ಹುಡುಗಾಟ? ಆಯಿತು, ತೆಗೆದುಕೊಳ್ಳಿ, ನಾನಂತೂ ತಯಾರಾಗಿದ್ದೇನೆ ಇವತ್ತಿನ ದಿವಸ ನಾನು ಸರ್ಕಾರಕ್ಕೆ ಆ ಸಂಸ್ಥೆಯನ್ನು ಹ್ಯಾಂಡ್ ಓವರ್ ಮಾಡುವುದಕ್ಕೆ ತಯಾರಾಗಿದ್ದೇನೆ. Let the Government take over the college.

ಶ್ರೀ ಸಿ. ಬೈರೇಗೌಡ : ಮಾನ್ಯ ಜಾಲಪ್ಪನವರು ಯಾರನ್ನು ಕುರಿತು ಈ ಮಾತನ್ನು ಹೇಳಿದರೋ ಗೊತ್ತಿಲ್ಲ. ನಾನಂತೂ ಅವರನ್ನು ಯಾವತ್ತು ಸೀಟು ಕೊಡಿ ಎಂದು ಕೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ :- ನೀವೂ ಕೇಳಿದ್ದೀರಿ. ನಾನು ಪ್ರಮಾಣ ಮಾಡಿ ಹೇಳುತ್ತೇನೆ. ನಿಮಗೂ ನಮಗೂ ವೈಮನಸ್ಸು ಬಂತು ಸೀಟು ಕೇಳಿದ್ದರಿಂದ. ಒಂದು ಸೀಟು ಕೊಟ್ಟೆ ನಾನು ಮೊದಲನೆ ವರ್ಷ. ಎರಡನೆಯ ಸೀಟು ಕೊಡಲಿಲ್ಲ. ಅದಕ್ಕೆ ವೈಮನಸ್ಸು ಬಂತು.

(ಗೊಂದಲ)

ಶ್ರೀ ಸಿ. ಬೈರೇಗೌಡ :- ನೋಡಿ ಅವರು ಲೆಕ್ಕ ಬರೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ :- ನೀವೂ ಕೇಳಿದ್ದೀರಿ. ನಾನು ಬೇಕಾದರೆ ಪ್ರಮಾಣ ಮಾಡಿ ಹೇಳುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಅಧ್ಯಕ್ಷರೇ, ಇದೇ ತರಹ ಮಾನ್ಯ ಜಾಲಪ್ಪನವರು ಈಗ ಏನು ಹೇಳುತ್ತಿದ್ದಾರೆ, ಇದೇ ರೀತಿ ಅಲ್ಲಿ ನಡೆಯುತ್ತಿರತಕ್ಕಂಥದ್ದು. ಇದು ಇವರ ಸೀಟು, ಅವರ ಸೀಟು ಎಂದು ಹೆಸರುಗಳನ್ನು ಬರೆದುಕೊಳ್ಳತಕ್ಕಂಥದ್ದು ಇದು. ಹಣವನ್ನು ಲೂಟಿ ಮಾಡತಕ್ಕಂಥದ್ದು ಇದೇ ರೀತಿ ನಡೆಯುತ್ತಿರತಕ್ಕಂಥದ್ದು. ಇದಕ್ಕೆ ಸಾಕ್ಷಿ ಬೇರೆ ಕಡೆ ಎಲ್ಲೂ ಬೇಕಾಗಿಲ್ಲ. ನಾನು ಹೇಳುತ್ತಿರುವಂಥದ್ದಕ್ಕೆ ಇಲ್ಲೇ ಸದನದಲ್ಲೇ ಸಾಕ್ಷಿ ಸಿಕ್ಕಿದೆ. ಇವತ್ತಿನ ದಿವಸ ಜಾಲಪ್ಪನವರು ನಡೆಸುತ್ತಿರತಕ್ಕಂಥದ್ದು ಒಪ್ಪಿಕೊಂಡಿದ್ದೇವೆ. ಅವರಿಗೆ ಧನ್ಯವಾದಗಳು ಏಕೆಂದರೆ........

ಶ್ರೀ ಆರ್.ಎಲ್. ಜಾಲಪ್ಪ :- ನನ್ನ ಶಾಲೆ ಪ್ರಾರಂಭವಾಗಿರತಕ್ಕಂಥದ್ದು 86-87ರಲ್ಲಿ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಆ ಕಾಲೇಜನ್ನು ಕೊಡಿಸಬೇಕಾಗಿದ್ದರೆ ಅದಕ್ಕೆ ನಾನು ಕೂಡ ಕಾರಣ. ಅದನ್ನು ನೀವು ಮರೆತಿದ್ದೀರಿ. ಅದಕ್ಕೆ ನಾನೇನು ಹೇಳಲಿ. ಆ ಪ್ರಶ್ನೆ ಬೇರೆ. ಇವತ್ತು ಜಾಲಪ್ಪನವರು ಹೇಳಿರತಕ್ಕಂಥದ್ದು....

(ಗೊಂದಲ)

ಛೇರ್ಮನ್ :- ಬೈರೇಗೌಡರೇ, ನೀವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಈಗ ನಿಮ್ಮ ನಿಮ್ಮಲ್ಲೇ ಇಂಟರಪ್ಷನ್ಸ್ ಬರುತ್ತಿದೆ. ನೀವು ಮುಂದುವರಿಸಿ. ಇನ್ನೊಂದು ಮೂರು ನಿಮಿಷದಲ್ಲಿ ಮುಗಿಸಿ.

ಶ್ರೀ ಸಿ. ಬೈರೇಗೌಡ :- ಇನ್ನು ಬಹಳ ಹೇಳಬೇಕಾಗಿರುವುದು ಇದೆ.

ಛೇರ್ಮನ್ :- ನೀವು ಇನ್ನೂ ಪೀಠಿಕೆಯಲ್ಲೇ ಕುಳಿತಿದ್ದೀರಿ.

ಶ್ರೀ ಸಿ. ಬೈರೇಗೌಡ :- ಹೌದೌದು.

**Chairman :** Come to the subject please.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಅದಕ್ಕೆ ನಾನು ಪ್ರಾರಂಭದಲ್ಲೇ ಹೇಳಿರತಕ್ಕಂಥದ್ದು ಆತ್ಮವಂಚನೆ ಎಂದು. ನಾನು ಆ ಪದವನ್ನು ಹೇಳಿದ್ದದನ್ನು ನೀವು ಕೇಳಿದಿರೋ ಇಲ್ಲವೋ? ಹೌದು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಆಗಲೇ ನಾನು ಹೇಳುತ್ತಿದ್ದೆ.

ಛೇರ್ಮನ್ :- ಮಾನ್ಯತೆ ಪಡೆಯದ ಸಂಸ್ಥೆಗಳ ಬಗ್ಗೆ ಮಾತನಾಡಿ. ಮಾನ್ಯತೆ ಪಡೆದಿರುವಂತಹ ಸಂಸ್ಥೆಗಳನ್ನೆಲ್ಲಾ ತೆಗೆದುಕೊಂಡು ಹೇಳಿದ್ದನ್ನೇ ಹೇಳುತ್ತಾ ಇದ್ದರೆ ಎಲ್ಲಿಯವರೆಗೂ ಸಮಯ ಸಾಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ :- ನೀವು ಆ ಬಿಲ್ಲನ್ನು ನೋಡಿ. ಮಾನ್ಯತೆ ಪಡೆಯದೇ ಇರತಕ್ಕಂಥವು ಮತ್ತು ಈಗ ಅಕ್ರಮವಾಗಿ ಏನು ಪ್ರವೇಶ ಪಡೆದಿದ್ದಾವೆ ಅದೂ ಕೂಡ ಮುಖ್ಯವಾಗಿ ಅಕ್ರಮವಾಗಿ ಅದು ಮುಖ್ಯವಾಗಿ ಇದೆ. ಆದ್ದರಿಂದ ಆ ವಿಚಾರವನ್ನೆಲ್ಲಾ ಪ್ರಸ್ತಾಪ ಮಾಡಬೇಕಾಗಿದೆ. ನಾನು ಹೇಳುತ್ತಾ ಇದ್ದೆ. ನಾವು ಯಾವುದೂ ಧರ್ಮ ಸಂಸ್ಥೆ ಅಲ್ಲ ಎಂದು. ಮಾನ್ಯ ಜಾಲಪ್ಪನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಅನೇಕ ಖಾಸಗಿ ಕಾಲೇಜುಗಳು ಏನು ಇವೆ ಅವು ಚೆನ್ನಾಗಿ ನಡೆಯುತ್ತಾ ಇವೆ. ಅದರೊಳಗೆ ಜಾಲಪ್ಪನವರ ಜೊತೆಗೆ ಸಹಮತ ಇದೆ. ಇವತ್ತು ಸರ್ಕಾರದ ಮೆಡಿಕಲ್ ಕಾಲೇಜು ಹುಬ್ಬಳ್ಳಿಯಲ್ಲಿದೆ. ಅದರ ಗತಿ ಏನಾಗಿದೆ? ಏನು ಆಗಿದೆ ಹುಬ್ಬಳ್ಳಿ ಮೆಡಿಕಲ್ ಕಾಲೇಜು? ಬಳ್ಳಾರಿ ಮೆಡಿಕಲ್ ಕಾಲೇಜು ಏನು ಆಗಿದೆ? ಇಲ್ಲಿ ಚರ್ಚೆ ಆಗಿದೆ. ಎಷ್ಟು ಬೋಧಕರ ವರ್ಗ ಇರಬೇಕಾಗಿತ್ತೋ ಯಾವ ವರ್ಷವೂ ಇಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜಾಗಲಿ ಅಥವಾ ಹುಬ್ಬಳ್ಳಿ ಮೆಡಿಕಲ್ ಕಾಲೇಜಾಗಲಿ ಬೋಧಕ ವರ್ಗ ಇಲ್ಲವೇ ಇಲ್ಲ. ಅವರನ್ನು ನೀವು ವೈದ್ಯರನ್ನಾಗಿ ತಯಾರು ಮಾಡಿ ತಂದು ಬಿಟ್ಟರೆ ಅವರು ಎಷ್ಟು ಜನರ ಪ್ರಾಣ ಉಳಿಸುವುದಕ್ಕೆ ಬದಲು ಎಷ್ಟು ಜನರ ಪ್ರಾಣ ತೆಗೆಯುತ್ತಾರೋ ಗೊತ್ತಿಲ್ಲ. ಅವರು ಔಷಧಿಗೆ ಚೀಟಿ ಬರೆದುಕೊಡುವುದಕ್ಕೆ ಬದಲಾಗಿ ಯಮನ ಹತ್ತಿರ ಚೀಟಿ ಬರೆದುಕೊಡತಕ್ಕಂಥ ಡಾಕ್ಟರ್‌ಗಳನ್ನು ತಯಾರು ಮಾಡತಕ್ಕಂಥ ಈ ಸರ್ಕಾರಿ ಕಾಲೇಜುಗಳು ಇವತ್ತು ಇವೆ. ಅದು ಬೇರೆ ಕಡೆ. ಆದರೆ ಇವತ್ತು ಇಲ್ಲಿರತಕ್ಕಂಥದ್ದು ಏನು ಎಂದರೆ ಈ ಮಂತ್ರಿ ಮಹೋದಯರಿಂದ ಅನೇಕ ಕಡೆ ಇವತ್ತಿನ ದಿವಸ ಲೆಟರ್ ಹೋಗಿದೆ ಹೋಗಲಿ ಕೊಡಲಿ. ನಮ್ಮ ಹತ್ತಿರ ಕೂಡ ಬರುತ್ತಾರೆ, ಸೀಟು ಕೊಡಿಸಪ್ಪ ಎಂದು ಹೇಳುತ್ತಾರೆ. ಅದೇ ತರಹ ಮಂತ್ರಿಗಳ ಹತ್ತಿರ ಕೂಡ ಹೋಗುತ್ತಾರೆ. ಹೋಗಲಿ, ಅದು ಈ ನಮ್ಮ ಸಮಾಜದಲ್ಲಿ ಇವೆಲ್ಲ ಇಲ್ಲ ಎಂದು ಒಪ್ಪಿಕೊಂಡರೆ, ಅದೂ ನಾನು ಮೊದಲೇ ಒಪ್ಪಿಕೊಂಡ ಹಾಗೆ ಆತ್ಮವಂಚನೆ ಆಗುತ್ತದೆ. ಅದನ್ನು ನಾನು ಒಪ್ಪುತ್ತೇನೆ. ಸ್ವಾಮಿ ಏನು ನಡೆಯುತ್ತದೆ ಎಂದರೆ ಹಣವಿಲ್ಲ ಇಲ್ಲಿ ವಸೂಲಿ ಮಾಡಿಕೊಳ್ಳುತ್ತಾರೆ. ಆ ಇನ್ಸ್‌ಟಿಟ್ಯೂಷನ್ಸ್‌ಗೂ ಹಣ ಹೋಗುವುದಿಲ್ಲ. ಯಾವ ಇನ್ಸ್‌ಟಿಟ್ಯೂಷನ್‌ಗೆ ಇವರು ಅಡ್ಮಿಶನ್ಸ್ ಕೊಟ್ಟಿರುತ್ತಾರೋ ಅಲ್ಲಿಗೂ ಕೂಡ ಹೋಗುವುದಿಲ್ಲ. ವಸೂಲಿ ನಡೆಯುತ್ತದೆ. ಅದಕ್ಕೋಸ್ಕರ ಇದೆಲ್ಲಾ ಹೊರಗಡೆ ಬರಬೇಕಾಗಿದ್ದರೆ ಈ ಸದನದ ಒಂದು ಸಮಿತಿ ಆಗಬೇಕಾಗುತ್ತದೆ. ಒಂದು ಕಡೆ ಆ ಸಂಸ್ಥೆಗಳಲ್ಲಿ ಲೂಟಿ ಆದರೆ, ಈ ಮಧ್ಯಸ್ಥಗಾರರದ್ದು ಒಂದು ಕಡೆ ಲೂಟಿ. ಒಂದೊಂದು ಅಡ್ಮಿಶನ್ ಸೀಸನ್ಸ್ ಬಂತು ಅಂದರೆ ಕೆಲವರು ಕೋಟಿಗಟ್ಟಲೆ ಹಣ ಮಾಡಿರತಕ್ಕವರೂ ಇದ್ದಾರೆ. ಈ ವ್ಯವಸ್ಥೆಯಲ್ಲಿ ಆದ್ದರಿಂದ ಮಾನ್ಯ ರಾಮಸ್ವಾಮಿಯವರು ಏನು ಬಿಲ್ಲನ್ನು ತಂದಿದ್ದಾರೆ, ಈ ಬಿಲ್ಲು ಸುಮ್ಮನೇ ಕಾಗದದಲ್ಲಿ ಇರುತ್ತದೆ ಅಷ್ಟೆ. ಈ ಕಾಗದದ ಹುಲಿಗೆ ಯಾರೂ ಗೌರವ ಕೊಡುವುದಿಲ್ಲ. ಈ ಕಾಗದದ ಹುಲಿಗೆ ಅಧಿಕಾರ ನಡೆಸತಕ್ಕವರೇ ಅಡ್ಮಿಶನ್‌ಗೆ ಅವಕಾಶ ಕೊಡುತ್ತೀರಿ. ಸ್ವಾಮಿ ಎಕ್ಸಸ್ ಅಡ್ಮಿಶನ್ಸ್ ಹೇಗೆ ಸಿಗುತ್ತದೆ? ನೀವೇ ಹೇಳುತ್ತೀರಿ. ರೀ ಕೊಡಿರಿ, ನಾವು ಅಪ್ರೂವಲ್ ಮಾಡಿಸುತ್ತೇವೆಂದು, ಇಲ್ಲದಿದ್ದರೆ ಅವರಿಗೆ ಹೇಗೆ ಸಿಗುತ್ತದೆ. ಹೌದೇ? ಎಕ್ಸಸ್ ಅಡ್ಮಿಶನ್ಸ್ ಬಗ್ಗೆ ಇವರನ್ನು ಅಡ್ಮಿಟ್

ಮಾಡಿಕೊಳ್ಳಿರಿ ನಾವು ಅದನ್ನು ರೆಗ್ಯುಲರೈಸ್ ಮಾಡುತ್ತೇವೆ ಎಂದು ಮೇಲಿಂದಲೇ ಆದೇಶ ಬರುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ :- ನನ್ನ ಮಟ್ಟಿಗೆ ಹೇಳುವುದಾದರೆ ಯಾರು ಎಕ್ಸಸ್ ಅಡ್ಮಿಶನ್ ಮಾಡಿ ಎಂದು ಹೇಳಿಲ್ಲ, ನಾನು ಎಕ್ಸಸ್ ಅಡ್ಮಿಶನ್ಸ್ ಮಾಡಿಕೊಂಡಿಲ್ಲ. ನನಗೆ ಯಾವ ಮಂತ್ರಿಯೂ ಹೇಳಿಲ್ಲ, ನಾನು ಮಾಡಿಕೊಳ್ಳುತ್ತಲೂ ಇಲ್ಲ.

ಶ್ರೀ ಸಿ. ಬೈರೇಗೌಡ :- ಇವತ್ತು ಇರತಕ್ಕ ವ್ಯವಸ್ಥೆ ಬಗ್ಗೆ ಹೇಳುತ್ತಿದ್ದೇನೆ. ಹಾಗಾದರೆ ಇವತ್ತಿನ ದಿವಸ ಎಕ್ಸಸ್ ಅಡ್ಮಿಶನ್ ಅನೇಕ ಕಾಲೇಜುಗಳಲ್ಲಿ ಆಗಿವೆ. ಕೆಲವು ರೆಗ್ಯುಲರೈಸ್ ಮಾಡಿದ್ದಾರೆ, ಕೆಲವನ್ನು ರೆಗ್ಯುಲರೈಸ್ ಮಾಡಿಲ್ಲ. ರೆಗ್ಯುಲರೈಸ್ ಮಾಡದೇ ಇರುವುದಕ್ಕ ಕೂಡ ಕಾರಣ ಇದೆ. ಏಕೆಂದರೆ ಇವರ ಸ್ಕೇಲ್‌ಗೆ ಅವರು ಬಂದಿರುವುದಿಲ್ಲ. ಅಷ್ಟೇ ಅಲ್ಲ ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನದ ಮುಂದೆ ಒಂದು ಸಮಿತಿ ವರದಿ ಇದೆ. ಈ ಸಮಿತಿ ವರದಿಯಲ್ಲಿ ಏನು ಹೇಳುತ್ತದೆ? ಹೊರ ರಾಜ್ಯಗಳಿಂದ ಬಂದ, ಹೊರ ದೇಶಗಳಿಂದ ಬಂದಿರತಕ್ಕ ವಿದ್ಯಾರ್ಥಿಗಳು ಏನು ಇದ್ದಾರೆ, ಆ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ಖೋಟಾದಲ್ಲಿ ಬೋಗಸ್, ಏನು ಫೋರ್ಜರಿ ಕಾಗದದ ಮೇಲೆ, ಫೋರ್ಜರಿ ಟೆಲೆಕ್ಸ್ ಮೇಲೆ ಇಲ್ಲಿ ಅವರಿಗೆ ಪ್ರವೇಶ ದೊರಕಿದೆ. ಇದೇನು ಕಡಮೆ ವ್ಯವಹಾರವೇ? ಇದು ಇಂಟರ್‌ನ್ಯಾಷನಲ್ ಚೀಟಿಂಗ್, ಹೀನಾಯಕರವಾದಂಥ ರೀತಿಯಲ್ಲಿ, ಹೀನಾಯಕರವಾದಂಥ ವ್ಯವಸ್ಥೆ ಇಲ್ಲಿದ್ದರೂ ಸಹ ಏನೂ ಕ್ರಮ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳಾಗುವುದಕ್ಕಿಂತ ಮೊದಲೇ ಮೇಜರ್ ಸರ್ಜರಿ ಎಂದು ಮೊದಲೇ ಹೇಳಿದ್ದರು. ಸಮಿತಿ ವರದಿ ಇದೆ. ಅದು ಕೇವಲ ಒಬ್ಬ ವ್ಯಕ್ತಿ ಕೊಟ್ಟಿರತಕ್ಕಂಥ ವರದಿ ಅಲ್ಲ. ಎರಡೂ ಸದನಗಳ ಸದಸ್ಯರುಗಳು ಸೇರಿದಂತಹ ಸಮಿತಿ. ಅದು ಒಂದು ಪಕ್ಷದ ಸದಸ್ಯರು ಕೊಟ್ಟಿರತಕ್ಕಂಥ ವರದಿ ಅಲ್ಲ. ಎಲ್ಲಾ ಪಕ್ಷದ ಸದಸ್ಯರೂ ಸಹ ಆ ಸಮಿತಿಯಲ್ಲಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಸಹ ಸಮಿತಿಯಲ್ಲಿದ್ದಾರೆ. ಇವರೆಲ್ಲರೂ ಅವಿರೋಧವಾಗಿ ಕೊಟ್ಟಿರತಕ್ಕ ವರದಿ. ಇದರ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ. ಅದಕ್ಕೆ ಇದು ಒಂದು ಕಾಗದದ ಹುಲಿಯೆಂದು ನಾನು ಹೇಳಿದ್ದುದು. ಈ ಕಾಗದದ ಹುಲಿಯನ್ನು ಮಾಡಿಕೊಂಡು ಜನರ ಕಣ್ಣಿಗೆ ಮಣ್ಣನ್ನು ಎರೆಚುವಂತಹ ಮಸೂದೆಯನ್ನು ಇವತ್ತು ನೀವು ತಂದಿದ್ದೀರಿ. ಈ ಮಸೂದೆಯನ್ನು ತರುವ ಬದಲು ಸರ್ಕಾರ ದಿಟ್ಟವಾದಂತಹ ಹೆಜ್ಜೆಯನ್ನು ಇಡಬೇಕಾಗಿತ್ತು. ನಮ್ಮ ಎದುರಿಗೆ ವರದಿ ಇದೆ, ಈ ವರದಿ ಸದನದ ಸ್ವತ್ತಾಗಿದೆ. ಇದೊಂದು ಉದಾಹರಣೆ ಮಾತ್ರ. ಪ್ರತಿಯೊಂದು ಕಾಲೇಜಿನಲ್ಲಿಯೂ ಕೂಡ ನಡೆದಿದೆ. ಬೀದಿಯಲ್ಲಿ ಭಿಕ್ಷೆ ಬೇಡುತ್ತಿದ್ದರು. ಕಾಲಿಗೆ ಚಪ್ಪಲಿ ಇಲ್ಲದೇ ಇದ್ದವರು ಇವತ್ತು ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು ಬೆಂಗಳೂರಿನಲ್ಲಿ ಸಂಪಾದನೆ ಮಾಡಿ, ದೊಡ್ಡ ದೊಡ್ಡ ಕಾರುಗಳಲ್ಲಿ ಓಡಾಡುತ್ತಿದ್ದಾರೆ. ಯಾರು ಕೋಟ್ಯಂತರ ರೂಪಾಯಿಗಳನ್ನು ಅಕ್ರಮವಾಗಿ ಸಂಪಾದನೆ ಮಾಡಿರತಕ್ಕಂಥವರು ಇದ್ದಾರೆ, ಇವರ ಮೇಲೆಲ್ಲಾ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆ ರೀತಿ ಕ್ರಮ ತೆಗೆದುಕೊಂಡಿದ್ದರೆ ನೀವು ಈ ಬಿಲ್ಲನ್ನು ತಂದಿರತಕ್ಕಂಥ ಉದ್ದೇಶ ಹೌದು ಇದು ಆತ್ಮವಂಚನೆ ಅಲ್ಲ ಎನ್ನತಕ್ಕಂಥ ಭಾವನೆ ನನಗಾದರೂ ಕೂಡ ಬರುತ್ತಿತ್ತು. ರಾಜ್ಯದ ಜನತೆಯಾದರೂ ನಂಬುತ್ತಿದ್ದರು. ನೀವು ವಂಚನೆಯ ಕೆಲಸವನ್ನು ಮಾಡಬೇಡಿ. ಇವತ್ತು ನಿಮ್ಮ ಉದ್ದೇಶ ಏನಿದೆ, ನಾನು ಖಾಸಗಿ ಕಾಲೇಜುಗಳು ಖಾಸಗಿ ಸಂಸ್ಥೆಗಳು ಬರಬಾರದೆಂದು ಹೇಳತಕ್ಕವನು ಅಲ್ಲ.

ಜಾಲಪ್ಪನವರ ಅನೇಕ ಅಂಶಗಳನ್ನು ಒಪ್ಪದೇ ಇದ್ದರೂ ನಾನು ಈ ಅಂಶವನ್ನು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಅದು ವ್ಯವಸ್ಥಿತವಾದಂತಹ ರೀತಿಯಲ್ಲಿ ಕಾಲೇಜನ್ನು ನಡೆಸತಕ್ಕಂಥವರು ಇದ್ದಾರೆ. ಆದರೆ, ಹಣದ ವ್ಯವಹಾರ ಸಂಸ್ಥೆಗಳಿಗೆ ಸರಿಯಾಗಿ ಹೋಗಬೇಕು. ಆ ಸಂಸ್ಥೆಗೆ ಹೋಗುವುದಕ್ಕೆ ಬದಲಾಗಿ ನಮ್ಮಂತವರ ಜೇಬಿಗೆ ಹೋಗುತ್ತದಲ್ಲ ಅದಕ್ಕೆ ನನ್ನ ಆಕ್ಷೇಪ ಇರತಕ್ಕಂಥದ್ದು. ಆ ರೀತಿಯಾಗಿ ನೀವು ಅವಕಾಶವನ್ನು ಕೊಡದೆ ಈ ಕಾನೂನನ್ನು ಉಪಯೋಗಿಸಿ, ಈ ಮಸೂದೆ ಇಲ್ಲದೆ ನೀವು ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವುದು ಏನಿಲ್ಲ. ನಮ್ಮ ವರದಿ ಇದೆ. ಇವತ್ತು ಅಲ್ಲಿ ಫೋರ್ಜರಿಯಾಗಿದೆ. ಕೇಂದ್ರ ಸರ್ಕಾರದ ಟೆಲೆಕ್ಸ್ ಫೋರ್ಜರಿ ಆಗಿದೆ ಅದರ ಬಗ್ಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದರೂ ಸಹ ಇವತ್ತಿನವರೆಗೂ ಕ್ರಮ ತೆಗೆದುಕೊಂಡಿಲ್ಲ. ನಿಮ್ಮ ಉದ್ದೇಶ ಏನು ಎನ್ನತಕ್ಕದ್ದು ಇದರಿಂದ ಸಾಬೀತಾಗುತ್ತಿದೆ. ಅದರಿಂದ ಆತ್ಮವಂಚನೆಯ ಕೆಲಸವನ್ನು ಬಿಟ್ಟು ನೇರವಾಗಿ ಎಲ್ಲೆಲ್ಲಿ ಅಕ್ರಮ ನಡೆದಿದೆ ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರದವರು ಹೇಳಬೇಕಾಗಿತ್ತು. ಅದರಲ್ಲೂ ಪ್ರಮುಖವಾಗಿ ಮಾನ್ಯ ರಾಮಸ್ವಾಮಿಯವರು ಹೇಳಬೇಕಾಗಿತ್ತು. ಏಕೆಂದರೆ ಅವರು ಕೊಟ್ಟಿರತಕ್ಕಂಥ ಮೆಮೋರಾಂಡಂ ಅನ್ನು ಡ್ರಾಫ್ಟ್ ಮಾಡಿರತಕ್ಕಂಥವರು ಇವರೇ. ನನಗಿಂತ ಹೆಚ್ಚಿಗೆ ವಿಚಾರ ಅವರಿಗೆ ಗೊತ್ತಿದೆ. ಅದರಿಂದ ಇವತ್ತು ಮಂತ್ರಿಗಳಾಗಿ ಬಂದು ಕುಳಿತಿದ್ದಾರೆ. ಅವರು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳಬೇಕು. ಹಾಗೆ ಹೇಳದೆ ಇದ್ದರೆ ಇದೊಂದು ಆತ್ಮವಂಚನೆಯ ಕೆಲಸವೆಂದು ಒತ್ತಿ ಒತ್ತಿ ಹೇಳಿ, ಈ ಮಸೂದೆಯನ್ನು ವಿರೋಧಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

## ಸಾರಿಗೆ ಸಮಸ್ಯೆ - 16-2-93

ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಸ್ ದರವನ್ನು ಏರಿಕೆ ಮಾಡಿರುವುದರಲ್ಲಿ ವಿಪುಲವಾದ ಚರ್ಚೆಯಾಗಿದೆ. ನಾನು ಅದೆಲ್ಲವನ್ನೂ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಬಸ್ ಪ್ರಯಾಣ ದರವನ್ನು ಏರಿಕೆ ಮಾಡಿರತಕ್ಕಂಥದ್ದು ಇದು ಪ್ರಥಮ ಅಲ್ಲ. ನನಗೆ ಗೊತ್ತಿರುವ ಮಟ್ಟಿಗೆ 1948-49-50ರಲ್ಲಿ ಸರ್ಕಾರದ ಮೂಲಕ ಬಸ್‌ಗಳನ್ನು ಓಡಿಸತಕ್ಕಂತಹ ವ್ಯವಸ್ಥೆ ಪ್ರಾರಂಭವಾಯಿತು. ಸುಮಾರು 30-32 ವರುಷಗಳಿಂದ ಇದು ನಡೆಯುತ್ತಾ ಬಂದಿದೆ. ಅಲ್ಲಿಂದ ಇಲ್ಲಿಯವರೆಗೆ ಒಂದು ಸಾರಿ ಅಲ್ಲ ಹತ್ತಾರು ಸಾರಿ ಬಸ್ಸಿನ ಪ್ರಯಾಣ ದರವನ್ನು ಪುನರ್ ವಿಮರ್ಶೆ ಮಾಡಲಾಗಿದೆ. ಈ ಏರಿಕೆ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಈಗ ನಾವು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ನಮ್ಮ ಸರ್ಕಾರವಿದ್ದಾಗ್ಯೂ ಸಹ 2-3 ಸಾರಿ ಬಸ್ಸಿನ ಪ್ರಯಾಣ ದರವನ್ನು ಏರಿಕೆ ಮಾಡಲೇಬೇಕಾಗಿರತಕ್ಕಂತಹ ಪರಿಸ್ಥಿತಿ ಒದಗಿ ಬಂದಿತ್ತು. ಆಗ ಈ ಕಡೆ ಕುಳಿತಿದ್ದಂತಹ ಬಹಳ ಜನ ಸದಸ್ಯರು ಜೋರಾಗಿ ಮಾತನಾಡಿದರು. ಆಗ ಮಾನ್ಯ ವೀರಪ್ಪ ಮೊಯಿಲಿರವರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ಎಲ್ಲರೂ ಬಹಳ ಜೋರಾಗಿ ಕೂಗಾಡಿರತಕ್ಕಂಥಾದ್ದನ್ನು ನಾವು ಅಲ್ಲಿ ಕುಳಿತು ಕೇಳಿದ್ದೇವೆ. ಇವತ್ತು ಆ ಸರದಿ ನಮಗೆ ಬಂದಿದೆ. ಅಂದರೆ ಪರಿಸ್ಥಿತಿ ಏನೆಂದರೆ, ಯಾರು ಸರ್ಕಾರ ನಡೆಸಿದರೂ ಕೂಡ ಈ ದರ ಏರಿಕೆ ಮಾಡುತ್ತ

ಇರತಕ್ಕಂಥಾದ್ದು ಅನಿವಾರ್ಯವೆಂದು ನಾನು ಹೇಳುತ್ತೇನೆ. ಹಾಗೇ ಹೇಳಿದ ಮಾತ್ರಕ್ಕೆ, ಯದ್ವಾತದ್ವಾ ಬಸ್‌ನ ಪ್ರಯಾಣ ದರವನ್ನು ಏರಿಸಬೇಕೆಂಬ ಅರ್ಥ ಅಲ್ಲ. ವಾಸ್ತವಾಂಶವನ್ನು ಗಮನಿಸಿ ಏರಿಕೆಯನ್ನು ಮಾಡಬೇಕಾಗುತ್ತದೆ. ಪ್ರತಿಯೊಂದು ಸರ್ಕಾರಕ್ಕೂ ಕೂಡ ವಿರೋಧ ಪಕ್ಷದಲ್ಲಿ ಕುಳಿತಿರತಕ್ಕಂತಹ ಸದಸ್ಯರುಗಳು ಇಲ್ಲಿ ಹಣ ಸೋರುತ್ತಿದೆ, ಅದನ್ನು ತಡೆಗಟ್ಟಿ ಎಂದು ಹೇಳುತ್ತಾರೆ. ನನ್ನ ಸ್ನೇಹಿತರಾದಂತಹ ಮಾನ್ಯ ಸಿಂಧ್ಯರವರು ಸಾರಿಗೆ ಮಂತ್ರಿಗಳಾಗಿದ್ದಾಗ ಈ ಸಂಸ್ಥೆಯನ್ನು ನಾನು ಲಾಭಕ್ಕೆ ತರದಿದ್ದರೆ ರಾಜಿನಾಮೆ ಕೊಡುತ್ತೇನೆಂದು ಒಂದು ಸವಾಲನ್ನು ಒಂದು ಸಲ ಅವರು ಹಾಕಿದ್ದರು. ಮಾನ್ಯ ಸಿಂಧ್ಯ ಅವರ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಣೆ ಕಂಡಿತ್ತು. ಆದರೆ ಅವರು ಮಾಡಿದ್ದುದು ಏನೆಂದರೆ, ಪುನಃ ದರವನ್ನು ಏರಿಸಿದ್ದುದು. ವಾಸ್ತವಾಂಶ ಪರಿಸ್ಥಿತಿ ಹೀಗೆ ಇದೆ. ಇದಕ್ಕೆ ಮೂಲ ಇರತಕ್ಕಂಥದ್ದು ಏನೆಂದರೆ ಈ ವ್ಯವಸ್ಥೆ ಇದೆಯಲ್ಲ, ಸೋರಿಕೆ ವ್ಯವಸ್ಥೆ ಇದನ್ನು ಸರಿಪಡಿಸಬೇಕು. ಇದು ಎಲ್ಲಾ ಸರ್ಕಾರಗಳಿದ್ದಾಗಲೂ ನಡೆಯುತ್ತದೆ. ಸೋರಿಕೆ ಇಲ್ಲವೆಂದು ಯಾರೂ ಕೂಡ ಧೈರ್ಯವಾಗಿ ಹೇಳತಕ್ಕಂತಹ ಪರಿಸ್ಥಿತಿ ಇವತ್ತಿನ ದಿವಸ ಇಲ್ಲ. ಮುಖ್ಯವಾಗಿ ಅಲ್ಲಿ ಡ್ರೈವರ್, ಕಂಡಕ್ಟರ್ಸ್ ಆಯ್ಕೆ ನಡೆಯುತ್ತದೆ. ಅಲ್ಲಿ ಯಾವ ಸರ್ಕಾರ ಇದ್ದಾಗ ಭ್ರಷ್ಟಾಚಾರ ನಡೆದಿಲ್ಲ ಎಲ್ಲಾ ಸರ್ಕಾರಗಳು ಇದ್ದಾಗಲೂ ಭ್ರಷ್ಟಾಚಾರ ನಡೆದಿದೆ. ಇದಕ್ಕೆ ಕಾರಣವೇನೆಂದರೆ, ನಾವುಗಳನೇಕರು ಕೂಡ ಕಾರಣರಿದ್ದೇವೆ. ನಾವು ಕೆಲವು ಶಿಫಾರಸ್ ಮಾಡಿರತಕ್ಕಂಥವರು ಕೂಡ ಇದ್ದೇವೆ. ಕೆಲವರದು ಅಲ್ಲಿ ಶಿಫಾರಸ್ಸಿನಿಂದ ಆಯ್ಕೆ ಆಗುತ್ತದೆ. ಕೆಲವರದು ಅಲ್ಲಿ ಹಣದ ಶಿಫಾರಸ್ಸಿನಿಂದ ಆಯ್ಕೆಯಾಗುತ್ತದೆ ಎಂದರೆ ಅಲ್ಲಿನ ಅಧಿಕಾರಿಗಳೇನು ಚಳ್ಳೆಹಣ್ಣು ತಿನ್ನುತ್ತಾ ಇರುತ್ತಾರೆಯೇ? ಅವರು ಇವರದು ಮಾತು ನಡೆಯುವಾಗ ನಾವು ನಮ್ಮ ಕೈ ಬೆಚ್ಚಗೆ ಮಾಡಿಕೊಳ್ಳೋಣ, ನಮಗೆ ಏನು ಬೇಕಾಗುತ್ತದೆ ಅದನ್ನು ನಾವು ಮಾಡಿಕೊಳ್ಳೋಣ ಎನ್ನತಕ್ಕಂತಹ ಪರಿಸ್ಥಿತಿ. ಒಂದು ರೀತಿಯಾದಂತಹ ಪೈಪೋಟಿ ನಡೆಯುತ್ತಾ ಇದೆ. ಈ ಪೈಪೋಟಿಯಿಂದ ಒಬ್ಬೊಬ್ಬ ಕಂಡಕ್ಟರ್ ಆಗಿರುವಂತಹವನು, ಡ್ರೈವರ್ ಆಗಿರುವಂತಹವನು ಮೂವತ್ತು, ನಲ್ವತ್ತು, ಐವತ್ತು ಸಾವಿರದವರೆಗೂ ಅಲ್ಲಿ ಲಂಚ ಕೊಟ್ಟು ಅವನು ಅಲ್ಲಿ ಆಯ್ಕೆ ಆಗುತ್ತಾನೆ. ಎಂದರೆ ಅವನು ಅಲ್ಲಿ ಸರಿಯಾಗಿರಬೇಕು. ಅವನೇನೂ ಕೈಯಲ್ಲಿ ಹಣ ಮುಟ್ಟಬಾರದು ಎಂದು ಹೇಳುವುದು ಇದು ನನ್ನ ಪ್ರಕಾರ ಮೂರ್ಖತನವಾಗುತ್ತದೆ. ಆದುದರಿಂದ ಈಗ ಈ ವ್ಯವಸ್ಥೆಯೇ ಈ ರೀತಿಯಾಗಿದೆ. ಈ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿರತಕ್ಕಂತಹ ವಿಷಯದಲ್ಲಿ ಎಲ್ಲಾ ಸರ್ಕಾರಗಳು ಕೂಡ ವಿಫಲವಾಗಿವೆ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಡಿಗ್ರಿ ಹೆಚ್ಚು ಕಡಮೆಯಾಗಿರಬಹುದು ಅಷ್ಟೇ. ಆದರೆ ವಿಫಲವಾಗಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಆದುದರಿಂದ ಇವತ್ತಿನ ದಿವಸ ದೇಶದಲ್ಲಿ ಒಂದು ಹೊಸದಾದಂತಹ, ಆರ್ಥಿಕವಾದಂತಹ ನೀತಿ, ವಾತಾವರಣ ಸೃಷ್ಟಿಯಾಗುತ್ತದೆ. ಅದು ಏನು? ಸರಳೀಕರಣ, ಲಿಬರೈಸೇಷನ್ ಎನ್ನತಕ್ಕಂಥಾದ್ದು ಪ್ರಾರಂಭವಾಗುತ್ತದೆ. ಅನೇಕ ಖಾಸಗಿ ಮತ್ತು ಸರ್ಕಾರಿ ಸೌಮ್ಯದ ಕಾರ್ಖಾನೆಗಳು ಇವೆ. ಸರ್ಕಾರಿ ಸೌಮ್ಯದ ಸಂಸ್ಥೆಗಳು ಏನಿವೆ ಅವು ಇವತ್ತಿನ ದಿವಸ ಖಾಸಗೀಕರಣವಾಗುತ್ತಾ ಇವೆ. ಆದರೆ ದುರದೃಷ್ಟ, ಈಗ ಏನಾಗುತ್ತಿದೆಯೆಂದರೆ, ಯಾವುದನ್ನು ಖಾಸಗೀಕರಣ ಮಾಡಬೇಕೋ ಅದನ್ನು ಬಿಟ್ಟು ಬೇರೆಯದನ್ನು ಖಾಸಗೀಕರಣ ಮಾಡತಕ್ಕಂಥದ್ದು ಇದೆ. ಎಲ್ಲಾ ಬಿಟ್ಟು ಭಂಗಿ ನೆಟ್ಟ ಎನ್ನತಕ್ಕಂತಹ ರೀತಿಯಲ್ಲಿ ಆಗುತ್ತಿದೆ. ಸರ್ಕಾರ ಎಂದರೆ ಅದು

ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು. ಇವರು ಯಾವುದನ್ನು ಸರಳೀಕರಣ ಮಾಡಬೇಕೋ, ಯಾವುದನ್ನು ಖಾಸಗೀಕರಣ ಮಾಡಬೇಕೋ ಅದನ್ನು ಮಾಡುತ್ತಾ ಇಲ್ಲ. ಇವತ್ತಿನ ದಿವಸ ಬೇರೆಯದನ್ನು ಮಾಡತಕ್ಕಂತಹ ರೀತಿಯಲ್ಲಿ ಅದನ್ನು ಕೂಡ ದುರುಪಯೋಗ ಮಾಡತಕ್ಕ ರೀತಿಯಲ್ಲಿ ಮಾಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ನಾನು ಸಲಹೆ ಮಾಡತಕ್ಕಂಥಾದ್ದು ಏನೆಂದರೆ, ಈ ಕೆಎಸ್‌ಆರ್‌ಟಿಸಿಯನ್ನು ಯಾರು ನಡೆಸಿದರೂ, ಯಾವ ಸರ್ಕಾರ ನಡೆಸಿದರೂ ಕೂಡ ಅದರಲ್ಲಿ ಸೋರಿಕೆಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಸೋರಿಕೆ ಆಗತಕ್ಕಂಥಾದ್ದು ನಿಜ. ಆದುದರಿಂದ ಇದನ್ನು ತತ್ ತಕ್ಷಣವೇ ಕಿತ್ತು ಬಿಸಾಕತಕ್ಕಂಥಾದ್ದು ಒಳ್ಳೆಯದು. ಏಕೆಂದರೆ ಇದರಲ್ಲಿ ನಾವೆಲ್ಲರೂ ಕೂಡ ತಪ್ಪಿತಸ್ಥರು ಇದ್ದೇವೆ. ಇಲ್ಲಿ ಇರತಕ್ಕಂಥವರು ಎಲ್ಲರೂ ಕೂಡ ತಪ್ಪಿತಸ್ಥರಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ ನಾವು ತಪ್ಪನ್ನು ಮಾಡಿದ್ದೇವೆ. ಕೆಲವರು ಹಣ ತೆಗೆದುಕೊಂಡು ತಪ್ಪಿತಸ್ಥರು ಆಗಿರಬಹುದು, ಕೆಲವರು ನಮ್ಮಂತಹವರು ಶಿಫಾರಸ್ಸು ಮಾಡಿ ನಾವು ಕೂಡ ತಪ್ಪಿತಸ್ಥರಾಗಿದ್ದೇವೆ. ಆದುದರಿಂದ ಇಂತಹ ಪರಿಸ್ಥಿತಿ ಬಂದು ಒದಗಬೇಕಾಗಿದ್ದರೆ ನಾವೆಲ್ಲರೂ ಕೂಡ ತಪ್ಪಿತಸ್ಥರು ಆಗಿದ್ದೇವೆ. ಇದನ್ನು ಸರಿಯಾದಂತಹ ರೀತಿಯಲ್ಲಿ, ವ್ಯವಸ್ಥಿತವಾದಂತಹ ರೀತಿಯಲ್ಲಿ ನಡೆಸತಕ್ಕಂಥದ್ದು ಸಾಧ್ಯವಿಲ್ಲ ಎನ್ನುವುದು ಕಳೆದ 30-32 ವರ್ಷಗಳಿಂದ ಸಾಬೀತಾಗಿದೆ. ಆದ್ದರಿಂದ ತತ್ ತಕ್ಷಣ ಇದನ್ನು ಖಾಸಗೀಕರಣ ಮಾಡತಕ್ಕಂಥಾದ್ದನ್ನು ನೋಡಿರಿ. ಮಾನ್ಯ ವೀರೇಂದ್ರ ಪಾಟೀಲರು ಇಲ್ಲಿ ಮುಖ್ಯಮಂತ್ರಿಯವರಾಗಿದ್ದಾಗ ಒಂದು ಸಲಹೆ ಕೊಟ್ಟರು. ದೆಹಲಿಯಲ್ಲಿ ಯಾವ ರೀತಿ ಸಾರಿಗೆ ವ್ಯವಸ್ಥೆಯನ್ನು ನಡೆಸುತ್ತಿದ್ದಾರೆ ಅದೇ ರೀತಿ ಇಲ್ಲಿ ಜಾರಿಗೆ ತರುತ್ತೇವೆ ಎನ್ನುವ ಮಾತನ್ನು ಹೇಳಿದರು. ಮಾನ್ಯ ರಂಗನಾಥ್ ರವರು ಕೂಡ ಆ ಸಂದರ್ಭದಲ್ಲಿ ಸಚಿವರಾಗಿದ್ದರು. ಅದು ಎಲ್ಲಿ ಹೋಯಿತೋ ಗೊತ್ತಿಲ್ಲ, ಏಕೆ ಆ ಕೆಲಸ ಆಗಲಿಲ್ಲವೋ ಗೊತ್ತಿಲ್ಲ.

ಶ್ರೀ ಕೆ.ಎಚ್. ರಂಗನಾಥ್ :- ಪೂರ್ತಿ ತೆಗೆದು ಬಿಡಿ ಎಂದು ಹೇಳುತ್ತೀರಾ?

ಶ್ರೀ ಸಿ. ಬೈರೇಗೌಡ :- ಹೌದು, ಅದು ಸ್ಪಷ್ಟವಾದದ್ದು. ಅದು ಒಂದು ಸಾರಿ ಅಲ್ಲ. ಏಕೆಂದರೆ ಇಲ್ಲಿ ಈ ವ್ಯವಸ್ಥೆ ಏನು ಇದೆ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. ನಾಳೆ ಮಾನ್ಯ ರಂಗನಾಥ್‌ರವರನ್ನು............

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ, ಮಾನ್ಯ ಬೈರೇಗೌಡರು ನುರಿತಂಥ ಒಬ್ಬ ಅನುಭವಿ ರಾಜಕಾರಣಿಗಳು. ಜೊತೆಗೆ ಅವರು ಮಾರ್ಕ್ಸಿಸ್ಟ್ ಪಾರ್ಟಿ ಹಿನ್ನೆಲೆಯಲ್ಲಿ ಬಂದವರು. ಅವರು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನನಗೆ ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕು ಎಂದು ಹೇಳುತ್ತಿದ್ದವರು. ಕೋಲಾರ ಜಿಲ್ಲೆಯನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕು ಎಂದು ಅವರು ಮಂತ್ರಿಮಂಡಲದಲ್ಲಿ ಇರುವಾಗ ಅಷ್ಟೇ ಅಲ್ಲ, ನಮ್ಮ ಸರ್ಕಾರ ಇರುವವರೆಗೂ ನಮ್ಮ ಜೊತೆಯಲ್ಲಿ ಇರುವವರೆಗೂ ವಾದ ಮಾಡುತ್ತಾ ಇದ್ದರು. ಈಗ ಅದನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಕೊಟ್ಟುಬಿಡಿ ಎಂದು ಹೇಳುತ್ತಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ, ನಾನು ಏನು ಹೇಳುತ್ತೇನೆಂದರೆ, ಮಾನ್ಯ ಬೈರೇಗೌಡರಲ್ಲಿ ಈಗ ವಿನಂತಿ ಮಾಡತಕ್ಕಂಥಾದ್ದು ಏನೆಂದರೆ, ನೆಗಡಿ ಬರುತ್ತದೆ ಎಂದು ಮೂಗು ಕೊಯ್ದುಕೊಳ್ಳುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ :- ನೀವು ನಿನ್ನೆ ಪತ್ರಿಕೆ ಓದಿ ನನ್ನ ಕ್ಷೇತ್ರದಲ್ಲಿ ಇಬ್ಬರು ಸತ್ತಿದ್ದಾರೆ. ಇದಕ್ಕೆ ಕಾರಣವೇನು? ಕೋಲಾರದಿಂದ ಬೆಂಗಳೂರಿಗೆ ಬರತಕ್ಕಂತಹ ರಸ್ತೆಯಲ್ಲಿ ಆಕ್ಸಿಡೆಂಟ್ ಆಗಿ ಇಬ್ಬರು ಸತ್ತಿದ್ದಾರೆ. ಬಸ್ಸು ಸಿಗಲಿಲ್ಲ, ಯಾವುದೋ ಲಾರಿ ಬಂತು ಅದರಲ್ಲಿ ಅವರು ಹತ್ತಿದ್ದಾರೆ. ಎಷ್ಟು ಕಡೆ ಆಕ್ಸಿಡೆಂಟ್ ಆಗುತ್ತಾ ಇದೆ. ಪ್ರತಿ ದಿವಸ ಹತ್ತು, ಹದಿನೈದು ಜನ ಸಾಯುತ್ತಾ ಇದ್ದಾರೆ. ನಿನ್ನೆ ದಿವಸದಿಂದ ಮೂರು ಜನ ಸತ್ತಿದ್ದಾರೆ. ಇವತ್ತಿನ ದಿವಸ 10-15 ಜನಕ್ಕೆ ಗಾಯವಾಗಿದೆ. ಅವರೆಲ್ಲ ಕೂಲಿ ಮಾಡಿ ಜೀವನ ಮಾಡತಕ್ಕಂಥವರು. ಈ ರೀತಿ ಏಕಾಗುತ್ತದೆಯೆಂದರೆ ಬಸ್ ವ್ಯವಸ್ಥೆ ಸರಿ ಇಲ್ಲ. ಎಷ್ಟು ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸಬೇಕಾಗಿತ್ತೋ ಅಷ್ಟು ಅಲ್ಲಿ ಓಡಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಕಾರಣದಿಂದಲೇ ಯಾವುದೋ ಟೆಂಪೋ ಸಿಕ್ಕಿದರೆ ಟೆಂಪೋನಲ್ಲಿ ಹೋಗುತ್ತಾರೆ. ಲಾರಿ ಸಿಕ್ಕಿದರೆ ಲಾರಿಯಲ್ಲಿ ಹೋಗುತ್ತಾರೆ. ನಿನ್ನೆ ಮೂರು ಜನ ಸತ್ತಿದ್ದಾರೆ. ಅವರು ಬಸ್ ಸಿಗಲಿಲ್ಲವೆಂದು ಲಾರಿಯಲ್ಲಿ ಹತ್ತಿದರು ಮನೆ ಬಿಟ್ಟು ಐದು ಆರು ಮೈಲಿ ಬಂದ ತಕ್ಷಣ ಆಕ್ಸಿಡೆಂಟ್ ಆಯಿತು.

ಇದು ಪ್ರತಿ ದಿವಸ ನಡೆಯುತ್ತದೆ. ಇದನ್ನು ಒಂದು ಸರಿಯಾದಂಥ ರೀತಿಯಲ್ಲಿ, ವ್ಯವಸ್ಥಿತವಾದಂಥ ರೀತಿಯಲ್ಲಿ ನಡೆಸುವುದಕ್ಕಾಗುತ್ತಿಲ್ಲ. ಇದರಲ್ಲಿ ನೀವು ವಿಫಲವಾಗಿದ್ದೀರಿ ಎಂಬ ಕಾರಣಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ನಾವು ಸಮಾಜವಾದದಿಂದ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬೆಂಬಲದಿಂದ ನಾನು ಈ ಸದನದಲ್ಲಿ ಪ್ರತಿನಿಧಿಯಾಗಿರತಕ್ಕದ್ದು ನಿಜ. ಆದರೂ ಸಹ ಇವತ್ತಿನ ದಿವಸ ವಾಸ್ತವಾಂಶವನ್ನು ಗಮನಿಸಿದರೆ ನೂರಾರು ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಇವತ್ತಿನ ದಿವಸ ನಾವು ಬಡ್ಜೆಟರಿ ಸಪೋರ್ಟ್‌ನ್ನು ಅದಕ್ಕೆ ಕೊಡುತ್ತೇವೆ ಎಂದರೆ ಯಾವುದಕ್ಕೋಸ್ಕರ, ಯಾವ ಕಾರಣಕ್ಕೋಸ್ಕರ ಇವತ್ತು ನೀರಾವರಿಗೆ ಆದ್ಯತೆ ಕೊಡಬೇಕಾಗಿದೆ. ಇವತ್ತು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಇಲ್ಲ, ಅದಕ್ಕೆ ಆದ್ಯತೆ ಕೊಡಬೇಕಾಗಿದೆ. ಅದಕ್ಕೆ ಕೊಡಬೇಕಾದಂಥ ಆದ್ಯತೆಯನ್ನು, ಅದಕ್ಕೆ ಕೊಡಬೇಕಾದಂಥ ಹಣವನ್ನು ಇಂಥಾದ್ದಕ್ಕೆ ಕೊಟ್ಟು ಇದರಿಂದ ಜನಕ್ಕೆ ಪ್ರಯೋಜನ ಕೂಡ ಇಲ್ಲ. ಸರ್ಕಾರಕ್ಕೆ ಲಾಭ ಕೂಡ ಇಲ್ಲ. ಇಂಥ ಕೆಲಸ ಏಕೆ ಮಾಡಬೇಕಾಗಿದೆ? ಆದ್ದರಿಂದ ಇದನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥ ಇಲ್ಲ. ಇದು ಎಲ್ಲದರಲ್ಲೂ ವಿಫಲವಾಗಿದೆ. ನೀವೂ ಕೂಡ ವಿಫಲರಾಗಿದ್ದೀರಿ. ಒಂದು ವರ್ಷದಲ್ಲಿ 2-3 ಸಾರಿ ಈ ದರವನ್ನು ವಿಮರ್ಶೆ ಮಾಡಿರತಕ್ಕಂಥದ್ದು ಇದೆ. ಆದುದರಿಂದ ಇದನ್ನು ಕಿತ್ತು ಬಿಸಾಕತಕ್ಕದ್ದು ಅತಿ ಅವಶ್ಯಕವಾಗಿದೆ ಎಂಬ ಮಾತನ್ನು ಹೇಳಲು ಇಷ್ಟಪಡುತ್ತೇನೆ. ಯಾರಿಗೆ, ಯಾವ ರೀತಿ ಕೊಡಬೇಕು ಎನ್ನತಕ್ಕ ವ್ಯವಸ್ಥೆಯನ್ನು ಮಾಡಿ ಎಂದು ಕೇಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ :- ಸಣ್ಣ ಕಿರಾಣಿ ಅಂಗಡಿಯನ್ನು ಮುಚ್ಚುವ ಹಾಗೆ ಇದನ್ನು ಮುಚ್ಚುವುದಕ್ಕಾಗುತ್ತದೆಯೇ?

ಶ್ರೀ ಸಿ. ಬೈರೇಗೌಡ :- ಸ್ವಾಮಿ, ಇದನ್ನು ತಾವು ಏಕೆ ಹೇಳಲಿಲ್ಲ. ನೀವು ಸುಜುಕಿ, ಮಾರುತಿ ಉದ್ಯೋಗ್ ಅನ್ನು ಖಾಸಗೀಕರಣ ಮಾಡಿದ್ದೀರಲ್ಲ. ಆ ಮಾತನ್ನು ಏಕೆ ಹೇಳಲಿಲ್ಲ. ಲಾಭ ಮಾಡತಕ್ಕಂಥದನ್ನು ಖಾಸಗೀಕರಣ ಮಾಡಿದ್ದೀರಿ. ಅದು ಬೇರೆ ಯಾರು ಮಾಡಲಿಲ್ಲ. ನಿಮ್ಮ ಪಕ್ಷದವರೇ ಮಾಡಿರತಕ್ಕಂಥದ್ದು. ಇವತ್ತು ಸ್ಕೇಲ್ ಅನ್ನು ಖಾಸಗೀಕರಣ ಮಾಡುವಂಥ ಪ್ರಯತ್ನದಲ್ಲಿದ್ದೀರಿ. ಮುಖ್ಯವಾದಂಥ ಇಂಡಸ್ಟ್ರೀಸ್ ಅನ್ನು ಖಾಸಗೀಕರಣ ಮಾಡತಕ್ಕ ಪ್ರಯತ್ನ

ಪಡುತ್ತಿದ್ದೀರಿ. ಲಾಭದಾಯಕವಾಗಿ ನಡೆಯುತ್ತಿರತಕ್ಕದ್ದನ್ನು ಖಾಸಗೀಕರಣ ಮಾಡತಕ್ಕ ಪ್ರಯತ್ನ ಮಾಡುತ್ತಿದ್ದೀರಿ. ನೂರಾರು ಕೋಟಿ ರೂಪಾಯಿಗಳ ನಷ್ಟ ಅನುಭವಿಸುತ್ತಿದ್ದರೂ ಏಕೆ ಇದನ್ನು ಇಟ್ಟುಕೊಂಡಿದ್ದೀರಿ. ಯಾವ ಲಾಭಕ್ಕೋಸ್ಕರ, ಯಾವ ಪುರುಷಾರ್ಥಕ್ಕೋಸ್ಕರ, ಎಂಬುದು ಅರ್ಥವಾಗುತ್ತಿಲ್ಲ. ಇದರ ಬಗ್ಗೆ ನೀವು ಅತಿ ಜರೂರಾಗಿ ತೀರ್ಮಾನ ತೆಗೆದುಕೊಳ್ಳಬೇಕು.

## ಕೆರೆಗಳ ವಿನಾಶ - 16-2-93

ಕೆರೆಗಳಲ್ಲಿ ನೀರು ಇದ್ದರೆ ಕೋಲಾರ ಜಿಲ್ಲೆ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮರಣ ಪೂರಣವಾಗುವುದು ಎಂದು ತಿಳಿದಿದ್ದ ಬೈರೇಗೌಡರು ಕೆರೆಗಳ ವಿನಾಶ ತಪ್ಪಿಸಲು ಆಗ್ರಹಿಸುತ್ತಿದ್ದರು. ಕೆರೆ ಅಭಿವೃದ್ಧಿ ಪ್ರಾಧಿಕಾರ ರಚಿಸಿ, ಅವುಗಳಿಗೆ ಒತ್ತುವರಿ ತೆರವು, ಪೂರಕ ಕಾಲುವೆಗಳ ದುರಸ್ತಿ, ತೂಬು ರಿಪೇರಿ ಇತ್ಯಾದಿ ಕೆಲಸಗಳನ್ನು ಒಪ್ಪಿಸಬೇಕೆಂದು ಆಗ್ರಹಿಸುತ್ತಿದ್ದರು.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಇಂದು ಮಾನ್ಯ ಕಂದಾಯ ಮಂತ್ರಿಗಳು ನನ್ನ ಅಭಿಪ್ರಾಯದಲ್ಲಿ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಕೈ ಹಾಕಿದ್ದಾರೆ. ಕಾರಣ ಏನೆಂದರೆ ಸಾರ್ವಜನಿಕ ಆಸ್ತಿಗಳು ಕೆರೆಗಳು. ಕೆರೆಗಳಿಗೆ ನೀರು ಹೋಗತಕ್ಕಂತ ಕಾಲುವೆಗಳು ಎಲ್ಲಾ ಹಳ್ಳಿಗಳು ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಸಾರ್ವಜನಿಕ ಉಪಯೋಗಕ್ಕೆ ಇಟ್ಟಿರತಕ್ಕಂಥ ಪ್ರದೇಶಗಳು. ಇವತ್ತು ಯಾವುವೂ ಉಳಿದಿಲ್ಲ. ಎಲ್ಲವೂ ಕೂಡ ಎನ್‌ಕ್ರೋಚ್ ಆಗಿವೆ. ಮಾನ್ಯ ದೇಶಪಾಂಡೆಯವರು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂಥ ಉದಾಹರಣೆಗಳ ನೆಪದಲ್ಲಿ ನೂರಾರು ಕೆರೆಗಳು ಇವತ್ತಿನ ದಿವಸ ಪತ್ತೆ ಇಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ಒಂದಲ್ಲ ಎರಡಲ್ಲ ಸುಮಾರು ಐದು ನೂರು ಕೆರೆಗಳು ಪತ್ತೆ ಇಲ್ಲ. ನೀರು ನಿಲ್ಲತಕ್ಕಂಥ ಕೆರೆಗಳಲ್ಲಿಯೂ ಸಹ ಗದ್ದೆಗೆ ನೀರು ಬಿಡತಕ್ಕಂಥ ತೂಬು ಇವೆಲ್ಲಾ ಎನ್‌ಕ್ರೋಚ್ ಆಗಿವೆ. ತೂಬಿನವರೆಗೆ ಉಳುಮೆ ಆಗಿರತಕ್ಕಂಥದ್ದು ನನ್ನ ಕ್ಷೇತ್ರದಲ್ಲಿ ನಾನೇ ನೋಡಿದ್ದೇನೆ. ನಾನು ಅವರನ್ನು ವೈಯಕ್ತಿಕವಾಗಿ ಕರೆದು ನೇರವಾಗಿ ಹೆದರಿಸಿದ್ದೂ ಕೂಡ ಆಯಿತು. ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರದ ಮೇಲೆ ಪತ್ರ ಬರೆದದ್ದೂ ಆಯಿತು. ಕೆರೆಗಳನ್ನು ರಸ್ತೆಗಳನ್ನು ರಕ್ಷಣೆ ಮಾಡಿ ಎಂದು ಬರೆದೆ, ಯಾವ ಅಧಿಕಾರಿಯೂ ಕೂಡ ಅದನ್ನು ರಕ್ಷಣೆ ಮಾಡತಕ್ಕ ಕೆಲಸ ಮಾಡಲಿಲ್ಲ. ಒಂದು ಸಾರಿ ಕೋಲಾರಕ್ಕೆ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದಂಥ ಅಶ್ವತ್ಥರೆಡ್ಡಿಯವರು ಬಂದಿದ್ದರು. ಅವರಿಗೆ ನಾನು ಸ್ಪಷ್ಟವಾಗಿ ಒಂದು ಮಾತನ್ನು ಕೇಳಿದೆ. ಸರ್ಕಾರ ಇದೆಯೋ ಇಲ್ಲವೋ, ಲೋಕೋಪಯೋಗಿ ಇಲಾಖೆಯ ವಶದಲ್ಲಿರತಕ್ಕಂಥ ರಸ್ತೆಗಳು, ಕೆರೆಗಳನ್ನು ನೋಡಿಕೊಳ್ಳುತ್ತೀರೋ ಇಲ್ಲವೋ, ಇದನ್ನು ನೀವು ರಕ್ಷಣೆ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕೆಂದು ಮಾನ್ಯ ಮಂತ್ರಿಗಳಿಗೆ ಸಭೆಯಲ್ಲಿ ಕೇಳಿದೆ. ಕೊನೆಗೆ ಅವರಿಂದ ಸಮರ್ಪಕವಾದ ಉತ್ತರ ಬರಲಿಲ್ಲ. ಈ ಎವಿಕ್ಷನ್ ಆಫ್ ಪಬ್ಲಿಕ್ ಪ್ರಿಮೈಸೆಸ್ ಆಕ್ಟ್ ಪ್ರಕಾರ ಆಥರೈಸ್ಡ್ ಆಫೀಸರ್ ಎಂದು ಒಬ್ಬನನ್ನು ನಾಮಿನೇಟ್ ಮಾಡಿದ್ದೀರಿ. ಸಬ್ ಡಿವಿಜನ್ ಲೆವೆಲ್‌ನಲ್ಲಿ ಇರತಕ್ಕಂಥ ಸಬ್ ಡಿವಿಜನಲ್ ಆಫೀಸರ್, ಅಸಿಸ್ಟೆಂಟ್ ಕಮೀಷನರ್‌ರನ್ನು ಆಫೀಸರನ್ನಾಗಿ ಮಾಡಿದ್ದೀರಿ. ನಮ್ಮ ಪ್ರದೇಶಕ್ಕೆ ಬರತಕ್ಕಂಥ ಎರಡು ಸಬ್ ಡಿವಿಜನಲ್ ಆಫೀಸರ್ಸ್ ಏನಿದ್ದಾರೆ ನಾನು ಅವರಿಗೆ

ಪತ್ರ ಬರೆದೆ. ಇಂತಹ ಕಡೆ ಇಂತಹ ರಸ್ತೆ ಹೇಗೆ ಹಾಳಾಗಿದೆ, ರಸ್ತೆಯನ್ನು ಹೇಗೆ ಎನ್‌ಕ್ರೋಚ್ ಮಾಡಿದ್ದಾರೆ, ಇಂತಿಂಥ ಕಡೆ ಹೀಗೆ ಆಗಿದೆ, ಇದನ್ನು ತೆಗೆಸಿ ಎಂದು ಪತ್ರ ಬರೆದೆ ಅವರೂ ಕೂಡ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಸಾವಿರಾರು ವರ್ಷಗಳ ಹಿಂದೆ ಕಟ್ಟಿರತಕ್ಕಂಥ ಕೆರೆಗಳು ಇವೆ. ನೂರಾರು ವರ್ಷಗಳ ಹಿಂದೆ ಕಟ್ಟಿರತಕ್ಕಂಥ ಕೆರೆಗಳು ಇವೆ, ರಸ್ತೆಗಳು ಇವೆ, ನೂರಾರು ವರ್ಷಗಳ ಹಿಂದೆ ರಸ್ತೆ ಸಂಪರ್ಕ ಇಲ್ಲದಿರತಕ್ಕಂಥ ಕಾಲದಲ್ಲಿ ಮಾಡಿಸಿರತಕ್ಕ ರಸ್ತೆಗಳು ಇವೆ. ಆಗಿನಿಂದಲೂ ಇರತಕ್ಕಂಥ ರಸ್ತೆಗಳೂ ಇವೆ. ಇದನ್ನೆಲ್ಲಾ ಏತಕ್ಕ ಮಾಡಿದ್ದಾರೆ. ಹಿಂದಿನ ಕಾಲದಲ್ಲಿ ಅವತ್ತು ಯಾರು ಬದುಕಿದ್ದರು ಕೇವಲ ಅವರ ಸುಖಕ್ಕಾಗಿ ಮಾಡಿರತಕ್ಕದ್ದಲ್ಲ. ಮುಂದಿನ ಪೀಳಿಗೆಗೆ ಮುಂದಿನ ಸಂತತಿಗೆ ಇವರ ಪ್ರಯೋಜನ ಆಗಬೇಕೆಂಬುದು ಅವರ ಉದ್ದೇಶ. ಇವತ್ತು ವಿಧಾನಸೌಧ ಕಟ್ಟಿಸಿದ್ದಾರೆ. ಹನುಮಂತಯ್ಯನವರು ಅವರು ಇಲ್ಲಿ ಕುಳಿತುಕೊಂಡು ಅಧಿಕಾರ ಮಾಡಬೇಕು, ತನ್ನ ಅಧಿಕಾರದ ಅವಧಿಯಲ್ಲಿ ಮಾತ್ರ ವಿಧಾನಸೌಧ ಇರಲಿ ಎಂಬ ದೃಷ್ಟಿಯಿಂದ ಅವರು ವಿಧಾನಸೌಧವನ್ನು ಕಟ್ಟಿಸಿಲ್ಲ. ಈ ಕಟ್ಟಡ ಸಾರ್ರೋದ್ಧಾರವಾಗಿ ಇರಬೇಕು, ಸಾರ್ವಜನಿಕರ ಉಪಯೋಗಕ್ಕ ಬರಬೇಕೆಂಬ ದೃಷ್ಟಿಯಿಂದ ಕಟ್ಟಿಸಿದ್ದಾರೆ. ನೂರಾರು ವರ್ಷಗಳ ಹಿಂದೆ ಕೆರೆಗಳನ್ನು ಸಾರ್ವಜನಿಕರಿಗೆ ಉಪಯೋಗ ಆಗಬೇಕು, ಇದರಿಂದ ನೀರಾವರಿ ಆಗಬೇಕು, ರಾಜ್ಯದ ದೇಶದ ಜನ ಬದುಕಬೇಕು, ಇದರಿಂದ ಸಮಾಜ ಮುಂದುವರಿಯಬೇಕು ಎನ್ನತಕ್ಕಂಥ ಧ್ಯೇಯವನ್ನು ಇಟ್ಟುಕೊಂಡು ಕಟ್ಟಿಸಿದ್ದಾರೆ. ಇವತ್ತು ನಾವು ಏನು ಮಾಡುತ್ತಿದ್ದೇವೆ?

ಕೆರೆಗಳ ನಾಶ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ 500 ಕೆರೆಗಳು ನಾಶವಾಗಿವೆ. ಆ ಕೆರೆಗಳನ್ನು ಇವತ್ತಿನ ದಿವಸ ನಾವು ದೀಪ ಹಾಕಿಕೊಂಡು ಹುಡುಕಬೇಕು. ಅನೇಕ ಕಡೆ ಅಪಘಾತಗಳಾಗುತ್ತಿವೆ ಕಾರಣವೇನು? ರಸ್ತೆಗಳನ್ನು ವಿಶಾಲವಾಗಿ ಮಾಡುವುದಕ್ಕೆ ಆಗಿಲ್ಲ, ಜನಸಂಖ್ಯೆ ಜಾಸ್ತಿಯಾಗಿ ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಹಾಗೇ ರಸ್ತೆಗಳನ್ನು ಕೂಡ ವಿಶಾಲ ಮಾಡಬೇಕು. ರಸ್ತೆಗಳನ್ನು ವಿಶಾಲ ಮಾಡುವುದಕ್ಕಾಗಿಲ್ಲ. ಕಿರಿದಾದಂತಹ ರಸ್ತೆಗಳಲ್ಲಿ ಎಷ್ಟು ವಾಹನಗಳು ಓಡಾಡಬೇಕು? ಅದಕ್ಕಿಂತ ಹೆಚ್ಚು ವಾಹನಗಳು ಓಡಾಡುತ್ತಿವೆ. ಇದರಿಂದ ಅಪಘಾತಗಳು ಆಗುತ್ತಿವೆ. ನೂರಾರು ಜನರು ಸಾಯುತ್ತಿದ್ದಾರೆ ಕಾರಣವೇನು? ಕೆಲವು ಕಡೆ ಉದ್ದೇಶಪೂರ್ವಕವಾಗಿ ನಾವು ನಾಯಕರುಗಳು ಎಂದು ಅನಿಸಿಕೊಂಡವರು ಕೆಲವು ರಾಜಕೀಯ ಪಕ್ಷಗಳು ಇಂತಹ ಕೆಲಸ ಮಾಡುತ್ತಿವೆ. ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕ ಸ್ವತ್ತುಗಳನ್ನು ಆಕ್ರಮಣ ಮಾಡಿಸತಕ್ಕಂಥ ಕೆಲಸ ಮಾಡಿದ್ದಾರೆ. ಆದರಿಂದ ಅವರು ಪ್ರಯೋಜನ ಪಡೆದುಕೊಂಡಿದ್ದಾರೆ. ಸಾರ್ವಜನಿಕ ಸ್ವತ್ತುಗಳನ್ನು ಹಾಳು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಕೋಲಾರ ನಗರ ನಾನು ಹುಟ್ಟಿ ಬೆಳೆದಿರತಕ್ಕಂಥದ್ದು. ಹೊಸದಾಗಿ ಬಸ್ ನಿಲ್ದಾಣ ಆಗಿದೆ. ಆ ನಿಲ್ದಾಣದ ಎದುರಿಗೆ ಒಂದು ಸ್ಥಳ ಇತ್ತು. ಅಲ್ಲಿ ಒಂದು ಬಾವಿ ಕೂಡ ಇತ್ತು. ಅದಕ್ಕೆ ನಾವು ನಾಲ್ಕು ಚಕ್ರದ ಬಾವಿ ಎಂದು ಹೆಸರು ಕೊಟ್ಟಿದ್ದೆವು. ಅಲ್ಲಿ ನಾನು ಚಿಕ್ಕಂದಿನಿಂದ ನೋಡಿದ್ದೇನೆ. ಅಲ್ಲಿ ಏನೂ ಇಲ್ಲ. ಇರುವೆ ಕೂಡ ಓಡಾಡುತ್ತಿರಲಿಲ್ಲ. ಅಷ್ಟೊಂದು ಬೆಟರ್ ಪ್ಲೇಸ್ ಅದು. ಅಂತಹ ಕಡೆ ಹೊಸದಾಗಿ ಬಸ್ ನಿಲ್ದಾಣ ಆಯಿತು. ಆ ಕಡೆ ಕೂಡಲೇ ರಾತ್ರೋರಾತ್ರಿ ಕಟ್ಟಡಗಳು ಬಂದವು. 2-3 ಅಂತಸ್ತಿನ ಕಟ್ಟಡಗಳು ಬಂದಿವೆ. ನಮ್ಮ ಪಕ್ಷದವರು ಕೂಡ ಆ ಕೆಲಸವನ್ನು ಮಾಡಿದ್ದಾರೆ. ಇದು ಒಂದೇ ಪಕ್ಷದ ಗುತ್ತಿಗೆ ಅಲ್ಲ, ಆ ಪಕ್ಷ ಈ ಪಕ್ಷ ಎಂದು ನಾನು ಹೇಳುವುದಿಲ್ಲ ಎಲ್ಲಾ ಪಕ್ಷದವರು ಕೂಡ

ಅದನ್ನೇ ಮಾಡಿದ್ದಾರೆ. ರಾತ್ರೋರಾತ್ರಿ ಕಟ್ಟಡಗಳು ಬಂದಿವೆ. ಅದಕ್ಕೆ ಬೇಕಾದ ದಾಖಲೆಗಳನ್ನು ಮುನಿಸಿಪಾಲಿಟಿಯಲ್ಲಿ ಆಯಿತು. ನಾನು ಸರ್ಕಾರ ಇಲಾಖೆಗಳಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪೋಲೀಸ್ ಎಸ್‌ಪಿಗೆ ಬರೆದೆ. ನೀವು ಬನ್ನಿ ಒಂದು ಸಾರಿ ನೋಡೋಣ ಅಲ್ಲಿ ಏನಾಗಿದೆ ನೋಡೋಣವೆಂದು ಹೇಳಿದೆ ನನ್ನ ಜೊತೆಯಲ್ಲಿ ಅವರು ಬರಲಿಲ್ಲ. ಯಾವ ಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ಅನೇಕ ಕೆರೆಗಳು ಹೋಗಿದ್ದರೂ ಯಾರೂ ಬಂದು ನೋಡಲಿಲ್ಲ. ಯಾವ ಅಧಿಕಾರಿಗಳೂ ಕೂಡ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸತಕ್ಕಂಥ ಕೆಲಸ ಮಾಡಲಿಲ್ಲ. ನಾನು ಮೊದಲೇ ಹೇಳಿದ ಹಾಗೆ ನಮ್ಮ ಮುಂದಿನ ಸಂತತಿ ಈ ಭೂಮಿ ಮೇಲೆ ಬದುಕಬೇಕು ಎನ್ನುವ ದೃಷ್ಟಿಯಿಂದ ಹಿರಿಯರು ಇದನ್ನು ಬಿಟ್ಟು ಹೋಗಿರತಕ್ಕಂಥದ್ದನ್ನು ಸರ್ವನಾಶದ ಅಂಚಿಗೆ ತಂದಿದ್ದಾರೆ. ಕೆರೆಗಳು ನಾಶವಾಗಿವೆ, ರಸ್ತೆಗಳನ್ನು ನಾಶ ಮಾಡಿದ್ದಾರೆ, ಎನ್ನತಕ್ಕಂಥಾದ್ದು ಅಲ್ಲ ಇಡೀ ನಮ್ಮ ಸಂಸ್ಕೃತಿ ನಾಶವಾಗಿದೆ. ಇವತ್ತು ಅನೇಕ ಕಡೆ ಎಲ್ಲಿ ಏನು ಸಿಕ್ಕಿದರೂ ಕೂಡ ಅದನ್ನು ಬಿಡದೆ ವಶಪಡಿಸಿಕೊಳ್ಳತಕ್ಕಂಥ ಕೆಲಸ ಆಗಿದೆ. ಪ್ರಶ್ನೋತ್ತರ ವೇಳೆಯಲ್ಲಿ ಒಂದು ಉತ್ತರ ಕೊಟ್ಟಿದ್ದೀರಿ. ಅದೇ ಇದಕ್ಕೆ ಉದಾಹರಣೆ. ಆಸ್ಪತ್ರೆ ಜಾಗದಲ್ಲಿ ಅನಾಥರೈಜ್ಡ್ ಆಗಿ ಮನೆ ಕಟ್ಟಿದ್ದಾರೆ ಅಲ್ಲಿ ಸಾರಾಯಿ ಅಂಗಡಿ ನಡೆಸುತ್ತಿದ್ದಾರೆ ಇದನ್ನು ಯಾರೇ ಮಾಡಿರಬಹುದು ಯಾರೇ ಆಗಿರಬಹುದು ಇದು ಅಕ್ಷಮ್ಯ ಅಪರಾಧ ಎನ್ನುವುದನ್ನು ಮನಗಾಣಬೇಕು. ಪ್ರತ್ಯೇಕವಾಗಿ ಪರೋಕ್ಷವಾಗಿ ಎಲ್ಲರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಕೆಲವರನ್ನು ಬಿಟ್ಟರೆ ಎಲ್ಲರೂ ಶಾಮೀಲಾಗಿದ್ದಾರೆ ಎನ್ನತಕ್ಕಂಥಾದ್ದು ಇದೆ.

ಇವತ್ತು ಕೆರೆಗಳು ಉಳಿದಿಲ್ಲ. ರಸ್ತೆಗಳು ಉಳಿದಿಲ್ಲ. ಇವತ್ತು ಮಂಡಲ ಪಂಚಾಯಿತಿಗಳಲ್ಲಿಯೂ ಅನೇಕ ಕಡೆ ಇದೆ ಕೆಲಸ ನಡೆಯುತ್ತಿದೆ. ಏನೂ ಮಾಡದೆ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಆರ್‌ಸಿಸಿ ಮನೆಗಳು ಕಟ್ಟಿದ್ದಾರೆ. ರಸ್ತೆಗಳನ್ನು ಕಡಿದು ಎಷ್ಟು ಸಿಟ್ಟು ಬರುತ್ತದೆ ಅಂದರೆ ನಾವು ಇಲ್ಲಿ ಕಾಡಿಬೇಡಿ ಸರ್ಕಾರದಿಂದ ಹಣ ಕೊಟ್ಟು ಟಾರ್ ರಸ್ತೆಗೆ ಹಾಕಿ ಅಂತ ಹೇಳಿ ಹಾಕಿಸಿದರೆ ಎಲ್ಲಿಯವರೆಗೆ ಟಾರ್ ಮಾಡಿದ್ದಾರೋ ಅಲ್ಲಿಯವರೆಗೂ ರಸ್ತೆಗಳನ್ನು ಕತ್ತರಿಸಿ ಮಾಡಿದ್ದಾರೆ. ನಮ್ಮ ಕಡೆ ಅನೇಕ ಬೋರ್‌ವೆಲ್‌ಗಳನ್ನು ಹಾಕುತ್ತಾರೆ. ನೀರು ಬಿಟ್ಟುಕೊಳ್ಳುವುದಕ್ಕೆ ಮಣ್ಣಿನಲ್ಲಿ ಟ್ಯಾಂಕ್ ತರಹ ಮಾಡಿಕೊಳ್ಳುತ್ತಾರೆ. ನಾನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನು ಕರೆದು ತೀವ್ರವಾಗಿ ಹೇಳಿದ್ದೇನೆ. ಯಾವ ಅಧಿಕಾರಿ ಏನೂ ಮಾಡಿಲ್ಲ. ಈ ಸ್ವತ್ತುಗಳನ್ನು ಉಳಿಸಬೇಕಾದರೆ ನಾಳೆ ನಮ್ಮ ಮಕ್ಕಳು, ಮರಿಗಳು ಭೂಮಿ ಮೇಲೆ ಬದುಕಬೇಕು, ಬಾಳಬೇಕು. ಯಾವ ರೀತಿ ಹಿಂದೆ ಕೆರೆಗಳನ್ನು ಕಟ್ಟಿಸಿ ಬಿಟ್ಟು ಹೋಗಿದ್ದಾರೆ? ಕೊನೆಯ ಪಕ್ಷ ನಾವು ಕಟ್ಟಿಸದೇ ಇದ್ದರೂ ಸಹಾ ಆ ಕೆರೆಗಳು ಉಳಿಯಬೇಕು. ಅವುಗಳನ್ನು ಉಳಿಸುವಂಥ ಕೆಲಸವನ್ನು ನಾವು ಮಾಡಬೇಕು. ಇದು ಕಾಗದದ ಮೇಲಿದ್ದರೆ ಏನೂ ಆಗುವುದಿಲ್ಲ. ನಾನು ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಕಾನೂನು ಇದೆ. ಕಾನೂನಿನಲ್ಲಿ ಇಲ್ಲದೇ ಇರತಕ್ಕಂಥ ಅವಕಾಶಗಳನ್ನು ಇವತ್ತು ಪಡೆಯುವುದಕ್ಕೆ ಹೊರಟಿದ್ದೀರಿ ಸಂತೋಷ, ತಾವು ಪಡೆಯಿರಿ. ಆದರೆ, ಇಲ್ಲಿಯವರೆಗೂ ಕಾನೂನನ್ನು ಅನುಸರಿಸಿ ಎಲ್ಲೆಲ್ಲಿ ಏನೇನನ್ನು ಎಫೆಕ್ಟೀವ್ ಮಾಡಿಸಿದ್ದೀರಿ? ಎಷ್ಟು ಕೆರೆಯನ್ನು ಉಳಿಸಿದ್ದೀರಿ? ಎಷ್ಟು ರಸ್ತೆಯನ್ನು ಉಳಿಸಿದ್ದೀರಿ? ಇಲ್ಲ. ಈ ಕಾಗದದ ಮೇಲಿರತಕ್ಕಂಥ ಕಾನೂನನ್ನು ಏಕೆ ಈ ರೀತಿ ಮಾಡುವುದು? ಬರೀ ಕಾಗದದ ಮೇಲೆ ಇರುವುದಕೋಸ್ಕರ ಕಾನೂನು ಮಾಡುವುದೇ?

ಕಾನೂನು ಬರೀ ಕಾಗದದ ಮೇಲೆ ಉಳಿಯುವುದಕ್ಕೆ ಮಾತ್ರ ಸೀಮಿತವಾಗಿದ್ದರೆ ಈ ಸದನದ ಸಮಯ ಏಕೆ ಹಾಳಾಗಬೇಕು? ಅದು ಯಾವುದೇ ಸರ್ಕಾರ ಇರಲಿ ನಾನು ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಿಂದ ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ಈ ಕಾನೂನನ್ನು ಮಾಡಿ. ನಾವು ಒಳ್ಳೆಯದು ಮಾಡಿದ್ದೇವೆಂದು ಹೇಳಿ ಇದನ್ನು ತೆಗೆದುಕೊಂಡು ಎಲ್ಲೋ ಇಟ್ಟು ಪೂಜೆ ಮಾಡುವುದಕ್ಕಲ್ಲ. ಈ ಕಾನೂನು ತಂದಿದ್ದೀರಿ, ತಕ್ಷಣ ನಿರ್ದಾಕ್ಷಿಣ್ಯವಾಗಿ, ಯಾರೇ ಇರಲಿ, ಎಷ್ಟೇ ಪ್ರಭಾವಶಾಲಿಗಳಾಗಿರಲಿ, ಇದನ್ನು ಜಾರಿಗೆ ಕೊಡಬೇಕಾಗಿರತಕ್ಕಂಥದ್ದು ಅವಶ್ಯಕತೆಯಾಗಿದೆ. ತೀವ್ರವಾದ, ಕಠಿಣವಾದ ರೀತಿಯಲ್ಲಿ ತಾವು ವರ್ತಿಸಬೇಕಾದ ಅವಶ್ಯಕತೆ ಇದೆ. ಈ ಸಂದರ್ಭದಲ್ಲಿ ಒಂದನ್ನು ಜ್ಞಾಪಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೆ, ಎಮರ್ಜೆನ್ಸಿ ಬಂತು. ನಾನು ಅದರ ಕಡು ವಿರೋಧಿ. ಅಂಥಾ ಎಮರ್ಜೆನ್ಸಿ ಸಂದರ್ಭದಲ್ಲೂ ಕೆಲವು ಒಳ್ಳೆಯ ಕೆಲಸಗಳಾವುವು. ಅನೇಕ ಎನ್‌ಕ್ರೋಚ್‌ಮೆಂಟ್ಸ್ ಏನಿತ್ತು? ರಸ್ತೆ ಭಾಗದಲ್ಲಿರತಕ್ಕಂಥದ್ದನ್ನು ಆಟೋಮೆಟಿಕ್ ಆಗಿ ತೆಗೆಸಿದರು. ಎಮರ್ಜನ್ಸಿ ಇದ್ದಾಗ ಇದು ಕೂಡ ಇತ್ತು. ಆದರೆ ಈ ಕಾನೂನು ಮೂಲಕ ತೆಗೆಯಲಿಲ್ಲ. ಆದರೆ, ಸರ್ಕಾರ ಆವತ್ತಿನ ದಿವಸ ಮಾಡಬೇಕೆಂದು ಇಚ್ಛೆ ಇದ್ದುದರಿಂದ ಅದನ್ನು ತೆಗೆಸುವುದಕ್ಕೆ ಸಾಧ್ಯವಾಯಿತು. ನೋಟೀಸ್ ಕೊಡಲಿಲ್ಲ. ಪ್ರಿಸ್ಕ್ರೈಬ್ಡ್ ಆಫೀಸರ್ ಎಂದು ಏನಿದೆ? ಆ ಪ್ರಿಸ್ಕ್ರೈಬ್ಡ್ ಆಫೀಸರ್‌ರವರಿಂದ ನೋಟೀಸ್ ಹೋಗಲಿಲ್ಲ. ಕೆಲವು ಅಧಿಕಾರಿಗಳು ಹೋದರು ಅಂಥಾ ಕಡೆ ಇಷ್ಟು ತೆಗೆಯಬೇಕೆಂದು ಹೇಳಿದರು. ಅನೇಕ ಕಡೆಯ ರಸ್ತೆಗಳನ್ನು ವೀಕ್ಷಣೆ ಆಯಿತು. ಆದರೆ ಎಮರ್ಜನ್ಸಿ ಹೋದ ಮೇಲೆ ಆ ಕೆಲಸ ಇವತ್ತಿನ ದಿವಸ ಆಗಲಿಲ್ಲ. ಅದನ್ನು ಮಾಡಿ.

## ಕೇಂದ್ರದಲ್ಲಿ ಶ್ಯಾನುಭೋಗರ ಆಡಳಿತ - 13-1-93

> ರಾಜೀವ್ ಹತ್ಯೆಯ ನಂತರ, ಕೇಂದ್ರದಲ್ಲಿ ನರಸಿಂಹರಾವ್ ಅವರ ಕಾಂಗ್ರೆಸ್ ಆಡಳಿತ ಬಂದಾಗ ಗೊಬ್ಬರ ಬೆಲೆ ಏರಿದ್ದಕ್ಕೆ, ರೈತರಿಗೆ ಕೃಷಿ ವಸ್ತುಗಳ ಆಮದಿನಿಂದ ತೊಂದರೆ ಆಗುತ್ತಿರುವುದಕ್ಕೆ ರೈತರಿಗೆ ಕೃಷಿ ವಸ್ತುಗಳ ಆಮದಿನಿಂದ ತೊಂದರೆ ಆಗುತ್ತಿರುವುದಕ್ಕೆ ಕೇಂದ್ರ ಸರ್ಕಾರವೇ ಕಾರಣವೆಂದೂ,
> ಅಮೇರಿಕ ಬಂಡವಾಳ ಶಾಹಿಗಳ ತಾಳಕ್ಕೆ ತಕ್ಕಂತೆ ನರಸಿಂಹರಾವ್ ಸರ್ಕಾರ ಕುಣಿಯುತ್ತಿದೆಯೆಂದೂ ಆಪಾದಿಸಿ,
> ರಾವ್ ಸರ್ಕಾರವನ್ನು ಶ್ಯಾನುಬೋಗರ ಆಡಳಿತ ಎಂದು ವ್ಯಂಗ್ಯವಾಡಿದ್ದರು.

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೆ, ಕಳೆದ 1 ವರ್ಷದಿಂದ ಈ ದೇಶದ ರೈತರ ಸಮಾಧಿಯನ್ನು ಮಾಡತಕ್ಕ ಪ್ರಯತ್ನವನ್ನು ಕೇಂದ್ರ ಸರ್ಕಾರ, ಅದರ ಜೊತೆಗೆ ನಮ್ಮ ರಾಜ್ಯ ಸರ್ಕಾರ ಬಹಳ ಪರಿಣಾಮಕಾರಿಯಾಗಿ ಯಶಸ್ವಿಯಾಗಿ ಮಾಡುತ್ತಾ ಬಂದಿದೆ. ಇದಕ್ಕಾಗಿ ಅವರಿಗೆ ಮತ್ತು ನಿಮಗೆ, ಕರ್ನಾಟಕ ರಾಜ್ಯದ ರೈತರು ಮತ್ತು ಇಡೀ ದೇಶದ ರೈತರು ಬಹಳ ಕೃತಜ್ಞರಾಗಿರಬೇಕು. ನಿಮಗೆ ಅಧಿಕಾರವನ್ನು ಕೊಟ್ಟು ಇಲ್ಲಿ ಸುಮಾರು 180-190 ಜನರನ್ನು ಕೂಡಿಸಿದ್ದಕ್ಕೆ ಹಾಗೂ ಕೇಂದ್ರದಲ್ಲಿ ನಮ್ಮ ಮಾನ್ಯ ಶ್ಯಾನುಭೋಗರನ್ನು ಅಧಿಕಾರಕ್ಕೆ ತಂದಿದ್ದಕ್ಕೆ ನೀವು ಏನು ಮಾಡಬೇಕೋ ಅದನ್ನೇ ಮಾಡಿದ್ದೀರಿ. ಸಂತೋಷಕರವಾದ ಕೆಲಸವನ್ನು ನೀವು ಮಾಡಿದ್ದಕ್ಕಾಗಿ ಈ ದೇಶದ ಜನರು ನಿಮಗೆ ಕೃತಜ್ಞರಾಗಿಬೇಕು. ಇವತ್ತು ಉತ್ಪತ್ತಿ ಕಡಮೆಯಾಗುವುದಕ್ಕೆ

ಗೊಬ್ಬರದ ಬಳಕೆ ಕಡಮೆಯಾಗುತ್ತಿರುವುದೇ ಕಾರಣವೆಂದು ಸರ್ಕಾರದ ಅಂಕಿ ಅಂಶಗಳೇ ಹೇಳುತ್ತಿದೆ. ಒಂದು ಕಾಲದಲ್ಲಿ ನಾವು ತಿನ್ನತಕ್ಕ ಆಹಾರವನ್ನು ಹೊರದೇಶದಿಂದ ತರಿಸಲಾಗುತ್ತಿತ್ತು. ಆಗ ಹ್ಯಾಂಡ್ ಟು ಮೌತ್ ಎಂದು ಹೇಳುತ್ತಿದ್ದರು. ಆ ಹ್ಯಾಂಡ್ ಟು ಮೌತ್ ಎನ್ನತಕ್ಕ ಪಾಲಿಸಿ ಹೋಗಿ, ನಮ್ಮಲ್ಲಿ ಈಗ ಆಹಾರ ಉತ್ಪಾದನೆ ಜಾಸ್ತಿಯಾಗಿ ಫುಡ್ ಫಾರ್ ವರ್ಕ್ ಎನ್ನತಕ್ಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಅಂದರೆ ಈ ದೇಶದ ರೈತ ಅನ್ನ ಇಲ್ಲದ ಜನರಿಗೆ ಅನ್ನವನ್ನು ಕೊಟ್ಟು, ಹೊರದೇಶದಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದ ಅಪಮಾನಕರವಾದ ಪರಿಸ್ಥಿತಿ ಏನಿತ್ತು ಅದನ್ನು ಈ ದೇಶದ ರೈತ ಹೋಗಲಾಡಿಸಿ ರಾಷ್ಟ್ರೀಯ ಅಪಮಾನವನ್ನು ತಪ್ಪಿಸುವ ಕೆಲಸವನ್ನು ಮಾಡಿದ, ಅದಕ್ಕೆ ನೀವು ಕೊಟ್ಟಿರತಕ್ಕ ಬಳುವಳಿ ಏನೆಂದರೆ ಸುಮಾರು 200 ರಿಂದ 240 ಪಟ್ಟು ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿರತಕ್ಕದ್ದು. ನಿಮಗೆ ಯಜಮಾನರು ಈ ದೇಶದಲ್ಲಿತರಕ್ಕ ಜನತೆಯೋ ಮತದಾರರೋ ಅಥವಾ ವಾಷಿಂಗ್‌ಟನ್‌ನಲ್ಲಿರತಕ್ಕ ವಿಶ್ವಬ್ಯಾಂಕ್ ಮತ್ತು ಐಎಂಎಫ್ ಎಂದು ನಾನು ಪ್ರಶ್ನೆಯನ್ನು ಕೇಳಬೇಕಾಗಿದೆ. ಈ ದೇಶದ ಆಗುಹೋಗುಗಳು ಈ ದೇಶದ ಜನತೆಯ ಕೈಲಿ ಇರಬೇಕಾಗಿತ್ತು ಅದು ಇಲ್ಲ. ಶ್ಯಾನುಭೋಗರ ಜುಟ್ಟು ಹಿಡಿದುಕೊಂಡು ಅಲ್ಲಾಡಿಸತಕ್ಕಂಥವರು ವಾಷಿಂಗ್‌ಟನ್‌ನಲ್ಲಿದ್ದಾರೆ. ಅವರು ಹೇಳಿದ ಹಾಗೆ ಇಲ್ಲಿ ಕುಣಿಯಬೇಕು. ಇಲ್ಲಿ ಇದಕ್ಕೆ ಸಬ್ಸಿಡಿ ಬೇಡ, ಕೊಡುವುದು ಬೇಡ. ಮಳೆ ಇಲ್ಲದಿದ್ದರೂ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿಯಬೇಕು ಅಂದರೆ ನಿಮ್ಮ ಸರ್ಕಾರಗಳು ಅದಕ್ಕೆ ತಯಾರಿವೆ. ವಾಷಿಂಗ್‌ಟನ್‌ನಲ್ಲಿ ಹೇಳಿದರೆ ಕೊಡೆ ಹಿಡಿಯುವುದಕ್ಕೆ ಕೂಡ ತಯಾರಿದ್ದೀರಿ. ನಿಮ್ಮ ನೀತಿಯಿಂದ ನೀವು ಪ್ರಾರಂಭ ಮಾಡಿದ್ದು ಏನು ಮೊದಲು ಎಣ್ಣೆ ಉತ್ಪಾದನೆ ಕಡಮೆ ಇದೆ ಎಂದು ಹೊರದೇಶದಿಂದ ಎಣ್ಣೆಯನ್ನು ತರಿಸಿದಿರಿ. ಪಾಮೊಲಿನ್ ಎಣ್ಣೆಯನ್ನು ತರಿಸಿದಿರಿ ಎಣ್ಣೆಗೇ ಅದು ನಿಂತಿತೇ? ಇಲ್ಲ ಆ ಮೇಲೆ ಏನು ಹೇಳಿದಿರಿ ನಮಗೆ ಗೋಧಿ ಉತ್ಪಾದನೆ ಕಡಮೆಯಾಗಿದೆ ಬಳಕೆ ಜಾಸ್ತಿಯಾಗಿದೆ ಎಂದು ಹೇಳಿ ಪುನಃ ಅಮೆರಿಕಾ ಮತ್ತಿತರ ಹೊರದೇಶಗಳಿಂದ ಗೋಧಿಯನ್ನು ತರಿಸಿದಿರಿ ಅದೂ ಆಯಿತು. ಈಗ ಯಾವುದಕ್ಕೆ ಬಂದಿದ್ದೀರಿ ಅಕ್ಕಿಗೆ ಬಂದಿದ್ದೀರಿ. ಅಕ್ಕಿಯನ್ನು ತರಿಸುವಂತಹ ಪರಿಸ್ಥಿತಿ ಉಂಟಾಗಿದೆ. ಅದು ಬರೀ ಅಷ್ಟಕ್ಕೇ ನಿಂತಿಲ್ಲ. ಇವತ್ತು ನಮ್ಮ ಭಾಗದಲ್ಲಿ ನಾವು ಅನೇಕ ಜಿಲ್ಲೆಗಳಲ್ಲಿ ನಾವು ರೇಷ್ಮೆ ಬೆಳೆಯುತ್ತಿದ್ದೇವೆ. ರೇಷ್ಮೆ ಬೆಲೆ ಹೋದ ವರ್ಷ ಈ ತಿಂಗಳಲ್ಲಿ ಸುಮಾರು 200ಕ್ಕಿಂತ ಹೆಚ್ಚು 1 ಕೆ.ಜಿ. ಗೂಡಿನ ಬೆಲೆ ಇತ್ತು. ಇವತ್ತು ಇದು 70-80-90ರ ಮೇಲೆ ಕೇಳುವವರು ಇಲ್ಲ. ಅಂದರೆ ಗೊಬ್ಬರದ ಬೆಲೆ 200 ಪಟ್ಟು ಜಾಸ್ತಿ ಮಾಡಿ, ರೈತನು ಉತ್ಪಾದನೆ ಮಾಡುತ್ತಿರತಕ್ಕಂಥದ್ದಕ್ಕೆ ನೂರಕ್ಕೆ ನೂರರಷ್ಟು ಬೆಲೆ ಕಡಮೆಯಾಗಿದೆ. ಈ ರೀತಿ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ದಿನಪತ್ರಿಕೆಯಲ್ಲಿ ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಆ ರೇಷ್ಮಗೂಡಿನ ಬೆಲೆ ನೋಡಿದರೆ ಬಹಳ ಬೇಸರವಾಗುತ್ತದೆ. 70-80ಕ್ಕೆ ಮಾರಾಟ ಮಾಡುತ್ತಿದ್ದಾರೆ ಎಂದರೆ ಕಣ್ಣಲ್ಲಿ ನೀರು ಬರುತ್ತದೆ. ಏನು ಮಾಡುವುದು ನಮ್ಮ ದೇ ದುರಾದೃಷ್ಟ. ಯಾರು ಈ ಪರಿಸ್ಥಿತಿಗೆ ತಂದು ದೂಡಿದ್ದಾರೋ ಅವರನ್ನು ಜೀವಸಹಿತ ಸುಡಬೇಕಾಗಿತ್ತು. ಆ ಪರಿಸ್ಥಿತಿ ಇಲ್ಲ. ಅದಕ್ಕೆ ಬದಲಾಗಿ ಈ ದೇಶದಲ್ಲಿ ದೇಶಕ್ಕೆ ಬೆಂಕಿ ಹಚ್ಚತಕ್ಕಂತಹ ಕಾರ್ಯ ನಡೆಯುತ್ತಿದೆ. ದೇಶ ಮಾರಾಟ ಮಾಡುವವರು ಒಂದು ಕಡೆ ಮತ್ತೊಂದು ಕಡೆ ದೇಶಕ್ಕೆ ಬೆಂಕಿ ಇಡುತ್ತಿರುವವರು ಇದ್ದಾರೆ. ಇವರಿಗೆ ಬೆಲೆ ಏರಿಕೆಯಾಗಿರತಕ್ಕಂಥದ್ದು ಸಮಸ್ಯೆಯಾಗಲಿಲ್ಲ. ದೇಶದಲ್ಲಿ ಯಾವುದೋ ಒಂದು ದೇವಸ್ಥಾನ ಕಟ್ಟುವುದು ಒಂದು ಸಮಸ್ಯೆಯಾಯಿತು ಇದನ್ನು ಬಹಳ ನೊಂದು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಆ ಚರ್ಚೆಗೆ ಮೊದಲನೇ ದಿನವೇ ಪ್ರಿಯಾರಿಟಿ ಸಿಕ್ಕಿದೆ. ಇದಕ್ಕೆ ಕೊನೆಯಲ್ಲಿ ಸಿಕ್ಕಿದೆ.

ಶ್ರೀ ಸಿ. ಬೈರೇಗೌಡ :- ಇದು ಸಮಸ್ಯೆಯಾಗಲಿಲ್ಲ. ಇದಕ್ಕೋಸ್ಕರ ಗಲಭೆಯಾಗಲಿಲ್ಲ. ಇದಕ್ಕೋಸರ ಎಲ್ಲೂ ನೂರಾರು, ಸಾವಿರಾರು ಜನ ಸಾಯಲಿಲ್ಲ. ಅಲ್ಲಿ ಒಂದು ದೇವಸ್ಥಾನ ಕಟ್ಟುವುದು ಒಂದು ದೊಡ್ಡ ಸಮಸ್ಯೆಯಾಯಿತು. ಈ ದೇವಸ್ಥಾನ ಕಟ್ಟುವುದರಿಂದ ಹೊಟ್ಟೆಗೆ ಬರುವುದಿಲ್ಲ, ಬಟ್ಟೆಗೆ ಬರುವುದಿಲ್ಲ. ಅದು ಒಂದು ಸಮಸ್ಯೆಯಾಯಿತು. ಯಡಿಯೂರಪ್ಪನವರದ್ದನ್ನೂ ಹೇಳುತ್ತೇನೆ. ಹೋದ ಸಾರಿ ಮಾನ್ಯ ಯಡಿಯೂರಪ್ಪನವರು ಈ ಸದನದಲ್ಲಿ ಹೇಳಿದ್ದಾರೆ, ಇದು ಕಟ್ ಮೋಷನ್‌ನನ್ನು ಲೋಕಸಭೆಯಲ್ಲಿ ಮೂವ್ ಮಾಡಿದರು 3 ಕಂಡೀಷನ್ ಹಾಕಿದರು ಒಂದು ಗೊಬ್ಬರದ ಬೆಲೆಯನ್ನು ಕಡಮೆ ಮಾಡಬೇಕು ಸಬ್ಸಿಡಿಯನ್ನು ಪುನಃ ಕೊಡಬೇಕು, ಎರಡನೆಯದು ರಾಜೀವ್ ಗಾಂಧಿಯವರ ಫೌಂಡೇಷನ್‌ಗೆ 100 ಕೋಟಿ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಮೂರನೆಯದು ಇನ್‌ಕಮ್ ಟ್ಯಾಕ್ಸ್ ಲಿಮಿಟ್ ಅನ್ನು 48000ಕ್ಕೆ ಏರಿಸಬೇಕು. ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆ ನಡೆಯಿತು. ನಾನು ಅಂದುಕೊಂಡಿದ್ದೆ ರೈತರ ಸಹಾಯಕ್ಕೆ ಯಾರ್‍ಯಾರೋ ಬರುತ್ತಿದ್ದಾರೆ ಅವರಿಗೆ ಅನುಕೂಲವಾಗುತ್ತದೆಂದು ಸಂತೋಷವಾಯಿತು. ಸ್ವಾಮಿ 100 ಕೋಟಿ ರೂಪಾಯಿಗಳನ್ನು ಕೊಡುವುದಿಲ್ಲವೆಂದು ಈ ರೀತಿ ಹೇಳಿದ ಜನ ಮಾನ್ಯ ರಾಜೀವ್ ಗಾಂಧಿಯವರ ಫೌಂಡೇಷನ್‌ಗೆ ಕೊಡುವುದಿಲ್ಲವೆಂದು ಹೇಳಿದ ಮೇಲೆ, ಇನ್‌ಕಮ್ ಟ್ಯಾಕ್ಸ್ ಮೊತ್ತವನ್ನು ಏರಿಸುತ್ತೇವೆಂದು ಹೇಳಿದ ಮೇಲೆ ಅಲ್ಲಿ ಹೋಗಿ ಕಟ್‌ಮೋಷನ್ ಮೂವ್ ಮಾಡಲಿಲ್ಲ. ಇದು ದಾಖಲೆಯಲ್ಲಿದೆ. ಯಾರ ಕೈಗೆ ಈ ದೇಶವನ್ನು ಕೊಡಬೇಕೆಂದು ಹೊರಟಿರತಕ್ಕಂಥದ್ದು, ಈ ರೀತಿ ರೈತರನ್ನು ಸಮಾಧಿ ಮಾಡಿರತಕ್ಕಂಥ ನೀವು ಮತ್ತೆ ದೇಶಕ್ಕೆ ಬೆಂಕಿ ಇಟ್ಟು ಬೂದಿ ಮಾಡುತ್ತಿರತಕ್ಕಂಥ ಬಿಜೆಪಿ ಅಂಥವರ ಕೈಗೆ ಈ ದೇಶ ಸಿಕ್ಕಿದೆ. ಅಲ್ಲಿ ಅವರು ಅಧಿಕೃತವಾದ ವಿರೋಧಪಕ್ಷವಾಗಿರುವ ಇವರಿಗೆ ಅದು ಸಮಸ್ಯೆಯಾಗಲಿಲ್ಲ. ಈ ದೇಶದ ರೈತರ ಸಮಸ್ಯೆ ಸಮಸ್ಯೆಯಾಗಲಿಲ್ಲ. ಇದು ಆಗಿರತಕ್ಕಂಥದ್ದು ದೇಶವನ್ನು ಬೂದಿ ಮಾಡತಕ್ಕಂಥ ಸಮಸ್ಯೆಯಾಗಿದೆ. ಮಾನ್ಯ ಯಡಿಯೂರಪ್ಪನವರನ್ನು ಕೇಳಿದೆ ಸ್ವಾಮಿ ಲೋಕಸಭೆಯಲ್ಲಿ ನಿಮ್ಮವರು ಕಟ್‌ಮೋಷನ್ ಮೂವ್ ಮಾಡಿದ್ದರೆ. ಅದರ ಪರವಾಗಿ ನಿಮ್ಮವರು ನಿಲ್ಲುವುದಿಲ್ಲ. ಅವಾಗ ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದೆ. ಮಾನ್ಯ ಯಡಿಯೂರಪ್ಪನವರನ್ನು ರಾಜಿನಾಮೆ ಕೊಡುತ್ತೀರಾ ಎಂದು ಕೇಳಿದೆ. ನಾನು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದರು. ಆದರೆ ಯಡಿಯೂರಪ್ಪನವರು ರಾಜಿನಾಮೆ ಕೊಟ್ಟರೋ ಬಿಟ್ಟರೋ ಗೊತ್ತಿಲ್ಲ. ನಾನು ಬಹುಶಃ ಅಧಿವೇಶನ ಇವತ್ತೇ ಕೊನೆಯದಿವಸ, ನಾಳೆಗೆ ಹೋಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ರೈತರ ಸಮಸ್ಯೆ ಎಂದರೆ ಅಲ್ಲೂ ಕೂಡ ಅಷ್ಟೆ. ಕೊನೆ ಕೊನೆಗೆ ಚರ್ಚೆಗೆ ಬರುವುದು. ಮಾನ್ಯ ಯಡಿಯೂರಪ್ಪನವರು ಈ ಬಗ್ಗೆ ಎದೆ ತಟ್ಟಿದ್ದೆ ತಟ್ಟಿದ್ದು, ಕಣ್ಣೀರು ಬಿಟ್ಟಿದ್ದೇ ಬಿಟ್ಟಿದ್ದುದು ಕಣ್ಣೀರನ್ನು ಸುರಿಸಿ ಸುರಿಸಿ ಕಣ್ಣೀರ ಪ್ರವಾಹವಾಗಿ 7-8 ಜಿಲ್ಲೆಗಳಲ್ಲಿ ದೊಡ್ಡ ಪ್ರವಾಹವಾಗಿ ಹರಿಯಿತು. ಇವತ್ತು ಇಲ್ಲಿ ಚರ್ಚೆಯಾಗುತ್ತಿದೆ. ಗೊಬ್ಬರದ ವಿಷಯದಲ್ಲಿ ಚರ್ಚೆಯಾಗುತ್ತಿದ್ದರೆ ನನಗನಿಸುತ್ತದೆ ಅವರು ಇದ್ದಿದ್ದರೆ ನಮಗೆ ಒಂದು ರೀತಿ ಸ್ಫೂರ್ತಿ ಬರುತ್ತಿತ್ತು. ಇಂಥ ಒಂದು ಪ್ರಮುಖವಾದಂಥ ವಿಷಯ ಚರ್ಚೆಯಾಗುತ್ತಿರತಕ್ಕಂಥ ಸಂದರ್ಭದಲ್ಲಿ ಅವರು ಇಲ್ಲ. ಇದು ಏನು ತೋರಿಸುತ್ತದೆಂಬುದು ಗೊತ್ತಿಲ್ಲ. ಯಾವ ಮಟ್ಟದಲ್ಲಿ

ರೈತರ ವಿಚಾರದಲ್ಲಿ ಯಾರು ಯಾರು ಎಷ್ಟರಮಟ್ಟಿಗೆ, ಶ್ರದ್ಧೆ ವಹಿಸುತ್ತಿದ್ದಾರೆ, ಏನಾಗುತ್ತಿದೆ ಎನ್ನುವುದನ್ನು ತೋರಿಸುತ್ತದೆ. ರೈತರ ಸಮಸ್ಯೆ ಅಧಃಪತನಕ್ಕೆ ಇಳಿಯುತ್ತಿದೆ. ಇದು ರೈತರನ್ನು ಮುಗಿಸತಕ್ಕಂಥ ಗೊಬ್ಬರದ ನೀತಿಯಾಗಿದೆ. ನಿಮ್ಮ ಅಂಕಿಅಂಶಗಳ ಪ್ರಕಾರವೇ ನಮ್ಮ ರಾಜ್ಯದಲ್ಲಿ ಗೊಬ್ಬರದ ಬಳಕೆ ಕಡಮೆಯಾಗಿದೆ. ನಮ್ಮಲ್ಲಿ ಗೊಬ್ಬರವನ್ನು ಸಮತೋಲನ ರೀತಿಯಲ್ಲಿ ಹಾಕಬೇಕಾಗುತ್ತದೆ. ಇದಕ್ಕೆ ಎನ್‌ಪಿಕೆ ಎಂದು ಹೇಳುತ್ತಾರೆ. ಒಂದೊಂದು ಬೆಳೆಗೆ ಒಂದೊಂದು ಪ್ರಮಾಣದ ಗೊಬ್ಬರವನ್ನು ಹಾಕಬೇಕಾಗುತ್ತದೆ ಇಲ್ಲದಿದ್ದರೆ ಭೂಮಿ ಕೆಟ್ಟು ಹೋಗುತ್ತದೆ. ಬೆಳೆ ಬರುವುದಿಲ್ಲ. ಇವತ್ತು ಏನಾಗಿದೆ ಎಂದರೆ ಸಂಯುಕ್ತ ಗೊಬ್ಬರದ ಬೆಲೆ 200 ಇದ್ದುದು 240 ಪಟ್ಟು ಜಾಸ್ತಿಯಾಗಿದೆ. ಇವತ್ತು ರೈತರು ಅದನ್ನು ಉಪಯೋಗಿಸುವುದನ್ನೇ ಬಿಟ್ಟಿದ್ದಾರೆ. ಬರೀ ಯೂರಿಯಾ ಉಪಯೋಗಿಸಿ ಬೆಳೆದರೆ ಬೆಳೆ ಕಪ್ಪಗೆ ಒಳ್ಳೆಯ ಹಸಿರುಬಣ್ಣಕ್ಕೆ ತಿರುಗುತ್ತದೆ. ರೈತರ ಖುಷಿಪಡುತ್ತಾರೆ. ಆದರೆ ಆದರಿಂದ ಇಳುವರಿ ಬರುವುದಿಲ್ಲ. ಇಳುವರಿ ಬರುವುದಕ್ಕೆ ಬಹಳ ಮುಖ್ಯವಾಗಿರತಕ್ಕಂಥದ್ದು ಆ ಭೂಮಿಯ ಗುಣ, ಅದು ಹಾಳಾಗುತ್ತದೆ. ಇದೇ ರೀತಿ ಮುಂದುವರೆದರೆ ಬರೀ ಯೂರಿಯಾ ಉಪಯೋಗಿಸಿ ಬೆಳೆಯನ್ನು ಬೆಳೆಯಬೇಕಾಗುತ್ತದೆ. ಬರೆ ಯೂರಿಯಾ ಉಪಯೋಗಿಸುವುದಕ್ಕೆ ವಿಧಿಯಿಲ್ಲದೆ ನೀವೇ ರೈತರನ್ನು ತಳ್ಳುತ್ತಿದ್ದೀರಿ. ಇದರಿಂದ ಆ ಭೂಮಿ ಸ್ಟ್ರಕ್ಚರ್ ಬದಲಾವಣೆಯಾಗುತ್ತದೆ. ಸಾವಿರಾರು ವರ್ಷಗಳಿಂದ ಲಕ್ಷಾಂತರ ವರ್ಷಗಳಿಂದ ಬೆಳೆಯುತ್ತಿದ್ದ ಆ ಭೂಮಿ ಬೆಳೆ ಬೆಳೆಯುವುದಕ್ಕಾಗದಂಥ ಪರಿಸ್ಥಿತಿಗೆ ಬರುತ್ತಿದೆ. ಅದು ಪುನಃ ಯಥಾಸ್ಥಿತಿಗೆ ಬರಬೇಕಾದರೆ ನೂರಾರು ವರ್ಷ ಬೇಕಾಗುತ್ತದೆ. ಇದು ನೀವು ಈ ದೇಶಕ್ಕೆ ಕೊಟ್ಟಿರತಕ್ಕ ಬಳುವಳಿ. ನಮ್ಮ ದೇಶದ ವ್ಯವಸಾಯವನ್ನು ಈ ದೇಶದ ರೈತರನ್ನು ಹಾಳು ಮಾಡತಕ್ಕ ರೀತಿ ವ್ಯವಸ್ಥಿತವಾದ ಒಂದು ಅಂತರರಾಷ್ಟ್ರೀಯ ಸಂಚು ಇದರಲ್ಲಿ ಅಡಗಿದೆ. ಅದರಿಂದಾಗಿಯೇ ವರ್ಲ್ಡ್ ಬ್ಯಾಂಕ್ ಮಾತು ಕೇಳಿ, ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿರತಕ್ಕದ್ದು. ಅದರ ಪರಿಣಾಮ ನೋಡುವುದಕ್ಕ ನೂರಾರು ವರ್ಷವೇನು ಕಾಯಬೇಕಾಗಿಲ್ಲ. ಒಂದೇ ವರ್ಷದಲ್ಲಿ ಕಾಣಿಸುತ್ತಿದೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಹುಚ್ಚಮಾಸ್ತಿಗೌಡರೇ ಜಾಸ್ತಿ ಮಾಡಿದ್ದಾರೆಂಬ ರೀತಿಯಲ್ಲಿ ಚುಚ್ಚಿ ಚುಚ್ಚಿ ಅನ್ನುತ್ತಿದ್ದೀರಲ್ಲ. ಇದರ ಬಗ್ಗೆ ನಾವು ಪಕ್ಷಾತೀತವಾಗಿ ಮಾತನಾಡಬೇಕೆಂದು ಇದ್ದೆವು.

ಶ್ರೀ ಬೈರೇಗೌಡ:- ನಾವು ಅಲ್ಲಿ ಕುಳಿತಿದ್ದರೆ ಏನೋ ಬೇಕೋ ಹೇಳುತ್ತಿದ್ದೆವು. ದೆಹಲಿಗೆ ನೀವು ಬಂದಿದ್ದಿರೋ ಇಲ್ಲವೋ ಗೊತ್ತಿಲ್ಲ. ಇದೆಲ್ಲವನ್ನು ಹೋಗಿ ಹೇಳಿ ಎಂದು ಹೇಳುತ್ತಿದ್ದೇನೆ. ಹೇಳುವುದಿಲ್ಲವೆಂದರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ರಸಗೊಬ್ಬರಗಳ ಬಗ್ಗೆ ಬೆಲೆ ಏರಿಸತಕ್ಕದ್ದು ಮತ್ತು ನಿಯಂತ್ರಣದ ಬಗ್ಗೆ ಪಾರ್ಲಿಮೆಂಟಿನಲ್ಲಿ ಒಂದು ಕಮಿಟಿ ಮಾಡಿದ್ದಾರೆ. ಆ ಕಮಿಟಿಯವರು ಎಲ್ಲಾ ಪಾರ್ಟಿ ಮುಖಂಡರನ್ನು ಆಹ್ವಾನ ಮಾಡಿದ್ದಾರೆ. ಅವರೆಲ್ಲರೂ ಆಮೂಲಾಗ್ರವಾಗಿ ಪರಿಶೀಲಿಸಿ ಪಾರ್ಲಿಮೆಂಟಿಗೆ ವರದಿಯನ್ನು ಕೊಟ್ಟಿದ್ದಾರೆ. ವರದಿ ಕೊಟ್ಟಿರುವುದರಲ್ಲಿ ಬೈರೇಗೌಡ ಪಾರ್ಟಿಯವರು ಇದ್ದಾರೆ. ನಮ್ಮ ರಾಜ್ಯದ ಪಾರ್ಲಿಮೆಂಟ್ ಸದಸ್ಯರು, ಬಿಜೆಪಿ ಮುಖಂಡರು ಇದ್ದಾರೆಂದು ಅವರ ಗಮನಕ್ಕೆ ತರಬಯಸುತ್ತೇನೆ.........

ಶ್ರೀ ಸಿ. ಬೈರೇಗೌಡ :- ನೀವು ಆ ವರದಿಯನ್ನು ಓದದಿದ್ದರೆ ಏನು ಮಾಡುವುದಕ್ಕಾಗುತ್ತದೆ? ಅಲ್ಲಿ ದೇವೇಗೌಡರು ಸದಸ್ಯರಾಗಿದ್ದುದು ನಿಜ. ಅವರು ಏನು ವರದಿ ಕೊಟ್ಟಿದ್ದಾರೆ ಅದನ್ನು ಓದತಕ್ಕದ್ದು ಮುಖ್ಯ. ಏನು ಇದೆ ಎಂದು ಓದದಿದ್ದರೆ ಅದಕ್ಕೆ ನಾನು ನಿಮಗೆ ಸಹಾಯ ಮಾಡಲಿಕ್ಕೆ ತಯಾರಿಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ :- ಗೌಡರ ಗದ್ದಲ ಹಾಸನದಲ್ಲೇ ಇರಲಿ, ರಾಜ್ಯಕ್ಕೆ ಬೇಡ......

ಶ್ರೀ ಸಿ. ಬೈರೇಗೌಡ :- ಇದರಿಂದ ಇವತ್ತಿನ ದಿವಸ ಏನಾಗುತ್ತಿದೆ ಎಂದರೆ ನಮ್ಮ ರಾಜ್ಯದಲ್ಲಿಯೂ ಸಹ ಗೊಬ್ಬರದ ಬಳಕೆ ಕಡಮೆಯಾಗುತ್ತಿದೆ. 1957ರಿಂದ 60ಕ್ಕೆ ಮೊದಲು ಏನು ಒಂದು ಪರಿಸ್ಥಿತಿ ಇತ್ತು Shift to mouth ಎಂದು ಏನಿತ್ತು ಇದು ಈಗಲೇ ಪ್ರಾರಂಭವಾಗಿದೆ. ನಮ್ಮ ರಾಜ್ಯದಲ್ಲಿ ಮಾರ್ಕೆಟಿಂಗ್ ಫೆಡರೇಷನ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಏನಿದೆ ಅದನ್ನು ಸಾಯಿಸಿದ್ದೀರಿ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಗೊಬ್ಬರಕ್ಕೆ ಷೇರು 10 ಪರ್ಸೆಂಟ್ ಇತ್ತು. ಮಾರ್ಕೆಟಿಂಗ್ ಫೆಡರೇಷನ್ನಿನದು ಶೇಕಡ 30ರಷ್ಟು ಇತ್ತು. ಅವರು ಗೊಬ್ಬರ ತರತಕ್ಕೆ ಮತ್ತು ವ್ಯಾಪಾರ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಅವರ ಹತ್ತಿರ ಹಣ ಇಲ್ಲ. ಏತಕ್ಕೆ ಇಲ್ಲವೆಂದರೆ, ಗೊಬ್ಬರದ ಬೆಲೆ ಜಾಸ್ತಿಯಾಗಿರುವುದರಿಂದ. ಮೊದಲು ಒಂದೆರಡು ಕೋಟಿ ರೂಪಾಯಿಗಳನ್ನು ಹಾಕಬೇಕಾದ ಪರಿಸ್ಥಿತಿ ಇತ್ತು. ಈಗ ಅದೇ ಗೊಬ್ಬರಕ್ಕೆ 3-4 ಕೋಟಿ ರೂಪಾಯಿಗಳ ಬಂಡವಾಳ ಹೂಡಬೇಕು. ಆ ಬಂಡವಾಳವನ್ನು ನೀವು ಕೊಡುತ್ತೀರಾ? ಆ ಬಂಡವಾಳ ಕೊಡುವುದಕ್ಕೆ ನೀವು ತಯಾರಿಲ್ಲ. ಅದರಿಂದ ಏನಾಗುತ್ತದೆಂದರೆ ವ್ಯಾಪಾರಸ್ಥರೇನಿದ್ದಾರೆ ಅವರು ಮನಸೋ ಇಚ್ಛೆ ಬೆಲೆ ನಿಗದಿ ಮಾಡುತ್ತಿದಾರೆ. ಅವರು ಮುಕ್ತ ಮಾರುಕಟ್ಟೆಯಲ್ಲಿ ಎಷ್ಟಕ್ಕೆ ಬೇಕಾದರೂ ಮಾರಾಟ ಮಾಡಬಹುದು. ಆ ಮುಕ್ತ ಮಾರುಕಟ್ಟೆಯಲ್ಲಿ ಖುಷಿ ಬಂತು ಅಂದರೆ ಏನು ಬೇಕಾದರೂ ಮಾಡಬಹುದು. ಮೊನ್ನೆ ಕಾಫಿ ಬೆಳೆಗೆ ಗೊಬ್ಬರ ಹಾಕುವುದಕ್ಕಾಗಲಿಲ್ಲವೆಂದು ಈಗಾಗಲೇ ಚಂದ್ರೇಗೌಡರು ಹೇಳಿದರು. ಏನು ಗೊಬ್ಬರ ಇದೆ, ಅದು ಸಿಗದೇ ಕಾಫಿಗೆ ಹಾಕುವುದಕ್ಕೆ ಆಗಲಿಲ್ಲವೆಂದರು. ಕಾರಣ ಏನು? ಗೊಬ್ಬರವನ್ನು hoard ಮಾಡುತ್ತಾರೆ. ಯಾವಾಗ ರೈತರಿಗೆ ಬೇಕೋ ಆಗ ಅವರ ಕುತ್ತಿಗೆ ಹಿಸುಕುತ್ತಾರೆ. ರೈತರಿಗೆ ಗಾಳ ಹಾಕಿ, ಅವರು ಕೇಳುವಷ್ಟು ಹಣ ಕೊಟ್ಟರೆ ಗೊಬ್ಬರವನ್ನು ಹೊರಗಡೆ ಬಿಡುತ್ತಾರೆ. ಇಲ್ಲದಿದ್ದರೆ ಇಲ್ಲ. ಈಗಾಗಲೇ ಇದು ನಮ್ಮ ರಾಜ್ಯದಲ್ಲಿಯೂ ಕೂಡ ಆಗಿದೆ. ಪ್ಲಾಂಟೇಷನ್ ಬೆಳೆಗೆ ಗೊಬ್ಬರ ಹಾಕುವುದಕ್ಕೆ ಆಗಿಲ್ಲವೆಂದು ಗುರುದೇವ್ ಅವರು ಹೇಳಿದ್ದಾರೆ. ಸಾಯುವವರೆಗೂ ಎಳೆದು ಸಾಯಿಸಬೇಕೆಂದು ರೈತರ ಕುತ್ತಿಗೆಗೆ ಗಾಳ ಹಾಕಿದ್ದಾರೆ. ಅದಕ್ಕೆ ತಾವು ಏನು ಮಾಡಿದ್ದೀರಿ? ಏನೂ ಮಾಡಿಲ್ಲ. ಒಂದು ಹೇಳಿಕೆ: ಚಂದ್ರೇಗೌಡರು ಹೇಳಿರತಕ್ಕ ಒಂದು ಹೇಳಿಕೆ, ನಮ್ಮ ಮಾಜಿ ಮಂತ್ರಿಗಳು ಕೊಟ್ಟು ಸುಮ್ಮನಾದರು ಅಷ್ಟೇ. ರೈತರ ನೆರವಿಗೆ ಬಂದಿರಾ? ಕೇಂದ್ರದಿಂದ 17.53 ಕೋಟಿ ರೂಪಾಯಿ ನೆರವು ಬಂದಿದೆಯೆಂದು ಹೇಳುತ್ತಿದ್ದೀರಿ. ಅದರಲ್ಲಿ ಎಷ್ಟು ಬಳಕೆಯಾಯಿತು? ನನಗೆ ಗೊತ್ತಿರುವ ಹಾಗೆ 2 ಅಥವಾ 3ಕೋಟಿ ಬಳಕೆಯಾಗಿರಬಹುದು ಅಥವಾ ಜಾಸ್ತಿಯೆಂದರೆ 5 ಕೋಟಿ ಆಗಿರಬಹುದು. ಉಳಿದಿರತಕ್ಕ ಕೇಂದ್ರ ಸರ್ಕಾರದ ಹಣ ಬಳಕೆಯಾಗಿಲ್ಲ. ಕಾರಣ ಎಂದರೆ ಕೊಂಡುಕೊಳ್ಳುವ ಆ ಒಂದು ಶಕ್ತಿ ನಮ್ಮ ರೈತರಲ್ಲಿ ಇಲ್ಲವಾಗಿದೆ. ಅವರು ನಿಃಶಕ್ತರಾಗಿದ್ದಾರೆ. ನೀವು ರಿಯಾಯಿತಿ

ಕೊಡುತ್ತೇವೆಂದರೂ ಕೂಡ ಇವತ್ತಿನ ದಿವಸ ಬಳಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಈ ರಿಯಾಯಿತಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಇವತ್ತು ಆಹಾರದ ಮಾರುಕಟ್ಟೆಗಳಿಗೆ ಸರ್‌ಪ್ಲಸ್ ಯಾರಿಂದ ಬರುತ್ತಿದೆ? ಮಾರ್ಕೆಟ್‌ಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಬರುತ್ತಿದೆಯೇ? ಮಾರ್ಕೆಟಬಲ್ ಸರ್‌ಪ್ಲಸ್ ಅವರ ಹತ್ತಿರ ಇದೆಯೇ? ಏಕೆ ಇವತ್ತು ರೈತರನ್ನು ದೊಡ್ಡ ರೈತ, ಸಣ್ಣ ರೈತ, ಈ ರೈತ ಎಂದು ಹೇಳಿ ರೈತರ ಒಗ್ಗಟ್ಟನ್ನು ಒಡೆಯತಕ್ಕದ್ದು? ರೈತರನ್ನು ವಿಭಾಗ ಮಾಡಿ ಒಡೆಯತಕ್ಕ ಪ್ರಯತ್ನ ಏಕೆ ಮಾಡುತ್ತಿದ್ದೀರಿ? ಇವತ್ತು ತಾವು ದೊಡ್ಡ ರೈತರಿಗೆ ಕೊಡುವ ಬಳುವಳಿಯೇ ಈ ಮಾರ್ಕೆಟಬಲ್ ಸರ್‌ಪ್ಲಸ್ ಇರತಕ್ಕದ್ದು. ಅದನ್ನು ಬೆಳೆಯತಕ್ಕವರು ದೊಡ್ಡ ರೈತರೇ. ಅವರಿಗೆ ಬೆಲೆ ಜಾಸ್ತಿ ಇತ್ತು. ಏಕೆ ಈ ನೀತಿ? ಅರ್ಥ ಇಲ್ಲದ ನೀತಿ. ಇದನ್ನು ಮೊದಲು ತೆಗೆದುಹಾಕಿ. ರೈತರನ್ನು ವಿಧವಿಧವಾಗಿ ವರ್ಗೀಕರಣ ಮಾಡುವುದಕ್ಕೆ ಹೋಗಬೇಡಿ. ಇವತ್ತು ನಮ್ಮದು ಟ್ಯಾಕ್ಸ್ ಹಾಕಿದ್ದೀರಿ. ಬೇರೆ ರಾಜ್ಯಗಳಲ್ಲಿ ಟರ್ನ್ ಓವರ್ ಟ್ಯಾಕ್ಸ್ ಇಲ್ಲ. ಸೇಲ್ಸ್ ಟ್ಯಾಕ್ಸ್ ಕೂಡ ಅಲ್ಲಿ ಕಡಮೆ ಇದೆ. ನೀವು ರೈತರ ಉದ್ಧಾರ ಮಾಡುವವರು ಏನು ಮಾಡಿದ್ದೀರಿ? ಕೇಂದ್ರ ಸರ್ಕಾರದವರು ಏನೋ ಮಾಡುತ್ತಾರೆ, ನಾವು ಏನು ಮಾಡುವುದು, ದೇಶಕ್ಕೆ ಒಂದು ನೀತಿ ಮಾಡುತ್ತಾರೆ, ಆದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ನೀವು ಸುಲಭದಲ್ಲಿ ಹೇಳುತ್ತೀರಿ. ಆದರೆ ನೀವೇ ಟರ್ನ್ ಓವರ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ. ಇದನ್ನು ಏಕೆ ಕಡಿಮೆ ಮಾಡಬಾರದು? ಆ ದಿಕ್ಕಿನಲ್ಲಾದರೂ ಯೋಚನೆ ಮಾಡಿ. ಇನ್ನು ಲೆವಿಯನ್ನು ವಸೂಲಿ ಮಾಡುತ್ತಿದ್ದೀರಿ. ನಾವು ರೈತರಿಂದ ಲೆವಿ ತೆಗೆದುಕೊಳ್ಳುತ್ತಿಲ್ಲ. ಮಿಲ್ ಪಾಯಿಂಟ್‌ನಲ್ಲಿ ತೆಗೆದುಕೊಳ್ಳುತ್ತಿದ್ದೇವೆಂದು ತಾವು ಸುಲಭವಾಗಿ ಹೇಳುತ್ತೀರಿ. ಮಿಲ್ ಮಾಲಿಕರು ಧರ್ಮ ಸಂಸ್ಥೆ ನಡೆಸುತ್ತಿದ್ದಾರೆಯೇ ಅವರು ಏನು ಮಠಾಧೀಶರೇ? ಅವರೂ ಕೊಂಡುಕೊಳ್ಳಬೇಕಾದರೆ ನಿಮ್ಮ ಲೆವಿ ಏನಿದೆ ಅದನ್ನು ಕೊಟ್ಟರೆ ಎಷ್ಟು ನಷ್ಟವಾಗುತ್ತದೆಯೋ ಅದನ್ನು ಅನುಸರಿಸಿ ಕೊಂಡುಕೊಳ್ಳುತ್ತಾರೆ. ಆದರಿಂದ ಮಿಲ್ ಮಾಲಿಕನಿಗೆ ನಷ್ಟ ಇಲ್ಲ. ನಷ್ಟ ಆಗುತ್ತಿರುವುದು ರೈತರಿಗೇ. ನೀವು ಯಾವಾಗ ರೈತರಿಗೆ ಕೊಡಬೇಕಾದುದನ್ನು ಈ ಸಬ್ಸಿಡಿ ವಜಾ ಮಾಡಿದ್ದೀರೋ, ನೀವು ಇತರೆಯವರಿಗೆ ಕಡಮೆ ದರದಲ್ಲಿ ಆಹಾರ ಧಾನ್ಯ ಕೊಡತಕ್ಕ ನೀತಿ ಯಾವುದು? ಸರಿಯಾದ ನೀತಿಯೇ? ಯಾರಿಗೂ ನೀವು ಕೊಡಬೇಡಿ. ರೈತನಿಗೆ ಯಾವಾಗ ಇಲ್ಲವೋ ಇತರರಿಗೂ ಕಡಮೆ ದರದಲ್ಲಿ ಏಕೆ ಆಹಾರ ಧಾನ್ಯ ಕೊಡುತ್ತೀರಿ? ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಏಕೆ? ಇವತ್ತು ಲೆವಿ ಕೊಡುವುದಕ್ಕಾಗುವುದಿಲ್ಲವೆಂದು ತಾವು ರಾಜ್ಯ ಸರ್ಕಾರದವರು ಹೇಳಿ. ಏಕೆ ಕೊಡಬೇಕು ಲೆವಿ? ಏನು ನೀವು ರೈತರನ್ನು ಉದ್ಧಾರ ಮಾಡಿರುವುದು? ಯಾವ ಕಾರಣಕ್ಕೋಸ್ಕರ ನೀವು ಲೆವಿ ವಸೂಲಿ ಮಾಡುತ್ತೀರಿ? ಮಿಲ್ ಪಾಯಿಂಟ್ ಇರಬಹುದು, ಮತ್ತೊಂದು ಇರಬಹುದು, ಏನಿದೆ ನಿಮಗೆ ಆಧಾರ? ಮಿಲ್ ಪಾಯಿಂಟ್‌ನಲ್ಲೇ ಆಗಲಿ ಲೆವಿ ಕೇಳುವುದಕ್ಕೆ ಏನು ಅಧಿಕಾರ ಇದೆ? ಯಾವ ನೈತಿಕ ಆಧಾರದ ಮೇಲೆ ನೀವು ಕೇಳುತ್ತಿದ್ದೀರಿ ಲೆವಿಯನ್ನು? ಏಕೆ ಇದನ್ನು ಹೇಳಿ ನೀವು. ಲೆವಿ ವಸೂಲಿ ಮಾಡುವುದಿಲ್ಲವೆಂದು ಹೇಳಿ. ರೈತನಿಗೆ ಕೊನೆಯ ಪಕ್ಷ ಕ್ವಿಂಟಾಲ್ ಮೇಲೆ 10 ರೂಪಾಯಿ 20 ರೂಪಾಯಿ ಜಾಸ್ತಿ ಸಿಗುತ್ತದೆ. ದಯವಿಟ್ಟು ಆ ಕೆಲಸ ಮಾಡಿ. ನಾನು ಆಗಲೇ ಹೇಳಿದ್ದೇನೆ. ವರ್ತಕರು ಮೊನಾಪಲಿ ಮಾಡಿಕೊಂಡು ರೈತರ ಕುತ್ತಿಗೆಗೆ ಗಾಳ ಹಾಕುತ್ತಾರೆ. ಅದನ್ನು ತಪ್ಪಿಸಬೇಕಾದರೆ ಸಹಕಾರ ಸಂಸ್ಥೆಗಳನ್ನು ಬಲಪಡಿಸಿ. ಮಾರ್ಕೆಟಿಂಗ್ ಫೆಡರೇಷನ್,

ಆಗ್ರೋ ಇಂಡಸ್ಟ್ರಿಸ್ ಕಾರ್ಪೊರೇಷನ್ ಅದರ ಮೂಲಕ ಅವರು ಬೇರೆ ಕೆಲಸ ಮಾಡದಿದ್ದರೂ ಚಿಂತೆಯಿಲ್ಲ. ಅವುಗಳ ಮೂಲಕ ನೀವು ಗೊಬ್ಬರ ಕೊಡುವುದಕ್ಕೆ ವ್ಯವಸ್ಥೆ ಮಾಡಿ. ಇವತ್ತು 17.53 ಕೋಟಿ ರೂಪಾಯಿಗಳ ಜೊತೆಗೆ ಸುಮಾರು 30 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರುತ್ತದೆಂದು ನಿಮ್ಮ ನಿರೀಕ್ಷೆಯಿದೆ. ಅದನ್ನು ಬೇರೆಯದಕ್ಕೆ ಉಪಯೋಗಿಸದೆ ರೈತರಿಗೆ ಕಡಮೆ ದರದಲ್ಲಿ ಗೊಬ್ಬರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿ. ಕೇಂದ್ರದಿಂದ ಏನೇ ಮಾಡಲಿ, ನೀವು ಸಹ ರೈತರ ನೆರವಿಗೆ ಬರತಕ್ಕೆ ಅವಕಾಶಗಳು ಇವೆ. ಅದನ್ನು ತಾವು ದಯವಿಟ್ಟು ಮಾಡಿ. ಈ ಅರ್ಥವಿಲ್ಲದ ತರ್ಕವನ್ನು ಬಿಟ್ಟು ವಾಸ್ತವಾಂಶವನ್ನು ಗಮನಿಸಿ ರಾಜ್ಯ ಸರ್ಕಾರ ಅತಿ ಶೀಘ್ರವಾಗಿ ಮಾಡತಕ್ಕದ್ದನ್ನು ನಾನು ಹೇಳಿದ್ದೇನೆ. ಟರ್ನ್ ಓವರ್ ಟ್ಯಾಕ್ಸನ್ನು ತೆಗೆಯಿರಿ, ಮತ್ತೆ ಸೇಲ್ಸ್ ಟ್ಯಾಕ್ಸ್ ತೆಗೆಯಿರಿ. ವರ್ತಕರು ಮೊನಾಪಲೀಸ್ ಏನು ಹೋಲ್ಡಿಂಗ್ ಮಾಡುತ್ತಾರೆ ಅವರಿಗೆ ಅವಕಾಶವಿಲ್ಲದ ಹಾಗೆ ನಿಮ್ಮ ಸಂಸ್ಥೆಗಳನ್ನು ಬಲಪಡಿಸಿ, ಅವುಗಳ ಮೂಲಕ ಗೊಬ್ಬರವನ್ನು ನೀವು ರೈತರಿಗೆ ಹಂಚುವ ಕೆಲಸವನ್ನು ಮಾಡಿ. ಏನು ಮಾಡದೆ ನಾವು ಸುಮ್ಮನೆ ಕುಳಿತಿರುತ್ತೇವೆಂದರೆ ಅದು ನಿಮ್ಮ ಇಷ್ಟ.

## ಪ್ರವಾಹ ಪರಿಸ್ಥಿತಿ - 11-1-1993

ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಪ್ರವಾಹದಿಂದ ಆಗಿರತಕ್ಕಂಥ ಹಾನಿ ಬಹುಶಃ ಹಿಂದೆಂದೂ ಆಗಿಲ್ಲ. ಇದೊಂದು ಅಭೂತಪೂರ್ವವಾದ ಹಾನಿ. ಈಗಾಗಲೇ ಅನೇಕ ನಮ್ಮ ಸ್ನೇಹಿತರು ಈ ವಿಚಾರವನ್ನು ಮಾತನಾಡಿದ್ದಾರೆ. ನಾನು ಅವೆಲ್ಲವನ್ನು ಪುನರುಚ್ಚರಿಸುವುದಕ್ಕೆ ಹೋಗುವುದಿಲ್ಲ. ಅದರಿಂದ ಏನೂ ಪ್ರಯೋಜನವೂ ಆಗುವುದಿಲ್ಲ. ನಮ್ಮ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಪಡೆಯತಕ್ಕಂಥ ನೆರವು ಏನಿದೆ ಅದನ್ನು ಪಡೆಯುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ನಾವು ಪತ್ರಿಕೆಗಳಲ್ಲಿ ಒಂದು ಜಾಹಿರಾತು ನೋಡಿದ್ದೇವೆ. ಪ್ರಧಾನ ಮಂತ್ರಿಗಳ ಚಿತ್ರ ಮತ್ತು ಮುಖ್ಯಮಂತ್ರಿಗಳ ಚಿತ್ರ. ಆ ಜಾಹಿರಾತಿನಲ್ಲಿ ಇದ್ದದ್ದು ಏನೆಂದರೆ ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಬರುತ್ತಾರೆ. ಈ ಪ್ರವಾಹದಿಂದ ಆಗಿರತಕ್ಕ ಹಾನಿಯನ್ನು ನೋಡುತ್ತಾರೆ, ಅದಕ್ಕೆ ಸರ್ಕಾರದ ವತಿಯಿಂದ ಸ್ವಾಗತ ಕೋರುತ್ತೇವೆಂದು ಜಾಹಿರಾತು ಹಾಕಿದ್ದರು. ನಾನು ಅಂದುಕೊಂಡೆ, ಹೊಸದಾಗಿ ಏನೋ ನಡೆಯುತ್ತಿದೆ. ಇಲ್ಲಿ ಆಗಿರತಕ್ಕ ಅನಾಹುತ ಬೇರೆ ದೇಶದಲ್ಲಿ ಎಲ್ಲಿಯೂ ಆಗದೆ ಇರತಕ್ಕ ಅನಾಹುತಕ್ಕಿಂತ ಕಡಮೆ ಏನೂ ಇಲ್ಲ. ಅಂಥ ಪರಿಸ್ಥಿತಿಯಲ್ಲಿ ಪ್ರಧಾನ ಮಂತ್ರಿಗಳು ಖುದ್ದಾಗಿ ಬಂದು ನೋಡಿ ರಾಜ್ಯಕ್ಕೆ ಕೇಂದ್ರದಲ್ಲಿ ನೆರವು ಕೊಡುತ್ತಾರೆಂದು ಆಸೆ ಇತ್ತು. ಮುಖ್ಯಮಂತ್ರಿಗಳೂ ಸಹ ಹೇಳಿದರು, ಪ್ರಧಾನ ಮಂತ್ರಿಗಳು ತಮಿಳ್ನಾಡಿಗೆ ಹೋಗುತ್ತಾರೆ, ಕೇರಳಕ್ಕೆ ಹೋಗುತ್ತಾರೆ, ಹೋಗುವಾಗ ಕರ್ನಾಟಕದ ಮೇಲೆ ಹೋಗುತ್ತಾರೆ. ಹೋಗುವಾಗ ಕರ್ನಾಟಕವನ್ನು ಕಿಟಕಿಯಿಂದ ನೋಡಿದರೋ ಇಲ್ಲವೋ ಗೊತ್ತಿಲ್ಲ, ನೋಡಿದರೂ ಸಹ ಏನಾದರೂ ರಾಜ್ಯಕ್ಕೆ ಪ್ರಯೋಜನವಾಗುತ್ತಿತ್ತು. ಇಲ್ಲಿ ನಡೆದಿರತಕ್ಕ ಅನಾಹುತದ ಚಿತ್ರ ಗೊತ್ತಾಗುತ್ತಿತ್ತು. ಆದರೆ ಯಾವುದೇ ಪ್ರಯೋಜನವಾಗದೆ ಇರುವುದರಿಂದ ಅನಿವಾರ್ಯವಾಗಿ ಈ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಪ್ರಧಾನ ಮಂತ್ರಿಗಳು

ಒಂದು ಸಾರಿಯೂ ತಮ್ಮ ಕಣ್ಣಿನ ದೃಷ್ಟಿಯನ್ನು ಹಾಯಿಸಿ ನೋಡತಕ್ಕ ಪ್ರಯತ್ನ ಮಾಡಲಿಲ್ಲ. ಕೇರಳಕ್ಕೆ ಏತಕ್ಕೆ ಹೋದರು? ಅದು ಕಾಂಗ್ರೆಸ್ ಪಕ್ಷದ ಆಂತರಿಕ ವ್ಯವಹಾರ. ಅಲ್ಲಿನ ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದ ವರ್ಕಿಂಗ್ ಕಮಿಟಿಯಲ್ಲಿದ್ದಾರೆ. ಅವರನ್ನು ಸುಪ್ರೀತಗೊಳಿಸಬೇಕಾಗಿತ್ತು. ಅದಕ್ಕೋಸ್ಕರ ಹೋಗುತ್ತಿದ್ದಾರೆ. ತಮಿಳ್ನಾಡಿನಲ್ಲಿ ಕೇಂದ್ರ ಸರ್ಕಾರದ ಗುಂಡಿ ಇದೆ. ತಮಿಳ್ನಾಡಿನ ಮುಖ್ಯಮಂತ್ರಿಗಳು ಆ ಗುಂಡಿ ಒತ್ತಿದರೆ ಸಾಕು ಕೇಂದ್ರದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ಅದನ್ನು ಅವರು ಕಾಪಾಡಿಕೊಳ್ಳಬೇಕು. ಕರ್ನಾಟಕ ರಾಜ್ಯದಲ್ಲಿ 23-24 ಜನ ಪಾರ್ಲಿಮೆಂಟ್ ಸದಸ್ಯರಿದ್ದಾರೆ. ಇವರು ಏತಕ್ಕೆ ಈ ಅಸ್ತ್ರ ಉಪಯೋಗಿಸಲಿಲ್ಲ? ಅದಕ್ಕಿಂತ ಮುಖ್ಯವಾಗಿ ಆಡಳಿತ ಪಕ್ಷ ಅಲ್ಲಿ ಇಲ್ಲಿ ಎಲ್ಲ ಒಂದೇ. ಎದುರುಗಡೆ ಇರತಕ್ಕವರು ಆಡಳಿತ ಪಕ್ಷದ ಸದಸ್ಯರು. ಇವರು ಕೇಂದ್ರಕ್ಕೆ ತಮ್ಮ ಪಕ್ಷಕ್ಕೆ ಗಡುವು ಕೊಟ್ಟು ಇಲ್ಲಿ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಲು ಕೇಂದ್ರ ಮಲತಾಯಿ ಧೋರಣೆ ತೋರಿಸದೆ ಸಮರ್ಪಕವಾದ ರೀತಿಯಲ್ಲಿ ನಮಗೆ ನೆರವು ಕೊಡದಿದ್ದರೆ ನಾವು ನಮ್ಮ ತೀರ್ಮಾನಕ್ಕೆ ಬರಬೇಕಾಗುತ್ತದೆಂಬ ಮಾತು ಇವರಲ್ಲಿ ಬರಲಿಲ್ಲ. ಬೇರೆ ರಾಜ್ಯದಿಂದ ಬಂದಿರತಕ್ಕ ಕಾಂಗ್ರೆಸ್ ಪಕ್ಷದವರು ಒಂದು ಕಡೆ ಇರಲಿ. ಯಾವ ಭಾಗದಲ್ಲಿ ಅನಾಹುತವಾಗಿ ಆ ಭಾಗದ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ಸೂಚಿಸಬೇಕಾಗಿತ್ತು. ಅದನ್ನು ಮಾಡಲಿಲ್ಲ. ಕೇಂದ್ರದಿಂದ ಕೊಡತಕ್ಕ ನೆರವು ಬರಬೇಕಾಗಿದೆ ಎಂದು ಅನೇಕ ಸ್ನೇಹಿತರು ಹೇಳುತ್ತಾರೆ. ನೆರವು ಕೊಟ್ಟರೆ ಸಂತೋಷ. ಆದರೆ ಕೊಡತಕ್ಕದ್ದು ಏನೆಂದರೆ ಯೋಜನೆಯಲ್ಲಿರತಕ್ಕ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ನಮಗೆ ಗ್ರಾಂಟ್ ಆಗಿ ಕೊಡತಕ್ಕದ್ದು ಏನೂ ಇಲ್ಲ. ಒಂದು ಪೈಸೆ ಕೂಡ ಗ್ರಾಂಟ್ ಇಲ್ಲ. ಪ್ಲಾನ್‌ನಲ್ಲಿರತಕ್ಕ ಹಣವನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ನಾಳೆ ಕೊಡುವುದನ್ನು ಇವತ್ತು ಕೊಡುತ್ತಾರೆ ಅಷ್ಟೆ. ಮುಂದೆ ಕೇಂದ್ರದಿಂದ ಬರತಕ್ಕ ಹಣಕ್ಕೆ ಇದನ್ನು ಜಮಾ ಮಾಡಿಕೊಳ್ಳುತ್ತಾರೆ. ಇದನ್ನು ಕೇಂದ್ರ ಸರ್ಕಾರ ಉದಾರವಾಗಿ ಮಾಡುತ್ತದೆಂಬುದು ನನಗಂತೂ ಇಲ್ಲ. ಇದು ಏನು ತೋರಿಸುತ್ತದೆಂದರೆ ಹಿಂದಿನ ಕಾಲದಲ್ಲಿ ರಾಜಮಹಾರಾಜರು ಚಕ್ರವರ್ತಿಗಳು ಇರುತ್ತಿದ್ದರು. ಅವರ ಹತ್ತಿರ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ ಅಡ್ಡಬಿದ್ದು ಸ್ವಾಮಿ ಕೊಡಿ ಎಂದು ಕೇಳುವ ಪರಂಪರೆ ಇತ್ತು. ರಾಜಮಹಾರಾಜರ ಕಾಲದ ಪರಂಪರೆಯನ್ನು ಈಗಲೂ ನಡೆಯುತ್ತಿದೆ. ಈಗ ಪ್ರಜಾಪ್ರಭುತ್ವ ಬಂದಿದೆ, ರಾಜಮಹಾರಾಜರು ಹೋಗಿದ್ದಾರೆ. ಪ್ರಜಾಪ್ರಭುತ್ವದ ಆಧಾರದ ಮೇಲೆ ಸರ್ಕಾರ ರಚನೆಯಾಗಿದೆ. ಆದರೂ ರಾಜಮಹಾರಾಜರ ಪರಂಪರೆ, ಊಳಿಗಮಾನ್ಯದ ಪರಂಪರೆಯನ್ನು ಇನ್ನೂ ಮುಂದುವರಿಸಿಕೊಂಡು ಬರುತ್ತಿರುವುದು ನನಗೆ ಖೇದವನ್ನುಂಟು ಮಾಡತಕ್ಕ ವಿಚಾರ. ಇವತ್ತು ರಾಜ್ಯ ಸರ್ಕಾರ ನೆರವನ್ನು ನೀಡುತ್ತಿದೆ. ಒಂದು ರೀತಿಯಲ್ಲಿ ಉದಾರವಾಗಿದ್ದೀರೆಂದು ಕೊಂಡಿದ್ದೇನೆ. ಆದರೆ ಉದಾರವಾಗಿದ್ದೀರಿ ಎಂದರೆ ಆಗಿರತಕ್ಕ ಅನಾಹುತಕ್ಕೆ ಸರಿದೂಗತಕ್ಕ ಉದಾರತ್ವವನ್ನು ತೋರಿಸಿದ್ದೀರಿ ಎಂದು ಭಾವನೆ ಅಲ್ಲ, ಹಿಂದೆಂದೂ ಆಗದೇ ಇರತಕ್ಕ ಪ್ರಮಾಣದಲ್ಲಿ ನಷ್ಟ ಆಗಿರುವುದರಿಂದ ಕೊಡತಕ್ಕ ಪ್ರಮಾಣವನ್ನು ಹೆಚ್ಚು ಮಾಡಿದ್ದೀರಿ. ಅದಕ್ಕೆ ನನ್ನ ಮೆಚ್ಚುಗೆ ಉಂಟೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ರೀತಿಯಲ್ಲಿ ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ತುಮಕೂರಿನಲ್ಲಿ ಮಳೆ ಹೆಚ್ಚಾಯಿತು. ಆಗ 300ರಿಂದ 400 ರೂಪಾಯಿ ಪರಿಹಾರ ಕೊಟ್ಟರು. ಅದರ ಮೇಲೆ ಇದುವರೆಗೂ ಕೂಡ ಒಂದು ಬಿಡಿಗಾಸೂ ಕೊಡತಕ್ಕ ಪ್ರಯತ್ನ ಆಗಿಲ್ಲ. ಅನಾಹುತ

ಆದಾಗ ಎಲ್ಲರೂ ಹೋಗುತ್ತಾರೆ. ಮನೆಗೆ ಬೆಂಕಿ ಬಿದ್ದ ಸಮಯದಲ್ಲಿ ಬಾವಿಯನ್ನು ತೋಡುತ್ತಾರೆ. ಬೆಂಕಿ ಆರಿದ ಮೇಲೆ ತೋಡುವ ಕೆಲಸ ಅಲ್ಲಿಗೆ ಬಿಡುತ್ತಾರೆ. ಪ್ರವಾಹ ತಪ್ಪಿಸಲು ಮುಂಜಾಗ್ರತೆ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಕ್ರಮಕ್ಕೆ ಸರ್ಕಾರ ಕೈ ಹಾಕಿಲ್ಲ. ಇದರಿಂದಾಗಿ ನಾವು ಪದೇ ಪದೇ ಪ್ರವಾಹದ ದವಡೆಗೆ ಸಿಕ್ಕುತ್ತಿದ್ದೇವೆ. ಈ ವರ್ಷದ ಪ್ರವಾಹದಲ್ಲಿ ಇನ್ನೊಂದು ಅಂಶ ಕಂಡುಬರುವುದು ಏನೆಂದರೆ, ಪ್ರಕೃತಿದತ್ತವಾಗಿ ಆಗಿರತಕ್ಕ ಪ್ರವಾಹದಲ್ಲಿ ಆದ ಅನಾಹುತ ಒಂದು ಕಡೆಯಾದರೆ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ, ಅಧಿಕಾರಿಗಳು ಗೇಟ್ ತೆಗೆಯತಕ್ಕ ಮತ್ತು ಮುಚ್ಚತಕ್ಕ ಕೆಲಸದಲ್ಲಿ ನಿರ್ಲಕ್ಷ್ಯತೆ ವಹಿಸಿದ್ದರಿಂದ ಆದ ಪ್ರವಾಹಕ್ಕಾಗಿ ಆ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೋ ನಮಗೆ ಗೊತ್ತಿಲ್ಲ. ತೆಗೆದುಕೊಂಡಿದ್ದರೆ, ಸರ್ಕಾರ ಉತ್ತರ ಕೊಡುವಾಗ ಅದನ್ನು ಹೇಳಬೇಕು. ಕಳೆದ ವರ್ಷಕ್ಕಿಂತಲೂ ಹಿಂದೆ, 1987ರಲ್ಲಿ ನಮ್ಮ ಜಿಲ್ಲೆಯಲ್ಲಿ ಮಳೆಯ ವಿಕೋಪದಿಂದ ಸಾಕಷ್ಟು ನಷ್ಟ ಆಯಿತು. ಆ ಸಂದರ್ಭದಲ್ಲಿಯೂ ಕೂಡ, ಸಂದರ್ಭಕ್ಕೆ ತಕ್ಕ ಹಾಗೆ ಏನೋ ಎಲ್ಲಾ ಬೆಳೆಗಳು ನಾಶವಾದವು. ಈ ಬಗ್ಗೆ ಸರ್ಕಾರಕ್ಕೆ ಎಷ್ಟರಮಟ್ಟಿನ ವರದಿ ಬಂದಿದೆಯೋ ನನಗೆ ಗೊತ್ತಿಲ್ಲ. ಈ ಬಗ್ಗೆ ಸರ್ಕಾರಕ್ಕೆ ವಿನಂತಿಸಿದ್ದರೂ ಯಾರೂ ನೋಡತಕ್ಕ ಸ್ಥಿತಿಯಲ್ಲಿ ಇಲ್ಲ. ಸುಮಾರು 50-60 ಸಾವಿರ ಎಕರೆಯಲ್ಲಿ ಆಲೂಗಡ್ಡೆ ಹೋಗಿದೆ. ಅಷ್ಟೇ ಪ್ರಮಾಣದಲ್ಲಿ ಟೋಮೋಟೋ ಹೋಗಿದೆ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಅನೇಕ ತರಕಾರಿ ಬೆಳೆಗಳು ನಾಶವಾಗಿವೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ರೇಷ್ಮೆಗೂ ಕೂಡ ಸಾಕಷ್ಟು ಅನಾಹುತವಾಗಿದೆ. ಇಷ್ಟು ಅನಾಹುತವಾಗಿದ್ದರೂ ಇದರ ಬಗ್ಗೆ ಇಲ್ಲಿಯವರೆಗೆ ಯಾವ ಕ್ರಮವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಕಳೆದವರ್ಷ ನಮ್ಮ ಜಿಲ್ಲೆಯಲ್ಲಿ 50 ರಿಂದ 60 ಸಾವಿರ ಮನೆಗಳು ಬಿದ್ದು ಹೋದವು. ನಾನು ಆಗಲೇ ಹೇಳಿದ ಹಾಗೆ 300 ರೂಪಾಯಿಗಳಂತೆ ಕೊಟ್ಟರು. ಅದರ ಮೇಲೆ ಇದುವರೆಗೂ 3 ಕಾಸೂ ಅವರಿಗೆ ತಲುಪಿಲ್ಲ. ಆ ಮನೆಗಳನ್ನು ಕಟ್ಟುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಚಾರಗಳೇ ಪ್ರಚಾರಗಳು. ಜಾಹಿರಾತು ಕೊಟ್ಟಿದ್ದೇ ಕೊಟ್ಟಿದ್ದು. ಆದರೆ ಒಂದು ತಾಲ್ಲೂಕಿನಲ್ಲಿ ಬಿಟ್ಟರೆ ಮಿಕ್ಕ ಯಾವ ತಾಲ್ಲೂಕಿನಲ್ಲಿ ಬಿದ್ದ ಮನೆಗಳನ್ನು ಕಟ್ಟಿಲ್ಲ. ಇದು ಯಾರಿಗೂ ಏಕೆ ಅರ್ಥವಾಗುತ್ತಿಲ್ಲ? ಜನರು ನಿಮ್ಮ ಮೇಲೆ ಬೀಳುವುದಕ್ಕೆ ಮೊದಲು ತುಮಕೂರು, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಆಗಿರತಕ್ಕ ಅನಾಹುತದ ಬಗ್ಗೆ, ಕಳೆದ ವರ್ಷ ಆದ ಅನಾಹುತದ ಬಗ್ಗೆ ಸರ್ಕಾರ ತಕ್ಷಣ ಗಮನಕ್ಕೆ ತೆಗೆದುಕೊಂಡು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಛೇರ್ಮನ್ :- ಇನ್ನು 7-8 ನಿಮಿಷಗಳಲ್ಲಿ ಮುಗಿಸಿ. ಇನ್ನೂ 22 ಸದಸ್ಯರ ಹೆಸರು ಪಟ್ಟಿಯಲ್ಲಿ ಇದೆ.

ಶ್ರೀ ವಾಟಾಳ್ ನಾಗರಾಜ್ :- ಎಲ್ಲಾ ಮುಗಿಸಿದ್ದೇನೆಂದು ಹೇಳಿ ಅರ್ಧ ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀಮತಿ ಮೋಟಮ್ಮ :- ಊಟಕ್ಕೆ ಟೈಮ್ ಆಯಿತು ಎಂದು.

ಶ್ರೀ ವಾಟಾಳ್ ನಾಗರಾಜ್ :- ಊಟಕ್ಕೆ ಏಳೋಣ, ಮತ್ತೆ ನಾಳೆ ಚರ್ಚೆಗೆ ಕುಳಿತುಕೊಳ್ಳೋಣ.

ಶ್ರೀ ಸಿ. ಬೈರೇಗೌಡ :- ವಿದ್ಯುತ್ ಸರಬರಾಜು ಬಗ್ಗೆ ನಾವು ಎಷ್ಟು ಚರ್ಚೆ ಮಾಡಿದರೂ ಸಹ ಇವತ್ತಿನ ದಿವಸ ಅದು ಸಾಲದು ಎಂದು ನನ್ನ ಭಾವನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಇದುವರೆವಿಗೂ ನಮಗೆ ಗೊತ್ತಿಲ್ಲ. ಇದರ ಜೊತೆಯಲ್ಲಿ ನಮ್ಮ ಇತರೆ ಸ್ನೇಹಿತರು ಸಾಲ ವಜಾ ಮಾಡಬೇಕು ಎನ್ನತಕ್ಕಂಥ ಕೆಲಸವನ್ನು ಮಾಡಿ ಎಂದು ಹೇಳುತ್ತಾ ಇದ್ದಾರೆ. ನಾನು ಸಾರಾಸಗಟಾಗಿ ಸಾಲವನ್ನು ವಜಾ ಮಾಡಿ ಎಂದು ಹೇಳುವಂಥವನಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ರೈತರಿಗೆ ಸಾಲ ಇದೆ. ನಾನು ಸರ್ಕಾರಕ್ಕೂ ಕೊಡತಕ್ಕ ಸೂಚನೆ ಏನೆಂದರೆ ಒಂದೇ ಸಾರಿ ಮಾತ್ರ, ಕಾನೂನು ಅನ್ವಯವಾಗುವಂತೆ, ಈಗಿರತಕ್ಕಂಥ ಸಾಲದ ಮೇಲೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಿ. ಇದು ಎಲ್ಲಾ ರಾಜ್ಯಗಳಿಗೆ ಅನ್ವಯವಾಗುವಂತೆ ಕೇಂದ್ರದವರು ಮಾಡಲಿ. ಮಾರ್ಚ್ ಎರಡೂವರೆ ತಿಂಗಳು ಇದೆ. ಒಂದು ಅವಧಿಯನ್ನು ನಿಗದಿ ಪಡಿಸಿ ಮಾರ್ಚಿ ಅಥವಾ ಜೂನ್ ತಿಂಗಳಿನಲ್ಲಿ ರೈತರು ಸಾಲ ವಾಪಸ್ಸು ಕೊಡುವುದಕ್ಕೆ ಅವಕಾಶವನ್ನು ದಯವಿಟ್ಟು ಕಲ್ಪಿಸಿಕೊಡಿ. ಕೊಟ್ಟ ಸಾಲವನ್ನು ವಜಾ ಮಾಡುತ್ತಾ ಇದ್ದರೆ ಖಜಾನೆಯಲ್ಲಿರತಕ್ಕಂತ ಹಣವೆಲ್ಲಾ ಈ ಸಾಲ ವಜಾ ಮಾಡುವುದಕ್ಕ ಹೋಗುತ್ತದೆ. ಹೀಗಾದರೆ ಯಾರೂ ಸರ್ಕಾರ ನಡೆವುದಕ್ಕೆ ಆಗುವುದಿಲ್ಲ. ಸಾಲ ಕೊಟ್ಟರೂ ಅದು ವಾಸ್ತವಿಕವಾಗಬೇಕೆ ವಿನಹ ಅದು ಏನೋ ಒಂದು ಹೇಳಬೇಕು ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ನನ್ನ ಸಲಹೆ ಏನಿದೆ ಅದು ವಾಸ್ತವಿಕ ಅಂಶಗಳಿಂದ ಕೂಡಿರತಕ್ಕದ್ದು. ಇದನ್ನು ಜಾರಿ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ದಯವಿಟ್ಟು ಇವತ್ತಿನ ದಿವಸ ಹೇಳಿ. ಪ್ರವಾಹ ಪೀಡಿತ ಪ್ರದೇಶದಲ್ಲಿ ನೀವು ಈ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಲೇಬೇಕಾಗುತ್ತದೆ.

ಇವತ್ತು ರೈತ ಬೆಳೆದ ಬೆಳೆ ಹಾಳಾಗಿ ಹೋದರೆ ಎಲ್ಲಿಂದ ಬಡ್ಡಿ ಮತ್ತು ಅಸಲು ಕೊಡುವುದಕ್ಕಾಗುತ್ತದೆ? ಆದ್ದರಿಂದಲೇ ಬಡ್ಡಿಯ ರಿಯಾಯಿತಿ ಕೊಡಬೇಕಾಗುತ್ತದೆಂದು ನನ್ನ ಆಗ್ರಹ ಇದೆ. ಸುಮಾರು 5-6 ಜಿಲ್ಲೆಗಳಲ್ಲಿ ಈ ಪ್ರವಾಹದ ಹಾವಳಿ ಆಗಿದೆ. ಉಳಿದಿರತಕ್ಕಂಥ ಸುಮಾರು 10-12 ಜಿಲ್ಲೆಗಳಲ್ಲಿ ಈ ಧೋರಣೆಯನ್ನು ನೀವು ಅಳವಡಿಸಿಕೊಂಡರೆ ಇದರಿಂದ ಸರ್ಕಾರಕ್ಕೆ ನ್ಯಾಯವಾಗಿ ಬರಬೇಕಾದ ಹಣ ಕೂಡ ಬರುತ್ತದೆ. ರೈತರ ಸಾಲವನ್ನು ಕೂಡ, ಸಾಲದ ಭಾರವನ್ನು ಇಳಿಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಇದನ್ನು ದಯವಿಟ್ಟು ತಾವು ಯೋಚನೆ ಮಾಡಬೇಕು ಎಂದು ಹೇಳಿ ನಾನು ಉಲ್ಲೇಖಿಸುತ್ತಿದ್ದೇನೆ.

ನಮ್ಮ ಜಿಲ್ಲೆಯಲ್ಲಿ ಆಗಿರತಕ್ಕಂಥ ಅನಾಹುತದ ಬಗ್ಗೆ ಮತ್ತೆ ಒಂದು ಸಾರಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1987ರಲ್ಲಿ ಅನಾಹುತವಾಗಿದೆ. ಅದರ ಪರಿಹಾರ ಕಾರ್ಯ ಇಲ್ಲಿಯವರೆಗೂ ಆಗಿಲ್ಲ. ಕಳೆದ ವರ್ಷದ ಕೆಲಸ ಆಗಿಲ್ಲ. ಹತ್ತಾರು ಕೆರೆಗಳು ಕಿತ್ತು ಹೋಗಿವೆ. ಅವುಗಳಲ್ಲಿ ಎಷ್ಟು ಕೆರೆಗಳನ್ನು ರೀಪೇರಿ ಮಾಡಿದ್ದಾರೆ, ಎಷ್ಟು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆಂದು ತಾವು ಉತ್ತರ ಕೊಡುವ ಸಂದರ್ಭದಲ್ಲಿ ದಯವಿಟ್ಟು ತಿಳಿಸಬೇಕು. ಒಟ್ಟಿನಲ್ಲಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಮನೆಗೆ ಬೆಂಕಿಬಿದ್ದ ಸಂದರ್ಭದಲ್ಲಿ ಬಾವಿ ತೋಡತಕ್ಕ ಕೆಲಸವನ್ನು ಖಂಡಿತ ಮಾಡುವುದು ಬೇಡ. ಪೂರ್ವ ಸಿದ್ಧತೆಗಳನ್ನು ಮೊದಲೇ ಮಾಡಿಕೊಳ್ಳಬೇಕು.

ನೀವು ರಾಜಕೀಯವಾಗಿ ನಿಮ್ಮ ವರ್ಚಸ್ಸನ್ನು ಬೀರುವುದರಲ್ಲಿ ವಿಫಲರಾಗಿದ್ದೀರಿ. ಇದು ನಿಮ್ಮ ರಾಜಕೀಯ ದಿವಾಳಿತನವನ್ನು ಎತ್ತಿ ತೋರಿಸುತ್ತಿದೆ. ಕೇಂದ್ರದಿಂದ ನೀವು ಯಾವ ನೆರವನ್ನು

ಪಡೆಯಬೇಕೋ ಅದನ್ನು ಪಡೆಯಬೇಕು. ಅವರು ಕೊಡತಕ್ಕಂಥ ನೆರವನ್ನು ನೀವು ಪಡೆಯದಿದ್ದರೆ, ಅವರು ಇದಕ್ಕೆ ಕಾರಣಕರ್ತರಲ್ಲ. ಪ್ರಕೃತಿ ವಿಕೋಪದಿಂದ ಆಗಿರತಕ್ಕ ನಷ್ಟಕ್ಕೆ ಕೇಂದ್ರದ ನೆರವು ಪಡೆಯಬೇಕೇ ವಿನಹ ನಾವು ಯೋಜನೆಗಳಿಂದ ಹಣವನ್ನು ತರುತ್ತಿದ್ದೇವೆ ಅದರಿಂದ ದೊಡ್ಡ ಸಾಧನೆ ಮಾಡುತ್ತೇವೆ ಎಂದರೆ ಅದು ನಿಮ್ಮ ದಿವಾಳಿತನ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

## ಪೊಲೀಸರಿದ್ದರೆ ನಿರ್ಭೀತಿಯ ಕೆಲಸ ಅಸಾಧ್ಯ

*ಶಾಸಕರ ಹಕ್ಕು ಬಾಧ್ಯತೆಗಳಿಗೆ ಬಹಳ ಗಮನ ನೀಡುತ್ತಿದ್ದ ಸಿ.ಬಿ. ವಿಧಾನಸಭೆಯಲ್ಲಿ ಪೊಲೀಸರು ಹಾಜರಿದ್ದುದನ್ನು ಪ್ರಸ್ತಾಪಿಸಿದಾಗ.....*

**ಶ್ರೀ ಸಿ. ಬೈರೇಗೌಡ** :- ಮಾನ್ಯ ಅಧ್ಯಕ್ಷಿಣಿಯವರೇ, ತಮ್ಮ ಗಮನಕ್ಕೆ ಮತ್ತೊಂದು ವಿಚಾರವನ್ನು ತರುವುದು ಏನೆಂದರೆ, ಇಲ್ಲಿ ನಾವು ನಿರ್ಭೀತಿಯಿಂದ ಕೆಲಸ ಮಾಡಬೇಕು. ಪೊಲೀಸಿನವರಿಗಾಗಲಿ, ಮತ್ತೊಬ್ಬರಿಗಾಗಲೀ ಇಲ್ಲಿ ಅವಕಾಶವಿಲ್ಲ. ನಾನು ತುರ್ತುಸ್ಥಿತಿ ಇದ್ದಂತಹ ಸಂದರ್ಭದಲ್ಲಿ ಈ ಸದನದ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅವತ್ತೂ ಕೂಡ ಪೊಲೀಸರು ಮೇಲೆ ಅಥವಾ ಇಲ್ಲಿ ಇರುತ್ತಾ ಇರಲಿಲ್ಲ. ಅನೇಕ ಸಂದರ್ಭಗಳಲ್ಲಿ ನಾನು ನೋಡಿದ್ದೇನೆ. ಆ ಕಡೆಯಲ್ಲಿ ಏಳೆಂಟು ಜನ ಕುಳಿತಿರುತ್ತಾರೆ. ಈ ಕಡೆ ಬಂದು ಕೆಲವರು ಕುಳಿತಿರುತ್ತಾರೆ. ಆಮೇಲೆ ಅಫೀಷಿಯಲ್ ಗ್ಯಾಲರಿಯಲ್ಲಿ ಸಹ ಕುಳಿತಿರುತ್ತಾರೆ. ತಮ್ಮ ಅನುಮತಿಯಿಲ್ಲದೆ ಯಾರೂ ಒಳಗಡೆ ಬರುವ ಹಾಗೆ ಇಲ್ಲ.

**ಉಪಾಧ್ಯಕ್ಷರು** :- ಗ್ಯಾಲರಿಯಲ್ಲಿ ಮೇಲ್ಗಡೆ ಕುಳಿತಿರುವವರು ಪೊಲೀಸ್ ಡಿಪಾರ್ಟ್‌ಮೆಂಟ್‌ನವರು ಅಲ್ಲ. ವಾಚ್ ಅಂಡ್ ವಾರ್ಡ್‌ನವರು.

**ಶ್ರೀ ಸಿ. ಬೈರೇಗೌಡ** :- ತಮ್ಮ ಅನುಮತಿಯಿಲ್ಲದೆ ಯಾರೂ ಒಳಗಡೆ ಬರುವ ಹಾಗೆ ಇಲ್ಲ. ಪೊಲೀಸಿನವರನ್ನು ಇಟ್ಟುಕೊಂಡು ಇಲ್ಲಿ ಕೆಲಸ ನಡೆಯುವುದಾದರೆ ಈ ಸದನಕ್ಕೆ ಎಷ್ಟರಮಟ್ಟಿಗೆ ಗೌರವ ಮತ್ತು ಭೂಷಣ ಎನ್ನತಕ್ಕಂಥಹದ್ದು ನನಗಂತೂ ಅರ್ಥವಾಗುತ್ತಿಲ್ಲ. ಏಕೆ ಅಂತಹ ಪರಿಸ್ಥಿತಿ. ಇವತ್ತಿನ ದಿವಸ ಏನಿದೆ ಇಲ್ಲಿ? ನಾವಿಲ್ಲಿ ನಿರ್ಭೀತಿಯಿಂದ ಕೆಲಸ ಮಾಡಬೇಕಾದರೆ ಪೋಲೀಸ್‌ನವರನ್ನು ಇಟ್ಟುಕೊಂಡು ಏನು ಮಾತನಾಡುವುದಕ್ಕೆ ಆಗುತ್ತದೆ? ಸದಸ್ಯರುಗಳ ಮೇಲೆ ಇಷ್ಟೊಂದು ಒತ್ತಡ ಏಕೆ? ಪೊಲೀಸ್‌ನವರನ್ನು ಈ ಸರ್ಕಾರ ಏತಕ್ಕೆ ಕರೆಯಿಸಿದೆ? ಅದರಲ್ಲೂ ಸ್ಪೆಷಲ್ ಬ್ರಾಂಚ್‌ನವರು ಇರತಕ್ಕ ಅವಶ್ಯಕತೆ ಇದೆಯೇ? ಅವರ ಅವಶ್ಯಕತೆ ಇಲ್ಲ. ದಯಟ್ಟು ಅವರು ಇನ್ನು ಮುಂದೆ ಇಲ್ಲಿರುವುದಕ್ಕೆ ಅವಕಾಶ ಕೊಡಬಾರದು. ಅವರನ್ನು ಹೊರಗಡೆ ಕಳುಹಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಉಪಾಧ್ಯಕ್ಷರು** :- ನಾನು ಹೇಳುವುದಕ್ಕೆ ತಾವು ಬಿಡಲೇ ಇಲ್ಲ. ಮಾನ್ಯ ಬೈರೇಗೌಡರು ಗ್ಯಾಲರಿ ಹತ್ತಿರ ಮೇಲೆ ಕುಳಿತಿರುವವರು ಪೊಲೀಸಿನವರು ಎಂದು ಹೇಳಿದ್ದಾರೆ. ಮೇಲೆ ಪೊಲೀಸಿನವರು ಇಲ್ಲ ವಾಚ್ ಅಂಡ್ ವಾರ್ಡ್‌ನವರು ಇದ್ದಾರೆ.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಮಾನ್ಯ ಬೈರೇಗೌಡರು ಮಾತನಾಡುತ್ತಾ, ಎನ್‌ಜಿಇಎಫ್ ಹಗರಗಣದ ಬಗ್ಗೆ ಸುದೀರ್ಘವಾಗಿ ಪ್ರಸ್ತಾಪಿಸಿದರು. ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ಸೂಚನೆಗಳಿಗೆ ಧನ್ಯವಾದಗಳನ್ನು ಅರ್ಪಿಸಿ, ಶ್ಲಾಘಿಸಿದ್ದರು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಸಿ. ಬೈರೇಗೌಡ (ವೇಮಗಲ್)ರ ಭಾಷಣ :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿರುವಂತಹ ಭಾಷಣವನ್ನು ವಿರೋಧಿಸಿ ಅತ್ಯಂತ ಪ್ರಮುಖವಾದಂತಹ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಾನು ಇಚ್ಛಿಸುತ್ತೇನೆ. ಹಿಂದೆ ಮೈಸೂರು ರಾಜ್ಯ ಇಡೀ ದೇಶದಲ್ಲೇ ಅಲ್ಲದೇ ಪ್ರಪಂಚದಲ್ಲೇ ಒಂದು ಮಾದರಿಯಾದಂತಹ ರಾಜ್ಯವಾಗಿತ್ತು. ಅಂದು ರಾಜ್ಯದಲ್ಲಿದ್ದಂತಹ ರಾಜರು ಅವರ ಬೆಂಬಲಕ್ಕೆ ನಿಂತರು ಅಂತಹ ಅಧಿಕಾರ ವರ್ಗ ಮೈಸೂರನ್ನು ಒಂದು ಮಾದರಿಯನ್ನಾಗಿ ಮಾಡಿದರು. ಅದಕ್ಕೆ ಅನೇಕ ಇತಿಹಾಸವಿದೆ. ನಾನು ಅದನ್ನೆಲ್ಲಾ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ.

ನೇರವಾಗಿ ವಿಷಯಕ್ಕೆ ಬರುವುದಾದರೆ ಇಡೀ ವಿಶ್ವದಲ್ಲಿ ಸಮಾಜವಾದಿ ಚಳವಳಿ ಫ್ರಾನ್ಸ್ ದೇಶದಲ್ಲಿ ಪ್ರಾರಂಭವಾಯಿತು. ಇದಕ್ಕೆ ಕಾರ್ಲ್‌ಮಾರ್ಕ್ಸ್‌ರವರು ಒಂದು ಸಿದ್ಧಾಂತವನ್ನು ರಚಿಸಲಿಕ್ಕೆ ಕೊಟ್ಟರು. ಕಾರ್ಲ್‌ಮಾರ್ಕ್ಸ್‌ರ ಸಿದ್ಧಾಂತ ರಷ್ಯಾ ದೇಶದಲ್ಲಿ ಜಾರಿಗೆ ಬಂದು ಅಲ್ಲಿರುವ ಉತ್ಪಾದನಾ ಸಾಧನಗಳೆಲ್ಲವೂ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟವು. ರಷ್ಯಾದಲ್ಲಿ ಆ ಪದ್ಧತಿ ಜಾರಿಯಾಗುವುದಕ್ಕೆ ಮೊದಲೇ ಮೈಸೂರಿನ ಮಹಾರಾಜರಾದವರು ಅವರು ವಂಶಪಾರಂಪರ್ಯವಾಗಿ ರಾಜಮನೆತನದಿಂದ ಬಂದಿದ್ದರೂ ಸಹಿತ ಈ ರಾಜ್ಯವನ್ನು ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸರ್ಕಾರೀ ಸ್ವಾಮ್ಯದ ಕಾರ್ಖಾನೆಗಳನ್ನು ಸ್ಥಾಪಿಸುವುದರಲ್ಲಿ ಪ್ರಥಮ. ರಷ್ಯಾದೇಶದಲ್ಲಿಯೂ ಸಹಿತ ಕಮ್ಯುನಿಸಂ ಅನ್ನುವುದು ಪ್ರಾರಂಭ ಆಗುವುದಕ್ಕಿಂತ ಮೊದಲು ಉತ್ಪತ್ತಿ ಸಾಧನಗಳು ಸರ್ಕಾರದ, ರಾಜ್ಯದ ವಶಕ್ಕೆ ಒಳಪಡುವ ಮೊದಲು ಇಲ್ಲಿಯ ಸರ್ಕಾರ ಅಂತಹ ಉದ್ದಿಮೆಗಳನ್ನು ಸ್ಥಾಪಿಸಿ ಕೀರ್ತಿ ಪಡೆದಿದೆ. ಇವತ್ತು ಮೈಸೂರು ಗಂಧದೆಣ್ಣೆಯ ಕಾರ್ಖಾನೆ, ಮೈಸೂರು ಲ್ಯಾಂಪ್ಸ್ ಮತ್ತು ಐಟಿಐಎಲ್ ಎಂಬ ಒಂದು ಸಂಸ್ಥೆ ಇತ್ತು. ಅದು ಮತ್ತು ರೆಮ್ಕೋ ಎಂಬ ಸಂಸ್ಥೆ ಇತ್ತು. ಇಂತಹ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿ ಸರ್ಕಾರದ ಸ್ವಾಮ್ಯದಲ್ಲಿ ಅತ್ಯಂತ ಪ್ರಮುಖವಾದ ಪಾತ್ರ ವಹಿಸಿ ರಾಜ್ಯಾಂಗದ ಬೊಕ್ಕಸಕ್ಕೆ ಈ ಸರ್ಕಾರೀ ಸ್ವಾಮ್ಯದ ಕಾರ್ಖಾನೆಗಳು ತಮ್ಮದೇ ಆದ ಕೊಡುಗೆಯನ್ನು ಕೊಡುತ್ತಿರುವ ಒಂದು ಪರಂಪರೆ ಈ ರಾಜ್ಯದಲ್ಲಿದೆ. ಆ ದೃಷ್ಟಿಯಿಂದ ಇವತ್ತಿನ ದಿವಸ ಸ್ವಾತಂತ್ರ್ಯ ಬಂದ ಮೇಲೂ ಸಹಿತ ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿದೆ. ಭದ್ರಾವತಿ ಉಕ್ಕಿನ ಕಾರ್ಖಾನೆ, ಗಂಧದೆಣ್ಣೆಯ ಕಾರ್ಖಾನೆಯ ಬಗ್ಗೆ ನಾನು ಅನೇಕ ಉದಾಹರಣೆಗಳನ್ನು ಹೇಳಿದ್ದೇನೆ. ಅದೇ ರೀತಿಯಲ್ಲಿ ಎನ್.ಜಿ.ಇ.ಎಫ್. ಅನ್ನತಕ್ಕಂತಹ ಕಾರ್ಖಾನೆ ಸಹ ಸ್ವಾತಂತ್ರ್ಯ ಬಂದ ಮೇಲೆ ಈ ರಾಜ್ಯವನ್ನು ಆಳತಕ್ಕಂತಹ ಮುಖ್ಯಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು ಬಹಳ ದೂರದೃಷ್ಟಿಯಿಟ್ಟುಕೊಂಡು ಈ

ಕಾರ್ಖಾನೆ ಸ್ಥಾಪಿಸಿದ್ದಾರೆ. ಈ ಕಾರ್ಖಾನೆ ಸ್ಥಾಪನೆ ಆದ ಕಾಲದಲ್ಲಿ ರಾಜ್ಯಗಳವರೇ ಅದರಲ್ಲಿ ಇಂಜಿನಿಯರ್‌ಗಳಾಗಿದ್ದರು. ರಾಜ್ಯದವರೇ ಇಂಜಿನಿಯರ್ ಆದ ಕಾರಣ ಜರ್ಮನಿ ದೇಶದ ತಾಂತ್ರಿಕಜ್ಞಾನವನ್ನು ಪಡೆದು ಅತ್ಯಂತ ಉತ್ತಮವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿಕೊಂಡು ಬಂದಿದೆ. ಅದನ್ನು ನಾವು ಕಂಡಿದ್ದೇವೆ. ಆದರೆ ಇವತ್ತಿನ ದಿವಸ ಕೋತಿ ಕೈಗೆ ಮಲ್ಲಿಗೆ ಹೂವು ಕೊಟ್ಟ ಹಾಗೆ ಆಗಿದೆ. ಮಾನ್ಯ ಅಧ್ಯಕ್ಷರೇ, ಯಾವತ್ತು ಇಲ್ಲಿ ಪ್ರಪಂಚದಾದ್ಯಂತ ಆಂದೋಲನ ಪ್ರಾರಂಭವಾಯಿತು. ಅದು ಮುಂದುವರೆಯಬೇಕಾಗಿದ್ದು, ಇವತ್ತು ಕೋತಿ ಕೈಗೆ ಮಲ್ಲಿಗೆ ಹೂವು ಕೊಟ್ಟಂತೆ ಈ ಪರಿಸ್ಥಿತಿಗೆ ಎನ್‌ಜಿಇಎಫ್ ಕಾರ್ಖಾನೆ ಬಂದಿದೆ. ಮಾನ್ಯ ಅಧ್ಯಕ್ಷರೇ, ಇತ್ತೀಚಿನ ಸರ್ಕಾರ ಅಥವಾ ಆಡಳಿತ ಮಂಡಳಿಯ ತೀರ್ಮಾನದಂತೆ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವಂತಹ ಒಂದು ತೀರ್ಮಾನ ಮಾಡಿಕೊಂಡಿದ್ದಾರೆ. ಆ ಆಡಳಿತ ಮಂಡಳಿಯವರು ಒಂದು ಶಿಫಾರಸ್ಸು ಮಾಡಿದ್ದಾರೆ. ಈ ಸಂಸ್ಥೆಯಲ್ಲಿರತಕ್ಕಂಥ ಶೇರು ಬಂಡವಾಳವನ್ನು ಹೆಚ್ಚಿಗೆ ಮಾಡಿ, ಹೆಚ್ಚಿಗೆ ಮಾಡಿದ ಶೇರುಗಳಲ್ಲಿ ಶೇಕಡ 35ರಷ್ಟು ಶೇರನ್ನು ಅಂತರರಾಷ್ಟ್ರೀಯ ಬಹುರಾಷ್ಟ್ರೀಯ ಸಂಸ್ಥೆಯಾದ ಎಬಿಬಿ ಸಂಸ್ಥೆಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಈಗ ಅದು ಸರ್ಕಾರದ ಒಪ್ಪಿಗೆಗೆ ಕಳಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆ ವಿಚಾರದಲ್ಲಿ ಎರಡೂ ಸದನಗಳ ಸಮಿತಿ ಎರಡು ವರದಿಯನ್ನು ಕೊಟ್ಟಿವೆ. ಅದೆಲ್ಲಾ ನನಗೆ ಗೊತ್ತಿದೆ. ಸಮಯದ ಅಭಾವವಿರುವುದರಿಂದ ನಾನು ಅವೆಲ್ಲವನ್ನೂ ವಿವರವಾಗಿ ಮಾತನಾಡಲು ಹೋಗುವುದಿಲ್ಲ. ಈ ಕಾರ್ಖಾನೆಗೆ ಸೀಮಿತವಾಗಿರುವಂತೆ ಈ ಶಾಸಕಾಂಗದ ವರದಿ ಬಂದಿದೆ. ಇದು 11ನೆಯ ವರದಿಯನ್ನು ಎನ್‌ಜಿಇಎಫ್ ಕಾರ್ಖಾನೆಗೆ ಸಂಬಂಧಪಟ್ಟಂತೆ ಕಳಿಸಿದ್ದಾರೆ. ಈ ವರದಿಯ ಬಗ್ಗೆ ನಾನು ಕಳೆದ ಬಾರಿ ಸುಮಾರು 2 ಘಂಟೆಗಳ ಕಾಲ ಕೇವಲ ಇದೊಂದು ವರದಿಯ ಮೇಲೆ ಮಾತನಾಡಿದ್ದೇನೆ. ಈ ಕಾರ್ಖಾನೆಯ ಆಡಳಿತ ವರ್ಗ ಯಾವ ರೀತಿ ನಡೆಸಿಕೊಂಡು ಬರುತ್ತಿದ್ದಾರೆ ಎಂಬ ಬಗ್ಗೆ ಈ 41ನೇ ವರದಿಯಲ್ಲಿರುವ ಕೆಲವು ಉದಾಹರಣೆಗಳನ್ನು ಮಾತ್ರ ನಾನು ಉಲ್ಲೇಖ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಸಾರ್ವಜನಿಕ ಉದ್ಯಮಗಳ ಸಮಿತಿ 41ನೇ ವರದಿಯಲ್ಲಿ ತನ್ನ ರೆಕಮೆಂಡೇಷನ್ಸ್‌ನ ಪ್ಯಾರಾ 2.26ರಲ್ಲಿ ಹೇಳಿದ್ದಾರೆ. ಅದು ಬಹಳ ಉದ್ದವಾಗಿದೆ. ಅವೆಲ್ಲವನ್ನೂ ಓದಲಿಕ್ಕೆ ಹೋಗುವುದಿಲ್ಲ. ಅಲ್ಲಿ ಉಪಯೋಗಿಸಿರತಕ್ಕ ಕೆಲವು ಪದಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

"The technology in the company could not properly diagnose the problem until the foolishness ಈ ಪದವನ್ನು ನಾನು ಒತ್ತಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ವರದಿಯಲ್ಲಿರತಕ್ಕ ಪದಗಳನ್ನು ಮಾತ್ರ ನಾನು ಉಪಯೋಗಿಸುತ್ತಿದ್ದೇನೆ.

Until the foolishness of the decision against the provision of certain essential facilitites and the production performance was pointed out by the technologists from Simon.

ಇಲ್ಲಿರತಕ್ಕಂಥ ಆಡಳಿತ ವರ್ಗ ಎಷ್ಟರಮಟ್ಟಿಗೆ ಇದೆ ಎಂದು ಅರ್ಥವಾಗುತ್ತದೆ. ಆವೊತ್ತಿನ ದಿವಸ ಈ ಆಡಳಿತ ವರ್ಗದಲ್ಲಿದ್ದಂತಹವರು ಅಂದರೆ, ಈ ರಾಜ್ಯದ ಒಬ್ಬ ಮುಖ್ಯ ಕಾರ್ಯದರ್ಶಿಗಳಾಗಿರತಕ್ಕಂಥವರು ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ

ಮಾಡತಕ್ಕಂಥ ಸಂದರ್ಭದಲ್ಲಿ, ಆ ಒಂದು ಆಡಳಿತ ವರ್ಗವನ್ನು ವರದಿಯಲ್ಲಿ ಏನಂತ ಕರೆದಿದ್ದಾರೆ ಅಂದರೆ, ಫೂಲ್ಸ್ ಅಂತ ಕರೆದಿದೆ. ಆ fool was made the Chief Secretary of the State.

ನಾನು ಅವರನ್ನು ಫೂಲ್ ಅಂತ ಕರೆಯುತ್ತಿಲ್ಲ ವರದಿಯಲ್ಲಿ ಹೇಳಿದ್ದಾರೆ. ಆ fool was made the Chief Secretary of the State. ಅಲ್ಲಿ ಅದನ್ನು ಸರಿಸಮಾಪ್ತಿ ಮಾಡತಕ್ಕ ಕೆಲಸ ಮಾಡಿ, ಫೂಲ್ ಅನ್ನುವುದರ ಬಗ್ಗೆ ಕನ್ನಡದಲ್ಲಿ ಹೇಳಬೇಕಾದರೆ, ಮೂರ್ಖ ಎಂದು ಹೇಳಬಹುದು. ಆ ಮೂರ್ಖರ ಕೈಗೆ ಈ ಕಾರ್ಖಾನೆಯನ್ನು ಕೊಟ್ಟ ಕಾರಣದಿಂದ, ಇವತ್ತು ಈ ಕಾರ್ಖಾನೆಯನ್ನು ಬೇರೆಯವರಿಗೆ ಕೊಡತಕ್ಕಂಥಾದ್ದು ಆಗುತ್ತಿದೆ. ಮತ್ತೆ ವರದಿಯನ್ನು ಪುನಃ ಉಲ್ಲೇಖ ಮಾಡಿ ಹೇಳುವುದಾದರೆ ಇನ್ನು ವರದಿಯ 2.27ರಲ್ಲಿ ಏನು ಹೇಳುತ್ತಾರೆಂದರೆ, ಅದನ್ನು ಪೂರ್ತಿಯಾಗಿ ಓದುತ್ತೇನೆ.

"The fact that the investment on Crane and pressurisation of the Winding Section was just about Rs. 30 lakhs further fortifies the foolishness of the decisions taken in this behalf against installation of pressurisation Chambers and the Crane ".

ಅದಕ್ಕೆ ಹಾಕಬೇಕಾಗಿರತಕ್ಕಂಥದ್ದು ಕೇವಲ 34 ಲಕ್ಷ ರೂಪಾಯಿ ಮಾತ್ರ. ಇದರಿಂದ ನಷ್ಟವಾಗಿರತಕ್ಕಂಥಾದ್ದು ಸುಮಾರು 4 ಕೋಟಿ ರೂಪಾಯಿ ಇದನ್ನು ವರದಿಯಲ್ಲಿ ಪ್ರಸ್ತಾಪ ಮಾಡಿರುವುದರಿಂದ ನಾನು ಪೂರ್ಣವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಇದನ್ನು ಸರಿಪಡಿಸಬೇಕು ಎಂಬುದರ ಬಗ್ಗ ಈ ವರದಿಯಲ್ಲಿ ಹೇಳಿದ್ದಾರೆ.

"The Committee recomends that the Government should sufficiently caution all their nominee Directors on the Board of Public Sector and their duty does not end with merely cautioning. expressing apprehension or Steaching gospel but in ensuring proper implmentation of the decisions taken in their collective wisdom and failure to do so would mean dereliction of their duty" ನಾನು ಈ ಪದವನ್ನು ಹೇಳುತ್ತಿಲ್ಲ. ಡಿರ್ಲಿಕ್ಷನ್ ಆಫ್ ಡ್ಯೂಟಿ ಎಂಬ ಬಗ್ಗೆ ವರದಿಯಲ್ಲಿ ಹೇಳಿದೆ. ಇದರ ಬಗ್ಗೆ ನಾನು ಹಿಂದೆ ಸುಮಾರು ಎರಡು ಘಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ಈ ವರದಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಹೇಳಿದ್ದೇನೆ. ಆದರೆ ಇಲ್ಲಿಯವರೆಗೂ ಕೂಡ ಸರ್ಕಾರ ಚಕಾರ ಎತ್ತಲಿಲ್ಲ. ಇದು ಆದ ನಂತರ ಮತ್ತೊಂದು ವರದಿ ಬಂದಿದೆ. ಇಡೀ ರಾಜ್ಯದ ಜನತೆಯ ಮುಂದೆ ಈ ವರದಿ ಇದೆ. ಸಾರ್ವಜನಿಕ ಉದ್ದಿಮೆಗಳ ಸಮಿತಿ ತನ್ನ 53ನೇ ವರದಿಯನ್ನು ದಿನಾಂಕ 29-4-92ರಲ್ಲಿ ಈ ಸದನಕ್ಕೆ ಅರ್ಪಿಸಿದೆ. ಇದರಲ್ಲಿ ಮೊದಲನೇ ಪುಟದಿಂದ ಕೊನೆಯ ಪುಟದವರೆಗೂ ಈ ಆಡಳಿತ ವರ್ಗವನ್ನು ಬರೀ ಬೆತ್ತಲೆಯಾಗಿ ನಿಲ್ಲಿಸಿದ್ದಾರೆ. ಆಗ ಯಾರು ಆಡಳಿತ ವರ್ಗದಲ್ಲಿದ್ದರೋ ಅವರಿಗೆ ಮಾನ ಮರ್ಯಾದೆ ಇಲ್ಲ. ನನಗೆ ಸಮಯ ಇಲ್ಲದೆ ಇರುವುದರಿಂದ ನಾನು ಅದನ್ನೆಲ್ಲಾ ಹೇಳಲಿಕ್ಕೆ ಹೋಗುವುದಿಲ್ಲ. ಈ ವರದಿಯಲ್ಲಿ ನಮೂದಾಗಿರತಕ್ಕಂಥಾದ್ದು ಒಂದನೆಯದು ಶೇರು ವರ್ಗಾವಣೆ, ಎರಡನೆಯದಾಗಿ

inflation of production figures by advanced crediting of incomplete production, consequent declaration or fictitious profits (c) default in pursusance of claim for commission of Rs. 247.73 lakhs..... in respect of Defence supplies made by M/s. AEG of West Germany to Government of India and repudiation of the claim by AEG ಎನ್ನತಕ್ಕದ್ದರ ಬಗ್ಗೆ ವರದಿ ಕೊಟ್ಟಿದ್ದಾರೆ. ಇದರಲ್ಲಿದ್ದ ನಾಲ್ಕು ಅಂಶಗಳನ್ನು ಹೇಳಿದ್ದಾರೆ. ನಾನು ಒಂದನೆಯ ವಿಚಾರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಶೇರಿನ ವರ್ಗಾವಣೆ ಮೊದಲನೆ ದಿಕ್ಕಿನಲ್ಲಿ ಹೇಳಿ ಯಾವ ರೀತಿ ಇದು ಆಗಲೇ ನಡೆಸಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. In respect of defence suppliess made by M/s. A.E.G., of West Germany to Government of India. ಇನ್ನು ಎರಡನೇ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಬ್ಸರ್ವೇಷನ್ಸ್ ಅಂಡ್ ರೆಕಮೆಂಡೇಷನ್ಸ್ ಆಫ್ ದಿ ಕಮಿಟಿ ಎಂಬುದರ 1.13ರಲ್ಲಿ ಏನಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. - Observation and Recommendations of the Committee :

In view of the seriousness of the above Developments, the Committee recommends that as the, then Chairman and Managing Director of the Company Sri. N.K. Prabhakar Rao was clearly responsible in this regard, stringent action may be taken against him".

ಇದು 1ನೇ ಪ್ಯಾರಾದಲ್ಲಿ, ಇನ್ನು 2ನೇ ಪ್ಯಾರಾದಲ್ಲಿ,

"In its view, the Board of Directors, especially the Government Nominees have acted as per the line indicated by the then Chairman and Managing Director without excrcising their independent judgement. The committee therefore recommends that a through enquiry should be ordered in this regard and necessary action taken against them". ಎಂದು ಇದೆ. ಅಂದ ಮೇಲೆ ತಾವು ಏನು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೀರಿ? ಸಮಿತಿಯಲ್ಲಿ ಇರತಕ್ಕ ಬೇರೆ ಡೈರೆಕ್ಟರ್‌ಗಳ ಮೇಲೂ ಹೇಳಿದ್ದಾರೆ, ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರತಕ್ಕವರ ಮೇಲೂ ಹೇಳಿದ್ದಾರೆ. ಇದೇ ರೀತಿಯಲ್ಲಿ ಇದು ಇನ್ನೂ ಎಲ್ಲಿಯವರೆಗೆ ನಡೆದಿದೆ ಎಂದರೆ, ಅಧಿಕೃತವಾದ ದಾಖಲೆಗಳನ್ನು ತಿದ್ದುವುದು, ದಾಖಲೆಗಳಲ್ಲಿ ಇಲ್ಲದೇ ಇರುವುದನ್ನು ದಾಖಲೆಗಳಿಗೆ ಸೇರಿಸುವುದು, ಇತ್ಯಾದಿ ಪ್ರಯತ್ನ ಈ ಕಂಪೆನಿಗೆ ಬರಬೇಕಾದ ಸುಮಾರು 5 ಕೋಟಿ ರೂ.ನಷ್ಟು ಎ.ಇ.ಜಿ.ನಿಂದ ಬರಬೇಕಾದ ಕಮೀಷನ್ ನಮ್ಮ ಲೆಕ್ಕದ ಪ್ರಕಾರ. ಆದರೆ ಆ ಕಂಪೆನಿಯಿಂದ ಲೆಕ್ಕದ ಪ್ರಕಾರವೇ ಸುಮಾರು 2.5 ಕೋಟಿ ರೂ. ಬರಬೇಕಾಗಿತ್ತು. ಈ ವಿಚಾರದಲ್ಲಿ ಈ ಸಮಿತಿಯವರು ಬಹಳ ಕೂಲಂಕುಷವಾಗಿ ಪರಿಶೀಲನೆ ಮಾಡಿ ಈ ವರದಿಯನ್ನು ಇವತ್ತು ಕೊಟ್ಟಿದ್ದಾರೆ. ಈ ವರದಿ ಪ್ರಿಂಟ್ ಆಗಿರುವ ಪ್ರತಿ ಪುಟದಲ್ಲೂ ಅಂಡರ್‌ಲೈನ್ ಮಾಡಿದ್ದಾರೆ. ಈ ಸಮಿತಿಯ ವರದಿಯ 3.36ರಲ್ಲಿ ಏನು ಹೇಳಿದ್ದಾರೆಂದರೆ

"Therefore, the committee strongly in no uncertain terms recommends that Criminal and Civil Proceedings as the case may be, should be initiated against him without any delay. The Goverment/ Company may also approach A.E.G., to withdrawn G.R. Sharma, from the company's Board and to dis-associate him from the A.E.G.'s dealings with the company".

ಎಇಜಿ ಕಂಪನಿಯವರು ಎನ್‌ಜಿಇಎಫ್‌ನಲ್ಲಿ ಒಬ್ಬ ಸ್ಪೈಅನ್ನು ಇಟ್ಟಿದ್ದಾರೆ.ಅವರ ಹೆಸರು ಡಿ.ಆರ್. ಶರ್ಮ ಎಂದು. ಅವರು ಈಗ ಇಲ್ಲ. ಅವರು ಕೆಲಸಕ್ಕೆ ಸೇರಿದಾಗಿನಿಂದ ತಮ್ಮ ಕೊನೆಯ ಉಸಿರನ್ನು ಎಳೆಯುವವರೆಗೂ ಸಹ ಅವರು ಎಇಜಿಯ ಸ್ಪೈ ಆಗಿ ಇಲ್ಲಿ ಕೆಲಸ ಮಾಡಿದ್ದಾರೆ. ಈ ಸಮಿತಿಯವರು ಹಿಂದೆ ಕೂಡ ಹೇಳಿದ್ದಾರೆ. ಈ ಕಂಪನಿಯಿಂದ ಇವರನ್ನು ದೂರ ಇಡಬೇಕು ಮತ್ತು ಇವರ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಆಕ್ಷನ್ ಕೂಡ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ಏನೂ ಮಾಡಿಲ್ಲ. ಇದು ಸಂಬಂಧಪಟ್ಟ ಒಬ್ಬ ಡೈರಕ್ಟರ್‌ರವರ ಮೇಲೆ ಹೇಳಿರತಕ್ಕದ್ದು. ಇದಾದ ಮೇಲೆ ಆ ಎನ್‌ಜಿಇಎಫ್ ಕಂಪೆನಿಯ ಅಧಿಕಾರಿಗಳಾಗಿರತಕ್ಕವರ ಮೇಲೂ ಕೂಡ ಈ ಸಮಿತಿಯ ವರದಿಯಲ್ಲಿದೆ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

Again on the Chairman and Managing Director ಛೇರ್ಮನ್ ಮ್ಯಾನೇಜಿಂಗ್ ಡೈರಕ್ಟರ್ ಆಗಿರತಕ್ಕವರ ಬಗ್ಗೆ ಈ ವರದಿಯಲ್ಲಿ ಏನು ಇದೆ ಎಂಬುದನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. "The Committee can only conclude that this confirms his own role in the default to pursue the Company's claim for Commission". ಸರ್ಕಾರ ಗಮನಿಸುವುದಿಲ್ಲ. ಏಕೆಂದರೆ ಇದು ಮುಕ್ಕಾಲು ವರ್ಷವಾಗಿದೆ ಸರ್ಕಾರದ ಕೈ ಸೇರಿ. ನೀವು ಗಮನಿಸುವುದಿಲ್ಲ. ನಮ್ಮ ಜಂಜಾಟದಲ್ಲಿ ನಿಮ್ಮ ಕುರ್ಚಿ ಉಳಿಸಿಕೊಳ್ಳುವಷ್ಟರಲ್ಲಿ ಯಾವ ಸಮಿತಿ ಏನು ವರದಿ ಕೊಟ್ಟಿದೆ ಏನು ಇದೆ ಎಂಬ ವಿಷಯ ಗೊತ್ತಿಲ್ಲ. ಸಮಿತಿಗಳು ಇದ್ದಾವೆ ಎನ್ನುವುದನ್ನು ಸರ್ಕಾರ ಮರೆತಿದೆ. ಅವರಿಗೆ ಅವರ ಕುರ್ಚಿಯನ್ನು ಬಿಟ್ಟರೆ ಬೇರೆ ಏನೂ ಕೂಡ ಇಲ್ಲ ಎಂದು ತಿಳಿದುಕೊಂಡಿದ್ದಾರೆ. ಈ ಸಭೆ ಕೂಡ ಇಲ್ಲವೆಂದು ತಿಳಿದುಕೊಂಡಿದ್ದಾರೆ. ನಮ್ಮ ಕೆಲಸ ನಾವು ಮಾಡಬೇಕಾಗಿದೆ. ಆದ್ದರಿಂದ ಈ ಕೆಲಸ ಮಾಡುತ್ತಿದ್ದೇವೆ. ಪದ ಉಪಯೋಗಿಸಿರತಕ್ಕದ್ದು. "The committe strongly initiationof the Criminal and Civil Proceeding as the case may be against Sr. Prabhakar Rao, former Chairman and Managing Director of the Company in regard to his role in the Commission Episode."

ಇವರು ಮುಖ್ಯಕಾರ್ಯದರ್ಶಿಗಳು ಆಗಿದ್ದರು. ಹಿಂದಿನ ವರದಿಯಲ್ಲಿ a fool was a chief Secretary. A Criminal was the Chief Secretary of the State. ಇದನ್ನು ನಾನು ಹೇಳುತ್ತಿಲ್ಲ. ವರದಿ ಹೇಳುತ್ತಿದೆ. ಅದೇ ರೀತಿಯಲ್ಲಿ ಇದು ಕಮೀಷನ್‌ಗೆ ಸಂಬಂಧಪಟ್ಟಿದ್ದು, ಆದರೆ ಅಲ್ಲಿ ಏನೂ ತಯಾರಿ ನಡೆಯದಿದ್ದರೂ ಸಹ, ಸಾಮಾನು ತಯಾರಾಗದೇ ಇದ್ದರೂ ಸಹ

ತಯಾರಾಗಿದೆ ಎಂದು ಲೆಕ್ಕ ಕೊಟ್ಟರು. ಒಂದು ಕಮಿಟಿ ಮಾಡಿ ಜಯರಾಮನ್ ಕಮೀಷನ್ ಎನ್ನತಕ್ಕ ಕಮಿಟಿಯ ವರದಿ ಆಯಿತು. ಅದರಲ್ಲಿ ನಾಲ್ಕು ಅಧಿಕಾರಿಗಳ ಮೇಲೆ ಗುರುತರವಾದಂತಹ ಒಂದು ಹೊರೆಯನ್ನು ಹೊರಿಸಿದ್ದಾರೆ. ಈ ಸಮಿತಿಯ ವರದಿಯಲ್ಲಿದೆ. ಅವರ ಹೆಸರುಗಳನ್ನು ಸಹ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬರು ಹೀರಾಲಾಲ್ ಎಂದು. ಈಗಲೂ ಕೂಡ ಅದರಲ್ಲಿ ಇದ್ದಾರೆ. ಹೀರಾಲಾಲ್ ಎನ್ನತಕ್ಕವರು ಈಗಲೂ ಕೂಡ ಇದ್ದಾರೆ. ಅವರಿಗೆ ಇವರು ಕೊಟ್ಟಿರತಕ್ಕದ್ದು ಏನು ಅಂದರೆ ರೆಕ್ಮಂಡೇಷನ್. ಅವರನ್ನು ಇವತ್ತು ಟೆಕ್ನಿಕಲ್ ಡೈರೆಕ್ಟರ್ ಆಗಿ ಮಾಡಿ ಕೂರಿಸಿದ್ದಾರೆ. ಅವರು ಎಲೆಕ್ಟ್ರಿಕಲ್ ಇಂಜಿನಿಯರ್ ಅಲ್ಲ. ಅದು ಎನ್‌ಜಿಇಎಫ್. ನ್ಯೂ ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ. ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಒಬ್ಬ ಮೆಕಾನಿಕಲ್ ಇಂಜಿನಿಯರ್ ಆಗಿರತಕ್ಕವರನ್ನು ಟೆಕ್ನಿಕಲ್ ಡೈರೆಕ್ಟರ್ ಎಂದು ಮಾಡಿದ್ದಾರೆ. He is not an Electrical Engineer.

He is the Technical Director now. His basic qualification is Mechanical. But he is the Technical Director in Electrical matters.

**Sri. D.B. Chandregowda :-** That is the mechanics of Electricals.

ಶ್ರೀ ಸಿ. ಬೈರೇಗೌಡ :- ಹೊಸ ಸಬ್ಜೆಕ್ಟ್, ಅಂತಹವರು ರೆಕ್ಮಂಡ್ ಮಾಡಿದ್ದಾರೆ. ಎನ್‌ಜಿಇಎಫ್ ಅನ್ನು ಎಬಿಬಿಗೆ ಕೊಡಿಯೆಂದು ಹೇಳಿದ್ದಾರೆ. ಆಮೇಲೆ ಅದಕ್ಕೆ ಬರುತ್ತೇನೆ. ಇದರಲ್ಲಿ ಹೀರಾಲಾಲ್ ಎನ್ನತಕ್ಕವರು ಎಕ್ಸಿಕ್ಯುಟಿವ್ ಡೈರೆಕ್ಟರ್ ಆಗಿದ್ದರು. ಕೆ.ಜಿ. ಷಣ್ಮುಖಪ್ಪ, ಬಿ.ಆರ್. ಶಾಂತಕುಮಾರ್ ಇನ್ನೊಬ್ಬರು ಇದ್ದಾರೆ ಒಟ್ಟು 4 ಜನ. ಅವರೆಲ್ಲರಿಗೂ ಬಡ್ತಿ ಕೊಟ್ಟು ಇವತ್ತು ಕಂಪನಿಯ ಗತಿ ಏನಾಗಿದೆ? ಇವತ್ತು ಒಂದೇ ವರ್ಷದಲ್ಲಿ 21 ಕೋಟಿ ರೂಪಾಯಿ ನಷ್ಟವಾಗಿದೆ. ಈ ವರ್ಷ ಏನೋ ಮಾರ್ಜಿನಲ್ ಲಾಭ ಬರುತ್ತದೆಂದು ಹೇಳುತ್ತಿದ್ದಾರೆ. ಅದಕ್ಕೆ ಆಮೇಲೆ ಬರುತ್ತೇನೆ. ಈ ವರದಿಯಲ್ಲಿ ಏನು ಹೇಳುತ್ತಿದ್ದಾರೆಂದರೆ, ಈ ಪ್ಯಾರಾ ಪೂರ್ತಿ ಓದುವುದಕ್ಕೆ ಇಷ್ಟಪಡುತ್ತೇನೆ. ಪ್ಯಾರಾ ನಂ. 3.52 ಅದು ಈ ರೀತಿ ಇದೆ.

"In the background of the findings/observations and recommendations of the Committee in Chapters I, II and III of this report, the Committee is of the view that there is need for revamping the Board of Directors of the Company as the N.G.E.F. Ltd., is a premier manufacturing company in the State Public Sector withs large capacity of technological manufacture, diversions and sophisticated equipments needed by the key sectors of economy, as the company also has high potential of rapid growth by utilising its well equipped factories, as well as skilled and technically qualified manpower. It is necessary that such a company is headed by an able person with technical and professional qualification, experience and competence who can give the much needed technical and operational thrust and direction in a dynamic and authoritative manner. The Committee recommends that these suggestions

of the Committee may be examined and implemented by the Government on priority".

This the recommendation of the committee. Till today, they have not implemented it. ಇವತ್ತಿನವರೆಗೂ ಕೂಡ ಈವೊಂದು ಸಮಿತಿಯ ವರದಿ ಏನಿದೆ, ಸಮಿತಿ ಏನನ್ನು ಸಲಹೆ ಮಾಡಿದೆ, ಯಾವ ಸಲಹೆಗಳನ್ನು ಕೂಡ ಸರ್ಕಾರ ಜಾರಿಗೆ ತಂದಿಲ್ಲ. ಆದ್ದರಿಂದ ಇವತ್ತು ಈ ಸಂಸ್ಥೆಯನ್ನು ಎಬಿಬಿಗೆ ಕೊಡತಕ್ಕ ಕೆಲಸ ನಡೆಯುತ್ತಿದೆ. ನಾನು ಮುಖ್ಯಮಂತ್ರಿಗಳಿಗೆ ಮೂರು ಕಾಗದಗಳನ್ನು ಬರೆದಿದ್ದೇನೆ. ಒಂದು ಕಾಗದವನ್ನು ಸವಿಸ್ತಾರವಾಗಿ 11-15 ಪುಟಗಳ ಕಾಗದ ಬರೆದಿದ್ದೇನೆ. ಅದಕ್ಕೆ ಇದುವರೆಗೆ ನನಗೆ ಸ್ವೀಕಾರವಾಗಿದೆ ಎನ್ನುವ ರಿಪ್ಲೈ ಬಂದಿಲ್ಲ. ಅದರಲ್ಲಿ ಈ ಸಮಿತಿಯ ರೆಕ್ಮಂಡೇಶನ್ ಏನಿದೆ ಅದನ್ನು ಕೂಡ ಹೇಳಿದ್ದೇನೆ. ಇದಕ್ಕೆ ಯಾರು ಕಾರಣ ಎನ್ನುವುದನ್ನು ಸಮಿತಿಯ ವರದಿಯನ್ನು ಉಲ್ಲೇಖಿಸಿ ನಾನು ಬರೆದಿದ್ದೇನೆ. ಅದರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ಹೇಳಿದ್ದೇನೆ. ಇದು ಯಾವುದೂ ಇದುವರೆಗೂ ಮಾಡಿಲ್ಲ. ಇದನ್ನು ಮಾರಾಟ ಮಾಡಬೇಕೆನ್ನುವುದು ನಡೆಯುತ್ತಿದೆ. ಇದರ ಚಿತ್ರವನ್ನು ಸ್ವಲ್ಪ ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ 10 ವರ್ಷಗಳಿಂದ ಇದು ನಡೆದಿರತಕ್ಕದ್ದು. ನಾನು ಎಲ್ಲ ವರ್ಷಗಳದ್ದು ಹೇಳುವುದಕ್ಕೆ ಹೋಗುವುದಿಲ್ಲ. ಪ್ರಾಫಿಟ್ ಆಫ್ಟರ್ ಟ್ಯಾಕ್ಸ್ 1992-93ರಲ್ಲಿ (-) 2089.05 ಲಕ್ಷ, 1991-92ರಲ್ಲಿ (-) 678.91, 1990-91ರಲ್ಲಿ 249.91 ನಾನು ಇಷ್ಟಕ್ಕೆ ನಿಲ್ಲಿಸುತ್ತೇನೆ. ಇದು ಏಕೆ ನಷ್ಟ ಅನುಭವಿಸುತ್ತಿತ್ತು? ಸಮಿತಿಯ ಎರಡು ವರದಿಗಳನ್ನು ಸರ್ಕಾರ ಜಾರಿಗೆ ತಂದಿದ್ದರೆ ಈ ನಷ್ಟವಾಗುತ್ತಿರಲಿಲ್ಲ. ಸಮಿತಿ ವರದಿಯನ್ನು ಕೊಟ್ಟಿದ್ದರೂ ಸಹ ಅದಕ್ಕೆ ಇರತಕ್ಕ ಕಾಯಿಲೆ ಏನು? ಆ ಕಾಯಿಲೆಗೆ ತಕ್ಕಂತೆ ಔಷಧಿಯನ್ನು ಸಮಿತಿಯ ವರದಿಯಲ್ಲಿ ಕೊಟ್ಟಿದ್ದರೂ ಸಹ ಔಷಧಿಯನ್ನು ಕೊಡುವುದಕ್ಕೆ ಬದಲಾಗಿ ಇವತ್ತು ಸರ್ಕಾರ ಕಂಪನಿಗೆ ವಿಷವನ್ನು ಕೊಡತಕ್ಕ ಒಂದು ಪ್ರಯತ್ನವನ್ನು ನಡೆಸಿದೆ. ಇವತ್ತು ಏನಾಗಿದೆ ಅಂದರೆ, ಎಬಿಬಿ ಸಂಸ್ಥೆಯಿದೆ, ಎಬಿಬಿ ಎನ್ನುವುದು ತಮಗೆ ಗೊತ್ತಿದೆ. ನಮ್ಮ ಭಾರತ ದೇಶದ ರೈಲ್ವೆಗೆ ಲೋಕೋಮೋಟಿವ್ಸ್ ಕೊಡತಕ್ಕ ಬಗ್ಗೆ ರಾಷ್ಟ್ರದಾದ್ಯಂತ ದೊಡ್ಡ ಕ್ಯಾಪ್ಚರ್ ಆಗಿದೆ. ಲೋಕಸಭೆಯಲ್ಲಿ ಕೂಡ ಅದರ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ಒಂದು ಸಮಿತಿಯಾಗಿದೆ. ಪಾರ್ಲಿಮೆಂಟ್ ಸಮಿತಿಗೆ ಇದುವರೆಗೆ ಕಾಗದಪತ್ರಗಳನ್ನು ಕೊಡುವುದಕ್ಕೆ ಇಷ್ಟಪಡುತ್ತಿಲ್ಲ. ರೈಲ್ವೆಮಿನಿಸ್ಟ್ರಿ. ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅಷ್ಟು ಬಲವಾಗಿದೆ. ಎಷ್ಟು ಬಲವಾಗಿದೆ ಎನ್ನುವುದಕ್ಕೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದಿರತಕ್ಕದ್ದನ್ನು ನೋಡಿದರೆ ಗೊತ್ತಾಗುತ್ತದೆ. ಒಂದು ಸಂಸದೀಯ ಸಮಿತಿಗೆ ತನ್ನ ದಾಖಲೆಗಳನ್ನು ಕೊಡುವುದಿಲ್ಲವೆನ್ನುವ ಒಂದು ನಿರ್ದಿಷ್ಟವಾದ ನಿಲುವನ್ನು ಕೇಂದ್ರ ರೈಲ್ವೆ ಇಲಾಖೆ ಪಡೆದಿರತಕ್ಕದ್ದು ಅಷ್ಟೆ ಇದಕ್ಕೆ ಒಂದು ನಿದರ್ಶನ. ಅದಕ್ಕೆ ಯಾರು ಕಾರಣಕರ್ತರಾಗಿದ್ದರು ಎಬಿಬಿಗೆ ಕಂಟ್ರಾಕ್ಟನ್ನು ಒದಗಿಸುವುದಕ್ಕೆ ಯಾರು ಕಾರಣಕರ್ತರಾಗಿದ್ದರು, ಅವರೇ ಈ ಎನ್‌ಜಿಇಎಫ್ ಅನ್ನು ಕೂಡ ಎಬಿಬಿಗೆ ವಹಿಸುವುದಕ್ಕೆ ಪ್ರಯತ್ನ ಇವತ್ತಿನ ದಿವಸ ನಡೆದಿದೆ. ಈ ರಾಜ್ಯದ ಆಡಳಿತದ ಮೇಲೂ ಸಹ ಅವರದು ಬಹಳ ಹಿಡಿತವಿದೆ. ಅಷ್ಟಿಷ್ಟಲ್ಲ ಬಹಳ ಹಿಡಿತವಿದೆ. ಇವತ್ತಿನ ದಿವಸ ನಮ್ಮ ಮುಖ್ಯಮಂತ್ರಿಗಳನ್ನು ಕೈಗೊಂಬೆಯಾಗಿ ಮಾಡಿಕೊಂಡಿದ್ದಾರೆ. ಲೋಕೋಮೋಟಿವ್ಸ್ ಕೊಡಿಸಿದ್ದಾರೆ. ಅವರು ನಿಮ್ಮನ್ನು ಕೈಗೊಂಬೆಯಾಗಿ ನಡೆಸುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ :– ಯಾರು?

ಶ್ರೀ ಸಿ. ಬೈರೇಗೌಡ :– ನಾನು ಹೆಸರು ಹೇಳಿದರೆ ನಮ್ಮ ಅಧ್ಯಕ್ಷರು ಕಡತದಿಂದ ತೆಗೆದುಹಾಕುತ್ತಾರೆ. ನೀವು ಅದಕ್ಕೆ ದೊಡ್ಡದಾಗಿ ಹೇಳುತ್ತೀರಿ, ಇದು ಆಗುತ್ತಾ ಇರುತ್ತದೆ. ಯಾರ್‍ಯಾರು ಎನ್‌ಜಿಇಎಫ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ ಅವರೆಲ್ಲರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಿಜವಾಗಲೂ ಕೂಡ ಅವರ ಹೆಸರನ್ನು ನೆನಸಿಕೊಳ್ಳುವುದಕ್ಕೆ ಅಷ್ಟೆ, ಸಂತೋಷವಾಗುತ್ತದೆ. ಈ ಸಮಿತಿಯ ವರದಿಯಲ್ಲಿ ಸಹ ಅವರ ಹೆಸರುಗಳನ್ನು ಸೇರಿಸಿದ್ದಾರೆ. ಸಮಿತಿಯ ವರದಿಯಲ್ಲಿ ಮೂರು ಹೆಸರುಗಳನ್ನು ಸೇರಿಸಿದ್ದಾರೆ. ಎಸ್.ಕೆ. ದಾಸ್, ಮತ್ತೊಬ್ಬರು ಅಂದಿನ ಸಿಎಂಡಿ ಆಗಿದ್ದವರು ಎಸ್.ಬಿ. ಮುದ್ದಪ್ಪ ಮತ್ತು ಕಾರ್ಖಾನೆಯ ಕೆ.ಆರ್. ಕೃಷ್ಣೇಗೌಡ ಅವರ ಹೆಸರುಗಳನ್ನು ಕೂಡ ಸೇರಿಸಿದ್ದಾರೆ. ಅವರ ಸೇವೆಯನ್ನು ಸ್ಮರಿಸಿದ್ದಾರೆ. ಅವರ ಹೆಸರುಗಳನ್ನು ಹೇಳುವುದಕ್ಕೆ ನನಗೂ ಕೂಡ ಅಷ್ಟೆ ಸಂತೋಷವಾಗುತ್ತದೆ ಅದು ಬೇರೆ. ಬಿಐಎಫ್‌ಆರ್ ಎನ್ನತಕ್ಕದ್ದು ಒಂದು ಇದೆ. ನಾನು ಆಗಲೇ ಹೇಳಿದ ಹಾಗೆ ಎನ್‌ಜಿಇಎಫ್ ಷೇರುಗಳನ್ನು ಶೇಕಡ 35ರಷ್ಟನ್ನು 38 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡುವುದಕ್ಕೆ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಶಿಫಾರಸು ಕಳುಹಿಸಿದ್ದಾರೆ. 38 ಕೋಟಿ ರೂಪಾಯಿ, ಇವತ್ತು ಎನ್‌ಜಿಇಎಫ್ ಕಾರ್ಖಾನೆಯ ಒಟ್ಟಾರೆ ಆಸ್ತಿಯನ್ನು ಲೆಕ್ಕ ಹಾಕಿದರೆ ಸುಮಾರು 400 ಕೋಟಿ ರೂಪಾಯಿಯಾಗುತ್ತದೆ. ಮಾರ್ಕೆಟ್ ರೇಟ್ ಪ್ರಕಾರ ಲೆಕ್ಕ ಹಾಕಿದರೆ ಸುಮಾರು 400 ಕೋಟಿ ರೂಪಾಯಿಯಾಗುತ್ತದೆ. 400 ಕೋಟಿ ರೂಪಾಯಿಯಲ್ಲಿ ಶೇಕಡ 35ರಷ್ಟು ಅಂದರೆ 140 ಕೋಟಿ ರೂಪಾಯಿಯಾಗುತ್ತದೆ. 140 ಕೋಟಿ ರೂಪಾಯಿ ಆಸ್ತಿಯನ್ನು ಸರ್ಕಾರ ಕೊಡುವುದಕ್ಕೆ ಅವರು ರೆಕ್ಮಂಡ್ ಮಾಡಿರತಕ್ಕದ್ದು ಇದೇ ಸರ್ಕಾರ ಏನು ಮಾಡುತ್ತದೋ ಏನೋ ಗೊತ್ತಿಲ್ಲ. ಅವರು ರೆಕ್ಮಂಡ್ ಮಾಡಿರತಕ್ಕದ್ದು 38 ಕೋಟಿ ರೂಪಾಯಿ. ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕು ಪತ್ರದಲ್ಲಿ ನಾನು ಬರೆದಿದ್ದೇನೆ. ನಾನು ಬರೆದಿರತಕ್ಕ ಪತ್ರವನ್ನು ತಾವು ಓದಿದ್ದೀರೋ ಏನೋ ಗೊತ್ತಿಲ್ಲ ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 140 ಕೋಟಿ ರೂಪಾಯಿ ಆಸ್ತಿಯನ್ನು ಕೇವಲ 38 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ನಮ್ಮ ಕಡೆ ಹೇಳುತ್ತಾರೆ. ಸೂಜಿ ಹಾಕಿ ದಬ್ಬಳ ಎತ್ತುವುದು ಎಂದು. ಇದು ಅದಲ್ಲ, ಸೂಜಿ ಹಾಕಿ ಬಂಗಾರದ ಬೆಟ್ಟವನ್ನು ಹೊತ್ತುಕೊಂಡು ಹೋಗುವುದು. ನನ್ನ ಪತ್ರದಲ್ಲಿ ತಿಳಿಸಿದ್ದೇನೆ. ಈ ಕೆಲಸಕ್ಕೆ ಕೈ ಹಾಕಬೇಡಿ. ಬೇರೆ ಬೇರೆ ಕಡೆಯಿಂದ ಬರಬಹುದಾದ ಹಣದ ಮೂಲ ಇದೆ. ಇವತ್ತು ಎನ್‌ಜಿಇಎಫ್ ಶೇರು ಬಂಡವಾಳ ಬೇರೆ ಕಾರ್ಖಾನೆಗಳಲ್ಲಿದೆ. ಎಇಜಿಯಲ್ಲಿ ಎನ್‌ಜಿಇಎಫ್ ಕಾರ್ಖಾನೆಯದು ಇದೆ. ಪತ್ರದಲ್ಲಿ ನಾನು ಬರೆದಿದ್ದೇನೆ. ಅದರ ಬಗ್ಗೆ ಸೂಕ್ಷ್ಮವಾಗಿ ಸಭೆಯ ಗಮನಕ್ಕೆ ತರುವುದಾದರೆ,

"NGEF holds about 75 of the equity in Karnataka Telecom Ltd".

ಟೆಲಿಕಾಮ್‌ನಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಹೇಳಬೇಕಾಗಿದೆ. ಹೋದ ವರ್ಷ ಇದು ಲಾಭದಾಯಕವಾಗಿತ್ತು. ಈಗಾಗಲೇ ಕೆಟಿಎಲ್‌ನ ಲಾಭ ಕಡಮೆಯಾಗುತ್ತಾ ಇದೆ. ಕಾರಣವೇನೆಂದರೆ, ಈ ಟೆಲಿಕಾಮ್ ವ್ಯವಸ್ಥೆಗೆ ಅಂತರರಾಷ್ಟ್ರೀಯ ಸಮಸ್ಯೆಗಳೆಲ್ಲಾ ಬಂದಿವೆ. ಎ.ಟಿ. ಅಂಟನಿ ಎನ್ನತಕ್ಕಂಥ ಅಮೇರಿಕಾದ ಸಂಸ್ಥೆ ಬಂದಿದೆ. ಜಪಾನ್‌ನಿಂದ ಒಂದು ದೊಡ್ಡ ಕಂಪನಿ ಬಂದಿದೆ. ಅದೇ ರೀತಿ ಫ್ರಾನ್ಸ್‌ನಿಂದ ಒಂದು ದೊಡ್ಡ ಕಂಪನಿ ಬಂದಿದೆ. ಇದು ಯಾವುದರ

ಮುಂದೆಯೂ ನಿಮ್ಮ ಕೆಟಿಎಲ್ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಇವತ್ತು ಭಾರತ ದೇಶದ ಎಲ್ಲಾ ದ್ವಾರಗಳನ್ನು ತೆಗೆದುಹಾಕಿದ್ದೀರಿ. ಬಹುರಾಷ್ಟ್ರೀಯ ಸಂಸ್ಥೆಗಳು, ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಬಂದು ವ್ಯಾಪಾರ ಮಾಡಬಹುದು, ಏನು ಬೇಕಾದರೂ ಮಾಡಬಹುದು ಎನ್ನುವುದಕ್ಕೆ ನೀವು ಮುಕ್ತದ್ವಾರಗಳನ್ನು ಕೊಟ್ಟಿದ್ದೀರಿ. ಆದ್ದರಿಂದ ನಿಮ್ಮ ಈ ಕೆಟಿಎಲ್ ಎನ್ನುವಂತಾದ್ದು ಒಂದು ಸಣ್ಣ it is not even a fry ಇದು ಸುಟ್ಟು ಬೂದಿಯಾಗುತ್ತದೆ. ಆದ್ದರಿಂದಲೇ ನಾನು ಇವತ್ತು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿರತಕ್ಕ ಎನ್‌ಜಿಇಎಫ್ ಶೇರು ಏನಿದೆ, ಅದನ್ನು ಮಾರಾಟ ಮಾಡಿದರೆ, ಸುಮಾರು ನಾಲ್ಕೂವರೆಯಿಂದ ಐದು ಕೋಟಿ ರೂಪಾಯಿಗಳ ಹಣ ಸಿಗುತ್ತದೆ. ಅದೇ ರೀತಿಯಲ್ಲಿ ಇವತ್ತಿನ ದಿವಸ ಅನವಶ್ಯಕವಾದ ಕೆಲಸವು ಇವೆ. ಮೈಸೂರು ಲ್ಯಾಂಪ್ಸ್ ವರ್ಕ್ಸ್‌ನಲ್ಲೂ ಎನ್‌ಜಿಇಎಫ್ ಶೇರ್ಸ್ ಇದೆ. ಅದನ್ನು ವಾಪಸ್ ತೆಗೆದುಕೊಂಡರೆ, 38.28 ಲಕ್ಷ ರೂಪಾಯಿ ಆಗುತ್ತದೆ. ಅದೇ ರೀತಿಯಲ್ಲಿ ಸ್ಟೆಲ್ ಎನ್ನತಕ್ಕಂಥ ಸಂಸ್ಥೆ ಇದೆ. ಈ ಸ್ಟೆಲ್ ಸಂಸ್ಥೆಗೂ ಸಹ 27.50 ಲಕ್ಷ ರೂಪಾಯಿ ಎನ್‌ಜಿಇಎಫ್ ಶೇರು ಇದೆ. ಅದೇ ರೀತಿಯಲ್ಲಿ ನಾನು ಆಗಲೇ ಹೇಳಿದಹಾಗೆ, ಎನ್‌ಜಿಇಎಫ್, ಎಇಜಿಯಲ್ಲಿ ಶೇಕಡ 50ರಷ್ಟು ಶೇರು ಇದೆ. ಇದನ್ನು ವಾಪಸ್ ತೆಗೆದುಕೊಂಡರೆ, ಅದು ಫೇಸ್ ವ್ಯಾಲ್ಯೂ ಇರತಕ್ಕಂಥಾದ್ದು 68 ಲಕ್ಷ ರೂಪಾಯಿ. ಆದರೆ, ಅದನ್ನು ಮಾರಾಟ ಮಾಡಿದರೆ, 6 ಕೋಟಿ ರೂಪಾಯಿ ಹಣ ಸಿಗುತ್ತದೆ. ಅದೇ ರೀತಿಯಲ್ಲಿ, ಎಇಜಿ ಸಂಸ್ಥೆಯೂ ಸಹ, ಇದರಲ್ಲಿ ಹೆಚ್ಚಿನ ಹಣವನ್ನು ಹಾಕುವುದಕ್ಕೂ ಕೂಡ ಉತ್ಸಾಹವಾಗಿದೆ. ನಾನು ಪತ್ರದಲ್ಲಿ ಎಲ್ಲವನ್ನೂ ವಿವರವಾಗಿ ತಿಳಿಸಿದ್ದೇನೆ. ಇಲ್ಲಿಯೂ ಕೂಡ ವಿವರವಾಗಿ ಹೇಳಬೇಕೆಂದಿದ್ದೆ. ಆದರೆ ಮುಖ್ಯಮಂತ್ರಿಗಳು ವಿಮಾನದಲ್ಲಿ ಹಾರುವವರಿದ್ದಾರೆ. ಅವರ ವಿಮಾನದ ವೇಗಕ್ಕೆ ನಾನು ಭಾಷಣ ಮಾಡುವುದಕ್ಕಾಗುವುದಿಲ್ಲ. ವಿಮಾನದ ವೇಗಕ್ಕೆ ಹೊಂದಿಕೊಳ್ಳುವುದಕ್ಕೆ ನನ್ನ ಕೈಲಿ ಸಾಧ್ಯವಾಗುತ್ತಾ ಇಲ್ಲ. ಇದೆಲ್ಲವನ್ನೂ ಕೂಡ ಪತ್ರದ ಮುಖೇನ ತಿಳಿಸಿದ್ದೇನೆ. ಆದ್ದರಿಂದ, ಇದರ ಮೇಲೆ ನಿಮ್ಮ ಗುರುತರವಾದಂಥ ಆರೋಪ ಬರುತ್ತದೆ. ನೀವೇನಾದರೂ ಕೂಡ ಎಡಿಡಿಗೆ ಇದರ ಷೇರನ್ನು ಮಾರಾಟ ಮಾಡತಕ್ಕ ಒಂದು ಸಂಚಿಗೆ ನೀವು ಒಳಪಟ್ಟರೆ, ನೀವು ಬಹಳ ಗುರುತರವಾದಂಥ ಆರೋಪವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ನೀವು ಇದನ್ನು ಮಾಡಬೇಡಿ ಮತ್ತು ನನ್ನ ಸಲಹೆ ಏನಿದೆ, ನಾನು ಪತ್ರದ ಮುಖೇನ ತಿಳಿಸಿದ್ದೇನೆ. ಇದನ್ನು ನೀವು ಯಾವ ಆರ್ಥಿಕ ತಜ್ಞರಿಗಾದರೂ ಕಳುಹಿಸಿಕೊಡಿ. ಅವರ ಮೂಲಕ, ಇದು ಸರಿ ಅಥವಾ ಇಲ್ಲ ಎನ್ನುವುದನ್ನು ಖಾತರಿಪಡಿಸಿಕೊಳ್ಳಿ. ಇಷ್ಟನ್ನು ಹೇಳುತ್ತಾ, ನೀವು ಬಹಳ ಬುದ್ಧಿವಂತರು. ದಕ್ಷಿಣ ಕನ್ನಡದವರು ಬಹಳ ಬುದ್ಧಿವಂತರು. ನಿಮ್ಮ ಬುದ್ಧಿ ಎಲ್ಲವೂ ದಕ್ಷಿಣ ಕನ್ನಡದವರ ಮೇಲೆಯೇ ಇರುತ್ತದೆ. ಈಗ ಕೆಟಿಎಲ್‌ಗೆ ಒಬ್ಬರು ಸಿಎಂಡಿ ಮಾಡಿದ್ದೀರಿ. ನನಗೆ ಎಷ್ಟು ಆಶ್ಚರ್ಯವಾಗುತ್ತದೆಂದರೆ, ಇವರು ನಿವೃತ್ತಿಯಾಗುತ್ತಾರೆ, ಯಾವಾಗ ನಿವೃತ್ತಿಯಾಗುತ್ತಿದ್ದಾರೆ, 6-3-94ರಂದು ನಿವೃತ್ತಿಯಾಗುತ್ತಿದ್ದಾರೆ. ಶ್ರೀ ಎಸ್. ನಾರಾಯಣಶೆಟ್ಟಿ ಎನ್ನತಕ್ಕವರು ಹಾಲಿ ಕೆಟಿಎಲ್‌ನಲ್ಲಿರತಕ್ಕವರು. ಇವರೂ ಕೂಡ ಎನ್‌ಜಿಎಇಫ್ ನಲ್ಲಿದ್ದರು. ಅವರ ಕತೆಯೂ ಕೂಡ ಗೊತ್ತಿದೆ. ಆದರೆ, ನಾನು ಹೇಳುವುದಕ್ಕೆ ಕಾಲದ ಅಭಾವದಿಂದ ಹೋಗಲಿಲ್ಲ. ಇವರು ಇದ್ದಂಥ ಕಾಲದಲ್ಲಿ ಏನೇನು ನಡೆಯಿತು ಎನ್ನುವುದನ್ನು ಹೇಳುವುದಕ್ಕೆ ಹೋಗಲಿಲ್ಲ. ಅವರು, ಅಲ್ಲಿ ನಿವೃತ್ತಿಯಾದ ಮೇಲೆ, ಇಲ್ಲಿ ತಂದು ಮರಿ ಹಾಕಿದರು. ಅಲ್ಲಿ ಸಾಲದು ಎಂದು ಹೇಳಿ, ಕೆಟಿಎಲ್‌ಗೆ ತಂದು ಹಾಕಿದರು. ಇವರನ್ನು ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಿಸಿಕೊಂಡಿದ್ದೀರಿ. ಅವರ

ಕಾಂಟ್ರಾಕ್ಟ್ ಮುಗಿಯತಕ್ಕ ಅವಧಿ 6-3-94ರಂದು. ಇವರನ್ನು ಪುನರ್ ನೇಮಕ ಮಾಡಲು ಆಜ್ಞೆ, ತಾ: 6-1-94ರಲ್ಲಿ ನೀವು ಪತ್ರ ಬರೆದಿದ್ದೀರಿ. ಕಂಪನಿ ಕಾರ್ಯದರ್ಶಿಗಳು, ಟೆಲಿಕಾಮ್ ನಿಯಮಿತ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು ಇವರಿಗೆ ಪತ್ರ, ಸಿಐ 251 ಸಿಸಿಎಲ್ 93.

ಈ ಪತ್ರದ ಮುಖಾಂತರ ತಾವು ಎಲ್ಲಿಯವರೆಗೂ ಅಂದ್ರೆ ಇನ್ನೂ ಅವರ ಅವಧಿ ಮುಗಿಯುವ ಹಾಗೆ ಇಲ್ಲ. ಆಗಲೇ ಅವರಿಗೆ ಅವಧಿಯನ್ನು ವಿಸ್ತಾರ ಮಾಡಿ ನಿಯಮ 118ರ ಮೇರೆಗೆ ಶ್ರೀ ಎಸ್. ನಾರಾಯಣಶೆಟ್ಟಿ ಇವರನ್ನು ಸದರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರನ್ನಾಗಿ 7-3-94ರಿಂದ ಅಂದ್ರೆ ಅವರ ಕಾಂಟ್ರಾಕ್ಟ್ ಅವಧಿ ಮುಗಿಯುತ್ತದೆಯಲ್ಲ ಅಲ್ಲಿಂದ 31-3-97ರವರೆಗೆ ಅಂದ್ರೆ 3 ವರ್ಷಗಳ ಕಾಲ ಇವರು ಇಲ್ಲಿ ಇವರ ಬಗ್ಗೆ ಹೇಳುವುದಕ್ಕೆ ಕಾರಣ ಇದೆ. ಸ್ವಲ್ಪ ದಯವಿಟ್ಟು ಕೇಳಬೇಕು ಸ್ವಾಮಿ. ನಾನು ಇವರನ್ನು ಆಗಲೇ ಬುದ್ದಿವಂತರು ಅಂತ ಹೇಳಿದ್ದು. ಕೆಲವು ದಿನಗಳ ಹಿಂದೆ ಇವರ ಕುರ್ಚಿ ಅಲ್ಲಾಡುತ್ತಿತ್ತು. ನನ್ನ ಕುರ್ಚಿ ಅಲ್ಲಾಡಿದರೂ ಕೂಡ ಚಿಂತೆ ಇಲ್ಲ ನಮ್ಮವರನ್ನು ಮುಂದುವರಿಸಿಕೊಂಡು ಹೋಗವುದಕ್ಕೆ ಇವರು ನಮ್ಮ ಜಿಲ್ಲೆಯವರು ನಮಗೆ ಸಂಬಂಧ ಇರುವವರು ಬಹುಶಃ ಇವರ ಕ್ಷೇತ್ರಕ್ಕೆ ಅವರ ಸಂಬಂಧ ಇದೆ ಅಂತ ನನಗನಿಸುತ್ತದೆ. ನನಗೆ ಅಲ್ಲಿಯವರೆಗೂ ಕೂಡ ಮಾಹಿತಿ ಇಲ್ಲ. ನಿಮ್ಮ ಜಿಲ್ಲೆಯವರು ಅಲ್ಲವೇ ಇವರು ಹೋಗಲಿ. ನಾನು ಹೇಳುತ್ತಿರುವುದು ನಿಮ್ಮ ಜಿಲ್ಲೆಯವರು ಅಂತ. ನಾವು ನೀವು ಎಲ್ಲರೂ ಒಂದೇ ರಾಜ್ಯದವರು.

ಶ್ರೀ ಎಂ. ವೀರಪ್ಪಮೊಯ್ಲಿ :- ಈಗ ತಾವು ಮಾತನಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಆಕಸ್ಮಾತ್ತಾಗಿ ಅವರು ನಮ್ಮ ಜಿಲ್ಲೆಯವರು. ಪ್ರಾಮಾಣಿಕವಾಗಿ ಆ ಪ್ರಪೋಜಲ್ ಬರುವವರೆಗೂ ಅವರಿಗೆ ಎಕ್ಸ್‌ಟೆಂಷನ್ ಕೊಡುತ್ತಾರೆಂದು ನನಗೆ ಗೊತ್ತಿರಲಿಲ್ಲ. ಸಾಧಾರಣವಾಗಿ ಈ ಇಲಾಖೆಯನ್ನು ಸನ್ಮಾನ್ಯ ರಾಜ್ಯ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿಯವರೇ ಮಾಡುತ್ತಾರೆ. ಅವರಿಂದ ಪ್ರಪೋಜಲ್ ಬರುವವರಗೂ ಕೂಡ ನನಗೆ ಗೊತ್ತಿಲ್ಲ. ಈ ಪ್ರಪೋಜಲ್ ಕ್ಯಾಬಿನೇಟ್‌ಗೆ ಬಂದಿದೆ ಅಪ್ರೂವಲ್ ಆಗಿದೆ ಮತ್ತೆ ತಮಗೆ ಗೊತ್ತಿದೆ. ಒಂದು ವಿಭಾಗದಲ್ಲಿ ಪರಿಣತಿ ಇದ್ದರೆ ಒಂದು ಸಂಸ್ಥೆ ಲಾಭದಾಯಕವಾಗಿ ನಡೆಯುವುದೇ ಕಷ್ಟ. ಒಂದು ಸಂಸ್ಥೆ ಲಾಭದಾಯಕವಾಗಿ ನಡೆಯುತ್ತಾ ಇದೆ ಅಂತ ಹೇಳಿದರೆ ಈಗ ತಾವೇ ಹೇಳುತ್ತೀರಿ ಸರಿಯಾದಂತಹ ಪ್ರಫೊಷನಲಿಜಂ ಆಡಳಿತ ಇರಬೇಕು ಅಂತ ಹೇಳಿ ಪ್ರಫೊಷನಲಿಜಂ ಅಂತ ಅಧಿಕಾರಿಗಳು ಇದ್ದರೆ ಅಂತಹ ಅಧಿಕಾರಿಗಳನ್ನು ಮುಂದುವರೆಸಿಕೊಂಡು ಹೋಗತಕ್ಕಂಥ ಪ್ರಸ್ತಾವನೆ ಬಂದಿದ್ದರಿಂದ ಮಾಡಿದ್ದೇವೆಯೇ ಹೊರತು ಅದರಲ್ಲಿ ನಮ್ಮ ಜಾತಿ ಅಲ್ಲ, ನಮ್ಮ ಸಂಬಂಧ ಅಲ್ಲ, ನಮ್ಮ ಕ್ಷೇತ್ರ ಅಲ್ಲ ಯಾವುದೂ ಅಲ್ಲ. ದಯಮಾಡಿ ಇದಕ್ಕೆಲ್ಲ ಬಣ್ಣದ ಲೇಪ ಹಚ್ಚಲಿಕ್ಕೆ ಹೋಗಬೇಡಿ. ನನಗೆ ಗೊತ್ತಾಯಿತು ತಾವು ಮೊದಲು ಒಂದು ಹೆಸರು ಪ್ರಸ್ತಾಪ ಮಾಡಿದ್ದೀರಿ. ಅದು ಬಹಳ ರೈವಲ್ ಅವರಿಗೂ ಇವರಿಗೂ ಇದ್ದದ್ದನ್ನು ತಾವು ಪಾಪ ಲಾಭ ಮಾಡಿಕೊಂಡು ಈಗ ಇದನ್ನು ಮೊದಲು ತಾವು ಒಂದು ಹೆಸರು ಹೇಳಿದ್ದೀರಲ್ಲ ನಾನು ಆ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆ ಹೆಸರು ಹೇಳಿದ ಕೂಡಲೇ ಗೊತ್ತಿತ್ತು ನನಗೆ ಇದು ಬಂದೇ ಬರುತ್ತದೆ ಅಂತ, ಹೇಳಿ ಏಕೆಂದರೆ ಇದೆಲ್ಲಾ ರೈವಲ್ಲರಿ. ಇಂಟರ್ ಫೈಟ್ ರೈವಲ್ಲರಿ ಇದೆಲ್ಲಾ ಅದನ್ನು ದಯಮಾಡಿ ನಾವು ನೀವು ಹಚ್ಚಿಕೊಳ್ಳುವುದು ಬೇಡ ಅವರವರು ಏನಾದರೂ ಮಾಡಿಕೊಳ್ಳಲಿ ನಾವೇಕೆ?

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ ನಾನು ಒಂದು ಹೆಸರು ಹೇಳಿಲ್ಲ. ಮೂರು ಹೆಸರು ಹೇಳಿದ್ದೇನೆ. ಅವರಲ್ಲಿ ಒಬ್ಬರನ್ನು ತಾವು ಈಗ ಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡಿದ್ದೀರಿ. ತಾವು ಅವರ ಬಗ್ಗೆ ಬಹಳ ಪ್ರಶಂಸೆ ಮಾಡಿದ್ದೀರಿ. ನಾನು ಪ್ರಶಂಸೆ ಮಾಡಿದ್ದೇನೆ. ಆ ವರದಿಯಲ್ಲಿ ಕೂಡ ನಮೂದು ಆಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ :- ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ಮಾತನಾಡುವಾಗ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ದಯಮಾಡಿ ನಾವು ರಾಜಕಾರಣಿಗಳು ಪರಸ್ಪರ ದೋಷಾರೋಪಣೆಗಳನ್ನು ಮಾಡಿಕೊಳ್ಳುತ್ತೇವೆ. ಸ್ವಲ್ಪ ನಾವು ಕಿಸ್ಸಿನ್ ಆಗಿಬಿಟ್ಟಿದ್ದೇವೆ. ಆದರೆ ಎಲ್ಲರೂ ಹಾಗೆ ಇದ್ದಾರೆಂದು ತಿಳಿದುಕೊಳ್ಳಬೇಡಿ. ಏಕೆಂದರೆ ಅನೇಕ ಪ್ರಾಮಾಣಿಕ ಅಧಿಕಾರಿಗಳು ಇರುತ್ತಾರೆ. ಅವರಿಗೂ ಕೂಡ ಪ್ರಾಮಾಣಿಕವಾಗಿ ಬದುಕಬೇಕು ಎನ್ನತಕ್ಕಂಥ ಆಸೆ ಇದೆ. ನಾವು ಇಲ್ಲಿ ಕುಳಿತುಕೊಂಡು ಮಾತನಾಡುವಾಗ ಅವರು ಯಾರ ವಿಚಾರ ಕೂಡ ಮಾತನಾಡಬೇಕಾದರೆ ಸ್ವಲ್ಪ ವಿಚಾರ ಮಾಡಿ ಮಾತನಾಡಿದರೆ ಒಳ್ಳೆಯದು. ನಮಗೇನು ನಮ್ಮ ಊರಿನಿಂದ ಒಬ್ಬರು ಬಂದರು, ನಮ್ಮ ಜಾತಿಯಿಂದ ಒಬ್ಬರು ಬಂದರು, ನಿಮ್ಮ ಜಾತಿಯಿಂದ ಒಬ್ಬರು ಬಂದರು ಅಂತ ಹೇಳಿ ಇವತ್ತು ಜಾತಿ ಇಟ್ಟುಕೊಂಡು ವೈಯಕ್ತಿಕವಾಗಿ ಆ ಮಟ್ಟಕ್ಕೆ ನಾವು ಇಲ್ಲಿ ಚರ್ಚೆ ಮಾಡಿದರೆ ಹೇಗೆ. ನಿಮ್ಮ ಊರು, ಜಾತಿ, ಜಿಲ್ಲೆ ಏನು ನಾವು ನಮ್ಮ ಊರಿನಲ್ಲಿ ಹುಟ್ಟಿದ್ದೇ ನಮ್ಮ ಜಿಲ್ಲೆಯಲ್ಲೇ ಹುಟ್ಟಿದ್ದು ಒಂದು ಪಾಪ ಆಗಿಬಿಟ್ಟಿದೆಯೇ? ಅಥವಾ ಕರ್ನಾಟಕ ರಾಜ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯವರು ನಾವು ಬಂದದ್ದೇ ಪಾಪಾನಾ? ದಯಮಾಡಿ ತಾವು ಆ ತರಹ ಎಲ್ಲಾ ಮಾತನಾಡಬೇಡಿ. ಜಿಲ್ಲೆ ಇಟ್ಟುಕೊಂಡು ಮಾತನಾಡಬೇಡಿ. ನಾನು ಏನಾದರೂ ತಪ್ಪು ಮಾಡಿದ್ದರೆ ನನ್ನ ಮೇಲೆ ಏನಾದರೂ ಆಪಾದನೆ ಇದ್ದರೆ ಅದನ್ನು ಎತ್ತಿಕೊಂಡು ಮಾತನಾಡಿ. ಆದರೆ ಒಂದು ಜಿಲ್ಲೆಯಿಂದ ಬಂದವರು ಒಂದು ಭಾಷೆ ಮಾತನಾಡುವವರು ಮತ್ತೊಂದು ಮಾತನಾಡಿದರು ಅಂತ ಅದೇ ಒಂದು ಪಾಪ ಅಂತ ಹೇಳಿ ಈ ಪ್ರಪಂಚದಲ್ಲಿ ಸಮಾಜದಲ್ಲಿ ಇದ್ದರೆ ತಾವು ಈ ಮಾತನಾಡುವುದು ಸರಿ. ಆದರೆ ಒಂದೇ ಜಿಲ್ಲೆಯಿಂದ ಬಂದವರು ಎನ್ನುವ ಮಾತ್ರಕ್ಕೆ ತಾವು ಅದನ್ನು ಎತ್ತಿ ಮಾತನಾಡತಕ್ಕ ಪ್ರವೃತ್ತಿ ಏನು ಇದೆ ಅದು ಅಷ್ಟು ತಮ್ಮಂತಹ ಹಿರಿಯರಿಗೆ ಶೋಭೆ ತರುವುದಿಲ್ಲ.

ಶ್ರೀ ಸಿ. ಬೈರೇಗೌಡ :- ಈ ಪ್ರಿನ್ಸಿಪಲ್ ಏನು ಇದೆ ಎಲ್ಲದ್ದಕ್ಕೂ ಕೂಡ ನಾನು ಒಪ್ಪುತ್ತೇನೆ. ದಯವಿಟ್ಟು ಕೇಳಿ ಹಾಗಾದರೆ, ಈ ವರದಿಗಳಲ್ಲಿ ಕೂಡ ಏನು ಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ. ಹೇಳಿ ನೋಡೋಣ ಏನು ಕಾರಣ ತೆಗೆದುಕೊಳ್ಳದೆ ಇರುವುದಕ್ಕೆ. ನೀವು ಹೇಳಿದಂತಹ ನೀತಿ ಏನು ಇದೆ ಈ ನೀತಿ ಎಲ್ಲಿಗೆ ಹೋಗಿದೆ ಸ್ವಾಮಿ. ಇದು ಎನ್‌ಜಿಇಎಫ್‌ಗೆ ಸಂಬಂಧಪಟ್ಟ ಹಾಗೆ ನಾನು ಆಗಲೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದೆ. 41ನೇ ವರದಿ ಮತ್ತು 53ನೇ ವರದಿಗಳಲ್ಲಿ ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಈ ಹಿಂದೆ ಪತ್ರ ಕೂಡ ಬರೆದಿದ್ದೇನೆ. ನೀವು ಏನು ಹೇಳುತ್ತಿರಲ್ಲ ಇದನ್ನು ಟೆಕ್ನೋಕ್ರೈಟ್ಸ್ ಹಾಕಿ ಅಲ್ಲಿಗೆ ಎಕ್ಸ್‌ಪೀರಿಯನ್ಸ್ ಇರತಕ್ಕಂಥವರನ್ನು ಹಾಕಿ ಅಂತ ಹೇಳಿದ್ದೇವೆ. ಇದರಲ್ಲಿ ಕೆಲವರು ಕ್ರಿಮಿನಲ್ ಅಫೆನ್ಸ್ ಮಾಡಿದ್ದಾರೆ. ಕೆಲವರು ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳಿ ಎನ್ನತಕ್ಕಂಥಾದ್ದು ಈ ವರದಿಯಲ್ಲಿದೆ. ಫೂಲ್ ಅಂತ ಕರೆದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎನ್ನತಕ್ಕಂಥ ಪತ್ರ ಬರೆದಿದ್ದೇನೆ. ಏಕೆ ಈ ನಿಯಮ ಇಷ್ಟು ಹೊತ್ತು ಹೇಳಿದ್ದೀರಲ್ಲ ಈ ನೀತಿಯನ್ನು ಏಕೆ ನಾನು ಪತ್ರ ಬರೆದಂತಹ ಸಂದರ್ಭದಲ್ಲಿ ಅನುಸರಿಸಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ :- ತಾವು ಪತ್ರ ಬರೆದಿದ್ದರ ಬಗ್ಗೆ ಇಂತಿಷ್ಟು ಪೇಜು ಅಂತ ಕೂಡ ನಾನು ಹೇಳಿದ್ದೇನೆ. ಆದ್ದರಿಂದ ನಿಮ್ಮ ಪತ್ರಕ್ಕೆ ಸಾಕಷ್ಟು ಗಮನ ಕೊಟ್ಟಿದ್ದೇನೆ. ತಾವು ಈ ಕೆಡಿಬಿ ಬಗ್ಗೆ ಏನು ಹೇಳಿದ್ದೀರಿ ಅದರ ಬಗ್ಗೆ ಕೂಡ ಅಷ್ಟು ಪ್ರಾಮಾಣಿಕವಾಗಿ ಹೇಳುವುದಿದ್ದರೆ ಏನು ಅವರವರ ಸ್ವಾಯತ್ತತೆ ಬಗ್ಗೆ ನಾನು ಅಷ್ಟು ಹೆಚ್ಚಾಗಿ ಇಂಟರ್‌ಫಿಯರ್ ಮಾಡುವುದಿಲ್ಲ. ಆ ಕೈಗಾರಿಕೆ ಏನು ಇದೆ ಅದನ್ನು ಆಡಳಿತ ಮಂಡಳಿಯವರು ತೆಗೆದುಕೊಂಡಿದ್ದಾರೆ. ಆಡಳಿತ ಮಂಡಳಿಯವರು ತೆಗೆದುಕೊಳ್ಳತಕ್ಕಂಥ ನಿರ್ಣಯದ ಬಗ್ಗೆ, ನಾವು ಏನಾದರೂ ಹಸ್ತಕ್ಷೇಪ ಎಂದಾದರೂ ಮಾಡಿದ್ದರೆ ಪ್ರಾಮಾಣಿಕವಾಗಿ ಹೇಳುವುದಾದರೆ ನಾನು ಮಾಡೇ ಇಲ್ಲ. ನಿರ್ಣಯ ತೆಗೆದುಕೊಂಡು ಆ ಪ್ರಸ್ತಾವನೆ ನಮ್ಮ ಸರ್ಕಾರಕ್ಕೆ ಬಂದ ಮೇಲೆ ನನಗೆ ಗೊತ್ತಾಯಿತು ನಾವು ನಮ್ಮ ಪ್ರೊಫೆಷನಲ್ ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ಅದು ನವಕರ್ನಾಟಕ ರಾಜ್ಯದ ಒಟ್ಟಾರೆ ಹಿತದೃಷ್ಟಿಯಿಂದ ಕೈಗಾರಿಕೋದ್ಯಮದ ದೃಷ್ಟಿಯಿಂದ ಸರಿಯಾಗಿದೆಯೇ ಇಲ್ಲವೇ ಎಂದು ನಾವು ಕರ್ನಾಟಕ ಸರ್ಕಾರದಿಂದ ಪರಿಶೀಲನೆ ಮಾಡುತ್ತಿದ್ದೇವೆ. ಸರ್ಕಾರದ ನಿರ್ಣಯ ನಾವು ಇನ್ನೂ ತೆಗೆದುಕೊಂಡಿಲ್ಲ. ಆ ನಿರ್ಣಯ ಆಡಳಿತ ಮಂಡಳಿ ಮಾಡಿದ್ದು ವಿ ಆರ್ ಟೇಕ್ ಓವರ್. ಅದ ಡಿಸಿಗ್ರೇಟ್ ಮಾಡತಕ್ಕಂಥಾದ್ದು ಅದು ಸರಿಯಾಗಿಯೋ ಇಲ್ಲವೋ ಎನ್ನುವ ವಿಮರ್ಶೆ ಇನ್ನೂ ನಡೆಯುತ್ತಾ ಇದೆ. ಪೊಲಿಟಿಕಲ್ ಅಫೇರ್ಸ್ ಕಮಿಟಿ ಕೂಡ ಮೊನ್ನೆ ತಾನೇ ಚರ್ಚೆ ಮಾಡಿದ್ದೇವೆ. ಅದನ್ನು ಡಿಪರ್ ಮಾಡಿದ್ದೇವೆ ಏಕೆಂದರೆ ಅದು ಸಾಕಷ್ಟು ಮಾಹಿತಿ ಸಂಗ್ರಹ ಮಾಡಬೇಕಾಗುತ್ತದೆ. ತಾವು ಹೇಳಿದಂತಹ ವಿಚಾರಗಳನ್ನು ಕೂಡ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಾ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡೇ ನಿರ್ಣಯ ತೆಗೆದುಕೊಳ್ಳಬೇಕೆ ಹೊರತು ನಾವು ಇನ್ನೂ ಏನೂ ನಿರ್ಣಯ ತೆಗೆದುಕೊಂಡಿಲ್ಲ ಹಾಗೆ ಇಟ್ಟಿದ್ದೇವೆ. ತಾವು ಈಗ ಏನೆಲ್ಲಾ ಪ್ರಸ್ತಾಪ ಮಾಡಿದ್ದೀರಿ ಅದನ್ನೆಲ್ಲಾ ಸಂಪೂರ್ಣವಾಗಿ ಗಂಭೀರವಾಗಿ ಪರಿಶೀಲನೆ ಮಾಡಿ ನಾವು ಮುಂದುವರೆಯುತ್ತೇವೆಯೋ ಹೊರತು ನಾವು ಯಾವುದೇ ರೀತಿಯಾದಂತಹ ಯಾರ ಪ್ರಭಾವಕ್ಕೆ ಒಳಗಾಗಿ ನಿರ್ಣಯ ತೆಗೆದುಕೊಳ್ಳುವ ಅಪೇಕ್ಷೆ ಇಲ್ಲ. ಇಚ್ಛೆ ಇಲ್ಲ. ಮತ್ತೆ ಯಾರಾದರೂ ಈ ಸಂಸ್ಥೆಯನ್ನು ಕಬಳಿಸಬೇಕು ಎನ್ನುವ ಉದ್ದೇಶದಿಂದ ಮಾಡಬೇಕು ಅಂತ ಹೇಳಿದರೆ ನಾವು ಸರ್ವತಾ ಅದಕ್ಕೆ ಮನ್ನಣೆ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ :- ಸ್ವಾಮಿ ತಾವು ಒಂದಕ್ಕೆ ಒಂದೊಂದು ನೀತಿಯನ್ನು ಅನುಸರಿಸಬೇಡಿ. ತಾವು ಏನು ಹೇಳಿದಿರಿ. ಅಲ್ಲಿರತಕ್ಕಂಥ ಆಡಳಿತ ಮಂಡಳಿಯಲ್ಲಿ ನಾವು ಹಸ್ತಕ್ಷೇಪ ಮಾಡತಕ್ಕಂಥಾದ್ದು ಸರಿಯಲ್ಲ ಅಂತೇ ಹೇಳಿದಿರಿ. ಇವತ್ತು ಈ ವರದಿಯಲ್ಲೇ ಹೇಳಿದ್ದಾರೆ ಸ್ವಾಮಿ ಇದು 41 ಮತ್ತು 53ನೇ ವರದಿಗಳಲ್ಲಿ ಹೇಳಿದ್ದಾರೆ. ನಿಮ್ಮ ಕಾರ್ಯದರ್ಶಿಗಳಾಗಿರತಕ್ಕಂಥವರು ಯಾವ ರೀತಿಯಲ್ಲಿ ಪತ್ರ ಬರೆದಿದ್ದಾರೆ. ತಾವು ಇದನ್ನು ಓದಿ. ಈಗಲೇ ಕಳುಹಿಸಿ. ತಮ್ಮ ಕಾರ್ಯದರ್ಶಿಗಳು ಸರ್ಕಾರದ ಕಾರ್ಯದರ್ಶಿಗಳು.

ಶ್ರೀ ಎಂ. ವೀರಪ್ಪಮೊಯಿಲಿ :- ಯಾವ ವರ್ಷ?

ಶ್ರೀ ಸಿ. ಬೈರೇಗೌಡ :- ನಿಮ್ಮ ಸರ್ಕಾರದಲ್ಲಿ ಕಾರ್ಯದರ್ಶಿಗಳಾಗಿದ್ದವರು. ಅಂದಿನ ಸರ್ಕಾರದಲ್ಲಿ ನೀವು ಮಂತ್ರಿಗಳಾಗಿದ್ದಿರಿ. ನೀವು ಸಹ ಮಂತ್ರಿಮಂಡಲದಲ್ಲಿ ಇದ್ದಿರಿ. ಅಂದು ನಿಮ್ಮ ಕಾರ್ಯದರ್ಶಿ ಅಂದ್ರೆ ಸರ್ಕಾರದ ಕಾರ್ಯದರ್ಶಿಗಳು. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಅಲೆಗ್ಸಾಂಡರ್‌ರವರು ಮತ್ತೇ ನಿಮ್ಮ ಗೋಪಾಲರೆಡ್ಡಿಯವರು ಏನೇನು ಪತ್ರ ಬರೆದಿದ್ದಾರೆ ಓದುವುದಕ್ಕೆ ಸಾಧ್ಯ ಇದೆಯೇ ಸ್ವಾಮಿ. ಯಾರಾದರೂ ಕಿಂಚಿತ್ತು ಪರಿಜ್ಞಾನ ಇರತಕ್ಕಂಥವರು ಇಂತಹ ಪತ್ರಗಳನ್ನು ಸೆಕ್ರಟರಿಯೇಟ್‌ನಲ್ಲಿ ಕುಳಿತುಕೊಂಡು ಅಲ್ಲಿನ ಸಿಎಂಡಿಯವರಿಗೆ ಬರೆಯುತ್ತಾರಲ್ಲ. ಅದನ್ನು ಓದಿದರೆ ಮೈಯಲ್ಲೇ ಉರಿಯುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಅಷ್ಟು ಇಂಟರ್‌ಫಿಯರೆನ್ಸ್ ನಿಮ್ಮ ಸರ್ಕಾರದಿಂದ ಆಗಿದೆ. ನೀವು ಇವತ್ತಿನ ದಿವಸ ನಾವು ಇಂಟರ್‌ಫಿಯರೆನ್ಸ್ ಆಗುವುದಿಲ್ಲ ಅಂತ ಹೇಳುತ್ತಾ ಇದ್ದೀರಿ. ಅದನ್ನು ನಾನು ಓದಬೇಕಾ? ಸರ್ಕಾರ ಅಂದ್ರೆ ಯಾರು ಸರ್ಕಾರದ ಕಾರ್ಯದರ್ಶಿಗಳು ಅಲ್ಲವೇ?

ಶ್ರೀ ಎಂ.ವೀರಪ್ಪಮೊಯ್ಲಿ :- ಯಾವ ವರ್ಷ? ನಾನು ಮುಖ್ಯಮಂತ್ರಿಯಾದ ಮೇಲೆ ಯಾವುದಾದರೂ ಹಸ್ತಕ್ಷೇಪ ಮಾಡಿರತಕ್ಕಂಥದ್ದು ಪ್ರಕರಣ ಇದ್ದರೆ ದಾಖಲೆ ಇದ್ದರೆ ಸದನಕ್ಕೆ ಒಪ್ಪಿಸಿ.

ಶ್ರೀ ವಾಟಾಳ್ ನಾಗರಾಜ್ :- ಅನೇಕ ಬಾರಿ ನೀವು ಸರ್ಕಾರ ಎಲ್ಲಾ ನಮ್ಮದೇ ಅಂತ ಹೇಳುತ್ತಿದ್ದಿರಿ. ಇವತ್ತು ಏಕೆ ಬೇರೆ ಅಂತ ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ :- ಅದು ನಮ್ಮ ಸರ್ಕಾರವೇ ಇಲ್ಲ ಅಂತ ಯಾರು ಹೇಳಿದರು?

ಶ್ರೀ ವಾಟಾಳ್ ನಾಗರಾಜ್ :- ಬಂಗಾರಪ್ಪ ಸರ್ಕಾರ ನಿಮ್ಮ ಸರ್ಕಾರ ಅಲ್ಲವೋ, ವೀರೇಂದ್ರ ಪಾಟೀಲ್ ಸರ್ಕಾರ ನಿಮ್ಮ ಸರ್ಕಾರ ಅಲ್ಲವೋ, ಕಾಂಗ್ರೆಸ್ ಸರ್ಕಾರ ನಿಮ್ಮ ಸರ್ಕಾರ ಅಲ್ಲವೋ?

ಶ್ರೀ ಎಂ. ವೀರಪ್ಪಮೊಯಿಲಿ :- 3 ಸರ್ಕಾರ ನಮ್ಮ ಸರ್ಕಾರ. ಜನತಾ ದಳ ಇದ್ದ ಸರ್ಕಾರ ಬೈರೇಗೌಡರು ಇದ್ದ ಸರ್ಕಾರ. ನಮ್ಮ ಸರ್ಕಾರ ನಮ್ಮ ಅಲೆಗ್ಸಾಂಡರ್ ಅವರ ಅಲೆಗ್ಸಾಂಡರ್. ಅವರ ಅಲೆಗ್ಸಾಂಡರ್ ನಮ್ಮ ಅಲೆಗ್ಸಾಂಡರ್ ಅಷ್ಟೇ. ಆದರೆ ಇದರಲ್ಲಿ ಎಲ್ಲ ನಾವು ಆ ವಿಚಾರವಾಗಿ ಏನು ನಿರ್ಣಯ ತೆಗೆದುಕೊಳ್ಳಬೇಕು? ನೀತಿ ವಿಷಯದಲ್ಲಿ ಒಬ್ಬೊಬ್ಬರು ಮುಖ್ಯಮಂತ್ರಿಯಾದ ಮೇಲೆ ಒಂದೊಂದು ಸರ್ಕಾರದಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾರೆ. ನಿಮ್ಮ ನಿರ್ಣಯದಲ್ಲಿ ಈ ವರ್ಷ ಏಕೆಂದರೆ ತಾವು ಈ ವರ್ಷದ ರಾಜ್ಯಪಾಲರ ನಿರ್ಣಯದ ಬಗ್ಗೆ ಮಾತನಾಡುತ್ತಿದ್ದೀರಿ. ರಾಜ್ಯಪಾಲರ ಭಾಷಣದ ಈ ಅವಧಿಯಲ್ಲಿ ನಾವು ಏನಾದರೂ ತಪ್ಪು ಮಾಡಿದ್ದರೆ ದಯಮಾಡಿ ಹೇಳಿ. ತಾವು ಹೇಳಿದಿರಿ ಪಬ್ಲಿಕ್ ಸೆಕ್ಟಾರ್ ಬಗ್ಗೆ ಆ ವರದಿಯಲ್ಲಿ ಏನಾದರೂ ಹೇಳಿದ್ದರೆ ಅದರ ಬಗ್ಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ ನಾನು ಓದಿಬಿಡುತ್ತೇನೆ. ಸರ್ಕಾರ ನಾವು ಇಂಟರ್ ಫಿಯರ್ ಆಗುವುದಿಲ್ಲ ಎನ್ನುವುದಕ್ಕೆ ಮಾನ್ಯ ಅಧ್ಯಕ್ಷರೆ ತಾವು ಹೇಳಿದರೆ ಓದೇ ಬಿಡುತ್ತೇನೆ. ಎಷ್ಟರಮಟ್ಟಿಗೆ ಹೆಜ್ಜೆ ಹೆಜ್ಜೆಗೂ ಸರ್ಕಾರದ ಇಂಟರ್‌ವೆನ್‌ಷನ್ ಇರತಕ್ಕಂಥಾದ್ದು ವರದಿಯಲ್ಲಿದೆ. ಹೆಜ್ಜೆ ಹೆಜ್ಜೆಗೂ ಕೂಡ ಮಾಡಿದ್ದಾರೆ. ಹೆಜ್ಜೆ ಹೆಜ್ಜೆಗೂ ಕೂಡ ಪತ್ರ ಹೋಗುತ್ತದೆ ಇಲ್ಲಿಂದ. ಅದೂ ಒಂದೇ ರೀತಿಯಲ್ಲಿರತಕ್ಕಂಥ ಪತ್ರವನ್ನು ಇಬ್ಬರು ಕಾರ್ಯದರ್ಶಿಗಳು ಬರೆಯುತ್ತಾರೆ.

ಉಪಾಧ್ಯಕ್ಷರು :- ತಾವು ಚರ್ಚೆ ಮುಂದುವರಿಸಿ.

ಶ್ರೀ ಸಿ. ಬೈರೇಗೌಡ :- ಒಂದೊಂದಕ್ಕೆ ಒಂದೊಂದು ನೀತಿಯನ್ನು ನೀವು ಅಳವಡಿಸಬೇಡಿರಿ. ಎಲ್ಲಾದಕ್ಕೂ ಒಂದೇ ನೀತಿ ಇರಲಿ. ಹಾಗಾದರೆ ಈ ಸಮಿತಿ ವರದಿಯಲ್ಲಿ ಈ ಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ, ತೆಗೆದುಕೊಳ್ಳುತ್ತೀರಾ ಸ್ವಾಮಿ? ನಾನು ಇವತ್ತು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಇರಲಿಲ್ಲ. ಏಕೆಂದರೆ ಬಿಐಎಫ್‌ಆರ್ ಮುಂದೆ ಇವರು ಹೋಗಬೇಕಾಗಿದೆ. 38 ಕೋಟಿ ರೂ. ಎಬಿಬಿ ಇಂದ ಪಡೆದ ಮೇಲೂ ಸಹ.

ಶ್ರೀ ವಾಟಾಳ್ ನಾಗರಾಜ್ :- ತಾವು ಸುದೀರ್ಘವಾಗಿ ಆಳವಾಗಿ ಅಭ್ಯಾಸ ಮಾಡಿ ಮಾತನಾಡುತ್ತಿದ್ದೀರಿ. ನನ್ನದು ಎರಡೇ ಪ್ರಶ್ನೆ ಸ್ವಾಮಿ. ಈ ಸರ್ಕಾರ ನೂತನ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರುತ್ತೀರಾ ಇಲ್ಲವೇ? ಇದು ಸುತ್ತಿಬಳಸಿ ಇಲ್ಲದೆ ನಿಮ್ಮನ್ನೇ ಕೇಳುತ್ತಿದ್ದೇನೆ. ಸರ್ಕಾರಿ ನೂತನ ಕಾರ್ಖಾನೆ ಅದೊಂದು ಒಳ್ಳೆಯ ಕಾರ್ಖಾನೆ, ಬಹಳ ಚೆನ್ನಾಗಿ ಬೆಳೆದಂತಹ ಕಾರ್ಖಾನೆ. ತಾವು ಆ ಶೇರುಗಳನ್ನು ಬೇರೆಯವರಿಗೆ ಮಾರುತ್ತೀರಾ? ಈ ಕಾರ್ಖಾನೆಯನ್ನು ಬೇರೆಯವರಿಗೆ ಮಾರುತ್ತೀರಾ? ಆ ಕಾರ್ಖಾನೆ ತಮ್ಮ ಕೈಯಲ್ಲೇ ನೂರಕ್ಕೆ ನೂರು ಉಳಿಯುತ್ತದಾ ಅಂತ ಹೇಳಿಬಿಟ್ಟರೆ.....

ಉಪಾಧ್ಯಕ್ಷರು :- ರಾಜ್ಯಪಾಲರ ಭಾಷಣದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳುತ್ತಾರೆ ಬೈರೇಗೌಡರೇ ಮುಂದುವರಿಸಿ.

ಶ್ರೀ ಸಿ. ಬೈರೇಗೌಡ :- ಅಧ್ಯಕ್ಷರೇ ಈ 38 ಕೋಟಿ ರೂ. ಹಣ ಪಡೆದ ಮೇಲೂ ಸಹ ಎಬಿಬಿ ಸಲಹೆ ಮೇರೆಗೆ ಅದು ಪುನಃ ಬಿಐಎಫ್‌ಆರ್ ಮುಂದೆ ಹೋಗಬೇಕಾಗಿದೆ. ಬಿಐಎಫ್‌ಆರ್ ಮುಂದೆ ಒಂದು ಸಾರಿ ಹೋದರೆ ಆ ಕಂಪೆನಿ ನಮ್ಮದಾಗುವುದಿಲ್ಲ. ಅವರು ಯಾರಿಗೆ ಬೇಕಾದರೂ ಕೊಟ್ಟು ಬಿಡಬಹುದು. ಇವತ್ತು ದಾರಿಗೆ ಹೋಗುವವರನ್ನು ಕರೆದು ನೀವು ಇಂತಹ ಕಂಡೀಶನ್ಸ್ ಹಾಕಿ ಈ ಕಂಪೆನಿಯನ್ನು ಮ್ಯಾನೇಜ್ ಮಾಡಿಕೊಳ್ಳಿ ಎಂದು ಯಾರಿಗೆ ಬೇಕಾದರೂ ಕೊಡುವಂತಹ ಅಪಾಯ ಇದೆ. ನನ್ನ ಸಲಹೆಗಳನ್ನು ನೀವು ಜಾರಿಗೆ ಕೊಡುವುದಾದರೆ ಬಿಐಎಫ್‌ಆರ್ ಮುಂದೆ ಹೋಗಬೇಕಾಗಿಲ್ಲ. ಆದ್ದರಿಂದ ಯಾವುದೇ ಪರಿಸ್ಥಿತಿ ಬಂದರೂ ಸಹ, ಇವರು ಪುನಃ ಬಹಳ ಬುದ್ಧಿವಂತಿಕೆ ಮಾಡುತ್ತಾರೆ. ಏಕೆಂದರೆ ಶೇಕಡ 51ರಷ್ಟು ಶೇರಿದ್ದರೆ ಅದು ಸರ್ಕಾರಿ ಕಂಪೆನಿಯಾಗುತ್ತದೆ. ಅದನ್ನು ಉಳಿಸಿಕೊಳ್ಳುತ್ತಿದ್ದಾರೆ. ಅವರದೂ ಕೂಡ ಉಳಿಸಿಕೊಳ್ಳಬೇಕೂಂತ. ಆದರೆ ಉಳಿಯಲು ಸಾಧ್ಯವಿಲ್ಲ. ಎಇಜಿಯದು ಇವತ್ತಾಗಲೇ 22.34 ಇದೆ, ಅದರ ಶೇರ್ ಕ್ಯಾಪಿಟಲ್ ಜಾಸ್ತಿ ಮಾಡಿದರೆ ಅದು 14ಕ್ಕೆ ಬರುತ್ತದೆ. ಅವರಿಗೆ 49 ಆಗುತ್ತದೆ. 49 ಆದರೂ ಸರ್ಕಾರಿ ಸ್ವಾಮ್ಯದ

ಕಂಪನಿಯಾಗಿಯೇ ಉಳಿಯುತ್ತದೆ ಎಂದು ಇವರು ಹೇಳುತ್ತಾರೆ. ಸ್ವಾಮಿ ಎಬಿಬಿಗೆ ನೀವೇನಾದರೂ ಕೊಟ್ಟರೆ ಎಇಜಿ ಮತ್ತು ಪ್ರಪಂಚದಲ್ಲೆಲ್ಲ ಕಾಂಪಿಟಿಟರ್ಸ್, ಒಬ್ಬರಿಗೊಬ್ಬರು ಸ್ಪರ್ಧೆ ನಡೆಯುತ್ತದೆ. ಎಇಜಿ ಒಂದು ನಿಮಿಷ ಕಂಪನಿಯಲ್ಲಿರುವುದಿಲ್ಲ. ಅವರು ಹೊರಟುಹೋಗುತ್ತಾರೆ. ಬಹುಶಃ ಎಬಿಬಿಗೇ ಆ ಶೇರ್ಸನ್ನು ಮಾರಾಟ ಮಾಡಿ, ಏಕೆಂದರೆ ಟೆಕ್ನಲಾಜಿಕಲಾಗಿ ಪ್ರಪಂಚದಲ್ಲೇ ಆ ವಿಷಯದಲ್ಲಿ ಕಾಂಪೀಟ್ ಮಾಡುತ್ತಿದ್ದಾರೆ. ಆ ಕಾರಣದಿಂದ ಒಬ್ಬರಿಗೊಬ್ಬರು ಕಾಂಪಿಟೇಟರಾಗಿ ಒಂದೇ ಕಡೆ ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಎಇಜಿ ತನ್ನ ಶೇರ್ಸನ್ನು ಮಾರಾಟ ಮಾಡುತ್ತಾರೆ ಪುನಃ ಅದು ಪೂರ್ತಿ ಎಬಿಬಿಗೆ ಹೋಗುತ್ತದೆ. ಇವತ್ತು ನೀವು 51 ಎಂದು ಉಳಿಸಿಕೊಂಡಿದ್ದೀರಿ, 49 ಎಬಿಬಿ ಆಗುತ್ತದೆ. ನಮ್ಮ ಅಧಿಕಾರಿಗಳು ಆಗಲೇ ಹೇಳಿದನಲ್ಲ ಕೆಲವರದೆಲ್ಲ ಕ್ರಿಮಿನಲ್ಸ್ ಮೈಂಡ್ಸ್, ಅಂತಹವರನ್ನೆಲ್ಲ ಅಲ್ಲಿ ಹಾಕುತ್ತಾರೆ. ಇಲ್ಲಿ ನಡೆಸುವವರೂ ಸರಿಯಾಗಿ ನಡೆಸುತ್ತಾರೆಂಬ ನಂಬಿಕೆ ನನಗೆ ಇಲ್ಲ. ಇವತ್ತಲ್ಲ ನಾಳೆ ಈ ಸರ್ಕಾರಿ ಸ್ವಾಮ್ಯದ ಕಂಪೆನಿ ಖಾಸಗಿಯವರಿಗೆ ಹೋಗುತ್ತದೆ. ಆಗಲೇ ಹೇಳಿದಂತೆ ಸೂಜಿ ಹಾಕಿ ಬಂಗಾರದ ಬೆಟ್ಟವನ್ನೇ ಹೊತ್ತುಕೊಂಡು ಹೋಗುವಂತಹ ಹವಣಿಕೆ ಇವತ್ತು ನಡೆಯುತ್ತಿದೆ. ಹಾಗಾಗಿ ಈ ಕಂಪೆನಿ ಎಬಿಬಿ ವಶಕ್ಕೆ ಹೋಗುತ್ತದೆ. ಅಂತಹ ಕೆಲಸವನ್ನು ಈ ರಾಜ್ಯದ ಹಿತದಿಂದ ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ನೀವು ಕ್ಯಾಟಗರಿಕಲಾಗಿ ಹೇಳಬೇಕಾಗುತ್ತದೆ. ಈಗಿರುವ ನಿಮ್ಮ ಶೇರ್ಸ್ 77.40 ಏನಿದೆ ಅದಕ್ಕಿಂತ ಯಾವುದೇ ಕಾರಣಕ್ಕೂ ನಾವು ಕಡಮೆ ಮಾಡುವುದಿಲ್ಲ. ಯಾವುದೇ ಪರಿಸ್ಥಿತಿಯಲ್ಲಿ ಖಾಸಗಿಯವರಿಗೆ ಇದನ್ನು ವಹಿಸಿ ಕೊಡುವಂತಹ ಕೆಲಸಕ್ಕೆ ಸರ್ಕಾರ ತೀರ್ಮಾನ ಮಾಡುವುದಿಲ್ಲ ಎಂದು ಈ ಸದನದ ಮೂಲಕ ರಾಜ್ಯದ ಜನತೆಗೆ ಆಶ್ವಾಸನೆ ಕೊಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಬೈರೇಗೌಡರು ಬಹಳ ಅಧ್ಯಯನ ಮಾಡಿದ್ದಾರೆ. ಮುಖ್ಯವಾಗಿ ಸಾರ್ವಜನಿಕ ರಂಗದ ಬಗ್ಗೆ ಏಕೆಂದರೆ ಸಾರ್ವಜನಿಕರಲ್ಲಿ ಏನು ಶಂಕೆ ಇದೆ ಅದನ್ನು ತಾವು ಪ್ರತಿನಿಧಿಸಿದ್ದೀರಿ. ಅದರಲ್ಲೇನೂ ತಪ್ಪಿಲ್ಲ. ಏಕೆಂದರೆ ನಿಮ್ಮ ಎಲ್ಲ ಪತ್ರಗಳನ್ನೂ ನಾನು ಕೂಲಂಕುಷವಾಗಿ ಓದಿದ್ದೇನೆ. ಅದಕ್ಕೆ ನಿಮ್ಮ ಕೊನೆಯ ಪತ್ರದಲ್ಲಿ ಇಷ್ಟು ಪುಟಗಳಿತ್ತು ಎಂದು ಹೇಳಿದೆ. ನಿಮ್ಮ ಪತ್ರಗಳಿಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದೇನೆ ಎಂದರೆ ಪೊಲಿಟಿಕಲ್ ಅಫೇರ್ಸ್ ಕಮಿಟಿ ನಡೆದಾಗ ಆ ಪತ್ರಗಳನ್ನೇ ನಾನು ಎದುರಿಟ್ಟು ಅನೇಕ ವಿಚಾರಗಳ ಬಗ್ಗೆ ವಿಶ್ಲೇಷಣೆ ಕೂಡ ಮಾಡಿದ್ದೇನೆ. ಆ ವಿವರಕ್ಕೆ ಆಮೇಲೆ ಬರುತ್ತೇನೆ. ತಮ್ಮ ಯಾವುದೇ ಟೀಕೆಗಳನ್ನು ಪ್ರಾಮಾಣಿಕವಾಗಿ ಗ್ರಹಿಸುತ್ತೇವೆ. ರಚನಾತ್ಮಕವಾಗಿವೆ, ಒಳ್ಳೆಯ ಸೂಚನೆ ಕೊಟ್ಟಿದ್ದೀರಿ, ಅದಕ್ಕೆ ಧನ್ಯವಾದಗಳು.

## ಗಾಂಧಿ ತತ್ವ ಒಪ್ಪಿಲ್ಲ 20-3-73

ಮಂತ್ರಿಗಳು ಒಬ್ಬರಿಗೊಬ್ಬರು ಸ್ನೇಹದಿಂದ ಕೆಲಸ ಮಾಡುತ್ತಿಲ್ಲ ಎಂಬ ಪ್ರಸ್ತಾಪಕ್ಕೆ ಸಿ.ಬಿ. ಹೇಳಿದ್ದು ದೇಶದಲ್ಲಿ ವಾಕ್ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆ. ಮಂತ್ರಿಗಳಾಗಲೀ ಯಾರೇ ಆಗಲಿ ಈ ತರಹ ಹೇಳಬಾರದು ಎಂದು ಹೇಳುತ್ತಿಲ್ಲ. ಗಾಂಧೀವಾದ ಅವೈಜ್ಞಾನಿಕ ಎನ್ನುವವರು ಇದ್ದಾರೆ. ಗಾಂಧೀವಾದದ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಒಂದು ರೀತಿಯಲ್ಲಿ ಹೇಳಿದ್ದಾರೆ. ಅದನ್ನು ಮಾನ್ಯ ನಂಜೇಗೌಡರು ಕಾಂಟ್ರಡಿಕ್ಸ್ ಮಾಡಿರಬಹುದು. ಆದರೆ ಅದನ್ನು ಈ ಸಭೆಯ ಮುಂದೆ ತಂದು ಪ್ರಸ್ತಾಪ ಮಾಡುವುದು ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅದು ಈ ಸಭೆಗೆ ಯಾವ ವಿಧದಲ್ಲಿ ಸಂಬಂಧಪಟ್ಟಿದೆ. ? ಗಾಂಧೀವಾದದ ಬಗ್ಗೆ ಅವರವರ ಸ್ವಂತ ಅಭಿಪ್ರಾಯಗಳಿವೆ. ನಾನು ಗಾಂಧೀವಾದವನ್ನು ಒಪ್ಪುವುದಿಲ್ಲ. ಅನೇಕ ಜನ ಗಾಂಧೀವಾದವನ್ನು ಒಪ್ಪದೆ ಇರುವವರು ಈ ದೇಶದಲ್ಲಿದ್ದಾರೆ.

## ಇಂದಿರಾಗಾಂಧಿ ಪಾದವೇ ಗತಿ 1-3-94.

ಇನ್ನು ವಿಜಯನಗರದ ಉಕ್ಕಿನ ಕಾರ್ಖಾನೆ. ಕರ್ನಾಟಕದ ಜನತೆಗೆ ಎಷ್ಟು ಸಹನೆ ಇದೆ ಎಂದರೆ ಇವರಿಗೆ ಎಷ್ಟು ಏಟು ಮೇಲೆ ಏಟು ಕೊಟ್ಟರೂ - ಇಲ್ಲ. ಏನೂ ಏಟು ಬಿದ್ದಿಲ್ಲವೆಂದು ಇಂದಿರಾಗಾಂಧಿಯ ಪಾದವೇ ಗತಿ ಎಂದು ಹೇಳುತ್ತಿದ್ದಾರೆ. ತಲೆ ಮೇಲೆ ಏಟು ಬಿದ್ದರೂ ಏನೂ ಬಿದ್ದಿಲ್ಲವೆಂದು ಹೇಳುತ್ತಿದ್ದಾರೆ. ಕೃಷ್ಣ ನದಿ ನೀರಿನ ವಿಷಯ ತೆಗೆದುಕೊಂಡರೂ ಹಾಗೆ. ನಮ್ಮ ರಾಜ್ಯಕ್ಕೆ ಇದರಿಂದ ಎಷ್ಟು ಅನ್ಯಾಯವಾದರೂ ನಮ್ಮ ಸರ್ಕಾರದವರು ಅದನ್ನು ಸಹಿಸಿಕೊಂಡಿದ್ದಾರೆ. ಇಂದು ಕೇಂದ್ರದ ಬಜೆಟ್ ಬಂದಿದೆ. ಇಂದಿರಾ ಗಾಂಧಿಯವರು ಜನತೆಯ ಮೇಲೆ ಒಂದು ದೊಡ್ಡ ಬಾಂಬನ್ನೇ ಹಾಕಿದ್ದಾರೆ. ಇವರ ಪಕ್ಷದವರು ಯಾರು ಸಹ ಇದರ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾ ಇಲ್ಲ. ಆ ಕೃಷ್ಣ ನದಿಯ ನೀರಿನಲ್ಲಿ ನಮಗೆ ಅನ್ಯಾಯವಾಗಿದೆ ಎಂದು ಇವರು ಸಾಮೂಹಿಕವಾಗಿ ರಾಜಿನಾಮೆಯನ್ನು ಕೊಡಬೇಕಾಗಿತ್ತು. ಆದರೆ ಅದನ್ನು ಮಾಡುವುದಕ್ಕೆ ಯಾರೂ ತಯಾರಾಗಿಲ್ಲ. ಏಕೆಂದರೆ ಇವರು ಇಂದಿರಾ ಗಾಳಿಯಲ್ಲಿ ತೂರಿಕೊಂಡು ಬಂದಿದ್ದಾರೆ ಎಂದು ಇವರೇ ಹೇಳಿಕೊಂಡಿದ್ದಾರೆ. ಪುನಃ ಇಲ್ಲಿ ಬಂದು ಕೂತುಕೊಳ್ಳುತ್ತೇವೋ ಇಲ್ಲವೋ ಎಂಬುದು ಅನುಮಾನ ಅನೇಕರಿಗೆ ಇದೆ.

ರಾಜ್ಯದ 11ನೇ ವಿಧಾನ ಸಭೆಗೆ 1-12-94 ರಂದು ನಡೆದ ಚುನಾವಣೆಯಲ್ಲಿ ಹಿಂದಿನ ಅನುಭವಗಳಿಂದ ಪಾಠ ಕಲಿಸಿದ್ದ ಜನತಾ ಪರಿವಾರದವರು ಒಂದಾಗಿ ಹೋರಾಡಿದ್ದರಿಂದ, ಅಧಿಕಾರಕ್ಕೆ ಬಂದರು. ಮುಖ್ಯಮಂತ್ರಿ ದೇವೇಗೌಡರ ಸಂಪುಟದಲ್ಲಿ 16-12-94 ರಂದು ಕೃಷಿ ಸಚಿವರಾಗಿ ಸಿ.ಬಿ. ಪ್ರಮಾಣ ವಚನ ಸ್ವೀಕರಿಸಿದರು. ದೇವೇಗೌಡರು ಪ್ರಧಾನಿಯಾದಾಗ, ಜೆ.ಎಚ್.ಪಟೇಲ್ ಅವರು ಮುಖ್ಯಮಂತ್ರಿಗಳಾದರು. ಆಗ ಬೈರೇಗೌಡರಿಗೆ ಉಪ ಮುಖ್ಯಮಂತ್ರಿಯಾಗುವ ಅವಕಾಶವಿತ್ತು. ಆದರೆ ದೇವೇಗೌಡರು ಅದನ್ನು ತಪ್ಪಿಸಿದರೆಂದು ಹೇಳಲಾಗುತ್ತಿದೆ. ಕೃಷಿ ಸಚಿವರಾದ ಆ ಇಲಾಖೆಗೆ ಸಿ.ಬಿ.ಯವರು ವಿಶೇಷ ಗೌರವ ತಂದುಕೊಟ್ಟರು. ಇಲಾಖೆಯಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಹಲವು ನೀತಿ ನಿಯಮ, ಪದ್ಧತಿಗಳನ್ನು ಜಾರಿಗೆ ತಂದರು. ಆದರೂ ಪ್ರಧಾನಿಯಾಗಿ ದೇವೇಗೌಡರು ಬೆಂಗಳೂರಿಗೆ ಬಂದಿದ್ದಾಗ, ಕೃಷಿ ಖಾತೆಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ, ಬೈರೇಗೌಡರನ್ನು ಬಹಿರಂಗವಾಗಿ ಟೀಕಿಸಿದರು. ಇದರಿಂದ ಸಿಬಿ ತುಂಬಾ ನೊಂದುಕೊಂಡರು. ಜನತಾ ಪರಿವಾರ ಅಧಿಕಾರಕ್ಕೆ ಬಂದರೆ, ಒಂದಾಗಿರಲು ಸಾಧ್ಯವಿಲ್ಲ ಎಂಬಂತೆ ಮತ್ತೆ ಪಟೇಲ್ - ಸಿದ್ಧರಾಮಯ್ಯ ನಡುವೆ ಅರ್ಥಾತ್ ಹೆಗಡೆ - ದೇವೇಗೌಡರ ನಡುವೆ ವಿರಸ ಬಂದಿತು. ಅವಧಿಗೆ ಮುನ್ನವೇ ವಿಧಾನ ಸಭೆ 23-7-99 ರಂದು ವಿಸರ್ಜನೆಯಾಗಿ 6-10-99 ರಂದು ಚುನಾವಣೆ ನಡೆಯಿತು.

ಕೃಷಿ ಸಚಿವರಾಗಿದ್ದಾಗ ಬೈರೇಗೌಡರು ಮೊಟ್ಟಮೊದಲ ಬಾರಿಗೆ ರಾಜ್ಯದಾದ್ಯಂತ ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿರುವುದನ್ನು ವಿಧಾನ ಸೌಧದ ಮುಂಭಾಗದಲ್ಲಿ ಸನ್ಮಾನಿಸಿ ಪ್ರಶಸ್ತಿಗಳನ್ನು ನೀಡಿದರು.

ರಾಷ್ಟ್ರದಲ್ಲಿ ಬೇಸಾಯಕ್ಕೆ ಆದ್ಯತೆ ಸಿಗಬೇಕೆಂದು ಹಲವು ವೇದಿಕೆಗಳಲ್ಲಿ ಆಗ್ರಹಿಸಿ ವ್ಯವಸಾಯ ಇಲಾಖೆಯೂ ಗೃಹ, ಆರ್ಥಿಕ ಅಬ್ಕಾರಿ, ಜಲ ಸಂಪನ್ಮೂಲದಂತೆ ಮಹತ್ವ ಹೊಂದಿದೆ ಎಂಬುದನ್ನು ತೋರಿಸಿಕೊಟ್ಟಲ್ಲದೆ ರೈತರಿಗೆ ಸಾಕಷ್ಟು ಉಪಯುಕ್ತ ಕಾರ್ಯಕ್ರಮ ರೂಪಿಸಿದ ರುವಾರಿ ಎನಿಸಿಕೊಂಡರು.

# ಸಭೆ ಸಮಾರಂಭಗಳಲ್ಲಿ
# ಬೈರೇಗೌಡ ಉವಾಚ

ವಿಧಾನಸಭೆ ವಿಸರ್ಜನೆಗೆ ಶಿಫಾರಸು ಮಾಡಿದ ಸಮಯದಲ್ಲಿ ಪಟೇಲರಿಗೆ ಸ್ಪಷ್ಟ ಬಹುಮತವಿದ್ದ ಕಾರಣ, ಕ್ರಮ ಸಂವಿಧಾನ ಬಾಹಿರವಲ್ಲ. ಪಕ್ಷದ ರಾಜ್ಯ ಕಚೇರಿ ಕುರಿತು ನ್ಯಾಯಾಲಯದ ಮೆಟ್ಟಿಲು ಏರಿದ್ದೇವೆ. ಕಚೇರಿ ಆಕ್ರಮಿಸಿಕೊಂಡು ಗೂಂಡಾಗಿರಿ ಮಾಡುವುದು ಗೌಡರ ಬಣದ ಜಾಯಮಾನ. ಸಚಿವ ಸಿಂಧ್ಯಾ ಅವರನ್ನು ಸಾರ್ವಜನಿಕವಾಗಿ ಅವಮಾನಿಸಿದ್ದು ಅವರ ಜಾಯಮಾನಕ್ಕೆ ಒಂದು ಉದಾಹರಣೆ.

23-7-99

# ಕೃಷಿ ಸಚಿವರ ಹೇಳಿಕೆ 22-9-95

ಕೃಷಿ ಕೈಗಾರಿಕಾ ನಿಗಮದಲ್ಲಿರುವ ಅವ್ಯವಹಾರಗಳ ಬಗ್ಗೆ ಶಾಸಕರಾಗಿದ್ದಾಗಿನಿಂದ ಕ್ಷಕಿರಣ ಬೀರುತ್ತಿದ್ದ ಬೈರೇಗೌಡರು ಸಚಿವರಾದ ಆ ಬಗ್ಗೆ ತೀವ್ರ ಕ್ರಮ ಕೈಗೊಂಡರು. ಗೊಬ್ಬರ ಪೂರೈಕೆ, ಮಂಗಳ ಗೊಬ್ಬರ ಕಾರ್ಖಾನೆ ಮುಷ್ಕರದ ಸಚಿವರ ಹೇಳಿಕೆ.

ಅನಾವಶ್ಯಕವಾಗಿ ಅಲ್ಲಿರತಕ್ಕಂಥ ಕಾರ್ಮಿಕರು ಮುಷ್ಕರವನ್ನು ನಡೆಸುತ್ತಿದ್ದಾರೆ. ಅದು ಇಂಟರ್ ಯುನಿಯನ್ ರೈವಲ್ರಿಯಿಂದ ಅಲ್ಲಿ ಐಎನ್‌ಟಿಯುಸಿ ಮತ್ತು ಎಚ್‌ಎಂಎಸ್ ಇವರಿಬ್ಬರ ರೈವಲ್ರಿಯಿಂದ ಈ ರೀತಿಯಾಗುತ್ತಿದೆ. ನಮ್ಮ ರಾಜ್ಯದಲ್ಲಿ ಆಗಲೇ ಹೇಳಿದ ಹಾಗೆ ಅವರನ್ನು ಲೀಡ್ ಮ್ಯಾನುಫಾಕ್ಚರರ್ ಎಂದು ಕೇಂದ್ರ ಸರ್ಕಾರ ನಮ್ಮ ಎಂಸಿಎಫ್ ಅನ್ನು ನೇಮಕ ಮಾಡಿದ್ದಾರೆ. ಅಲ್ಲಿ ಮುಷ್ಕರವನ್ನು ನಡೆಸುತ್ತಿದ್ದಾರೆ. ಮುಷ್ಕರ ಮಾಡುತ್ತಿರತಕ್ಕಂಥಾವರು ಎಷ್ಟು ಜನ ಎಂದರೆ ಕೇವಲ 33 ಜನ ಮಾತ್ರ. ಈ ಮುಷ್ಕರ ಯಾವ ಹಂತದಲ್ಲಿ ನಡೆಯುತ್ತಿದೆ ಎಂದರೆ ಯೂರಿಯಾವನ್ನು ತಯಾರಿಸುವುದಕ್ಕೆ ರಾ ಮೆಟೀರಿಯಲ್ಸ್ ಎಲ್ಲಾ ಬೇಕಾಗುತ್ತದೆ. ಆ ಹಂತದಲ್ಲಿ ಮುಷ್ಕರ ನಡೆಯುತ್ತಿಲ್ಲ. ತಯಾರಾಗಿ ಬಂದಂತಹ ಯೂರಿಯಾ ಚೀಲಕ್ಕೆ ಹಾಕಿ ಅದು ಬ್ಯಾಗ್ ಆಗಬೇಕು. ಯೂರಿಯಾ ಚೀಲದಲ್ಲಿ ಬೀಳುತ್ತದೆ, ಅಲ್ಲಿಯವರೆಗೂ ಮುಷ್ಕರ ಇಲ್ಲ. ಚೀಲದಲ್ಲಿ ಬಿದ್ದ ಮೇಲೆ ಅದನ್ನು ಹೊಲೆಯಬೇಕಾಗಿರುತ್ತದೆ. ಆ ಹೊಲೆಯುವಂತಹ ಹಂತದಲ್ಲಿ ಇರತಕ್ಕಂತಹ ಸಂದರ್ಭದಲ್ಲಿ ಇದನ್ನು ನಿರ್ವಹಿಸತಕ್ಕಂಥ 33 ಜನ ಕಾರ್ಮಿಕರು ಮಾತ್ರ ಇವತ್ತಿನ ದಿವಸ ಮುಷ್ಕರವನ್ನು ಮಾಡುತ್ತಿದ್ದಾರೆ. ಇವತ್ತು ಏನಾಗುತ್ತಿದೆ ಎಂದರೆ ಇಡೀ ರಾಜ್ಯದ ರೈತರ ಕತ್ತನ್ನು ಹಿಸುಕತಕ್ಕಂಥ ಕೆಲಸ ಕೇವಲ ಈ 33 ಜನರಿಂದ ಇವತ್ತಿನ ದಿವಸ ಆಗುತ್ತಿದೆ. ಅದಕ್ಕೋಸ್ಕರ ನಾವು ಈ ಮುಷ್ಕರವನ್ನು ಇಲ್ಲೀಗಲ್ ಎಂದು ಡಿಕ್ಲೇರ್ ಮಾಡಿದ್ದೇವೆ. ಅದರ ಜೊತೆಗೆ ಇವತ್ತು ರಕ್ಷಣೆಯನ್ನು ಕೂಡ ಕೊಟ್ಟಿದ್ದೇವೆ. ಅಲ್ಲಿಯ ಕಾರ್ಖಾನೆಯಿಂದ ಬರತಕ್ಕಂಥ ಯೂರಿಯಾ ಏನಿದೆ ಅದಕ್ಕೆ ಪೋಲೀಸರ ರಕ್ಷಣೆ ಕೊಟ್ಟು, ನಿನ್ನೆ ಮತ್ತು ಇವತ್ತಿನವರೆಗೂ ಸ್ವಲ್ಪಮಟ್ಟಿನ ಪ್ರಮಾಣದ ಗೊಬ್ಬರವನ್ನು ಹೊರಗಡೆ ತರತಕ್ಕಂಥ ಕೆಲಸವನ್ನು ಮಾಡಿದ್ದೇವೆ. ನಿನ್ನೆಯಿಂದ ಇವತ್ತಿನವರೆಗೆ ಸುಮಾರು 60 ಟನ್ ಯೂರಿಯಾವನ್ನು ಹೊರಗಡೆ ತರತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಇದನ್ನು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಮುಂದುವರೆಸಿಕೊಂಡು ಹೋಗುವಂತಹ ಯತ್ನವನ್ನೂ ಸಹ ನಡೆಸಿದ್ದೇವೆ. ನಮ್ಮ ಬೆಳೆ ವಿಸ್ತೀರ್ಣ ಮತ್ತು ಗೊಬ್ಬರದ ಬಳಕೆ ಈ ಸಾರಿ ನೋಡಿದರೆ, ಹೋದ ಸಾರಿಗಿಂತ ಹೆಚ್ಚಾಗುತ್ತಿದೆ. ಇದರಲ್ಲಿ ಒಂದು ದುರದೃಷ್ಟಕರವಾದಂತಹ ಪ್ರಸಂಗ ಕೂಡ ನಡೆಯುತ್ತಿದೆ. ಯಾವಾಗಲೂ ಕೂಡ ನಾವು ಗೊಬ್ಬರವನ್ನು ಸಮತೋಲನ ಪ್ರಮಾಣದಲ್ಲಿ ಉಪಯೋಗಿಸಬೇಕಾಗುತ್ತದೆ. ಆದರೆ ಇವತ್ತಿನ ದಿವಸ ಬೆಲೆ ಏರಿಕೆಯಾಗಿ, ಯಾವ ಗೊಬ್ಬರಗಳ ಬೆಲೆ ಹೆಚ್ಚಾಗಿದೆ ಆ ಗೊಬ್ಬರವನ್ನು ಕಡಮೆ ಬಳಸುತ್ತಿದ್ದಾರೆ. ಕಡಮೆ ಬೆಲೆ ಇರತಕ್ಕಂಥ ಗೊಬ್ಬರವನ್ನು ರೈತರು ಹೆಚ್ಚಿಗೆ ಬಳಸುತ್ತಿದ್ದಾರೆ. ಇದು ಬಹಳ ಅನಾನುಕೂಲವಾದಂತಹ ಪರಿಸ್ಥಿತಿಯಾಗಿದ್ದು, ಮುಂದೆ ಇದೇ ರೀತಿ ಬೆಳವಣಿಗೆಯಾದರೆ, ಭೂಮಿಯ ಮೇಲೆ ದುಷ್ಪರಿಣಾಮವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಭೆಯ ಮೂಲಕ ರೈತರುಗಳಿಗೆ ವಿನಂತಿಸುತ್ತೇನೆ. ಯಾವಾಗಲೂ ಕೂಡ ಸಮತೋಲನವಾದಂತಹ ಗೊಬ್ಬರವನ್ನು ಉಪಯೋಗಿಸುವುದಕ್ಕೆ ರೈತರು ಪ್ರಯತ್ನ ಪಡಬೇಕೇ ವಿನಹ ಒಂದೇ ಗೊಬ್ಬರ, ಅಂದರೆ ಕೇವಲ ಯೂರಿಯಾ ಒಂದೇ ಗೊಬ್ಬರ ಅಂದರೆ ಅದರ ಗುಣಮಟ್ಟ ಹಾಳಾಗುತ್ತದೆ.

ರಸಗೊಬ್ಬರಗಳ ಬೆಲೆಯ ನೀತಿಯಲ್ಲಿ ಬದಲಾವಣೆಯಾದ ನಂತರ ರಾಜ್ಯದಲ್ಲಿ ರಂಜಕ ಮತ್ತು ಪೊಟ್ಯಾಷ್ ಗೊಬ್ಬರಗಳ ಬಳಕೆಯಲ್ಲಿ ಶೇ. 31 ಹಾಗೂ 20ರಷ್ಟು ಅನುಕ್ರಮವಾಗಿ ಕಡಿಮೆಯಾಗಿರುತ್ತದೆ. ಆದರೆ ನಾನು ಈ ವಿಚಾರವನ್ನು ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಆದರೆ ನಿಯಂತ್ರಣದ ನೀತಿಯಲ್ಲಿ ಮುಂದುವರಿಸಿರುವ ಯೂರಿಯಾ ರಸಗೊಬ್ಬರದ ಬಳಕೆಯಲ್ಲಿ ಸುಮಾರು ಶೇ. 11ರಷ್ಟು ಹೆಚ್ಚಳವಾಗಿರುತ್ತದೆ. ಈ ಅಂಶವನ್ನೂ ಸಹ ನಾನು ಸಭೆಯ ಗಮನಕ್ಕೆ ತಂದಿದ್ದೇನೆ. ಮುಂದುವರೆದು ರಾಜ್ಯದಲ್ಲಿ ಬಳಕೆಯಾಗುತ್ತಿರುವ ಸಾರಜನಕ, ರಂಜಕ ಮತ್ತು ಪೊಟ್ಯಾಷ್ 3.931:7:1ರ ಅನುಪಾತದಲ್ಲಿ ಇರುತ್ತದೆ. ಇದು ಸಾಮಾನ್ಯವಾಗಿ ರಾಷ್ಟ್ರಮಟ್ಟದ ಅನುಪಾತದ ಪ್ರಮಾಣವಾದ 4:2:1ರ ಸಮೀಪಕ್ಕೆ ಇರುತ್ತದೆ.

ರಸಗೊಬ್ಬರಗಳ ಅನಿಯಂತ್ರಣದಿಂದ ರಂಜಕ ಮತ್ತು ಪೊಟ್ಯಾಷ್ ಗೊಬ್ಬರಗಳ ಬೆಲೆ ಏರಿಕೆಯಿಂದಾಗಿ ಅವುಗಳ ಬಳಕೆಯಲ್ಲಾಗಿರುವ ಇಳಿಮುಖವು ನೇರವಾಗಿ ಕೃಷಿ ಉತ್ಪಾದನೆಯ ಮೇಲೆ ಪರಿಣಾಮ ಹೊಂದಿರುವುದಿಲ್ಲ. ಆದಾಗ್ಯೂ, ರೈತರು ಯೂರಿಯಾ ಗೊಬ್ಬರದ ಬೆಲೆಯು ಇತರ ಗೊಬ್ಬರಗಳಿಗೆ ಹೋಲಿಸಿದರೆ ಕಡಮೆ ಇದ್ದು, ಇದರ ಬಳಕೆಯಲ್ಲಿ ಹೆಚ್ಚುತ್ತಿರುವ ಪ್ರಮಾಣ ಒಳ್ಳೆಯ ಸೂಚನೆಯಲ್ಲ. ಆದ ಕಾರಣ ಸಮತೋಲನವಾದ ಪೋಷಕಾಂಶಗಳ ಬಗ್ಗೆ ಹೆಚ್ಚು ಗಮನ ನೀಡಲಾಗುತ್ತಿದೆ.

ರಸಗೊಬ್ಬರಗಳ ಬೆಲೆ ನೀತಿಯನ್ನು ಸರಿಯಾದ ರೀತಿಯಲ್ಲಿ ರೂಪಿಸುವ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ಪ್ರಸ್ತಾವನೆಯನ್ನು ಕಳುಹಿಸಿದ್ದು, ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಾಗುತ್ತಿದೆ.

ಮುಂದುವರೆದು ರಾಜ್ಯ ಸರ್ಕಾರದ ವತಿಯಿಂದ 1994-95ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ರಿಯಾಯಿತಿ ಯೋಜನೆಯಡಿಯಲ್ಲಿ ಸರಬರಾಜು ಮಾಡಿದ ರಸಗೊಬ್ಬರಗಳ ಮೇಲೆ ವಿಧಿಸಲಾಗಿದ್ದ, ವಹಿವಾಟು ತೆರಿಗೆಯನ್ನು (ಟಿಓಟಿ) ಫೆಬ್ರವರಿ 4ರಿಂದ ಮಾರ್ಚ್ 31ರವರೆಗೆ ತೆಗೆದು ಹಾಕಲಾಗಿತ್ತು. ಅದೇ ರೀತಿ 1995-96ನೇ ಸಾಲಗೆ ಸಾರಜನಕೇತರ ರಸಗೊಬ್ಬರ ಮೇಲಿನ ವಹಿವಾಟು ತೆರಿಗೆಯನ್ನು ರದ್ದು ಮಾಡಲಾಗಿದೆ. ಇದರಿಂದ ಸುಮಾರು 197 ಲಕ್ಷ ರೂಪಾಯಿಗಳ ತೆರಿಗೆಯ ವಿನಾಯಿತಿ ರೈತರಿಗೆ ಸಿಕ್ಕಂತಾಗುವುದು.

ಕರ್ನಾಟಕ ಕೃಷಿ ಕೈಗಾರಿಕಾ ನಿಗಮದಲ್ಲಿ ಆಗಿರುವ ಅವ್ಯವಹಾರದಲ್ಲಿ ಮತ್ತು ಈ ಬಗ್ಗೆ ತೆಗೆದುಕೊಂಡಿರುವ ಕ್ರಮದ ವಿವರಗಳು ಹೀಗಿವೆ:-

ಕರ್ನಾಟಕ ಕೃಷಿ ಕೈಗಾರಿಕಾ ನಿಗಮದಲ್ಲಿ ನಡೆಯಿತೆನ್ನಲಾದ ಅವ್ಯವಹಾರದ ಬಗ್ಗೆ ವಿಚಾರಣೆಯನ್ನು ನಡೆಸಲು ಸರ್ಕಾರವು ಶ್ರೀ ಕೆ. ಸಂಜೀವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿ ವಿಚಾರಣೆಯನ್ನು ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಆದೇಶಿಸಿತು.

ಸಂಜೀವ ವಿಚಾರಣಾ ಆಯೋಗವು ದಿನಾಂಕ 1-7-1985ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಸರ್ಕಾರವು ವಿಚಾರಣಾ ಆಯೋಗದ ವರದಿಯನ್ನು ಪರಿಶೀಲಿಸಿ, ಆಯೋಗವು ಉಲ್ಲೇಖಿಸಿದ ಅಂಶಗಳ ಮೇಲೆ ಮತ್ತು ಈ ಕೆಳಗೆ ಕಾಣಿಸಿದ ನಿಗಮದ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮವನ್ನು ಕೈಗೊಳ್ಳಲು ನಿಗಮಕ್ಕೆ ನಿರ್ದೇಶನ ನೀಡಿತು.

ಸರ್ಕಾರದ ನಿರ್ದೇಶನದ ಮೇರೆಗೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ದಂಡವನ್ನು ವಿಧಿಸುವ ಸಲುವಾಗಿ ನಿಗಮವು ವರದಿಯಲ್ಲಿನ ಉಲ್ಲೇಖಿದ ಅಂಶಗಳ ಮೇಲೆ ವಿಚಾರಣೆಯನ್ನು ನಡೆಸಲು ದಿನಾಂಕ 6-12-1986ರಂದು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ವಿ.ಎಚ್. ಉಪಾಧ್ಯಾಯರವರನ್ನು ನೇಮಕ ಮಾಡಿತು. ಸದರಿಯವರು ದಿನಾಂಕ 14-9-1987ರಂದು ನಿಗಮಕ್ಕೆ ವರದಿಯನ್ನು ಸಲ್ಲಿಸಿದರು. ಅದರಂತೆ ಸದರಿ ವಿಷಯವನ್ನು ಮಂಡಳಿ, ಈ ಕೆಳಗೆ ಕಾಣಿಸಿದ ಪರಿಷ್ಕೃತ ದಂಡವನ್ನು ವಿಧಿಸಲು ಶಿಫಾರಸ್ಸು ಮಾಡಿತ್ತು.

| ಅಧಿಕಾರಿಯ ಹೆಸರು | ವಿಧಿಸಿರುವ ದಂಡ |
|---|---|
| 1) ಶ್ರೀ ಡಿ.ವಿ. ನಾಗಭೂಷಣ್ | ಸೆನ್ಸೂರ್ಡ್ |
| 2) ಶ್ರೀ ಎ. ನಾರಾಯಣರೆಡ್ಡಿ | ಸೆನ್ಸೂರ್ಡ್ |
| 3) ಶ್ರೀ ಎಸ್. ಗುರಪ್ಪಾಜಿ | ಎರಡು ವಾರ್ಷಿಕ ಬಡ್ತಿಯನ್ನು ತಡೆಹಿಡಿಯಲಾಗಿದೆ. |

ದಕ್ಷಿಣ ಕನ್ನಡ ಜಿಲ್ಲೆಯ ಕೆಎಐಸಿ ಕಚೇರಿಯಲ್ಲಿನ ಭ್ರಷ್ಟಾಚಾರದ ಬಗ್ಗೆ, ಶ್ರೀ ಬಿ.ಕೆ. ವೆಂಕಟಾಚಲಯ್ಯ ಜಂಟಿ ವ್ಯವಸ್ಥಾಪಕರು (ಜಾಯಿಂಟ್ ಜನರಲ್ ಮ್ಯಾನೇಜರ್) ವಿಚಾರಣೆಯನ್ನು ನಡೆಸಿರುತ್ತಾರೆ. ವ್ಯವಸ್ಥಾಪಕರ ವಿರುದ್ಧವಾಗಿ ವರದಿಯನ್ನು ಜಂಟಿ ವ್ಯವಸ್ಥಾಪಕರು ತಾ : 21-03-1995ರಂದು ಕಳುಹಿಸಿರುತ್ತಾರೆ. ಈ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳಬೇಕಾಗಿದೆ.

ದೂರವಾಣಿ ಸಂಖ್ಯೆ : 645762 ಮುಖ್ಯ ವ್ಯವಸ್ಥಾಪಕರವರ ಖಾಸಗಿ ದೂರವಾಣಿಯಾಗಿರುತ್ತದೆ. ದಿನಾಂಕ 25-2-1989 ರಿಂದ 24-6-1989ರವರೆಗೆ ಕಚೇರಿಯ ಉಪಯೋಗಕ್ಕಾಗಿ ಬಳಸುವುದಕ್ಕೆ ಸದರಿ ದೂರವಾಣಿಯನ್ನು ಬಳಸಲು ಅನುಮೋದಿಸಲಾಗಿದ್ದು, ಈ ಅವಧಿಯಲ್ಲಿ ರೂ. 52,485-00ಕ್ಕೆ ಪಾವತಿಗಾಗಿ ಬಿಲ್ಲು ಬಂದಿರುತ್ತದೆ. ಜಿಲ್ಲಾ ಬಳಕೆದಾರರ ವೇದಿಕೆಯಲ್ಲಿ ಬಿಲ್ಲಿನ ವಿರುದ್ಧವಾಗಿ ತಕರಾರು ಮಾಡಿದ್ದರಿಂದ ನಿಗಮದ ಪರ ಆಗಿದ್ದು ಮತ್ತು ಟೆಲಿಫೋನ್ ಇಲಾಖೆಯವರು ಮೇಲ್ಮನವಿಯನ್ನು ಸಲ್ಲಿಸಿದ್ದರಿಂದ ರಾಜ್ಯ ಬಳಕೆದಾರರ ವೇದಿಕೆಯಲ್ಲಿ ರೂ. 52,485-00 ಗಳ ಬಿಲ್ಲಿನ ಮೊತ್ತ ಸರಿ ಇರುವುದನ್ನು ನಿರ್ಣಯಿಸಿದ್ದರಿಂದ ಬಿಲ್ಲಿನ ಪಾವತಿಯನ್ನು ಮಾಡಲಾಯಿತು ಹಾಗೂ ನಿಗಮವು ಪಾವತಿಯನ್ನು ಮಾಡಿರುತ್ತದೆ. ಹಾಗೂ ನಿಗಮವು ಪಾವತಿ ಮಾಡಿರುವ ಬಿಲ್ಲಿನ ಅರ್ಹತೆಯ ಬಗ್ಗೆ ಮತ್ತು ಅಧಿಕಾರಿಯಿಂದ ಹಣವನ್ನು ವಸೂಲಿ ಮಾಡಬೇಕೇ? ಎಂಬುದನ್ನು ಸರ್ಕಾರವು ಪರಿಶೀಲಿಸುವುದು. ಈ ಪ್ರಕರಣ ಸಿಓಡಿ ತನಿಖೆ ಆಗುತ್ತಿದೆ.

ಮುಖ್ಯ ವ್ಯವಸ್ಥಾಪಕರು ಕಾರ್ಯ ನಿರ್ವಹಿಸುತ್ತಿರುವ ಡಾ: ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಆಡಳಿತ ಮಂಡಳಿಯ ಅಧ್ಯಕ್ಷರ ಹುದ್ದೆಯು ಗೌರವಾನ್ವಿತ ಹುದ್ದೆಯಾಗಿರುತ್ತದೆ. ಮುಖ್ಯ ವ್ಯವಸ್ಥಾಪಕರು ಹೊಂದಿರುವ ಹುದ್ದೆಯ ವಿಚಾರವಾಗಿ ಅಂದಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಡಾ. ಪಟ್ಟಾ ನಾಯಕ್‌ರವರು ಈ ಹಿಂದೆಯೇ ಪರಿಶೀಲಿಸಿರುತ್ತಾರೆ. ನಿಗಮದಲ್ಲಿ ವ್ಯವಹಾರ ಚಟುವಟಿಕೆಯಲ್ಲಿ ತೊಡಗಿರುವುದಕ್ಕೆ ಅವಕಾಶವಿಲ್ಲದಿದ್ದರೂ ಇಂತಹ ಗೌರವಾನ್ವಿತ ಹುದ್ದೆಯನ್ನು ಹೊಂದಲು ಅಡ್ಡಿ ಉಂಟು ಮಾಡುವುದಿಲ್ಲ. ಈ ಅಧಿಕಾರಿಯು

ಸಭೆಗೆ ಹಾಜರಾಗುವುದಕ್ಕೆ ಸಭಾ ಭತ್ಯೆ ಮತ್ತು ಸಾರಿಗೆ ಸೌಲಭ್ಯವನ್ನು ಪಡೆಯುತ್ತಿರುತ್ತಾರೆ. ಶ್ರೀ ಗುರುಪ್ಪಾಜಿಯವರು ಈ ಹುದ್ದೆಯನ್ನು ಹೊಂದಲು ಅನುಮೋದನೆಯನ್ನು ವ್ಯಕ್ತಪಡಿಸಿದ್ದರೂ ಸಹ, ಈ ವಿಷಯವನ್ನು 1992ರಲ್ಲಿ ಅಂದಿನ ವ್ಯವಸ್ಥಾಪಕ ನಿರ್ದೇಶಕರು ಪರಿಗಣಿಸಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು ವಿವರಣೆಯನ್ನು ಪರಿಶೀಲಿಸಿ ನಿಗಮದ ಸೇವಾ ನಿಯಮಾವಳಿಗಳಲ್ಲಿ ಈ ರೀತಿಯ ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಿಷೇಧಗೊಳಿಸಿಲ್ಲವಾದ್ದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಆದೇಶಿಸಿರುತ್ತಾರೆ.

ಈ ಸಂಸ್ಥೆಯಲ್ಲಿ ಅವ್ಯವಹಾರ ಪ್ರಕರಣಗಳು ಹಲವಾರು ಬೆಳಕಿಗೆ ಬಂದಿದ್ದು, ಈವರೆವಿಗೆ ಸುಮಾರು 90 ಅಧಿಕಾರಿ ; ನೌಕರರುಗಳನ್ನು ಸಂಸ್ಥೆಯ ಸೇವೆಯಿಂದ ವಜಾ ಮಾಡಲಾಗಿದೆ ಮತ್ತು ಹಲವಾರು ಪ್ರಕರಣಗಳಲ್ಲಿ ವಾರ್ಷಿಕ ಮುಂಬಡ್ತಿಗಳನ್ನು ತಡೆ ಹಿಡಿಯಲಾಗಿದೆ.

ಈಗ ಹಾಲಿ 23 ಪ್ರಕರಣಗಳಲ್ಲಿ ಸಂಬಂಧಪಟ್ಟ ನೌಕರರುಗಳನ್ನು ಅಮಾನತ್ತಿನಲ್ಲಿಟ್ಟಿದ್ದು ಮತ್ತು 37 ಪ್ರಕರಣಗಳಲ್ಲಿ ವಿಚಾರಣೆಗಳು ಮುಂದುವರೆಯುತ್ತಿವೆ. ವಿಚಾರಣೆಯನ್ನು ಮುಗಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ.

## ಪರಿಷತ್‌ನಲ್ಲಿ ಕೃಷಿ ಸಚಿವರು

ಕೃಷಿ ಸಚಿವರಾಗಿ ಬೈರೇಗೌಡರು ರೂಪಿಸಿದ ಕೃಷಿ ನೀತಿ, ರೈತರ ಬಗ್ಗೆ ಅವರಿಗಿದ್ದ ಕಳಕಳಿ, ಅವರ ಪ್ರಾಮಾಣಿಕತೆಯನ್ನು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕರಾದ ಕಾಂಗ್ರೆಸ್‌ನ ಎಚ್.ಕೆ. ಪಾಟೀಲ್, ಬಿಜೆಪಿಯ ಡಿ.ಎಚ್. ಶಂಕರಮೂರ್ತಿ, ಡಾ : ತಂಗಾ ಮೊದಲಾದವರು ಶ್ಲಾಘಿಸಿ, ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ಒಬ್ಬ ಸಚಿವರನ್ನು ವಿರೋಧಪಕ್ಷದ ನಾಯಕರು ಮುಕ್ತಕಂಠದಿಂದ ಪ್ರಶಂಸಿಸಿರುವುದನ್ನು ನೋಡಿದರೆ, ಬೈರೇಗೌಡರ ದಕ್ಷತೆ ಅರಿವಾಗುತ್ತದೆ. 21-8-97ರಂದು ಕೃಷಿ ಇಲಾಖೆಯ ನೀತಿ ಹಾಗೂ ಕಾರ್ಯಾಚರಣೆ ಮೇಲೆ ನಡೆದ ಚರ್ಚೆಗೆ ಸಿ.ಬಿ.ಯವರು ಸುದೀರ್ಘ ಉತ್ತರ ನೀಡಿ, ಎಲ್ಲ ಸದಸ್ಯರು ಗೌರವಕ್ಕೆ ಪಾತ್ರರಾದರು. ವಿರೋಧ ಪಕ್ಷದವರ ಒಳ್ಳೆಯ ಸಲಹೆಗಳನ್ನು ಸ್ವೀಕರಿಸಿ, ಅದನ್ನು ಕಾರ್ಯಗತಗೊಳಿಸುವ ಭರವಸೆ ನೀಡಿದರೂ, ಸರ್ಕಾರದ ಕಾರ್ಯನೀತಿಗೆ ವಿರುದ್ಧವಾದುದನ್ನು ನಯವಾಗಿ, ಅವರೂ ಒಪ್ಪಿಕೊಳ್ಳುವ ಹಾಗೆ ತಳ್ಳಿ ಹಾಕುತ್ತಿದ್ದರು. ಪರಿಷತ್‌ನಲ್ಲೂ ಸಿ.ಬಿ.ಯವರು ಅವಕಾಶ ದೊರೆತಾಗಲೆಲ್ಲಾ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು.

# ಭಾಗ - 3

## ಆತ್ಮೀಯರ ದೃಷ್ಟಿಯಲ್ಲಿ



ಪತ್ನಿ ಶ್ರೀಮತಿ ಸಾವಿತ್ರಮ್ಮನವರೊಂದಿಗೆ ಬೈರೇಗೌಡರು



ಕುಟುಂಬದ ಸದಸ್ಯರೊಂದಿಗೆ ಬೈರೇಗೌಡರು

# ಬೈರೇಗೌಡ: ಕೋಲಾರದ ಮಹತ್ವದ ಕೊಡುಗೆ

– ವಿ.ಆರ್. ಸುದರ್ಶನ್, ಸಭಾಪತಿಗಳು

ಅಪರೂಪದ ರಾಜಕಾರಣಿ ಸಿ. ಬೈರೇಗೌಡ, ಕರ್ನಾಟಕ ರಾಜ್ಯದ ಸಾರ್ವಜನಿಕ ಕ್ಷೇತ್ರಕ್ಕೆ ಕೋಲಾರ ಜಿಲ್ಲೆಯ ಮಹತ್ವದ ಕೊಡುಗೆ. ಜನಪರ ಚಿಂತಕ, ರೈತ ಸಮೂಹದ ಹಿತರಕ್ಷಕರಾಗಿ ಗ್ರಾಮೀಣಾಭಿವೃದ್ಧಿಗಾಗಿ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ ರಾಜಕಾರಣಿ. ಚೌಡದೇನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ, ಕೋಲಾರ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ, ಕೋಲಾರ ತಾಲ್ಲೂಕಿನ ಸಹಕಾರ ಕ್ಷೇತ್ರದ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ ಹಾಗೂ 1967 ಮತ್ತು 1978 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳಲ್ಲಿ ಪರಾಜಿತರಾದರೂ ನಂತರದ 1972, 1983, 1985, 1989, 1994, 1999ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿ, ಸಚಿವರಾಗಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿ ಅಪಾರವಾದ ಅನುಭವವನ್ನು ಗಳಿಸಿದಂತಹ ವ್ಯಕ್ತಿ. ಕೋಲಾರ ಜಿಲ್ಲೆಯ ರಾಜಕಾರಣದಲ್ಲಿ ನೆನಪಾಗುವಂತಹ ಎಂ.ವಿ. ಕೃಷ್ಣಪ್ಪನವರು, ಟಿ. ಚೆನ್ನಯ್ಯನವರು, ಪಟ್ಟಾಭಿರಾಮನ್ ಅವರು, ನಾಗಯ್ಯರೆಡ್ಡಿಯವರು, ಕೆ.ಸಿ. ರೆಡ್ಡಿಯವರು ಇವರೆಲ್ಲರ ಸಾಲಿನಲ್ಲಿ ಸೇರಿರುವ ಬೈರೇಗೌಡರು ಅಪೂರ್ವವಾದ ಕೊಡುಗೆಯನ್ನು ರಾಜಕಾರಣದ ಕ್ಷೇತ್ರಕ್ಕೆ ನೀಡಿದ್ದಾರೆ. ಕಾಲೇಜಿನ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡುವ ಮತ್ತು ಚುನಾವಣೆಯಲ್ಲಿ ಅವರ ಪರವಾಗಿ ಕೆಲಸ ಮಾಡುವಂತಹ ಅವಕಾಶ ನನ್ನದಾಗಿತ್ತು. ನನ್ನ ಪೂಜ್ಯ ತಂದೆಯವರು 1978 ರಲ್ಲಿ ನಿಧನರಾದಾಗ ನಾನು ವಿದ್ಯಾಭ್ಯಾಸವನ್ನು ಮಧ್ಯದಲ್ಲಿ ನಿಲ್ಲಿಸಿ ನನ್ನೂರಿಗೆ ಹಿಂತಿರುಗಿ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡ ಪ್ರಾರಂಭದ ದಿನಗಳಲ್ಲಿ ಬೈರೇಗೌಡರ ಜೊತೆಗೆ ಸತತ ಸಂಪರ್ಕ ಉಂಟಾಯಿತು. ಅವರ ಮಾರ್ಗದರ್ಶನದ ಅನೇಕ ಹೋರಾಟಗಳಲ್ಲಿ, ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ನೆನಪುಗಳು ಈಗಲೂ ಚಿರಸ್ಮರಣೀಯವಾಗಿವೆ. ರಾಜಕೀಯವಾಗಿ ಒಂದೆರಡು ಸಂದರ್ಭಗಳಲ್ಲಿ ನಾವು ಬೇರೆಯಾಗುವಂತಹ ಅನಿವಾರ್ಯ ಸ್ಥಿತಿ ನಿರ್ಮಾಣವಾದ ಸಂದರ್ಭದಲ್ಲಿ ಕೂಡ ವೈಯಕ್ತಿಕವಾದ ದ್ವೇಷ ಅಸೂಯೆಗಳಿಗೆ ಯಾವುದೇ ಅವಕಾಶಗಳನ್ನು ನಾವಿಬ್ಬರೂ ನೀಡಿರಲಿಲ್ಲ. ರಾಜಕೀಯವಾಗಿ ಅವರ ಪರವಾದ ಮತ್ತು ವಿರೋಧವಾದ ಕೆಲಸ ಮಾಡಿದ ಅನುಭವ ನನ್ನದಾಗಿದೆ. ವೈಯಕ್ತಿಕವಾಗಿ ಬೈರೇಗೌಡರದು ನಿಷ್ಟುರವಾದ ಸ್ವಭಾವದವರಾದರೂ ತೆರೆದ ಮನಸ್ಸಿನ ವ್ಯಕ್ತಿತ್ವವುಳ್ಳವರು. 1986 ರಲ್ಲಿ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ನಾನು ಸ್ಪರ್ಧಿಸುವ ಅವಕಾಶಕ್ಕೆ ತೀವ್ರವಾದ ವಿರೋಧ ಒಡ್ಡಿದ ಹಾಗೂ 1988 ರಲ್ಲಿ ವಿಧಾನ ಪರಿಷತ್ತಿಗೆ ಮೊದಲ ಬಾರಿಗೆ ಸದಸ್ಯನಾಗುವ ಅವಕಾಶಕ್ಕೂ ಅವರ ಸಾಕಷ್ಟು ವಿರೋಧಗಳ ಮಧ್ಯೆ ಶಾಸಕನಾಗುವ ಅವಕಾಶ ನನ್ನದಾಗಿತ್ತು. ಆದರೆ 1994 ರಲ್ಲಿ

ರಾಜಕಾರಣದ ಸಂಕಷ್ಟ ಮತ್ತು ಹೋರಾಟದ ಸಂದರ್ಭದಲ್ಲಿ ಎರಡನೇ ಬಾರಿ ವಿಧಾನ ಪರಿಷತ್ ಸದಸ್ಯನಾಗುವ ಅವಕಾಶ ಬಂದಾಗ ಬಂಗಾರಪ್ಪನವರೊಂದಿಗೆ, ಜಾಲಪ್ಪನವರೊಂದಿಗೆ ಹಾಗೂ ರಮೇಶ್‌ಕುಮಾರ್ ಅವರೊಂದಿಗೆ ಬೈರೇಗೌಡರು ನೀಡಿದ ಬೆಂಬಲ ಮತ್ತು ನೈತಿಕ ಸ್ಥೈರ್ಯ ಒಂದು ಪ್ರಮುಖ ಪಾತ್ರವಾಗಿತ್ತು. ನಂತರದ ದಿನಗಳಲ್ಲಿ ರಾಜಕೀಯವಾಗಿ ಬೇರ್ಪಡುವಂತಹ ಪರಿಸ್ಥಿತಿ ನಮ್ಮಿಬ್ಬರ ನಡುವೆ ಎದುರಾಗಿತ್ತು. ಕಾಂಗ್ರೆಸ್ ಪಕ್ಷವನ್ನು ಸಂಘಟಿಸುವ ಮತ್ತು ನಿರ್ವಹಿಸುವಂತಹ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯ ಜವಾಬ್ದಾರಿ ನನ್ನದಾಗಿತ್ತು. ಬೈರೇಗೌಡರು ಕರ್ನಾಟಕ ಸರ್ಕಾರದ ಕೃಷಿ ಸಚಿವರಾಗಿದ್ದ 1995 ರಲ್ಲಿ ಪ್ರಥಮ ಬಾರಿಗೆ ಕೃಷಿಕರನ್ನು ಪ್ರೋತ್ಸಾಹಿಸುವ ಸಲುವಾಗಿ ವಿಧಾನಸೌಧ ಮುಂದೆ ಕೃಷಿ ಪ್ರಶಸ್ತಿ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಾಗಿತ್ತು. ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ಸಿಗಲು, ಜಿಲ್ಲೆಯ ರಸ್ತೆಗಳ ಅಭಿವೃದ್ಧಿಗೆ ಅವರು ಪಟ್ಟ ಪ್ರಯತ್ನ, ಕೆ.ಪಿ.ಟಿ.ಸಿ.ಎಲ್. ಸಬ್ ಸ್ಟೇಷನ್‌ಗಳು ಹೆಚ್ಚು ನಿರ್ಮಾಣವಾಗಲು ಅವರ ಅವಿರತ ಹೋರಾಟ, ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯಲ್ಲಿ ಪ್ರೌಢಶಾಲೆಗಳ ಪ್ರಾರಂಭ ಮಾಡಲು ತೆಗೆದುಕೊಂಡ ಕ್ರಮಗಳು....... ಇವೆಲ್ಲಾ ಕೋಲಾರ ಜಿಲ್ಲೆಗೆ ಅವರು ಕೊಟ್ಟ ಕೊಡುಗೆಗಳಾಗಿವೆ. ಕೋಲಾರದಲ್ಲಿ ಕೃಷಿ ಭವನ ಮತ್ತು ಸಂಶೋಧನಾ ಕೇಂದ್ರವನ್ನು ಬೈರೇಗೌಡರ ಹೆಸರಿನಲ್ಲಿ ನಿರ್ಮಾಣ ಮಾಡುವ ಕಾರ್ಯವನ್ನು ಸರ್ಕಾರ ಮತ್ತು ಜನಪ್ರತಿನಿಧಿಗಳಾದ ನಾವೆಲ್ಲರೂ ಕೈಗೆತ್ತಿಕೊಳ್ಳಬೇಕು ಎಂದು ನಾನು ವಿನಮ್ರವಾಗಿ ಭಾವಿಸುತ್ತೇನೆ. ಅವರ ಪುತ್ರರಾದ ಕೃಷ್ಣ ಬೈರೇಗೌಡರು ಈಗಾಗಲೇ ಸಾರ್ವಜನಿಕ ಜೀವನದಲ್ಲಿ ಶಾಸಕರಾಗಿ ಸಾರ್ವಜನಿಕ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿ ಜನತೆಯ ಗಮನ ಸೆಳೆದಿರುವುದು ಕೂಡ ಕೀರ್ತಿಶೇಷರಾದ ಬೈರೇಗೌಡರ ಜಿಲ್ಲಾ ಅಭಿವೃದ್ಧಿಯ ಕನಸಿನ ಭಾಗವಾಗಿದೆ. ಅವರ ಕುಟುಂಬ ವರ್ಗದವರಿಗೂ ಕೂಡ ಶುಭಾಶಯಗಳನ್ನು ಕೋರುತ್ತೇನೆ.

ಪ್ರತಿಭಾವಂತ ಲೇಖಕರಾದ ಕೆ. ಪ್ರಹ್ಲಾದರಾವ್ ಅವರು ಕೋಲಾರ ಜಿಲ್ಲೆಯಲ್ಲಿ ಪ್ರಥಮವಾಗಿ 70ರ ದಶಕದಲ್ಲಿ ಪತ್ರಿಕೆಯನ್ನು ಪ್ರಾರಂಭಿಸಿದ ಪತ್ರಕರ್ತರಾಗಿದ್ದಾರೆ. ಇವರು ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆಯಲ್ಲಿ ದಿವಂಗತ ಶ್ರೀ ಬೈರೇಗೌಡರ ಬಗ್ಗೆ ಪುಸ್ತಕವನ್ನು ರಚಿಸಿದ್ದಾರೆ. ಇವರಿಗೂ ಶುಭ ಕೋರುತ್ತೇನೆ.

# ನನ್ನ ರಾಜಕೀಯ ಗುರು

– ಕೃಷಿ ಸಚಿವ ಕೆ. ಶ್ರೀನಿವಾಸಗೌಡ

ನನ್ನ ರಾಜಕೀಯ ಗುರು ಬೈರೇಗೌಡರು ನನ್ನಂಥವರನ್ನು ರಾಜಕೀಯವಾಗಿ ಬೆಳೆಸಿ, ಮಾರ್ಗದರ್ಶನ ನೀಡಿ, ಉನ್ನತ ಸ್ಥಾನಗಳನ್ನು ಅಲಂಕರಿಸುವಂತೆ ಮಾಡಿದ್ದಾರೆ. ಜಿಲ್ಲೆಯ ಧೀಮಂತ ರಾಜಕಾರಣಿ, ಕೃಷಿಕರ ಬಗ್ಗೆ ಉತ್ಕಟವಾದ ಕಾಳಜಿ ಹೊಂದಿದ್ದರು ಎನ್ನುವುದಕ್ಕೆ 1972 ರಲ್ಲಿ ವಿಧಾನಸಭೆಗೆ ಮೊದಲ ಬಾರಿ ಆಯ್ಕೆಯಾದಾಗ, ದಿಟ್ಟ ಮಹಿಳೆ, ವಿಧಾನ ಸಭಾಧ್ಯಕ್ಷೆ ಕೆ.ಎಸ್. ನಾಗರತ್ನಮ್ಮ ಅವರ ಮುಂದೆ ವಿಧಾನ ಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ರೈತರಿಗೆ ಅವರ ಬೆಳೆಗೆ ಯೋಗ್ಯ ಬೆಲೆ, ಸಮರ್ಪಕ ವಿದ್ಯುತ್ ಪೂರೈಕೆಯ ವ್ಯವಸ್ಥೆಯಾಗುವವರೆಗೆ ಹೋರಾಡುವುದಾಗಿ ಮತ್ತೊಂದು ಪ್ರತಿಜ್ಞೆ ಸ್ವೀಕರಿಸಿದರು. ವಿಧಾನಸೌಧದಲ್ಲಿ ರೈತರ ಬಗ್ಗೆ ಮೊದಲ ಕೂಗು ಹಾಕಿದ ಸಿ.ಬಿ. ಕಟ್ಟಕಡೆಯವರೆಗೂ ಆ ಕೂಗನ್ನು ನಿಲ್ಲಿಸದೆ ಅಗಲಿದರು.

ವಿಧಾನ ಸಭೆಯಲ್ಲಿ ಸಚಿವರಾಗಿ, ಸದಸ್ಯರಾಗಿ, ಶಾಸಂಕಾಗ ಪಕ್ಷದ ನಾಯಕರಾಗಿ, ಪಕ್ಷದ ಆಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಬೈರೇಗೌಡರು, ಹುದ್ದೆ ಯಾವುದೇ ಆಗಿದ್ದರೂ, ಕೃಷಿಕರ ಸಮಸ್ಯೆ ಪ್ರಸ್ತಾಪವಾದಾಗ, ಸಾಕಷ್ಟು ಅಂಕಿಅಂಶಗಳೊಡನೆ ವಿಷಯವನ್ನು ಎಲ್ಲರಿಗೂ ಮನದಟ್ಟಾಗುವಂತೆ ಪ್ರತಿಪಾದನೆ ಮಾಡುತ್ತಿದ್ದರು.

ನನ್ನ ಮತ್ತು ಬೈರೇಗೌಡರ ಸ್ನೇಹ 1967 ರಿಂದ ಪ್ರಾರಂಭವಾಗುತ್ತದೆ. ಆ ವರ್ಷ ವಿಧಾನಸಭಾ ಚುನಾವಣೆಗೆ, ವೇಮಗಲ್ ವಿಧಾನಸಭಾ ಕ್ಷೇತ್ರದಿಂದ ಬೈರೇಗೌಡರನ್ನು ಉಮೇದುವಾರರಾಗಿ ಮಾಡಬೇಕೆಂಬ ಉದ್ದೇಶದಿಂದ ಪಿ. ವೆಂಕಟಗಿರಿಯಪ್ಪ, ರಾಮರಾವ್, ಮುನಿವೆಂಕಟಸ್ವಾಮಿ, ಗಂಗಿರೆಡ್ಡಿಯವರು ಚೌಡದೇನಹಳ್ಳಿಗೆ ಹೋಗಿದ್ದರು. ಅವರ ಜೊತೆ ವಿದ್ಯಾರ್ಥಿ ನಾಯಕನಾಗಿ ನಾನೂ ಇದ್ದೆ. ಬೈರೇಗೌಡರ ತಂದೆ, ಹಿರಿಯ ಚೇತನ ಚೌಡೇಗೌಡರು ಎಲ್ಲರನ್ನೂ ಬರಮಾಡಿಕೊಂಡು, ಕಾಫಿಗೆ ಹೇಳಿದ್ದರು. ಅಷ್ಟರಲ್ಲಿ ಪಿ.ವಿ.ಯವರು ತಾವು ಬಂದ ಉದ್ದೇಶ ತಿಳಿಸಿ, ಬೈರೇಗೌಡರನ್ನು ಸ್ಪರ್ಧಾಳು ಮಾಡಬೇಕೆಂಬ ಅಪೇಕ್ಷೆ ವ್ಯಕ್ತಪಡಿಸಿದರು. ಚೌಡೇಗೌಡರು ಸಮ್ಮತಿಸಿದರು. ಆಗ ಪಿವಿಯವರು, ಹೊಸದಾಗಿ ರಚಿತವಾಗಿರುವ ಕ್ಷೇತ್ರದಲ್ಲಿ ನಿಮ್ಮ ಬೀಗರು ಆಂಜನೇಯರೆಡ್ಡಿ, ಅವರ ಪುತ್ರ ಚೌಡರೆಡ್ಡಿ ಪ್ರಭಾವ ಇರುವ ಬಗ್ಗೆ ತಿಳಿಸಿ, ಆಂಜನೇಯರೆಡ್ಡಿ ಬಂದು ಒತ್ತಾಯಿಸಿ, ಉಮೇದುವಾರಿಕೆ ವಾಪಾಸಾತಿಗೆ ಆಗ್ರಹಿಸಿದರೆ ಎಂದರು. ತಕ್ಷಣ ಚೌಡೇಗೌಡರು ಕಾಫಿ ತರಲು ಹೇಳಿದ್ದನ್ನು ರದ್ದುಪಡಿಸಿ, ಎಲ್ಲರಿಗೂ ಹಾಲು ತರಲು ತಿಳಿಸಿದರು. ಎಲ್ಲರಿಗೂ ಹಾಲು ಕೊಟ್ಟು, ಈ ಹಾಲಿನ ಆಣೆ ನನ್ನ ಮಗ ಚುನಾವಣೆಗೆ ನಿಲ್ಲುವುದು ಗ್ಯಾರಂಟಿ. ಯಾವುದೇ ಒತ್ತಡಕ್ಕೂ ಮಣಿಯುವುದಿಲ್ಲ ಎಂದು ಪ್ರಮಾಣ ಮಾಡಿದರು.

67ರ ಚುನಾವಣೆಯಲ್ಲಿ ವೇಮಗಲ್ ಕ್ಷೇತ್ರಕ್ಕೆ ಹೋಳೂರು ಹೋಬಳಿಯನ್ನು ಸೇರಿತ್ತು. ನಮ್ಮ ಊರು ಕುಡುವನಹಳ್ಳಿ ನಮ್ಮ ತಂದೆ ಪ್ರಚಾರ ಸಭೆ ಏರ್ಪಡಿಸಿದ್ದರು. ಸಭೆಯಲ್ಲಿ ನಾನೂ

ಪಾಲ್ಗೊಂಡಿದ್ದೆ. ಚುನಾವಣೆ ದಿನ ಅಣ್ಣೆಹಳ್ಳಿ ಮತಗಟ್ಟೆಯಲ್ಲಿ ನಾನು ಬೈರೇಗೌಡರ ಚುನಾವಣಾ ಏಜೆಂಟ್ ಆಗಿ ಕಾರ್ಯ ನಿರ್ವಹಿಸಿದೆ. ಕಾಲೇಜಿನ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ನಾಗಿದ್ದ ನನ್ನ ಜೊತೆ ಕಾಲೇಜಿನ ಬಹುತೇಕ ವಿದ್ಯಾರ್ಥಿಗಳು ಸಿಬಿ ಪರ ಪ್ರಚಾರದಲ್ಲಿ ನಿರತರಾದರು. ಆದರೆ ಆ ಎಲೆಕ್ಷನ್‌ನಲ್ಲಿ ಜಿ. ನಾರಾಯಣಗೌಡರು ಜಯಶಾಲಿಗಳಾಗಿ ಬೈರೇಗೌಡರು ಸೋತರು.

ಶ್ರೀಯುತ ಭ್ರಷ್ಟಾಚಾರ ನಿಯಂತ್ರಣಕ್ಕೆ ಜೀವಮಾನ ಪರ್ಯಂತ ಶ್ರಮಿಸಿದರು. ವಿಧಾನ ಸಭಾ ಚುನಾವಣೆಯಲ್ಲಿ ಸೋತ ಗೌಡರನ್ನು ವೆಂಕಟಗಿರಿಯಪ್ಪನವರು ಪ್ರಾಥಮಿಕ ಭೂ ಬ್ಯಾಂಕ್ ಅಧ್ಯಕ್ಷರನ್ನಾಗಿ ಮಾಡಿದರು. ಪ್ರತಿ ಹಳ್ಳಿಯ ರೈತನಿಗೂ ಬಾವಿ, ಪಂಪ್‌ಸೆಟ್ ಮಂಜೂರು ಮಾಡಿದರು. ಬಾವಿ, ಪಂಪ್‌ಸೆಟ್‌ಗಳಿಗೆ ಸಾಲ ಪಡೆಯುವ ರೈತರು ಯಾವುದೇ ಲಂಚ ನೀಡಬಾರದೆಂಬ ಕಾರಣಕ್ಕೆ ಭೂ-ಬ್ಯಾಂಕ್‌ಗೆ ಬರುವ ಎಲ್ಲ ಅರ್ಜಿದಾರರು ಇವರ ಛೇಂಬರ್ಸ್ ಮೂಲಕವೇ ಹೋಗಿ ಕಾರ್ಯದರ್ಶಿ, ಸಿಬ್ಬಂದಿಯನ್ನು ನೋಡುವಂತೆ ವ್ಯವಸ್ಥೆ ಮಾಡಿದರು. ಅರ್ಜಿಗಳನ್ನು ತಮ್ಮ ಮುಂದೆಯೇ ಪರಿಶೀಲಿಸಿ, ಕೊರತೆಯನ್ನು ತುಂಬಲು ಸೂಚಿಸುತ್ತಿದ್ದರು. ಇದರಿಂದಾಗಿ ತಾಲ್ಲೂಕಿನ ಜನತೆ ಅದರಲ್ಲೂ ಯುವಕರು ಇವರತ್ತ ವಾಲಿದರು. 68ರಲ್ಲಿ ನಡೆದ ತಾಲ್ಲೂಕು ಮಂಡಲಿ ಚುನಾವಣೆಗೆ ಬೈರೇಗೌಡರು ಸ್ಪರ್ಧಿಸಿದರು. ತಾಲ್ಲೂಕಿನ ಶೇಕಡ 95ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅವರ ಪರ ಪ್ರಚಾರಕ್ಕೆ ಇಳಿದರು. ಬೈರೇಗೌಡರು ಮತ್ತು ಅವರ ಜೊತೆಯವರು ವಿಜಯ ಸಾಧಿಸಿದರು. ಮೊಟ್ಟಮೊದಲ ಬಾರಿಗೆ ತಾಲ್ಲೂಕು ಮಂಡಳಿಯ ಆಡಳಿತ ಕಾಂಗ್ರೆಸ್ಸಿನ ಕೈತಪ್ಪಿ, ವಿರೋಧ ಪಕ್ಷದ ಪಾಲಾಯಿತು. ಬೈರೇಗೌಡರು ತಾಲ್ಲೂಕು ಮಂಡಲಿ ಅಧ್ಯಕ್ಷರಾಗಿ, ತಾಲ್ಲೂಕಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಜನಾನುರಾಗಿಗಳಾದರು. ಇದು ಅವರ ಮುಂದಿನ ರಾಜಕೀಯ ಭವಿಷ್ಯಕ್ಕೆ ಭದ್ರವಾದ ತಳಪಾಯ ಹಾಕಿಕೊಟ್ಟಿತು.

ಸರಕು ಸಾಗಣೆ ಲಾರಿಗಳು ಒಂದು ತಿಂಗಳು ಮುಷ್ಕರ ನಡೆಸಿದ್ದರಿಂದ ಬೆಲೆ ಇದ್ದರೂ ಟೊಮೊಟೋ ಸಾಗಿಸಲು ತೊಂದರೆಯಾದಾಗ, ಲಾರಿ ಸಂಪು ನಿಲ್ಲಿಸಬೇಕೆಂದು ಆಗ್ರಹಿಸಿ, ಬೈರೇಗೌಡರು ನಾವು ವಿಧಾನ ಸೌಧದ ಮುಂದೆ ಟೊಮೊಟೋ ಸುರಿದು ಪ್ರತಿಭಟನೆ ನಡೆಸಿದ್ದು, ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿ ಉಳಿದಿದೆ.

ಜಿಲ್ಲೆಗೆ ನೆಟ್ಕಲ್ ಬಳಿಯಿಂದ ಕಾವೇರಿ ನೀರು ತರಿಸುವ ಸುಮಾರು 560 ಕೋಟಿ ರೂಪಾಯಿ ವೆಚ್ಚದ ಯೋಜನೆಗೆ ಬೈರೇಗೌಡರು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದಿದ್ದರು. ಇದರಿಂದ 133 ಹಳ್ಳಿಗಳು ಹಾಗೂ ಏಳು ಪಟ್ಟಣಗಳಿಗೆ ನೀರು ಪೂರೈಸುವ ಉದ್ದೇಶವಿತ್ತಾದರೂ ಯೋಜನೆ ಕಾರಣಾಂತರಗಳಿಂದ ಕಾರ್ಯೋನ್ಮುಖವಾಗಲಿಲ್ಲ.

ಎಷ್ಟೋ ರಾಜಕೀಯ ನಾಯಕರು, ಎರಡನೇ ಹಂತದ ನಾಯಕರನ್ನು ಬೆಳೆಸುವುದಿಲ್ಲ ಎಂಬ ಅಪಖ್ಯಾತಿ ಇದೆ. ಆದರೆ ಬೈರೇಗೌಡರು ನನ್ನಂಥವರನ್ನು ರಾಜಕೀಯವಾಗಿ ಬೆಳೆಸಿದರು. 1969-70 ರಲ್ಲಿ ಭೂ ಬ್ಯಾಂಕ್‌ಗೆ ನಿರ್ದೇಶಕರನ್ನಾಗಿ ಮಾಡಿದರು. ಆನಂತರ ತಾಲ್ಲೂಕು ಸೊಸೈಟಿಗೆ ಬರಲು ನನಗೆ ಕ್ಷೇತ್ರವಿಲ್ಲದ್ದರಿಂದ ಬೈರೇಗೌಡರು ನರಸಾಪುರ ಸೊಸೈಟಿಯಿಂದ ನನ್ನನ್ನು ಸ್ಪರ್ಧಿಸುವಂತೆ ಮಾಡಿ ಜಯ ತಂದುಕೊಟ್ಟರು. ಆ ನಂತರ ಕೇವಲ ನಾಲ್ಕು ಜನ ನಮ್ಮಕಡೆ ನಿರ್ದೇಶಕರಿದ್ದಾಗಲೂ, ಸಿಬಿ ಚಾಣಕ್ಯೆಯ ರಾಜಕೀಯ ತಂತ್ರರೂಪಿಸಿ, ನನ್ನನ್ನು ಅಧ್ಯಕ್ಷನಾಗಿ ಮಾಡಿದರು.

ಬೈರೇಗೌಡರಿಗೆ ಸಂಪರ್ಕಕ್ಕೆ ಬಂದಾಗಿನಿಂದಲೂ, ನಾನೂ ಅವರು ಒಟ್ಟಿಗೆ ಇದ್ದೆವು. ಆದರೆ ಒಮ್ಮೆ ಮಾತ್ರ ಹೆಗಡೆ - ದೇವೇಗೌಡರ ವಿರಸದಲ್ಲಿ ಅವರು ದೇವೇಗೌಡರ ಜೊತೆ ನಿಂತರು. ನಾನು ಹೆಗಡೆ ಬಣದಲ್ಲಿ ಉಳಿದೆ. ಆದರೆ ನಮ್ಮ ಸ್ನೇಹ, ವಿಶ್ವಾಸಕ್ಕೆ ಮಾತ್ರ ಕುಂದು ಬಂದಿರಲಿಲ್ಲ. ಮತ್ತೆ ಹೆಗಡೆ - ದೇವೇಗೌಡರನ್ನು ಒಂದು ಮಾಡಲು ನಾವಿಬ್ಬೂ ಸ್ನೇಹಿತರ ಜೊತೆ ಸೇರಿ ಯತ್ನಿಸಿ, ಯಶಸ್ವಿಯಾದೆವು.

ಬೈರೇಗೌಡರು ದೇವೇಗೌಡರಿಗೆ ನೆರವು ನೀಡಿದ್ದರೂ, ಬೈರೇಗೌಡರು ಉಪಮುಖ್ಯಮಂತ್ರಿಯಾಗುವ ಅವಕಾಶವನ್ನು ತಪ್ಪಿಸಿದರು. ಸಿಬಿಗೆ ಕಡೆಯವರೆಗೂ ಈ ಬಗ್ಗೆ ಅಸಮಾಧಾನವಿತ್ತು. ಈ ಆಘಾತ ಅವರಲ್ಲೇ ಉಳಿದಿತ್ತು. ಪಕ್ಷದ ಅಧ್ಯಕ್ಷರಾಗಿದ್ದಾಗ, ಬೈರೇಗೌಡರು ಸಾಕಷ್ಟು ಮಾನಸಿಕ ತೊಂದರೆ ಅನುಭವಿಸಿದರು. ಜಿಲ್ಲೆಯಲ್ಲಿ ಜನತಾ ದಳದ ಬೆಳವಣಿಗೆಗೆ ಅವರ ಕೊಡುಗೆ ಅಪಾರ. ಅವರು ಜನಮಾನಸದಲ್ಲಿ ನಿಂತಿದ್ದರು ಎಂಬುದಕ್ಕೆ ಅವರ ಮರಣವೇ ಸಾಕ್ಷಿ. ಅಂತಿಮ ಸಂಸ್ಕಾರಕ್ಕೆ ಎಷ್ಟೊಂದು ಜನ, ನಾಯಕರು ಆಗಮಿಸಿದ್ದರು.

ನಮ್ಮೆಲ್ಲರ ಹಿರಿಯಣ್ಣನಂತಿದ್ದ ಸಿಬಿಯವರ ಸ್ಥಾನವನ್ನು ತುಂಬಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಅವರ ಆದರ್ಶಗಳನ್ನು ಅನುಸರಿಸಿ, ಅವರು ಯಾವುದಕ್ಕಾಗಿ ಹೋರಾಡಿದ್ದರೋ ಅದರತ್ತ ನಾವು ಕೈ ಜೋಡಿಸುವುದು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿಯಾಗಿದೆ.

## ಸ್ನೇಹಕ್ಕೂ ವಿರೋಧಕ್ಕೂ ಲಾಯಕ್ ಸಿ.ಬಿ.

**– ಕೆ.ಆರ್. ರಮೇಶ್‌ಕುಮಾರ್, ಮಾಜಿ ವಿಧಾನಸಭಾಧ್ಯಕ್ಷರು**

ಸ್ನೇಹಕ್ಕೂ ವಿರೋಧಕ್ಕೂ ಲಾಯಕ್ಕಾಗಿದ್ದವರು ಸಿ. ಬೈರೇಗೌಡರು. ಕೋಲಾರ ಜಿಲ್ಲೆ ಕಂಡ ರಾಜಕೀಯ ನಾಯಕರಲ್ಲಿ ಎಂ.ವಿ. ಕೃಷ್ಣಪ್ಪನವರ ನಂತರ ಜನಮನದಲ್ಲಿ ಉಳಿದು ಗೌರವ, ಆದರಕ್ಕೆ ಆ ಪ್ರಮಾಣದಲ್ಲಿ ಪಾತ್ರರಾದವರು ಸಿ.ಬಿ. ಬೇರೊಬ್ಬ ಬೈರೇಗೌಡ ನನ್ನ ಮನಸ್ಸಿನಲ್ಲಿ ಬರುವುದಿಲ್ಲ. ಸುಳಿಯುವುದೂ ಇಲ್ಲ. ನಾವು ಬೈರೇಗೌಡರೊಡನೆ ಕಲೆತು ಮಾತನಾಡುವುದು ಬೇಕಾದಷ್ಟು ಇತ್ತು. ಎಲ್ಲ ಕೆಲಸ ಅರ್ಧಕ್ಕೆ ನಿಂತಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಹಳೆಯ ನೆನಪು ಕಾಡುತ್ತದೆ - ಕಾಡುತ್ತಿದೆ.

ನನ್ನ ಬೈರೇಗೌಡರ ಸಂಬಂಧ ಒಮ್ಮೆ ವಿರೋಧ, ಮತ್ತೊಮ್ಮೆ ಗೆಳೆತನ, ಆತ್ಮೀಯತೆ, ಸೈದ್ಧಾಂತಿಕ ಭಿನ್ನಮತದಿಂದ ದೂರವಾದರೂ ಮತ್ತೆ ರಾಜಕೀಯ ಪರಿಸ್ಥಿತಿಗಳ ಒತ್ತಡದಿಂದ ಒಂದಾಗುತ್ತಿದ್ದೆವು.

ನನ್ನ ಅವರ ಸಂಬಂಧ 30 ವರ್ಷಗಳದು. 1969ರಲ್ಲಿ ಕಾಂಗ್ರೆಸ್ ಇಬ್ಭಾಗ ಆದಾಗ ನಾನು ಯುವ ಕಾಂಗ್ರೆಸ್‌ನಲ್ಲಿ ಓಡಾಡುತ್ತಿದ್ದೆ. ಮುಖತಃ ಅವರ ಭೇಟಿಯಾಗಿರಲಿಲ್ಲವಾದರೂ ಸಿ.ಬಿ, ಪಿ.ವಿ. ಅವರು ಒಂದು ಸಭೆಯಲ್ಲಿ ನನ್ನನ್ನು ಟೀಕಿಸಿದರೆಂದು ತಿಳಿದಿದ್ದೆ. ಆದರೆ ಆನಂತರ ಅದು ಮರೆತು ಹೋಯಿತು. 1974ರಲ್ಲಿ ಒಂದು ಸಮಾರಂಭದಲ್ಲಿ ಬೈರೇಗೌಡರ ಔಪಚಾರಿಕ ಪರಿಚಯವಾಯಿತು.

1978ರ ಚುನಾವಣೆಯಲ್ಲಿ ವೇಮಗಲ್ ಕ್ಷೇತ್ರದಿಂದ ಅವರು ಪರಾಭವಗೊಂಡರು. 1980ರಲ್ಲಿ ಅರಸ್ ಕಾಂಗ್ರೆಸ್ ಬಿಟ್ಟಿದ್ದರು. ಆಗ ಜನ್ನಪಲ್ಲಿ ರಾಮರೆಡ್ಡಿಯವರು ನನ್ನ ಸಿ.ಬಿ ಸಂಪರ್ಕ ಏರ್ಪಡಿಸಿದರು. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನನ್ನನ್ನು ನಿಲ್ಲಿಸಲು ಬೈರೇಗೌಡರು ಆಲೋಚಿಸಿದ್ದರು. ಭೇಟಿಯಾದಾಗ ರಾಜಕಾರಣ ಚರ್ಚೆಯಾಯಿತು.

1983ರಲ್ಲಿ ಬೈರೇಗೌಡರೊಂದಿಗೆ ನಾನು ನಿಕಟ ಸಂಪರ್ಕ ಇಟ್ಟು ಕೊಂಡಿದ್ದು, ಆ ದಿನಗಳಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಡುವ ಮನೋಸ್ಥೈರ್ಯವನ್ನು ನಮ್ಮ ಸ್ನೇಹಿತರು, ಮುಖಂಡರು, ಕಾರ್ಯಕರ್ತರು ಕಳೆದುಕೊಂಡಿದ್ದರು. ಆಗ ಎಲ್ಲರೂ ಒಂದು ರೀತಿ ಆತ್ಮವಂಚನೆ ಮಾಡಿ ಕೊಂಡೆವು. ಬೈರೇಗೌಡರು ಕಾಂಗ್ರೆಸ್ ಸೇರಲು ಪ್ರಯತ್ನಿಸಿದ್ದರು. ಆದರೆ ಅದಾಗಲಿಲ್ಲ. ಅನಿವಾರ್ಯ ಕಾರಣಗಳಿಂದ ನಾನು, ಬೈರೇಗೌಡರು ಶ್ರೀನಿವಾಸಪುರ, ವೇಮಗಲ್‌ಗಳಿಂದ ಪಕ್ಷೇತರರಾಗಿ ವಿಧಾನಸಭೆಗೆ ಸ್ಪರ್ಧಿಸಿದೆವು. ನಾನು ಸೋತೆ, ಅವರು ಗೆದ್ದರು. ಆನಂತರ ಅವರು ಸೋಲನ್ನೇ ಕಾಣಲಿಲ್ಲ.

1983ರಲ್ಲಿ ರಾಜ್ಯದ ಮೊದಲ ಕಾಂಗ್ರೆಸ್ಸೇತರ ಸರ್ಕಾರ ಸ್ಥಾಪನೆಯಲ್ಲಿ ಸಿಬಿ ಬಹಳ ಪ್ರಮುಖ ಪಾತ್ರ ವಹಿಸಿದ್ದರು. ಪ್ರತಿನಿತ್ಯ ಕಾಂಗ್ರೆಸ್ ಸರ್ಕಾರ ಎದುರಿಸಲು ತಯಾರಿ ನಡೆಸುತ್ತಿದ್ದರು.

1984ರ ಅಕ್ಟೋಬರ್ 31ರಂದು ಇಂದಿರಾಗಾಂಧಿ ಅವರು ಕಗ್ಗೊಲೆಯಾದ ನಂತರ ನಡೆದ ಲೋಕಸಭೆ ಚುನಾವಣೆಯಲ್ಲಿ ರಾಜೀವ್ ಗಾಂಧಿ ಪರ ಅನುಕಂಪದ ಅಲೆ ಪ್ರಚಂಡವಾಗಿತ್ತು. ಆದರೂ ಕೋಲಾರ ಮೀಸಲು ಕ್ಷೇತ್ರದ ಮಟ್ಟಿಗೆ ಬೈರೇಗೌಡರ ನೇತೃತ್ವದಲ್ಲಿ ಕೆ.ಎಂ. ಕೃಷ್ಣಾರೆಡ್ಡಿ, ಪಿ. ವೆಂಕಟಗಿರಿಯಪ್ಪ, ನಾನು ಹಾಗೂ ಇತರರ ಹೋರಾಟದಿಂದ ಜನತಾಪಕ್ಷದ ಅಭ್ಯರ್ಥಿ ಡಾ: ವೆಂಕಟೇಶ್ ಅವರನ್ನು ಗೆಲ್ಲಿಸಿದ್ದೂ ಆಯಿತು.

ಬೈರೇಗೌಡರಿಗೆ ಕೆಲವು ಸಲ ಹುಚ್ಚು ಆಲೋಚನೆಗಳು ಬರುತ್ತಿತ್ತು. ಇಂತಹ ಒಂದು ಆಲೋಚನೆಯ ಫಲವೇ ವೀರಪ್ಪಮೊಯ್ಲಿ ಟೇಪ್ ಹಗರಣ. ಕೆಲವು ದಿವಸಗಳ ಮಟ್ಟಿಗೆ ಈ ಹೋರಾಟಕ್ಕೆ ಸಾರ್ವಜನಿಕವಾಗಿ ಕುತೂಹಲವನ್ನು ಕೆರಳಿಸಿದ್ದು ಬಿಟ್ಟರೆ, ನಂತರ ಇದು ಯಾವುದೇ ರೀತಿಯ ನ್ಯಾಯಯುತ ಕೊನೆ ಕಾಣಲಿಲ್ಲ. ತಮ್ಮ ಈ ಸಾಹಸದ ಬಗ್ಗೆ ಬೈರೇಗೌಡರು ಪಶ್ಚಾತ್ತಾಪ ಪಟ್ಟಿದ್ದೂ ಉಂಟು.

1985ರ ವಿಧಾನಸಭಾ ಚುನಾವಣೆಯಲ್ಲಿ ನಾವಿಬ್ಬರೂ ಪಕ್ಷದಿಂದ ಆರಿಸಿ ಬಂದೆವು. ಡಾ: ಜೀವರಾಜ ಆಳ್ವ ಅವರು ಕೃಷ್ಣಾರೆಡ್ಡಿಯವರನ್ನು ಮಂತ್ರಿಯಾಗಿ ಮಾಡಲು ಬಯಸಿದ್ದರು. ಬೈರೇಗೌಡರು ದೇವೇಗೌಡರ ಆತ್ಮೀಯರು. ಅವರನ್ನು ತಪ್ಪಿಸಬೇಕು ಎಂದು ಭಾವಿಸಿದ್ದರು. ಹೆಗಡೆಯವರ ಮನಸ್ಸು ಗೊತ್ತಿರಲಿಲ್ಲ.

ಒಂದು ದಿನ ನಾನು ಊರಿನಲ್ಲಿ ಇದ್ದಾಗ ಬೈರೇಗೌಡರು ಹೇಳಿ ಕಳುಹಿಸಿದರು. ಸಚಿವ ಸ್ಥಾನಕ್ಕೆ ನನ್ನ ಹೆಸರು ಹೇಳಲು ಸಾಧ್ಯವೇ? ಎಂದು ಕೇಳಿದರು. ನಾನೂ ಮಂತ್ರಿಗಿರಿಯ ಒಬ್ಬ ಆಕಾಂಕ್ಷಿ ಎಂದವರು ಭಾವಿಸಿದ್ದರೇನೋ. ಆದರೆ ನನಗೆ ಯಾವ ಹಂಬಲವೂ ಇರಲಿಲ್ಲ. ನಾನು ಬೈರೇಗೌಡರ ಹೆಸರನ್ನು ಪಕ್ಷದ ವರಿಷ್ಠರಿಗೆ, ಹೆಗಡೆಯವರಿಗೆ ಸೂಚಿಸಿದ್ದೆ. ಆ ಸಮಯದಲ್ಲಿ ನನ್ನ, ಅವರ ಸ್ನೇಹ ಗಾಢವಾಯಿತು. ಆದರೆ ಕೆಲವರು ನನ್ನಿಂದ ದೂರವಾದರು.

ಆದರೆ ಕಾರಣಾಂತರಗಳಿಂದ ಹೆಗಡೆಯವರು ಮಂತ್ರಿ ಮಂಡಲದಿಂದ ಬೈರೇಗೌಡರನ್ನು ಕೈಬಿಟ್ಟರು. ಅಧಿಕಾರ ಕಳೆದುಕೊಂಡ ಬೈರೇಗೌಡರು ಹೆಗಡೆಯವರನ್ನು ಕ್ಷಮಿಸಲು ತಯಾರಿರಲಿಲ್ಲ. ಪ್ರಮುಖ ಭಿನ್ನಮತೀಯ ನಾಯಕರಾದರು. ತಾತ್ವಿಕ ಭಿನ್ನಾಭಿಪ್ರಾಯಗಳು ಹೆಚ್ಚಾದವು. ದೇವೇಗೌಡರ ನೇತೃತ್ವದಲ್ಲಿ ಭಿನ್ನಮತ ಉಲ್ಬಣಗೊಂಡು 1989ರಲ್ಲಿ ಜನತಾ ಪಕ್ಷ ಹೋಳಾಯಿತು. ಆಗ ನಾನು ಬೈರೇಗೌಡರನ್ನು ವಿರೋಧಿಸಿದ್ದೆ.

ಬೈರೇಗೌಡರ ದೌರ್ಬಲ್ಯ ಮತ್ತು ವರ್ಚಸ್ಸೇನೆಂದರೆ, ಒಂದು ಸಲ ಒಬ್ಬ ವ್ಯಕ್ತಿಯನ್ನು ವಿರೋಧ ಮಾಡಲು ಪ್ರಾರಂಭಿಸಿದರೆ, ಆನಂತರ ವಿರೋಧಕ್ಕೆ ಯಾವುದೇ ಅಡೆತಡೆಗಳು ಇರಕೂಡದು. ಜಾತಿ ಕಾರಣದಿಂದ ನಾನು ಹೆಗಡೆಯವರನ್ನು ಬೆಂಬಲಿಸುತ್ತಿದ್ದೇನೆಂದು ಅನುಮಾನಿಸಿದರು. ಇದರಿಂದ ಇಬ್ಬರ ನಡುವಿನ ವಿರೋಧ ತೀವ್ರವಾಯಿತು. ಅನೇಕ ಮುಜುಗರದ ಕ್ಷಣಗಳನ್ನು ಕಾಣಬೇಕಾಯಿತು.

1989ರ ಚುನಾವಣೆಯಲ್ಲಿ ಸ್ವತಃ ಬೈರೇಗೌಡರೇ ನನ್ನ ವಿರುದ್ಧ ಅಭ್ಯರ್ಥಿ ಹಾಕಿಸಿದರು. ಆ ಬಾರಿ ನಾನು ಸೋತೆ. ಇಬ್ಬರೂ ತೀರಾ ರಾಜಕೀಯ ವಿರೋಧಿಗಳಾದೆವು. ಆ ಸಮಯದಲ್ಲಿ ಪರಿಷತ್ ಚುನಾವಣೆ ಬಂದಿತು. ವಿ. ಕರಿಯಪ್ಪ ಅಧಿಕೃತ ಅಭ್ಯರ್ಥಿಯಾದರು. ಆದರೆ ಬೈರೇಗೌಡರು ಪಕ್ಷದಿಂದ ಹೊರಗೆ ಅವರ ಗುರು ಪಿ. ವೆಂಕಟಗಿರಿಯಪ್ಪನವರಿಗೆ ಬೆಂಬಲಿಸಿದರು.

1994ರ ಚುನಾವಣೆ ವೇಳೆಗೆ ಮತ್ತೆ ಯಥಾ ಪ್ರಕಾರ ಜನತಾದಳದ ವಿವಿಧ ಬಣಗಳ ಐಕ್ಯತೆಯ ಮಾತುಕತೆ ಆರಂಭವಾಗಿ, ಎಲ್ಲ ವೈಯಕ್ತಿಕ ಸಿಟ್ಟುಗಳ ಮಧ್ಯೆ ಗೆಳೆತನ ಪ್ರಾರಂಭವಾಯಿತು. ಪಕ್ಷ ಒಂದಾಗುವ ವಾತಾವರಣ ಮೂಡಿತು. ಆಗ ಇಬ್ಬರೂ ಗೆದ್ದವು.

ಬೈರೇಗೌಡರಿಗೆ ಸಂಪ್ರದಾಯಗಳಲ್ಲಿ ತುಂಬಾ ನಂಬಿಕೆಯಿತ್ತು. ಅವರು ಕೃಷಿ ಸಚಿವರಾಗಿದ್ದರು. ನಾನಿನ್ನೂ ಏನೂ ಆಗಿರಲಿಲ್ಲ. ಆದರೆ ವಿಧಾನಸಭಾಧ್ಯಕ್ಷರು ಎಂಬ ಸೂಚನೆ ಬಂದಿತ್ತು. ಆದರೆ ಅಧಿಕೃತವಾಗಿ ನಿಯೋಜಿಸಿರಲಿಲ್ಲ. ಸ್ಪೀಕರ್ ಆಗುವ ನಿರೀಕ್ಷೆಯಿದ್ದಾಗ ಚಿನ್ನಸಂದ್ರದ ಒಂದು ಸಭೆಗೆ ನಾನು ಹೋದೆ. ಅಷ್ಟರಲ್ಲಿ ಗೌಡರು ಅಲ್ಲಿದ್ದರು. ಅವರು ಮಂತ್ರಿಯಾಗಿ ಸಭಾಧ್ಯಕ್ಷರಿಗೆ ನೀಡುವ ಗೌರವವನ್ನು ಅಂದೇ ನೀಡಿದರು. ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟಿದ್ದ ಅವರು, ಅತ್ಯಂತ ಗೌರವಯುತವಾದ ನಡವಳಿಕೆಗಳನ್ನು ಹೊಂದಿದ್ದರು.

ನಾನು ಸಭಾಧ್ಯಕ್ಷನಾದಾಗ, ಪಕ್ಷದ ಸಭೆ, ಸಮಾರಂಭಗಳಿಗೆ ಹೋಗುತ್ತಿರಲಿಲ್ಲ. ಬೈರೇಗೌಡರು ನನ್ನ ಕ್ಷೇತ್ರದ ಅಭಿವೃದ್ಧಿ ಕೆಲಸಗಳ ಬಗ್ಗೆ ಸದಾ ಚರ್ಚಿಸುತ್ತಿದ್ದರು. ಕಹಿ ಪ್ರಸಂಗಗಳು ಹೋಗಿ, ಒಳ್ಳೆಯ ವಾತಾವರಣ, ಸ್ಥಿತಿ ಮೂಡಿ ಬಂದಿತು.

ಮತ್ತೆ ಪಕ್ಷದಲ್ಲಿ ವೈಮನಸ್ಯ ಮೂಡಿತು. ಬೈರೇಗೌಡರವರು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಮತ್ತು ಸೋನಿಯಾರನ್ನು ಒಪ್ಪಲು ಸಿದ್ಧರಿರಲಿಲ್ಲ. ನಾನು ಸಹ ಅದೇ ರೀತಿ ಬಿಜೆಪಿ ಜೊತೆ ಯಾವುದೇ ಹೊಂದಾಣಿಕೆಯನ್ನೂ ಪ್ರಬಲವಾಗಿ ವಿರೋಧಿಸಿದ್ದೆ.

1999ರ ಚುನಾವಣೆಯಲ್ಲಿ ಅವರೊಟ್ಟಿಗೆ ನಿಲ್ಲುವ ಅಭಿಪ್ರಾಯವಿದ್ದರೂ, ಜೆಡಿಯು- ಬಿಜೆಪಿ ಹೊಂದಾಣಿಕೆಯಾಗಿದ್ದರಿಂದ, ನಾವು ನಾಲ್ಕೈದು ಜನ ಸ್ವತಂತ್ರವಾಗಿ ಯಾವುದೇ ದಳಕ್ಕೂ ಸೇರದೆ ಉಳಿದೆವು. (ತಟಸ್ಥ ಜನತಾದಳ) ನಾನು ಅವರ ಮನೆಗೆ ಹೋಗಿ ಸ್ವತಂತ್ರವಾಗಿ ಹೋರಾಡುವುದಾಗಿ ತಿಳಿಸಿದಾಗ ದ್ರೋಹ ಮಾಡಿದೆ ಎಂದರೂ, ಸೈದ್ಧಾಂತಿಕ ಜಿಜ್ಞಾಸೆ ಅವರಿಗೆ ಅರ್ಥವಾಗಿತ್ತು. ಅನಂತರ ನೀವು ಆರಿಸಿ ಬರಬೇಕು ಎಂದು ಹಾರೈಸಿದರೂ, ನನ್ನ ಮನಸ್ಸಿಗೆ ಅವರು ಸಹಕರಿಸಲಿಲ್ಲ ಎಂಬ ಭಾವ ಉಳಿದಿತ್ತು.

ಚುನಾವಣೆಯ ಮಧ್ಯದಲ್ಲೂ ಸಂಪರ್ಕ ಕಡಿದು ಬೀಳಲಿಲ್ಲ. ಆದರೆ ಅನಂತರ ಗೆಳೆಯರೊಬ್ಬರ ಮಗಳ ಮದುವೆಯಲ್ಲಿ ಮೊದಲ ಬಾರಿಗೆ ಸಂಧಿಸಿದಾಗ ಏಕೋ ಏನೋ ನನ್ನನ್ನು ಮಾತನಾಡಿಸಲಿಲ್ಲ. ಇದು ಆಶ್ಚರ್ಯ, ಚಿಂತೆಗೆ ದಾರಿ ಮಾಡಿಕೊಟ್ಟಿತು. ಎಣಿಕೆಗೆ ಮೊದಲೇ ಕೆಲವು ಪುಕಾರುಗಳು ಹಬ್ಬಿದವು. ಇದರ ಸಾರಾಂಶ ಬೈರೇಗೌಡರು ನನ್ನ ವಿಷಯದಲ್ಲಿ ಅಸಮಾಧಾನವಾಗಿದ್ದಾರೆ ಎಂಬುದು.

ಫಲಿತಾಂಶ ಪ್ರಕಟವಾದಾಗ ಬೈರೇಗೌಡರು ಜಯ ಗಳಿಸಿದ್ದರು. ನಾನು ಪರಾಭವಗೊಂಡಿದ್ದೆ. ಮತ್ತೆ ಇಬ್ಬರ ಸಂಬಂಧ ಕಳಚಿ ಹೋಗಿ ಉತ್ತರ ಧ್ರುವ - ದಕ್ಷಿಣ ಧ್ರುವ ಆದೆವು.

ಅಧಿಕಾರ ಹೋದ ನಂತರ, ಮತ್ತೆ ದಳ ಒಂದು ಮಾಡುವ ಪ್ರಯತ್ನ ಆರಂಭಿಸಿದೆವು. ಕನಕಪುರ ಲೋಕಸಭಾ ಉಪಚುನಾವಣೆ ಸಂದರ್ಭದಲ್ಲಿ ಪುನಃ ಭೇಟಿ. ದೇವೇಗೌಡರು - ಹೆಗಡೆ ಭೇಟಿ ಪ್ರಯತ್ನದಲ್ಲಿ ನಾನು ಮುಖ್ಯ ಪಾತ್ರ ವಹಿಸಿದ್ದೆ. ಬೈರೇಗೌಡರು ಬಹಳ ಭಾವೋದ್ವೇಗದಿಂದ ನೀವು ತಪ್ಪು ಮಾಡುತ್ತಾ ಇದ್ದೀರಿ. ಅವರು ನಮ್ಮನ್ನು ಕೆಡಿಸುತ್ತಾರೆ ಎಂದರು. ಆದರೂ ದೇವೇಗೌಡರು ಜಯಶಾಲಿಗಳಾದ ನಂತರ ಎಲ್ಲ ಐಕ್ಯತೆಯ ವಿಚಾರವನ್ನು ಬಂದ್ ಮಾಡಿದರು. ಆಗ ನಾನು ಬೈರೇಗೌಡರಲ್ಲಿ ಕ್ಷಮೆ ಯಾಚಿಸಿದೆ

ಈ ಚುನಾವಣೆ ನಂತರ ಕ್ರಮೇಣ ಪುನಃ ಆತ್ಮೀಯರಾದೆವು. ಮೂರನೆಯವರ ಸಹಾಯವಿಲ್ಲದೆ ಸ್ವತಃ ನಾವಿಬ್ಬರೇ ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಂಡೆವು.

ಪ್ರಗತಿಪರ ಜನತಾದಳ ರಾಜ್ಯಘಟಕದ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ಪ್ರಾರಂಭವಾಯಿತು. ಆಗ ನಾನು ಹೊಸಕೋಟೆ ಬಚ್ಚೇಗೌಡರ ಜೊತೆ ಹೆಚ್ಚಾಗಿ ಇರುತ್ತಿದ್ದುದರಿಂದ, ಬೈರೇಗೌಡರಿಗೆ ಅನುಮಾನ ಬಂತು. ನಾನು ನನ್ನ ಎಲ್ಲ ಪ್ರಯತ್ನ ಮಾಡಿ, ಅವರ ಸಂಶಯವನ್ನು ಆರಂಭದಲ್ಲೇ ನಿವಾರಿಸಿದೆ. ಪ್ರಗತಿ ಪರ ಜನತಾದಳದಲ್ಲಿ ಚೆನ್ನಾಗಿ ಕೆಲಸ ಮಾಡಿದೆವು. ಪಕ್ಷದ ವಿಚಾರವಾಗಿ ಅವರು ಒಂದು ದಿನವೂ ಚರ್ಚೆ ಮಾಡದೆ ಇರುತ್ತಿರಲಿಲ್ಲ.

ದೇವೇಗೌಡರು ಪ್ರಧಾನಿಯಾಗಿ ಬೆಂಗಳೂರಿಗೆ ಭೇಟಿ ನೀಡಿದಾಗ, ಸಮಾರಂಭವೊಂದರಲ್ಲಿ ಅನವಶ್ಯಕವಾಗಿ ವಿನಾಕಾರಣ ಬೈರೇಗೌಡರ ಕೃಷಿ ಖಾತೆ ಮೇಲೆ ಹರಿಹಾಯ್ದರು. ಸಭಾಧ್ಯಕ್ಷನಾಗಿದ್ದ ನಾನು ಪ್ರೊಟೋಕಾಲ್ ಮುರಿದು ಬೈರೇಗೌಡರ ಮನೆಗೆ ಹೋಗಿ ಸಮಾಧಾನ ಹೇಳಿದೆ. ಬೈರೇಗೌಡರ ಪರವಾಗಿ ದೇವೇಗೌಡರೊಡನೆ ನಿಷ್ಠೂರವಾಗಿ ಮಾತನಾಡಿದೆ.

ನಾಯಕತ್ವದ ಪ್ರಶ್ನೆ ಬಂದಾಗ, ಸಿ.ಬಿ ಮನೆಗೆ ಬಂದರು. ನಾನು 85ರಲ್ಲಿ ಮಾಡಿದ ಹಾಗೆ ಮಾಡುತ್ತೇನೆ. ನಿಮ್ಮನ್ನು ಸೂಚಿಸುತ್ತೇನೆ ಎಂದೆ. ಭಾವ ತುಂಬಿ ಬಂದ ಬೈರೇಗೌಡರು ಕುಸಿದು ಬಿದ್ದು ಅತ್ತರು.

ಪಕ್ಷ - ವಿಧಾನಸಭಾ ನಡವಳಿಕೆಗಳಲ್ಲಿ ಗೌಡರು ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಸ್ವಭಾವ ಜಿಗುಟು, ಮಾತು ಒರಟು. ಸಣ್ಣ ವಿಚಾರವನ್ನೂ ಬಹಳ ತೀವ್ರವಾಗಿ ಮನಸ್ಸಿಗೆ ಹಚ್ಚಿಕೊಳ್ಳುತ್ತಿದ್ದರು.

ವೈಚಾರಿಕ - ಸೈದ್ಧಾಂತಿಕ ಭಿನ್ನಾಭಿಪ್ರಾಯ ಬಾರದಿದ್ದರೂ, ಭಾವನೆಗಳಲ್ಲಿ ದೂರ ಸರಿಯುತ್ತಿದ್ದೆವು. ಸಾರ್ವಜನಿಕ ಹಿತದ ವಿಷಯದಲ್ಲಿ ಬೇಧವಿರಲಿಲ್ಲ.

ಬೈರೇಗೌಡರ ಕಡೆಯ ದಿನಗಳಲ್ಲಿ ವಾರದಲ್ಲಿ ಎರಡು ಬಾರಿ ನಾನು, ಅವರು ಭೇಟಿಯಾಗುತ್ತಿದ್ದೆವು. ಅದ್ಯಾಕೋ ಏನೋ ನಾನು ಕೊನೆಯದಾಗಿ ಭೇಟಿಯಾದಾಗ ನಾನು ಹೇಳಿದ ಮಾತುಗಳು ಹೀಗಿತ್ತು "ಬೈರೇಗೌಡರೇ ನಾವಿನ್ನು ಎಷ್ಟು ವರ್ಷಗಳ ಕಾಲ ಬದುಕುತ್ತೇವೆ. ಅಧಿಕಾರಕ್ಕಾಗಿ ಸಣ್ಣ ಮಕ್ಕಳಂತೆ ಪದೇ ಪದೇ ಕಿತ್ತಾಡುವುದು ಬೇಡ. ರಾಜಕೀಯವಾಗಿ ನಾವು ಒಬ್ಬರನ್ನೊಬ್ಬರು ಅನುಸರಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲದಿದ್ದರೂ ಪರವಾಗಿಲ್ಲ. ಆದರೆ ಸ್ನೇಹ ಉಳಿಸಿಕೊಂಡು, ಗೌರವದಿಂದ ನಮ್ಮ ಭಿನ್ನಾಭಿಪ್ರಾಯ ಮರೆತು ಬದುಕು ಸಾಗಿಸೋಣ". ಇದನ್ನು ಕೇಳಿ ಬೈರೇಗೌಡರ ಕಣ್ಣಿನಲ್ಲಿ ನೀರು ತುಂಬಿ ಬಂದಿತು.

ಜನತಾದಳ ಶಾಸಕರಿಗೆ ಹಣ ನೀಡಲಾಗಿದೆ ಎಂಬ ವಿಜಯ ಮಲ್ಯ ಆರೋಪದ ಬಗ್ಗೆ ಬೈರೇಗೌಡರು ತುಂಬಾ ನೊಂದಿದ್ದರು. ಬೈರೇಗೌಡರಿಗೆ ಒರಟುತನ, ಕೋಪ, ಹಠಮಾರಿತನ ಎಲ್ಲವೂ ಇತ್ತು. ಆದರೆ ಅವರು ಭ್ರಷ್ಟರೆಂದು ಹೇಳಲು ನನ್ನ ಮನಸ್ಸು ಒಪ್ಪುವುದಿಲ್ಲ. ಭ್ರಷ್ಟರಿಗೆ ಶಿಕ್ಷೆಯೇ ಇಲ್ಲದ ಈ ವ್ಯವಸ್ಥೆಯಲ್ಲಿ ಪ್ರಾಮಾಣಿಕರನ್ನು ಭ್ರಷ್ಟರೆಂದು ಪರಿಚಯಿಸುವುದು ಬಹಳ ಅಪಾಯಕಾರಿ. ವ್ಯವಸಾಯದ ಬಗ್ಗೆ ತುಂಬಾ ವ್ಯಾಮೋಹ ಬೆಳೆಸಿಕೊಂಡಿದ್ದ ಬೈರೇಗೌಡರು ಪತ್ನಿ ಸಾವಿತ್ರಮ್ಮನವರಿಗೆ ಈ ರಾಜಕೀಯ ಅಧಿಕಾರಿಗಳ ಯಾವ ಸೋಂಕು ತಾಗದಂತೆ ಶಿಸ್ತಿನಿಂದ ಕಾಪಾಡಿಕೊಂಡು ಬಂದಿದ್ದಾರೆ. ಹೊಲ, ಗದ್ದೆ, ತೋಟಗಳನ್ನೆಲ್ಲಾ ಅವರ ಪತ್ನಿಯೇ ನೋಡಿಕೊಳ್ಳುತ್ತಿದ್ದರು.

ಜನತಾದಳ ಬಣಗಳ ವಿಲೀನದ ವಿಷಯದಲ್ಲಿ ತೀವ್ರ ಮನನೊಂದಿದ್ದ ಗೌಡರು, ಅನೇಕ ಮೂದಲಿಕೆ, ಅಪಮಾನಕ್ಕೆ ಈಡಾಗಿದ್ದರು. ಬಹುಶಃ ಈ ನೋವನ್ನು ಸಹಿಸಿಕೊಳ್ಳುವ ಶಕ್ತಿ ಅವರಿಗೆ ಸಾಲದೆ ಹೋಗಿತ್ತೋ ಏನೋ. ಕ್ಷೇತ್ರದ ಜನತೆ ಸತತ ಜಯಗಳಿಸಿ ಕೊಟ್ಟಿದ್ದರು - ನೆಮ್ಮದಿ ತಂದಿದ್ದರು. ಆದರೆ ರಾಜ್ಯದ ರಾಜಕೀಯ ಚಟುವಟಿಕೆಗಳ ಚಿಂತನೆಗೆ ಒಳಗಾಗಿ, ನಮ್ಮನ್ನು ಅಗಲಿದರು. ಅವರ ರಾಜಕೀಯ ಆಲೋಚನೆಗಳನ್ನು ಗೌರವಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸೋಣ.

# ಕಠಿಣ ಶಿಲೆಯ ಮಧ್ಯೆ ಪರಿಶುದ್ಧ ನೀರು

- ಡಾ. ವೈ. ಲಿಂಗರಾಜು

ಪ್ರತಿಯೊಬ್ಬರ ಜೀವಿತದಲ್ಲೂ ಸಾವಿರಾರು ಮಂದಿಯನ್ನು ಭೆಟ್ಟಿಯಾಗುವ ಸಂದರ್ಭ ಒದಗುತ್ತದೆ. ಭೆಟ್ಟಿಯಾದ ನೂರಾರು ಮಂದಿಯಲ್ಲಿ ಸ್ನೇಹ ಉಂಟಾಗುತ್ತದೆ. ಅಂತಹ ಸ್ನೇಹ ಕೆಲಕಾಲ ಉಳಿದು ನೆನಪಾಗಿ ಉಳಿಯಬಹುದು. ಆದರೆ ಕೆಲವೇ ಸ್ನೇಹಿತರ ವ್ಯಕ್ತಿತ್ವ ಅಚ್ಚಳಿಯದೇ ನೆನಪಿನಲ್ಲಿ ಉಳಿಯುವುದಲ್ಲದೇ ಆಗಾಗ ನೆನಪು ಮರುಕಳಿಸಿ ಸ್ಮೃತಿಯಲ್ಲಿ ರಾರಾಜಿಸುವುದು. ಅಂತಹ ಅಪರೂಪದ ವ್ಯಕ್ತಿತ್ವ ದಿವಂಗತ ಶ್ರೀ ಸಿ. ಬೈರೇಗೌಡರದು.

ಬೈರೇಗೌಡರನ್ನು ನಾನು ಮೊದಲ ಬಾರಿಗೆ ನೋಡಿದ್ದು ಸುಮಾರು ಮೂವ್ವತ್ತಮೂರು ವರ್ಷಗಳಿಗೂ ಹಿಂದೆ. ಆಗ ನನ್ನ ನೌಕರಿಯ ಪ್ರಾರಂಭಿಕ ಹಂತ. ಸಾಮಾನ್ಯವಾಗಿ ಸರ್ಕಾರಿ ನೌಕರರೆಂದರೆ ಸಿಡಿಮಿಡಿಗೊಳ್ಳುವ ಅವರು ರೈತರ ಅನುರಾಗಿ ಎಂದು ಕೇಳಿ ತಿಳಿದಿದ್ದೆ. ಅವರ ಗ್ರಾಮದಲ್ಲಿ ಅಂತರ್ಜಲ ಅನ್ವೇಷಣೆ ಕೈಗೊಂಡಿದ್ದಾಗ ಅವರ ತಮ್ಮ ದಿವಂಗತ ಶ್ರೀ ಚನ್ನರಾಯಗೌಡರೊಂದಿಗೆ ಅವರ ಮನೆಗೆ ಹೋಗಿದ್ದೆ. ಅವರು ಅಲ್ಲಿನ ರೈತರೊಂದಿಗೆ ನಿಷ್ಠುರವಾಗಿ ಮಾತನಾಡುತ್ತಿದ್ದುದು ಒಂದು ತರ ಇಷ್ಟವಾದರೂ ನನಗೆ ಅವರನ್ನು ಮಾತನಾಡಬೇಕೆನಿಸಲಿಲ್ಲ. ಆಗ ಅವರ ತಂದೆ ಚೌಡೇಗೌಡರೂ ಸಹ ಇದ್ದರು. ಅವರಿದ್ದ ಮನೆ ಚಿಕ್ಕದಾದರೂ ಮನಸ್ಸು ದರ್ಪಿಷ್ಟ ಎನಿಸಿತು. ಸುಮಾರು ಆರು ವರ್ಷಗಳ ಕಾಲ ಕೋಲಾರ ಜಿಲ್ಲೆಯ ಅಂತರ್ಜಲದ ಪ್ರಾಥಮಿಕ ಅಧ್ಯಯನದಲ್ಲಿ ತೊಡಗಿದ್ದು ಜಿಲ್ಲೆಯ ಬಹಳಷ್ಟು ರೈತರು ನನಗೆ ಗೆಳೆಯರಾದರು. ಆಗಿನ್ನು ಅಗೆದ ಬಾವಿಗಳು ಬಳಕೆಯಲ್ಲಿದ್ದ ಕಾಲ. ಬಹಳಷ್ಟು ರೈತರು ಸಾಲ ಮಾಡಿ ಬಾವಿ ತೆಗೆದು ವಿಫಲರಾಗಿ ಕಷ್ಟ ಅನುಭವಿಸುತ್ತಿದ್ದರು. ಕಷ್ಟ ಜೀವಿಗಳಾದ ಈ ರೈತರಿಗೆ ಅಂತರ್ಜಲ ಹೆಚ್ಚು ಲಭಿಸಿದರೆ ಹೆಚ್ಚು ಬೆಳೆ ತೆಗೆಯುತ್ತಾರೆ ಎನಿಸುತ್ತಿತ್ತು. ಹಾಗಾಗಿ ನೆಲದಾಳದ ನೀರು ಹೆಚ್ಚು ಅಮೂಲ್ಯ ಎನಿಸಿ ಅಗೆದ ಬಾವಿಗಳೊಳಗೆ ಸ್ವಲ್ಪ ಆಳಕ್ಕೆ ಕೊರೆದರೆ ನೀರು ಚಿಮ್ಮಿ ಬಂದು ಖಾಲಿಯಾಗಿದ್ದ ಬಾವಿಗಳು ನೀರಿನಿಂದ ತುಂಬುತ್ತಿದ್ದವು. ಇದನ್ನು ಅರಿತ ರೈತರು ಅವರ ಬಾವಿ ಪರೀಕ್ಷೆಗೆ ನಮ್ಮನ್ನು ಕರೆದೊಯ್ಯುತ್ತಿದ್ದರು. ಕೆಲವು ಬಾವಿಗಳಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ. ಅಂತಹ ರೈತರಿಗೆ ಅವರ ಜಮೀನಿನ ಇನ್ನೆಲ್ಲೋ ಒಂದು ಕಡೆ ನೆಲದ ಮೇಲಿಂದಲೇ ಕೊರೆದು ಕೊಳವೆ ಬಾವಿ ನಿರ್ಮಿಸಲು ಸಲಹೆ ಕೊಡುತ್ತಿದ್ದೆವು.

ಆಗ ಇಂತಹ ಕೆಲಸ ಬಹಳ ಸಮಯ ತೆಗೆದುಕೊಳ್ಳುತ್ತಿತ್ತು. ಆದರೆ ಹೆಚ್ಚು ಸಫಲವಾಗುತ್ತಿತ್ತು. ಆನಂತರ ಶೀಘ್ರವಾಗಿ ಕೊರೆಯುವ ಯಂತ್ರಗಳು ಕುಡಿಯುವ ನೀರಿನ ಕೊಳವೆ ಬಾವಿ ನಿರ್ಮಿಸಲು ಉಪಯೋಗಿಸುತ್ತಿದ್ದರು. ಕೆಲವೇ ದಿನಗಳಲ್ಲಿ ಕೊಳವೆ ಬಾವಿ ಸಿದ್ಧವಾಗುತ್ತಿದ್ದುದನ್ನು ಗಮನಿಸಿದ ರೈತರು ಖಾಸಗಿ ಕಂಪನಿಗಳ ಸಹಾಯದಿಂದ ಕೊಳವೆ ಬಾವಿಗಳನ್ನು ತಮ್ಮ ಜಮೀನುಗಳಲ್ಲಿ ನಿರ್ಮಿಸಿಕೊಳ್ಳಲಾರಂಭಿಸಿದರು. ಆಗ ನಮ್ಮ ಮುಖ್ಯ ಕೆಲಸ ಅಂತರ್ಜಲ ಲಭ್ಯತೆ ಬಗ್ಗೆ ಇರುವ ಬಾವಿಗಳ ತಪಶೀಲು ತಯಾರಿಸಿ ತಾಲೂಕುವಾರು ವರದಿಗಳನ್ನು ಸಿದ್ಧಪಡಿಸುವುದೇ ಆಗಿತ್ತು. ಅದು ನಮಗೂ ಹೊಸ ರೀತಿಯ ಕೆಲಸ. ಏಕೆಂದರೆ ಅದಕ್ಕೆ ಮುನ್ನ ಭೂವಿಜ್ಞಾನ ಇಲಾಖೆಯಲ್ಲಿ

ಅಂತರ್ಜಲ ಅಧ್ಯಯನ ಘಟಕ ಇರಲಿಲ್ಲ. ನಾವು ತಯಾರಿಸಿದ ವರದಿಗಳ ಆಧಾರದ ಮೇಲೆ ವಿದ್ಯುತ್ ಸರಬರಾಜಿನ ವ್ಯವಸ್ಥೆ ಮಾಡಲಾಗುತ್ತಿತ್ತು. ಡೀಸೆಲ್ ಉಪಯೋಗಿಸುತ್ತಿದ್ದ ರೈತರು ವಿದ್ಯುತ್ ಬಳಕೆ ಪ್ರಾರಂಭಿಸಿದ್ದರು. ಆಗ ಹೊಸದಾಗಿ ಪ್ರಾರಂಭವಾದ ಕೋಲಾರ ಪತ್ರಿಕೆ ಮತ್ತು ಪ್ರಜಾವಾಣಿಯಲ್ಲಿ ಅಂತರ್ಜಲದ ಬಗ್ಗೆ ತಿಳಿದದ್ದನ್ನೆಲ್ಲಾ ಬರೆಯಲಾರಂಭಿಸಿದೆ. ಆಗ ಲಭ್ಯವಿದ್ದ ಅಂತರ್ಜಲ ಚಿರಕಾಲ ಉಳಿಯುವುದಿಲ್ಲ ಎನ್ನುವ ವಿಷಯ ನಮಗೂ ಮನದಟ್ಟಾಗಿತ್ತು. ಹಾಗಾಗಿ "ಬಾವಿಯ ನೀರನ್ನು ಜಾಣ್ಮೆಯಿಂದ ಬಳಸಬೇಕು" ಎಂಬ ವಿಷಯವಾಗಿ ಲೇಖನಗಳನ್ನು ಬರೆದಿದ್ದೆ. ಆದರೆ ಅನೇಕರು ಇದನ್ನು ನಂಬಲಿಲ್ಲ. ಆದರೆ ಮೊದಲಿಗಿಂತ ಹೆಚ್ಚು ರೇಷ್ಮೆ, ತರಕಾರಿ, ಹಣ್ಣುಗಳನ್ನು ಉತ್ಪಾದಿಸಲಾರಂಭಿಸಿದ ರೈತರು ಅಂತರ್ಜಲ ಬಳಕೆಗೆ ಹೆಚ್ಚು ಉತ್ಸುಕರಾದರು. ಅದಕ್ಕೆ ತಕ್ಕಂತೆ ಅನೇಕ ಸಾಲ ನೀಡುವ ಸ್ಕೀಂಗಳು ಪ್ರಾರಂಭವಾದವು. ವಿಫಲವಾದ ಬಾವಿಗೆ ಸಾಲ ಮನ್ನಾ ಮಾಡುವುದೂ ಶುರು ಆಯಿತು. ಇದರ ಬಗ್ಗೆ ಮುಜುಗರವೆನಿಸಿತ್ತಾದರೂ ರೈತರಿಗೆ ಉಪಯುಕ್ತವಾಗುತ್ತಿದ್ದರಿಂದ ನನ್ನ ಭಾವನೆಗಳು ಯಾರನ್ನೂ ಮುಟ್ಟಲಿಲ್ಲ. ಅಂತಹ ಸಮಯದಲ್ಲಿ ನನಗೆ ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಇಂಜಿನಿಯರಿಂಗ್ ಭೂವಿಜ್ಞಾನಿಯಾಗಿ ಕೆಲಸ ಮಾಡಲು ವರ್ಗ ಆಯಿತು. ಅನೇಕ ರೈತಮಿತ್ರರು ಬೈರೇಗೌಡರಿಗೆ ಹೇಳಿ ನನಗೆ ವರ್ಗಾವಣೆ ತಡೆಯುವುದಾಗಿ ತಿಳಿಸಿದರು. ಆದರೆ ಬದಲಾವಣೆ ಬೇಕೆನಿಸಿದ ನನಗೆ ಹೊಸ ಕೆಲಸ ಇಷ್ಟವಾಗಿ ಒಪ್ಪದೇ ಹೋದೆ.

ಆದರೂ ಸ್ನೇಹಿತರ ಬಲವಂತಕ್ಕೆ ರಾಜಣ್ಣನವರ ಜೊತೆ ಗೌಡರ ಮನೆಗೆ ಹೋದೆ. ಬೈರೇಗೌಡರಿಗೆ ವರ್ಗಾವಣೆ ರದ್ದು ವಿಚಾರ ಎಂದರೆ ಕೋಪ ಬರುತ್ತಿತ್ತು. ನನ್ನ ವಿಷಯದಲ್ಲಿ ಯಾವ ರೀತಿ ಅವರು ಮಾತನಾಡುತ್ತಾರೋ ಎಂಬ ಅನುಮಾನ ಕಾಡಿತ್ತು. ಜೊತೆಗೆ ಬಹಳ ಜನ ಇದ್ದುದರಿಂದ ನಮ್ಮತ್ತ ನೋಡಲೇ ಇಲ್ಲ. ನಾನು "ರಾಜಣ್ಣ ಇವರು ಯಾಕೋ ಗರಮ್ ಆಗಿದ್ದಾರೆ ನಾವು ಹೋಗಿ ಬಿಡೋಣ" ಎಂದೆ. ಆದರೆ ಆತ ಒಪ್ಪಲಿಲ್ಲ. "ಸ್ವಲ್ಪ ಇರಿ ಸಾರ್" ಎಂದು ಕೂರಿಸಿಕೊಂಡ. ಜನವೆಲ್ಲ ಖಾಲಿಯಾದ ಮೇಲೆ ನಮ್ಮ ಕಡೆ ತಿರುಗಿ ರಾಜಣ್ಣನನ್ನು "ಏನು ಸಮಾಚಾರ" ಎಂದು ಕೇಳಿದರು. ಆಗ ರಾಜಣ್ಣ "ಸಾರ್ ಇವರು ಲಿಂಗರಾಜು ಅಂತ. ಮೊದಲು ಕೋಲಾರದಲ್ಲಿ ಭೂವಿಜ್ಞಾನಿ ಆಗಿದ್ರು" ಎಂದು ಹೇಳಿದರು. ತಕ್ಷಣ ಸ್ಮಿತವದನರಾದ ಗೌಡರು "ಹೋ ಇಲ್ಲಿ ಹತ್ತಿರ ಬನ್ನಿ" ಎಂದು ಅವರ ಹತ್ತಿರದ ಕುರ್ಚಿಯಲ್ಲಿ ಕೂರಿಸಿ "ನಿಮ್ಮ ಬಗ್ಗೆ ಕೇಳಿದ್ದೆ. ನೀವು ಬರೆದ ಲೇಖನಗಳನ್ನು ಓದಿದ್ದೇನೆ. ನಮ್ಮ ಜಿಲ್ಲೆಯಲ್ಲಿ ನೀವು ಹೆಚ್ಚಿನ ಕೆಲಸ ಮಾಡಬೇಕು" ಎಂದರು. ಆಗ ನಾನು ನನ್ನ ರೊಟ್ಟಿ ತುಪ್ಪದಲ್ಲಿ ಬಿತ್ತೆಂದೆನಿಸಿ ಅವರ ಮೇಲಿದ್ದ ಸಂಪೂರ್ಣ ಭಾವನೆಯೇ ಬದಲಾಯಿತು. ಆಗ ನಾನೆಂದೆ "ಸಾರ್ ಕೋಲಾರ ಜಿಲ್ಲೆಯಲ್ಲಿ ಅಲ್ಲಿಷ್ಟು ಇಲ್ಲಿಷ್ಟು ಕೆಲಸ ಮಾಡಿದ್ದೇನೆ ಅಷ್ಟೆ. ಪಾಲಾರ್ ನದಿ ಜಲಾನಯನದಲ್ಲಿ ಅಂತರ್ಜಲದ ಇರುವಿನ ಬಗ್ಗೆ ವಿವರವಾಗಿ ಅಧ್ಯಯನ ಮಾಡಬೇಕು. ಸರ್ಕಾರಿ ಹುದ್ದೆಯಲ್ಲಿದ್ದು ಆ ತೆರನಾದ ಅಧ್ಯಯನ ಮಾಡಲು ಸಾಧ್ಯವಿಲ್ಲ. ಈಗ ಉಪಗ್ರಹ ಚಿತ್ರಗಳೂ ಸಹ ಲಭ್ಯವಿದೆ. ಆದ್ದರಿಂದ ಇಸ್ರೋ ಸಹಕಾರ ಪಡೆದು ಅಧ್ಯಯನ ಮಾಡಿ ಪಿಎಚ್‌ಡಿಗಾಗಿ ಪ್ರಬಂಧ ಮಂಡಿಸಬೇಕೆಂದಿದ್ದೇನೆ. ಇದಕ್ಕಾಗಿ ಬಹಳ ದಿನಗಳಿಂದಲೂ ಪ್ರಯತ್ನಪಟ್ಟೆ. ಆದರೆ ಅದಕ್ಕೂ ನಿಯೋಜನೆ ಸಿಗುತ್ತಿಲ್ಲ. ತಾವು ಸಹಾಯ ಮಾಡಿದರೆ ನಾನು ನನ್ನ ಸಮಯವನ್ನು ಅಧ್ಯಯನಕ್ಕಷ್ಟೇ ಮೀಸಲಿರಿಸಿ ಹೆಚ್ಚಿನ ವಿಷಯ ತಿಳಿಯಲು ಸಾಧ್ಯ" ಎಂದು ಹೇಳಿದೆ. ಒಂದೆರಡು ನಿಮಿಷ ಮೌನವಾಗಿದ್ದ ಅವರು "ನಿಮ್ಮ ಅಧ್ಯಯನದ ಬಗ್ಗೆ ಒಂದು ಸಣ್ಣ

ಟಿಪ್ಪಣಿ ಮಾಡಿ ತನ್ನಿ" ಎಂದು ಹೇಳಿ ಭೂವಿಜ್ಞಾನದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ಕೆಲವು ಪ್ರಶ್ನೆಗಳಂತೂ ಕುತೂಹಲಕ್ಕಾಗಿ ಎಳೆಯ ಮಕ್ಕಳು ಕೇಳುವಂತಿತ್ತು. ಆಗ ಒಂದು ಘಂಟೆ ಕಾಲ ಅವರು ರಾಜಕಾರಣಿಯೇ ಅಲ್ಲ ಎನ್ನುವಂತಿದ್ದರು. ಕೊನೆಗೆ ನಾನು ಮನೆಗೆ ಹೊರಟಾಗ "ನಿಮ್ಮನ್ನು ಮನೆಗೆ ಡ್ರಾಪ್ ಮಾಡ್ತೀನಿ" ಅಂದರು. ನನಗೆ ನಂಬಲೇ ಆಗಲಿಲ್ಲ. ಅಂತಹ ಕಠೋರ ವ್ಯಕ್ತಿ ಅಷ್ಟೇ ಸ್ನೇಹಮಯಿ ಆಗಬಲ್ಲರೇ ಎಂಬ ಪ್ರಶ್ನೆ ನನ್ನನ್ನು ಕಾಡಿತು.

ಮತ್ತೊಂದು ದಿನ ಗೌಡರು ಹೇಳಿದಂತೆ ಟಿಪ್ಪಣಿಯೊಂದಿಗೆ ಹಾಜರಾದೆ. ನಮ್ಮ ಇಲಾಖೆಗೆ ಸಂಬಂಧಪಟ್ಟ ಸಚಿವರ ಭೇಟಿಗೆ ಹಲವಾರು ಬಾರಿ ಅವರಿದ್ದಲ್ಲೆಲ್ಲಾ ಅಲೆದಾಡಿದರು. ಕೊನೆಗೆ ಕತ್ತಲಾಗುವ ವೇಳೆ ಆಯಿತು. ನಾನು 'ಪರವಾಗಿಲ್ಲ ಬಿಡಿಸಾರ್' ಎಂದರೆ "ಇಷ್ಟು ಬೇಗ ನಿರಾಶೆಯಾದರೆ ಹೇಗೆ, ಕೂತ್ಕೊಳ್ಳಿ" ಎಂದು ಹೇಳಿ ಕಾಫಿ ತಿಂಡಿ ತರಿಸಿದರು. ಮತ್ತೆ ಫೋನಾಯಿಸಿ ಸದರಿ ಸಚಿವರು ಮನೆಗೆ ಬಂದಿರುವರೆಂದು ತಿಳಿದು ನನ್ನ ಕರೆದುಕೊಂಡು ಸಚಿವರಿಗೆ ಒಂದು ಲಿಖಿತ ಟಿಪ್ಪಣಿ ಅಲ್ಲೇ ಟೈಪ್ ಮಾಡಿಸಿ ರಾತ್ರಿ ತಡವಾದರೂ ಬಿಡಲಿಲ್ಲ. ಅವರನ್ನು ಭೆಟ್ಟಿ ಮಾಡಿ ನನ್ನ ಬಗ್ಗೆ ಮತ್ತು ನನ್ನ ಅಧ್ಯಯನದ ಉದ್ದೇಶ ವಿವರಿಸಿ, ಪುನಃ ಅವರ ಪರ್ಸನಲ್ ಸೆಕ್ರೆಟರಿಯವರಿಗೆ ಸಚಿವರಿಗೆ ನೆನಪಿಸಿ ಅಧ್ಯಯನಕ್ಕೆ ನಿಯೋಜಿಸಲೇಬೇಕೆಂದು ಹೇಳಿ, ನನ್ನ ಮನೆ ಹತ್ತಿರ ಬಿಟ್ಟು ಅವರು ಊರಿಗೆ ಹೋದರು.

ಅವರು ಅಷ್ಟು ಛಲ ಹಿಡಿದು ಓಡಾಡಿದ್ದನ್ನು ನೋಡಿ ನನಗೆ ಇದು ಸಾಧಕರ ಲಕ್ಷಣ ಎನಿಸಿತು. ಆದರೆ ಕೆಲವೇ ದಿನಗಳಲ್ಲಿ ಅಧ್ಯಯನಕ್ಕೆ ಸರ್ಕಾರಿ ನಿಯೋಜನೆ ಸಾಧ್ಯವಿಲ್ಲ. ಸ್ವಂತ ಖರ್ಚಿನಲ್ಲಿ ಅಧ್ಯಯನ ಮಾಡುವುದಾದರೆ ಪರವಾನಿಗೆ ನೀಡಬಹುದು ಎಂಬ ಉತ್ತರ ನನಗೆ ಬಂತು. ಅಷ್ಟರಲ್ಲಿ ಆಗಲೇ ರಾಜಣ್ಣನವರ ಮೂಲಕ 'ಲಿಂಗರಾಜು ಅವ್ರ ಕೆಲ್ಸ ಏನಾಯಿತು' ಎಂದು ಎರಡು ಬಾರಿ ಹೇಳಿ ಕಳಿಸಿದ್ದರು. ಸರ್ಕಾರದ ಉತ್ತರ ತಿಳಿಸಿದ ಕೂಡಲೇ ಬೆಂಕಿಯಾದರು. ಎರಡು ಮೂರು ವರ್ಷ ರಜೆಯ ಮೇಲೆ ತೆರಳಿ ಅಧ್ಯಯನ ಮಾಡಲು ಸಾಧ್ಯವಾಗದೆಂದು ತಿಳಿದ ಅವರು ಮುಖ್ಯಮಂತ್ರಿಯವರನ್ನು ಭೇಟಿಯಾದರು. ಅವರು ಜಿಲ್ಲೆಯ ಸಮಸ್ಯೆ ಬಗ್ಗೆ ನನ್ನ ಆಸಕ್ತಿಯ ಬಗ್ಗೆ ವಿವರಿಸಿ. 'ಇಂತಹವರಿಗೆ ನಾವು ಪ್ರೋತ್ಸಾಹ ನೀಡದಿದ್ದರೆ ನಾವು ಶಾಸಕರಾಗಿ ಪ್ರಯೋಜನವಿಲ್ಲ' ಎಂದು ಗುಟುರು ಹಾಕಿದ್ದು ನನಗೆ ಕೇಳಿಸಿತು. ಇದಾದ ಒಂದು ವಾರದಲ್ಲಿ ನನಗೆ ನಿಯೋಜನೆ ಆದೇಶ ಸಿಕ್ಕಿತು. ನನಗಾದ ಆನಂದಕ್ಕೆ ಪಾರವೇ ಇಲ್ಲ. ಇದನ್ನು ನಾನು ಅವರಿಗೆ ತಿಳಿಸಿದಾಗ ಹತ್ತಿರದ ಹೋಟೆಲಿಗೆ ಹೋಗಿ ಜಾಮೂನು, ರವೆ ಇಡ್ಲಿ, ಕಾಫಿ ಕೊಡಿಸಿ ನಿಮ್ಮ ಕೆಲಸ ಮಾಡಿ ಒಳ್ಳೆಯದಾಗಲಿ ಎಂದು ಹಾರೈಸಿದರು. ಅವರ ಮುಖದಲ್ಲಿ ಗೆಲುವಿನ ಕಳೆ ಇತ್ತು. ನನ್ನಲ್ಲಿ ಕೃತಜ್ಞತಾ ಭಾವ ತುಂಬಿ ಬಂತು.

ನನ್ನ ಅಧ್ಯಯನ ಸಮಯದಲ್ಲಿ ಬಿಡುವು ಸಿಕ್ಕಾಗಲೆಲ್ಲಾ ಗೌಡರನ್ನು ಭೆಟ್ಟಿ ಮಾಡಿ ಅಧ್ಯಯನದ ವಿಷಯ ಮತ್ತಿತರ ವಿಷಯಗಳ ಬಗ್ಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದೆವು. ಇದೇ ಸಮಯದಲ್ಲಿ ಜಿಲ್ಲೆಯ ಪರಿಶಿಷ್ಟ ವರ್ಗದವರಿಗೆ ಕೊಳವೆ ಬಾವಿ ಮಾಡಿಸಿಕೊಡುವ ಸ್ಕೀಂ ಜಾರಿಗೆ ಬಂತು. ಜಿಲ್ಲಾಧಿಕಾರಿಗಳ ಕಛೇರಿಯಿಂದ ಪ್ರಸ್ತಾಪಿತ ಫಲಾನುಭವಿಗಳ ಪಟ್ಟಿ ಬಂತು. ಇದಕ್ಕಾಗಿ

ಅಂತರ್ಜಲಾನ್ವೇಷಣೆ ಕಾರ್ಯ ಮಾಡಲು ಸಂಬಂಧಪಟ್ಟ ಅಧಿಕಾರಿಗಳು ನನ್ನನ್ನು ಕೇಳಿದರು. ನನ್ನ ಅಧ್ಯಯನಕ್ಕೆ ಬೇಕಾದ ಮಾಹಿತಿ ದೊರೆಯುತ್ತದೆಂಬ ಆಸಕ್ತಿಯಿಂದ ಒಪ್ಪಿದೆ. ಆದರೆ ನನ್ನ ಉಪಗ್ರಹ ಮಾಹಿತಿ ಚಿತ್ರದ ಅಧ್ಯಯನ ಅಂತಹ ಫಲಾನುಭವಿಗಳ ಜಮೀನಿನಲ್ಲಿ ಅಂತರ್ಜಲ ಅಲಭ್ಯ ಎಂದು ತಿಳಿಸಿತು. ಸಂಬಂಧಪಟ್ಟ ಸಭೆಯಲ್ಲಿ ಈ ವಿಷಯವನ್ನು ತಿಳಿಸಿದೆ. ಆದರೆ ಆಗಿದ್ದ ಜಿಲ್ಲಾಧಿಕಾರಿಗಳು ಒಪ್ಪಲಿಲ್ಲ. ಅವರ ಪಟ್ಟಿಯ ಪ್ರಕಾರ ಅಂತರ್ಜಲ ಅನ್ವೇಷಣೆ ಮಾಡಬೇಕೆಂದರು. ಅದಕ್ಕೆ ಪ್ರತಿಕ್ರಿಯಿಸಿ ಅಂತಹ ಕೆಲಸ ಸಮಯದ ವ್ಯರ್ಥ. ಅದರ ಬದಲು ಉಪಗ್ರಹ ಮಾಹಿತಿ ಚಿತ್ರಗಳಲ್ಲಿ ಅಂತರ್ಜಲ ಲಭ್ಯ ವಲಯಗಳನ್ನು ಗುರುತಿಸುತ್ತೇನೆ ಅಂತಹ ವಲಯಗಳಲ್ಲಿರುವ ಗ್ರಾಮಗಳಲ್ಲಿರುವ ಪರಿಶಿಷ್ಟ ಕೋಮಿನವರನ್ನು ಗುರುತಿಸಿ ಅವರ ಜಮೀನಿನಲ್ಲಿ ಕೊಳವೆ ಬಾವಿಗೆ ಸರ್ವೆ ಮಾಡಿ ಮುಂದುವರಿಯಬಹುದೆಂದು ತಿಳಿಸಿದೆ. ಆಗ ಸಭೆಯಲ್ಲಿದ್ದ ಬೈರೇಗೌಡರು ನನ್ನ ಅಭಿಪ್ರಾಯವನ್ನು ಬಲವಾಗಿ ಸಮರ್ಥಿಸಿ ಜಿಲ್ಲಾಧಿಕಾರಿಯವರನ್ನು ಒಪ್ಪಿಸಿದರು. ಅದರಂತೆಯೇ ಕಾರ್ಯವೆಸಗಲು ಬೇಕಾದಂತಹ ಕಾರ್ಯಕ್ರಮ ರೂಪಿಸಿದರು. ಹಾಗಾಗಿ ಆಯ್ದ ಫಲಾನುಭವಿಗಳ ಶೇಕಡ 87 ಭಾಗದವರು ಅವರ ಜಮೀನುಗಳಲ್ಲಿ ನೀರನ್ನು ಪಡೆಯುವುದರಲ್ಲಿ ಸಫಲರಾದರು. ಈ ವಿಷಯದಿಂದ ಉತ್ತೇಜಿತರಾದ ಗೌಡರು ಯಾವುದೇ ಗ್ರಾಮದ ಕುಡಿಯುವ ನೀರಿನ ಸಮಸ್ಯೆ ಇದ್ದರೂ ಸಂಬಂಧಪಟ್ಟ ಅಧಿಕಾರಿಗಳಿಗೆ ನನ್ನ ಸಲಹೆ ಪಡೆಯಲು ಹೇಳುತ್ತಿದ್ದರು. ಇದರಿಂದ ನನಗೂ ಖುಷಿಯಾಗುತ್ತಿತ್ತು. ನನ್ನ ಸಂಶೋಧನೆಯಿಂದ ಕಠಿಣ ಶಿಲೆಗಳಲ್ಲಿ ಅಂತರ್ಜಲ ವಲಯ ಬಹಳ ಸೀಮಿತ. ಅದರಿಂದ ಮುಂದೆ ರೈತರಿಗೆ ನಿರಾಶೆಯಾಗುವುದೆಂಬ ಅರಿವುಂಟಾಯಿತು. ಈ ವಿಚಾರವನ್ನು ಗೌಡರೊಡನೆ ಅನೇಕ ಬಾರಿ ಚರ್ಚಿಸಿದೆ. ಅಂತರ್ಜಲ ಬಳಕೆಯಲ್ಲಿ ನಿಯಂತ್ರಣ ತರಬೇಕೆಂಬ ಮಾತಿಗೆ ಅವರಿಗೆ ಒಪ್ಪಿಗೆ ಇತ್ತು. ಹಾಗಾಗಿ ಕೃಷಿ ಮಂತ್ರಿಗಳಾಗಿದ್ದಾಗ ಸ್ಪಿಂಕ್ಲರ್, ಡ್ರಿಪ್ ಇರಿಗೇಷನ್ ಬಳಕೆ ಬಗ್ಗೆ ಆಸಕ್ತಿ ವಹಿಸಿದರು. ಕೆರೆಗಳಲ್ಲಿ ಹೂಳೆತ್ತುವ ಕೆಲಸ ಮಾಡುವಾಗ ನನ್ನನ್ನು ಕರೆದುಕೊಂಡು ಹೋಗಿ ಅಂತರ್ಜಲ ಪುನರ್ ಭರ್ತಿಗೆ ಇದು ಪೂರಕವೇ ಎಂದು ಕೇಳುತ್ತಿದ್ದರು. ಕುಡಿಯುವ ನೀರಿನ ಕೊಳವೆ ಬಾವಿ ಸುತ್ತಲೂ ಮತ್ಯಾರೂ ಬಾವಿ ಮಾಡಬಾರದೆಂದಾಗ ಕ್ರಮ ತೆಗೆದುಕೊಳ್ಳುತ್ತಿದ್ದರು.

ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದ ಗೌಡರು ಯಾವುದೇ ವಿಷಯವನ್ನು ಸುಲಭವಾಗಿ ಒಪ್ಪುತ್ತಿರಲಿಲ್ಲ. ಒಮ್ಮೆ ಒಪ್ಪಿದರೆಂದರೆ ಅದಕ್ಕೆ ಬಲವಾಗಿ ಅಂಟಿಕೊಳ್ಳುತ್ತಿದ್ದರು. ನಾನು ಬಹಳ ಹತ್ತಿರದಿಂದ ನೋಡಿದ ರಾಜಕಾರಣಿ ನನ್ನ ಸ್ನೇಹಿತರೆಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತಿದೆ. ಅವರ ಪತ್ನಿ ಸಾವಿತ್ರಮ್ಮನವರು ಗೌಡರ ವೈಯಕ್ತಿಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಮಕ್ಕಳೂ ಸಹ ಸಜ್ಜನರು. ಈಗ ಕೃಷ್ಣಬೈರೇಗೌಡರು ತಂದೆಗೆ ತಕ್ಕ ಮಗ ಎನ್ನುವುದರಲ್ಲಿ ಸಂದೇಹವಿಲ್ಲ. ತಂದೆಯ ಯಶಸ್ಸು ಮಗನಲ್ಲಿಯೂ ಹರಿದು ನಾಡಿನ ಯಶಸ್ವಿ ರಾಜಕಾರಣಿಯಾಗಲೆಂದು ಹಾರೈಸುತ್ತೇನೆ.

# ಪರಿಶುದ್ಧ ರಾಜಕೀಯ ಧುರೀಣ

**- ಡಾ|| ಆರ್. ಶೇಷಶಾಸ್ತ್ರಿ**

ಜೀವನದಲ್ಲಿ ಕೆಲವರು ನಮಗೆ ಆಕಸ್ಮಿಕವಾಗಿ ಮಿತ್ರರಾಗುತ್ತಾರೆ. ನಾವು ಅವರಿಂದ ಎಷ್ಟೇ ದೂರ ಹೋದರೂ, ಅವರು ನಮ್ಮನ್ನು ತಮ್ಮ ನಿರ್ವಾಜ್ಯ ಅಂತಃಕರಣದಿಂದ ಸೂಜಿಗಲ್ಲಿನಂತೆ ಸೆಳೆಯುತ್ತಾರೆ. ನಮ್ಮಿಂತ ಅವರಿಗೆ ಬಿಡಿಗಾಸಿನಷ್ಟು ಪ್ರಯೋಜನವಿಲ್ಲವೆಂಬ ಸಂಗತಿ ಅವರಿಗಿಂತಲೂ ನಮಗೆ ಖಚಿತವಾಗಿ ಗೊತ್ತಿದ್ದರೂ ಅವರು ಮಾತ್ರ ನಮ್ಮನ್ನು ಪ್ರೀತಿಸುತ್ತಾರೆ. ಅವರ ಅಧಿಕಾರ - ಅಂತಸ್ತುಗಳ ಮುಂದೆ ನಾವಷ್ಟಕಷ್ಟೆ ಎಂಬ ಕೀಳರಿಮೆಯಿಂದಲೋ, ಮುಜುಗರದಿಂದಲೂ ನಾವು ಹಿಂದೆ ಸರಿದಷ್ಟು, ಅವರು ಹತ್ತಿರವಾಗುತ್ತಾರೆ. ಈ ರೀತಿಯ ಮಿತ್ರತ್ವ ನನ್ನ ಮತ್ತು ಬೈರೇಗೌಡರದು.

ನಾನು ಆದರ್ಶದ ಬೆನ್ನು ಹತ್ತಿ, ನನ್ನ ಹಳ್ಳಿ (ಚಿಂತಾಮಣಿ ತಾಲೂಕು ಸಂತೆಕಲ್ಲಹಳ್ಳಿ)ಯನ್ನು ಎಪ್ಪತ್ತರ ದಶಕದಲ್ಲಿ ಆದರ್ಶ ಗ್ರಾಮವನ್ನಾಗಿ ಮಾಡಬೇಕೆಂದು ಹಲವು ಹನ್ನೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾಗ, ಸಾರ್ವತ್ರಿಕ ಚುನಾವಣೆಗಳು ಬಂದವು. ಅದುವರೆಗೆ ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿದ್ದ ಕೈವಾರ ಹೋಬಳಿ ವೇಮಗಲ್ಲು ಕ್ಷೇತ್ರಕ್ಕೆ ಸೇರ್ಪಡೆಯಾಯಿತು.

ಅದುವರೆಗೆ ನಮ್ಮ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಎಂ.ಸಿ. ಆಂಜನೇಯರೆಡ್ಡಿ, ಅವರ ಮಗ ಚೌಡರೆಡ್ಡಿಯವರು ಜನಾನುರಾಗಿಗಳಾಗಿದ್ದವರು. ಅವರಿಗೆ ವಿರೋಧ ಅಷ್ಟಾಗಿರಲಿಲ್ಲ. ಕೈವಾರ ಹೋಬಳಿ ವೇಮಗಲ್ಲು ಕ್ಷೇತ್ರಕ್ಕೆ ಸೇರ್ಪಡೆಯಾದಾಗ ಜನತಾ ಪಾರ್ಟಿಯ ಪರವಾಗಿ ಚುನಾವಣೆಗೆ ಸ್ಪರ್ಧಿಸಲಿದ್ದ ಸಿ. ಬೈರೇಗೌಡರು ನಮ್ಮೂರಿಗೆ ಬಂದರು. ಅವರನ್ನು ಊರೊಳಗಡೆಗೆ ಬಿಡಬಾರದು ಎಂದು ಕೆಲವರ ಹಟವಿದ್ದರೂ ಅವರು ಬಂದು ನಮ್ಮೂರ ಚಾವಡಿಯ ಬಳಿ ಸಭೆ ನಡೆಸಿದರು. ಅಂದಿನ ಸಭೆಗೆ ಕೆ.ಎಂ. ಕೃಷ್ಣಾರೆಡ್ಡಿಯವರೂ ಬಂದಿದ್ದರು. ಬೈರೇಗೌಡರು ತುಂಬ ಸರಳವಾಗಿ ಮಾತಾಡಿ, ನಮ್ಮೂರ ಜನರ ಸಹಕಾರ ಮತ್ತು ಮತವನ್ನು ಯಾಚಿಸಿದರು. ಸಭೆಗೆ ನಾನು ಹೋಗಿದ್ದೆ. ನಾನೇ ಸ್ವಂತ ಉಮೇದಿನಿಂದ ಮಾತಾಡಲು ಅವಕಾಶ ಬೇಡಿ "ಸ್ವಾಮಿ ನೀವು ಐದು ವರ್ಷಕ್ಕೆ ಒಂದು ಸಲ ಬಂದು ಹೋಗೋರು. ಸದಾ ಇಲ್ಲಿ ನಾವು ಬದುಕೋರು. ನಮ್ಮ ನಡುವೆ ಇಲ್ಲದ ಕಿಚ್ಚು ಹಚ್ಚಬೇಡಿರಿ. ನೀವು ನಮ್ಮೂರಿಗೆ ಏನು ಮಾಡಬೇಕು ಅಂತಿದ್ದಿರೋ ಅಷ್ಟು ಹೇಳಿ ಹೋಗಿ" ಎಂದು ಅವರಿಗೆ ಹೇಳಿ ಜನರನ್ನೆ ಕುರಿತು "ನೀವು ಇಂಥವರಿಗೆ ಓಟು ಹಾಕಿ ಅಂತ ನಾನು ಹೇಳೋಲ್ಲ. ನಿಮಗೆ ಯಾರು ಬೇಕು ಅವರಿಗೆ ಧೈರ್ಯವಾಗಿ ಓಟು ಹಾಕಿ, ಓಟು ಹಾಕದೇ ಮಾತ್ರ ಇರಬೇಡಿ" ಅಂತ ಆವೇಶದಿಂದ ಮಾತಾಡಿ ಬಂದು ನಿಂತೆ. ಅನಂತರ ಬೈರೇಗೌಡರು ನನ್ನ ಮಾತಿಗೆ ಸೂಕ್ತ ಉತ್ತರ ನೀಡಿದರು. ಸಭೆ ಮುಗಿದು ಹೊರಡುವ ಮುನ್ನ ನನ್ನನ್ನು ಕರೆದು ಪರಿಚಯ ಮಾಡಿಕೊಂಡು ಕೈಕುಲುಕಿ "ಚೆನ್ನಾಗಿ ಮಾತಾಡಿದಿರಿ. ಜ್ಞಾಪಕ ಇರಲಿ ಹೋಗಿಬರುತ್ತೇನೆ" ಎಂದು ಹೊರಟರು.

ಒಮ್ಮೆ ಬೈರೇಗೌಡರು ಸಂತೇಕಲ್ಲಹಳ್ಳಿ ಮೇಲೆ ಬೇರೆ ಊರಿಗೆ ಹೋಗುತ್ತಿದ್ದಾಗ, "ಶಾಸ್ತ್ರಿಗಳೇ" ಎಂದು ಕರೆಯುತ್ತಾ ಮನೆಯೊಳಗಡೆಗೆ ಬಂದರು. ನನ್ನದು ಆಗ ಸ್ವಯಂಪಾಕ. ಉಪ್ಪಿಟ್ಟು ಮಾಡಿ

ತಿನ್ನಲು ಮುಂದೆ ಇಟ್ಟುಕೊಂಡಿದ್ದೆ. ಅವರನ್ನು ನೋಡಿದ ಆನಂದದಲ್ಲಿ ನನಗೇನೂ ತೋಚಲಿಲ್ಲ. ಅವರೇ ಅಲ್ಲಿದ್ದ ಕುರ್ಚಿಯನ್ನು ಎಳೆದುಕೊಂಡು ಕುಳಿತರು. "ಬನ್ನಿ ಸಾರ್, ತಿಂಡಿ ತಿನ್ನೋಣ" ಎಂದೆ. ಮರು ಮಾತಾಡದೆ "ಆಯ್ತು ಕೊಡಿ ನಿಮ್ಮ ಕೈರುಚಿನೂ ನೋಡಾನ" ಎಂದರು. ಉಪ್ಪಿಟ್ಟು ನೀಡಿದೆ. "ಇದಕ್ಕೆ ಮೊಸರು ಹಾಕಿಕೊಂಡು ತಿಂದರೆ ಉಪ್ಪಿಟ್ಟು ಇನ್ನೂ ರುಚಿಸಾರ್" ಎಂದೆ. "ಆ ಕಾಂಬಿನೇಷನ್ ನನಗೆ ಗೊತ್ತಿಲ್ಲ" ಎನ್ನುತ್ತಿರುವಂತೆಯೇ ನಾನು ಮೊಸರು ಬಡಿಸಿದೆ. ಉಪ್ಪಿಟ್ಟು ತಿಂದು ನೀರು ಕುಡಿದು, ನನ್ನ ಪಿಎಚ್‌ಡಿ ಅಧ್ಯಯನವನ್ನು ಕುರಿತು ವಿಚಾರಿಸಿಕೊಂಡರು. ಚುನಾವಣೆಯ ಬಗ್ಗೆ ಒಂದು ಮಾತನ್ನೂ ಆಡಲಿಲ್ಲ. ನೀವು ಬಂದದ್ದು ಏಕೆ ಎಂದು ನಾನು ಕೇಳಲಿಲ್ಲ. ಅವರೂ ಹೇಳಲಿಲ್ಲ.

ಎರಡು ಮೂರು ವಾರಗಳ ನಂತರ "ಕೈವಾರದಲ್ಲಿ ಮೀಟಿಂಗ್ ಇದೆಯಂತೆ. ಬೈರೇಗೌಡರು ಹೇಳಿ ಕಳಿಸಿದ್ದಾರೆ, ನೀವು ಹೋಗಬೇಕಂತೆ" ಎಂಬ ವರ್ತಮಾನ ಬಂತು. ಹೋಗೋದರಿಂದ ನಾನು ಕಳೆದುಕೊಳ್ಳುವುದೇನಿದೆ ಎಂದು ಕೊಂಡೆ. ಆ ದಿನ ಸೈಕಲ್ಲಿನ ಮೇಲೆ ಗೆಳೆಯರೊಂದಿಗೆ ಕೈವಾರಕ್ಕೆ ಹೋದೆ.

ಅಲ್ಲಿನ ಛತ್ರವೊಂದರಲ್ಲಿ ಬೈರೇಗೌಡರ ಅಭಿಮಾನಿಗಳು ಸೇರಿದ್ದರು. ನನ್ನನ್ನು ನೋಡಿದ ಕೂಡಲೇ ಬೈರೇಗೌಡರು "ಹೇಗೆ ಬಂದ್ರಿ" ಎಂದು ಕೇಳಿದರು. "ಸೈಕಲ್ ಮೇಲೆ" ಎಂದಾಗ ನಗುತ್ತಾ ಕುರ್ಚಿಯನ್ನು ತೋರಿಸಿದರು. ಚುನಾವಣೆಯನ್ನು ಹೇಗೆ ಎದುರಿಸಬೇಕು. ಹೇಗೆ ಪ್ರಚಾರ ಮಾಡಬೇಕು ಎಂಬುದರ ಬಗ್ಗೆ ಅಲ್ಲಿ ಚರ್ಚೆ ನಡೆಯುತ್ತಿತ್ತು. ನಾನು ಕುರ್ಚಿಯಲ್ಲಿ ಕುಳಿತು ಎಲೆ ಅಡಿಕೆ ಅಗಿಯುತ್ತಾ ಅವರ ಮಾತುಗಳನ್ನು ಕೇಳುತ್ತಿದ್ದೆ. ಅವರಿವರು "ನೀನೂ ಮಾತಾಡಪ್ಪ" ಎಂದು ನನ್ನನ್ನು ಮುಂದಕ್ಕೆ ತಳ್ಳಿದರು. "ಬೈರೇಗೌಡರು ಈ ಚುನಾವಣೆಯಲ್ಲಿ ಗೆಲ್ಲಬೇಕು. ಆದರೆ ಚುನಾವಣೆಯಲ್ಲಿ ಗೌಡರು ಗೆಲ್ಲುವುದು ಸೋಲುವುದು ಮುಖ್ಯವಲ್ಲ. ಅವರು ಹೇಗೆ ಗೆಲ್ಲುತ್ತಾರೆ ಎಂಬುದು ಮುಖ್ಯ. ಹೆಂಡ, ಹಣಗಳನ್ನು ಸುರಿದು ಅವರು ಗೆಲ್ಲುವುದಕ್ಕಿಂತಲೂ, ಅವರು ನಿಜಾಯಿತಿಯಿಂದ ಸೋಲುವುದೇ ಮೇಲು" ಎಂದು ಸ್ವಲ್ಪ ಆವೇಶದಿಂದ ಹೇಳಿ ನನ್ನ ಜಾಗಕ್ಕೆ ಬಂದು ಹಿಂತಿರುಗಿದೆ. ಬೈರೇಗೌಡರು ನನ್ನ ಮಾತುಗಳನ್ನು ಗಮನವಿಟ್ಟು ಕೇಳಿದರು. ನನ್ನ ಬಗ್ಗೆ ಅವರಿಗೆ ಹೆಮ್ಮೆ ಆದಂತೆ ಅನ್ನಿಸಿತು. ಅಷ್ಟರಲ್ಲಿ ಯಾರೋ ಜೋರಾಗಿ "ಎಂಥಾ ಅಯ್ನೋರ್ನ ಕರೆದ್ರಪ್ಪಾ ಮಾತಾಡಾಕ ಎಲ್ಲಾ ಅಪಸಕುಣ ನುಡಿತಾನ" ಎಂದು ಸಿಡುಕಿದರು. ಆ ಮಾತು ಕೇಳಿಸಿಕೊಂಡ ಬೈರೇಗೌಡರು "ಶೇಷಪ್ಪ ಐನೋರು (ಕಾಂಗ್ರೆಸ್ ಐ) ಅಲ್ಲ; ಆರೋರು" ಎಂದು ನಗೆ ಚಟಾಕಿಯನ್ನು ಹಾರಿಸಿದರು.

ಚುನಾವಣೆ ತುಂಬಾ ಬಿರುಸಿನಿಂದ ನಡೆಯಿತು. ಕೈವಾರ ಹೋಬಳಿಯಲ್ಲಿ ಬೈರೇಗೌಡರ ಭಾವನೆಂಟ ಚೌಡರೆಡ್ಡಿಯವರ ಪ್ರಭಾವ ತುಂಬಾ ಇತ್ತು. ಚೌಡರೆಡ್ಡಿಯವರು ಸ್ವಲ್ಪ ಸಡಿಲ ಬಿಟ್ಟಿದ್ದರೂ ಬೈರೇಗೌಡರು ಆ ಚುನಾವಣೆಯಲ್ಲಿ ಗೆದ್ದೆ ಬಿಡುತ್ತಿದ್ದರು. ಬೈರೇಗೌಡರು ತಮ್ಮ ಭಾವನೆಂಟನನ್ನು ಒಮ್ಮೆ ಕಂಡಿದ್ದರೂ, ಈ ಬಗ್ಗೆ ವಿನಂತಿಸಿಕೊಂಡಿದ್ದರೂ ಗೆಲ್ಲಬಹುದಿತ್ತು. ಆ ರೀತಿಯ ಕಳ್ಳಮಾರ್ಗ ಅವರ ತಲೆಯಲ್ಲಿ ಮೂಡಲೇ ಇಲ್ಲ. ಬೈರೇಗೌಡರು ಯಾರದೋ ನೆರಳಲ್ಲಿ ಬೆಳೆದವರಲ್ಲ. ಸ್ವಶಕ್ತಿಯಿಂದ ಮೇಲೆ ಬಂದವರು. ತಮ್ಮ ಸೋದರಿಯೂ ತಮ್ಮ ವಿರುದ್ಧ ಪ್ರಚಾರ ಮಾಡಿದಾಗಲೂ ಅವರು ಬೇಸರಿಸಿಕೊಂಡವರಲ್ಲ.

ಈ ಚುನಾವಣೆಯಿಂದಾಗಿ ನನ್ನೂರಿನಲ್ಲಿ ಅಲ್ಲೋಲಕಲ್ಲೋಲವೇ ಆಯಿತು. ಹಳೆಯ ವೈಷಮ್ಯಗಳೆಲ್ಲಾ ಚುನಾವಣೆಯಲ್ಲಿ ಉಕ್ಕಿ ಹರಿಯಿತು. ಗಲಭೆಗಳಾದವು. ಒಟ್ಟಿನಲ್ಲಿ ಜನರ ನೆಮ್ಮದಿ ಹಾಳಾಯಿತು. ಯಾವ ಕೆಸರಿನಲ್ಲಿ ನಾನು ಬೀಳಬಾರದು ಎಂದು ಭಾವಿಸಿದ್ದೇನೋ ಅದರಲ್ಲಿ ಕಂಠಪೂರ್ತಿ ಮುಳುಗಿ ಹೋದೆ. ಊರು ಬಿಡುವ ಪರಿಸ್ಥಿತಿ ಬಂತು. ಆದರ್ಶವಂತ ಉತ್ಸಾಹಿ ಯುವಕರನ್ನು ನಡುನೀರಲ್ಲಿ ಮುಳುಗಿಸಿದೆ ಎಂಬ ಪಾಪಪ್ರಜ್ಞೆ ಆವರಿಸಿತು.

ಚುನಾವಣೆಯ ಫಲಿತಾಂಶದಂದು ಕೋಲಾರದಲ್ಲಿದ್ದೆ. ಬೈರೇಗೌಡರು ಗೆದ್ದರೆ, ಹುಂಬರಿಗೆ ಬುದ್ಧಿ ಹೇಳಬೇಕು ಎಂಬ ಕನಸು ಕಾಣುತ್ತಿದ್ದೆ. ಫಲಿತಾಂಶ ಹೊರಬಿತ್ತು. ಗೋವಿಂದಗೌಡರು ಗೆದ್ದರು ಎಂಬುದಕ್ಕಿಂತಲೂ ಶುದ್ಧ ಹಸ್ತರಾದ ಬೈರೇಗೌಡರು ಸೋತರು ಎಂಬುದು ಪ್ರಮುಖ ಸುದ್ದಿಯಾಯಿತು.

ಅದೇ ಸಂದರ್ಭದಲ್ಲಿ ಒಂದು ಕೆಟ್ಟ ಗಾಳಿ ಸುದ್ದಿ ಕೇಳಿ ನಾವು ಅವರ ಮನೆಗೆ ಹೋದಾಗ ಗೌಡರು ಆಫೀಸು ರೂಮಿನತ್ತ ನಡೆದಿದ್ದರು. ನನ್ನನ್ನು ನೋಡಿ ಗಟ್ಟಿಯಾಗಿ ನಕ್ಕು "ಈ ಸುದ್ದಿಯನ್ನು ನಂಬಿ ನೀವೂ ಬಂದಿರಾ?" ಎಂದು ಒಳಗೆ ಕರೆದೊಯ್ದರು. ತುಂಬಾ ಸಹಜವಾಗಿಯೇ ಇದ್ದರು. ಸೋಲಿನ ಕರಿನೆರಳು ಅವರ ಮೇಲೆ ಬಿದ್ದಿರಲಿಲ್ಲ. ಲೋಕಾಭಿರಾಮವಾಗಿ ನನ್ನೊಂದಿಗೆ ನನ್ನ ಗೆಳೆಯರೊಂದಿಗೆ ಊರಿನ ಗಲಾಟೆಗಳ ಬಗ್ಗೆ, ಕೇಸುಗಳ ಬಗ್ಗೆ ಮಾತಾಡಿದರು. ಆ ರೀತಿಯ ಯಾವ ವಿಷಯಗಳನ್ನು ಅವರು ನನ್ನೊಂದಿಗೆ ಮಾತಾಡಿದ್ದೇ ಇಲ್ಲ. ಮಾತುಕತೆಯಾದ ಮೇಲೆ ನನ್ನ ಗೆಳೆಯರನ್ನು ಕುರಿತು "ನೀವು ಊಟ ಮಾಡ್ಕೋಗ್ರಿ" ಎಂದರು. ತಕ್ಷಣವೆ ನಾನು "ನನ್ನಗತಿ" ಎಂದು ಅವರತ್ತ ಪ್ರಶ್ನಾರ್ಥವಾಗಿ ನೋಡಿದೆ. "ನೀವು ಆರೋರಲ್ಲವಾ? ನಿಮ್ಮಪ್ಪನೇ ನನಗೆ ಮದುವೆ ಮಾಡಿಸಿದ್ದು" ಎಂದು ನಕ್ಕರು. "ಹಾಗಾದರೆ ತಿನ್ನಬೇಡ ಅಂತಿರಾ?" ಅಂದೆ. "ಅದು ನಿಮ್ಮಿಷ್ಟ. ಮಾಡಬೇಡಿ ಅಂತಾನೂ ಹೇಳಲಿಲ್ಲ ಅಲ್ವಾ?" ಎಂದು ಕೈಹಿಡಿದು ಮನೆಯತ್ತ ಕರೆದೊಯ್ದು, ತಮ್ಮ ಮಡದಿಯನ್ನು ಕರೆದು "ಸಾವಿತ್ರಿ ಇವರಿಗೆ ಬಡ್ಸು, ತುಪ್ಪಾ ಮೊಸರು ಸ್ವಲ್ಪ ಚೆನ್ನಾಗಾಕು. ಆರೋರು ಇವ್ರು" ತೃಪ್ತಿಯಿಂದ ಊಟ ಮಾಡಿದೆ. ಬೈರೇಗೌಡರ ಮನೆಯಲ್ಲಿ ಹಲವಾರು ಬಾರಿ ಈ ರೀತಿಯ ಔತಣವನ್ನು ಪಡೆದಿದ್ದೇನೆ. ಒಮ್ಮೆ ಮಾವಿನಕಾಯಿ ಕಾಲದಲ್ಲಿ ಹೋದಾಗ ತಾವೇ ಮಾವಿನಹಣ್ಣನ್ನು ಕೊಯ್ದು ನನಗೆ ಕೊಡುತ್ತಾ ನಾನು ತಿನ್ನುತ್ತಿದ್ದನ್ನು ನೋಡಿ ತೃಪ್ತಿ, ಸಂತೋಷಗಳನ್ನು ಹೊಂದಿದ್ದರು. ಇದೆಂಥಾ ವಾತ್ಸಲ್ಯ. ಇಂದಿಗೂ ನನಗೆ ಅರ್ಥವಾಗಿಲ್ಲ. ಆ ಒಲುಮೆಯನ್ನು ಅವರು ಬದುಕಿರುವವರೆಗೂ ನಾನು ಪಡೆದಿದ್ದೆ.

ಕೆಟ್ಟು ಪಟ್ಟಣ ಸೇರಿದ ನನಗೆ ನನ್ನ ನಿಬಂಧ ಟೈಪ್ ಆಗಲು ಅಡ್ಡಿ ಬಂದಿದ್ದರಿಂದ, ಟೈಪಿಸ್ಟ್ ಇದ್ದರೂ ಕನ್ನಡ ಟೈಪ್‌ರೈಟರ್ ಇಲ್ಲದೆ ಕಷ್ಟಪಡುತ್ತ ನಡೆದಿರುವಾಗ, ಕರೆಕೇಳಿ ಬಂದವರಂತೆ ಕಾರಿನಲ್ಲಿ ಬಂದು ಕೋಲಾರಕ್ಕೆ ಕರೆದೊಯ್ದು ರಾತ್ರಿ ಎಂಟು ಗಂಟೆಯೊಳಗೆ ಟೈಪ್‌ರೈಟರನ್ನು ಜಬರ್‌ದಸ್ತಾಗಿ ಪ್ಯಾಕ್ ಮಾಡಿದ್ದ ಒಂದು ಪೆಟ್ಟಿಗೆಯಲ್ಲಿಟ್ಟು ಕೊಡಿಸಿದವರು ಅವರು.

ಅದೇ ಬೆರಳಚ್ಚು ಯಂತ್ರದಿಂದ ನನ್ನ ನಿಬಂಧ ತಯಾರಾಯಿತು. ಸುಮಾರು ಒಂದು ವರ್ಷ ನನ್ನ ಬಳಿಯಿತ್ತು ಅದನ್ನು ಕೊಡುವಾಗ ನೀವು ನಿಮ್ಮ ಕೆಲಸ ಆದಮೇಲೆ ಹಿಂತಿರುಗಿಸಿ ಎಂದೇನೂ ಅವರು ಹೇಳಿರಲಿಲ್ಲ. ಹಾಗೆಂದು ನಾನೇ ಅದನ್ನು ಇಟ್ಟುಕೊಳ್ಳುವುದು ಸರಿಯೇ? ನಿಬಂಧ ತಯಾರಾದ ಮೇಲೆ ಅದನ್ನು ಅವರಿಗೆ ತೋರಿಸಿ ಬಂದೆ. "ಇದೆಲ್ಲಾ ನಮಗೇನು ಅರ್ಥ ಆಗುತ್ತೆ.

ನಮ್ಮ ಶಾಸ್ತ್ರಿಗಳ ಥೀಸೀಸ್ ನನಗೆ ಸಂತೋಷ. ಬೇಗ ಡಾಕ್ಟರೇಟ್ ಬರಲಿ" ಎಂದು ಹೇಳಿದರು. ಟೈಪರೈಟರ್ ಬಗ್ಗೆ ಒಂದು ಮಾತು ಆಡಿದ್ದರೆ ಆಣೆ. ತಯಾರಾಗಿದ್ದ ನನ್ನ ನಿಬಂಧವನ್ನು ಅವರು ಕಂಡು ಪಟ್ಟ ಆನಂದ ಅವರ್ಣನೀಯ. ಅಲ್ಲಿದ್ದ ಎಲ್ಲರಿಗೂ ತೋರಿಸಿದರು. "ಅಂತೂ ನಾನೂ ಒಂದು ಸಾರ್ಥಕವಾದ ಕೆಲಸಕ್ಕೆ ಉಪಯೋಗಕ್ಕೆ ಬಂದೆ" ಎಂದು ನಗೆಯಾಡಿದರು. ಟೈಪರೈಟರ್ ನಾನು ಹಿಂದಿರುಗಿಸುವಾಗ ಅವರ ಪ್ರತಿಕ್ರಿಯೆ "ಇದಕ್ಕೇನು ಅವಸರವಾಗಿತ್ತು" ಎಂದಷ್ಟೆ.

ನಿಬಂಧವನ್ನು ವಿಶ್ವವಿದ್ಯಾಲಯ ಮೌಲ್ಯಮಾಪನಕ್ಕೆ ಸ್ವೀಕರಿಸುವುದಕ್ಕೆ ಒಂದೂವರೆ ವರ್ಷ. ಅನಂತರ ಒಂದು ವರ್ಷ ಹಿಡಿಯಿತು, ನನಗೆ ಪಿಎಚ್‌ಡಿ ಬರಲು. ನಾನು ಅಲೆಮಾರಿಯಾಗಿದ್ದೆ. ಒಮ್ಮೆ ಬೈರೇಗೌಡರನ್ನು ಭೇಟಿಯಾದಾಗ ತುಂಬಾ ಗೋಪ್ಯವಾಗಿ ಅವರು "ಅಲ್ಲಾ ಸ್ವಾಮಿ ನೀವು ಈವಾಗ ಏನು ಮಾಡ್ತಾ ಇದ್ದೀರಿ. ಖರ್ಚಿಗೇನು ಮಾಡ್ತೀರಿ. ಈಗ ಸರಿ ಗುಂಡುಗೋವಿ. ಎಷ್ಟು ದಿನ ಹೀಗಿರ್ತೀರ. ಎಲ್ಲಾದ್ರೂ ಕೆಲಸ ಇದ್ರೆ ಹೇಳಿ. ನಾನು ನಿಮ್ಮನ್ನು ರೆಕ್ಮೆಂಡ್ ಮಾಡ್ದೆ ಹೋದ್ರೂ ನಿಮಗೆ ಅನ್ಯಾಯ ಆಗದ ಹಾಗೆ ನೋಡ್ಕೊತೀನಿ, ದುಡ್ಡು ಬೇಕಾ ಕೇಳಿ. ಸಂಕೋಚ ಪಡಬೇಡ್ರಿ" ಎಂದು ಕೇಳುತ್ತಿದ್ದರು. ಮೌನವೇ ಅಂತಹ ಸಂದರ್ಭಗಳಲ್ಲಿ ನನ್ನ ಉತ್ತರವಾಗಿತ್ತು. ಅವರು ಎಂದೂ ಬೇರೆಯವರ ಎದುರುಗಡೆ ನನ್ನನ್ನು ನಿಮಗೆ ಹಣ ಬೇಕೆ? ಎಂದು ಕೇಳಿದವರೇ ಅಲ್ಲ. "ಸಾರ್, ನಿಮ್ಮ ಅಭಿಮಾನವೊಂದೇ ಸಾಕು" ಎಂದು ಹೇಳಿದಾಗ "ಅಭಿಮಾನ ಹಿಟ್ಟು ಇಡಲ್ಲಾ ಕಣ್ರೀ" ಎಂದು ರೇಗಾಡುತ್ತಿದ್ದರು.

ನಾನು ಊರನ್ನು ಬಿಟ್ಟರೂ ನನಗೆ ಅದರ ಮೇಲಿನ ಅಭಿಮಾನ ಅಳಿಯಲಿಲ್ಲ. ನಮ್ಮೂರಿನಲ್ಲಿ ಒಂದು ಹೈಸ್ಕೂಲು, ಒಂದು ವೃತ್ತಿ ಶಿಕ್ಷಣ ಶಾಲೆ ಪ್ರಾರಂಭ ಮಾಡುವಂತೆ ಬೈರೇಗೌಡರಲ್ಲಿ ಅರಿಕೆ ಮಾಡಿಕೊಂಡಿದ್ದು ಒಂದು ಹೈಸ್ಕೂಲು ಹೇಗೆ ಸುತ್ತಮುತ್ತಲಿನ ಹಳ್ಳಿಯ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುತ್ತದೆ ಎಂಬುದನ್ನು, ಅವರಿಗೇನೂ ತಿಳಿಯದೇನೋ ಎಂಬಂತೆ ವಿವರಿಸುತ್ತಿದ್ದರೆ, ಅವರು ಕೇಳುತ್ತಿದ್ದರು. ಅವರ ಅಂದಿನ ವಿನಯ, ನನ್ನ ಹುಂಬತನ ನೆನೆದರೆ ನಗು ಬರುತ್ತದೆ. ನಮ್ಮೂರಿಗೆ ಸರ್ಕಾರಿ ಹೈಸ್ಕೂಲು ಬಂತು. ಅದು ಈಗ ತುಂಬಾ ಚೆನ್ನಾಗಿ ನಡೆಯುತ್ತಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅನೇಕ ಮಂದಿ ವಿದ್ಯಾರ್ಥಿಗಳು ಆ ಶಾಲೆಯಿಂದ ಉಪಕೃತರಾಗಿದ್ದಾರೆ. ಆ ಶಾಲೆಗೆ ಬಂದ ಅಧ್ಯಾಪಕರೂ ಆದರ್ಶವಾದಿಗಳಾದುದರಿಂದ ಶಾಲೆ ಚೆನ್ನಾಗಿ ಮುಂದುವರಿಯುತ್ತಿದೆ.

ಒಂದು ಸಾರಿ ಸಿಕ್ಕಾಗ "ಏನ್ರೀ ಶಾಸ್ತ್ರಿಗಳೇ, ನಿಮಗೆ ಮುವ್ವತ್ತು ಮುವತ್ತೊಂದು ವರ್ಷ ಅಲ್ವಾ, ಏನು ಮದುವೆ ಮಾಡಿಕೊಳ್ಳೊ ಯೋಚ್ನೆ ಇದೆಯೋ ಇಲ್ಲವೋ. ಅಲ್ಲಾ ನಿಮ್ಮ ತಂದೆ ತಾಯಿಗಳಿಗೆ ಯಾಕೆ ಹಿಂಸೆ ಕೊಡ್ತೀರಾ, ಅಂದ್ರೆ ನೀವು ದುರ್ಮಾರ್ಗಿ ಅಂತ ಹೇಳ್ತಾ ಇಲ್ಲ. ನಿಮ್ಮ ಅಪ್ಪ ಅಮ್ಮನಿಗೂ ಇರುತ್ತಲ್ಲ ಮಗನ ಮದುವೆ ನೋಡಬೇಕೂಂತ" ಎಂದು ಸ್ವಲ್ಪ ಗತ್ತಿನಿಂದಲೇ ಕೇಳಿದರು. ಇದು ನನ್ನ ಗೆಳೆಯ ರಂಗಣ್ಣನ ಪಿತೂರಿ ಎಂಬುದು ತಿಳಿದು ಒಳಗೇ ನಕ್ಕೆ. "ನಗೋದಲ್ಲ ನನಗೆ ಉತ್ತರ ಬೇಕು" ಎಂದರು. ಏನೋ ಹೇಳಿದೆ. ಅವರು ಅಂಗೀಕರಿಸಿದರು. ಆಮೇಲೆ ಎರಡು ತಿಂಗಳಿಗೇ ನನ್ನ ಮದುವೆಯಾಯಿತು. ಅದೇ ವರ್ಷ ನಮ್ಮೂರಿಗೆ ಹೈಸ್ಕೂಲು ಬಂತು. ನನ್ನ ಮದುವೆಯ ಆರತಕ್ಷತೆಯ ದಿನವೇ "ಮೊಯ್ಲಿ ಟೇಪ್ ಹಗರಣ" ನಡೆದದ್ದು. ಆದರಿಂದ ಅವರು ಬರಲಿಲ್ಲ. ಆಮೇಲೆ ಎಂಟು ದಿನಗಳಿಗೆ ನನ್ನ ಮನೆಗೆ ಬಂದು ಮಾತಾಡಿಸಿ "ಹಸಿರು ನೀರು ಮೈಮೇಲೆ ಬಿದ್ದರೆ ಕಳೆ ಹೇಗೆ ಬಂದಿದೆ ಕನ್ನಡಿಯಲ್ಲಿ ನೋಡಿಕೊಳ್ಳಿ" ಎಂದು ಹಾಸ್ಯ ಮಾಡಿ ಎಂದಿನಂತೆ ಗೋಪ್ಯವಾಗಿ "ಶಾಸ್ತ್ರಿಗಳೇ ಸಂಪಾದನೆಗೆ ಮಾರ್ಗ" ಎಂದು ಎಚ್ಚರಿಸಿದರು. "ಸಾರ್ ನನ್ನ ತಲೇಲಿ ಏನು ಬರೆದಿದೆಯೋ ಹಾಗಾಗುತ್ತೆ. ನಾನು ನನ್ನ ಕೈವಾರದ ಪ್ರತಿಜ್ಞೆಗೆ

ಬದ್ಧ. ಈಗಾಗಲೇ ನಿಮ್ಮ ಋಣದಲ್ಲಿದ್ದೇನೆ" ಎನ್ನುತ್ತಿರುವಂತೆ ಅಸಾಧ್ಯ ಸಿಟ್ಟಿನಿಂದ ದುರುಗುಟ್ಟಿ ನೋಡಿದರು. ನನಗೆ ಹೆದರಿಕೆ ಆಯಿತು. "ಅಂತಾ ಟೈಂ ಬಂದಾಗ ನಿಮ್ಮನ್ನಲ್ಲದೇ ನಾನು ಬೇರೆ ಯಾರನ್ನು ಕೇಳಲ್ಲ ಸಾರ್" ಎಂದು ನಾನು ಹೇಳಿದಾಗ ನಕ್ಕರು.

ಬೈರೇಗೌಡರು ಅದೆಷ್ಟು ಮುಂಗೋಪಿಯೋ, ಅಷ್ಟೇ ಹಾಸ್ಯಪ್ರಿಯರು. ಅವರ ನಗೆ ಪರಿಶುದ್ಧವಾದುದು. ಅವರು ಯಾರನ್ನೂ ಗೇಲಿ ಮಾಡಿದ್ದು, ಅಪಹಾಸ್ಯ ಮಾಡಿದ್ದು ನಾನು ಕಂಡೇ ಇಲ್ಲ. ಜನರ ನಡವಳಿಕೆಗೆ ಅವರು ರೋಸಿ ಹೋದಾಗ "ನಿಮ್ಮ ನೋಡಿ ನಗಬೇಕೋ ಅಳಬೇಕೋ ತಿಳಿತಾ ಇಲ್ಲ" ಎನ್ನುತ್ತಿದ್ದರು. ಅನ್ಯಾಯದ ಮಾರ್ಗದಲ್ಲಿ ತಮ್ಮಿಂದ ಸಹಾಯ ಪಡೆಯುತ್ತಿದ್ದಾರೆಂಬುದು ತಿಳಿದರೆ ಸಾಕು ಅವರ ಮೇಲೆ ಬೆಂಕಿ ಉಗುಳುತ್ತಿದ್ದರು. "ಅಲ್ಲಯ್ಯ ನಿನಗಿಂತ ಹೆಚ್ಚಿನ ಡಿಗ್ರಿ ಮಾರ್ಕುಗಳನ್ನು ಪಡೆದವರೇನೂ ಅಲ್ಲ ಅಂತ ಅವನ ಬಾಯಿಗೆ ಮಣ್ಣು ಹಾಕಿ ನಿನಗೆ ಸಹಾಯ ಮಾಡಿದರೆ ನ್ಯಾಯವೇನಾ?" ಎಂದು ಮುಖದ ಮೇಲೆ ಹೇಳಿ ಬರುತ್ತಿದ್ದರು. ಅವನು ಅರ್ಹ ಎಂದು ತಿಳಿದರೆ ಅವನನ್ನು ತಮ್ಮ ಕಾರಿನಲ್ಲಿಯೇ ಕುಳ್ಳಿರಿಸಿಕೊಂಡು ಹೋಗಿ ಅವನೆದುರಿಗೆ ಸಹಾಯ ಮಾಡಿರುವ ನಿದರ್ಶನಗಳಿಗೆ ನಾನು ಸಾಕ್ಷಿ. ತಮ್ಮ ಬಳಿಗೆ ಯಾರೇ ಬಂದರೂ ನೇರವಾಗಿ ಬರಬೇಕು. ಯಾರ ಬಾಲವನ್ನಾದರೂ ಹಿಡಿದುಕೊಂಡು ಬಂದರೆ ಅವರಿಗೆ ಸಿಟ್ಟು. ಲಂಚಗುಳಿ ಅಧಿಕಾರಿಗಳು, ಪುಢಾರಿ, ದಲ್ಲಾಳಿ ರಾಜಕೀಯ ನಾಯಕರೆಂದರೆ ಅವರಿಗೆ ಸರಿ ಬೀಳುತ್ತಿರಲಿಲ್ಲ. "ನೋಡ್ರೀ ಈ ಫೂಟ್ ಲಾಯರಿಗಳು ಹೋದ್ರೆ ಜನ ಸರಿಹೋಗ್ತಾರೆ. ಈ ಜನರ ಅಜ್ಞಾನ, ದುರಾಸೆಯನ್ನು ಬಳಸಿಕೊಂಡು ಈ ಪುಢಾರಿಗಳು ತಮ್ಮ ಬೇಳೆ ಬೇಯಿಸಿಕೊತಾರೆ. ಕೊನೆಗೆ ಯಾರಿಗೆ ಕೆಟ್ಟ ಹೆಸರು ಅಂದ್ರೆ ನಮ್ಗೆ. ನಂಗೆ ತಿಳೀದ ಹಾಗೇ ನಮ್ಮ ಪರವಾಗಿ ವ್ಯವಹಾರ ಮಾಡ್ತಾರೆ ಇಂಥಾವರ್‍ನೆಲ್ಲಾ ಹಿಡಕೊಂಡು ಒದೀಬೇಕು" ಎಂದು ಆವೇಶದಿಂದ ಹಲವಾರು ಬಾರಿ ಹೇಳಿದ್ದರು. ಬೈರೇಗೌಡರು ಬೈಯುತ್ತಿದ್ದರು. ಆದರೆ ಅವು ಎಂದೂ ಸಭ್ಯತೆಯ ಎಲ್ಲೆಯನ್ನು ಮೀರಿದ್ದು ನಾನು ಕೇಳಿಲ್ಲ. ಎದುರಿಗಿದ್ದವರನ್ನ ಎದುರಿನಲ್ಲೆ ಬಯ್ಯುತ್ತಿದ್ದರೇ ವಿನಾ ಎಂದೂ ಯಾರನ್ನೂ ಪರೋಕ್ಷವಾಗಿ, ಕೇವಲ ತಮ್ಮ ಶತ್ರು ಎಂಬ ಕಾರಣಕ್ಕಾಗಿ ಬೈಯ್ದವರಲ್ಲ. "ನೀವು ತಾಲ್ಲೂಕ್ ಆಫೀಸ್‌ನೋರಿಗೆ ಚೆನ್ನಾಗಿ ಲಂಚ ತಿನ್ನೋದು ಕಲಿಸಿದಿರಾ ನಿಮ್ಗೇನು ನಿಮ್ಮ ಕೆಲಸ ಆಗಿಬಿಟ್ರೆ ಸಾಕು. ಎಲ್ಲಾ ನೀವು ಮಾಡಿಕೊಂಡಿರೋದೇ ಅನುಭವಿಸಿ ಹೋಗಿ" ಎಂದು ಸಿಡುಕಿ ನಂತರ ಅವರಿಂದ ವಿವರಗಳನ್ನು ಪಡೆದು ಅದು ನ್ಯಾಯ ಎನ್ನಿಸಿದರೆ ನೆರವಾಗುತ್ತಿದ್ದರು.

ಯಾರನ್ನು ಯಾವ ಕೆಲಸದ ಮೇಲೆ ಕರೆದುಕೊಂಡು ಹೋದರೂ, ಬೈರೇಗೌಡರು ತಮ್ಮ ಕಾರಿನಲ್ಲಿಯೇ ಹೋಗುತ್ತಿದ್ದರು. ಬೇರೆಯವರ ವಾಹನವನ್ನು ಬಯಸಿದ್ದಾಗಲೀ, ಪ್ರಯಾಣದ ವೆಚ್ಚ ಕೇಳಿದ್ದಾಗಲೀ ನಾನು ನೋಡಿಲ್ಲ, ಕೇಳಿಲ್ಲ. ತಮ್ಮ ಕ್ಷೇತ್ರದ ಜನ ತಮ್ಮನ್ನು ಆಹ್ವಾನಿಸಿದಾಗಲೂ ಹಾಗೆ. ಮದುವೆ, ಔತಣ, ಜಾತ್ರೆ, ಊರಹಬ್ಬ ಎಲ್ಲದಕ್ಕೂ ಹೋಗುತ್ತಿದ್ದರು. ಒಮ್ಮೆಯೂ ಅವರು ದೇವಾಲಯಕ್ಕೆ ಪ್ರತ್ಯೇಕವಾಗಿ ಹೋಗಿದ್ದಾಗಲೀ ಅಥವಾ ನಾನು ಬರುವುದಿಲ್ಲ ಎಂದು ಹಟ ಹಿಡಿದಿದ್ದಾಗಲೀ ಇಲ್ಲ. ಈ ಬಗ್ಗೆ ಅವರಲ್ಲಿ ಒಮ್ಮೆ ಸಹಜವಾಗಿ ಪ್ರಸ್ತಾಪಿಸಿದಾಗ "ದೇವರು ದಿಂಡರುಗಳ ಬಗ್ಗೆ ಯೋಚಿಸೋಕೆ ನನಗೆ ಟೈಂ ಇಲ್ಲ. ದೇವರ ಹತ್ರ ನನಗೂ ಕೆಲಸ ಇಲ್ಲ. ದೇವರಿಗೆ ನನ್ನ ಹತ್ರಾನೂ ಕೆಲಸ ಇಲ್ಲ. ಈ ಟೆನೆನ್ಸಿ ಆಕ್ಟ್‌ನಿಂದ ನನಗೂ ದೇವರಿಗೂ ಸ್ವಲ್ಪ ಬಿಗಿದುಕೊಂಡಿದೆ" ಎಂದು ನಗೆಯಾಡಿದರು.

ರೇಷ್ಮೆ ಬೇಸಾಯ, ಹೈನುಗಾರಿಕೆ, ವ್ಯವಸಾಯ ಅದರಲ್ಲಿಯೂ ತೋಟಗಾರಿಕೆಯ ಬಗ್ಗೆ ಅಪಾರವಾದ ಪರಿಜ್ಞಾನವನ್ನೇ ಪಡೆದಿದ್ದರು. ಇಷ್ಟು ರಾಜಕೀಯ ಚಟುವಟಿಕೆಗಳ ನಡುವೆಯೂ ಅವರು ತಮ್ಮ ಸ್ವಂತ ವ್ಯವಸಾಯದ ಬಗ್ಗೆ ತುಂಬಾ ಕಾಳಜಿ ತೋರುತ್ತಿದ್ದರು.

ಒಮ್ಮೆ ಅವರು "ಶಾಸ್ತ್ರಿಗಳೇ ಇಷ್ಟು ಶಾಸನಗಳನ್ನು ಓದಿದ್ದೀರಿ ನಿಮಗೆ ನಮ್ಮ ಸೀತಿಬೆಟ್ಟದ ಬಗ್ಗೆ ಗೊತ್ತೆ?" ಎಂದು ಅವರು ಕುತೂಹಲದಿಂದ ಕೇಳಿದಾಗ ತುಂಬಾ ಉತ್ಸಾಹದಿಂದ ಹೇಳುತ್ತಾ ಹೋದೆ. ನಮ್ಮ ಪ್ರಾಂತ್ಯದ ಒಕ್ಕಲಿಗರು ಸೀತಿಬೆಟ್ಟದ ಭೈರವನಿಗೆ ಬೆರಳು ಕೊಡುವ ಸಂಪ್ರದಾಯವನ್ನು ತಿಳಿಸಿ, "ನೋಡಿ ಹಿಂದೆ ಬೆರಳೇ ಕೊಡ್ತಾ ಇದ್ರು ಈಗ ಬೆರಳಿಗೆ ಹೂವ ಸುತ್ತಿ ಅದ್ನ ಕತ್ತರಿಸ್ತಾ ಇದ್ದಾರೆ. ಇದೂ ಈಗ ಹೋಗ್ತಾ ಇದೆ" ಅವರು ತುಂಬಾ ಗಂಭೀರವಾಗಿ ತಮ್ಮ ಬಲಗೈ ತೋರು ಬೆರಳನ್ನು ನನಗೆ ತೋರಿಸಿ "ನೋಡಿ ನಾನು ನನ್ನ ಬೆರಳನ್ನೇ ಕೊಟ್ಟಿದ್ದೇನೆ" ಎಂದರು. ನನ್ನೊಳಗಿನ ಸುಶೋಧಕ ಯುರೇಕ  ಯುರೇಕಾ ಎಂದು ಕುಣಿದಾಡಿದ "ಸಾರ್, ನೀವು ಪರ್ಮಿಷನ್ ಕೊಟ್ರೆ ಈ ಬೆರಳು ಫೊಟೋ ತೆಗೆದು, ನೀವು ಹೇಗೆ ಬೆರಳು ಕೊಟ್ಟಿರಿ ಅನ್ನೋ ಸಂಪ್ರದಾಯವನ್ನೇ ಕುರಿತು ಲೇಖನ ಬರೀತೇನೆ" ಎಂದು ನಾನು ತುಂಬಾ ಗಂಭೀರವಾಗಿ ಹೇಳುತ್ತಿರುವಂತೆ ಅವರು ಬಿದ್ದು ಬಿದ್ದು ನಕ್ಕು "ಶಾಸ್ತ್ರಿಗಳೇ ನಾನು ಚಿಕ್ಕವನಿದ್ದಾಗ ಕಬ್ಬಿಣದ ಪೆಟ್ಟಿಗೆಗೆ ಸಿಕ್ಕಿ ಈ ಬೆರಳು ಹೀಗಾದದ್ದು" ಎಂದು ನಗುತ್ತಲೇ ಇದ್ದರು. ಆ ನಗೆಯಲ್ಲಿ ಕುಹಕತನವಿರಲಿಲ್ಲ. ನನ್ನ ಅತೀ ಉತ್ಸಾಹದ ಬಗ್ಗೆ ಎಚ್ಚರಿಕೆ ನೀಡುವ ಆತ್ಮೀಯತೆಯಿತ್ತು.

ಅವರು ವ್ಯವಸಾಯ ಮಂತ್ರಿಗಳಾಗಿದ್ದಾಗ ಅನಂತಪುರಕ್ಕೆ ಬಂದಿದ್ದಾಗ ಬೆಳಿಗ್ಗೆ ಒಂಬತ್ತು ಗಂಟೆಗೆ ಫೋನ್ ಬಂತು "ಶಾಸ್ತ್ರಿಗಳೇ ನಾನು ಬೈರೇಗೌಡ ಮಾತಾಡ್ತಾ ಇರೋದು. ನೀವು ಆರ್ ಅಂಡ್ ಬಿ ಗೆಸ್ಟ್‌ಹೌಸ್‌ಗೆ ಬನ್ನಿ. ನಾನು ನಿಮ್ಮ ಮನೆಗೆ ತಿಂಡಿಗೆ ಬರ್ತೀನಿ" ನನಗೋ ಎಲ್ಲಿಲ್ಲದ ಖುಷಿ 'ಸಾರ್ ಇನ್ನು ಐದು ನಿಮಿಷದಲ್ಲಿ ಅಲ್ಲಿರ್ತೇನೆ" ಎಂದವನೇ ಗೆಸ್ಟ್ ಹೌಸ್‌ನತ್ತ ಧಾವಿಸಿದೆ. ಹೋದ ಕೂಡಲೇ ಉಭಯ ಕುಶಲೋಪರಿಯಾಯಿತು. "ಏನು ಸ್ವಾಮಿ ಈ ಹೊತ್ತು ಉಪ್ಪಿಟ್ಟೇನಾ" ಎಂದು ಛೇಡಿಸಿದರು.

ಗೌಡರು ಊರುಗೋಲು ಹಿಡಿದು ನಮ್ಮ ಮನೆಗೆ ಹೋಗುವ ತಯಾರಿಯಲ್ಲಿದ್ದಾಗ ಪೊಲೀಸ್ ಪೇದೆ ಬಂದು ಹೈದರಾಬಾದ್‌ನಲ್ಲಿ ಬಾಂಬ್ ಸಿಡಿದುದರ ಪರಿಣಾಮ ಇಲ್ಲೂ ವಾತಾವರಣ ಗಂಭೀರವಾಗಿದೆ. ನೀವೆಲ್ಲೂ ಹೋಗಬಾರದು ಎಂದು ತಿಳಿಸಿದ. ನಾನು ಮಂತ್ರಿ ಎನ್ನುವುದು ಯಾರಿಗೂ ಗೊತ್ತಿಲ್ಲ. ಇವರ ಮನೆಗೆ ಹೋಗಿಬರುತ್ತೇನೆ ಎಂದರೂ ಪೊಲೀಸರು ಬಿಡಲಿಲ್ಲ. ನಾನೂ ಗೌಡರ ಜೊತೆ ಅಲ್ಲಿಯೇ ತಿಂಡಿ ತಿಂದೆ.

ಅನಂತಪುರದ ಕೃಷಿ ಕ್ಷೇತ್ರದಲ್ಲಿ ಬೈರೇಗೌಡರು ಚಕಚಕನೆ ನಡೆಯುತ್ತಿದ್ದರೆ ಅವರ ಹಿಂದೆ ಅಧಿಕಾರಿಗಳು ಓಡುತ್ತಾ ಹೋಗುತ್ತಿದ್ದರು. ಅವರನ್ನು ತೆಲುಗಿನಲ್ಲಿ, ಇಂಗ್ಲೀಷ್‌ನಲ್ಲಿ ಪ್ರಶ್ನಿಸುತ್ತಿದ್ದರು. ಕೃಷಿ ಕೈಗಾರಿಕಾ ಕೇಂದ್ರದಲ್ಲಿಯಂತೂ  ಆ ವಿಭಾಗದವರ ಶ್ರಮವನ್ನು ಗುರುತಿಸಿದರು. ಮೆಚ್ಚಿದರು. ಅಲ್ಲಿನ ಒಬ್ಬ ಅಧಿಕಾರಿ ನನ್ನೊಂದಿಗೆ "ನನ್ನ ಶ್ರಮ ಇಂದಿಗೆ ಸಾರ್ಥಕ ಆಯ್ತು. ನಮ್ಮ ಆಫೀಸರ್‌ಗಳೇ ಬಂದು ನಮ್ಮನ್ನು ಈ ರೀತಿ ಪ್ರಶ್ನೆ ಮಾಡೋಲ್ಲ. ಹಾಗೆ ಬರ್ತಾರೆ ಹೀಗೆ ಹೋಗ್ತಾರೆ ಇನ್ನು ಮಂತ್ರಿಗಳ ವಿಷಯ ಬಿಡಿ. ಹೀಗಿರಬೇಕು ಸಾರ್ ವ್ಯವಸಾಯ ಮಂತ್ರಿ ಅಂದ್ರೆ" ಎಂದು ನನ್ನಲ್ಲಿ ಹೇಳಿಕೊಂಡರು.

ಅನಂತಪುರದಲ್ಲಿ ಅವರೊಡನೆ ಎರಡು ದಿನಗಳ ಒಡನಾಟ ನನ್ನ ಜೀವನದ ರಸಮಯ ಪುಟಗಳು. ಊರಿಗೆ ಹೊರಡುವ ಮುಂಚೆ ನನ್ನ ಪರಿಸ್ಥಿತಿಯನ್ನು ಕೇಳಿ ತಿಳಿದು ಕೊಂಡರು. "ನೆಮ್ಮದಿಯಾಗಿದ್ದೀನಿ ಸಾರ್" ಎಂದೆ.

ನನ್ನ ಬೆನ್ನು ತಟ್ಟಿ "ಹೀಗೆ ನೀವು ನೆಮ್ಮದಿಯಾಗಿರಿ ಶಾಸ್ತ್ರಿಗಳೇ" ಎಂದು ತುಂಬು ಮನಸ್ಸಿನಿಂದ ಹೇಳಿದರು. ಸಾವಿರ ಒಂಬೈನೂರ ಎಪ್ಪತ್ತೆರಡರ ಬೈರೇಗೌಡರಲ್ಲಿನ ಆ ಒಗರುತನ ಮಾಗಿ ಹಣ್ಣಾಗಿತ್ತು. ಅಂದಿನ ಪ್ರಾಮಾಣಿಕತೆ, ಅನ್ಯಾಯದ ವಿರುದ್ಧ ಸಹನೆ ಅದೇ ಕಾವನ್ನು ಉಳಿಸಿಕೊಂಡಿತ್ತು.

ಬಹುಶಃ ನಾನು ಅದೇ ಅವರನ್ನು ಕೊನೆಯ ಬಾರಿಗೆ ಕಂಡಿದ್ದು. ಪ್ರತಿ ಬಾರಿ ಅವರು ಚುನಾವಣೆಗೆ ನಿಂತಾಗಲೂ ನಾನು ಅವರಿಗೆ ಶುಭಕೋರಿ ಪತ್ರ ಬರೆಯುತ್ತಿದ್ದೆ. ಅದರಂತೆ ಅವರು ಸ್ಪರ್ಧಿಸಿದ ಕೊನೆಯ ಚುನಾವಣೆಯ ಸಂದರ್ಭದಲ್ಲಿಯೂ ಬರೆದಿದ್ದೆ. ಅವರು ಪತ್ರ ಬರೆಯುವ ಸಂಪ್ರದಾಯವನ್ನು ಪಾಲಿಸಿಕೊಂಡು ಬರಲಿಲ್ಲ. ನನ್ನ ಹಲವಾರು ಕಾಗದಗಳಿಗೆ ನೇರವಾಗಿ ದೊರೆತಾಗಲಷ್ಟೆ ಸಮಾಧಾನ ನೀಡುತ್ತಿದ್ದರು.

ಕೋಲಾರ ಜಿಲ್ಲೆ ಕಂಡ ಧೀಮಂತ ರಾಜಕಾರಣಿಗಳಲ್ಲಿ, ಪರಿಶುದ್ಧ ರಾಜಕೀಯ ಧುರೀಣರಲ್ಲಿ ಸಿ. ಬೈರೇಗೌಡರು ಅಗ್ರಪಂಕ್ತಿಗೆ ಬರುತ್ತಾರೆ. ಅವರು ಯಾರ ನೆರಳಿನಲ್ಲಿಯೂ ಬೆಳೆದವರಲ್ಲ. ಇಡೀ ಕರ್ನಾಟಕದಲ್ಲಿ ತಮ್ಮ ನಿರ್ಭಯತ್ವ, ನಿಷ್ಪಕ್ಷಪಾತ ಧೋರಣೆ ಮತ್ತು ಜನಪರ ನಿಲುವುಗಳಿಂದಾಗಿ ತಮ್ಮ ಸ್ಥಾನವನ್ನು ಪಡೆದವರು. ಯಾರೊಬ್ಬರ ಯಜಮಾನಿಕೆಗೆ ತಲೆಬಾಗುವ ವ್ಯಕ್ತಿತ್ವವಲ್ಲ. ತಮ್ಮ ಅನುಭವಕ್ಕೆ, ಪರಿಮಿತಿಗೆ ಬಾರದ ವಿಷಯಗಳಲ್ಲಿ ಅನಗತ್ಯವಾಗಿ ಮೂಗು ತೂರಿಸಿ ಪ್ರಚಾರ ಪಡೆದವರಲ್ಲ. ಹಾಗೆಯೇ ತಾವೊಬ್ಬ ಮಹಾಮೇಧಾವಿ ಎಂಬ ಮುಖವಾಡವನ್ನು ತೋರಿದವರಲ್ಲ.

ಅಧಿಕಾರದಲ್ಲಿರಲಿ ಇಲ್ಲದೆ ಇರಲಿ ಒಂದೇ ರೀತಿಯಲ್ಲಿ ನಡೆದುಕೊಂಡರು. ಅವರು ತಪ್ಪನ್ನು ಮಾಡಲಿಲ್ಲವೆಂದಲ್ಲ, ಮಾಡಿರಬಹುದು. ನನಗೆ ಗೊತ್ತಿಲ್ಲ. ಆತ್ಮೀಯ ಮಿತ್ರನ ತಪ್ಪುಗಳು ಕಾಣದೆ ಹೋಗಬಹುದು ಆದರೆ ಎಂದೂ ಅವರು ಯಾವುದೇ 'ಸ್ಕ್ಯಾಂಡಲ್' ಗಳಿಂದ ಆವೃತರಾಗಲಿಲ್ಲ. ಅವರು ಕೋಲಾರದಲ್ಲಿ ಸರ್ಕಾರಿ ನೌಕರನ ಮೇಲೆ ಹಲ್ಲೆ ಮಾಡಿದರೆಂಬುದನ್ನು ದೊಡ್ಡ ಪ್ರಸಂಗ ಮಾಡುವ ಯತ್ನ ಅವರಿಗಿದ್ದ ಕಳಕಳಿಯಿಂದ ತಾನಾಗಿ ಬಿದ್ದು ಹೋಯಿತು ಎಂದು ನಾನು ಭಾವಿಸಿದ್ದೇನೆ. ಬೈರೇಗೌಡರು ಬೆನ್ನ ಮೇಲೆ ಬಾರಿಸುವವರೆ ಹೊರತು ಎಂದೂ ಯಾರ ಹೊಟ್ಟೆಯ ಮೇಲೂ ಹೊಡೆಯಲಿಲ್ಲ. ಅವರು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದ ವಿಷಯಗಳು, ಅವುಗಳ ಮಂಡನೆ ಆ ಬಗ್ಗೆ ಅವರು ನಡೆಸಿದ ಅಧ್ಯಯನ ಮತ್ತು ಚಿಂತನೆಗಳ ಫಲವಾಗಿದೆ.

ಬೈರೇಗೌಡರು ನನ್ನ ಒಂದು ಮಾತನ್ನು ನಡೆಸಿಕೊಡದೆ ತೀರಿಕೊಂಡದ್ದು ನನಗೆ ದುಃಖದ ಸಂಗತಿ. ಅದೆಂದರೆ ತಮ್ಮ ಸುಮಾರು ಐವತ್ತು ವರ್ಷಗಳ ಜೀವನವನ್ನು ಕುರಿತು ಟಿಪ್ಪಣಿ ಮಾಡಲು ತಿಳಿಸಿದ್ದೆ. 'ಯಾರಿಗೆ ಬೇಕ್ರಿ ನಮ್ಮ ಅನುಭವ' ಎಂಬ ಹಾರಿಕೆಯ ಮಾತನ್ನು ಹೇಳಿದರೂ, ಅದು ಆಧುನಿಕ ಇತಿಹಾಸ ರಚನೆಗೆ ಹೇಗೆ ಸಹಾಯಕ ಎಂಬುದನ್ನು ವಿವರಿಸಿದಾಗ "ಆಯ್ತಪ್ಪ, ನೋಟ್ಸ್ ಮಾಡ್ತೇನೆ" ಎಂದಿದ್ದರು. ವಿಧಾನಸಭೆಯ ಅವರ "ಉಪನ್ಯಾಸಗಳನ್ನು ಒಂದೆಡೆ ತಂದರೆ ಹೇಗಿರುತ್ತೆ" ಎಂದು ಪ್ರಶ್ನಿಸಿದಾಗ "ನೀವು ರಿಟೈರಾಗಿ ಬನ್ನಿ ಮಾಡೋಣ" ಎಂದಿದ್ದರು. ಆದರೆ ನಾನು ವೃತ್ತಿಯಿಂದ ನಿವೃತ್ತನಾಗುವ ಮೊದಲೇ, ಬೈರೇಗೌಡರು ಜೀವನದಿಂದ ನಿವೃತ್ತರಾದುದು ದುಃಖದ ಸಂಗತಿ.

# ಭಾಗ - 4

## ಭಾಷ್ಪಾಂಜಲಿ

ಸದಾ ರೈತರ ಧ್ವನಿಯಾಗಿದ್ದ ಸಿ. ಬೈರೇಗೌಡರು ಇನ್ನಿಲ್ಲ. ಸಿ.ಬಿ. ಕಣ್ಮರೆ ನಂಬಲಾಗದ ಸುದ್ದಿ. ಸಿ.ಬಿ. ನಿಧಾನದಿಂದ ದಿಗ್ಭ್ರಾಂತಿಯಾಗಿದೆ. ಇತ್ಯಾದಿ ಶೀರ್ಷಿಕೆಗಳು 30-7-2003 ರ ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಪತ್ರಿಕೆಗಳಲ್ಲಿ ಪ್ರಾಮುಖ್ಯತೆ ಪಡೆದವು. 29 ರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದ ಸಿ.ಬಿ.ಗೆ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆಡಳಿತ ವಿರೋಧಪಕ್ಷದವರು ಎಲ್ಲರೂ ಬೈರೇಗೌಡರ ಜೊತೆಯ ಒಡನಾಟವನ್ನು ಸಿನಕಿಸಿಕೊಂಡು ಧೀಮಂತ ನಾಯಕನ ಗುಣಗಾನ ಮಾಡಿದರು.

ರಾಷ್ಟ್ರ, ರಾಜ್ಯ, ರಾಜಕೀಯ ನಾಯಕರೇ ಅಲ್ಲದೆ ಬೇರೆ ಬೇರೆ ಕ್ಷೇತ್ರಗಳ ಗಣ್ಯರು ಗೌಡರ ನಿಧನಕ್ಕೆ ಸಂತಾಪ ಸೂಚಿಸಿದ್ದು, ಅವರ ವ್ಯಕ್ತಿತ್ವ ರಾಜಕೀಯಕ್ಕೆ ಸೀಮಿತವಾಗಿರಲಿಲ್ಲ ಎಂಬುದನ್ನು ತೋರಿಸುತ್ತದೆ.

ಸಂಪಾದಕೀಯ, ವಿವಿಧ ಲೇಖನಗಳು, ಅನಿಸಿಕೆಗಳು ಪತ್ರಿಕೆಗಳಲ್ಲಿ ಸತತ ಮಾಡಿ ಬಂದವು. ಸರ್ಕಾರ ಸಿ.ಬಿ. ಅಂತ್ಯ ಸಂಸ್ಕಾರವನ್ನು ಸರ್ಕಾರಿ ಮರ್ಯಾದೆಯಲ್ಲಿ ನೆರವೇರಿಸಿತು. ಈ ವಿಭಾಗದಲ್ಲಿ ವಿಧಾನಸಭೆ, ವಿಧಾನಪರಿಷತ್ ಹಾಗೂ ಇತರೆ ಶ್ರದ್ಧಾಂಜಲಿಗಳ ಬಗೆಗೆ ಒಂದು ನೋಟವಿದೆ.



ಪಸಲು ವೀಕ್ಷಿಸುತ್ತಿರುವ ಶ್ರೀ ಬೈರೇಗೌಡರು

## ಸಾಕು ನಾಯಿ ಬ್ಲೆಂಡಾ ನಿಷ್ಠೆ

ಬೈರೇಗೌಡರು ನಿಧನರಾದಾಗ, ಅವರ ಸ್ನೇಹಿತರು, ಆತ್ಮೀಯರು ಕಂಬನಿ ಸುರಿಸಿ, ಶ್ರದ್ಧಾಂಜಲಿ ಅರ್ಪಿಸಿದ್ದು, ಮಾಮೂಲಿ. ಆದರೆ ಸಿಬಿಯವರ ಸಾಕುನಾಯಿ ಬ್ಲೆಂಡಾ, ಅಂತ್ಯ ಸಂಸ್ಕಾರ ಸಮಯದಲ್ಲಿ ಮೂಕವಾಗಿ ರೋಧಿಸುತ್ತಿತ್ತು. ಗೌಡರು ಈ ನಾಯಿಯನ್ನು ಎಷ್ಟು ಪ್ರೀತಿಸುತ್ತಿದ್ದರೆಂದರೆ, ಅವರ ಸಮಾಧಿಗೆ ಮೊದಲ ಮಣ್ಣನ್ನು ಈ ನಾಯಿಯ ಕೈಯಲ್ಲೇ ಹಾಕಿಸಲಾಯಿತು. ಕಳೇಬರ ಹಳ್ಳಿಗೆ ಬಂದಾಗ, ಬೈರೇಗೌಡರ ಮುಖವನ್ನು ಮೂಸಿಮೂಸಿ ನೋಡುತ್ತ ದುಃಖಿಸುತ್ತಿತ್ತು. ಬ್ಲೇಂಡಾ ಹಾಲು ಕುಡಿಯಲೂ ನಿರಾಕರಿಸಿ, ತನ್ನ ಸ್ವಾಮಿ ನಿಷ್ಠೆ ಪ್ರದರ್ಶಿಸಿ, ಭಾಷ್ಪಾಂಜಲಿ ಅರ್ಪಿಸಿ ಒಂದು ವಾರದ ನಂತರ ತಾನೂ ಮೃತವಾಯಿತು.

# ಪರಿಶುದ್ಧತೆ, ಪಾರದರ್ಶಕತೆಗೆ ಶ್ರಮಿಸಿದ ನೇತಾರ

ಎಸ್.ಎಂ.ಕೃಷ್ಣ

ನಮ್ಮೆಲ್ಲರಿಗೂ ಬಹಳ ದುಃಖವನ್ನು ಮತ್ತು ಸಂಕಟವನ್ನು ತಂದಿರತಕ್ಕಂಥ ಈ ಸುದ್ದಿ ನಂಬಲು ಸ್ವಲ್ಪ ಸಾಧ್ಯವಾಗದಿರುವಂಥ ಆಘಾತ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರು, ನಿನ್ನೆ ಅವರನ್ನು ಮೊಗಸಾಲೆಯಲ್ಲಿ ಕಂಡಿದ್ದೆ ಎಂದು ಈಗ ತಾನೇ ನನಗೆ ಹೇಳುತ್ತಿದ್ದರು. ನಿನ್ನೆ ವಿಧಾನಸಭೆಯಲ್ಲಿ ನಾನು ಇದ್ದಾಗ ಅವರನ್ನು ಕಂಡಂತೆ ಆಗಲಿಲ್ಲ. ಬೈರೇಗೌಡರು ಸಾರ್ವಜನಿಕ ಜೀವನದಲ್ಲಿ ಪರಿಶುದ್ಧತೆಯನ್ನು, ಪಾರದರ್ಶಕತೆಯನ್ನು ತಂದುಕೊಡಬೇಕೆಂದು ಅವಿರತವಾಗಿ ಪ್ರಯತ್ನಪಟ್ಟಂಥ ಒಬ್ಬ ನಾಯಕರಾಗಿದ್ದರು. ರೈತರ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸತಕ್ಕದ್ದು, ಆ ಸಮಸ್ಯೆಗಳನ್ನೇ ಆಧಾರ ಮಾಡಿಕೊಂಡು ಹೋರಾಟ ಮಾಡತಕ್ಕದ್ದು, ಆ ಮೂಲಕ ಯಾವ ನೆಲೆಗಟ್ಟಿನಿಂದ ಅವರು ಎದ್ದು ಬಂದರೋ ಅದಕ್ಕೆ ತಮ್ಮನ್ನು ತಾವು ಪೂರ್ಣ ವಿನಿಯೋಗಿಸಿಕೊಂಡಿದ್ದರು ಎನ್ನತಕ್ಕದ್ದು ನಮ್ಮ ನೆನಪಿಗೆ ತಟ್ಟನೆ ಬರತಕ್ಕ ಒಂದು ನೆನಪು. ಬಹಳ ವರ್ಷಗಳ ಕಾಲ ಅವರನ್ನು ನಾನು ವಿಧಾನಸಭೆಯ ಒಳಗೆ ನೋಡಿದ್ದೇನೆ. ನಾನು ಆ ಸ್ಥಾನದಲ್ಲಿ ಕೂರತಕ್ಕಂಥ ವಿಶೇಷ ಅವಕಾಶ ಸಿಕ್ಕಿದಾಗ ಅವರನ್ನು ವಿರೋಧಿ ಪಾಳಯದಲ್ಲಿ ನಾನು ನೋಡುತ್ತಿದ್ದೆ. ಅವರು ಬಹಳ Proactive ಹೋರಾಟಗಾರರಾಗಿದ್ದರು. ಅವರು 1989, 1990, 1991, 1992 ಮತ್ತು 1993ನೇ ಇಸವಿಗಳಲ್ಲಿ ಹತ್ತು ಹಲವು ಹೋರಾಟಗಳನ್ನು ಮಾಡುತ್ತಿದ್ದರು. ಅವರಿಗೆ ಅಷ್ಟೊಂದು ವಯಸ್ಸಾಗಿದ್ದರೂ ಸಹ ಅದು ಅವರಲ್ಲಿ ಕಾಣುತ್ತಿರಲಿಲ್ಲ. ನಾನು ಅದನ್ನೇ ಯೋಚನೆ ಮಾಡುತ್ತಿದ್ದೆ, ಬಹುಶಃ ಅವರಿಗೆ 55-60 ವರ್ಷಗಳಾಗಿರಬಹುದೆಂದು ನಾನು ಅಂದುಕೊಂಡಿದ್ದೆ. ಆದರೆ ನನ್ನ ಸಮಕಾಲೀನರು ಅನ್ನತಕ್ಕಂಥದ್ದನ್ನು ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರು ನನ್ನ ಗಮನಕ್ಕೆ ತಂದರು. ಒಂದೊಂದು ಸಾರಿ ಇಂತಹ ಘಟನೆಗಳೂ ನಡೆದಂತಹ ಕಾಲದಲ್ಲಿ, ಏತಕ್ಕೋಸ್ಕರ ಈ ಹೋರಾಟವೆಲ್ಲವನ್ನೂ ನಾವು ಮಾಡುತ್ತೇವೆ ಎನ್ನತಕ್ಕಂಥ ಭಾವನೆ ನಮ್ಮಲ್ಲಿ ಬಂದಿದೆ. ಅವರು ಸೌಜನ್ಯಶೀಲರಾಗಿದ್ದರು. ಇಲ್ಲಿ ಎಷ್ಟೇ ಆರ್ಭಟಿಸಿದರೂ ಕೂಡ ಹೊರಗೆ ಹೋದಾಗ ಅವರ ಸೃಜನಶೀಲತೆ ಮತ್ತು ಸೌಜನ್ಯಶೀಲತೆಯನ್ನು ನಾವು ವಿಶೇಷವಾಗಿ ಕಾಣುತ್ತಿದ್ದೆವು. ಈಗ ಕಳೆದ 15 ದಿವಸಗಳ ಹಿಂದೆ ನ್ನನ್ನು ಅವರು ಭೇಟಿ ಮಾಡಿದ್ದರು. ಈ ರಾಜ್ಯದ ಹಲವಾರು ಜವಾಬ್ದಾರಿಗಳನ್ನು ಹೊತ್ತಿದ್ದರೂ ಕೂಡ, ಒಂದು ರಾಜಕೀಯ ಪಕ್ಷದ ಮುಖ್ಯಸ್ಥರಾಗಿದ್ದರೂ ಕೂಡ, ತಮ್ಮ ಕ್ಷೇತ್ರದ ಬಗ್ಗೆ, ತಮ್ಮ ಜಿಲ್ಲೆಯ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ಮಾನ್ಯ ಬೈರೇಗೌಡರು ಆಗಿಂದಾಗ್ಗೆ ವ್ಯಕ್ತಪಡಿಸತಕ್ಕಂಥದ್ದಕ್ಕೆ ನಾವು ಮತ್ತು ನೀವು ಸಾಕ್ಷಿದಾರರಾಗಿದ್ದೇವೆ. ಕಬ್ಬು ಬೆಳೆಗಾರರ ಸಂಕಟವೇ ಆಗಲಿ Tobacco ಬೆಳೆಗಾರರ ಸಂಕಟವೇ ಆಗಲಿ, ರೇಷ್ಮೆ ಬೆಳೆಗಾರರ ಸಂಕಟವೇ ಆಗಲಿ, ಭತ್ತ ಬೆಳೆಗಾರರ ಸಂಕಟವೇ ಆಗಲಿ, ಕಾವೇರಿ ವಿಚಾರವೇ ಆಗಲಿ, ಕೃಷ್ಣಾ ವಿಚಾರವೇ ಆಗಲಿ, ಎಲ್ಲಾ ವಿಚಾರಗಳಲ್ಲಿಯೂ ಕೂಡ ಒಂದು ಜೀವಂತವಾದಂತಹ ಇಂಟರೆಸ್ಟ್ live interest ಅನ್ನು ಪಡೆದು, ಅದರ ಬಗ್ಗೆ ತೀವ್ರತರವಾದಂತಹ application of mind... ನಮ್ಮಲ್ಲಿ application of mind ಯಾವುದಾದರೂ ಒಂದು Subject ಕಡಮೆ ಆಗುತ್ತಿರತಕ್ಕಂಥ ಈ ದಿನಗಳಲ್ಲಿ ಬೈರೇಗೌಡರಲ್ಲಿ ನಾವು ಕಂಡಂತಹ ಒಂದು ವಿಶೇಷವಾದಂತಹ ಗುಣ ಏನೆಂದರೆ full application of mind to the subject ಯಾವುದನ್ನು ಅವರು ಚರ್ಚೆ ಮಾಡುತ್ತಾರೆ, ಯಾವುದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಪ್ರತಿಪಾದನೆ ಮಾಡುತ್ತಾರೋ, ಆ ಪ್ರತಿಪಾದನೆಯ ಉದ್ದಕ್ಕೂ ಕೂಡ ಅವರಲ್ಲಿ ಕಂಡದ್ದು ನಾವು ಈ ಸೂಕ್ಷ್ಮತ್ರೆಯನ್ನು. ಅವರು ಬಿ.ಎಸ್ಸಿ ಪದವೀಧರರಾಗಿದ್ದರು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ನನ್ನನ್ನು ಅವರು ಹಲವಾರು ಬಾರಿ ಭೇಟಿ

ಮಾಡಿದಾಗಲೆಲ್ಲಾ ತಮ್ಮ ಕೃಷಿ ಜೀವನದಲ್ಲಿ ತಾವು ಎದುರಿಸುತ್ತಿರತಕ್ಕಂಥ ಸಮಸ್ಯೆಗಳು, ತಾವೇ ಇಷ್ಟೊಂದು ಪ್ರಮಾಣದ ಸಮಸ್ಯೆಗಳನ್ನು ಎದುರಿಸಬೇಕಾಗಿದ್ದರೆ, ಇನ್ನು ಸಾಧಾರಣವಾದಂತಹ ರೈತ ಈ ಸಮಸ್ಯೆಗಳ ತೂಕ, ಈ ಸಮಸ್ಯೆಗಳ ಭಾರಕ್ಕೆ ಹೇಗೆ ಬಗ್ಗಿ ಹೋಗುತ್ತಿದ್ದಾನೆ, ಹೇಗೆ ಮಲಗಿ ಹೋಗುತ್ತಿದ್ದಾನೆ ಅನ್ನತಕ್ಕಂಥ ಒಂದು ಜೀವಂತ ಚಿತ್ರವನ್ನು ನಮಗೆ ಕೊಡುತ್ತಿದ್ದರು. ಎಷ್ಟೋ ಸಾರಿ ಅವರನ್ನು ನೋಡಿದಾಗ ಮತ್ತು ಅವರ ಮಾತುಗಳನ್ನು ಕೇಳಿದಾಗ, ಆ ಸಮಸ್ಯೆಗಳೆಲ್ಲವೂ ಕೂಡ ಮಾತನಾಡುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ಕೆಲವೊಂದು ಸಾರಿ ನಾನು ಮತ್ತು ಅವರು ಇಲ್ಲಿ, ಈ ಸದನದಲ್ಲಿ ಅಭಿಪ್ರಾಯ ಭೇದಗಳಿಗೆ ರೂಪು ಕೊಟ್ಟಿದ್ದೇವೆ. ಕೆಲವೊಂದು ಸಾರಿ ಒಬ್ಬರನ್ನೊಬ್ಬರು ಚುಚ್ಚಲಿಕ್ಕೆ ಪ್ರಯತ್ನ ಪಟ್ಟಿದ್ದೇವೆ. ಆದರೆ ಇವು ಯಾವುವೂ ಕೂಡ ನಮ್ಮ ವ್ಯಕ್ತಿಗತವಾದಂತಹ ಸಂಬಂಧ ಅದರ ಮೇಲೆ ಯಾವ ಪ್ರತಿಕೂಲಕರವಾದಂತಹ ಛಾಯೆಯನ್ನು ಬಿಟ್ಟಿರಲಿಲ್ಲ ಅನ್ನತಕ್ಕಂಥದ್ದನ್ನು ನಾವು ಇಂದು ಸ್ಮರಿಸಿಕೊಳ್ಳಬೇಕಾಗಿದೆ. ನಾನು ವಿಧಾನಸಭಾ ಅಧ್ಯಕ್ಷನಾಗಿದ್ದಂತಹ ಕಾಲದಲ್ಲಿ ಅವರು ಕಾಲುನೋವಿನ ಚಿಕಿತ್ಸೆಗೆ ಅಮೇರಿಕಾಕ್ಕೆ ಹೋದರು. ನನ್ನ ತಮ್ಮ ಅಮೇರಿಕಾದಲ್ಲಿ ಇದ್ದಾನೆ, ಅವನು ಒಬ್ಬ ಡಾಕ್ಟರ್ ಅನ್ನು ಈಗಾಗಲೇ ಅಲ್ಲಿ ಗುರುತಿಸಿದ್ದಾನೆ. ಆ ಡಾಕ್ಟರ್ ನನ್ನನ್ನು ಕರೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಆದ್ದರಿಂದ ನಾನು ಅಲ್ಲಿಗೆ ಹೋಗಬೇಕು, ಅಲ್ಲಿ ಶುಶ್ರೂಷೆ ಮಾಡಿಕೊಳ್ಳಬೇಕು, ನನ್ನ ಕಾಲು ಸರಿ ಹೋಗಬೇಕು, ನಾನು ಸಾರ್ವಜನಿಕ ಜೀವನದಲ್ಲಿ ಇನ್ನೂ ಹೆಚ್ಚು ಚುರುಕಾಗಿ ನಾನು ಓಡಾಡಬೇಕು ಅನ್ನತಕ್ಕಂಥ ಅಭಿಪ್ರಾಯ ಅವರಲ್ಲಿತ್ತು. ಆದರೆ ಅವರು ವಾಪಸ್ ಬಂದ ಮೇಲೆ ನಾನು ಏನಾಯಿತು? ಎಂದು ಅವರನ್ನು ಕೇಳಿದೆ. ಅವರು ನನಗೆ ಏನು ಹೇಳಿದರು ಎಂದರೆ ನನಗೊಂದು ಬೆತ್ತಕೊಟ್ಟು ಇದನ್ನು ಉಪಯೋಗಿಸಿ ಸರಿ ಹೋಗುತ್ತದೆ. ಇನ್ನೇನೂ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಿದರು. ಇತ್ತೀಚಿನ ದಿವಸಗಳಲ್ಲಿ ಅವರು ಬೆತ್ತ ಹಿಡಿದುಕೊಂಡು ಓಡಾಡುತ್ತಿದ್ದರು. ಆದರೆ ಅವರು ವಿಧಾನ ಸಭೆ ಹೊರಗೆ ಬಿಟ್ಟು ಬರುತ್ತಿದ್ದರು. ಅವರಿಗೆ ಒಂದು ತರಹ ನಾಚಿಕೆ. ಏನು ಎಂದರೆ, ನಾನು ಬೆತ್ತ ಹಿಡಿದುಕೊಂಡು ಓಡಾಡಿದರೆ ಹೇಗೆ ಅಥವಾ ಮಾನ್ಯ ಅಧ್ಯಕ್ಷರು ಬೆತ್ತವನ್ನು ಒಳಗೆ ತರಬಾರದು ಎಂದು ಹೇಳಿ ಪ್ರತಿಬಂಧ ಮಾಡಿದ್ದರೋ ಏನೋ. ಆದ್ದರಿಂದ ಒಳಗೆ ಬೆತ್ತವನ್ನು ಮಾನ್ಯ ಬೈರೇಗೌಡರು ತರುತ್ತಿರಲಿಲ್ಲ. ನಾನು ಹಲವಾರು ಸಾರಿ ನೋಡಿದ್ದೇನೆ. ಅವರದ್ದು ದೊಡ್ಡ ಕುಟುಂಬವೇ ಇದೆ. ಕುಟುಂಬ ಅನ್ನತಕ್ಕಂಥದ್ದನ್ನು ನಾನು ಒಂದು ಸಂಕುಚಿತವಾದಂತಹ ಅರ್ಥದಲ್ಲಿ ಇವತ್ತು ವಿಶ್ಲೇಷಣೆ ಮಾಡುತ್ತಿಲ್ಲ. ದೊಡ್ಡ ಕುಟುಂಬ ಎಂದರೆ, ಇಡೀ ರೈತಾಪಿ ಜನ ಅವರ ದೊಡ್ಡ ಕುಟುಂಬ. ಇನ್ನೂ ಹೆಚ್ಚು ಮುಂದೆ ಹೋಗಿ ಹೇಳಬಹುದಾದರೆ, ಅವರಲ್ಲಿ ಈ ಸಾರ್ವಜನಿಕ ಜೀವನದಲ್ಲಿ ಯಾವ್ಯಾವ ಸೆಲೆಗಳಲ್ಲಿ ಅವರು ತಮ್ಮ ಆಸಕ್ತಿಯನ್ನು ಎಟುಕಿಸಿಕೊಂಡಿದ್ದರೋ, ಆ ಎಲ್ಲಾ ಭಾಗದಲ್ಲಿಯೂ ಕೂಡ ಅವರಿಗೆ Followers ಇದ್ದರು. ಅಭಿಮಾನಿಗಳಿದ್ದರು. ಅವರನ್ನು ಹಿಂಬಾಲಿಸತಕ್ಕಂಥ ಜನ ಇದ್ದರು. ಮಾನ್ಯ ಅಧ್ಯಕ್ಷರೇ, ಅವರು ನಿಮ್ಮ ಊರಿನವರು. ಎಷ್ಟೋ ಸಾರಿ ಬಹಳ ಹಾಸ್ಯವಾಗಿ ನಮ್ಮ ಕೆಲವರು ಸಚಿವರುಗಳ ಬಗ್ಗೆ ಮಾತನಾಡುತ್ತಿದ್ದರು. ನಮಗೆ ಎಷ್ಟು ಅವರ ಬಗ್ಗೆ ವಿಶ್ವಾಸ ಇತ್ತು ಎಂದರೆ, ಅವರು ಮತ್ತು ಮಾನ್ಯ ಶ್ರೀನಿವಾಸಗೌಡರಿಬ್ಬರೂ ಮಾತನಾಡದೇ ಹೋದರೆ ಯಾವ ಡಿಬೇಟೂ ಪರಿಪೂರ್ಣವಾಗುವುದಿಲ್ಲ ಅನ್ನತಕ್ಕಂಥ ಒಂದು ವ್ಯಾಖ್ಯಾನವನ್ನು ನಾವು ಬಹಳ ತಮಾಷೆಯಾಗಿ ಮಾಡುತ್ತಿದ್ದೆವು. ಏಕೆ ಎಂದರೆ, ಇಂತಹ ಮಾನವೀಕೃತವಾದಂತಹ ಸಂಬಂಧಗಳು ಆಗಿಂದಾಗ್ಗೆ ಹುಟ್ಟಿ ಬರುತ್ತವೆ. ಅದನ್ನು ತಪ್ಪಿಸಲಿಕ್ಕೆ ಯಾರ ಕೈಯಲ್ಲೂ ಸಹ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಬೈರೇಗೌಡರು ಒಂದು ಪರಿಚಿತವಾದಂತಹ ವ್ಯಕ್ತಿಯಾಗಿದ್ದರು. ಈ ಸದನ ಅಂತಹವರ ಹಠಾತ್ ನಿಧನದಿಂದ ಇವತ್ತು ಬಡವಾಗಿದೆ. ಸಾರ್ವಜನಿಕ ಜೀವನ ಇಂದು ಬಡವಾಗಿದೆ. ನಾವು ಉಳಿದಿರತಕ್ಕಂಥವರು, ಅವರು ಬಿಟ್ಟು ಹೋದಂತಹ ಹತ್ತು ಹಲವಾರು ವಿಚಾರಗಳಲ್ಲಿ ನಮ್ಮನ್ನು ನಾವೇ ಅರ್ಪಿಸಿಕೊಂಡು, ಈ ರಾಜ್ಯದಲ್ಲಿ ಈ ದೇಶದಲ್ಲಿ ರೈತಾಪಿ ಜನಗಳ ಬವಣೆಯನ್ನು ಆದಷ್ಟು ಕಡಮೆ ಮಾಡಲಿಕ್ಕೆ ನಾವು ನಮ್ಮ ಪ್ರಯತ್ನಗಳನ್ನು ತೀವ್ರ ರೀತಿಯಲ್ಲಿ ಮುಂದುವರೆಸಿದರೆ, ಶ್ರೀ ಬೈರೇಗೌಡರ ನೆನಪಿಗೆ ನಾವು ಕೊಡಬಹುದಾಗಿರತಕ್ಕಂಥ ಗೌರವ ಇದಾಗುತ್ತದೆ ಎಂದು ನಾನು ಭಾವಿಸುತ್ತೇನೆ.

# ಆಳ ಅಭ್ಯಾಸ, ಅಧ್ಯಯನ ಸೃಜನಶೀಲ ಮಾತುಗಾರ

ಜಗದೀಶ ಶೆಟ್ಟರ್:

ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಇವತ್ತು ತೀರಿ ಹೋದರು ಎಂದು ಬೆಳಿಗ್ಗೆ ಸುದ್ದಿ ಬಂದಾಗ ನಮಗೆ ನಂಬಲಿಕ್ಕೆ ಆಗಲಿಲ್ಲ. ಅದು ಆಘಾತಕಾರಿಯಾದ ಸುದ್ದಿ. ನಿನ್ನೆ ಮೊನ್ನೆ ನಮ್ಮ ಜೊತೆಯಲ್ಲಿ ಮಾತನಾಡಿಕೊಂಡು ಈ ಸದನದಲ್ಲಿ ಆಳವಾಗಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿ ಚರ್ಚೆ ಮಾಡತಕ್ಕಂಥ ವ್ಯಕ್ತಿ ಇವತ್ತು ನಮ್ಮ ಜೊತೆ ಇಲ್ಲವೆಂದು ನಾವು ಕಲ್ಪನೆ ಮಾಡಲಿಕ್ಕೆ ಕೂಡ ಸಾಧ್ಯವಾಗುತ್ತಿಲ್ಲ. ಈ ಸದನದಲ್ಲಿ ನಾನು ಶಾಸಕನಾಗಿ ಬಂದ ಮೇಲೆ ಹಲವಾರು ಸಂಸದೀಯ ಪಟುಗಳನ್ನು ಹಲವಾರು ಹಿರಿಯರ ಚರ್ಚೆಯನ್ನು ಅವರ ವಿಚಾರಗಳನ್ನೂ ನಾನು ಅನುಮೋದಿಸಿದ್ದೇನೆ. ಆದರೆ ಬೈರೇಗೌಡರು ಬಹಳ ಆಳವಾಗಿ ಅಭ್ಯಾಸ ಮಾಡಿದ್ದಂತಹ ವ್ಯಕ್ತಿ. ಯಾವುದೇ ವಿಷಯದ ಬಗ್ಗೆ ಅವರು ಮಾತನಾಡಲಿಕ್ಕೆ ನಿಂತರೆ ವಿಷಯದ ಆಳಕ್ಕೆ ಹೋಗುವಂತಹ ವ್ಯಕ್ತಿತ್ವ ಬೈರೇಗೌಡರದ್ದು. ಅದರಲ್ಲಿ ಕೃಷಿ ಇರಬಹುದು, ಗ್ರಾಮೀಣಾಭಿವೃದ್ಧಿ ಇರಬಹುದು, ಅವರು ಮಾತನಾಡಲಿಕ್ಕೆ ನಿಂತರೆ ಅವರ ಮುಂದೆ ಯಾರೂ ಸರಿ ಸಾಟಿ ಮಾಡಲಿಕ್ಕೆ ಸಾಧ್ಯವಿಲ್ಲ. ಆ ವಿಷಯಕ್ಕೆ ಅವರ ವ್ಯಕ್ತಿತ್ವ ಹೊಂದಿಕೊಂಡಿತ್ತು. ಅದಕ್ಕೆ ಬಹಳಷ್ಟು ಅಭ್ಯಾಸ ಮಾಡಬೇಕು. ಬಹಳಷ್ಟು ತಯಾರಿ ಮಾಡಬೇಕು, ಅದು ಏನೂ ಬೇಕಾಗಿರಲಿಲ್ಲ. ಈ ವಿಷಯಗಳ ಬಗ್ಗೆ ಬೈರೇಗೌಡರು ಪಾರ್ಟ್ ಅಂಡ್ ಪಾರ್ಸಲ್ ಆಗಿದ್ದರು. ಘಂಟೆಗಟ್ಟಲೆ ಅದರ ಬಗ್ಗೆ ಮಾತನಾಡುವುದು, ನಾನು ಹಿಂದೆ 1994-99ರಲ್ಲಿ ಶಾಸಕನಾಗಿದ್ದ ಸಂದರ್ಭದಲ್ಲಿ ಅವರು ಕೃಷಿ ಸಚಿವರು. ಇದೇ ಡಿಮಾಂಡ್ಸ್ ಮೇಲೆ ಮತ್ತು ಬೇರೆ ಬೇರೆ ವಿಷಯಗಳ ಮೇಲೆ ಚರ್ಚೆಯಾಯಿತು. ಅವರು ಉತ್ತರ ಕೊಡುವ ಸಂದರ್ಭದಲ್ಲಿ ಈ ಕಡೆ ಕೂತ ಶಾಸಕರು ಏನು ಪ್ರಶ್ನೆಗಳನ್ನು, ಯಾವ ವಿಷಯಗಳನ್ನು ಎತ್ತಿದರೂ ಅದಕ್ಕೆ ಸ್ಪಷ್ಟೀಕರಣ ಕೊಡುವಂತಹ ಸಂದರ್ಭದಲ್ಲಿ ನಾವು ಏನು ಕೇಳಿದ್ದೇವೆ, ಅದಕ್ಕಿಂತ ಹೆಚ್ಚು ಸ್ಪಷ್ಟೀಕರಣ ಕೊಟ್ಟರು. ಅದು ಬಹುಶಃ ರೆಕಾರ್ಡ್ ಇರಬಹುದು. ಏಳೆಂಟು ಘಂಟೆಗಳ ಕಾಲದವರೆಗೆ ಸತತವಾಗಿ ಅವರು ತಮ್ಮ ಉತ್ತರವನ್ನು ಕೊಟ್ಟರು. ಬಹುಶಃ ಸದನದ ಇತಿಹಾಸದಲ್ಲಿ ಆ ರೆಕಾರ್ಡ್ ಇರಬಹುದು ಎಂಬುದು ನನ್ನ ಅನಿಸಿಕೆ. ಆ ರೀತಿ ಆಳವಾಗಿ ಹಲವರು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಮಾಡಿದರು. ಕೃಷಿ ಇಲಾಖೆ ಬಗ್ಗೆ, ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಸ್ಪಷ್ಟೀಕರಣ ಮಾಡಿದರು ಮತ್ತು ಕನ್‌ವಿನ್ಸ್ ಆಗುವ ರೀತಿಯಲ್ಲಿ ಅವರು ಉತ್ತರವನ್ನು ಕೊಟ್ಟಿದ್ದನ್ನು ನಾನು ನೋಡಿದ್ದೇನೆ. ಹಾಗಾಗಿ ಅಂತಹ ವ್ಯಕ್ತಿ ಇವತ್ತಿನ ರಾಜಕೀಯ ವ್ಯವಸ್ಥೆಯಲ್ಲಿ ಸಿಗಲಿಕ್ಕೆ ಸಾಧ್ಯವಿಲ್ಲ. ಅಂತಹ ವ್ಯಕ್ತಿತ್ವ ಬೈರೇಗೌಡರದು. ಪಾರದರ್ಶಕ ಹಾಗೂ ನೇರವಾಗಿ ಮಾತನಾಡುವುದು ಅವರ ವ್ಯಕ್ತಿತ್ವ. ಇದು ನೇರವಾದ ಮತ್ತು ನಿಷ್ಠುರವಾದ ರಾಜಕಾರಣಿಗಳ ಅಪರೂಪದ ಗುಣ. ನೇರ ಮತ್ತು ನಿಷ್ಟುರವಾದಿ. ಏಕೆಂದರೆ, ಈ ನಿಷ್ಠುರವಾದಿ ಮತ್ತು ನೇರವಾದ ಮಾತು ಇದ್ದುದ್ದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಬಹಳಷ್ಟು ಮಂದಿಗಳನ್ನು ನಾವು ಶತ್ರುಗಳನ್ನಾಗಿ ಮಾಡಿಕೊಳ್ಳಬೇಕಾಗಿದೆ. ಆದರೆ ಅವರು ಯಾವುದಕ್ಕೂ ಹೆದರುತ್ತಿರಲಿಲ್ಲ. ತಮ್ಮ ಮನಸ್ಸಿಗೆ ಏನು ಬರುತ್ತದೆ ಅದನ್ನು ಹೇಳುವುದು ಮತ್ತು ನಿಷ್ಟುರವಾದ ಮಾತನಾಡುವುದು ಅವರ ಬಹುಮುಖ ವ್ಯಕ್ತಿತ್ವದಲ್ಲಿ ಪ್ರಮುಖ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಂತಹ ಒಬ್ಬ ವ್ಯಕ್ತಿ ಇವತ್ತು ರಾಜಕೀಯದಲ್ಲಿ ಇದ್ದ ವ್ಯಕ್ತಿಗಳ ಬಗ್ಗೆ ನಾವು ನೋಡುತ್ತೇವೆ. ಮೌಲ್ಯಗಳ ಬಗ್ಗೆ ಸಾಕಷ್ಟು ಜನ ಮಾತನಾಡುತ್ತಾರೆ. ಪ್ರಾಮಾಣಿಕತನ ಮತ್ತು ಪಾರದರ್ಶಕತೆ ಬಗ್ಗೆ ಸಾಕಷ್ಟು ಮಾತನಾಡುತ್ತಾರೆ. ಆದರೆ ನಿಜವಾಗಿ ಒಂದು ಆದರ್ಶದ ಗುಣಗಳನ್ನು ಇಟ್ಟುಕೊಂಡು ಪ್ರಾಮಾಣಿಕವಾದ ರಾಜಕಾರಣ ಮಾಡಿದ ವ್ಯಕ್ತಿ ಬೈರೇಗೌಡರು ಎಂದು ನಾನು ಕೆಲವು ತಿಂಗಳ ಹಿಂದೆ ನಾವು ಶಂಕರಮೂರ್ತಿಯವರು ಬೇರೆ ಯಾವುದೋ ಕೆಲಸಕ್ಕೆ ಅವರ ಮನೆಗೆ ಹೋಗಿದ್ದೆವು. ಬೆಳಗಿನ ಉಪಹಾರಕ್ಕೆ ಅವರು ನಮಗೆ ಕರೆದಿದ್ದರು. ಅವರ ಮನೆಗೆ ಹೋದಾಗ ಆ ಮನೆಯಲ್ಲಿ ಇದ್ದ ವಾತಾವರಣ ನೋಡಿದರೆ ಬೈರೇಗೌಡರು ಒಬ್ಬರು ಮಂತ್ರಿ ಇದ್ದರಾ ಎಂದು ಅನ್ನಿಸುತ್ತದೆ. ಇಷ್ಟು ವರ್ಷಗಳ ರಾಜಕಾರಣದಲ್ಲಿ ಇದ್ದರೂ ಅಂತಹ ಒಬ್ಬ ವ್ಯಕ್ತಿ ಈ ರೀತಿ ಸಣ್ಣ ಮನೆಯಲ್ಲಿ ಮತ್ತು ಸರಳವಾದ ವ್ಯವಸ್ಥೆಯಲ್ಲಿ ಆ ಮನೆಯಲ್ಲಿರುವುದು ನೋಡಿದರೆ ನಮ್ಮ ಕಲ್ಪನೆಯಲ್ಲಿ ಊಹೆಗೂ ನಿಲ್ಲಲಿಕ್ಕೆ ಆಗಲಿಲ್ಲ. ಇಂತಹವರೂ ರಾಜಕಾರಣದಲ್ಲಿ ಇದ್ದಾರೆಯೇ ಎಂದು ನನಗೆ ಅನ್ನಿಸಿತು. ಇಂತಹವರು ಇರಲಿಕ್ಕೆ ಸಾಧ್ಯವಿಲ್ಲ ಎಂದು ನಮಗೆ ಅನ್ನಿಸಿದ್ದು. ಆದರೆ ಇಷ್ಟು ಸರಳವಾದ ಪ್ರಾಮಾಣಿಕವಾದ ವ್ಯಕ್ತಿ ರಾಜಕೀಯದಲ್ಲಿ ಇರಲಿಕ್ಕೆ ಸಾಧ್ಯ ಎಂದು ಬೈರೇಗೌಡರಿಂದ ನಾನು ತಿಳಿದುಕೊಂಡಿದ್ದೇನೆ. ಅವರ ಕುಟುಂಬ ವರ್ಗದವರು ಉಪಹಾರ ನೀಡಿದವರು. ಅವರ ಮನೆಯಲ್ಲಿ ಅವರ ಹೆಣ್ಣು ಮಕ್ಕಳು ಬಹುಶಃ ಎಲ್ಲಿಯೂ ನಾವು ನೋಡುವುದಿಲ್ಲ. ಆಳು ಮತ್ತು ಯಾರಾದರೂ ಒಬ್ಬರು ಸರ್ವ್ ಮಾಡುತ್ತಾರೆ. ಆಳುಗಳ ವ್ಯವಸ್ಥೆ ಆ ಮನೆಯಲ್ಲಿರಲಿಲ್ಲ. ಇತ್ತೀಚೆಗೆ ಅವರ ಮನೆಯಲ್ಲಿ ಒಂದು ಮದುವೆಯಾಯಿತು. ನಾವು ರಾಜಕಾರಣಿಗಳು ಯಾವ ರೀತಿ ಮದುವೆ ಮಾಡುತ್ತೇವೆಂದು ನೋಡುತ್ತಿದ್ದೇವೆ. ಡಾಂಡೂಂ ಆಗಿ ಕೋಟಿಂತರ ರೂಪಾಯಿಗಳನ್ನು ಖರ್ಚು ಮಾಡಿ ಮದುವೆ ಮಾಡುತ್ತೇವೆ. ಬೈರೇಗೌಡರ ಮಗಳ ಮದುವೆ ಮಾಡಿದರೆ ಅಕ್ಕಪಕ್ಕದಲ್ಲಿ ಕೂತಿರುವ ನಮಗೆ ಕೂಡ ಗೊತ್ತಿರಲಿಲ್ಲ. ಯಾರಿಗೂ ಅವರು ಇನ್‌ವಿಟೇಷನ್ ಕೊಟ್ಟಿರಲಿಲ್ಲ. ಕೇವಲ ತಮ್ಮ ಕುಟುಂಬ ವರ್ಗದವರು, ತಮ್ಮ ಸಂಬಂಧಿಕರು ಮಾತ್ರ ಆ ಮದುವೆಗೆ ಆಮಂತ್ರಣ. ಕೇವಲ ನೂರಾರು ಜನರ ಮಧ್ಯೆ ಆ ಮದುವೆ, ಪತ್ರಿಕೆಗಳ ಮುಖಾಂತರ ನಮಗೆ ಅವರ ಮಗಳ ಮದುವೆಯಾಯಿತು ಎಂಬುದು ಗೊತ್ತಾಯಿತು. ಮೌಲ್ಯಗಳನ್ನು ನಿಜವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಅಪರೂಪದ ರಾಜಕಾರಣಿ ಬೈರೇಗೌಡರು ಎಂದು ನಾನು ಹೇಳಬೇಕಾಗುತ್ತದೆ. ಇವತ್ತು ಬೈರೇಗೌಡರು ನಮ್ಮ ಜೊತೆ ಇಲ್ಲ. ಅವರ ಆದರ್ಶ ಹಾಗೂ ಅವರ ಮೌಲ್ಯಗಳು ಇವತ್ತು ನಮ್ಮ ಮುಂದಿವೆ. ಅವರ ಆಳವಾದ ಅಭ್ಯಾಸ, ಯಾವುದೇ ವಿಷಯದ ಬಗ್ಗೆ ಏನಾದರೂ ಹೇಳಬೇಕೆಂದರೆ, ಅದನ್ನು ಹೇಳುವ ಗುಣ ಏನಿದೆ ಅದನ್ನು ನಾವು ರಾಜಕಾರಣಿಗಳು ಕಲಿತುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಅವರಲ್ಲಿ ಏನೋ ಕೊರತೆ ಕಂಡುಬಂದಿದೆ. ಸದನದಲ್ಲಿ ಅವರು ಯಾವಾಗಲೂ ಸ್ಫೂರ್ತಿಯಿಂದ ಕೂತು ಕೆಲಸ ಮಾಡುವವರು, ಅವರು ತಡವಾಗಿ ಬಂದರೂ ಸಹಿತ ಏನೋ ಒಂದು ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಏನೆಂದು ತಿಳಿದುಕೊಂಡು ತಕ್ಷಣವೇ ಅದಕ್ಕೆ ರೀಆ್ಯಕ್ಷನ್ ಕೊಡುವ ಪ್ರಕ್ರಿಯೆ, ತಕ್ಷಣ ಅದರಲ್ಲಿ ಇನ್‌ವಾಲ್ವ್ ಆಗುವುದು ಬೈರೇಗೌಡರ ಗುಣ. ಇತ್ತೀಚಿನ ಎಂಟು-ಹತ್ತು ದಿವಸಗಳಲ್ಲಿ ನಾನು ನೋಡುತ್ತಿದ್ದೆ ಏಕೋ ಸದನಕ್ಕೆ ಬರುವುದು ಸ್ವಲ್ಪ ಕಡಮೆಯಾಗಿತ್ತು. ಬುಧವಾರ ಅಥವಾ ಗುರುವಾರ ಬಂದಾಗ ನಾನು ಮಾತನಾಡಿಸಿದೆ. ಸ್ವಲ್ಪ ಹೊತ್ತು ಕೂತು ಹೋದರು. ಹೋಗುವಾಗ ನಾನು ಕೇಳಿದೆ, ಬೈರೇಗೌಡರೇ ಇತ್ತೀಚಿನ ದಿವಸಗಳಲ್ಲಿ ಸದನಕ್ಕೆ ಬರುವುದು ಕಡಮೆ ಮಾಡಿದ್ದೀರಿ ಏಕೆ ಏನು ಎಂದು ಕೇಳಿದೆ. ನಿಮ್ಮಂತಹ ಹಿರಿಯರು

ಇಲ್ಲಿ ಬರಬೇಕೆಂದು ಹೇಳಿದಾಗ ಸ್ವಲ್ಪ ಮೈಯಲ್ಲಿ ಹುಷಾರಿಲ್ಲ. ವೈರಲ್ ಫೀವರ್ ಏನೋ ಬರುತ್ತಿದೆ. ಆಸ್ಪತ್ರೆಗೆ ಹೋಗಬೇಕಾಗಿದೆ. ಹೆಲ್ತ್‌ನಲ್ಲಿ ಅನ್‌ಈಜಿನೆಸ್ ಇದೆ ಅದಕ್ಕೋಸ್ಕರ ನಾನು ತೋರಿಸುತ್ತಿದ್ದೇನೆ. ಇದಾದ ಮೇಲೆ ಬರುತ್ತೇನೆ. ಸದನ ಬಿಟ್ಟು ಹೋಗಲಿಕ್ಕೆ ನನಗೆ ಆಗುವುದಿಲ್ಲ. ಇಲ್ಲಿ ಇರುವ ವಿಷಯಗಳ ಚರ್ಚೆಯಲ್ಲಿ ಸತತವಾಗಿ ಭಾಗವಹಿಸಬೇಕು ಎನ್ನುವ ಮಾತು ಮತ್ತು ಯಾವುದೋ ಒಂದು ಕೊರಗು ಅವರಲ್ಲಿ ಕಾಣುತ್ತಿತ್ತು. ಯಾವುದು ಏನೆಂದು ನನಗೆ ಕಲ್ಪನೆ ಮಾಡಲಿಕ್ಕೆ ಸಾಧ್ಯವಿಲ್ಲ. ಈ ಒಂದು ವಾರದಲ್ಲಿ ಅವರಲ್ಲ ಮಾನಸಿಕವಾಗಿ ತುಮುಲ ನಡೆಯುತ್ತಿತ್ತು ಎನ್ನತಕ್ಕಂಥ ಭಾವನೆ ನನಗೆ ಮೂಡಿತು. ಈ ವಾರ ನೋಡಿದಾಗ ಆರೋಗ್ಯದಲ್ಲಿ ಏನೋ ಬದಲಾವಣೆಯಾಗಿತ್ತು ಅದನ್ನು ನಾವು ನೋಡಿದ್ದೇವೆ. ಅವರ ದಿನನಿತ್ಯದ ಚಟುವಟಿಕೆ ನೋಡಿದಾಗ ಅವರಿಗೆ 68 ವರ್ಷ ಎಂದು ನಂಬಲಿಕ್ಕೆ ಸಾಧ್ಯವಿಲ್ಲ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ಕೇವಲ 58ರಿಂದ 60 ಸಮೀಪ ಇರಬಹುದು ಎಂದು ನಮ್ಮ ಕಲ್ಪನೆ ಇತ್ತು. ಈ ತಿಂಗಳಲ್ಲಿ ಪತ್ರಿಕೆಯಲ್ಲಿ ಅವರ ಬಗ್ಗೆ ಒಂದು ವಿಶೇಷವಾದ ಲೇಖನ ಒಂದಿತ್ತು. 69 ವರ್ಷದ ಹುಟ್ಟುಹಬ್ಬದ ಆಚರಣೆ ಸಂದರ್ಭದಲ್ಲಿ ಅವರ ಬಗ್ಗೆ ಲೇಖನಗಳು ಬಂದಾಗ ಅವರಿಗೆ 68 ವರ್ಷವೆಂದು ನಮಗೆ ಆಗ ಕಲ್ಪನೆಗೆ ಬಂದಿದ್ದು. ರಾಜಕೀಯ ವಾತಾವರಣದ ವ್ಯವಸ್ಥೆಯಲ್ಲಿದ್ದು ಅವರು ಅವರ ಆರೋಗ್ಯವನ್ನು ಕಾಪಾಡಿಕೊಂಡು ಬಂದಿದ್ದರು. ಸಡನ್ನಾಗಿ ಅವರು ಬೆಳಿಗ್ಗೆ ಹೃದಯಾಘಾತದಿಂದ ನಿಧನವಾಗುತ್ತಾರೆಂದು ಕಲ್ಪನೆ ಇರಲಿಲ್ಲ. ಇವತ್ತು ನಮ್ಮ ಮಧ್ಯೆ ಇಲ್ಲ. ಬೈರೇಗೌಡರು ಒಂದು ಆದರ್ಶ, ಪ್ರಾಮಾಣಿಕ ಮತ್ತು ಮೌಲ್ಯದ ರಾಜಕಾರಣ ಮಾಡಿದ್ದರು. ಏಕೆಂದರೆ ಅವರು ಕಮ್ಯೂನಿಸ್ಟ್ ಚಳವಳಿ ಮುಖಾಂತರ ಬಂದವರು. ಕಮ್ಯುನಿಸ್ಟ್ ಚಳವಳಿ ಸೋಷಿಯಲಿಸ್ಟ್ ಚಳವಳಿಯಿಂದ ಬಂದಂತಹ ವ್ಯಕ್ತಿಗಳಲ್ಲಿ ಎಷ್ಟೋ ಬದಲಾವಣೆಗಳನ್ನು ನಾವು ನೋಡಿದ್ದೇವೆ. ಆದರೆ ಅವರು ಏನೂ ಬದಲಾವಣೆಯಾಗಲಿಲ್ಲ. ತಮ್ಮ ಬೇಸಿಕ್ ಪಾಲಿಸಿ ಏನಿತ್ತೋ ಅದರಲ್ಲಿ ಅವರು ಬದಲಾವಣೆಯಾಗಲಿಲ್ಲ. ಅವರು ಆ ವ್ಯಕ್ತಿತ್ವವನ್ನು ಈ ರಾಜಕೀಯ ವ್ಯವಸ್ಥೆಯಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿ ಮುಂದುವರೆಸಿಕೊಂಡು ಬಂದ ಆದರ್ಶಗಳು ನಮಗೆಲ್ಲರಿಗೂ ಅನುಕರಣೀಯವಾದ ಆದರ್ಶ ಎಂದು ಈ ಸಂದರ್ಭದಲ್ಲಿ ಹೇಳಿ, ಬೈರೇಗೌಡರ ನಿಧನದಿಂದ ರಾಜಕೀಯ ವ್ಯವಸ್ಥೆ ಅಲ್ಲ ಇಡೀ ಸಾರ್ವಜನಿಕ ರಂಗವೇ ಬಡ ಆಗಿದೆ

## ಸಿ.ಬಿ ಆದರ್ಶದ ಪಾಠ ಕಲಿಯಬೇಕು

**ಬಿ. ಸೋಮಶೇಖರ್**

ಸನ್ಮಾನ್ಯ ಬೈರೇಗೌಡರು ತೀರಿಕೊಂಡಿದ್ದಾರೆಂದು ಹೇಳಿದರೆ ನಾವ್ಯಾರು ನಂಬುವುದಕ್ಕೆ ಆಗುತ್ತಿಲ್ಲ. ಅವರ ಜೀವನದಲ್ಲಿ ಎಂಟು ದಿನಗಳಿಗೂ ಹೆಚ್ಚು ಕಾಲ ಜ್ವರ ಎಂದು ಬಿದ್ದಿರತಕ್ಕಂಥದ್ದು ಇದೇ ಪ್ರಥಮ ಬಾರಿಗೆ ಎಂದು ಹೇಳುತ್ತಿದ್ದೆವು. ಅವರು ಸುಮಾರು ಒಂದು ತಿಂಗಳಿನಿಂದೀಚೆಗೆ ಮಾನಸಿಕವಾಗಿ ಬಹಳ ನೊಂದಿದ್ದರು. ಏಕೋ ಕಾರಣ ಗೊತ್ತಿಲ್ಲ. ಕೆಲವು ರಾಜಕೀಯ ಬದಲಾವಣೆಗಳು ಇರಬಹುದು, ಬೆಳವಣಿಗೆಗಳು ಇರಬಹುದು. ಅದು ಅವರ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಹೆಚ್ಚು ಹೇಳುತ್ತಿರಲಿಲ್ಲ, ಆದರೆ ಮನಸ್ಸಿನಲ್ಲಿ ಬಹಳ ನೊಂದುಕೊಳ್ಳುತ್ತಿದ್ದರು. ಅವರು ಕಮ್ಯುನಿಸ್ಟ್ ಪಕ್ಷದಿಂದ ಬಂದಂಥವರು. ಜೀವನದಲ್ಲಿ ಕೆಲವು ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರು. ಬದ್ಧತೆ, ಸಾರ್ವಜನಿಕ ಜೀವನವನ್ನು ಸ್ವಚ್ಛ ಮಾಡಬೇಕೆಂದು

ಹೇಳಿ ಹಗಲಿರುಳು ಯೋಚನೆ ಮಾಡುತ್ತಿದ್ದರು. ನಾವು ಸುಮಾರು ಇಪ್ಪತ್ತು, ಇಪ್ಪತ್ತೈದು ವರ್ಷಗಳಿಂದ ಒಂದೇ ಪಕ್ಷದಲ್ಲಿದ್ದರೂ ಕೂಡ ನನಗೂ ಅವರಿಗೂ ಬಹಳ ಆತ್ಮೀಯತೆ ಬೆಳೆದಿದ್ದು ಸುಮಾರು ನಾಲ್ಕೈದು ವರ್ಷಗಳ ಹಿಂದಿನಿಂದ. ನಾನು ಅವರಿಗೆ ಯಾವ ಕೆಲಸ ಹೇಳುತ್ತಿರಲಿಲ್ಲ. ಅವರೂ ನನಗೆ ಯಾವುದೇ ಕೆಲಸ ಹೇಳುತ್ತಿರಲಿಲ್ಲ. ಅಷ್ಟೊಂದು ದೂರ ದೂರ ಇದ್ದೆವು. ಆದರೆ ವಿಚಾರದಲ್ಲಿ ಮಾತ್ರ ಒಂದೇ ರೀತಿ ಇದ್ದೆವು. ನನ್ನ ಹತ್ತಿರ ಬಹಳಷ್ಟು ಸಾರಿ ಚರ್ಚೆ ಮಾಡುತ್ತಿದ್ದರು. ಎಷ್ಟೊಂದು ಕಲುಷಿತವಾಗಿದೆ ಈ ಸಾರ್ವಜನಿಕ ಜೀವನ. ಆಡಳಿತ ಹದಗೆಟ್ಟಿದೆ, ಏನು ಮಾಡಬೇಕು. ಯಾವ ರೀತಿಯಲ್ಲಿ ಸುಧಾರಣೆ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಬಹಳ ಯೋಚನೆ ಮಾಡುತ್ತಿದ್ದರು. ನನಗಂತೂ ವೈಯಕ್ತಿಕವಾಗಿ ಅವರ ನಿಧನದಿಂದ ಬಹಳ ನೋವಾಗಿದೆ. ನಮ್ಮ ಪಕ್ಷಕ್ಕೂ ಕೂಡ ಬಹಳ ನಷ್ಟವಾಗಿದೆ. ಅವರು ನಮ್ಮ ಪಕ್ಷದಲ್ಲಿ ಬಹಳ ಹಿರಿಯವರಾಗಿದ್ದರು. ಆರು ಬಾರಿ ಗೆದ್ದಿದ್ದರು. ಚುನಾವಣೆಯಲ್ಲೂ ಕೂಡ ಅವರು ಯಾವುದೇ ರೀತಿಯ ಅವ್ಯವಹಾರವನ್ನು ಮಾಡಿಲ್ಲ. ಸಾರ್ವಜನಿಕ ಜೀವನದಲ್ಲಿ ಕೆಲವು ಮೌಲ್ಯಗಳನ್ನು ಇಟ್ಟುಕೊಂಡು ಜನರ ಸಂಪರ್ಕಗಳನ್ನು ಇಟ್ಟುಕೊಂಡು ಜನರ ಪರ ಹೋರಾಟ ಮಾಡಿ ಚುನಾವಣೆಯಲ್ಲಿ ಗೆದ್ದು ಬರುತ್ತಿದ್ದರು. ಇನ್ನು ಅವರು ತಮ್ಮ ಖಾಸಗಿ ಜೀವನದಲ್ಲೂ ಕೂಡ ತಮ್ಮ ಬದ್ಧತೆಯನ್ನು ಬಿಟ್ಟುಕೊಡುತ್ತಿರಲಿಲ್ಲ. ಈಗ ತಾನೇ ಮಾತನಾಡಿದ ವಿರೋಧ ಪಕ್ಷದ  ನಾಯಕರು ಅವರ ಬಗ್ಗೆ ಚೆನ್ನಾಗಿ ತಿಳಿದುಕೊಂಡೇ ಸತ್ಯವಾದ ಮಾತುಗಳನ್ನು ಆಡಿದರು. ಮಾನ್ಯ ಬೈರೇಗೌಡರು ಸಾರ್ವಜನಿಕ ಸಮಾರಂಭವನ್ನು ಖಾಸಗಿಯಾಗಿ ಮತ್ತು ಖಾಸಗಿ ಸಮಾರಂಭವನ್ನು ಸಾರ್ವಜನಿಕವಾಗಿ ಎಂದೂ ಮಾಡಿದವರಲ್ಲ. ಮಾನ್ಯ ಬೈರೇಗೌಡರು ನಮ್ಮ ಪಕ್ಷದಲ್ಲಿ ಹಿರಿಯ ನಾಯಕರಾಗಿದ್ದರೂ ಕೂಡ ತಮ್ಮ ಇಬ್ಬರು ಮಕ್ಕಳ ಮದುವೆಗಳನ್ನು ನಮಗೂ ಗೊತ್ತಿಲ್ಲದೇ, ಯಾವುದೇ ಪಕ್ಷದ ಸಹೋದ್ಯೋಗಿಗಳಿಗೂ ಗೊತ್ತಿಲ್ಲದೇ ಅವರ ಕುಟುಂಬದವರೇ ಹತ್ತಾರೆ ಜನರು ಸೇರಿಕೊಂಡು ಮಾಡಿದ್ದಾರೆ. ಇಂಥ ಇವರ ಆದರ್ಶದ ಪಾಠವನ್ನು ನಾವೆಲ್ಲಾ ಕಲಿಯಬೇಕಾಗಿದೆ. ಮಾನ್ಯ ಬೈರೇಗೌಡರು ಮಂತ್ರಿಯಾಗಿ ಯಾವುದೇ ಖಾತೆಯನ್ನು ವಹಿಸಿಕೊಂಡರು ಎಂದರೆ ಆ ಇಲಾಖೆಯಲ್ಲಿಯೇ ಭಯ ಹುಟ್ಟುತ್ತು . ಅಷ್ಟೊಂದು ದಕ್ಷತೆಯಿಂದ ಇಲಾಖೆಯನ್ನು ನಡೆಸುತ್ತಿದ್ದರು. ಮೊನ್ನೆ ಕೋಲಾರದಲ್ಲಿ ಭ್ರಷ್ಟಾಚಾರ ಮಾಡುತ್ತಾರೆ ಎಂದರೆ ಅಂಥವರ ಮೇಲೆ ಹೆಚ್ಚು ಸಿಟ್ಟು ಇಟ್ಟುಕೊಳ್ಳುತ್ತಿದ್ದರು. ಅವರು ಇಲಾಖೆಯಲ್ಲಿ ಮಂತ್ರಿಯಾಗಿದ್ದಾಗ ಅವರು ಅನೇಕ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿದ್ದರು. ಹೀಗಾಗಿ ಇಲಾಖೆಯಲ್ಲಿ ಅವರು ಭಯವನ್ನು ಹುಟ್ಟಿಸಿದ್ದರು. ಶುದ್ಧವಾದಂಥ ಆಡಳಿತವನ್ನು ತರಬೇಕು ಎನ್ನುವ ದೃಷ್ಟಿಯನ್ನು ಅವರು ಹೊಂದಿದ್ದರು. ಅದೇ ರೀತಿ ಅವರು ಕೃಷಿ ಕ್ಷೇತ್ರದಲ್ಲಿ ಬಹಳ ಆಳವಾಗಿ ಅಧ್ಯಯನವನ್ನು ಮಾಡಿದ್ದರು. ಬಹುಶಃ ಪಿ.ಎಚ್.ಡಿ ಮಾಡಿದವರೂ ಕೂಡ ಇಷ್ಟೊಂದು ಜ್ಞಾನವನ್ನು ಹೊಂದಿರುವುದಿಲ್ಲವೇನೋ. ಆದರೆ ಬೈರೇಗೌಡರು ಅನೇಕ ಮ್ಯಾಗ್‌ಜೀನ್‌ಗಳನ್ನು ಓದುತ್ತಿದ್ದರು, ಅಂತರರಾಷ್ಟ್ರೀಯ ಮ್ಯಾಗ್‌ಜೀನ್ ಗಳನ್ನು ಓದುತ್ತಿದ್ದರು. ನಾವೇನಾದರೂ ಸಲಹೆ ಸೂಚನೆಗಳನ್ನು ಕೇಳಿದರೆ ಹೇಳುತ್ತಿದ್ದರು. ಯಾವ ರೀತಿಯಾಗಿ ವೈಜ್ಞಾನಿಕವಾಗಿ ವ್ಯವಸಾಯವನ್ನು ಮಾಡಬಹುದು ಎಂಬ ಬಗ್ಗೆ ಅವರು ಹೇಳುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅವರು ತಮ್ಮ ಜಮೀನಿನಲ್ಲಿ ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಬೇಕು ಎನ್ನುತ್ತಿದ್ದರು. ಈ ಮಧ್ಯೆ ನಮ್ಮ ಪಕ್ಷದ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಅದನ್ನು ಒಂದು ವರ್ಷದ ಮಟ್ಟಿಗೆ ನಾನು ತಡೆಹಿಡಿಯುತ್ತೇನೆ ಪಕ್ಷಕ್ಕೋಸ್ಕರ ನಾನು ದುಡಿಯುತ್ತೇನೆ ಎನ್ನತಕ್ಕಂಥ ನಿರ್ಧಾರವನ್ನು ಮಾಡಿದ್ದರು. ಆದರೆ ಇವೊತ್ತು ಅವರು ನಮ್ಮೊಂದಿಗೆ ಇಲ್ಲ. ನಮ್ಮ ಪಕ್ಷಕ್ಕೆ ಮಾತ್ರವಲ್ಲ ಇಡೀ ಸಾರ್ವಜನಿಕ ಜೀವನದಲ್ಲಿ ಒಬ್ಬ ಆದರ್ಶ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಬಹಳ ವಿರಳ ಅಂಥವರು ಸಿಕ್ಕಂತಹದ್ದು. ಯಾವತ್ತೂ ಅವರು ಅಧಿಕಾರಕ್ಕೋಸ್ಕರ ಎಲ್ಲಾ ದಾರಿಗಳನ್ನು ತುಳಿದವರಲ್ಲ. ಅವರು ಅವಕಾಶವಾದಿಗಳಾಗಿರಲಿಲ್ಲ. ಸರಿದಾರಿಯಲ್ಲಿ ಅವಕಾಶ ಬಂದರೆ ಮಾಡೋಣ, ಇಲ್ಲದಿದ್ದರೆ ಇರೋಣ ಎನ್ನತಕ್ಕಂಥ ನಿಸ್ವಾರ್ಥದ ಭಾವನೆ ಅವರಲ್ಲಿತ್ತು. ಅಂಥವರನ್ನು ನಾವು ಕಳೆದುಕೊಂಡಿರುವುದು ಬಹಳ ದುಃಖಕರವಾದ ಸಂಗತಿ.

## ಕ್ರೀಡಾಕೂಟಗಳಿಗೆ ಸ್ಫೂರ್ತಿ

**ಪಿ.ಜಿ.ಆರ್. ಸಿಂಧ್ಯ**

1974 ರಲ್ಲಿ ವಿರೋಧ ಪಕ್ಷದ ಸದಸ್ಯರಾಗಿ, ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಬೈರೇಗೌಡರು, ಇವರೆಲ್ಲರೂ ಇದ್ದಂತಹ ಸನ್ನಿವೇಶದಲ್ಲಿ ಇವರ ಹೋರಾಟಗಳನ್ನು ನಾವು ಕೇಳಿದ್ದೆವು. ಮಾರ್ಕಿಸ್ಟ್‌ಗೆ ಬಹಳ ಹತ್ತಿರವಿದ್ದಂತ ಬೈರೇಗೌಡರು ಕಾಂಗ್ರೆಸ್‌ನ್ನು ಬಹಳ ತೀವ್ರವಾಗಿ ಅವೊತ್ತೂ ಸಹ ವಿರೋಧ ಮಾಡಿದರು. ಅವರು ಆಡಳಿತ ನಡೆಸಿದಂಥ ಸನ್ನಿವೇಶದಲ್ಲಿ ಪ್ರಾಮಾಣಿಕತೆಗೆ ಬಹಳ ಒತ್ತನ್ನು ಕೊಟ್ಟಂಥವರಾಗಿದ್ದರು. ನಮಗೆಲ್ಲಾ ಗೊತ್ತಿದೆ, 1983ರಲ್ಲಿ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಈ ಮನೆಗೆ ಆರಿಸಿಬಂದರು. ಆ ಸಂದರ್ಭದಲ್ಲಿ ನಮ್ಮ ಸರ್ಕಾರವನ್ನು ತೆಗೆಯಲಿಕ್ಕೆ ಬಹಳ ಪ್ರಯತ್ನಗಳಾಯಿತು, ಮಾನ್ಯ ಹೆಗಡೆಯವರ ಸರ್ಕಾರ. ಅದನ್ನು ಉಳಿಸುವುದಕ್ಕೆ ಮಾನ್ಯ ಬೈರೇಗೌಡರು ಮಾಡಿದಂಥ ಕೆಲಸವನ್ನು ನಾವ್ಯಾರು ಕೂಡ ಮರೆಯುವುದಕ್ಕೆ ಆಗುವುದಿಲ್ಲ. ಅದಕ್ಕೆ ಮುನ್ನ ಮಾನ್ಯ ಬೈರೇಗೌಡರು ಅವರಿಗೆ ಸ್ವತಃ ಒಂದು ಕಾಲು ಸರಿ ಇಲ್ಲದೇ ಇದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಬೈರೇಗೌಡರು ಯಾವ ಕ್ರೀಡೆಯಲ್ಲೂ ಕೂಡ ಹಿಂದೆ ಬಿದ್ದವರಲ್ಲ. ರಾಜ್ಯದ ಸ್ಟೇಟ್ ಒಲಿಂಪಿಕ್ ಅಸೋಸಿಯೇಶನ್ ಅಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ರಾಜ್ಯದ, ರಾಷ್ಟ್ರ ಮಟ್ಟದ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳನ್ನು ನಡೆಸುವದಕ್ಕೆ ಬಹಳ ಸ್ಫೂರ್ತಿಯನ್ನು ಕೊಟ್ಟು ಅದರ ನೇತಾರರಾಗಿದ್ದರು. ಅವರ ಬಹುಮುಖ ವ್ಯಕ್ತಿತ್ವದಲ್ಲಿ ಕ್ರೀಡಾ ಕ್ಷೇತ್ರವೂ ಕೂಡ ಒಂದಾಗಿದ್ದು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕ್ರೀಡೆಗೆ ಬಹಳ ಪ್ರೋತ್ಸಾಹವನ್ನು ಕೊಟ್ಟಂತಹ ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು. ಅವರು ಆಡಳಿತ ನಡೆಸಕ್ಕಂಥ ಸಂದರ್ಭದಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿದ್ದರು. ಕೆಲವು ಸಲ ಬೈರೇಗೌಡರದು ಅತಿರೇಕವೇನೋ ಎಂದು ನಮ್ಮಲ್ಲಿ ಅನೇಕರಿಗೆ ಅನ್ನಿಸಿರತಕ್ಕಂಥದ್ದೂ ಉಂಟು.

## ರೇಷ್ಮೆ ಕೃಷಿಯಲ್ಲಿ ತಜ್ಞರನ್ನು ಮೀರಿಸುವ ಅನುಭವ

**ವಿ. ಮುನಿಯಪ್ಪ**

ರಾಜಕಾರಣದಲ್ಲಿ ನಮಗೂ ಅವರಿಗೂ ವೈಯಕ್ತಿಕವಾಗಿ ದ್ವೇಷ ಇತ್ತು. ಆದರೆ ಪ್ರಪ್ರಥಮವಾಗಿ ನಾನು 1983ರಲ್ಲಿ ವಿಧಾನಸಭೆಗೆ ಬಂದಾಗ ಅವರು ಜೊತೆಯಲ್ಲಿ ಇದ್ದು, ಈ ರಾಜಕಾರಣ ಯಾವ ರೀತಿ ಮಾಡಬೇಕು, ಯಾವ ರೀತಿ ಆಗಿ ಹೋಗಬೇಕೆಂದು ಹೇಳಿದ್ದರು. ಮತ್ತು ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಕಾಂಗ್ರೆಸ್ ಪಾರ್ಟಿ ಬಗ್ಗೆ ಅವರಿಗೆ ಸ್ವಲ್ಪ ಅಸಹನೆ ಇತ್ತು. ಅವರು ಕಾಂಗ್ರೆಸ್ ಪಕ್ಷದ ಬಗ್ಗೆ ಬಹಳ ದ್ವೇಷ ಮಾಡುತ್ತಿದ್ದರು. ಅದಕ್ಕೆ ಬೇರೆ ಬೇರೆ ಕಾರಣಗಳಿದ್ದವು. ಅವರು ಮೂಲಭೂತವಾಗಿ ಕಮ್ಯೂನಿಸ್ಟ್ ಬೇಸ್‌ನಿಂದ ಬಂದಿರತಕ್ಕಂಥವರು. ಅವರು ಅದರ ತತ್ವಗಳನ್ನು ಅಳವಡಿಸಿಕೊಂಡಿದ್ದರು, ಹಾಗೂ ಮೈಗೂಡಿಸಿಕೊಂಡಿದ್ದರು. ಜನತಾ ದಳದ ಪಕ್ಷದಲ್ಲಿ ಇದ್ದಾಗಲೂ ಸಹ ಅದರ ಕೆಲವು ವಿಚಾರಧಾರೆಗಳನ್ನು ಅವರು ಸಹಿಸುತ್ತಿರಲಿಲ್ಲ. ಅವರದೇ ಆದಂತಹ ರೀತಿಯಲ್ಲಿ ಅದನ್ನು ಪಾರ್ಟಿ ಒಳಗಡೆ ವಿರೋಧ ಮಾಡುತ್ತಿದ್ದರು. ಎಲ್ಲದಕ್ಕೂ ಮಿಗಿಲಾಗಿ ಅವರಿಗೆ ರೈತರ ಬಗ್ಗೆ ಅವರದೇ ಆದಂತಹ ವಿಶೇಷವಾದಂತಹ ಕಾಳಜಿ. ಆ ಕಾಳಜಿ ಬಗ್ಗೆ ಹೇಳುವುದಾದರೆ ಸಮಸ್ಯೆ ಬಂದಾಗ ಪಕ್ಷಾತೀತವಾಗಿ

ಆ ಸಮಸ್ಯೆಗೆ ಎಲ್ಲರೂ ಒಟ್ಟಾಗಿ ಕೂಡಬೇಕು. ಇದಕ್ಕೆ ಏನಾದರೂ ಪರಿಹಾರ ಕಂಡುಕೊಳ್ಳಬೇಕು. ಸದಾಕಾಲ ರೈತರನ್ನು ಎಚ್ಚರಿಸತಕ್ಕಂಥದ್ದು, ಜಾಗೃತವಾಗಿರಿ ಎಂದು ಹೇಳತಕ್ಕಂಥಾದ್ದು ಹಾಗೂ ಆ ರೈತರು ಸಂಘಟನೆಯಾಗಬೇಕು ಎನ್ನುವಂತಹ ವಿಚಾರದಲ್ಲಿ ಬಹಳ ಸತತವಾಗಿ ಯಾವುದೇ ಸಮಸ್ಯೆ ಬರಲಿ ಪ್ರಯತ್ನ ಮಾಡುತ್ತಿದ್ದರು. ನಿಮ್ಮ ಸಮಸ್ಯೆಗಳಿಗೆ ನೀವು ಪರಿಹಾರ ಕಂಡುಕೊಳ್ಳಬೇಕಾದರೆ ಸಂಘಟನೆ ಬಹಳ ಮುಖ್ಯ ಎನ್ನುವಂತಹ ಮಾತನ್ನು ಆಗಿಂದಾಗ್ಗೆ ರೈತರ ಸಭೆಗಳಲ್ಲಿ ಹೇಳುತ್ತಿದ್ದರು. 1991-92ರಲ್ಲಿ ರೇಷ್ಮೆ ಸಚಿವ ಆಗಿದ್ದಾಗ ಆಗ ಫೆಬ್ರಿನ್ ಎಂದು ಡಿಸೀಜ್ ಬಂತು. ನಾವ್ಯಾರು ನಿರೀಕ್ಷೆ ಮಾಡಲಿಲ್ಲ. ಆ ಸಂದರ್ಭದಲ್ಲಿ ಅವರು ಯಾವ ರೀತಿಯಾಗಿ ಸೈಂಟಿಫಿಕ್ ಮೆಥೆಡ್ಸ್ ಅಡಾಪ ಮಾಡಿದರೆ ಈ ರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ಅನೇಕ ಸಲಹೆಗಳನ್ನು ಕೊಟ್ಟರು. ಅವರು ನೋಡಪ್ಪ ಈ ರೀತಿ ಇದೆ ನಿಮ್ಮ ಅಧಿಕಾರಿಗಳನ್ನು ಕರೆದು ಇದನ್ನು ತೀವ್ರತೆಯಿಂದ ತಡೆಗಟ್ಟುವುದಕ್ಕೆ ಮುಂಜಾಗ್ರತೆ ಕ್ರಮಗಳನ್ನು ನಿರ್ವಹಿಸದೆ ಹೋದರೆ ಈ ರೇಷ್ಮೆ ತಳಿ ನಮ್ಮ ರಾಜ್ಯ ಬಿಟ್ಟು ಹೋಗುತ್ತದೆ. ಅಂತಹ ಒಂದು ದುಸ್ಥಿತಿಗೆ ಬಂದಿದೆ. ಅದಕ್ಕೆ ತಕ್ಷಣ ಕ್ರಮ ತಗೆದುಕೊಳ್ಳಬೇಕೆಂದು ವೈಯಕ್ತಿಕವಾಗಿ ಹೇಳಿರುವುದನ್ನು ನಾನು ಖಂಡಿತವಾಗಿ ಮರೆಯುವ ಹಾಗೆ ಇಲ್ಲ. ಅದೇ ರೀತಿ ಸಭೆಯಲ್ಲಿ ಸಹ ಎರಡು ಘಂಟೆ ಭಾಷಣ ಮಾಡಿ ಈ ರೇಷ್ಮೆ ತಳಿ, ಅದರ ಇತಿಹಾಸ, ಅದರಿಂದ ಯಾವ ರೀತಿ ನಮ್ಮ ಜೀವನದ ಅವಲಂಬಿಸಿದೆ ಎನ್ನುವ ಅನೇಕ ವಿಚಾರಗಳನ್ನು ಈ ಸಭೆಗೆ ಮನವರಿಕೆ ಮಾಡಿಕೊಟ್ಟಿದ್ದರು. ನಾವೂ ಕೂಡ ರೇಷ್ಮೆ ಕೃಷಿಯಿಂದ ಬಂದವರಾದರೂ ಅವರಷ್ಟು ಆಳವಾಗಿ ತಿಳಿದುಕೊಳ್ಳುವುದಕ್ಕೆ ಯಾರಿಗೂ ಸಾಧ್ಯವಾಗಿರಲಿಲ್ಲ. ಅಷ್ಟೊಂದು ಆಳವಾಗಿ ಅದರಲ್ಲಿ ಅವರು ಅಧ್ಯಯನ ಮಾಡಿ, ಅದರಲ್ಲಿ ಇರತಕ್ಕಂಥ ವೈಜ್ಞಾನಿಕವಾದಂತಹ ವಿಚಾರಗಳನ್ನು ಇಲಾಖೆಗೂ ಸಹ ಮನವರಿಕೆ ಮಾಡಿಕೊಟ್ಟರು. ರೈತ ಸಮುದಾಯಕ್ಕ ತೊಂದರೆ ಬಂದಾಗ ತಮ್ಮನ್ನು ತೊಡಗಿಸಿಕೊಂಡು ತನ್ನದೇ ಆದಂತಹ ರೀತಿಯಲ್ಲಿ ರೈತರಿಗೆ ಕೊಟ್ಟಿರುವಂತಹ ಕೊಡುಗೆ ನಾವ್ಯಾರೂ ಮರೆಯುವ ಹಾಗೆ ಇಲ್ಲ. ಅಂತಹ ಅಪಾರವಾದಂತಹ ಸೇವೆ ಮಾಡುವುದರ ಮೂಲಕ ಅವರು ನಮ್ಮ ಜಿಲ್ಲೆಯಲ್ಲಿ ಅಲ್ಲ, ರಾಜ್ಯದಲ್ಲಿ ಒಂದು ಶಕ್ತಿಯಾಗಿ ಬೆಳೆದಿದ್ದರು. ಅನೇಕ ವಿಚಾರಗಳಲ್ಲಿ ತನ್ನದೇ ಆದಂತಹ ಸೈದ್ಧಾಂತಿಕವಾದಂತಹ ವಿಚಾರಧಾರೆಗಳನ್ನು ಇಟ್ಟುಕೊಂಡಿದ್ದರು. ಆ ವಿಚಾರ ಧಾರೆಗಳಿಗೆ ಯಾರೇ ಅಡ್ಡ ಬಂದರೂ, ಅವರು ಎಷ್ಟೇ ದೊಡ್ಡವರಿದ್ದರೂ ಕೂಡ ಅದನ್ನು ಸಹನೆ ಮಾಡುತ್ತಿರಲಿಲ್ಲ. ಅವರ ಜೊತೆ ರಾಜಿ ಮಾಡಿಕೊಳ್ಳುವುದಕ್ಕೆ ಅವರು ತಯಾರಿರಲಿಲ್ಲ. ಇತ್ತೀಚಿಗೆ ಆದಂತಹ ರಾಜಕೀಯ ಬೆಳವಣಿಗೆಗಳು ಎಷ್ಟೇ ಆದರೂ ಹಿಂದಿನ ಕೆಲವು ಕಹಿ ನೆನಪುಗಳಿಂದ ಹೊಂದಾಣಿಕೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ರಾಜಕಾರಣವಾಗಿ ಅನಿವಾರ್ಯತೆ ಇದ್ದರೂ ಸಹ ವೈಯಕ್ತಿಕವಾಗಿ ಅವರ ಮನಸ್ಸು ಒಪ್ಪಿರಲಿಲ್ಲ. ಅವರ ಅನೇಕ ಕ್ಲೋಸ್ ಅಸೋಸಿಯೇಟ್ಸ್ ಅಂತ ಹೇಳುತ್ತಾರೆ ಅವರ ಜೊತೆ ಅವರು ವ್ಯಕ್ತ ಮಾಡಿರತಕ್ಕಂಥ ಸಂದರ್ಭದಲ್ಲಿ ಇದಕ್ಕಿಂತ ವೈಯಕ್ತಿಕವಾಗಿ ನಾನೇ ರಾಜಕಾರಣ, ಹೋರಾಟ ಮಾಡಿದರೆ ಏನು ತಪ್ಪಿದೆ ಈ ರೀತಿ ಸಂಘಟನೆ ಮಾಡಿ ನಾವೇನು ಸಾಧನೆ ಮಾಡುತ್ತೇವೆ ಎನ್ನುವ ಅಭಿಪ್ರಾಯವನ್ನೂ ಕೂಡ ವ್ಯಕ್ತ ಮಾಡಿದ್ದಾರೆ. ಈ ರೀತಿಯಾಗಿ ಕೆಲವು ವಿಚಾರಧಾರೆಗಳಿಗೆ ಅವರು ಬದ್ಧರಾಗಿದ್ದು ಬಹಳ ಉತ್ತಮ ರಾಜಕಾರಣಿಯಾಗಿದ್ದರು

ಇವತ್ತು ನಮ್ಮ ಜಿಲ್ಲೆಯಲ್ಲಿ ಅವರು ಇದ್ದುದ್ದರಿಂದ ಒಂದು ರೀತಿ ನಮಗೆ ಭಯ ಇತ್ತು. ಅದೇನೆಂದರೆ ನಮ್ಮ ಬೈರೇಗೌಡರು ಇದ್ದಾರೆ, ನಾವು ಸ್ವಲ್ಪ ಸರಿಯಾದ ರೀತಿಯಲ್ಲಿ ಆಡಳಿತ ನಡೆಸಬೇಕು, ಅಧಿಕಾರಿಗಳು ಏನಾದರೂ ಸ್ವಲ್ಪ ಮಟ್ಟಿಗೆ ಭ್ರಷ್ಟಾಚಾರ ಅಧಿಕಾರಿಗಳು ಎಂದರೆ ಅವರ ಮುಖವನ್ನು ನೋಡುವುದೇ ಇಲ್ಲ, ಅವರು ಅಷ್ಟು ಅಸಹ್ಯವಾಗಿ ವರ್ತನೆ ಮಾಡುತ್ತಿದ್ದರು. ನಮಗೆ ಇವರು ಏಕೆ ಇಷ್ಟು ವರ್ತನೆ ಮಾಡುತ್ತಾರೆ ಎಂದೆನಿಸುತ್ತಿತ್ತು. ಅಂತಹ ಭ್ರಷ್ಟ ಅಧಿಕಾರಿಗಳನ್ನು ಅಷ್ಟೇ ವಿರೋಧ ಮಾಡುತ್ತಿದ್ದರು. ಈ ರೀತಿಯಾಗಿ ಅವರಿಗೆ ಜಿಲ್ಲಾಡಳಿತದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಅಷ್ಟೇ ಆಡಳಿತದ ಬಗ್ಗೆ ತನ್ನದೇ ಆದಂತಹ ರೀತಿಯಲ್ಲಿ ವ್ಯವಸ್ಥೆಯ ಬಗ್ಗೆ ತಮ್ಮದೇ ಆದಂತಹ ನೋವು ಇತ್ತು, ಅನೇಕ ಸಂದರ್ಭಗಳಲ್ಲಿ

ಈ ರೀತಿಯ ಬ್ಯೂರೊಕ್ರಾಟ್ಸ್ ವ್ಯವಸ್ಥೆಗಳಲ್ಲಿ ಏನು ನ್ಯೂನತೆಗಳು ಇವೆ, ಎಷ್ಟರಮಟ್ಟಿಗೆ ಅವರಿಗೆ ಕನ್‌ಸರ್ನ್ ಇಲ್ಲವೆನ್ನುವ ಬಗ್ಗೆ, ಅವರು ತಮ್ಮದೇ ಆದಂತಹ ರೀತಿಯಲ್ಲಿ ಅನೇಕ ಸಂದರ್ಭಗಳಲ್ಲಿ ಮಾತನಾಡಿರುವಂಥಾದ್ದು ಉಂಟು. ರೈತ ಸಮುದಾಯಕ್ಕೆ, ತನ್ನದೇ ಆದಂತಹ ರೀತಿಯಲ್ಲಿ ತಮ್ಮ ಜೀವನ ಪರ್ಯಂತ ಕಾಳಜಿಯನ್ನು ಕೊಟ್ಟಂತಹ ವ್ಯಕ್ತಿಯಾಗಿ ಬೆಳೆದು ಬಂದಿದ್ದರು. ಇತ್ತೀಚೆಗೆ ರಾಜಕಾರಣದಲ್ಲಿ ಸ್ವಲ್ಪಮಟ್ಟಿಗೆ ನಮಗೆ ಲೋಕಲ್ಲಾಗಿ ರಾಜಕಾರಣದಲ್ಲಿ ಮಾತುಕತೆಗಳು ಕಡಮೆಯಾಗಿದ್ದರೂ, ಕೆಲವು ವಿಚಾರಗಳಲ್ಲಿ ರೇಷ್ಮೆ ಕೃಷಿ ವಿಚಾರವಾಗಿ, ನೆಲಕ್ಕೆ ಬಿದ್ದು, ರೈತರೆಲ್ಲರೂ ದಂಗೆ ಏಳುವಂತಹ ಸಂದರ್ಭದಲ್ಲಿ ನಿಮ್ಮ ಮಂತ್ರಿಯವರಲ್ಲಿ ಹೇಳಿ ಮುಖ್ಯಮಂತ್ರಿಯವರಲ್ಲಿ ಒತ್ತಡವನ್ನು ತಂದು ಏನಾದರೂ ಮಾಡಿ ಈ ರೈತ ಸಮುದಾಯಕ್ಕೆ ಒಂದು ಪರಿಹಾರವನ್ನು ಕೊಡಿಸಿ ಎಂಬ ಒತ್ತಾಯವನ್ನು ತಂದರು. ನಮ್ಮ ಜಿಲ್ಲೆಯಲ್ಲಿ ಈ ರೇಷ್ಮೆ ಕೃಷಿ ನಲವತ್ತು ರೂಪಾಯಿಗಳಿಗೆ ಹೋಗಿದೆ. ಇದರ ಬೆಲೆ ಕುಸಿದಿದೆ. ಇದಕ್ಕೆ ಏನಾದರೂ ಒಂದು ದಾರಿ ಮಾಡದಿದ್ದರೆ, ರಕ್ಷಣೆಗೆ ಬರದಿದ್ದರೆ ಆಗುವುದಿಲ್ಲವೆಂದಾಗ ಆಗ ನಾವೆಲ್ಲರೂ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಬಂದಾಗ, ಏನು ಮಾಡುವುದು ಇದಕ್ಕೆ ಎಂದು ಇದನ್ನು ಕೇಂದ್ರ ಸರ್ಕಾರದೊಡನೆ ಚರ್ಚೆ ಮಾಡಿ, ಕೇಂದ್ರದ ರೇಷ್ಮೆ ಮಂಡಳಿಯ ಅಧ್ಯಕ್ಷರಾದಂತಹ ಮಾನ್ಯ ಕೆ.ಎಸ್. ಈಶ್ವರಪ್ಪನವರು ನಾವೆಲ್ಲರೂ ಸೇರಿ, ಕನಿಷ್ಟ ಕೆ.ಜಿ.ಗೆ 10 ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೆಂದು ಹೇಳಿದಾಗ, ಮಾನ್ಯ ಮುಖ್ಯಮಂತ್ರಿಯವರು, ಬೈರೇಗೌಡರು ಎಲ್ಲರೂ ಸೇರಿ ರೈತರ ಸಮುದಾಯಕ್ಕೆ ಸಲಹೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಏನಾದರೂ ಪರಿಹಾರವನ್ನು ಕೊಡಬೇಕೆಂದು ಹೇಳಿದರು. ರೈತರು ಬಹಳ ಕಷ್ಟದಲ್ಲಿದ್ದಾರೆ, ತೊಂದರೆ ಇದೆ ಎಂದು ಹೇಳಿದಾಗ 10 ರೂಪಾಯಿಗಳನ್ನು ಘೋಷಣೆ ಮಾಡಿದಾಗ, ಇದಕ್ಕೆ ಅವರು ಬಹಳ ಸಂತೋಷಪಟ್ಟು ವೆಲ್‌ಕಂ ಮಾಡಿದರು. ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ, ರೈತರ ಸಹಾಯಕ್ಕೆ ಬಂದಾಗ ಅದನ್ನು ಸ್ವಾಗತ ಮಾಡುವಂತಹ ದೊಡ್ಡ ಮನೋಭಾವವನ್ನು ಸಹಾ ಅವರು ಇಟ್ಟುಕೊಂಡಿದ್ದರು. ಈ ರೀತಿಯಾಗಿ ಒಬ್ಬ ಉತ್ತಮ ಆದರ್ಶ ರಾಜಕಾರಣಿಯಾಗಿ, ತಮ್ಮದೇ ಆದಂತಹ ವೈಯಕ್ತಿಕ ವರ್ಚಸ್ಸನ್ನು ಬೆಳೆಸಿಕೊಂಡಂತಹ ಇವರು ನಮ್ಮನ್ನು ಅಗಲಿರುವಂತದ್ದು ಇದು ನಮಗೆ ಮಾತ್ರವಲ್ಲ, ಇಡೀ ರಾಜ್ಯಕ್ಕೆ ನಷ್ಟವಾಗಿದೆ.

## ಸತ್ಸಂಪ್ರದಾಯಕ್ಕೆ ಒತ್ತು ಕೊಟ್ಟವರು

**ಸಿ. ಚನ್ನಿಗಪ್ಪ**

ಈ ದಿವಸ ಕರ್ನಾಟಕಕ್ಕೆ ಕರಾಳದಿವಸವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಒಬ್ಬ ಮಂತ್ರಿಗಳು, ಶಾಸಕರು ಸಾಮಾನ್ಯವಾಗಿ ತಮ್ಮ ಜೀವನದಲ್ಲಿ ಸಮಾಜವನ್ನು ಅಪ್ಪಿಕೊಂಡು, ಸತ್ಸಂಪ್ರದಾಯಕ್ಕೆ ಹೆಚ್ಚಿನ ಒತ್ತು ಕೊಟ್ಟುಕೊಂಡು ಅವರ ರಾಜಕೀಯ ಜೀವನವನ್ನು ಮಾಡಿದಂತಹವರಲ್ಲಿ ಬೈರೇಗೌಡರು ಮೊಟ್ಟ ಮೊದಲನೆಯ ವ್ಯಕ್ತಿ. ಮಾನ್ಯ ಬೈರೇಗೌಡರು ಏನೊಂದು ಕೃಷಿ ಮಂತ್ರಿಗಳಾಗಿದ್ದಾಗ ಕೆಲಸ ಮಾಡಿದ್ದಾರೆಂದರೆ, ಯಾವುದಾದರೂ ಒಂದು ವಿಷಯ ಬಂದ ತಕ್ಷಣ ಕೂಡಲೇ ಅವರು ತನ್ನ ಅಧಿಕಾರಿಯನ್ನು ಕರೆದು ಸೂಚನೆಯನ್ನು ಕೊಟ್ಟು ತಪ್ಪಾಗಿದೆ ಸರಿ ಮಾಡಬೇಕು ಹಾಗೂ 24 ಘಂಟೆಯೊಳಗೆ ವರದಿ ಕೊಡಬೇಕೆಂದು ಕೇಳುವ ವಿಚಾರದಲ್ಲಿ ಮಾನ್ಯ ಬೈರೇಗೌಡರು ತಮ್ಮದೇ ಆದ ಸಂಪ್ರದಾಯವನ್ನು ಬೆಳೆಸಿ ಈ ಸದನಕ್ಕೆ ಕೊಟ್ಟು ಹೋಗಿದ್ದಾರೆ. ಇವತ್ತು ಮಾನ್ಯ ಬೈರೇಗೌಡರು ಇಲ್ಲೇ ಇದ್ದಾರೆ ಎಂದು ಅನ್ನಿಸುತ್ತದೆ.

# ಮೌಲ್ಯಯುತ ಸಾಧಕ

**ಡಿ.ಕೆ. ಶಿವಕುಮಾರ್**

ಮಾನ್ಯ ಅಧ್ಯಕ್ಷರೇ, ಸಾವನ್ನು ನೋಡಿದರೆ ನನಗೆ ದತ್ತಲರಿ ಮಹಾರಾಜರು ಹೇಳಿದ ಒಂದು ಮಾತು ನೆನಪಾಗುತ್ತೆ. ಆತ ತನ್ನ ಮಂತ್ರಿಗಳನ್ನು ಮತ್ತು ಮಕ್ಕಳನ್ನು ಕೂಡಿಸಿಕೊಂಡು ಒಂದು ಕಡೆ ಏನು ಹೇಳುತ್ತಿದ್ದ ಎಂದರೆ "ಕ್ಷಣಂ ಚಿತ್ತಂ, ಕ್ಷಣಂ ವಿತ್ತಂ, ಕ್ಷಣಂ ಜೀವನಮೇವಚ, ಯಮಸ್ಯ ಕರುಣಾನಾಸ್ತಿ, ಜಾಗೃತಾ, ಜಾಗೃತಾ, ಜಾಗೃತಾ" ಎಂದು ಹೇಳುತ್ತಾನೆ. ಅಂದರೆ ಮನಸ್ಸು ಚಂಚಲವಂತೆ, ಸಂಪೂರ್ಣ ಚಂಚಲವಂತೆ, ಬದುಕು ಶಾಶ್ವತವಲ್ಲವಂತೆ, ಯಾವ ಯಾವ ಕಾರಣಕ್ಕೂ ಕರುಣೆ ತೋರಿಸುವುದಿಲ್ಲವಂತೆ. ನಾನು ಯಾರಿಗಾದರೂ ಒಬ್ಬರಿಗೆ ದಾನ ಮಾಡಬೇಕು, ಹತ್ತು ರೂಪಾಯಿ ಕೊಡಬೇಕು ಎಂದು ಹೊರಟರೆ, ಅವರು ಬಂದು ಕೇಳಿದಾಗ, ಜೇಬಿಗೆ ಕೈಹಾಕಿ ವಾಪಸ್ಸು ಬರುವಷ್ಟರಲ್ಲಿ ಅವನಿಗೆ ಹತ್ತು ರೂಪಾಯಿ ಏಕೆ ಕೊಡಬೇಕು ಬರೀ ಐದು ರೂಪಾಯಿ ಕೊಟ್ಟರೆ ಸಾಕು ಎನ್ನುವಷ್ಟು ಮನಸ್ಸು ಚಂಚಲವಾಗುತ್ತದಂತೆ. ಹೀಗೆ ಹಣ ಕೂಡ ಚಂಚಲವಾಗುತ್ತದೆ. ಹಾಗೆ ಜೀವನವೂ ಸಹ. ಯಾರು ಯಾವತ್ತು ಇರುತ್ತಾರೆ, ಹೇಗೆ ಇರುತ್ತಾರೆ, ಎಷ್ಟು ದಿನ ಇರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ನೀನು ಏನಾದರೂ ಸಾಧನೆ ಮಾಡುವುದಾದರೆ ಜಾಗೃತನಾಗಿ ಮಾಡು, ಸಾಧನೆಯನ್ನು ಜಾಗ್ರತೆಯಾಗಿ ಮಾಡು ಎನ್ನುವುದು ದತ್ತಲರಿ ಮಹಾರಾಜ ಹೇಳಿದಂಥ ಮಾತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಕಳೆದ ಒಂದು ವರ್ಷದಿಂದ ಬಹಳ ಹತ್ತಿರದಲ್ಲಿ ಅನೇಕ ವಿಚಾರಗಳಲ್ಲಿ ನಾನು ಅವರ ಜೊತೆ ಸಂಪರ್ಕವನ್ನು ಇಟ್ಟುಕೊಂಡಿದ್ದೆ. ನನ್ನ ಅವರ ಮೊದಲ ಭೇಟಿ ಒಲಂಪಿಕ್ ಅಸೋಸಿಯೇಷನ್‌ನಿಂದ ಆಯಿತು. ನಾನು ಅಲ್ಲಿ ಒಬ ಸದಸ್ಯನಾದಂಥ ಸಂದರ್ಭದಲ್ಲಿ ರಾಜಕೀಯವನ್ನು ಹೊರತುಪಡಿಸಿ, ಸುಮಾರು 10-15 ವರ್ಷಗಳ ಹಿಂದೆ ನಮಗೂ ಅವರಿಗೂ ಸಂಪರ್ಕ ಬೆಳೆದಿತ್ತು. ಅವರಿಗೆ ಧರ್ಮದ ಬಗ್ಗೆ, ಜ್ಯೋತಿಷ್ಯದ ಬಗ್ಗ, ಗುಳಿಕಕಾಲ, ರಾಹುಕಾಲ, ಅಮಾವಾಸ್ಯೆ, ಹುಣ್ಣಿಮೆ ಯಾವುದರ ಬಗ್ಗೆಯೂ ಅವರಿಗೆ ನಂಬಿಕೆ ಕಾಣುತ್ತಿರಲಿಲ್ಲ. ಆದರೂ ಕೂಡ ಮೊನ್ನೆ ನಾಗಮಂಗಲದಲ್ಲಿ ಯಾವುದೋ ಒಂದು ಧರ್ಮಪೀಠದ ರಕ್ಷಣೆಯ ವಿಚಾರದಲ್ಲಿ ನಾನು ಮತ್ತು ಸ್ನೇಹಿತರುಗಳಾದ ಬಿ.ಕೆ. ಚಂದ್ರಶೇಖರ್, ನಾಗೇಗೌಡರು, ಬೈರೇಗೌಡರು, ರಾಮಚಂದ್ರಗೌಡರು ಎಲ್ಲರೂ ಪಕ್ಷಾತೀತವಾಗಿ ಅಲ್ಲಿಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅಲ್ಲಿ ವಿಚಾರಧಾರೆ ಮತ್ತೊಂದು ಎಲ್ಲವನ್ನೂ ಮಾತನಾಡಿದ ಮೇಲೆ ಅವರು ಇದ್ದಕ್ಕಿದ್ದ ಹಾಗೆ ಒಂದು ದೇವಸ್ಥಾನಕ್ಕೆ ನುಗ್ಗಿಬಿಟ್ಟರು. ಚೆಲುವರಾಯಸ್ವಾಮಿ ದೇವಸ್ಥಾನವೆಂದು ಕಾಣುತ್ತದೆ. ಅದೊಂದು ದೊಡ್ಡ ದೇವಸ್ಥಾನ. ಅಲ್ಲಿಗೆ ಭೇಟಿ ಕೊಟ್ಟರು. ನಾವು ಅಲ್ಲಿ ಒಂದು ಕಡೆ ಕಾಫಿಗೆ ಹೋಗಬೇಕಾಗಿತ್ತು. ನಮ್ಮ ವಾಹನಗಳಲ್ಲಿ ಹೊರಟವು. ಬೈರೇಗೌಡರು ಎಲ್ಲಿ ಎಂದು ಹುಡುಕಿದರು ಅವರು ದೇವಸ್ಥಾನದಲ್ಲಿದ್ದರು. ನಮಗೆ ನಂಬಲಿಕ್ಕೆ ಸಾಧ್ಯವಾಗಲೇ ಇಲ್ಲ. ಏಕೆಂದರೆ ಅವರು ಯಾವತ್ತೂ ದೇವಸ್ಥಾನಕ್ಕೆ ಹೋದವರೇ ಅಲ್ಲ. ಅಂಥವರು ಇದ್ದಕ್ಕಿದ್ದ ಹಾಗೆ ದೇವಸ್ಥಾನಕ್ಕೆ ಹೋಗಿ ಸುಮಾರು ಅರ್ಧ ಘಂಟೆಯ ಕಾಲ ಆ ದೇವಸ್ಥಾನವನ್ನು ಪರೀಕ್ಷೆ ಮಾಡಿ ತಡವಾಗಿ ಬಂದರು. ಆಗ ನಾನು ಅವರನ್ನು ಕೇಳಿದೆ. ನಿಮಗೆ ದೇವಸ್ಥಾನ ಇವುಗಳಲ್ಲೆಲ್ಲಾ ನಂಬಿಕೆ ಇಲ್ಲ. ಇಲ್ಲಿಗೆ ಹೋಗಿದ್ದೀರಿ ಏನಿದು ಎಂದು ಕೇಳಿದಾಗ. ಇದರ ವೈಭವ ಇವುಗಳನ್ನೆಲ್ಲಾ ನೋಡಿ ನನ್ನ ಮನಸ್ಸಿಗೆ ಏನೋ ಒಂದು ಭಾವನೆ ಬಂತು. ನಾನು ಒಳಗೆ ಹೋಗಿ ಇವುಗಳನ್ನೆಲ್ಲವನ್ನೂ ನೋಡಿದೆ, ನೀನೂ ಒಳಗಡೆ ಬರಬೇಕಾಗಿತ್ತು, ಇದರಲ್ಲಿ ಪ್ರಾಚೀನ ಕಾಲದ ಕೆಲವು ವಿಚಾರಗಳು ತಿಳಿದುಕೊಳ್ಳುವುದು ಇವೆ ಎಂದು ಹೇಳಿದರು. ನಾವು ಪ್ರವಾಸ ಮಾಡಿದ

2-3 ಘಂಟೆಗಳ ಕಾಲದಲ್ಲಿ ಬೇಕಾದಷ್ಟು ವಿಚಾರಗಳನ್ನು ಚರ್ಚೆ ಮಾಡಿದೆವು. ಆಗ ಅವರು ಹೇಳಿದರು ನಾವು ಸಾಧನೆ ಮಾಡಬೇಕಾದುದು ಬಹಳ ಇದೆ. ಸಾಧನೆ ಮಾಡುವಂಥ ಸಂದರ್ಭದಲ್ಲಿ ಬೇಕಾದಷ್ಟು ಅಡ್ಡಿ ಬರುತ್ತದೆ. ಆಗ ನಾವು ಇಟ್ಟುಕೊಂಡಿರುವ ನೀತಿ, ತತ್ವ, ಸಿದ್ಧಾಂತಗಳನ್ನು ಯಾವುದೇ ಕಾರಣಕ್ಕೂ ಮಾರಿಕೊಳ್ಳಬಾರದು. ಆಗ ಮಾತ್ರ ನಾವು ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು. ನಾನು ಅವರಿಗೆ ಒಂದು ವಿಷಯ ಹೇಳಬೇಕಲ್ಲಾ ಎಂದು ಕೇಳಿದೆ. ಏನದು ಎಂದು ಕೇಳಿದರು. ನಿಮ್ಮ ಜಿಲ್ಲೆಯಲ್ಲಿ, ನಿಮ್ಮ ಪಕ್ಷದಲ್ಲಿ ಎಂಥೆಂಥವರಿಗೋ ಓಡಾಡಲು ಅವಕಾಶ ಮಾಡಿಕೊಡಲಿಲ್ಲ ನೀವು. ಬೇರೆಯವರಲ್ಲಿ ನಿಮ್ಮ ಜಿಲ್ಲೆಗೆ ಕಾಲಿಡಬೇಕು ಎಂದು ಹೊರಟರು. ಆದರೆ ನೀವು ಮಾತ್ರ ಅವಕಾಶ ಕೊಡಲಿಲ್ಲವಲ್ಲಾ. ಏನಿದು ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು. ನಾವು ರಾಜ್ಯ ಆಳುವುದು ಬೇರೆ. ಅದಕ್ಕೂ ಮೊದಲು ನಮ್ಮ ಮನೆಯನ್ನು ನಾವು ಸರಿಮಾಡಿಕೊಳ್ಳಬೇಕು. ನಾವು ಯಾವುದಾದರೂ ಒಂದು ಜವಾಬ್ದಾರಿಯುತ ಸ್ಥಾನದಲ್ಲಿರಬೇಕಾದರೆ ಮೊದಲು ನಮ್ಮ ಮನೆ, ನಮ್ಮ ಪರಿಸರ, ನಮ್ಮ ಸಂಸಾರ, ನಮ್ಮ ಜಿಲ್ಲೆ ಎಂದು ಮಾಡಿಕೊಂಡಾಗ ಮಾತ್ರ ನಾವು ಹೊರಗಡೆ ಒಂದು ಆದರ್ಶ ಜೀವನವನ್ನು ಮಾಡಲು ಸಾಧ್ಯ. ಆದ್ದರಿಂದ ಯಾವುದಾದರೂ ಜವಾಬ್ದಾರಿಯುತ ಸ್ಥಾನಕ್ಕೆ ಹೆಜ್ಜೆ ಇಡಬೇಕು ಎಂದರೆ, ಯಾರ ಮೇಲಾದರೂ ಹೋರಾಟ ಮಾಡಬೇಕು ಎಂದರೆ ಅದಕ್ಕೂ ಮೊದಲು ನನ್ನ ಮನೆ ಬಿಗಿಯಾಗಿರಬೇಕು. ಅದಕ್ಕೋಸ್ಕರ ನಾನು ಮತ್ತು ನಮ್ಮ ಸ್ನೇಹಿತರಲ್ಲಿ ವೈಯಕ್ತಿಕವಾಗಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಒಂದು ಸಿದ್ಧಾಂತದ ಅಡಿಯಲ್ಲಿ ನಾನು ಜೊತೆಯಲ್ಲಿ ಕೆಲಸ ಮಾಡುತ್ತೇನೆ ಎನ್ನುವ ವಿಚಾರವನ್ನು ಅವರು ನನಗೆ ಹೇಳಿದ್ದರು. ನಂತರ ರಾಮನಗರಕ್ಕೆ ಬಂದರು. ಅಲ್ಲಿ ಒಂದು ಭಾಷಣವಾಯಿತು. ಬಹುಶಃ ಸಿ.ಎಂ. ಲಿಂಗಪ್ಪನವರು ಅದನ್ನು ರೆಕಾರ್ಡ್ ಮಾಡಿಸಿದ್ದಾರೇನೋ ನನಗೆ ಗೊತ್ತಿಲ್ಲ. ಬಹಳ ಅದ್ಭುತವಾದ, ಧಾರ್ಮಿಕವಾದ ಒಂದು ಭಾಷಣವನ್ನು ಅಲ್ಲಿ ಮಾಡಿದರು. ಮಾಡಿ ಆದ ಮೇಲೆ ನಾನು ಕೇಳಿದೆ, ಅಸೆಂಬ್ಲಿಯಲ್ಲಿ ನೋಡಿದರೆ ಆ ರೀತಿ ಮಾತನಾಡುತ್ತೀರಿ, ಇಲ್ಲಿ ನೋಡಿದರೆ ಹೀಗೆ. ಇದರ ಉದ್ದೇಶವೇನು. ಇದರ ಅರ್ಥ ನೋಡಿದರೆ ನೀವು ಯಾವುದೋ ಒಂದು ದಿಕ್ಕಿಗೆ ಹೋಗುತ್ತಿದ್ದೀರಲ್ಲ ಏನಿದು ಗೌಡರೇ ಎಂದು ನಾನು ಮತ್ತು ಸ್ನೇಹಿತರು ಕೇಳಿದಾಗ ಅವರು ಒಂದು ಅಂಶವನ್ನು ಕೋಟ್ ಮಾಡಿ ನನಗೆ ಹೇಳಿದರು. ಅದನ್ನು ನಾನು ಒಂದು ಚೀಟಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ. ಇವತ್ತು ಆ ಪುಸ್ತಕ ತೆಗೆದು ಬರೆದುಕೊಂಡು ಇಲ್ಲಿಗೆ ಬಂದಿದ್ದೇನೆ Some men succeed by what they know, some by what they do, few by what they are. But not to become a man of success than a man of values ಹಾಗೆ ನೀವು ಏನಾದರೂ ಒಂದು ಸಾಧನೆಯನ್ನು ಮಾಡಬೇಕಾದರೆ ಸಕ್ಸಸ್ ಆಗುತ್ತೇನೋ ಅಥವಾ ಬಿಡುತ್ತೇನೋ ಎನ್ನುವುದು ಅಲ್ಲ. ನಿನ್ನ ವ್ಯಾಲ್ಯೂ ಅನ್ನು ನೀನು ಕಾಪಾಡಿಕೊಂಡು ಹೋಗು ಅದೇ ಸಾಕು ಎಂದು ನನಗೆ ಹೇಳಿಕೊಟ್ಟಂಥ ಕೊನೆಯ ಹಿತವಚನ. ಒಮ್ಮೆ ಸ್ನೇಹಿತರಿಗೆ ಅವರ ಹತ್ತಿರ ಹೋಗಿ ಬನ್ನಿ ಎಂದು ಹೇಳಿದೆ. ಅವರು ಹೋಗಿ ವಾಪಸ್ಸು ಬಂದು ಅಲ್ಲಿ ಅವರು ವ್ಯವಸಾಯ ಮಾಡುತ್ತಿದ್ದಾರೆ ಎಂದು ನನಗೆ ಹೇಳಿದರು. ಬಿತ್ತನೆ ಆಗುತ್ತಿದೆ, ಅದನ್ನು ನೋಡಿಕೊಂಡು ಅವರು ಮಾರ್ಗದರ್ಶನವನ್ನು ಕೊಡುತ್ತಿದ್ದಾರೆ. ಅಂದರೆ ರಾಜಕಾರಣದಲ್ಲಿ ಇಷ್ಟು ದೊಡ್ಡ ಹೆಸರು ಇಟ್ಟುಕೊಂಡು ತನ್ನ ಜೀವನದಲ್ಲಿ ಇವತ್ತೂ ಕೂಡ ವ್ಯವಸಾಯದಲ್ಲಿ ಪಾಲ್ಗೊಂಡು ತನ್ನ ವ್ಯಕ್ತಿತ್ವವನ್ನು ಮಧ್ಯೆ ಸೇರಿಸಿಕೊಂಡಿದ್ದರಲ್ಲಾ ಈ ವ್ಯವಸಾಯಕ್ಕೆ ಅಂದಾಗ ನಿಜವಾಗಿಯೂ ಇಂಥ ಒಂದು ಆದರ್ಶದ ಬದುಕು ನಮ್ಮಂಥ ಯುವಕರಿಗೆ ದಾರಿದೀಪವಾಗಬೇಕು. ಅವರು ಯಾವ ರೀತಿಯಾಗಿ ನಡೆದುಕೊಂಡು ಬಂದು ಶುದ್ಧವಾದಂಥ ಜೀವನವನ್ನು ಮಾಡಿಕೊಂಡು ಬರುತ್ತಿದ್ದರು ಎನ್ನುವುದನ್ನು ನೋಡಿದಾಗ ನಾವೆಲ್ಲಾ ಅವರಿಂದ ಕಲಿಯಬೇಕಾದದ್ದು ಬಹಳ ವಿಚಾರ ಇದೆ.

# ರೈತನಾಯಕನಿಗೆ ಮೇಲ್ಮನೆಯ ಗೌರವ

ಸದನದ ಕಲಾಪ ಆರಂಭವಾದಾಗ ಸಭಾಪತಿ ಬಿ.ಎಲ್.ಶಂಕರ್ ಮಾತನಾಡಿ, ಸದನದ ಕಾರ್ಯ ಕಲಾಪ ನಡೆಸಲು ಆಗದಂತಹ ಪರಿಸ್ಥಿತಿ ಉಂಟಾಗಿದೆ. ರಾಜ್ಯದ ಹಿರಿಯ ಮುಖಂಡ, ಮಾಜಿ ಸಚಿವ, ರೈತ ಮುಖಂಡ ಹಾಗೂ ಹಾಲಿ ವಿಧಾನ ಸಭಾ ಸದಸ್ಯರಾದ ಸಿ. ಬೈರೇಗೌಡ ಅವರು ಇಂದು ಬೆಳಗಿನ ಜಾವ ನಮ್ಮನ್ನು ಆಗಲಿದ್ದಾರೆ. ಈ ಹಿನ್ನೆಲೆಯಲ್ಲಿ ತಾನು ತಂತಾಪ ಸೂಚಕ ನಿರ್ಣಯ ಮಂಡಿಸುತ್ತಿದ್ದೇನೆ ಎಂದರು.

ಶಂಕರ್ ನಂತರ ಅವರ ಗುಣಗಾನ ಮಾಡಿ ಮಾರ್ಕ್ಸಿಸ್ಟ್ ಪಕ್ಷದ ಮುಖಂಡರಾಗಿ, ರೈತ ನಾಯಕನಾಗಿ, ತನ್ನ ಕೃಷಿ ಚಟುವಟಿಕೆಗಳನ್ನು ಯಾವತ್ತೂ ಬಿಡದಂತೆ ನಡೆಸುತ್ತಾ ಬಸವಣ್ಣನವರ ಕಾಯಕವೇ ಕೈಲಾಸ ತತ್ವಕ್ಕೆ ಬದ್ಧರಾದವರು ಎಂದರು. ಯಾವುದೇ ಅನಗತ್ಯ ರಾಜೀನಾಮೆಗಳಿಗೆ ರಾಜಿಯಾಗದ ಸ್ವಾಭಾವ ಅವರದು ಎಂದರಲ್ಲದೆ 2 ಬಾರಿ ಅವರೊಂದಿಗೆ ಸಚಿವ ಸಂಪುಟದಲ್ಲಿ ಒಟ್ಟಿಗೇ ಕೆಲಸ ಮಾಡುವ ಅವಕಾಶ ನನ್ನದಾಗಿತ್ತು ಎಂದ ಅವರು ಅಗಲಿದ ನಾಯಕನ ಆತ್ಮಕ್ಕೆ ಶ್ರದ್ಧಾಂಜಲಿ ಕೋರಿದರು.

**ಹೆಚ್.ಕೆ. ಪಾಟೀಲ್:**

ಸಭಾನಾಯಕ ಹಾಗೂ ಜಲ ಸಂಪನ್ಮೂಲ ಸಚಿವ ಹೆಚ್.ಕೆ. ಪಾಟೀಲ್ ಬೈರೇಗೌಡರನ್ನು ಅವರೊಬ್ಬ ಅತ್ಯಂತ ಆತ್ಮೀಯ ವ್ಯಕ್ತಿ ಆಗಿದ್ದರು. ರಾಜಕೀಯವಾಗಿ ಕೆಲಸ ಮಾಡುವ ಪ್ರತಿ ಹಂತದಲ್ಲಿ ರೈತರ ಗೆಳೆಯ ಅವರಾಗಿದ್ದರು. ಅಯವ್ಯಯದ ಸಂದರ್ಭದಲ್ಲಿ ಅವರು ರೈತರ ಪಕ್ಷಪಾತಿಯಾಗಿಯೇ ಕಂಡು ಬರುತ್ತಿದ್ದರು. ರೈತರ ಬಂಧು ಎನ್ನುವ ವ್ಯಕ್ತಿತ್ವ ಅವರದಾಗಿತ್ತು. ಇವರ ನಿಧನದಿಂದ ರೈತ ಸಮುದಾಯ ಒಂದು ದೊಡ್ಡ ದನಿಯನ್ನು ಕಳೆದುಕೊಂಡಂತಾಗಿದೆ ಎಂದರು.

ಧಾರವಾಡದ ಕೃಷಿ ವಿ.ವಿ.ಗೆ ಅವರ ಕೊಡುಗೆ ಅಪಾರ ಎಂದ ಅವರು ಕೃಷಿ ಸಚಿವರಾಗಿ ಅವರು ನೆನಪಿನಲ್ಲಿ ಉಳಿಯುವ ಕೆಲಸ ಮಾಡಿದ್ದಾರೆ ಎಂದರು.

**ಡಿ.ಹೆಚ್. ಶಂಕರಮೂರ್ತಿ:**

ಪ್ರತಿಪಕ್ಷದ ನಾಯಕ ಡಿ.ಹೆಚ್.ಶಂಕರಮೂರ್ತಿ ಮಾತನಾಡಿ, ಬೈರೇಗೌಡರು ನುಡಿದಂತೆ ನಡೆದವರು. ಅವರ ಜೀವನದ ಸರಳತೆ, ಆದರ್ಶ ಅನುಕರಣೀಯ. ಬರೇ ಕೆಳವರ್ಗದ ಜನರ ಹಕ್ಕಿಗಾಗಿ ಮಾತ್ರವಲ್ಲ ಅವರ ಎಲ್ಲ ಸಮಸ್ಯೆಗಳಿಗೆ ಸಮರ್ಥ ಸ್ಪಂದನವಾದವರು ಎಂದರು. ಅವರ ನಿಧನದ ವಾರ್ತೆ ಸಿಡಿಲು ಬಂದೆರಗಿದಂತಾಗಿದೆ ಎಂದರು.

**ಬಿ.ಜೆ.ಪಾಟೀಲ್:**

ಅಖಿಲ ಭಾರತ ಪ್ರಗತಿಪರ ಜನತಾದಳದ ಸದಸ್ಯ ಬಿ.ಜಿ. ಪಾಟೀಲ್ ಮಾತನಾಡಿ, ಬೈರೇಗೌಡರನ್ನು ಕಳೆದುಕೊಂಡ ಕನ್ನಡ ನಾಡು ಬಡವಾಗಿದೆ ಎಂದರು.

**ಬಸವರಾಜ ಹೊರಟ್ಟಿ:**

ಸದಸ್ಯ ಬಸವರಾಜ ಹೊರಟ್ಟಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬೈರೇಗೌಡರ ಸಂಪರ್ಕ ನನಗೆ ಹೆಚ್ಚಾಗಿತ್ತು. ನುಡಿದಂತೆ ನಡೆಯುತ್ತಿದ್ದ ಅವರು ತಮ್ಮ ತತ್ವ, ಸಿದ್ಧಾಂತಗಳನ್ನು ಬಿಟ್ಟು ಕೊಡುತ್ತಿರಲಿಲ್ಲ. ಕಳೆದ ಒಂದು ವಾರದಿಂದ ಅವರು ಜ್ವರದಿಂದ ಬಳಲುತ್ತಿದ್ದರೂ ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ತಪ್ಪದೇ ಹಾಜರಾಗುತ್ತಿದ್ದರು. ಅವರೊಬ್ಬ ನಿಷ್ಠಾವಂತ ರಾಜಕಾರಣಿ. ಇತ್ತೀಚಿನ ಕಲುಷಿತ ವಾತಾವರಣದಲ್ಲಿ ಅವರ ಮಾರ್ಗದರ್ಶನದ ಅವಶ್ಯಕತೆ ಇತ್ತು. ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿ ಅವರ ಕುಟುಂಬದವರಿಗೆ ಭಗವಂತ ನೀಡಲಿ ಎಂದರು.

✪✪✪✪✪



ಬೈರೇಗೌಡ : ಒಂದು ಭಾವಭಂಗಿ



ಭಾವ-ಭಾವ ಮೈದುನರ ಭೇಟಿ  ಬೈರೇಗೌಡ - ಶ್ರೀ ಚೌಡರೆಡ್ಡಿ




ಉತ್ತರ ಕರ್ನಾಟಕದ ಧುರೀಣರಿಂದ ಮಾಲಾರ್ಪಣೆ



ಬೈರೇಗೌಡರಿಂದ ವಿದ್ಯಾರ್ಥಿನಿಗೆ ಬಹುಮಾನ ವಿತರಣೆ



ಕೋಲಾರ ತಾಲೂಕಿನ ಹಳ್ಳಿ ಸಮಾರಂಭದಲ್ಲಿ ಬೈರೇಗೌಡರು



ಕೋಲಾರ ತಾಲೂಕಿನ ಗ್ರಾಮವೊಂದರಲ್ಲಿ ಮನವಿ ಸ್ವೀಕರಿಸುತ್ತಿರುವ ಬೈರೇಗೌಡರು
ಶಾಸಕ ಕೆ. ಶ್ರೀನಿವಾಸಗೌಡ, ಕೋಮಲ್ ನಿರ್ದೇಶಕ ಅಣ್ಣೇಹಳ್ಳಿ ಕೃಷ್ಣಪ್ಪ ಇದ್ದಾರೆ



18–4–2002 ಚುಂಚದೇನಹಳ್ಳಿಯಲ್ಲಿ 'ರಂಗ ತರಬೇತಿ' ಶಿಬಿರದಲ್ಲಿ ಕಲಾವಿದ
ಚಿನ್ನಪ್ಪ ಅವರನ್ನು ಬೈರೇಗೌಡರು ಸನ್ಮಾನಿಸಿದರು




ಒಂದು ಸಮಾಲೋಚನೆ



ರಾಷ್ಟ್ರೀಯ ಸಮ್ಮೇಳನವೊಂದರ ಉದ್ಘಾಟನಾ ದೃಶ್ಯಗಳು







ಚಿಕ್ಕಬಳ್ಳಾಪುರದಲ್ಲಿ ಜಿಲ್ಲಾ ನಂದಿ ಉತ್ಸವವನು ಜಾಗಟೆ ಬಾರಿಸುವ ಮೂಲಕ
ಬೈರೇಗೌಡರು ಉದ್ಘಾಟಿಸುತ್ತಿರುವುದು ಅಂದಿನ ಉಪಸಭಾಪತಿ
ವಿ.ಆರ್. ಸುದರ್ಶನ್, ಶಾಸಕ ಕೆ. ಶ್ರೀನಿವಾಸಗೌಡ ಇತರರು ಇದ್ದಾರೆ



ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಶ್ರೀಮತಿ ಶಕುಂತಲಾ ಹೆಗಡೆ ಅವರೊಡನೆ

# ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

## ಪ್ರಕಟಗೊಂಡ ಪುಸ್ತಕಗಳು

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ದರ |
|---|---|---|---|
| 1. | ಕೆ. ಹನುಮಂತಯ್ಯ | ಪ್ರೊ ಎನ್.ಬಿ. ಪಂಗಣ್ಣಾಯ್ಯ ಹಾಗೂ ಇತರರು | 20.00 |
| 2. | ಎಸ್. ನಿಜಲಿಂಗಪ್ಪ | ಡಾ॥ ಸಂದೀಪ್ ಶಾಸ್ತ್ರಿ | 15.00 |
| 3. | ಶಾಂತವೇರಿ ಗೋಪಾಲ ಗೌಡ | ಪ್ರೊ॥ ಎನ್.ಬಿ. ಪಂಗಣ್ಣಾಯ್ಯ | 15.00 |
| 4. | ವೈಕುಂಠ ಬಾಳಿಗಾ | ಡಾ॥ ಪಿ. ಜೀವನ್ ಕುಮಾರ್ | 20.00 |
| 5. | ವೀರೇಂದ್ರ ಪಾಟೀಲ್ | ಡಾ॥ ಎಸ್.ಹೆಚ್. ಕವಂಟೆ ಹಾಗೂ ಇತರರು | 20.00 |
| 6. | ಕಡಿದಾಳ್ ಮಂಜಪ್ಪ | ಡಾ॥ ಎಸ್.ಹೆಚ್. ಕವಂಟೆ ಹಾಗೂ ಇತರರು | 15.00 |
| 7. | ಜಿ.ವಿ. ಹಳ್ಳಿಕೇರಿ | ಡಾ॥ ಆರ್.ಎಂ.ಎಲ್. ಪಾಟೀಲ್ | 15.00 |
| 8. | ಕೆ.ಎಸ್. ನಾಗರತ್ನಮ್ಮ | ಪ್ರೊ॥ ಎನ್.ಬಿ. ಪಂಗಣ್ಣಾಯ್ಯ ಹಾಗೂ ಇತರರು | 15.00 |
| 9. | ಡಿ. ದೇವರಾಜ ಅರಸು | ಜೆ.ಎಸ್. ಸದಾನಂದ | 15.00 |
| 10. | ಕೆ.ಟಿ. ಭಾಷ್ಯಂ | ಡಾ॥ ವಿಘ್ನೇಶ್ ಎನ್. ಭಟ್ | 15.00 |
| 11. | ಕೆ. ಪುಟ್ಟಸ್ವಾಮಿ | ಜಿ. ದಕ್ಷಿಣಾ ಮೂರ್ತಿ | 15.00 |
| 12. | ಟಿ. ಸಿದ್ದಲಿಂಗಯ್ಯ | ಜಿ. ದಕ್ಷಿಣಾ ಮೂರ್ತಿ | 20.00 |
| 13. | ಜಗಳೂರು ಇಮಾಂ | ಜೆ.ಎಸ್. ಸದಾನಂದ | 15.00 |
| 14. | ಕೆ.ಸಿ. ರೆಡ್ಡಿ | ಡಾ॥ ಸಂಧ್ಯಾರೆಡ್ಡಿ | 20.00 |
| 15. | ಬಿ.ವಿ. ಕಕ್ಕಿಲ್ಲಾಯ | ಎಂ.ಕೆ. ಭಂಡಿ | 20.00 |

| | | | |
|---|---|---|---|
| 16. | ಹೆಚ್.ಎಂ. ಚೆನ್ನಬಸಪ್ಪ | ಪ್ರೊ॥ ಬಿ.ಎನ್. ಚಂದ್ರಯ್ಯ | 20.00 |
| 17. | ಬಿ. ರಾಚಯ್ಯ | ನಂಜಯ್ಯ ಹೊಂಗನೂರ್ | 20.00 |
| 18. | ಎಂ. ನಾಗಪ್ಪ | ಡಾ॥ ಎಂ.ಎಸ್. ಪಾಟೀಲ್ | 15.00 |
| 19. | ಜೆ.ಬಿ. ಮಲ್ಲಾರಾಧ್ಯ | ಡಾ॥ ಹೆಚ್.ಎಂ. ಪಂಚಾಕ್ಷರಯ್ಯ | 15.00 |
| 20. | ಗಂಗಾಧರ್ ನಮೋಶಿ | ಡಾ॥ ಕವಂಟೆ ಹಾಗೂ ಇತರರು | 15.00 |
| 21. | ಬಿ.ಡಿ. ಜತ್ತಿ | ಕೃಷ್ಣ ಕೊಲ್ಹಾರ ಕುಲಕರ್ಣಿ | 15.00 |
| 22. | ಆರ್. ಗುಂಡೂರಾವ್ | ಈಶ್ವರದೈ ತೋಟ | 20.00 |
| 23. | ಕೆ.ಎಚ್. ಪಾಟೀಲ್ | ಎಂ.ಕೆ. ಭಂಡಿ | 15.00 |
| 24. | ಅಜೀಜ್ ಸೇಠ್ | ಹೆಚ್.ಕೆ. ಬಾಲಸೂರಿ | 15.00 |
| 25. | ಸಿ.ಎಂ. ಆರ್ಮುಗಂ | ಹೆಚ್.ಕೆ. ಬಾಲಸೂರಿ | 15.00 |
| 26. | ಜೆ.ಹೆಚ್. ಪಟೇಲ್ | ಶೇಷಚಂದ್ರಿಕ | 30.00 |
| 27. | ಬಿ.ಎಲ್. ಸುಬ್ಬಮ್ಮ | ಡಾ॥ ಡಿ.ಎಸ್. ಜಯಪ್ಪಗೌಡ | 15.00 |
| 28. | ಟಿ.ಆರ್. ಶಾಮಣ್ಣ | ಎಲ್.ಎಸ್. ಮುಕುಂದರಾಜ್ | 20.00 |
| 29. | ಎಸ್.ಡಿ. ಗಾಂವಕರ್ | ಮೋಹನ್ ವರ್ಣೇಕರ್ | 20.00 |
| 30. | ಎಂ.ಪಿ.ಎಲ್. ಶಾಸ್ತ್ರಿ | ಉಷಾ ಹಾರೋಗದ್ದೆನಾಯಕ್ | 20.00 |
| 31. | ಎಸ್. ಶಿವಪ್ಪ | ಕೂಡ್ಲಿಗೆರೆ ಮಲ್ಲಿಕಾರ್ಜುನ | 30.00 |
| 32. | ಕಾಗೋಡು ಚಳವಳಿ | ಕೂಡ್ಲಿಗೆರೆ ಮಲ್ಲಿಕಾರ್ಜುನ | 15.00 |
| 33. | ಕೆ.ವಿ. ಶಂಕರಗೌಡ | ಜಗದೀಶ ಕೊಪ್ಪ | 20.00 |
| 34. | ಟಿ.ಎನ್. ನರಸಿಂಹಮೂರ್ತಿ | ಕೆ.ಜೆ. ಸುರೇಶ್ | 25.00 |
| 35. | ಎಸ್.ಆರ್. ಕಂಠಿ | ಮನು ಬಳಿಗಾರ್ | 30.00 |
| 36. | ಎಸ್.ಸಿ. ಮಲ್ಲಯ್ಯ | ಡಾ॥ ಟಿ.ಸಿ. ಪೂರ್ಣಿಮ | 20.00 |
| 37. | ಅಬ್ದುಲ್ ನಜೀಜ್‌ಸಾಬ್ | ಮನು ಬಳಿಗಾರ್ | 30.00 |

| | | | |
|---|---|---|---|
| 38. | ಪಿ.ಎಂ. ನಾಡಗೌಡ | ಗಂಗಾಧರಯ್ಯ ಹಿರೇಮಠ | 30.00 |
| 39. | ಕೆ. ಪಟ್ಟಾಭಿರಾಮನ್ | ಸಂಜಯ್ ದೊರೆ | 20.00 |
| 40. | ಎಂ.ಎಸ್.ಕೃಷ್ಣನ್ | ಹೆಚ್.ಕೆ. ಬಾಲಸೂರಿ | 20.00 |
| 41. | ಎಂ.ವಿ. ಕೃಷ್ಣಪ್ಪ | ಜೆ.ಜಿ. ನಾಗರಾಜ್ | 15.00 |

## ಭಾಷಾಂತರ ಪುಸ್ತಕಗಳು

| ಕ್ರ.ಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ದರ |
|---|---|---|---|
| 1. | ಡಾ॥ ಬಿ.ಆರ್. ಅಂಬೇಡ್ಕರ್ | ಭಾಷಾಂತರ ನಿರ್ದೇಶನಾಲಯ | 20.00 |
| 2. | ಡಾ॥ ರಾಂ ಮನೋಹರ ಲೋಹಿಯಾ | ಭಾಷಾಂತರ ನಿರ್ದೇಶನಾಲಯ | 15.00 |
| 3. | ವಿ.ಕೆ. ಕೃಷ್ಣಮೆನನ್ | ರಾಜ್ಯ ಭಾಷಾ ಆಯೋಗದ ಅಧ್ಯಕ್ಷರು | 20.00 |
| 4. | ಡಾ॥ ಶ್ಯಾಂಪ್ರಸಾದ್ ಮುಖರ್ಜಿ | ಭಾಷಾಂತರ ನಿರ್ದೇಶನಾಲಯ | 20.00 |
| 5. | ಶೇಕ್ ಮಹಮದ್ ಅಬ್ದುಲ್ಲಾ | ಭಾಷಾಂತರ ನಿರ್ದೇಶನಾಲಯ | 15.00 |
| 6. | ಡಾ॥ ರಾಜೇಂದ್ರ ಪ್ರಸಾದ್ | ಆರ್.ಕೆ. ಹುಡುಗಿ | 20.00 |
| 7. | ಭೂಪೇಶ್ ಗುಪ್ತ | ಆರ್.ಕೆ. ಹುಡುಗಿ | 20.00 |
| 8. | ಅನಂತಶಯನಂ ಅಯ್ಯಂಗಾರ್ | ಭಾಷಾಂತರ ನಿರ್ದೇಶನಾಲಯ | 15.00 |
| 9. | ರಾಜಕುಮಾರಿ ಅಮೃತ್‌ಕೌರ್ | ಕೆ.ಹೆಚ್. ಸಾವಿತ್ರಿ | 20.00 |
| 10. | ಡಾ॥ ಚಿಂತಾಮನ್ ಡಿ. ದೇಶಮುಖ್ | ಬೇಳೂರು ಸುದರ್ಶನ್ | 20.00 |
| 11. | ಪನಂಪಿಲ್ಲಿ ಗೋವಿಂದ ಮೆನನ್ | ಭಾಷಾಂತರ ನಿರ್ದೇಶಕನಾಲಯ | 15.00 |
| 12. | ಜೈ ಸುಖಲಾಲ್ ಹಾಥಿ | ಎಸ್. ಸುಮಿತ್ರ | 15.00 |
| 13. | ಎಸ್.ಎಂ. ಜೋಷಿ | ಕೆ.ಹೆಚ್. ಸಾವಿತ್ರಿ | 15.00 |
| 14. | ಡಾ॥ ಲಂಕಾ ಸುಂದರಂ | ಜವರಯ್ಯ | 15.00 |